ಅಚ್ಚಗನ್ನಡ ಕಾವ್ಯಗಳು ಮತ್ತು ಪದಪ್ರಯೋಗ ಕೋಶ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಸಂಪ್ರಬಂಧ

ಸಂಶೋಧಕ
ಪಾರ್ವತಮ್ಮ.ಕೆ.

ಮಾರ್ಗದರ್ಶಕರು
ಡಾ. ಮಾಧವ ಪೆರಾಜೆ
ಪ್ರವಾಚಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೭

ಅಚ್ಚಗನ್ನಡ ಕಾವ್ಯಗಳು ಮತ್ತು ಪದಪ್ರಯೋಗ ಕೋಶ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಪಾರ್ವತಮ್ಮ.ಕೆ

ಮಾರ್ಗದರ್ಶಕರು
ಡಾ.ಮಾಧವ ಪೆರಾಜೆ
ಪ್ರವಾಚಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭

ಮಾರ್ಗದರ್ಶಕರ ಪ್ರಮಾಣ ಪತ್ರ

ಪಾರ್ವತಮ್ಮ.ಕೆ ಅವರು ಅಚ್ಚಗನ್ನಡ ಕಾವ್ಯಗಳು ಮತ್ತು ಪದಪ್ರಯೋಗ ಕೋಶ ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಮಾಧವ ಪೆರಾಜೆ
ಪ್ರವಾಚಕರು ಮತ್ತು ಮಾರ್ಗದರ್ಶಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : [illegible]೨೦೦೭
ಸ್ಥಳ : ವಿದ್ಯಾರಣ್ಯ

<u>ಸಂಶೋಧಕರ ಪ್ರಮಾಣ ಪತ್ರ</u>

ಪಾರ್ವತಮ್ಮ.ಕೆ ಆದ ನಾನು ಅಚ್ಚಗನ್ನಡ ಕಾವ್ಯಗಳು ಮತ್ತು ಪದಪ್ರಯೋಗ ಕೋಶ ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ಡಾ. ಮಾಧವ ಪೆರಾಜೆ, ಪ್ರವಾಚಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಪಾರ್ವತಮ್ಮ. ಕೆ
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೭.೦೫.೨೦೦೭
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಎ ಪಿಎಚ್.ಡಿ ಪದವಿಯನ್ನು ಆರಂಭಿಸಿ ಅಧ್ಯಯನಕ್ಕೆ ಅವಕಾಶ ನೀಡಿದ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ, ಡಾ.ಬಿ.ಎ.ವಿವೇಕ್ ರೈ, ಡಾ.ಕೆ.ವಿ.ನಾರಾಯಣ ಅವರಿಗೆ, ಕುಲಸಚಿವರಾದ ಶ್ರೀ.ವಿ.ಶಂಕರ್, ಹಿರಿಯರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ ಕೃತಜ್ಞತೆಗಳು.

ಪ್ರಬಂಧದುದ್ದಕ್ಕೂ ಸೂಕ್ತ ಸಲಹೆ, ಮಾರ್ಗದರ್ಶನದ ಮೂಲಕ ಕಾಳಜಿ ವಹಿಸಿದ ಮಾರ್ಗದರ್ಶಕರಾದ ಡಾ.ಮಾಧವ ಪೆರಾಜೆ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಅಧ್ಯಯನದ ವೇಳೆ ಅಗತ್ಯ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ ವಿಭಾಗದ ಹಿರಿಯರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಪ್ರೊ.ಎ.ಸುಬ್ಬಣ್ಣ ರೈ, ಮುಖ್ಯಸ್ಥರಾದ ಶ್ರೀ.ಸಿ.ವೆಂಕಟೇಶ್, ಮತ್ತು ಪ್ರೊ.ಕಾರ್ಲೋಸ್, ಡಾ.ಎಸ್.ಎಸ್.ಅಂಗಡಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಒತ್ತಾಸೆಯಾಗಿ ನಿಂತು ಸಹಕರಿಸಿದ ತಂದೆ, ತಾಯಿ ಮತ್ತು ಮನೆಯವರೆಲ್ಲರಿಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಗೆಳೆಯರ ಬಳಗಕ್ಕೂ ನನ್ನ ವಿಶೇಷ ಕೃತಜ್ಞತೆಗಳು.

ಈ ಪ್ರಬಂಧವನ್ನು ಅಂದವಾಗಿ ಸಂಯೋಜಿಸಿದ ಶ್ರೀಗುರು ಮೌನೇಶ್ವರ ಗ್ರಾಫಿಕ್ಸ್ ಅನ್ನಪೂರ್ಣ, ನಾಗಲಿಂಗಪ್ಪ.ಈ.ಕೆ, ರವಿಕುಮಾರ್ ಮತ್ತು ಮುತ್ತುರಾಜ್ ಅವರಿಗೆ ನನ್ನ ಪ್ರೀತಿಯ ನೆನಕೆಗಳು.

ಪರಿವಿಡಿ

ಅಧ್ಯಾಯ - ೧ : ಅಧ್ಯಯನದ ಉದ್ದೇಶ, ಮತ್ತು ವ್ಯಾಪ್ತಿ	೧
ಅಧ್ಯಾಯ - ೨ : ಈವರೆಗಿನ ಅಧ್ಯಯನದ ವಿಮರ್ಶಾತ್ಮಕ ಸಮೀಕ್ಷೆ	೮
ಅಧ್ಯಾಯ - ೩ : ಅಚ್ಚಗನ್ನಡದ ಪರಿಕಲ್ಪನೆ	೩೨
ಅಧ್ಯಾಯ - ೪ : ಅಚ್ಚದ್ರಾವಿಡ ಕಾವ್ಯಗಳು: ಐತಿಹಾಸಿಕ ಸಮೀಕ್ಷೆ	೫೩
ಅಧ್ಯಾಯ - ೫ : ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ ರಚನೆಗಳು	೭೪
ಅಧ್ಯಾಯ - ೬ : ಅಚ್ಚಗನ್ನಡ ಕವಿಗಳು ಮತ್ತು ಕಾವ್ಯ ಸಮೀಕ್ಷೆ	೧೧೩
ಅಧ್ಯಾಯ - ೭ : ಅಚ್ಚಗನ್ನಡ ಕಾವ್ಯಗಳ ತೌಲನಿಕ ಅಧ್ಯಯನ	೧೩೮
ಅಧ್ಯಾಯ - ೮ : ಸಂಸ್ಕೃತ ಮತ್ತು ಅಚ್ಚಗನ್ನಡ ಕಾವ್ಯಭಾಷೆ	೧೫೮
ಅಧ್ಯಾಯ - ೯ : ಅಚ್ಚಗನ್ನಡ ಮತ್ತು ಆಧುನಿಕ ಚಿಂತನೆಗಳು	೧೯೫
ಅಧ್ಯಾಯ - ೧೦ : ಸಮಾರೋಪ	೨೨೦
ಅನುಬಂಧಗಳು	೨೨೨

೧. ಟಿಪ್ಪಣಿಗಳು

೨. ಅಚ್ಚಗನ್ನಡ ಪದಪ್ರಯೋಗ ಕೋಶ

೩. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ ರಚನೆಗಳು (ಸಂಗ್ರಹ)

೪. ಪರಾಮರ್ಶನ ಗ್ರಂಥಗಳು

❑

ಅಧ್ಯಾಯ -೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಕಾವ್ಯ ಪರಂಪರೆಯಲ್ಲಿ ಕಾಲಕಾಲಕ್ಕೆ ಬೇರೆ ಬೇರೆ ರೀತಿಯ ಪ್ರಯೋಗಗಳು ನಡೆಯುತ್ತ ಬಂದಿರುವುದರಿಂದಲೇ ಸಾವಿರಾರು ವರ್ಷದಿಂದಲೂ ಅದು ಜೀವಂತವಾಗಿದೆ. ಆದಿಕವಿ ಪಂಪನಿಂದ ಆರಂಭವಾದ ಚಂಪೂಕಾವ್ಯ, ವೀರಶೈವರಿಂದ ಆರಂಭವಾದ ವಚನಸಾಹಿತ್ಯ, ದಾಸರ ಕೀರ್ತನೆಗಳು, ಹರಿಹರನ ಕೊಡುಗೆಯಾದ ರಗಳೆಸಾಹಿತ್ಯ ಮೊದಲಾದ ಪ್ರಯೋಗಗಳನ್ನು ಇಲ್ಲಿ ನೆನಪಿಸಬಹುದು. ಹಾಗೆಯೇ ಸಮೃದ್ಧವಾದ ಹೊಸಗನ್ನಡ ಪರಂಪರೆಯೂ ನಮ್ಮ ಮುಂದಿದೆ. ಅಚ್ಚಗನ್ನಡ ಕಾವ್ಯಪರಂಪರೆಯೂ ಅಂತಹ ಪ್ರಯೋಗಗಳಲ್ಲಿ ಒಂದು. ಪ್ರಾಚೀನ ಕನ್ನಡ ಸಾಹಿತ್ಯದ ಚರ್ಚೆಯಲ್ಲಿ ಮಾರ್ಗಕಾವ್ಯ, ದೇಸಿಕಾವ್ಯ, ವಸ್ತುಕ - ವರ್ಣಕ, ಮೊದಲಾದ ಪರಿಕಲ್ಪನೆಗಳ ಹಾಗೆಯೇ 'ಅಚ್ಚಗನ್ನಡ' ಎಂಬ ಪರಿಕಲ್ಪನೆಯೂ ಮತ್ತೆ ಮತ್ತೆ ಪ್ರಸ್ತಾಪವಾಗುವುದುಂಟು. ಭಾಷೆಯ ಬಳಕೆಯಲ್ಲಾದ ಪಲ್ಲಟಗಳು, ಆಯಾಯ ಕಾಲದ, ಪರಿಸರದ ಜನರ ಧೋರಣೆಗಳು, ಅಂದಿನ ಸಾಂಸ್ಕೃತಿಕ ಒತ್ತಡಗಳು ಕಾವ್ಯಪರಂಪರೆಗಳ ನಡುವೆ ಭಿನ್ನತೆಯನ್ನುಂಟುಮಾಡಲು ಕಾರಣಗಳಾಗುತ್ತವೆ. ಮುಳಿಯ ತಿಮ್ಮಪ್ಪಯ್ಯನವರು ಹೇಳುವಂತೆ ಕೇಶಿರಾಜನ ಶಬ್ದಮಣಿದರ್ಪಣದ ಈ ಕೆಳಗಿನ ಸೂತ್ರವು ಅಚ್ಚಗನ್ನಡಕ್ಕೆ ಸಂಬಂಧಿಸಿರುವುದಾಗಿದೆ.

ತಿಳಿದೇಶೀಯಮಿವ್ಯೆದಂ

ಕಳೆ ನೀಂ ಋೣ ವರ್ಣ ಶ ಷ ವಿಸರ್ಗ x ೦೦

ಕ್ಷಳನಂ ನಾಲ್ವತ್ತೇೞಾ

ಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ [೧]

ಅಂದರೆ ಕನ್ನಡ ಸಾಹಿತ್ಯದಲ್ಲಿ ಮೊದಲಬಾರಿಗೆ ಇದೊಂದು ಪ್ರಾಚೀನವಾದ ಪರಿಕಲ್ಪನೆಯೇ ಆಗಿದೆ ಎಂದಾಯಿತು. ಸಂಸ್ಕೃತದಂತಹ ದೇವಭಾಷೆ ಎಂಬ ಹೆಗ್ಗಳಿಕೆಯ ಭಾಷೆಯೊಂದು ಕಾವ್ಯಭಾಷೆಯಾಗಿ ಕನ್ನಡದ ಮೇಲೆ ಮಾಡಿದ

ಪ್ರಭಾವ ಅಸಾಮಾನ್ಯವಾದುದು. ಕನ್ನಡದ ಪ್ರಾಚೀನ ಕವಿಗಳು ಇದರ ಜತೆಗೆ ಅತ್ಯಂತ ಎಚ್ಚರಿಕೆಯ ಅನುಸಂಧಾನ ಮಾಡಿದ್ದಾರೆ. ಆದಿಕವಿ ಪಂಪನಂತಹವರು._

ಬಗೆಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕಮಾರ್ಗದೊಳೆ ತಳ್ಪುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಜೆಯಿಂ ಬಟಲ್ಪು ತುಂ
ಬಿಗಳನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ ೨

ಎಂದು ಅತ್ಯಂತ ಎಚ್ಚರಿಕೆಯಿಂದ ಆರಂಭದಲ್ಲಿಯೇ ಕಾವ್ಯಪ್ರಯೋಗಕ್ಕೆ ಇಳಿದರು. ಇದರಿಂದಾಗಿಯೇ ಪುಲಿಗೆರೆಯ ತಿರುಳಕನ್ನಡ, ಎರಡನೂರರ ತಿರುಳಕನ್ನಡ ಮೊದಲಾದ ಹಲವು ಕನ್ನಡಗಳಲ್ಲಿ ಅವರು ಕಾವ್ಯಬರೆಯುವುದಕ್ಕೆ ಸಾಧ್ಯವಾಯಿತು. ಕಾವ್ಯದಲ್ಲಿ ಸಂಸ್ಕೃತ ಬಳಕೆ ಮುಂದೆ ಪರಂಪರೆಯೇ ಆದ ಹಾಗೆಲ್ಲ ಕನ್ನಡ ಭಾಷೆ ಸಂಸ್ಕೃತದ ಪ್ರಭಾವವನ್ನು ತಾಳಿಕೊಳ್ಳಬಹುದೇ ಎಂಬ ಪ್ರಶ್ನೆಯು ಕೆಲವರಿಗಾದರೂ ಕಾಡತೊಡಗಿತು. ೧೨ನೇ ಶತಮಾನದ ನಯಸೇನ ಅದರಲ್ಲಿ ಮೊದಲಿಗ. ಸಂಸ್ಕೃತದಲ್ಲಿ ಹೇಳುವುದಾದರೆ ಸಂಸ್ಕೃತದಲ್ಲಿಯೇ ಹೇಳಬೇಕು. ಕನ್ನಡದಲ್ಲಿ ಹೇಳುವುದಾದರೆ ಇಡಿಯಾಗಿ ಕನ್ನಡವನ್ನೇ ಬಳಸಬೇಕು- ಅದುಬಿಟ್ಟು ಎರಡನ್ನೂ ಮಿಶ್ರಮಾಡಿದರೆ ಎಣ್ಣೆಯನ್ನೂ ತುಪ್ಪವನ್ನೂ ಬೆರೆಸಿದ ಹಾಗೆ ಆಗಲಾರದೇ- ಎಂದು ತುಂಬ ತೀಕ್ಷ್ಣವಾಗಿ ಈ ಪರಂಪರೆಯನ್ನು ಪ್ರಶ್ನಿಸಿದ. ಇದು ಮೇಲೆ ಉಲ್ಲೇಖಿಸಿದ ಮಾರ್ಗ ಮತ್ತು ದೇಸಿಗಳ ಸಮನ್ವಯದ ಕಾವ್ಯಪರಂಪರೆಗೆ ಕೇಳಿದ ಪ್ರಶ್ನೆಯೇ ಆಗಿದೆ. ರುದ್ರಭಟ್ಟನ 'ಜಗನ್ನಾಥ ವಿಜಯಂ' ಮೊದಲಾದ ಕಾವ್ಯಗಳನ್ನು ಗಮನಿಸಿದರೆ ಇದರ ಔಚಿತ್ಯ ಮನಗಾಣದಿರದು. ಲಿಪಿಯನ್ನು ಹೊರತುಪಡಿಸಿದರೆ ಸಂಸ್ಕೃತ ಕಾವ್ಯದ ವಿಶಿಷ್ಟ ಪ್ರಯೋಗಗಳೋ ಎನ್ನುವ ಹಾಗೆ ಅತ್ಯಂತ ಸಂಸ್ಕೃತ ಭೂಯಿಷ್ಠ ಕಾವ್ಯಗಳನ್ನು ಕನ್ನಡ ಕವಿಗಳು ಬರೆಯತೊಡಗಿದ ಕಾಲವದು. ಸಾಲದುದಕ್ಕೆ ಉಭಯ ಭಾಷಾ ವಿಶಾರದರು ಎಂಬ ಬಿರುದು ಅವರ ಬೆನ್ನಿಗಿತ್ತು. ಇವರೆಲ್ಲರ ದೆಸೆಯಿಂದ ಕನ್ನಡ ಸೊರಗುತ್ತಿದೆ ಎಂಬರಿವು ಇಂದಿನ ಹಾಗೆ ಕೆಲವು ಸೂಕ್ಷ್ಮ ಮನಸಿನ ಕನ್ನಡಿಗರಿಗೆ ಅಂದೂ ಹೊಳೆಯತೊಡಗಿತು. ನಯಸೇನನ ಅನಂತರ ಆಂಡಯ್ಯ ಅದನ್ನೊಂದು ಸವಾಲಾಗಿಯೇ ಸ್ವೀಕರಿಸಿದ. ಹಾಗೆಯೇ ಅದರಲ್ಲಿ ಯಶಸ್ವಿಯೂ ಆದ. ಆತನ 'ಕಬ್ಬಿಗರ ಕಾವಂ' ಕೃತಿಗೆ ಈ ಕಾರಣದಿಂದಲೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

ಕನ್ನಡ ಭಾಷೆಯ ತಾಳಿಕೆಯ-ಬಾಳಿಕೆಯ ಆತಂಕ ಎದುರಾದಾಗಲೆಲ್ಲ ಬರಹಗಾರರು ಆಂಡಯ್ಯನನ್ನು ಮತ್ತೆ ಮತ್ತೆ ನೆನಪಿಸಿಕೊಂಡಿದ್ದಾರೆ. ಆಧುನಿಕ ಕನ್ನಡದ ಸಂದರ್ಭದಲ್ಲಿ ಇಂತಹ ಎರಡು ವಿಶಿಷ್ಟ ಪ್ರಯೋಗಗಳಾಗಿವೆ. ಮುಳಿಯ ತಿಮ್ಮಪ್ಪಯ್ಯನವರ "ಸೊಬಗಿನ ಬಳ್ಳಿ" ಕೊಳಂಬೆ ಪುಟ್ಟಣ್ಣಗೌಡರ 'ಕಾಲೂರ ಚೆಲುವೆ' ಕೃತಿಗಳು ಆಂಡಯ್ಯನ ಪರಂಪರೆಯನ್ನು ಮುಂದುವರಿಸಿದ ಕಾವ್ಯಗಳೇ ಆಗಿವೆ. ನಮ್ಮ ಬಹುತೇಕ ಸಾಹಿತ್ಯದ ಚರ್ಚೆಗಳಲ್ಲಿ ಇವುಗಳನ್ನು ಶ್ರೇಷ್ಠತೆಯ ವ್ಯಸನದಿಂದ ಚರ್ಚಿಸುವುದೇ ಅಭ್ಯಾಸವಾಗಿದೆ. ಅದರ ನೇರ ಪರಿಣಾಮವೆಂದರೆ ಅಚ್ಚಗನ್ನಡ ಎಂಬ ಪರಿಕಲ್ಪನೆಯನ್ನು ಸರಿಯಾಗಿ ನಿರ್ವಚನ ಮಾಡಿಕೊಳ್ಳದಿರುವುದಾಗಿದೆ. ಅಂತಹ

ಕಾವ್ಯಪರಂಪರೆಯನ್ನು ಬೆಲೆಕಟ್ಟುವ ಮೊದಲು ಅದನ್ನು ಅರ್ಥಮಾಡಿಕೊಳ್ಳುವ ಕ್ರಮದ ಬಗೆಗೆ ಯೋಚನೆ ಮಾಡಬೇಕಾಗಿದೆ. ಪ್ರಸ್ತುತ ನಿಬಂಧವು ಅಂತಹ ಒಂದು ಪ್ರಯತ್ನವಾಗಿದೆ.

ಅಚ್ಚಗನ್ನಡ ಮತ್ತು ಅಚ್ಚಗನ್ನಡ ಕಾವ್ಯಗಳು : ಅಚ್ಚಗನ್ನಡದಲ್ಲಿ ಕಾವ್ಯ ಬರೆದ ಆಂಡಯ್ಯನೇನೂ ಅಚ್ಚಗನ್ನಡದ ವಿವರಣೆಯನ್ನು ಕೊಟ್ಟಿಲ್ಲ. 'ಅಚ್ಚಗನ್ನಡದಿಂ ಬಿಗಿವೊಂದಿರೆ ಕಬ್ಬಿಗರ ಕಾವನೊಲವಿಂದೊರೆದನ್' ಎಂದು ಆತ ಹೇಳುತ್ತಾನೆ. ಆಂಡಯ್ಯನ ಪ್ರಜ್ಞೆಯಲ್ಲಿರುವ ಅಚ್ಚಗನ್ನಡವೆಂದರೆ ಸಂಸ್ಕೃತವನ್ನು ಬೆರೆಸದಿರುವುದು, ಅದು ಮಾತನಾಡಿದ ಹಾಗೆ ಸೊಗಸಾಗಿರುವಂತೆ ನೋಡಿಕೊಳ್ಳುವುದು, ದೇಶಿ ಶಬ್ದಗಳನ್ನು ಪ್ರಯೋಗಿಸುವುದು, ಸಂಸ್ಕೃತವನ್ನು ಬೆರಸದೆ ತತ್ಸಮ, ತದ್ಭವ, ದೇಶ್ಯಶಬ್ದಗಳ ಬಿಗುವು ಎದ್ದುಕಾಣುವಂತಿರಬೇಕಾದುದೇ ಆತನ ದೃಷ್ಟಿಯಲ್ಲಿ ಅಚ್ಚಗನ್ನಡವೆನಿಸುತ್ತದೆ ಎಂದು ಡಾ. ಎಸ್.ಎಸ್. ಕೋತಿನ ಅವರು ಅಭಿಪ್ರಾಯ ಪಡುತ್ತಾರೆ.[೩]

ಆಂಡಯ್ಯನ 'ಅಚ್ಚಗನ್ನಡ' ದ ಬಗೆಗೆ ಡಾ.ರಂ.ಶ್ರೀ. ಮುಗುಳಿಯವರು ವಿಸ್ತಾರವಾಗಿ ವಿವೇಚಿಸಿದ್ದಾರೆ. ಅಚ್ಚಗನ್ನಡವೆಂದರೆ ಬರೇ ಕನ್ನಡದ ದೇಶಿ ಶಬ್ದಗಳಷ್ಟೇ ಅಲ್ಲ, ಅವುಗಳಿಂದಲೇ ಕಾವ್ಯ ನಿರ್ಮಿತಿಯಾಗುವುದು ಕಷ್ಟ ತತ್ಸಮ-ತದ್ಭವ-ಸಮಸಂಸ್ಕೃತ ಮಿಶ್ರಿತ ಸಮಾಸಗಳೆಲ್ಲವೂ ಅಚ್ಚಗನ್ನಡದಲ್ಲಿ ಸಮಾವೇಶವಾಗುವವು ಎಂಬ ಅಂಶವನ್ನು ವಿವೇಚಿಸಿದ್ದಾರೆ. ಹಾಗಾಗಿ ನಯಸೇನನ ಶುದ್ಧಗನ್ನಡಕ್ಕಿಂತಲೂ ಆಂಡಯ್ಯನ ಅಚ್ಚಗನ್ನಡವು ಸಾರ್ಥಕವಾದ ಪ್ರಯತ್ನ ಎಂದು ಅಭಿಪ್ರಾಯಪಟ್ಟಿದ್ದಾರೆ.[೪]

ಅಚ್ಚಗನ್ನಡದ ಬಗೆಗೆ ಮುಳಿಯ ತಿಮ್ಮಪ್ಪಯ್ಯನವರ ವಿವರಣೆ ಗಮನಾರ್ಹವಾಗಿದೆ. ಅವರ ಪ್ರಕಾರ ಆಂಡಯ್ಯನು ಅಚ್ಚಗನ್ನಡದ ಪ್ರಯೋಗದಲ್ಲಿ ಮೊದಲಿಗನಲ್ಲ. ಅದಕ್ಕೂ ಮೊದಲೇ ಅಂತಹ ಪ್ರಯತ್ನಗಳಾಗಿವೆ ಎಂದೆನ್ನುತ್ತಾ ಕೇಶಿರಾಜನ ಶಬ್ದಮಣಿದರ್ಪಣ' ದ 'ತಿಳಿದೇಶೀಯಮಿಪ್ಪೆದಂ' ಎಂಬ ಸೂತ್ರದ ಕುರಿತು ವಿವರಿಸುತ್ತಾರೆ. ಇಲ್ಲಿ ಹೇಳಲಾಗಿರುವ ಅಚ್ಚಗನ್ನಡವೆಂಬ ಪದಪ್ರಯೋಗ ಆಂಡಯ್ಯನಿಗೆ ಸಂಬಂಧಿಸಿರುವುದಾಗಿದೆ. ಆಂಡಯ್ಯನ ಪ್ರಕಾರ ಅಚ್ಚಗನ್ನಡವೆಂದರೆ ಸಂಸ್ಕೃತವನ್ನು ಬೆರಸದಿರುವದೇ ಆಗಿದೆ. ಅಂದರೆ 'ಸಕ್ಕದಂಬೆರಸದ' ತದ್ಭವ - ತತ್ಸಮ - ದೇಶೀ ಪದಗಳಿಂದ ಕೂಡಿದುದೇ ಅಚ್ಚಗನ್ನಡ.[೫] ಸಾಮಾನ್ಯವಾಗಿ ಇಲ್ಲಿ ಅನೇಕ ಪ್ರಶ್ನೆಗಳೇಳುವುದುಂಟು. ತದ್ಭವ ಎಂದರೇನು? ತತ್ಸಮ ಎಂದರೇನು ? ಸಮಸಂಸ್ಕೃತ ಎಂದರೇನು ? ತದ್ಭವವನ್ನು ಬಳಸಿಯೂ ಅಚ್ಚಗನ್ನಡ ಕಾವ್ಯರಚನೆ ಸಾಧ್ಯವೇ ಇತ್ಯಾದಿ. ಸಮಸಂಸ್ಕೃತ ಮತ್ತು ತತ್ಸಮ ಎಂಬೀ ಪದಗಳು ಏಕಾರ್ಥವಾದುವುಗಳೆಂದು ಭಾವಿಸಲಾಗುತ್ತದೆ. 'ತೇನ ಸಮಂ ತತ್ಸಮಂ' ಎಂದು ತತ್ಸಮಕ್ಕೆ ವ್ಯಾಖ್ಯಾನ. ಅಂದರೆ ಅದು ಸಂಸ್ಕೃತವಲ್ಲ. ಅದರೊಡನೆ ಸಮಾನಾದ ಬೇರೆ ಭಾಷೆಯ ಪದ ಎಂದು ಅದಕ್ಕೆ ಅರ್ಥ. ಆ ಕಾರಣದಿಂದಲೇ ಎಂದರೆ ಸಂಸ್ಕೃತವಲ್ಲದಿರುವುದರಿಂದಲೇ ಅದು ದೇಶಿ. ಕೇಶಿರಾಜ ಹೇಳುವಂತೆ ತತ್ಸಮವು ದೇಶೀಯೊಡನೆ ಸಮಾಸವಾದಾಗ ಅರಿಸಮಾಸ ದೋಷವಾಗುವುದಿಲ್ಲ. ಸಂಸ್ಕೃತದಲ್ಲಿರುವ ಮಣಿ, ಮಂಚ, ತೋರಣ ಮೊದಲಾದ ಪದಗಳೆಲ್ಲವೂ ಆ ಕವಿಗಳು ಬಳಸುತ್ತ ಬಂದಿರುವ ದೇಶಿ ಪದಗಳೇ ಆಗಿವೆ. ಮುಂದಿನದು ಕೇಶಿರಾಜ ಹೇಳಿರುವ ಸಮಸಂಸ್ಕೃತ ಎಂಬುದಾಗಿದೆ. ಅದು ಎಂದರೆ ಕನ್ನಡ ಕಾವ್ಯಗಳಲ್ಲಿ ತನ್ನ ಪೂರ್ವರೂಪಕ್ಕೆ ಸಮವಾಗಿ ಉಪಯೋಗಿಸಬಹುದಾದ ಶುದ್ಧ ಸಂಸ್ಕೃತ ಪದ. ಅದನ್ನು ಅಚ್ಚಗನ್ನಡದಲ್ಲಿ ಬೆರೆಸಿ ಸಮಾಸ ಮಾಡಲಾಗದು ಎಂದು ಕೇಶಿರಾಜನ ಅಭಿಪ್ರಾಯ. ಹಾಗಾದರೆ ತತ್ಸಮ ಎಂದರೇನು?

ಸಂಸ್ಕೃತ ಗ್ರಂಥಗಳಲ್ಲಿ ಉಪಯೋಗಿಸುವ ದೇಸಿ ಪದಗಳೆಂದೇ ಅರ್ಥ. ಮುಂದಿನದು ತದ್ಭವದ ಸಮಸ್ಯೆ. ಈಗಾಗಲೇ ಹೇಳಿದಂತೆ ಅಚ್ಚಗನ್ನಡವು ಸಕ್ಕದವನ್ನು ಬೆರೆಸದ, ತದ್ಭವ-ತತ್ಸಮ ದೇಶಿಗಳ ಸಮನ್ವಯವೇ ಆದುದಾಗಿದೆ. ತದ್ಭವವೆಂದರೆ ಸಂಸ್ಕೃತದಿಂದ ಹುಟ್ಟಿದುದು ಎಂದರ್ಥ. ದೇಶಭಾಷೆಗಳಿಂದಲೇ ಎತ್ತಿಕೊಂಡು ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡ ಪದಗಳವು. ಇದು ಅಚ್ಚಗನ್ನಡಕ್ಕೆ ಹೊರತಾದುದಲ್ಲ. ಏಕೆಂದರೆ ಅಚ್ಚಗನ್ನಡ ಕವಿಗಳು ಕನ್ನಡ ಭಾಷೆಗೆ ಒಂದು ಪ್ರಾಕೃತ ಸ್ವರೂಪವನ್ನು ಕೊಡುವುದಕ್ಕೆ ಹೊರಟವರು. ಪ್ರಾಕೃತದಲ್ಲಿ ತದ್ಭವ ತತ್ಸಮ ದೇಶಿ ರೂಪದ ಪದಗಳಿರುತ್ತವೆ ಎಂಬುದೇ ಅರ್ಥ. ಅವರಿಗೆ ತದ್ಭವಗಳು ಅಚ್ಚಗನ್ನಡವನ್ನು ಕಲುಷಿತಗೊಳಿಸುತ್ತವೆ ಎಂದೆನಿಸಲಿಲ್ಲ. ಏಕೆಂದರೆ ಅಚ್ಚಗನ್ನಡವೆಂದರೆ ಕರ್ಣಾಟಕ ಪ್ರಾಕೃತ ಎಂದರ್ಥವಾಗುತ್ತದೆ. ಇದರಿಂದ ಅಚ್ಚಗನ್ನಡವೆಂದರೆ ಕೇವಲ ಕನ್ನಡದ ಅಂಧಾಭಿಮಾನ ಎನ್ನುವ ಭಾವನೆ ಇರುವ ಈ ಕಾಲದಲ್ಲಿ ಮುಳಿಯರು ಅದೊಂದು ಪರಿಕಲ್ಪನೆ ಎಂಬುದಾಗಿ ವಿವರಿಸುತ್ತಾರೆ.

ಅಧ್ಯಯನದ ಉದ್ದೇಶ

ಅಚ್ಚಗನ್ನಡ ಕಾವ್ಯಗಳ ಕುರಿತು ಈವರೆಗೆ ನಡೆದಿರುವ ಚರ್ಚೆಗಳಲ್ಲಿ ಏಕಸೂತ್ರತೆ ಇಲ್ಲದಾಗಿದೆ. ಡಾ.ಎಸ್.ಎಸ್.ಕೋತಿನ ಅವರ 'ಆಂಡಯ್ಯ' ಎಂಬ ನಿಬಂಧವು ನಿರ್ದಿಷ್ಟವಾಗಿ ಆಂಡಯ್ಯ ಮತ್ತವನ ಕಾವ್ಯದ ಬಗೆಗಿನ ಚರ್ಚೆಯೇ ಆಗಿದೆ. ಉಳಿದ ಕಾವ್ಯಗಳ ಕುರಿತಾಗಿ ಪ್ರಾಸಂಗಿಕವಾದ ವಿವರಗಳಷ್ಟೇ ಅಲ್ಲಿ ಲಭ್ಯವಿದೆ. ಅದಲ್ಲದೇ ಈವರೆಗಿನ ಅಧ್ಯಯನಗಳಲ್ಲಿ ಅಚ್ಚಗನ್ನಡದ ಬಗೆಗೆ ಪೂರ್ವ ನಿರ್ಧಾರಿತ ಸೂತ್ರಗಳ ಮೂಲಕವೇ ಚರ್ಚೆಗಳು ಸಾಗಿರುವುದನ್ನು ಗಮನಿಸಬಹುದಾಗಿದೆ. ಆದರೆ ಅಚ್ಚಗನ್ನಡದ ಬಗೆಗೆ ಈಗಾಗಲೇ ಹೇಳಿರುವಂತೆ ಅಂತಹ ಒಮ್ಮತವಾದ ಅಭಿಪ್ರಾಯಗಳೇನೂ ಇಲ್ಲ. ಇದರ ಮುಖ್ಯ ಪ್ರತಿಪಾದಕರಾದ ಕವಿಗಳಲ್ಲೇ ಪರಸ್ಪರ ಭಿನ್ನಾಭಿಪ್ರಾಯಗಳು ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಒಟ್ಟಾಗಿ ಆ ಎಲ್ಲಾ ಕಾವ್ಯಗಳ ಅಧ್ಯಯನವು ಕೆಲವೊಂದು ಫಲಕಾರಿಯಾದ ಚರ್ಚೆಗಿಳಿಯುವಂತೆ ಮಾಡುವ ಸಾಧ್ಯತೆಯಿದೆ. ಆದರೆ ಈ ಅಧ್ಯಯನವು ಅಚ್ಚಗನ್ನಡದ ಬಗೆಗೆ ಒಂದು ನಿರ್ಣಯವನ್ನು ಮಂಡಿಸುವ ಪ್ರಯತ್ನವಲ್ಲ. ಅಂತಹ ಒಂದು ಪರಿಕಲ್ಪನೆಯನ್ನು ವಿವರಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕನ್ನಡದ ತಾಳಿಕೆ ಬಾಳಿಕೆಯ ಬಗೆಗೆ ಮೇಲಿಂದಮೇಲೆ ಚರ್ಚೆಗಳಾಗುತ್ತಲೇ ಇವೆ. ಅಂದಿನ ಕಾಲದಲ್ಲಿ ಸಂಸ್ಕೃತದ ಪ್ರಭಾವ ನಮಗೆ ಆತಂಕವನ್ನುಂಟು ಮಾಡಿತ್ತು. ಆದರೆ ಮುಂದೆ ಸಂಸ್ಕೃತವೇ ಇಲ್ಲದಾಗಿ ಕನ್ನಡದ ಮೂಲಕವೇ ಅದು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಾದ ಸಂದರ್ಭ ನಿರ್ಮಾಣವಾಗಿದೆ. ಇಂದು ಅದಕ್ಕಿಂತ ಪ್ರಬಲವಾದ ಆತಂಕ ಎದುರಾಗಿರುವುದು ಇಂಗ್ಲೀಷ್ ಭಾಷೆಯಿಂದ. ಈ ಆತಂಕ ಎಷ್ಟರ ಮಟ್ಟಿಗೆ ನಮಗೆ ಎದುರಾಗಿದೆ ಎಂದರೆ ಇಂದು ಕನ್ನಡದ ಅಸ್ತಿತ್ವದ ಬಗೆಗೆ ಕೆಲವರು ಅನುಮಾನ ವ್ಯಕ್ತಪಡಿಸುತ್ತಾರೆ. ಅನ್ಯಭಾಷೆಯ ಪ್ರಭಾವವನ್ನು ತಡೆದುಕೊಳ್ಳುವ ಸಮಸ್ಯೆಯುಂಟಾದಾಗ ಕನ್ನಡ ಕವಿಗಳು ಈ ಸಮಸ್ಯೆಗೆ ಹೇಗೆ ಮುಖಾಮುಖಿಯಾಗುತ್ತಾರೆ ಎಂಬುದನ್ನು ವಿವರಿಸುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗುತ್ತದೆ.

ಈವರೆಗೆ ಕನ್ನಡದಲ್ಲಿ ಅಚ್ಚಗನ್ನಡದ ಬಗೆಗೆ ಕೇವಲ ಸಾಮಾನ್ಯ ತಿಳುವಳಿಕೆಯಷ್ಟೇ ಇದೆ. ಸಾಮಾನ್ಯ ತಿಳುವಳಿಕೆಗಳನ್ನು ಒರಗೆ ನೋಡುವುದು ಸಂಶೋಧನೆಯಲ್ಲಿ ನಡೆಯಬೇಕಾದ ಪ್ರಾಥಮಿಕ ಕೆಲಸವಾಗಿದೆ. ಅಚ್ಚಗನ್ನಡದ ಬಗೆಗೆ ಈಗಿರುವ ಸಾಮಾನ್ಯ ತಿಳುವಳಿಕೆಯನ್ನು ಒರಗೆ ಹಚ್ಚುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಈ ಉದ್ದೇಶದಿಂದ ಪ್ರಸ್ತುತ ನಿಬಂಧದಲ್ಲಿ ಕನ್ನಡದ ಅಚ್ಚಗನ್ನಡ ಕಾವ್ಯಗಳ ಬಗೆಗೆ ಅಧ್ಯಯನ ಮಾಡಲಾಗುವುದು. ಮುಖ್ಯವಾಗಿ ಆಂಡಯ್ಯನ ಕಬ್ಬಿಗರ ಕಾವ, ಮುಳಿಯ ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿ, ಕೊಳಂಬೆ ಪುಟ್ಟಣ್ಣಗೌಡರ ಕಾಲೂರ ಚೆಲುವೆ ಕಾವ್ಯಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಆಂಡಯ್ಯನ ಕಬ್ಬಿಗರ ಕಾವ ಪ್ರಾಚೀನ ಕಾಲದ ಅಚ್ಚಗನ್ನಡ ಕಾವ್ಯವಾದರೆ ಉಳಿದೆರಡು ಕಾವ್ಯಗಳು ಹೊಸಗನ್ನಡದ ಅರುಣೋದಯದ ಕಾಲಕ್ಕೆ ಸೇರಿದವಾಗಿವೆ. ಆದರೆ ಅವುಗಳಿಗೆ ಪ್ರೇರಣೆ ಆಂಡಯ್ಯನ ಕಬ್ಬಿಗರ ಕಾವ ಮತ್ತು ಅಚ್ಚಗನ್ನಡದ ಬಗೆಗಿನ ಅಭಿಮಾನವೇ ಆಗಿದೆ. ಆದರೆ ಐತಿಹಾಸಿಕ ದೃಷ್ಟಿಯಿಂದ ಆಂಡಯ್ಯನಿಗಿಂತ ಪೂರ್ವದ ಕನ್ನಡದ ಮಹಾಕವಿಗಳ ಅದರಲ್ಲಿಯೂ ರತ್ನತ್ರಯರ ಕಾವ್ಯಗಳಲ್ಲಿ ಕಂಡುಬರುವ ಅಚ್ಚಗನ್ನಡ ರಚನೆಗಳನ್ನು ಪ್ರಾಸಂಗಿಕವಾಗಿ ಅಧ್ಯಯನ ಮಾಡಲಾಗುವುದು.

ಈ ಕುರಿತ ಅಧ್ಯಯನಗಳು

ಹಾಗೆ ನೋಡಿದರೆ ಅಚ್ಚಗನ್ನಡ ಕಾವ್ಯಕ್ಕೆ ಸಂಬಂಧಿಸಿದ ಪ್ರತ್ಯೇಕ ಅಧ್ಯಯನ ಈವರೆಗೆ ನಡೆದಿಲ್ಲ, ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಏಕೈಕ ಕೃತಿ ಎಸ್.ಎಸ್.ಕೋತಿನ ಅವರ 'ಆಂಡಯ್ಯ' ಆಗಿದೆ. ಆದರೆ ಇದು ಕೇವಲ ಆಂಡಯ್ಯನ ಕಾವ್ಯಕ್ಕೆ ಮಾತ್ರ ಸಂಬಂಧಿಸಿದ ವಿವರವಾದ ಅಧ್ಯಯನವಾಗಿದೆ. ಇದನ್ನು ಹೊರತುಪಡಿಸಿದರೆ ಪ್ರಾಸಂಗಿಕವಾಗಿ ಅಚ್ಚಗನ್ನಡದ ಕವಿಗಳ ಬಗೆಗೆ ಅಧ್ಯಯನಗಳಾಗಿವೆ. (ಉದಾ: ಡಾ.ಕೆ.ಸುಬ್ರಹ್ಮಣ್ಯ ಭಟ್ಟರ ಮುಳಿಯ ತಿಮ್ಮಪ್ಪಯ್ಯ ಒಂದು ಅಧ್ಯಯನ) ಮೊದಲಾದವು ಇದಲ್ಲದೆ ಅಚ್ಚಗನ್ನಡ ಕೃತಿಗಳ ಬಗೆಗೆ ಕೆಲವೊಂದು ಪ್ರಾಸಂಗಿಕವಾದ ಚರ್ಚೆಗಳು ಅಲ್ಲಲ್ಲಿ ನಡೆದಿರುವುದೂ ಇದೆ. ಇವೆಲ್ಲವೂ ಸಾಂದರ್ಭಿಕವಾದುವುಗಳೇ ಹೊರತು ಪೂರ್ಣಪ್ರಮಾಣದವುಗಳಲ್ಲ.

ಅಧ್ಯಯನದ ಪೂರ್ವಕಲ್ಪನೆ

ಅಚ್ಚಗನ್ನಡದ ಕುರಿತು ನಡೆದಿರುವ ಈವರೆಗಿನ ಚರ್ಚೆಗಳಲ್ಲಿ ಅದನ್ನು ವಿಶಿಷ್ಟವಾದ ಒಂದು ಕಾವ್ಯ ಸಂಪ್ರದಾಯವೆಂದು ಭಾವಿಸಲಾಗಿದೆ. ಮುಳಿಯ ತಿಮ್ಮಪ್ಪಯ್ಯನವರು ಈ ಮಾದರಿಯ ಅಧ್ಯಯನವನ್ನು ಆರಂಭಿಸಿದ ಮೊದಲಿಗರು. ಆದರೆ ಪ್ರಸ್ತುತ ಅಧ್ಯಯನದಲ್ಲಿ ಅಚ್ಚಗನ್ನಡವೆಂಬುದನ್ನು ಕಾವ್ಯ ಪ್ರಕಾರವೆಂಬುದಕ್ಕಿಂತ ಭಿನ್ನವಾಗಿ ನೋಡುವ ಪ್ರಯತ್ನ ಮಾಡಲಾಗಿದೆ. ಹಾಗಾದುದರಿಂದ ಅಚ್ಚಗನ್ನಡದ ಕಲ್ಪನೆಯು ಕನ್ನಡ ಬರವಣಿಗೆಯನ್ನು ಸರಿಪಡಿಸುವ ಮೊದಲ ಪ್ರಯತ್ನ ಎನ್ನುವ ಪೂರ್ವಕಲ್ಪನೆಯನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಇರಿಸಿಕೊಳ್ಳಲಾಗಿದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ನಿಬಂಧದ ಅಧ್ಯಾಯಗಳು ಹೀಗಿವೆ :

ಅಧ್ಯಾಯ -೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ -೨

ಈವರೆಗಿನ ಅಧ್ಯಯನದ ವಿಮರ್ಶಾತ್ಮಕ ಸಮೀಕ್ಷೆ

ಈ ಅಧ್ಯಾಯದಲ್ಲಿ ಅಚ್ಚಗನ್ನಡ ಕಾವ್ಯ, ಕವಿಗಳ ಬಗೆಗೆ ಕನ್ನಡದಲ್ಲಿ ಈವರೆಗೆ ನಡೆದಿರುವ ಎಲ್ಲಪ್ರಮುಖ ಅಧ್ಯಯನಗಳನ್ನು ಸಂಗ್ರಹಿಸಲಾಗಿದೆ. ಮಾತ್ರವಲ್ಲದೆ ವಿಮರ್ಶಾತ್ಮಕವಾಗಿಯೂ ಪರಿಶೀಲಿಸಲಾಗಿದೆ. ಇದರ ಮೂಲಕ ಪ್ರಸ್ತುತ ನಿಬಂಧದ ಅಗತ್ಯವನ್ನು ಸಾಧಾರ ಪೂರ್ವಕವಾಗಿ ಪ್ರತಿಪಾದಿಸಲಾಗಿದೆ.

ಅಧ್ಯಾಯ -೩

ಅಚ್ಚಗನ್ನಡದ ಪರಿಕಲ್ಪನೆ

ಕನ್ನಡದ ಅಧ್ಯಯನದ ಸಂದರ್ಭದಲ್ಲಿ ಅಚ್ಚಗನ್ನಡ ಪರಿಕಲ್ಪನೆಯನ್ನು ವಿದ್ವಾಂಸರು ಮತ್ತು ಕವಿಗಳು ಕಾಲಕಾಲಕ್ಕೆ ನಿರ್ವಹಿಸಿದ ರೀತಿಯ ಬಗೆಗೆ ಇಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ. ಮುಖ್ಯವಾಗಿ ನಯಸೇನ, ಆಂಡಯ್ಯ, ಕೋತಿನ, ಮುಳಿಯ ತಿಮ್ಮಪ್ಪಯ, ಕೊಳಂಬೆ ಪುಟ್ಟಣ್ಣಗೌಡ ಮೊದಲಾದ ಹಿಂದಿನ ಮತ್ತು ಇಂದಿನ ಕವಿಗಳು, ಕವಿ ವಿದ್ವಾಂಸರ ಚರ್ಚೆಗಳನ್ನು ಇಲ್ಲಿ ಕಲೆಹಾಕಲಾಗಿದೆ. ಇವರೆಲ್ಲರಿಗಿಂತಲೂ ಭಿನ್ನವಾಗಿ ಮುಳಿಯ ತಿಮ್ಮಪ್ಪಯ್ಯನವರು ಅಚ್ಚಗನ್ನಡ ಕುರಿತಾಗಿ ಪ್ರತಿಪಾದಿಸಿರುವ ವಿವರಗಳನ್ನು ಹೆಚ್ಚು ಮೌಲಿಕವಾದುದೆಂದು ತಿಳಿದು ನಿಬಂಧಕ್ಕೆ ಹಿನ್ನಲೆಯಾಗಿ ಪರಿಗಣಿಸಲಾಗಿದೆ.

ಅಧ್ಯಾಯ -೪

ಅಚ್ಚದ್ರಾವಿಡ ಕಾವ್ಯಗಳು: ಐತಿಹಾಸಿಕ ಸಮೀಕ್ಷೆ

ಈ ಅಧ್ಯಾಯದಲ್ಲಿ ದಕ್ಷಿಣ ಭಾರತದಾದ್ಯಂತ ನಡೆದಿರುವ ಅಚ್ಚಗನ್ನಡ ಪರಿಕಲ್ಪನೆಯ ಸಮಾನಾಂತರವಾದ ಚಿಂತನೆಗಳ ಕುರಿತು ವಿವೇಚಿಸಲಾಗಿದೆ. ಮುಖ್ಯವಾಗಿ ತಮಿಳು, ಮಲಯಾಳಂ, ತೆಲುಗು ಕಾವ್ಯ ಪರಂಪರೆಯಲ್ಲಿ ರಚಿಸಲಾಗಿರುವ ಅಚ್ಚತಮಿಳು ಚಳುವಳಿ, ಅಚ್ಚಮಲಯಾಳಂ ಕಾವ್ಯ. ಅಚ್ಚತೆಲುಗು ಕಾವ್ಯ ಚಿಂತನೆಗಳನ್ನು ಐತಿಹಾಸಿಕವಾಗಿ ಚರ್ಚಿಸಲಾಗಿದೆ. ಅಲ್ಲದೆ ಆಯಾಯ ಭಾಷೆಗಳ ಅಂತಹ ಮುಖ್ಯ ಕಾವ್ಯಗಳನ್ನು, ವಿವರಗಳನ್ನು ಅಚ್ಚಗನ್ನಡ ಕಾವ್ಯ ಪರಂಪರೆಗೆ ಪೂರಕವಾಗಿ ನೀಡಲಾಗಿದೆ.

ಅಧ್ಯಾಯ -೫

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ ರಚನೆಗಳು

ಈ ಅಧ್ಯಾಯದಲ್ಲಿ ಕನ್ನಡದ ಪ್ರಾಚೀನ ಮಾರ್ಗಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಬಳಕೆಯಾಗಿರುವ ಅಚ್ಚಗನ್ನಡ ರಚನೆಗಳನ್ನು ಮೊದಲ ಬಾರಿಗೆ ಸಂಗ್ರಹಿಸಲಾಗಿದೆ ಮತ್ತು ವಿವೇಚಿಸಲಾಗಿದೆ. ಮುಖ್ಯವಾಗಿ ಕನ್ನಡದ ಮಾರ್ಗಕವಿಗಳಾದ ಪಂಪ, ಪೊನ್ನ. ರನ್ನ. ಜನ್ನ ಕವಿಗಳ ಕಾವ್ಯಗಳಿಂದ ಆಯ್ದ ಅಚ್ಚಗನ್ನಡ ರಚನೆಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ಚರ್ಚಿಸಲಾಗಿದೆ.

ಅಧ್ಯಾಯ -೬

ಅಚ್ಚಗನ್ನಡ ಕವಿಗಳು ಮತ್ತು ಕಾವ್ಯ ಸಮೀಕ್ಷೆ

ಈ ಅಧ್ಯಾಯದಲ್ಲಿ ಕನ್ನಡದ ಹಳೆಯ ಮತ್ತು ಹೊಸ ಅಚ್ಚಗನ್ನಡ ಕವಿಗಳ ಮತ್ತು ಅವರ ಕಾವ್ಯದ ಸಮೀಕ್ಷೆಯನ್ನು ಅಧ್ಯಯನಕ್ಕೆ ಪೂರಕವಾಗಿ ಮಾಡಲಾಗಿದೆ. ಪ್ರಾಚೀನ ಕವಿಯಾದ ಆಂಡಯ್ಯನ ಕಬ್ಬಿಗರ ಕಾವ, ಹೊಸಗನ್ನಡದ ಕವಿಗಳಾದ ಮುಳಿಯ ತಿಮ್ಮಪ್ಪಯ್ಯ, ಕೊಳಂಬೆ ಪುಟ್ಟಣ್ಣಗೌಡರ ಸೊಬಗಿನ ಬಳ್ಳಿ ಮತ್ತು ಕಾಲೂರ ಚೆಲುವೆ ಕಾವ್ಯಗಳ ಕುರಿತಾಗಿ ಪರಿಚಯ, ಐತಿಹಾಸಿಕ ಮಹತ್ವ ಮೊದಲಾದುವುಗಳ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ -೭

ಅಚ್ಚಗನ್ನಡ ಕಾವ್ಯಗಳ ತೌಲನಿಕ ಅಧ್ಯಯನ

ಈ ಅಧ್ಯಾಯದಲ್ಲಿ ನಿಬಂಧದ ಅಧ್ಯಯನ ವಿಷಯಗಳಾದ ಅಚ್ಚಗನ್ನಡ ಕಾವ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಛಂದಸ್ಸು, ಕಥಾವಸ್ತುವಿನ ಹಿನ್ನಲೆಯಲ್ಲಿ ಈ ಅಧ್ಯಾಯವನ್ನು ರೂಪಿಸಲಾಗಿದೆ.

ಅಧ್ಯಾಯ -೮

ಸಂಸ್ಕೃತ ಮತ್ತು ಅಚ್ಚಗನ್ನಡ ಕಾವ್ಯಭಾಷೆ

ಈ ಅಧ್ಯಾಯದಲ್ಲಿ ಕನ್ನಡ ಕಾವ್ಯ ಪರಂಪರೆಯು ಸಂಸ್ಕೃತ ಭಾಷೆಯೊಂದಿಗೆ ಬೆಳೆಸಿಕೊಂಡು ಬಂದ ಸಂಬಂಧವನ್ನು ಮೊದಲ ಭಾಗದಲ್ಲಿ ವಿವೇಚಿಸಲಾಗಿದೆ. ಅನಂತರ ಅಚ್ಚಗನ್ನಡ ಕಾವ್ಯ ಭಾಷೆಯನ್ನು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ -೯

ಅಚ್ಚಗನ್ನಡ ಮತ್ತು ಆಧುನಿಕ ಚಿಂತನೆಗಳು

ಈ ಅಧ್ಯಾಯವು ಈ ನಿಬಂಧದ ಒಟ್ಟಾರೆ ಫಲಿತಾಂಶವಾಗಿದೆ. ಅಚ್ಚಗನ್ನಡದ ಕವಿಗಳು ಮತ್ತು ಆಧುನಿಕ ಕನ್ನಡ ಭಾಷಾಶಾಸ್ತ್ರಜ್ಞರಾದ ಡಿ.ಎನ್. ಶಂಕರಭಟ್ಟರ ಚಿಂತನೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈ ಹಿನ್ನಲೆಯಲ್ಲಿ ಅಚ್ಚಗನ್ನಡ ಕವಿಗಳು ಕನ್ನಡ ಬರವಣಿಗೆಯನ್ನು ಸರಿಪಡಿಸುವ ಕ್ರಾಂತಿಕಾರಕ ಕಾರ್ಯದಲ್ಲಿ ತೊಡಗಿದ್ದರು ಎಂಬುದನ್ನು ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ -೧೦

ಸಮಾರೋಪ

ಈ ಅಧ್ಯಾಯದಲ್ಲಿ ನಿಬಂಧದ ಪ್ರಮುಖ ಪ್ರತಿಪಾದನೆಗಳನ್ನು ಸಂಗ್ರಹಿಸಲಾಗಿದೆ. ಈ ನಿಬಂಧಕ್ಕೆ ಪೂರಕವಾಗಿ ಅನುಬಂಧ-೧ರಲ್ಲಿ ಅಚ್ಚಗನ್ನಡ ಕಾವ್ಯಗಳ ಪದಪ್ರಯೋಗ ಕೋಶವನ್ನು ನೀಡಲಾಗಿದೆ.

❐

ಅಧ್ಯಾಯ -೨

ಈವರೆಗಿನ ಅಧ್ಯಯನದ ವಿಮರ್ಶಾತ್ಮಕ ಸಮೀಕ್ಷೆ

ಅಚ್ಚಕನ್ನಡ ಕವಿಗಳಾದ ಆಂಡಯ್ಯ, ಮುಳಿಯ ತಿಮ್ಮಪ್ಪಯ್ಯ ಮತ್ತು ಕೊಳಂಬೆ ಪುಟ್ಟಣ್ಣಗೌಡರ ಅಚ್ಚಗನ್ನಡ ಕಾವ್ಯಗಳು ಮತ್ತು ಸಾಹಿತ್ಯಕ ಸಾಧನೆಗಳಿಗೆ ಸಂಬಂಧಿಸಿದಂತೆ ಇದುವರೆಗೆ ನಡೆದಿರುವ ಅಧ್ಯಯನಗಳ ಕುರಿತಾಗಿ ಇಲ್ಲಿ ವಿಮರ್ಶಾತ್ಮಕ ಸಮೀಕ್ಷೆ ಮಾಡಲಾಗಿದೆ. ಅಧ್ಯಯನಗಳ ಪ್ರಧಾನ ಅಂಶ, ವೈಶಿಷ್ಟ್ಯದ ಕಡೆ ಇಲ್ಲಿ ಗಮನ ಹರಿಸಲಾಗಿದೆ. ಅವುಗಳ ಕಾಲಾನುಕ್ರಮಕ್ಕನುಸರಿಸಿ ಚರ್ಚಿಸಲಾಗಿದೆ.

ಕೃತಿಗಳು:

೧. ಅಚ್ಚಗನ್ನಡದಲ್ಲಿಯೇ ಕಾವ್ಯ ರಚಿಸಬೇಕೆಂದು ಹೊರಟ ಆಂಡಯ್ಯ ಮತ್ತು ಆತನ ಕಬ್ಬಿಗರ ಕಾವವನ್ನು ಕುರಿತಂತೆ ಡಾ.ಎಸ್.ಎಸ್.ಕೋತಿನ ಅವರು 'ಆಂಡಯ್ಯ' ಎಂಬ ನಿಬಂಧ ರಚಿಸಿದ್ದು ಅದರಲ್ಲಿ ಏಳು ಅಧ್ಯಾಯಗಳಿವೆ[೧]. ಆರಂಭದ ಮೂರು ಅಧ್ಯಾಯಗಳಲ್ಲಿ ಆಂಡಯ್ಯನ ಪೂರ್ವ ಮತ್ತು ಸಮಕಾಲೀನ ಸ್ಥಿತಿಗತಿಗಳಿವೆ. ಅಂದರೆ ಸಾಹಿತ್ಯಕ ಹಿನ್ನಲೆಯಲ್ಲಿ ಕನ್ನಡ ಭಾಷೆಯ ಪ್ರಾಚೀನತೆ, ಸಂಸ್ಕೃತ, ಪ್ರಾಕೃತ, ಭಾಷೆಗಳ ಪ್ರಭಾವ, ಕವಿರಾಜಮಾರ್ಗ ಪೂರ್ವದ ಸಾಹಿತ್ಯ, ೧೩ನೇ ಶತಮಾನದ ಉತ್ತರಾರ್ಧದವರೆಗಿನ ಸಾಹಿತ್ಯ ಸ್ವರೂಪ, ಕನ್ನಡ ಭಾಷೆಯತ್ತ ಜೈನ ಕವಿಗಳ ಒಲವು, ವೀರಶೈವ ಕ್ರಾಂತಿ, ಜೈನ ಕವಿಗಳ ರಾಜಾಶ್ರಯ, ರಾಜಕೀಯ ಹಿನ್ನಲೆ, ಸಮಕಾಲೀನ ಧಾರ್ಮಿಕ ಸ್ಥಿತಿಗತಿ, ಕಾವ್ಯಪರಂಪರೆ ಮೊದಲಾದವುಗಳ ಬಗ್ಗೆ ವಿವೇಚಿಸಿದ್ದಾರೆ.[೧]

ಅನಂತರದ ಎರಡು ಅಧ್ಯಾಯಗಳಲ್ಲಿ ಕೃತಿ, ಕೃತಿಕಾರನ ಹೆಸರು, ವಂಶ, ಮತ, ಜನ್ಮಸ್ಥಳ, ಕಾಲ, ರಾಜಾಶ್ರಯ, ಕೃತಿ ಸಂಖ್ಯಾ ವಿಚಾರ, ಕಥಾವೃತ್ತಾಂತ, ಕಥೆಯ ಮೂಲ ಮತ್ತು ಬೆಳವಣಿಗೆ ಕಾವ್ಯ ಶೀರ್ಷಿಕೆ, ಕಾವ್ಯದಲ್ಲಿ ಇತಿಹಾಸ ಈ ಅಂಶಗಳ ಕುರಿತಾಗಿ ವಿದ್ವಾಂಸರಲ್ಲಿ ನಡೆದ ವಾದ ವಿವಾದಗಳ ಚರ್ಚೆಯನ್ನು ವಿಶ್ಲೇಷಣೆ ಮಾಡುವುದರ ಮೂಲಕ ಕವಿಯ ಹೆಸರು ಆಂಡಯ್ಯನೆಂದು ಹೇಳಿದ್ದಾರೆ. ಆತನು ಒಂದೇ ಒಂದು ಕೃತಿಯನ್ನು ಬರೆದಿದ್ದು ಅದು

ಕಬ್ಬಿಗರ ಕಾವವೆಂದೂ ಅಭಿಪ್ರಾಯಪಟ್ಟಿದ್ದಾರೆ. ಜೈನ ಧರ್ಮದ ಲೆಕ್ಕಿಗರ ವಂಶದವನೆಂದೂ, ೧೩ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದನೆಂದೂ ಯಾವ ರಾಜರ ಆಶ್ರಯದಲ್ಲಿರಲಿಲ್ಲವೆಂದೂ ತೀರ್ಮಾನಿಸಿದ್ದಾರೆ. ಹಾಗೆಯೇ ಈತನ ಕಾವ್ಯದಲ್ಲಿ ಯಾವುದೇ ಚಾರಿತ್ರಿಕ ಅಂಶಗಳು ಕಂಡುಬರುವುದಿಲ್ಲವೆಂದು ಅಭಿಪ್ರಾಯಕ್ಕೆ ಬಂದಿದ್ದಾರೆ.[೨]

ಈ ಕೃತಿಯ ಮುಖ್ಯ ಪ್ರತಿಪಾದನೆಗಳು ಹೀಗಿವೆ: ಸಾಂಸ್ಕೃತಿಕ ವೈಶಿಷ್ಟ್ಯವನ್ನು ಬಿಂಬಿಸುವ ಕನ್ನಡ ಸಾಹಿತ್ಯ ಪರಂಪರೆಯನ್ನು ಹತ್ತನೇ ಶತಮಾನದ ಪಂಪಾದಿ ಕವಿಗಳಿಂದ ಗುರುತಿಸಲಾಗುತ್ತದೆ. ಅವರು ಪರಂಪರೆಯ ಸತ್ವವನ್ನು ಹೀರಿಕೊಂಡು ತಮ್ಮದೇ ಆದ ಹೊಸತನದ ಮೂಲಕ ಸಾಹಿತ್ಯಕ್ಕೆ ವಿಶಿಷ್ಟ ಕಾಣಿಕೆ ನೀಡಿದ್ದಾರೆ. ಆದರೆ ಹನ್ನೊಂದನೆ ಶತಮಾನದಲ್ಲಿ ರಾಜಕೀಯ, ಧಾರ್ಮಿಕ, ರಂಗದಲ್ಲಾದ ಬದಲಾವಣೆಗಳು ಸಾಹಿತ್ಯ ಪ್ರಪಂಚದ ಮೇಲೂ ಪರಿಣಾಮ ಬೀರಿದವು. ಜೈನಧರ್ಮ ಶಿಥಿಲಗೊಂಡಾಗ, ವೀರಶೈವಧರ್ಮ ಆ ಸ್ಥಾನ ಆಕ್ರಮಿಸಿತು. ಹರಿಹರ, ರಾಘವಾಂಕಾದಿ ಕವಿಗಳು ಜನಪರವಾದ ಕಾವ್ಯ ರಚಿಸಿದರು. ಭಾಷೆ, ವಸ್ತುಗಳಲ್ಲಿ ಬದಲಾವಣೆ ಮಾಡಿಕೊಂಡರು. ಸಂಸ್ಕೃತ ಭೂಯಿಷ್ಠ ಭಾಷೆಯ ಬಳಕೆಯ ಬದಲಾಗಿ ಜನಭಾಷೆಯನ್ನು ಸಾಹಿತ್ಯ ರಚನೆಗೆ ಬಳಸಿಕೊಂಡರು. ಜನರ ಬೇಕು ಬೇಡಗಳನ್ನು ಅರಿತರು. ನಯಸೇನ, ವಚನಕಾರರು ಈ ಕಾರಣದಿಂದಲೇ ಮಹತ್ವದವರೆನಿಸುತ್ತಾರೆ. ಭಾಷೆಯಲ್ಲಿ ಸಡಿಲತೆ ಉಂಟಾಗಿದ್ದರೂ ಪಂಪನ ಕಾಲದ ಚಂಪೂ ಪರಂಪರೆ ಸಂಪೂರ್ಣವಾಗಿ ಸ್ಥಗಿತಗೊಳ್ಳಲಿಲ್ಲ. ಹಾಗೆಯೇ ಜೈನಧರ್ಮದೊಂದಿಗೆ ವೀರಶೈವಧರ್ಮವೂ ಅಂದು ನೆಲೆಗೊಂಡಿತು. ಅನೇಕ ಜೈನ ಕವಿಗಳು ತಮ್ಮ ಧರ್ಮವನ್ನು ಉಳಿಸಿಕೊಳ್ಳುವ ಪ್ರಚಂಡ ಪ್ರಯತ್ನವನ್ನು ಕೃತಿಗಳಲ್ಲಿ ಮಾಡುತ್ತ ಬಂದರು. ಇಂಥ ಸಂಘರ್ಷದಲ್ಲಿ ಕಾಣಿಸಿಕೊಂಡ ಜೈನ ಕವಿಗಳಲ್ಲಿ ಆಂಡಯ್ಯ ಕೂಡ ಒಬ್ಬ.

ಕೆಲವು ವಿಶಿಷ್ಟ ಕಾರಣಗಳಿಂದಾಗಿ ಒಡೆದು ಕಾಣುವ ಮಹತ್ವದ ಹೆಸರಾಗಿದೆ ಆಂಡಯ್ಯನದು. ರಮ್ಯ ಮನೋಹರವಾದ ಕಥನ ಕಲ್ಪನೆ, ವರ್ಣನಾ ಕೌಶಲ್ಯ, ಲಾಲಿತ್ಯ ಪೂರ್ಣವಾದ ಶೈಲಿ, ಕನ್ನಡ ನಾಡು - ನುಡಿಗಳ ಬಗೆಗೆ ಅವನಿಗಿದ್ದ ಕಳಕಳಿ, ಭಾಷಾ ಧೋರಣೆಯಲ್ಲಿ ವ್ಯಕ್ತವಾದ ಆತನ ಕ್ರಾಂತಿಕಾರಿ ಪ್ರವೃತ್ತಿಗಳು ಅಗಾಧವಾದವು. ಆಂಡಯ್ಯ ಕನ್ನಡದ ಮಹಾಕವಿ ಏನೂ ಅಲ್ಲ. ಆದರೆ ಆತನ ಕೃತಿಗೆ ಐತಿಹಾಸಿಕ ಮಹತ್ವವಿದೆ. ಹಾಗೆಯೇ ಕೆಲವು ಇತಿ ಮಿತಿಗಳೂ ಇವೆ.

ಕಬ್ಬಿಗರ ಕಾವ ಕಾವ್ಯವು ತನ್ನ ಸಮಕಾಲೀನ ಯುಗಧರ್ಮಕ್ಕೆ ಪಡಿನುಡಿಯುವ ಕವಿಯ ಮನಸ್ಸನ್ನು ಪ್ರತಿನಿಧಿಸುತ್ತದೆ. ಕನ್ನಡ ಸಾಹಿತ್ಯ ಸ್ಪಷ್ಟ ರೂಪ ಪಡೆಯುವ ಮೊದಲೇ ವಿವಿಧ ರಾಜಮನೆತನಗಳ ಆಶ್ರಯದಿಂದಾಗಿ ಜೈನಧರ್ಮ ೧೦ ನೇ ಶತಮಾನದ ಉತ್ತರಾರ್ಧದವರೆಗೂ ಪ್ರಮುಖ ಧರ್ಮವಾಗಿ ಉನ್ನತ ಸ್ಥಿತಿಯಲ್ಲಿತ್ತು. ಆದರೆ ೧೨ ನೇ ಶತಮಾನದ ಹೊತ್ತಿಗೆ ಕರ್ನಾಟಕದ ಪ್ರಾಚೀನ ಧರ್ಮಗಳಲ್ಲೊಂದಾದ ವೀರಶೈವ ಧರ್ಮ ಜೈನಧರ್ಮಕ್ಕೆ ವಿರೋಧಿಯಾಗಿ ಬೆಳೆಯಿತು. ಜೊತೆಗೆ ಬೌದ್ಧ ಧರ್ಮವೂ, ವೈಷ್ಣವ ಧರ್ಮಗಳೂ ಅಸ್ತಿತ್ವದಲ್ಲಿದ್ದವು. ೧೨ ನೇ ಶತಮಾನದ ಹೊತ್ತಿಗೆ ಜೈನಧರ್ಮ ಪರಮತಗಳ ಹಾವಳಿಯನ್ನು ಎದುರಿಸಿ ಜೈನ ಧರ್ಮವನ್ನು ಸಮರ್ಥಿಸಿಕೊಳ್ಳುವ ಅಗತ್ಯತೆ ಉಂಟಾಯಿತು. ನಾಗಚಂದ್ರನ ಕಾವ್ಯದಲ್ಲಿ ಕಾಣಬರುವ ಜೈನಧರ್ಮದ ಬಗ್ಗೆ ಇರುವ ಪಕ್ಷಪಾತ, ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ, ವೃತ್ತವಿಲಾಸನ ಧರ್ಮ ಪರೀಕ್ಷೆ,

ಇವುಗಳಲ್ಲಿ ಕಂಡುಬರುವ ಪರಮತ ವಿಡಂಬನೆ ಇದಕ್ಕೆ ಸಾಕ್ಷಿ. ಅವರ ಭಾಷೆ, ವಸ್ತು, ವಿಧಾನಗಳಲ್ಲಿ ಮತೋದ್ಧಾರಕ್ಕಾಗಿ ನಡೆಸಿದ ಹೋರಾಟ ಕಂಡುಬರುವುದಾದರೂ ಅವರು ತಮ್ಮ ಕಳೆದುಹೋದ ವೈಭವವನ್ನು, ಸಾಮಾನ್ಯರ ಕಳಕಳಿಯನ್ನು, ಆತ್ಮೀಯತೆಯನ್ನು ಪಡೆಯುವಲ್ಲಿ ವಿಫಲವಾದದ್ದೇ. ವೀರಶೈವ ಧರ್ಮ ಜನಪ್ರಿಯತೆಯನ್ನು ಪಡೆಯಿತು. ೧೧ ನೇ ಶತಮಾನದ ಆರಂಭದಿಂದ ೧೩ ನೇ ಶತಮಾನದ ಆರಂಭದವರೆಗೆ ಹಲವಾರು ತೊಂದರೆಗಳನ್ನು ಎದುರಿಸಿದ ಜೈನಧರ್ಮ ತಾಳ್ಮೆ, ಉಪಾಯದಿಂದ ವೀರಶೈವ ಧರ್ಮವನ್ನು ಎದುರಿಸಬೇಕಾದ ಸಂದರ್ಭದಲ್ಲಿಯೇ ಆಂಡಯ್ಯನ ವ್ಯಕ್ತಿತ್ವ ರೂಪಗೊಂಡುದುದು.

ಕಬ್ಬಿಗರ ಕಾವ ವು ಆಂಡಯ್ಯನು ಅಚ್ಚಗನ್ನಡದ ಮೇಲೆ ಇರಿಸಿಕೊಂಡ ಅಚಲವಾದ ಶ್ರದ್ಧೆ, ನಿಷ್ಠೆ, ಅಭಿಮಾನಗಳ ಜೀವಂತ ಕುರುಹಾಗಿ ಮೂಡಿಬಂದಿದೆ. ಅಚ್ಚಗನ್ನಡದಲ್ಲಿ ಕಾವ್ಯ ರಚಿಸಿದ ಆಂಡಯ್ಯನ ಉದ್ದೇಶ ಸಂಸ್ಕೃತದ ಬಗೆಗೆ ಅಸಹನೆ ಪ್ರದರ್ಶಿಸುವುದಲ್ಲ. ಇತರ ಕವಿಗಳಲ್ಲಿ ಕೆಲವು ಪದ್ಯಗಳು ಮಾತ್ರ ಅಚ್ಚಕನ್ನಡದಲ್ಲಿದ್ದು, ಆ ಭಾಷೆ ಸಮಗ್ರ ಕಾವ್ಯ ನಿರ್ಮಾಣಕ್ಕಾಗಿ ದುಡಿಯಲಾರದೆ ಎಂಬ ಕುತೂಹಲ ಮತ್ತು ಸಮಗ್ರ ಕಾವ್ಯ ನಿರ್ಮಾಣಕ್ಕೆ ಬೇಕಾಗುವ ಕನ್ನಡ ಭಾಷೆಯ ಧಾರಣ ಶಕ್ತಿಯನ್ನು ಶಂಕಿಸಿದ ಪಂಡಿತ ಕವಿಗಳ ಸಂದೇಹ ನಿವಾರಣೆ ಆಂಡಯ್ಯನ ಕಾವ್ಯಕ್ಕೆ ಪ್ರೇರಣೆಯನ್ನೊದಗಿಸಿದೆ.

ಆಂಡಯ್ಯ ಅಚ್ಚಗನ್ನಡದ ವಿವರಣೆಯನ್ನು ಕೊಟ್ಟಿಲ್ಲ. ಅಚ್ಚಗನ್ನಡದ ಬಿಗಿವೊಂದಿದ ಕಾವ್ಯರಚನೆಗೆ ತೊಡಗಿದ್ದರೂ ಛಂದಸ್ಸಿನ ವಿಷಯದಲ್ಲಿ ಸಂಸ್ಕೃತವನ್ನೇ ಅನುಸರಿಸಿದ್ದಾನೆ. ಅದುವರೆಗೂ ಪರಂಪರೆಯಾಗಿ ಬಂದ ಚಂಪೂವಿನ ರೀತಿ, ರೂಪದಲ್ಲಿಯೇ ಅಚ್ಚಗನ್ನಡ ಭಾಷೆಗೆ ಸಂಸ್ಕೃತ ವೃತ್ತಗಳನ್ನು ಬಳಸಿಕೊಂಡು ಕಾವ್ಯ ರಚಿಸುವ ಶಕ್ತಿ ಇರುವುದನ್ನು ಸಂಸ್ಕೃತ ಪ್ರಿಯರಾದ ಚಂಪೂ ಕವಿಗಳಿಗೆ, ಚಂಪೂ ಪ್ರಿಯರಾದ ಕನ್ನಡ ಕವಿಗಳಿಗೆ ತೋರಿಸುವ ಉದ್ದೇಶ ಎದ್ದು ಕಾಣುತ್ತದೆ. ಪದಪ್ರಯೋಗವೊಂದನ್ನು ಬಿಟ್ಟು ಕಾವ್ಯದ ಉಳಿದೆಲ್ಲ ವಿಷಯಕ್ಕೆ ಸಂಸ್ಕೃತವನ್ನೇ ಅವಲಂಬಿಸಿದ್ದಾನೆ.

ಕನ್ನಡ ಭಾಷೆಯ ಶಬ್ದಕೋಶದ ದೇಶ್ಯ ಒಟ್ಟಾರೆ ವಿಂಗಡಣೆಯಲ್ಲಿ ಸಮಸಂಸ್ಕೃತ, ತತ್ಸಮ, ತದ್ಭವ, ದೇಶ್ಯ ಪ್ರಭೇದಗಳು ಕಂಡುಬರುತ್ತದೆ. ಆಂಡಯ್ಯನ ಕಾವ್ಯದಲ್ಲಿ ಹೇರಳವಾಗಿ ದೇಶ್ಯ, ತದ್ಭವ, ತತ್ಸಮ, ಸಮಸಂಸ್ಕೃತಗಳು ಕಂಡುಬರುತ್ತವೆ.

ಆಂಡಯ್ಯನ ಅಚ್ಚಗನ್ನಡ ಪ್ರಜ್ಞೆಯಲ್ಲಿ ಎದ್ದು ಕಾಣುವ ಅಂಶಗಳೆಂದರೆ.

೧. ಸಂಸ್ಕೃತವನ್ನು ಬೆರಸಬಾರದು.

೨. ಅದು ಮಾತನಾಡಿದಂತೆ ಸೊಗಸಾಗಿರಬೇಕು.

೩. ಅಚ್ಚಗನ್ನಡದಿಂದ ಅಂದರೆ ದೇಶ್ಯ ಶಬ್ದಗಳಿಂದ ಬಿಗುವಾಗಿರಬೇಕು.[೩]

ಸಂಸ್ಕೃತವನ್ನು ಬೆರಸದೆ ತತ್ಸಮ, ತದ್ಭವ, ದೇಶ್ಯ, ಶಬ್ದಗಳ ಬಿಗುವು ಎದ್ದು ಕಾಣುವುದು ಆತನ ದೃಷ್ಟಿಯಲ್ಲಿ ಅಚ್ಚಗನ್ನಡದ ಸ್ವರೂಪ, ವಿದೇಶೀಯ ಪದಗಳನ್ನು ಸೌಂದರ್ಯಕ್ಕೆ ಬಾಧೆ ಬರದಂತೆ ತನ್ನ ಸೊಲ್ಲಿಗೆ ಅನುಗುಣವಾಗಿ

ಬೇರೊಂದು ಭಾಷೆಯು ಪರಿವರ್ತಿಸಿಕೊಳ್ಳುವುದೇ ತದ್ಭವ ವಿಧಾನ. ಈ ತದ್ಭವೀಕರಣ ಎರಡು ರೀತಿಯಲ್ಲಿ ನಡೆಯುತ್ತದೆ. ಜನಸಾಮಾನ್ಯರಿಂದ ತಮ್ಮ ಧ್ವನಿ ಹಾಗೂ ಉಚ್ಚಾರಣಾ ರೀತಿಗೆ ಒಗ್ಗುವಂತ ಸಹಜ ತದ್ಭವಗಳೇ ನಿಜವಾದ ಅರ್ಥದಲ್ಲಿ ದೇಸೀಯ ಸೊಗಡನ್ನು ಪಡೆಯಬಲ್ಲವು. ಪಂಡಿತರು, ಕವಿಗಳು, ಸುಸಂಸ್ಕೃತ ವರ್ಗದಿಂದ ಶಬ್ದಭಂಡಾರದ ಬೆಳವಣಿಗೆ ಭಾಷಾ ಮಾರ್ದವತೆಗೆ, ಸಂಪ್ರದಾಯಕ್ಕನುಗುಣವಾಗಿ, ಶಿಕ್ಷಾಸೂತ್ರಕ್ಕನುಗುಣವಾಗಿ ರೂಪಗೊಳ್ಳುವ ತದ್ಭವಗಳು ಕೃತಕ ತದ್ಭವಗಳು.

ಕೇಶಿರಾಜ ತದ್ಭವಗಳನ್ನು ಅಪಭ್ರಂಶ ಎಂದು ಕರೆದಿದ್ದಾನೆ. ಸಂಸ್ಕೃತದಿಂದ ಹೆಚ್ಚು ಕಡಿಮೆ ವಿಕಾರ ಹೊಂದಿ ಪ್ರತ್ಯೇಕತೆಯನ್ನು ಪಡೆದುಕೊಂಡ ಶಬ್ದಗಳು. ತಬ್ದವಗಳೆಲ್ಲ ಅಚ್ಚಗನ್ನಡವೆಂದು ಆಂಡಯ್ಯ ಮಾತ್ರವಲ್ಲ ಆತನ ಸಮಕಾಲೀನ ವಯಾಕರಣಿಗಳೂ ತಿಳಿಸಿದ್ದಾರೆ. ಭಾಷೆಯ ಬದಲಾವಣೆಗೆ ಅನ್ಯಭಾಷೆಯ ಅನುಕರಣವೂ ಮಹತ್ವದ ಕಾರಣವಾಗಿದೆ. ಅಲ್ಲದೆ ಭಾಷೆಯ ಬದಲಾವಣೆಯ ತಂತ್ರ ಅಥವಾ ನಿಯಮಗಳು ಭಾಷಾ ಸ್ವೀಕರಣದ ನಿಯಮಗಳನ್ನೇ ಹೆಚ್ಚಾಗಿ ಅವಲಂಬಿಸಿವೆ. ಆಂಡಯ್ಯನಲ್ಲಿ ಬಂದ ತದ್ಭವಗಳೂ ಇಂಥ ನಿಯಮಗಳಿಗೆ ಹೊಂದಿಕೊಂಡು ಬಂದಿವೆ.

* ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿ ತದ್ಭವಗಳಾಗಿವೆ.

ಅರ್ಘ - ಅಗ್ಗ ಗೋಷ್ಠಿ - ಗೊಟ್ಟಿ

ಖಡ್ಗ - ಕಡುಗ ನಿರ್ಭರ - ನಿಬ್ಬರ

ಅಚ್ಛ - ಅಚ್ಚ ಸ್ಥಿರ - ತಿರ

* ಶ,ಷ ಗಳು ತದ್ಭವದ ಕಾಲಕ್ಕೆ ಅದರ ಹತ್ತಿರದ ವರ್ಣ ಸ ಕಾರವಾಗಿ ಮಾರ್ಪಡುತ್ತದೆ

ಶ > ಸ ಷ > ಸ

ಅಶೋಕ - ಅಸೋಕ ಘೋಷ - ಗೋಸ

ಕೇಶ - ಕೇಸ ದೋಷ - ದೋಸ

ಪಾಶ - ಪಾಸ ಭಾಷಣ - ಬಾಸಣ

* ದ್ವಿತ್ವಾಕ್ಷರಗಳ ಮಧ್ಯದಲ್ಲಿ ವಿಶೇಷವಾಗಿ ಅ, ಇ, ಉ ಸ್ವರಗಳನ್ನು ಸೇರಿಸಿ ವ್ಯಂಜನಗಳನ್ನು ಬಿಡಿಸಿ ಹೇಳುವ ಸ್ವರಾಭಿವ್ಯಕ್ತಿ ವಿಧಾನ.

ಇಂದ್ರ ಇಂದಿರ

ವ್ಯಾಧ ಬಿಯದ

ಖಡ್ಗ ಕಡುಗ

ಶ್ರೀ ಸಿರಿ

* ವಿಜಾತಿಯ ಸಂಯುಕ್ತಾಕ್ಷರಗಳು ಸಜಾತಿಯ ಸಂಯುಕ್ತಾಕ್ಷರಗಳಾಗುತ್ತವೆ. (ಸಮರೂಪಧಾರಣೆ)

ಅಕ್ಷರ - ಅಕ್ಕರ

ದರ್ಪ - ದಪ್ಪ

ಭಗ್ನ - ಬನ್ನ

ಆಶ್ಚರ್ಯ - ಅಚ್ಚರಿ

ಬ್ರಹ್ಮ - ಬೊಮ್ಮ

ದುಷ್ಟ - ದುಟ್ಟ

* ಅಘೋಷ ಧ್ವನಿಗಳು ಘೋಷ ಧ್ವನಿಗಳಾಗುವುದು.

ಕ > ಗ   ಟ > ಡ   ತ > ದ

ಆಕಾಶ - ಆಗಸ, ಅಟವಿ - ಅಡವಿ, ಜಾತಕ - ಜಾದಗೆ

* ಪರಿಹಾರ ದೀರ್ಘೀಕರಣ

ಚಮರಿ - ಚಾರಿ

ಮಹಾಕಲಾ - ಮಾಕಾಲ

* ವಿವರಣಾತ್ಮಕ ಸ್ವೀಕರಣ

ಗಾಳಿವಟ್ಟೆಯೊಳ್ ನಡೆವನ್ - ಸೂರ್ಯ

ಸಗ್ಗದವರ್ - ದೇವತೆಗಳು

ಕಡಲೊಳ್ ಪಟ್ಟಂ - ವಿಷ್ಣು

* ಪ್ರಾಕೃತದಿಂದ ನೇರವಾಗಿ ಬಂದ ತದ್ಭವಗಳು

ಸಂಸ್ಕೃತ	ಪ್ರಾಕೃತ	ಕನ್ನಡ (ತದ್ಭವ)
ಅರ್ಹಂತ	ಅರುಹಂತ	ಅರುಹಂತ
ಆರ್ಯ	ಅಜ್ಜ	ಅಜ್ಜ

ಈ ರೀತಿಯಾಗಿ ಆಂಡಯ್ಯನು ಸಂಸ್ಕೃತದಿಂದ ವಿಕಾರಗೊಂಡು ಮತ್ತು ಪ್ರಾಕೃತದ ಮೂಲದಿಂದ ಬಂದು ಭಾಷಾ ಸಂಸ್ಕಾರಕ್ಕೆ ಒಗ್ಗಿ ಹೋದ ತದ್ಭವಗಳನ್ನು ಹದವರಿತು ಬಳಸಿಕೊಂಡು ಪ್ರತಿಜ್ಞೆ ಪೂರೈಸಿದ್ದಾನೆ.[೪]

ಕವಿಯ ಅಪೂರ್ವ ಪ್ರಯೋಗ ಒಂದು ಪರಂಪರೆಯಾಗಿ ಹೋಗದಿರುವುದು ಆ ಕವಿಯ ಸೋಲಾಗಿರದೆ ಒಂದರ್ಥದಲ್ಲಿ ಅದು ಆ ಕಾಲದ ಪರಿಸರದ ಸೋಲೂ ಹೌದು. ಅಚ್ಚಗನ್ನಡವು ಒಂದು ಪರಂಪರೆಯಾಗಿ ಮುಂದಿನ

ಕವಿಗಳ ಮೇಲೆ ಪ್ರಭಾವ ಬೀರದಿರುವುದಕ್ಕೆ ಅದರ ಕ್ಲಿಷ್ಟತೆ ಕಾರಣವಾಗಿರುವಾಗ ಅದು ಕವಿಯ ಸೋಲನ್ನು ಸಂಕೇತಿಸದೆ ಆತನ ವಿಶಿಷ್ಟ ಸಾಮರ್ಥ್ಯವನ್ನು ಸಂಕೇತಿಸುತ್ತದೆ ಎಂದೇ ತಿಳಿಯಬೇಕಾಗುತ್ತದೆ.

ಅಚ್ಚಗನ್ನಡ ಕಾವ್ಯಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೋತಿನ ಅವರ ಸ್ವತಂತ್ರ ಕೃತಿಯನ್ನು ಹೊರತುಪಡಿಸಿದರೆ ವಿಸ್ತೃತವಾದ ಅಧ್ಯಯನ ಕೃತಿಗಳು ಬಂದಿಲ್ಲ. ಹಾಗೆ ನೋಡಿದರೆ ಕೋತಿನ ಅವರ ಕೃತಿಯೂ ಕೂಡ ಪೂರ್ಣ ಪ್ರಮಾಣದಲ್ಲಿ ಅಚ್ಚಗನ್ನಡದ ಕಾವ್ಯಗಳ ಅಧ್ಯಯನಕ್ಕೆ ಸಂಬಂಧಿಸಿದ್ದಲ್ಲ. ಅದು ಆಂಡಯ್ಯನ ಕಾವ್ಯವೊಂದನ್ನಷ್ಟೇ ಕುರಿತ ಅಧ್ಯಯನವಾಗಿದೆ.[೧]

೨. ಡಾ. ರಾಮೇಗೌಡರು 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎನ್ನುವ ಪಿಎಚ್.ಡಿ ನಿಬಂಧವನ್ನು (೧೯೯೦) ಬರೆದಿದ್ದಾರೆ.[೮] ಇದರ ನಾಲ್ಕನೆಯ ಅಧ್ಯಾಯದಲ್ಲಿ ಪರೋಕ್ಷವಾಗಿ ಚಾರಿತ್ರಿಕ ಧ್ವನಿಯನ್ನು ಬಿಂಬಿಸುವ ಸಾಹಿತ್ಯ ಕೃತಿಗಳ ಚರ್ಚೆಯನ್ನು ನಡೆಸಿದ್ದಾರೆ. ಅದರಲ್ಲಿ ಪಂಪನ ವಿಕ್ರಮಾರ್ಜುನ ವಿಜಯ, ನಮಗೆ ದೊರಕದಿರುವ ಪೊನ್ನನ ಭುವನೈಕ್ಯರಾಮಾಭ್ಯುದಯ. ರನ್ನನ ಸಾಹಸಭೀಮ ವಿಜಯ, ಆಂಡಯ್ಯನ ಕಬ್ಬಿಗರ ಕಾವ ಮೊದಲಾದ ಕಾವ್ಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಪುರಾಣದ ವ್ಯಕ್ತಿಯೊಂದಿಗೆ ತಮ್ಮ ಆಶ್ರಯದಾತನನ್ನು ಸಮೀಕರಿಸಿ ಸಮಕಾಲೀನ ರಾಜಕೀಯ ಚಿತ್ರಣ ನೀಡುವ ಪರೋಕ್ಷ ಪ್ರಯತ್ನ ನಡೆದಿರುವುದನ್ನು ಅವರು ಈ ಮೂಲಕ ಸ್ಪಷ್ಟಪಡಿಸುತ್ತಾರೆ. ಐದನೆಯ ಅಧ್ಯಾಯದಲ್ಲಿ ನೇರವಾಗಿ ಐತಿಹಾಸಿಕ ವಿಚಾರಗಳನ್ನೇ ಪ್ರಸ್ತಾಪಿಸುವ ಕಾವ್ಯ ಕೃತಿಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅದರಲ್ಲಿ ರಾಮನಾಥ ಚರಿತೆ, ನಿಂಬಸಾಮಂತ ಚರಿತೆ, ಇಮ್ಮಡಿ ಭೂಪಾಲನ ಸಾಂಗತ್ಯ, ಸಿರುಮರಣನಾಯಕನ ಸಾಂಗತ್ಯ, ಕಂಠೀರವ ನರಸರಾಜ ವಿಜಯ, ಚಿಕ್ಕದೇವರಾಜ ವಿಜಯ ಮತ್ತು ಚಿಕ್ಕದೇವರಾಜ ವಂಶಾವಳಿ, ಕೆಳದಿನೃಪ ವಿಜಯ ಇತರ ಐತಿಹಾಸಿಕ ಕಾವ್ಯಗಳ ಬಗ್ಗೆ ಚರ್ಚಿಸಿದ್ದಾರೆ.

ಹಾಗೆಯೇ ಕೊನೆಯ ಆರು, ಏಳು, ಎಂಟನೆಯ ಅಧ್ಯಾಯದಲ್ಲಿ ಕ್ರಮವಾಗಿ ಚಾರಿತ್ರಿಕ ಆದ್ಯಂತಗಳು, ಇತಿಹಾಸದ ಇಣುಕುಗಳಿದ್ದು ಚಾರಿತ್ರಿಕ ಧ್ವನಿಯನ್ನು ಬಿಂಬಿಸುವ ಆಂಡಯ್ಯನ ಕಬ್ಬಿಗರ ಕಾವದ ವಿಶ್ಲೇಷಣೆಯಿದೆ. ಸಮಕಾಲೀನ ಚಾರಿತ್ರಿಕ ವಿಷಯವನ್ನು ಪುರಾಣವಸ್ತುವಿನೊಡನೆ ಸಮೀಕರಿಸುವ ಕಾವ್ಯಪರಂಪರೆಯ ಮುಂದಿನ ಉದಾಹರಣೆಯಾಗಿ ಆಂಡಯ್ಯನ ಕಬ್ಬಿಗರ ಕಾವ ಎಂಬುದಾಗಿ ಅವರು ಚರ್ಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ, ತಮ್ಮ ಕಾವ್ಯಗಳಲ್ಲಿ ಆಶ್ರಯದಾತರನ್ನು ಕಥಾನಾಯಕರನ್ನಾಗಿ ಪರಿಗಣಿಸುವ ಪಂಪ, ಪೊನ್ನ, ರನ್ನರ ತರುವಾಯ ಅಂತಹ ಪ್ರಯತ್ನ ಇಳಿಮುಖವಾಗುತ್ತದೆ. ಆದರೆ ೧೩ ನೇ ಶತಮಾನದಲ್ಲಿ ಬರುವ ಕಬ್ಬಿಗರ ಕಾವ ಈ ಪರಂಪರೆಯ ಕೊನೆಯ ಕಾವ್ಯವಾಗಿದ್ದು, ಹಿಂದಿನ ಕಾವ್ಯಗಳಿಗಿಂತ ಭಿನ್ನವಾಗಿದೆ. ಆ ಕಾರಣಕ್ಕಾಗಿಯೇ ಅದು ಮಹತ್ವವೂ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಪುರಾಣ ಕಥಾನಾಯಕನೊಡನೆ ಆಶ್ರಯದಾತ ದೊರೆಯನ್ನು ಸೇರಿಸಿ ಹೇಳುವುದು ಮಾತ್ರವಲ್ಲದೆ, ಇಡೀ ಕಥಾವಸ್ತುವನ್ನು ಐತಿಹಾಸಿಕ ಧ್ವನಿಯಾಗಿ ಪರಿವರ್ತಿಸುವುದರಲ್ಲಿ ಇದರ ಪ್ರಾಮುಖ್ಯತೆ ಅಡಗಿದೆ. ಇದು ಮುಂದಿನ ಐತಿಹಾಸಿಕ ಕಾವ್ಯಗಳಿಗೆ ಪೂರ್ವಸೂಚನೆಯೂ ಆಗಿರುವುದನ್ನು ಕಾಣಬಹುದು. ಎಂದು ಅಭಿಪ್ರಾಯಪಡುತ್ತಾರೆ. ಪುರಾಣ ಪ್ರಸಿದ್ಧ ಕಾಮವಿಜಯದ ಜೈನ ಸಂಪ್ರದಾಯದ ಕಥೆ ಇದರ ವಸ್ತು. ಇದರಲ್ಲಿ ಸಮಕಾಲೀನ ರಾಜನಾದ ಹಾನಗಲ್ಲಿನ ಕದಂಬ ಕಾಮದೇವನ ವಿಜಯದ ಕಥೆಯನ್ನು ಸಮಾವೇಶಗೊಳಿಸಿರುವುದು ಇದರ ಚಾರಿತ್ರಿಕ ಧ್ವನಿಯಾಗಿದೆ ಎಂದು ವಿವರಿಸಿದ್ದಾರೆ.[೬]

ಪಂಪ-ರನ್ನರಿಗಿಂತ ಭಿನ್ನವಾದ ಕೆಲ ಮಾರ್ಪಾಡುಗಳು ಆಂಡಯ್ಯನಲ್ಲಿ ಕಂಡುಬರುತ್ತವೆ. ಈ ಬದಲಾವಣೆಗಳಿಗೆ ಅವನು ಬರೆಯಹೊರಟಿರುವ ಚರಿತ್ರಾಂಶಗಳೇ ಕಾರಣವಿರಬಹುದೆಂದು ಅಭಿಪ್ರಾಯಪಡುತ್ತಾರೆ. ಪಂಪ-ರನ್ನರು ನೇರವಾಗಿ ಆಶ್ರಯದಾತರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಇಡೀ ಕಥೆಯೊಡನೆ ಅದನ್ನು ಚಾಚೂ ತಪ್ಪದೆ ನಡೆಸಿಕೊಂಡಿರುವಂತೆ ಅವರ ಕಾವ್ಯ ತೋರದು. ಆದರೆ ಆಂಡಯ್ಯ ನೇರವಾಗಿ ವಿವರಗಳನ್ನು ಕೊಡುವುದಿಲ್ಲ. ಬದಲಾಗಿ ಧ್ವನಿತವಾಗಿಸುವ ವಿಚಾರವನ್ನು ಸಮಗ್ರ ಕಥೆಯೊಡನೆ ತುಂಬುತ್ತಾನೆ. ಪುರಾಣಪ್ರಸಿದ್ಧ ಕಾಮನ ಕಥೆಯನ್ನು ಹೆಣೆಯುತ್ತಾ ಹೋಗುವುದು ಮುಖ್ಯವಾಗಿದೆ. ಹಾಗಾಗಿ ಆಂಡಯ್ಯನ ಕಾವ್ಯ 'ರೂಪಕದ ಕಥೆ' ಯಾಗಿದ್ದು ಇದು ಕೇವಲ ಮದನ ವಿಜಯದ ಕಥೆ ಮಾತ್ರವಲ್ಲ. ಕಾಮದೇವನ ವಿಜಯದ ಕಥೆಯೂ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಂಡಯ್ಯನ ಕಬ್ಬಿಗರ ಕಾವಕ್ಕೆ ರುದ್ರಭಟ್ಟನ ಜಗನ್ನಾಥ ವಿಜಯದ ಪ್ರೇರಣೆಯೂ ಇದೆ. ಕಾವ್ಯದ ನಾಂದೀ ಪದ್ಯದಲ್ಲಿ ಬರುವ ಅರಿಕಾಮಧ್ವಂಸಿ ಮತ್ತು ಯುದ್ಧರಂಗ ತ್ರಿಣೇತ್ರ ಮಾತುಗಳು ಇಲ್ಲಿ ಮುಖ್ಯವಾಗಿವೆ. ಇಲ್ಲಿಯ ಅರಿಕಾಮ ವೀರಬಲ್ಲಾಳನಿಗೆ ಸಮನಾಗಿ ಮೆರೆದ ಆಂಡಯ್ಯನ ಪ್ರೀತಿ ಪಾತ್ರ ದೊರೆ ಕದಂಬರ ಕಾಮನೇ ಆಗಿದ್ದಾನೆ. 'ಯುದ್ಧರಂಗ ತ್ರಿಣೇತ್ರ' ರುದ್ರಭಟ್ಟನ ಆಶ್ರಯದಾತನೂ ಕಾಮದೇವನ ಎದುರಾಳಿಯೂ ಆದ ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನೇ ಆಗಿದ್ದಾನೆ. ಕಾಮ ಸೋತಾಗ ರುದ್ರಭಟ್ಟನು ಬಲ್ಲಾಳನ ವಿಜಯವನ್ನು ಅರಿಕಾಮಧ್ವಂಸಿ ಎಂದು ಸ್ತುತಿಸಿರುವುದನ್ನು, ಕಾಮನ ಗೆಲವು ಮುಂದೊಮ್ಮೆ ದೊರೆತ ಉಬ್ಬಿನಲ್ಲಿ ರುದ್ರಭಟ್ಟನಿಗೆ ಉತ್ತರವೆಂಬಂತೆ ಆಂಡಯ್ಯನು ಕಾಮದೇವನನ್ನು ಯುದ್ಧರಂಗ ತ್ರಿಣೇತ್ರ ಎಂದು ಸ್ತುತಿಸಿ ತನ್ನ ಕಾವ್ಯವನ್ನು ಬರೆದನೆಂಬಂತೆ ಭಾಸವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ಆದರೆ ಆಂಡಯ್ಯನು ರಾಜಾಶ್ರಯದಲ್ಲಿದ್ದನೇ ಎಂಬುದರ ಬಗ್ಗೆ ವಿದ್ವಾಂಸರು ಅನುಮಾನವನ್ನು ಅವರು ಪ್ರಸ್ತಾಪಿಸಿದ್ದಾರೆ. ಕಾವ್ಯದಲ್ಲಿ ಬರುವ ವಿಶೇಷಣಗಳು, ಶ್ಲೇಷಾರ್ಥಗಳು ಮತ್ತು ಆಗಿನ ಸ್ಥಿತಿಗತಿಗಳನ್ನು ಅರಿತರೆ ಕವಿ ಆಂಡಯ್ಯ ಕಾಮದೇವನ ಆಪ್ತನು ಇಲ್ಲವೇ ಆಶ್ರಿತನೂ ಆಗಿರಬಹುದೆಂದು ಅಭಿಪ್ರಾಯಪಡುತ್ತಾರೆ.

ಕಬ್ಬಿಗರ ಕಾವ ಅಂದಿನ ಐತಿಹಾಸಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಕೃತಿಯ ಕಾವನಗೆಲ್ಲ ಎಂಬ ಹೆಸರೇ ಐತಿಹಾಸಿಕ ಧ್ವನಿಯನ್ನು ಹೇಳುತ್ತದೆ. ವಾಸ್ತವವಾಗಿ ಕದಂಬ ಕಾಮದೇವನ ಗೆಲುವೆ ಇದರ ಅರ್ಥವೆಂದು ಅಭಿಪ್ರಾಯಪಡುತ್ತಾರೆ. ಕಾವ್ಯದ ಆರಂಭದ ಪದ್ಯದಲ್ಲಿ ಪುರಾಣ ಪ್ರಸಿದ್ಧ ಕಾಮನೊಡನೆ ತನ್ನ ದೊರೆ ಕಾಮದೇವನನ್ನು ಹೋಲಿಸಿ ಸ್ತುತಿಸಿದ್ದಾನೆ. ಆಂಡಯ್ಯ ಬಳಸಿರುವ ಜಾಣ್ನುಡಿ ಪದಕ್ಕೆ ರಾಜಕೀಯ ಶ್ಲೇಷೆ ಮತ್ತು ತಾತ್ವಿಕ ಕಲ್ಪನೆಯ ಅರ್ಥಗಳನ್ನು ಆರೋಪಿಸಬಹುದಾಗಿದೆ. ಕಾವ್ಯವನ್ನು ಕಾಪಾಡಿರುವ ಗುಣಗಳು ಇವು. ಕಾಮ ಮತ್ತು ಕದಂಬ ಕಾಮರ ಅಬೇಧ ಕಲ್ಪನೆ ರಾಜಕೀಯ ಶ್ಲೇಷೆಗೆ ಸಂಬಂಧಿಸಿದರೆ ಅರ್ಧನಾರೀಶ್ವರ ಕಲ್ಪನೆಯು ತಾತ್ವಿಕ ಕಲ್ಪನೆಗೆ ಸಂಬಂಧಿಸಿದುದಾಗಿದೆ ಎಂದು ಅಭಿಪ್ರಾಯಪಡುತ್ತಾರೆ.[೬]

ಕಾವ್ಯದಲ್ಲಿ ಬರುವ ಶ್ಲೇಷೆಗಳ ಮೂಲಕ ಕೆಲವೊಂದು ಐತಿಹಾಸಿಕ ಸಂಗತಿಗಳನ್ನು ಚರ್ಚಿಸಿದ್ದಾರೆ. ಕದಂಬ ಕಾಮದೇಮನನ್ನು, ಅವನ ರಾಜಧಾನಿ ಹಾನಗಲ್ಲಿನ ಸೌಂದರ್ಯವನ್ನು ಕುರಿತಂತೆ ಶ್ಲೇಷಾಲಂಕಾರಗಳ ಉದಾಹರಣೆ

ನೀಡಿದ್ದಾರೆ. ಇದರಿಂದ ಆಂಡಯ್ಯನ ಕಾವ್ಯದ ವಸ್ತು ಕಾಮದೇವನ ವೀರ ಜೀವನವನ್ನು ವಿವರಿಸುವುದೆಂದು ಸ್ಪಷ್ಟವಾಗುತ್ತದೆ. ಕಾವ್ಯದಲ್ಲಿ ಕವಿಯೇ ಹೇಳಿರುವ ಹಲವಾರು ವಿಷಯಗಳಿಂದ ಐತಿಹಾಸಿಕ ವಿಷಯದ ಬಗೆಗಿನ ಕವಿಯ ಧೋರಣೆಯನ್ನು ರೂಪಿಸಿಕೊಳ್ಳಬಹುದಾಗಿದೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ.[೮]

ಇತಿಹಾಸದಲ್ಲಿ ಉಚ್ಚಂಗಿ ಕಾಮದೇವ ಪಾಂಡ್ಯ ಕಾಮದೇವರ ಉಲ್ಲೇಖಗಳು ಬರುತ್ತವೆ. ಆದರೆ ಇವರು ಆಂಡಯ್ಯನ ಆಶ್ರಯದಾತರಲ್ಲ. ಕದಂಬರ ಕಾಮದೇವನೇ ಆಂಡಯ್ಯನ ಆಶ್ರಯದಾತ ಎಂಬುದನ್ನು ಆಂಡಯ್ಯನ ಸಮಕಾಲೀನ ಕವಿ ಕೃತಿಗಳಲ್ಲಿ ಅವನ ಪದ್ಯಗಳ ಉಲ್ಲೇಖವಿರುವುದನ್ನು, ಹಾಗೆಯೇ ಶಾಸನಗಳ ಆಧಾರದಿಂದಲೂ ಈತನ ಆಳ್ವಿಕೆಯ ಕಾಲವನ್ನು ೧೧೮೦ ರಿಂದ ೧೨೧೭ ಎಂದು ವಿದ್ವಾಂಸ ಮೊರೆಸ್ ಗುರುತಿಸುತ್ತಾರೆ ಎಂಬುದನ್ನು ಉಲ್ಲೇಖಿಸಿದ್ದಾರೆ. ೧೧೯೧ರ ಕಾಮದೇವನ ಶಾಸನದಿಂದ ಕಾಮದೇವನನ್ನು ಕದಂಬ ಚಕ್ರವರ್ತಿ ಎಂದು ಕರೆಯಲಾಗಿರವುದು, ಸೋಮೇಶ್ವರನ ನಂತರ ಮಾಂಡಲೀಕನಾಗಿದ್ದ ಕಾಮದೇವ ಸ್ವತಂತ್ರನಾಗಿ ಹೊಯ್ಸಳ ಧಾಳಿಯನ್ನು ತಪ್ಪಿಸಲು ಹಾನಗಲ್ಲಿನ ಕೋಟೆ ಭದ್ರಪಡಿಸಿರುವ ವಿಷಯ ತಿಳಿದುಬರುತ್ತದೆ. ಈ ಸಂಗತಿಯೇ ಕಬ್ಬಿಗರ ಕಾವ ಕಥನಗೊಂಡಿರುವ ಇತಿಹಾಸದ ಸಂಗತಿಗೆ ಇರುವ ಹಿನ್ನಲೆಯಾಗಿದೆ. ಆಂಡಯ್ಯನ ಅನೇಕ ವಿಷಯಗಳಿಗೆ ಮೊರೆಸ್‌ನ ವಿಚಾರಗಳು ಹೋಲಿಕೆಯಾಗಿವೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. ಅಲ್ಲದೆ ಆ ಕಾಲದಲ್ಲಿ ರಚಿತವಾದ ಕಾಮದೇವನ ಶಾಸನಗಳು ಕಾವ್ಯದ ಚಾರಿತ್ರಿಕ ಸಂಗತಿಗಳನ್ನು ಅರ್ಥಪೂರ್ಣಗೊಳಿಸಲು ನೆರವಾಗಿದೆ ಎಂದೂ ಹೇಳಿದ್ದಾರೆ.[೯]

ಕಬ್ಬಿಗರ ಕಾವದಲ್ಲಿನ ಸಮಕಾಲೀನ ರಾಜಕೀಯ ಧ್ವನಿಗೆ ಸಂಬಂಧಿಸಿದ ವಿಚಾರಗಳನ್ನು ಎರಡು ವಿಧಾನಗಳಲ್ಲಿ ಗುರುತಿಸುತ್ತಾರೆ. ಒಂದನೆಯದು ಕಥಾವಸ್ತುವಿನ ಮುಖ್ಯ ಪ್ರತಿಪಾದನೆಯಲ್ಲಿ ಸೂಚಿತವಾಗಿರುವ ಚಾರಿತ್ರಿಕ ಧ್ವನಿ, ಎರಡನೆಯದು ಉಪಮೆ, ಶ್ಲೇಷೆ, ಮೊದಲಾದವುಗಳಲ್ಲಿ ವ್ಯಕ್ತಗೊಂಡಿರುವ ರಾಜಕೀಯ ವಿವರಗಳು. ಮೊದಲನೆಯದಕ್ಕೆ ಎರಡನೆಯ ವಿವರಗಳು ಪೂರಕವಾಗಿಯೇ ಬಂದಿವೆ. ಸಮಗ್ರ ಕಥಾ ಸನ್ನಿವೇಶದಲ್ಲಿ ಪ್ರತಿಪಾದಿತವಾಗುವ ಇತಿಹಾಸ ಸಂಗತಿಯು ಅತ್ಯಂತ ಪ್ರಮುಖದ್ದು, ಮಹತ್ವದ್ದು ಆಗಿದೆ ಎಂದು ಅಭಿಪ್ರಾಯಪಡುತ್ತಾರೆ.

ಕಾಮನ ಬೆಳ್ಗೊಡೆಯಾದ ಚಂದ್ರನನ್ನು ಶಿವ ಸೆರೆಹಿಡಿದುಕೊಂಡು ಹೋಗುವನು. ಇದರಿಂದ ಕುಪಿತನಾದ ಕಾಮನು ಶಿವನ ಮೇಲೆ ದಾಳಿ ಮಾಡಿ ಅರವೆಣ್ಣಾಗಿಸುವನು. ಪರಿಣಾಮವಾಗಿ ಕಾಮ ತಲೆಮರೆಸಿಕೊಂಡಿರುವಂತೆ ಶಿವ ಶಾಪಕೊಡುವನು. ಹೀಗೆ ತಲೆಮರೆಸಿಕೊಂಡಿದ್ದ ಕಾಮ ಕೆಲಸಮಯದ ಮೇಲೆ ವಿಶಾಪಗೊಂಡು ತನ್ನ ಹೆಂಡತಿ ಮತ್ತು ಪರಿವಾರವನ್ನು ಸೇರುವನು. ಇಲ್ಲಿ ಪ್ರಸ್ತಾಪಿತವಾಗಿರುವ ಪ್ರತಿಯೊಂದು ವಿಷಯಕ್ಕೂ ಕದಂಬ ಕಾಮದೇವ ಮತ್ತು ಇಮ್ಮಡಿ ವೀರಬಲ್ಲಾಳರಿಗೆ ಸಂಬಂಧಿಸಿದಂತೆ ಐತಿಹಾಸಿಕ ಸಂಗತಿಗಳನ್ನು ಆರೋಪಿಸಿದ್ದಾರೆ. ಹಾಗಾಗಿ ಕಾಮ ಮತ್ತು ಶಿವ ಇಲ್ಲಿ ಕಾಮದೇವ. ಹಾಗೂ ವೀರಬಲ್ಲಾಳರಾಗುತ್ತಾರೆ. ಕಾವ್ಯದಲ್ಲಿ ಬರುವ ೧೧೫-೧೧೭ ಮುಂತಾದ ಪದ್ಯಗಳು ಯುದ್ಧದ ಹಿನ್ನಲೆ, ನಡೆದ ಸಂದರ್ಭ ವೀರಬಲ್ಲಾಳ ಗೆದ್ದ ಸಂದರ್ಭವನ್ನು ವಿವರಿಸುತ್ತದೆ ಮುಂದಿನ ೧೨೧ನೆಯ ಪದ್ಯದಲ್ಲಿ ಕಾಮದೇವ ಪುನಃ ಹಾನಗಲ್ಲನ್ನು ಪಡೆದು ವಿಜಯಿಯಾದ ವಿವರವನ್ನು ತಿಳಿಸುತ್ತದೆ

ಯುದ್ಧಕ್ಕಿಂತ ಪೂರ್ವದಲ್ಲಿ ಬರುವ ಸಂಧಿಯ ವಿವರವೂ ಕಾವ್ಯದಲ್ಲಿ ದೊರೆಯುತ್ತದೆ ೧೩೧ನೆಯ ಪದ್ಯ ಇಬ್ಬರ ನಡುವಿನ ಸಂಧಾನ ಕಾರ್ಯದ ನಿದರ್ಶನವಾಗಿದೆ. ಅವರಿಬ್ಬರ ನಡುವೆ ಯುದ್ಧ ಅನಿವಾರ್ಯವಾದ ಸಂದರ್ಭವನ್ನು ೧೪೧ನೆಯ ಪದ್ಯ ವಿವರಿಸುತ್ತದೆ. ಈ ಎಲ್ಲಾ ವಿವರಗಳು ಅತ್ಯಂತ ರಮ್ಯವಾಗಿ, ರೂಪಕವಾಗಿ ಕಾವ್ಯದಲ್ಲಿ ರಚನೆಯಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಕದಂಬರ ಪೂರ್ವಜರು ಹೊಯ್ಸಳರಿಗೆ ಕಳೆದುಕೊಂಡಿದ್ದ ಹಾನಗಲ್ಲನ್ನು ಕದಂಬ ಕಾಮದೇವನು ಮರಳಿ ಪಡೆಯಲು ಮಾಡಿದ ಪ್ರಯತ್ನ, ಹೋರಾಟವೇ ಕಾವ್ಯದಲ್ಲಿ ರೂಪಾಂತರಗೊಂಡಿದೆ ಎಂದು ೧೧೯೬ರ ಯುದ್ಧ ಮತ್ತು ಆಮೇಲಿನ ಪರಿಣಾಮಗಳೇ ಕಾವ್ಯದ ಕೇಂದ್ರಬಿಂದುವಾಗಿವೆ ಎಂದು ವಿವರಿಸುತ್ತಾರೆ.[೧೦]

ಶಿವನು ಕಾಮನಿಗೆ ನೀಡುವ ಶಾಪಕ್ಕೆ ಸಮಕಾಲೀನ ರಾಜಕೀಯ ಪ್ರಸಂಗದ ಪ್ರಭಾವ, ಐತಿಹಾಸಿಕ ಅರ್ಥವಿರುವುದನ್ನು ಕಾಣಬಹುದು. ಈ ಸಂಗತಿಯನ್ನು ಆಧರಿಸಿದ ಶೋಧನೆ ಇತಿಹಾಸದಲ್ಲೂ ನಡೆದಿದೆ ಎಂಬುದನ್ನೂ ವಿವರಿಸಿದ್ದಾರೆ.

ಕಳೆದುಕೊಂಡಿದ್ದ ರಾಜ್ಯವನ್ನು ಕಾಮದೇವ ಮತ್ತೆ ಮರಳಿ ಪಡೆಯುವ ಸೂಚನೆ ಕಾವ್ಯದ ಕೊನೆಯ ಘಟ್ಟದಲ್ಲಿದ್ದು ಇದು ಇತಿಹಾಸ ಮತ್ತು ಕಾವ್ಯದಲ್ಲಿಯ ಎರಡೂ ಅಭಿಪ್ರಾಯಗಳು ಏಕರೂಪವಾಗಿವೆ ಎಂಬುದನ್ನು ಗುರುತಿಸಲು ಸಹಾಯಕವಾಗಿದೆ. ೧೨೦೩ರ ಶಾಸನಗಳು ಕಾಮದೇವ ಹೊಯ್ಸಳರೊಡನೆ ಹೋರಾಡಿ ಕದಂಬ ರಾಜ್ಯದಿಂದ ಅವರು ಕಾಲ್ತೆಗೆಯುವಂತೆ ಮಾಡಿದನೆಂದು ತಿಳಿಸುತ್ತವೆ. ಕಬ್ಬಿಗರ ಕಾವದಲ್ಲಿ ಈ ಎಲ್ಲ ವಿಚಾರಗಳ ಪರೋಕ್ಷ ಪ್ರಸ್ತಾಪ ಅತ್ಯಂತ ಧ್ವನಿಪೂರ್ಣವಾದ ರೀತಿಯಲ್ಲಿ ಅಭಿವ್ಯಕ್ತವಾಗಿದೆ. ಆಂಡಯ್ಯ ತನ್ನ ಕಾವ್ಯದಲ್ಲಿ ಕಥೆಯೊಡನೆ ಅಖಂಡವಾಗಿ ನಿಷ್ಪನ್ನಗೊಳಿಸಲು ಇತಿಹಾಸದ ವಿಷಯದ ಜೊತೆಗೆ ಅದಕ್ಕೆ ಪುಷ್ಟಿಕೊಡುವ ಇತರ ಕೆಲವು ಚಾರಿತ್ರಿಕ ವಿಚಾರಗಳನ್ನು ತಂದಿದ್ದಾನೆ. ಇವು ಕಾವ್ಯದಲ್ಲಿ ರಾಜಕೀಯ ವಾತಾವರಣವನ್ನು ತುಂಬುವ ಪ್ರಯತ್ನವನ್ನು ಮಾಡುತ್ತವೆ ಎಂದು ಅಭಿಪ್ರಾಯಪಡುತ್ತಾರೆ.[೧೧]

ಶಿವನಿಂದ ಶಾಪಮುಕ್ತನಾಗಿ ಕಾಮ ಮರಳಿ ಬರುವ ಸುದ್ದಿ ಕೇಳಿ ಪರಿವಾರದವರು ಸಂತೋಷಪಡುವ ವಿಷಯ ಪದ್ಯ ೨೫೧ರಲ್ಲಿ ಬರುವುದನ್ನು ಐತಿಹಾಸಿಕ ಸಂದರ್ಭದಲ್ಲೂ ವ್ಯಾಖ್ಯಾನಿಸಬಹುದು ಎಂದು ಅಭಿಪ್ರಾಯಪಡುತ್ತಾರೆ. ಕಾಮನು ಶಿವನ ಮೇಲೆ ದಂಡೆತ್ತಿ ಹೋಗುವಾಗ ದಾರಿಯಲ್ಲಿ ಎದುರಾಗುವ ಜೈನ ಯತಿ ವೀರಬಲ್ಲಾಳನಿಗೂ ಗುರವಾ ದ ಮಾಘನಂದಿ ಇರಬೇಕೆಂದು ಗುರುತಿಸಿದ್ದಾರೆ. ಕಾಮದೇವನ ಪರಾಕ್ರಮದ ಚಿತ್ರಣ ಕಾವ್ಯದಲ್ಲಿ ಪದೇ ಪದೇ ವರ್ಣಿತವಾಗಿದೆ ಅವನ ಜಸ, ಬಲ್ಪು, ನನ್ನಿ, ಚಾಗ, ಸೌಂದರ್ಯ, ಪೆಂಪು, ವೀರ ವೈಭವಗಳನ್ನು ಬಣ್ಣಿಸಲಾಗಿದೆ. ಇದಕ್ಕೆ ೩೯, ೪೦ನೆಯ ಪದ್ಯಗಳನ್ನು ಉದಾಹರಣೆಯಾಗಿ ನೋಡಬಹುದು. ಕಾಮದೇವನ ಹಣಿಮಣಿಯದ ಪರಾಕ್ರಮ ಮತ್ತು ಸಾರ್ವಭೌಮತ್ವಗಳನ್ನು ೧೧೪ನೆಯ ಪದ್ಯವು ಸಾರುತ್ತದೆ. ೮೭, ೧೧೨ ರ ಪದ್ಯದಲ್ಲಿ ಬರುವ ವಿವರಣೆಗಳು ವೀರಬಲ್ಲಾಳನ ಮೇಲೆ ಬರುವ ಕಾಮದೇವನ ಜಯಭೇರಿಯನ್ನು ವರ್ಣಿಸುತ್ತವೆ. ಸೊರಬದ ಶಾಸನದಲ್ಲಿ ಚಿತ್ರಿತವಾಗಿರುವ ಕಾಮದೇವನ ವರ್ಣನೆಯ ವಿವರಗಳು ಕಾವ್ಯದ ಕಾಮದೇವನ ವರ್ಣನೆಯನ್ನು ಸಮರ್ಥಿಸುತ್ತವೆ. ಆದ್ದರಿಂದ ಕಾವ್ಯ ಮತ್ತು ಶಾಸನಗಳಲ್ಲಿನ ವರ್ಣನಾ ಸಂದರ್ಭಗಳಲ್ಲಿನ ವಸ್ತು ಒಂದೇ ಆಗಿರುವುದು. ಈ ಉಲ್ಲೇಖಗಳಿಂದ ತಿಳಿದು ಬರುವುದು. ಇದರಿಂದ ಕಾವ್ಯದ ಪದ್ಯಗಳಿಗೆ ಇತಿಹಾಸದ ಆಧಾರವಿರುವುದು

ಸ್ಪಷ್ಟವಾಗುತ್ತದೆ. ಕಾವ್ಯದಲ್ಲಿಯ ಪುರಾಣ ಕಥೆಯನ್ನು ಬಿಡಿಸಿಕೊಂಡರೆ ಸ್ವತಂತ್ರವಾಗಿರುವ ವಿಷಯಗಳಿಗೆ ಸಮಕಾಲೀನ ರಾಜಕೀಯ ಸಂಗತಿಗಳೇ ಕಾರಣವೆಂಬುದನ್ನು ಮರೆಯಲಾಗದು ಎಂಬುದನ್ನೂ ಸ್ಪಷ್ಟಪಡಿಸುತ್ತಾರೆ.

ಕಬ್ಬಿಗರ ಕಾವ ಕದಂಬ ಕಾಮದೇವನ ರಾಜಕೀಯ ಹೋರಾಟದಲ್ಲಿನ ಏಳು ಬೀಳುಗಳ ಕಥೆ. ಕಾಮದೇವನ ಚಾರಿತ್ರಿಕ ವ್ಯಕ್ತಿತ್ವ ಕಾವ್ಯದುದ್ದಕ್ಕೂ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಪಂಪ, ರನ್ನರಂತೆ ಪುರಾಣ ಕಥೆಯನ್ನು ರಾಜಕೀಯ ವಿಚಾರಗಳಿಗೆ ಬಳಸಿಕೊಳ್ಳುವುದು ಮಾತ್ರವಲ್ಲದೆ ಹೊಸ ಸಂದರ್ಭದಲ್ಲಿ ತಾತ್ವಿಕ ಶ್ಲೇಷಾರ್ಥವೊಂದನ್ನು ತರವುದು ಅವನ ಉದ್ದೇಶಗಳಲ್ಲಿ ಒಂದಾಗಿದೆ. ಕಬ್ಬಿಗರ ಕಾವ ರಾಜಕೀಯ ಸಂಘರ್ಷವನ್ನು ಮಾತ್ರವಲ್ಲದೆ ತಾತ್ವಿಕ ಸಂಘರ್ಷವನ್ನು ಚಿತ್ರಿಸುತ್ತದೆ. ಜೊತೆಗೆ ವೀರ, ಶೃಂಗಾರ, ವರ್ಣನಾ ವೈಭವವೂ ಕಾವ್ಯದಲ್ಲಿ ವಿಜೃಂಬಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಬ್ಬಿಗರ ಕಾವ ಕನ್ನಡದ ಮೊಟ್ಟ ಮೊದಲ ಐತಿಹಾಸಿಕ ಕಾವ್ಯವೆನ್ನುವ ದೇ.ಜ.ಗೌ ಅಭಿಪ್ರಾಯವನ್ನು ನಿರಾಕರಿಸುತ್ತಾ ಇತಿಹಾಸದ ವಸ್ತುವನ್ನು ಕುರಿತು ನೇರವಾಗಿ ಬರೆಯ ಹೊರಟ ಕಾವ್ಯವನ್ನು ಮಾತ್ರ ಐತಿಹಾಸಿಕ ಕಾವ್ಯವೆಂದು ಕರೆಯಬಹುದೇ ಹೊರತು ಇತಿಹಾಸಾಂತರ್ಗತ ಪುರಾಣ ವಸ್ತುವಿರುವುದನ್ನಲ್ಲ. ಆದ್ದರಿಂದ ಆಂಡಯ್ಯನ ಕಾವ್ಯ ಪಂಪಾದಿಗಳ ಚಾರಿತ್ರಿಕ ಧ್ವನಿ ಕಾವ್ಯ ಪರಂಪರೆಯಲ್ಲಿಯೇ ಬರುವಂಥದ್ದು. ಮತ್ತು ಆ ಮಾರ್ಗದಲ್ಲಿ ಕೊನೆಯದು ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ.[೧೨]

೩. ಸುಬ್ರಹ್ಮಣ್ಯ ಭಟ್ಟರು, ೧೯೯೮ರಲ್ಲಿ ಮುಳಿಯ ತಿಮ್ಮಪ್ಪಯ ಒಂದು ಅಧ್ಯಯನವೆಂಬ ನಿಬಂಧವನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.[೧೩] ಈ ಅಪ್ರಕಟಿತ ಪ್ರಬಂಧದಿಂದ ಪ್ರಧಾನ ವಿವರಗಳು ಹೀಗಿವೆ:

ಮುಳಿಯರ ಸೊಬಗಿನ ಬಳ್ಳಿ ೧೯೧೭ರಲ್ಲಿ ಮೊದಲ ಮುದ್ರಣ ಕಂಡಿದ್ದು ೧೯೩೧ರಲ್ಲಿ ಎರಡನೆ ಮುದ್ರಣಗೊಂಡಿತು. ಮೊದಲ ಮುದ್ರಣದಲ್ಲಿ ಏಳು ಮುಗುಳುಗಳನ್ನು ಹೊಂದಿದ್ದ ಕಾವ್ಯ. ಎರಡನೆಯ ಮುದ್ರಣದಲ್ಲಿ ಎಂಟು ಮುಗುಳುಗಳನ್ನು ಹೊಂದಿದೆ.

ಕಾವ್ಯದ ಮುನ್ನುಡಿಯ ಮೊದಲ ಭಾಗದಲ್ಲಿ ಮುಳಿಯರು ಅಚ್ಚಗನ್ನಡ ದಾರಿಯನ್ನು ಆಶಿಸುವ ಭಾಷಾ ಪ್ರಯೋಗದ ಬಯಕೆಯನ್ನು ಸಂಸ್ಕೃತ ಪದಗಳ ನಿರಾಕರಣೆಯ ಮೂಲಕ ತಿಮ್ಮಪ್ಪಯ್ಯನವರು ಇಲ್ಲಿ ವಿಶೇಷವಾಗಿ ಪ್ರತಿಪಾದಿಸಿದ್ದಾರೆ. ಮುನ್ನುಡಿಯ ಎರಡನೆಯ ಭಾಗದಲ್ಲಿ ಹೊಸ ಮಾರ್ಗದ ಪ್ರವರ್ತಕ ಆಂಡಯ್ಯ ಪರೋಕ್ಷವಾಗಿ ಕನ್ನಡ ಕವಿಶಾಸ್ತ್ರಕಾರರ ಮೇಲೆ ಪ್ರಭಾವವನ್ನು ಬೀರಿದ್ದಾನೆ ಎನ್ನುವ ವಿಚಾರವನ್ನು ನಿದರ್ಶನಗಳ ಸಹಿತ ವಿವೇಚಿಸಿ ಅಚ್ಚಗನ್ನಡ ಮಾರ್ಗವೊಂದನ್ನು ಪರೋಕ್ಷವಾಗಿಯಾದರೂ ಲಾಕ್ಷಣಿಕ ಒಪ್ಪಿಕೊಂಡಿದ್ದಾರೆ ಎನ್ನುವ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಮೂರನೆಯ ಭಾಗದಲ್ಲಿ ಅಚ್ಚಗನ್ನಡದ ಲಕ್ಷಣದ ಬಗೆಗೆ ವಿಮರ್ಶಿಸಿದ್ದಾರೆ. ಇಲ್ಲಿ ತತ್ಸಮ, ಸಮಸಂಸ್ಕೃತ, ತದ್ಭವಗಳು ಕನ್ನಡ ಭಾಷಾ ಪ್ರಯೋಗದಲ್ಲಿ ಬಳಕೆಯಾಗಬೇಕಾದ ಕ್ರಮವನ್ನು ಇಲ್ಲಿ ತಿಳಿಸಿದ್ದಾರೆ. "ಕರ್ನಾಟಕ ಸಾಹಿತ್ಯದಲ್ಲಿ ಅಚ್ಚಗನ್ನಡಕ್ಕೂ ಒಂದು ಸ್ಥಾನವಿದೆಯೆಂಬುದು ನಿರ್ವಿವಾದವು" ಎನ್ನುತ್ತಾರೆ. ನಾಲ್ಕನೆಯ ಭಾಗದಲ್ಲಿ ತಮ್ಮ ಸೊಬಗಿನ ಬಳ್ಳಿ ಕಾವ್ಯವು ಅಚ್ಚಗನ್ನಡದ ನಿದರ್ಶನವೆಂದು ಹೇಳಿಕೊಂಡಿದ್ದಾರೆ. ಅಚ್ಚಗನ್ನಡ ಕಾವ್ಯ ಮಾರ್ಗವನ್ನು ಕಾಲುದಾರಿ ಎನ್ನುವ ತಿಮ್ಮಪ್ಪಯ್ಯನವರೂ ಈಗಿನವರೂ ಕೂಡ ನಡೆಯಲಾಗದಷ್ಟು ಅಚ್ಚವಾಗಿ

ಆ ದಾರಿ ಉಂಟೆಂಬುದನ್ನು ಕಾಣಿಸಲಿಕ್ಕಾಗಿ ಸೊಬಗಿನ ಬಳ್ಳಿಯನ್ನು ತಾನು ರಚಿಸಿದ್ದಾಗಿ ಹೇಳಿಕೊಂಡಿದ್ದಾರೆ. ಕನ್ನಡ ಭಾಷಾ ಶೈಲಿಯನ್ನು ಕುರಿತ ಅವರ ಅಧ್ಯಯನ ಉಪಯುಕ್ತವಾದುದೆಂದು ಪ್ರಬಂಧಕಾರರು ಅಭಿಪ್ರಾಯಪಡುತ್ತಾರೆ.

ಸಂಸ್ಕೃತ ಕನ್ನಡ ಭಾಷೆಗಳ ಸಂಬಂಧದ ಬಗೆಗೆ ಮುಳಿಯರ ನಿಲುವನ್ನು ಅವರು ಉಲ್ಲೇಖಿಸಿದ್ದಾರೆ.[೧೩] ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ.

''ಈ ನನ್ನ ಪ್ರಯತ್ನವನ್ನು ನೋಡಿ ಕನ್ನಡಿಗರು ಸಂಸ್ಕೃತ ವಿರೋಧಿ ಇವನು ಎಂದು ಭಾವಿಸಬಾರದು. ಸಂಸ್ಕೃತಾಭಿಮಾನವು ಎಲ್ಲರಂತೆ ನನ್ನಲ್ಲಿಯೂ ಇದೆ. ನಮ್ಮ ದೇಶದಲ್ಲಿ ಮಾತ್ರವಲ್ಲ ಇಡಿ ಪ್ರಪಂಚದಲ್ಲಿಯೂ ನಮ್ಮ ಸಂಸ್ಕೃತವು ಎಡೆವಡೆದಿದೆಯೆಂಬುದು ಅಭಿಮಾನಾಸ್ಪದವು. ಅದರಿಂದೊದಗಿದ ಸಂಸ್ಕೃತ ಮಾಸಿ ಹೋಗದುವುದೂ ಇಲ್ಲ. ಮರೆಯತಕ್ಕದೂ ಅಲ್ಲ. ಕನ್ನಡ ಸಾಹಿತ್ಯದಿಂದ ಸಂಸ್ಕೃತವನ್ನು ನೂಕಿ ಬಿಡಬೇಕೆಂಬ ಭಾವನೆಯೂ ನನ್ನದಲ್ಲ. ಹಾಗೆಲ್ಲ ಭಾವಿಸುವುದು ಅಸಾಧ್ಯವಷ್ಟೇ ಅಲ್ಲ ಅದೊಂದು ಪಾಪವೆಂದು ನನ್ನೆಣಿಕೆ. ಅದರಿಂದಲೇ ಈ ಮುನ್ನುಡಿಯನ್ನು ಕರ್ನಾಟಕದಲ್ಲಿ ಬರೆದಿರುವುದು. ಆದರೆ ಎಲ್ಲೆಲ್ಲಿಯೂ ಸಂಸ್ಕೃತವನ್ನು ತುರುಕಿಸಬೇಕು. ಸಂಸ್ಕೃತವನ್ನುಳಿದರೆ ಕನ್ನಡದ ಅಸ್ತಿತ್ವವೆ ಇಲ್ಲದಂತೆ ಹೇಳುವವರ ಸಂಸ್ಕೃತಾತಿಕ್ರಮವು ಮಾತ್ರ ಯೋಗ್ಯವಲ್ಲವೆಂಬುದನ್ನು ತಿಳಿಸಲಿಕ್ಕಾಗಿ ಈಗಿನ ಕಾಲದಲ್ಲಿಯೂ ಇರುವ ಕನ್ನಡದ ಸ್ವಾತಂತ್ರ್ಯವನ್ನು ತೋರಿಸಲಿಕ್ಕಾಗಿ ಮಾತ್ರವೆ ಇದನ್ನು ಬರೆದಿರುವುದು. ಇದರಲ್ಲಿಯೂ ಒಂದೆರಡು ಸಂಸ್ಕೃತದ ರೂಢನಾಮಗಳನ್ನು ಹಾಗೆಯೇ ಇರಿಸಿದೆ.

ಹಾಗೆಯೇ ಆಂಡಯ್ಯನು ಸಂಸ್ಕೃತ ಪದಗಳನ್ನು ತದ್ಭವವನ್ನಾಗಿಸಿ ಕಾವ್ಯ ರಚಿಸುವ ಮಡಿವಂತಿಕೆಯವನಾದರೆ. ಮುಳಿಯರು ಸಂದರ್ಭಾನುಸಾರ ಕೆಲವು ಪದಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಉದಾಹರಣೆಗೆ ಶಂಬರಾಸುರ, ನಾರದ ಪದಗಳು. ಆಂಡಯ್ಯನು ಸಕ್ಕದವನ್ನು ಬೆರಸದೆ ಕಾವ್ಯ ಬರೆಯಲು ಸಾಧ್ಯ ಎಂಬುದನ್ನು ತೋರಿಸಲು ಕಾವ್ಯ ರಚಿಸಿದರೆ ಮುಳಿಯರ ಅಚ್ಚಗನ್ನಡದ ಕಾವ್ಯಮಾರ್ಗ ಹೆದ್ದಾರಿಯಂತಲ್ಲವಾದರೂ ಒಳದಾರಿಯಂತೆ ನೆಲೆಗೊಂಡಿತ್ತು. ಅದು ಕಾಲುದಾರಿ, ಗಾಡಿಯೋಡುವಷ್ಟು ವಿಶಾಲವಾದುದಲ್ಲ. ಆದರೂ ಅದರಲ್ಲಿ ಕೆಲವರು ನಡೆದಿದ್ದರು ಎಂಬುದನ್ನ ತೋರಿಸುವ ಸಲುವಾಗಿ ಅಚ್ಚಗನ್ನಡ ಕಾವ್ಯ ಬರೆದುದಾಗಿ ಹೇಳಿಕೊಂಡಿದ್ದಾರೆ.[೧೪]

ಡಾ.ಸುಬ್ರಹ್ಮಣ್ಯ ಭಟ್ಟರು ಹೇಳುವಂತೆ,''ಸೊಬಗಿನ ಬಳ್ಳಿ''ಯ ಮೊದಲನೆಯ ಮುದ್ರಣ (೧೯೧೭) ಮತ್ತು ಎರಡನೆಯ ಮುದ್ರಣ (೧೯೩೧)ಗಳ ಮುಗುಳಗಳ ಮತ್ತು ಅಲ್ಲಿಯ ಪದ್ಯಗಳ ಸಂಖ್ಯೆ ಹೀಗಿದೆ.

ಮೊದಲ ಮುದ್ರಣ - ೧೯೧೭

ಮುಗುಳು	ಪದ್ಯ	ಪದ್ಯಜಾತಿ
೧	೧೧	ಚೌಪದಿ
೨	೯	ಶರ
೩	೧೯	ಸೀಸ
೪	೮	ಲಲಿತ
೫	೨೩	ಸಾಂಗತ್ಯ

೬	೧೮	ಮಂದಾನಿಲ
೭	೩೪	ಕುಸುಮ
	೧೨೨	

ಗ್ರಂಥಾಂತ್ಯದಲ್ಲಿ ಇತರರ ಚೌಪದಿ ೧ ೨

ಕಂದ ೨

ಎರಡನೆಯ ಮುದ್ರಣ - ೧೯೩೧

೧	೨೮	ಚೌಪದಿ
೨	೩೬	ಶರ
೩	೩೯	ಕುಸುಮ ಚೌಪದಿ
೪	೨೧	ಲಲಿತ ರಗಳೆ
೫	೫೫	ಸಾಂಗತ್ಯ
೬	೩೯	ಮಂದಾನಿಲ
೭	೬೧	ಕುಸುಮ ಷಟ್ಪದಿ
೮	೫೨	ಕುಸುಮ ಷಟ್ಪದಿ

ಮೊದಲ ಮುದ್ರಣದ ಕೊನೆಗೆ ಸೊಬಗಿನ ಬಳ್ಳಿಯ ಗದ್ಯಾನುವಾದ ಮತ್ತು ರಕ್ಷಾ ಕವಚದ ನಾಲ್ಕನೆಯ ಪುಟದಲ್ಲಿ ಪ್ರತಿ ಮುಗುಳುಗಳಿಗೆ ಸಂಬಂಧಿಸಿದ ಕ್ಲಿಷ್ಟ ಪದಗಳ ಅರ್ಥಗಳನ್ನು ನೀಡಲಾಗಿದೆ. ಆದರೆ ಎರಡನೆಯ ಮುದ್ರಣದಲ್ಲಿ ಈ ಎರಡೂ ಅಂಶಗಳನ್ನು ಕೈ ಬಿಡಲಾಗಿದೆ.[೧೫]

ಮೊದಲ ಮುದ್ರಣದಲ್ಲಿ ರಸಭಾವಾದಿಗಳು ಅಪರಿಪುಷ್ಟವೆಂದು ಕಂಡು ಎರಡನೆಯ ಮುದ್ರಣದಲ್ಲಿ ಅವುಗಳನ್ನು ಸರಿಗೊಳಿಸಲು 'ಒಂದಿಷ್ಟು ಕೈಯೂರಿ'ದುದರಿಂದ ಗ್ರಂಥ ಮುಮ್ಮಡಿಯಾಗಿದೆ. ಎಂದು ಮುನ್ನುಡಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಎರಡನೆಯ ಮುದ್ರಣದಲ್ಲಿ ಅಲ್ಲಲ್ಲಿ ಹೆಚ್ಚಿನ ಪದ್ಯಗಳನ್ನು ಸೇರಿಸಿದ್ದು ಮಾತ್ರವಲ್ಲದೆ ಹೆಚ್ಚಿನ ಪದ್ಯಗಳಲ್ಲಿ ಪಾಠ್ಯ ವ್ಯತ್ಯಾಸಗಳನ್ನೂ ಮಾಡಿದ್ದಾರೆ. ಮೊದಲ ಮುದ್ರಣದ ಕಾವ್ಯದಲ್ಲಿ ಮೊದಲ ಮುಗುಳಿನಲ್ಲಿ ೧೧ ಪದ್ಯಗಳಿದ್ದದ್ದು ಎರಡನೆಯ ಮುದ್ರಣದಲ್ಲಿ ೨೮ ಪದ್ಯಗಳಾಗಿವೆ ಎಂದು ಅವರು ಹೇಳಿದ್ದಾರೆ. ಆಮೇಲೆ ಅವರು ಮೊದಲ ಮುದ್ರಣ ಮತ್ತು ಎರಡನೇ ಮುದ್ರಣಗಳಿಗಿರುವ ಪದ್ಯಗಳ ವ್ಯತ್ಯಾಸವನ್ನು ತೋರಿಸಿದ್ದಾರೆ.

ಮೊದಲ ಮುದ್ರಣದ ಮೊದಲ ಮುಗುಳಿನ ಆರಂಭದ ಪದ್ಯ

ಸಿರಿಯರಸನಡಿಯೊಳಿಗವನೆ ಮಾಡುವೆನು
ಹೊರೆವನವನಾನದಕ್ಕೇಕೆ ಬೇಡುವೆನು
ಹೊರೆತೊಮ್ಮೆ ಕೃಷ್ಣನೈದುತ ರುಕ್ಮಿಣಿಯನು
ನಿರುಕಿಸುತ ಸಂದೆಯದೊಳಿತು ಪೇಳಿದನು.

ಎರಡನೆಯ ಮುದ್ರಣದಲ್ಲಿ ಅದೇ ಪದ್ಯ

ಸಿರಿಯರಸನೊಲ್ಮೆ ಗೆಲಸಂಗೆಯ್ಯುತಿಹೆನು
ಪೂರೆಯೆಂದನುತ್ತಾನದೇಕೆ ಬೇಡುವೆನು
ಪೊರೆಯದಿರಲವನೇಳ್ಗೆಯೇ ಪಾರಿಪೋಕುಂ
ಲೆರಿಯುಲೆಪ್ಪವತೆ ಯಿನ್ನುಂ ನೆಲಸಿನಿಲ್ಕುಂ

ಹಾಗೆಯೇ ಮೊದಲ ಮುದ್ರಣದ ಎರಡನೆಯ ಪದ್ಯ

ನಲ್ಲೆ ಕತ್ತಲೆಯ ದಿನಿಲೆನಿತಾಗಿ ಮುಸುಕೆ
ಮೆಲ್ಲ ಮೆಲ್ಲನೆ ಮಸುಕುವಾ ಸಂಜೆಯಿರಕೆ
ಕಲ್ಲಾಯ್ತನಹುದು ನಿನ್ನಯ ಮೈಯಿದೇನು
ಸೊಲ್ಲಿಸೆನ್ನೊಡನೆ ಮರೆಮಾಜದೆಲ್ಲವನು.

ಆದರೆ ಎರಡನೆಯ ಮುದ್ರಣದಲ್ಲಿ ಇದು ೧೩ನೇ ಪದ್ಯವಾಗಿದೆ. ಮತ್ತು ಅದರ ಸ್ವರೂಪದಲ್ಲೂ ಸ್ವಲ್ಪ ಬದಲಾವಣೆಯಾಗಿದೆ.

ನಲ್ಲೆ ಕತ್ತಲೆಯ ದಿನಿಸಿನಿಸಾಗಿ ಮುಸುಕೆ
ಮೆಲ್ಲ ಮೆಲ್ಲನ ಮಾಸುವಾ ಬಯ್ಗನಂಕೆ
ಯಲ್ಲಿಹುದು ಮೋರೆ ಕತ್ತಲೆ ಕವಿಯ ಲಿಹುದೆ
ಸೊಲ್ಲಿಸೀ ರಾಯನಿರೆ ಸಂದೆಯಂ ಬಡದೆ.[೧೬]

೪. ಡಾ.ಕಾ.ವೆಂ.ಶ್ರೀನಿವಾಸಮೂರ್ತಿಯವರು 'ಕನ್ನಡ ಪರಚಿಂತನೆ ಮತ್ತು ಪರಂಪರೆ' ಎನ್ನುವ ಕೃತಿಯಲ್ಲಿ ಪ್ರಾಸಂಗಿಕವಾಗಿ ಆಂಡಯ್ಯನ ಬಗೆಗೆ ಚರ್ಚಿಸಿದ್ದಾರೆ. ಆಂಡಯ್ಯನ ಕನ್ನಡ ನಾಡಿನ ಅಭಿಮಾನ, ಕನ್ನಡ ಅಭಿವ್ಯಕ್ತಿಯ ಸಮಸ್ಯೆ ಮತ್ತು ಮಾರ್ಗೋಪಾಯಗಳನ್ನು ಕುರಿತಂತೆ ಚರ್ಚಿಸಿದ್ದಾರೆ. ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನಾಡು- ನುಡಿಯ ಬಗೆಗೆ ಅತಿಶಯವಾದ ವಿಶಿಷ್ಟ ಅಭಿಮಾನವನ್ನು ತಳೆದಿದ್ದವನು ಆಂಡಯ್ಯ. ಈ ಅಭಿಮಾನದ ಅಭಿವ್ಯಕ್ತಿ ಆಂಡಯ್ಯನಲ್ಲಿ ಮಾತ್ರ ವ್ಯಕ್ತವಾಗಿದೆ ಎಂದು ಹೇಳಿದ್ದಾರೆ.

ಆರಂಭದಲ್ಲಿ ಕವಿಯ ಹೆಸರು, ಕೃತಿ, ಕಾಲ, ಧರ್ಮ, ರಾಜಾಶ್ರಯ, ಕೃತಿಸಂಖ್ಯೆ ಇತ್ಯಾದಿಗಳ ಬಗ್ಗೆ ಇರುವ ಭಿನ್ನಾಭಿಪ್ರಾಯದ ಬಗ್ಗೆ ಚರ್ಚೆಮಾಡಿದ್ದಾರೆ. ಸಂಸ್ಕೃತದ ನೆರವಿಲ್ಲದೆ ಕನ್ನಡದಲ್ಲಿ ಕಾವ್ಯ ರಚನೆ ಅಸಾಧ್ಯ ಎಂಬ ಧೋರಣೆಯನ್ನು ಹೊಂದಿದ್ದ ಕವಿಗಳ ಮಧ್ಯೆ ಆಂಡಯ್ಯ ಕಾಣಿಸಿಕೊಳ್ಳುತ್ತಾನೆ. ಇಂತಹ ಧೋರಣೆಗಳನ್ನು ಬಲವಾಗಿ ನಿರಾಕರಿಸಿ ಅಚ್ಚಗನ್ನಡದಲ್ಲಿ ಕಾವ್ಯ ಕೃಷಿ ಸಾಧ್ಯ ಎಂಬುದನ್ನು ಸಾಬೀತು ಪಡಿಸಲು ಕಬ್ಬಿಗರ ಕಾವ ಕೃತಿ ರಚಿಸಿ ಕನ್ನಡದಲ್ಲಿಯೂ ಮಹತ್ತರ ವಿಚಾರಗಳ ಉತ್ಕೃಷ್ಟ ಅಭಿವ್ಯಕ್ತಿ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಇಂತಹ

ಕಾವ್ಯ ನಿರ್ವಹಣೆಯಲ್ಲಿ ಸಂಸ್ಕೃತ ಶಬ್ದಗಳನ್ನು ತದ್ಭವಗಳನ್ನಾಗಿ ಮಾಡಿಕೊಂಡು ತನ್ನ ಕಾವ್ಯಕ್ಕೆ ತರುತ್ತಾನೆ. ವಸ್ತುವನ್ನು ಸಂಸ್ಕೃತದಿಂದ ಸ್ವೀಕರಿಸಿ ಅದರಲ್ಲಿ ಪ್ರಾದೇಶಿಕ ಸೊಗಡನ್ನು ತುಂಬಿ ಕನ್ನಡದಲ್ಲೂ ಚಂಪೂ ಅಭಿವ್ಯಕ್ತಿ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾನೆ ಎಂದು ಹೇಳುತ್ತಾರೆ. ಮುಂದುವರೆದು ಅವರು ಆಂಡಯ್ಯನು ಸಂಸ್ಕೃತದ ಪುರವರ್ಣನೆ, ಕಥೆಯ ಹಂದರ ವರ್ಣನೆ, ಪಾತ್ರಸೃಷ್ಟಿ ಎಲ್ಲವನ್ನು ಕನ್ನಡವನ್ನಾಗಿಸಿ, ಕರ್ನಾಟಕಕ್ಕೆ ಮಾರ್ಪಡಿಸಿಯೇ ವರ್ಣಿಸಿರುವುದನ್ನು ಚರ್ಚಿಸಿದ್ದಾರೆ. ಆತನು ಹೀನಾರ್ಥಗಳ ಬಳಕೆಯನ್ನು ಉತ್ಕೃಷ್ಟಗೊಳಿಸಿದ್ದಾನೆ, ಮತ್ತು ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ ಹೊಸಪದ ಸೃಷ್ಟಿಸುವ ಕೆಲಸ ಮಾಡಿದ್ದಾನೆ; ಆಂಡಯ್ಯನಿಗೆ ಧರ್ಮ ನಿಷ್ಠೆಗಿಂತಲೂ ಭಾಷೆ ಮುಖ್ಯವಾಗಿದೆ. ಹಾಗಾಗಿ ಕಾವ್ಯದಲ್ಲಿ ಎಲ್ಲೂ ಪರಮತ ವಿಡಂಬನೆಯನ್ನು ಕಾಣುವುದಿಲ್ಲವೆಂದು ಅಭಿಪ್ರಾಯ ಪಡುತ್ತಾರೆ.

ಕದಂಬರ ಆಳ್ವಿಕೆಯ ಕಾಲದಲ್ಲಿ ಬರುವ ಆಂಡಯ್ಯ ಬನವಾಸಿಯ ವರ್ಣನೆಯನ್ನು ಅಧಿಕವಾಗಿ ತಂದಿದ್ದಾನೆ ಎನ್ನುವುದು ಶ್ರೀನಿವಾಸಮೂರ್ತಿಯವರ ಅಭಿಪ್ರಾಯ. ಪಂಪ ಮಾರ್ಗ ದೇಸಿಗಳ ಸಮನ್ವಯದಲ್ಲಿ ನಡೆದರೆ, ನಯಸೇನ ದೇಸೀಯತ್ತಲೇ ತಿರುಗಿರುವ ಸಂದರ್ಭ, ಆಂಡಯ್ಯ ಶುದ್ಧ ದೇಸಿಯ ಅಂದರೆ ಅಚ್ಚಗನ್ನಡದ ಮೂಲಕ ಕಾವ್ಯ ರಚಿಸಲು ಮುಂದಾಗಿರುವುದನ್ನು ಕಾಣಬಹುದು. ಅಚ್ಚಗನ್ನಡ ಕಾವ್ಯರಚನೆ ಒಂದು ಸವಾಲು ಎಂಬಂತೆ ಆತ ಸ್ವೀಕರಿಸಿದ್ದಾನೆ. ಆ ಮೂಲಕ ಸಂಸ್ಕೃತದಂತೆ ಕನ್ನಡದಲ್ಲಿ ಕಾವ್ಯ ರಚನೆ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಪಂಡಿತ ಕಾವ್ಯ ಎಂದರೆ ಚಂಪೂ ಕೃತಿಗಳೇ ಆಗಿರುವುದರಿಂದ ಚಂಪೂ ಛಂದಸ್ಸಿನಲ್ಲಿ, ಶೈಲಿಯಲ್ಲಿ ಬರೆಯಲು ಬಯಸಿರುವುದನ್ನು ಕಾಣಬಹುದು. ಹಾಗಾಗಿ ಆಂಡಯ್ಯನಲ್ಲಿ ಅಚ್ಚಗನ್ನಡ ಎನ್ನುವ ಪ್ರಜ್ಞೆ ವಸ್ತು, ಮತ್ತು ಛಂದಸ್ಸಿಗೆ ಸಂಬಂಧಿಸಿರುವುದಾಗಿದೆ ಎನ್ನುತ್ತಾರೆ.[೧೭] ಭಾಷಾ ಪದ ಪ್ರಯೋಗಕ್ಕೆ ಸಂಬಂಧಿಸಿದ ತನ್ನ ಧೋರಣೆಯನ್ನು ಮೂರು ನೆಲೆಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ.

ಹಾಗಾಗಿ ಆತನ ಪ್ರಕಾರ ಅಚ್ಚಗನ್ನಡವೆಂಬುದು ಸಂಸ್ಕೃತವನ್ನು ಬೆರೆಸದೆ ತತ್ಸಮ, ತದ್ಭವ, ದೇಶ್ಯ ಶಬ್ಧಗಳ ಬಂಧವೇ ಆಗಿದೆ. ಜನಸಾಮಾನ್ಯರಿಂದ ಆಡುಮಾತಿನಲ್ಲಿ ಸಂಭವಿಸುವ ಸಹಜ ತದ್ಭವ ಹಾಗೂ ಪಂಡಿತ ಕವಿಗಳು ಮತ್ತು ಆಂಡಯ್ಯನಿಂದ ಪ್ರಯತ್ನಪೂರ್ವಕವಾಗಿ ರೂಪಿತಗೊಂಡ ಪ್ರಾಕೃತ ತದ್ಭವಗಳೂ ಸೇರಿವೆ. ಹೆಚ್ಚಿನ ಸಂಖ್ಯೆಯಲ್ಲಿ ದೇಶ್ಯ ಶಬ್ದಗಳು ಬಳಕೆಗೊಂಡಿವೆ. ಅನ್ಯ ಭಾಷೆಯ ಮಹಾಪ್ರಾಣಾಕ್ಷರಗಳ ಪದಗಳನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿದ ಅಲ್ಪಪ್ರಾಣಾಕ್ಷರಗಳ ವಿನ್ಯಾಸದಲ್ಲಿ ರೂಪಿಸಿ ಬಳಸಿದ್ದಾನೆ. ಕನ್ನಡವಲ್ಲದ 'ಶ', 'ಷ' ಗಳನ್ನು 'ಸ' ಕಾರವನ್ನಾಗಿ ಬಳಸಿದ್ದಾನೆ. ಸಂಸ್ಕೃತದ ವಿಜಾತಿಯ ಸಂಯುಕ್ತಾಕ್ಷರ ಪದಗಳು ದೇಸಿ ಜಿಹ್ವೆಗೆ ಒಗ್ಗುವಂತೆ ಮಾರ್ಪಡಿಸಿದ್ದಾನೆ. ಇಂದ್ರ - ಇಂದಿರ ತದ್ಭವಗಳಲ್ಲಿ ಸಮರೂಪಧಾರಣೆ ಮಾಡಿಕೊಂಡಿದ್ದಾನೆ.[೧೮]

ಹೀಗೆ ಪಂಪ, ನಯಸೇನನಿಗಿಂತ ಭಿನ್ನವಾಗಿ ಭಾಷೆ ಇತಿಹಾಸದಲ್ಲಿ ಕ್ರಾಂತಿ ಎಸಗಿದ ಆಂಡಯ್ಯನ ಪ್ರಯತ್ನ ಒಂದು ಪರಂಪರೆಯಾಗಿ ಬೆಳೆದು ಬರದೇ ಇದ್ದರೂ ಆತನದೊಂದು ಅದ್ಭುತ ಪ್ರಯೋಗವಾಗಿದೆ. ಮುಂದೆ ೨೦ನೇ ಶತಮಾನದಲ್ಲಿ ಆಂಡಯ್ಯನನ್ನು ಮುಳಿಯ ತಿಮ್ಮಪ್ಪಯ್ಯ, ಕೇಳಂಬೆ ಪುಟ್ಟಣ್ಣ ಗೌಡರು ಕ್ರಮವಾಗಿ ಸೊಬಗಿನ ಬಳ್ಳಿ, ಕಾಲೂರ ಚೆಲುವೆ ಕಾವ್ಯಗಳ ಮೂಲಕ ಅನುಸರಿಸಿದ್ದಾರೆ ಎಂದು ಆತ ಚರ್ಚೆಯನ್ನು ಸಮಕಾಲೀನಗೊಳಿಸುತ್ತಾರೆ.

ಮುಂದಿನ ಅಧ್ಯಾಯದಲ್ಲಿ ಈ ಚಿಂತನೆ ವಚನಕಾರರಲ್ಲಿ, ದಾಸರಲ್ಲಿ, ಆಧುನಿಕ ಸಂದರ್ಭದಲ್ಲಿ ಮುಖ್ಯವಾಗಿ ವಸಾಹತುಶಾಹಿ ಸಂದರ್ಭದಲ್ಲಿ ವ್ಯಕ್ತವಾದ ಕನ್ನಡ ಪರ ಚಿಂತನೆ ಪಡೆದ ಹೊಸ ಆಲೋಚನೆಗಳು, ಕನ್ನಡದ ಅಸ್ತಿತ್ವ, ಅದರ ನೆಲೆ ಅಸ್ತಿತ್ವಕ್ಕಾಗಿ ನಡೆಯುತ್ತಿರುವ ಹೋರಾಟ, ಕನ್ನಡ ಪರ ಕಾಳಜಿ ಅದರಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ಆಂಡಯ್ಯ ಮತ್ತು ಅಚ್ಚಗನ್ನಡದ ಕುರಿತ ಲೇಖಕರ ಅಭಿಪ್ರಾಯಗಳು ಈಗಾಗಲೇ ಬೇರೆ ಬೇರೆ ವಿದ್ವಾಂಸರು ಮಂಡಿಸಿದ ಅಭಿಪ್ರಾಯಗಳೇ ಆಗಿವೆ ಎಂಬುದು ಈ ಅಧ್ಯಾಯದ ಕೊನೆಯ ವೇಳೆಗೆ ಸ್ಪಷ್ಟವಾಗುವುದು.[೧೯]

೫. ಡಾ. ಮಾಧವ ಪೆರಾಜೆ ಅವರು ಬರೆದಿರುವ 'ಪಂಡಿತ ಪರಂಪರೆಯ ಕೊಳಂಬೆ ಪುಟ್ಟಣ್ಣಗೌಡ' ಕಿರುಕೃತಿಯಲ್ಲಿ ಕೊಳಂಬೆಯವರ ಜೀವನ ಪರಿಚಯ, ಅವರ ಕೃತಿಗಳ ವಿವರ ಜೊತೆಗೆ ಕೊಳಂಬೆಯವರ ಅಚ್ಚಗನ್ನಡ ಪರಿಕಲ್ಪನೆಯ ಐತಿಹಾಸಿಕ ಮಹತ್ವದ ಬಗ್ಗೆ ಚರ್ಚಿಸಿದ್ದಾರೆ. ಮುಖ್ಯವಾಗಿ ಅವರು ಈಗಾಗಲೇ ರೂಪಗೊಂಡಿರುವ ಕಾವ್ಯ ಭಾಷೆಗಿಂತ ಭಿನ್ನವಾಗಿ ಅಚ್ಚಗನ್ನಡ ಮತ್ತು ಕಾವ್ಯಭಾಷೆ ಎರಡನ್ನೂ ಮೇಳವಿಸುವಲ್ಲಿ ಅಚ್ಚಗನ್ನಡ ಕವಿಗಳು ಹೇಗೆ ಯಶಸ್ವಿಯಾಗಿದ್ದಾರೆ ಎಂಬುದನ್ನು ಚರ್ಚಿಸಿದ್ದಾರೆ. ಆ ಹಿನ್ನೆಲೆಯಲ್ಲಿಯೇ ಕೊಳಂಬೆಯವರ ಪ್ರಯತ್ನವನ್ನು ಅರ್ಥಮಾಡಿಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ.

ಮುಂದುವರೆದು ಅವರು ಕೊಳಂಬೆಯವರ ಕಾವ್ಯ ವೈಶಿಷ್ಟ್ಯತೆಯ ಬಗ್ಗೆ ಚರ್ಚಿಸಿದ್ದಾರೆ. ಭಾಷಿಕ ರಚನೆ, ಹೊಸ ಪದಗಳ ಸೃಷ್ಟಿ, ದೇಸೀ ಪದಗಳ ಬಳಕೆ ಅವುಗಳನ್ನು ನೇಯುವ ಸೊಗಸು, ಅಭಿವ್ಯಕ್ತಿಯಲ್ಲಿ ಕಂಡುಬರುವ ಸಹಜತೆಯ ವಿವರಣೆ ಜೊತೆಗೆ ಕಾವ್ಯದ ಕಥಾಸಾರಾಂಶವೂ ಇಲ್ಲಿದೆ. ಕನ್ನಡವನ್ನು ಆಧುನಿಕ ಸವಾಲುಗಳಿಗೆ ಹೊಸದಾಗಿ ಸಜ್ಜುಗೊಳಿಸುವ ಕೊಳಂಬೆಯವರ ಕನ್ನಡದ ಬಯಕೆ ಧಾರಣ ಶಕ್ತಿಗೆ ಸಂಬಂಧಿಸಿದುದಾಗಿದೆ ಎಂದು ಅಭಿಪ್ರಾಯಪಡುತ್ತಾರೆ.[೨೦]

ಈ ಕೃತಿಗಳನ್ನು ಬಿಟ್ಟರೆ ಕೆಲವೊಂದು ಬಿಡಿ ಲೇಖನಗಳು ಅಚ್ಚಗನ್ನಡಕ್ಕೆ ಸಂಬಂಧಿಸಿದಂತೆಯೇ, ಅಚ್ಚಗನ್ನಡ ಕಾವ್ಯಗಳ ಕುರಿತಂತೆಯೇ ಬೆರಳೆಣಿಕೆಯಲ್ಲಿ ಪ್ರಕಟವಾಗಿದೆ. ಇದೀಗ ಅಂತಹ ಲೇಖನಗಳನ್ನು ಗಮನಿಸಬಹುದಾಗಿದೆ.

೧. ಮುಳಿಯ ತಿಮ್ಮಪ್ಪಯ್ಯನವರು 'ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು' ಎಂಬ ಪುಸ್ತಕದಲ್ಲಿ 'ಆಂಡಯ್ಯನೂ ಕನ್ನಡಮೆನಿಪ್ಪಾನಾಡು' ಎಂಬ ಲೇಖನವನ್ನು ಬರೆದಿದ್ದಾರೆ.[೨೧] ಈ ಲೇಖನದ ಮುಖ್ಯ ಪ್ರತಿಪಾದನೆಗಳು ಹೀಗಿವೆ:

''ಆಂಡಯ್ಯನಿಗಿಂತ ಒಂದು ಶತಮಾನಕ್ಕಿಂತ ಮೊದಲೇ ಇದ್ದ ನಯಸೇನ ಕನ್ನಡ ಸಂಸ್ಕೃತ ಭಾಷೆಗಳೆರಡನ್ನೂ ಮನಬಂದಂತೆ ಬೆರೆಸುವ ಪದ್ಧತಿಯನ್ನು ನಿಂದಿಸಿದ್ದಾನೆ. ಆದರೂ ಈ ಪದ್ಧತಿ ನಿಲ್ಲಲಿಲ್ಲ. ಆದರೆ ಆಂಡಯ್ಯ ಕನ್ನಡದಲ್ಲಿಯೇ ಕಾವ್ಯ ರಚಿಸಲು ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದ್ದಾನೆ. ಎಂದು ಹೇಳಿ ಮುಂದೆ ಲೇಖಕರು ಕಾವ್ಯದ ತಾತ್ಪರ್ಯವನ್ನು ನೀಡಿದ್ದಾರೆ. ತನ್ನ ಕಾವ್ಯವನ್ನು ಅಕ್ಕರಿಗರು 'ಸೊಬಗಿನ ಸುಗ್ಗಿ' ಎಂದೂ ಸಂಸ್ಕೃತವರಿತವರು 'ಮದನವಿಜಯ' ವೆಂದು ನಾಮಕರಣ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಕಾವನಗೆಲ್ಲವೆಂಬುದೇ ಕಾವ್ಯದ ನಿಜವಾದ ಹೆಸರೆಂದೂ ಕವಿ ಹೇಳಿದ್ದಾನೆ. ಇದರಿಂದ ಮದನವಿಜಯವೆಂಬುದು ನಾಮಕರಣ ಮಾಡಿರುವುದಾಗಿ

ಮೂಲರೂಪವಾದ ಕಾವನಗೆಲ್ಲದ ಸಂಸ್ಕೃತ ರೂಪವೆಂದೂ 'ಸೊಬಗಿನ ಸುಗ್ಗಿ' ಎಂಬುದು ಗುಣಾನುರೂಪವಾಗಿ ಅಕ್ಕರಿಗರಿಟ್ಟ ಹೆಸರೆಂದು ಲೇಖಕರು ತೀರ್ಮಾನಿಸಿದ್ದಾರೆ.

ಸಾಹಿತ್ಯದಲ್ಲಿ ತಮ್ಮ ಕಥಾನಾಯಕರಿಗೂ, ದೊರೆಗಳಿಗೂ, ಇಷ್ಟದೈವಗಳಿಗೂ ತಮಗೂ ಅಭಿನ್ನಗಳಾದ ಹೆಸರುಗಳನ್ನಿಟ್ಟುಕೊಳ್ಳುವ ಪರಂಪರೆ ಇರುವುದರಿಂದ 'ಕಬ್ಬಿಗರ ಕಾವನೊಲವಿಂದೊರೆವಂ' ಎಂಬಲ್ಲಿಯ ಕಬ್ಬಿಗರ ಕಾವ ಶಬ್ದವು 'ಕನ್ನಡಮೆನಿಪ್ಪಾನಾಡಿನ' ಕಬ್ಬಿಗನ ದೊರೆಗೂ, ಕವಿಗೂ ಅನ್ವಯಿಸಬಹುದೆಂದು ಅಭಿಪ್ರಾಯಪಡುತ್ತಾರೆ. ಕಬ್ಬಿಗರ ಕಾವನೆಂಬ ರಾಜನ ಒಲವಿಂದ ಕಬ್ಬಿಗರ ಕಾವನಾದ ಕವಿ ಬರೆದನು. ಎಂಬರ್ಥವು ಸುಗಮವಾಗಿ ಅಂದವಾಗಿ ತೋರುತ್ತದೆ. ಆಂಡಯ್ಯನ ಆಶ್ರಯದಾತ, ಕಬ್ಬಿಗರ ಕಾವವೆಂಬ ಹೆಸರುಗಳ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನೂ ಕುರಿತಂತೆ ಚರ್ಚಿಸಿದ್ದಾರೆ.

ಕ್ರಿಸ್ತಪೂರ್ವದಲ್ಲಿಯೇ ರಚನೆಯಾಯಿತೆನ್ನಲಾದ ತೋಲ್ಕಾಪಿಯಮ್ ಎಂಬ ತಮಿಳು ವ್ಯಾಕರಣ ಗ್ರಂಥದಲ್ಲಿಯೂ, ಶಿಲಪ್ಪದಿಗಾರಮ್ ಮೊದಲಾದ ಕೃತಿಗಳಲ್ಲಿಯೂ ಕನ್ನಡನಾಡಿನ, ಭಾಷೆಯ ಜನರ ವಿವರಗಳಿರುವುದಾಗಿ ಉಲ್ಲೇಖಿಸುತ್ತಾರೆ. ಹಾಗೆಯೇ ಪಾಶ್ಚಾತ್ಯ ವಿದ್ವಾಂಸರಾದ ರೈಸ್‌ರು ಕೂಡ ಕನ್ನಡ ನಾಡನ್ನು 'ಕರಿಮಣ್ಣಿನ ನಾಡು' 'ಕಟುನಾಡಿಗಂ' ಎಂದು 'ಬನವಾಸಿ' ಶಬ್ದದ ರೂಪಾಂತರವಾದ ಕನ್ನಾಡನ್ನು 'ಕಟುನಾಡು' ಎಂದು ಉಚ್ಚರಿಸಿರುವುದನ್ನು ವಿವರಿಸಿದ್ದಾರೆ.

ಈ ಮೇಲಿನ ಎಲ್ಲ ವಿವರಣೆಗಳಿಂದ, ವಿಮರ್ಶೆಗಳಿಂದ ಬನವಾಸಿ ಪ್ರಾಂತಕ್ಕೆ ಆದಿಯಲ್ಲಿ ಕನ್ನಡನಾಡೆಂಬ ಹೆಸರಿತ್ತೆಂದು ತಿಳಿದುಬರುತ್ತದೆ ಎನ್ನುವುದು ಮುಳಿಯರ ಅಭಿಪ್ರಾಯ. ಹಾಗೆಯೇ ಬಸವಾಸಿಯ ಪ್ರಾಂತವು ಎಲ್ಲೆಲ್ಲಿ ವ್ಯಾಪಿಸಿದ್ದುದೆಂದು ಆಂಡಯ್ಯನಿಗಿಂತ ಎರಡೂವರೆ ಶತಮಾನಕ್ಕೆ ಮೊದಲಿದ್ದ ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯದಿಂದ ತಿಳಿದು ಬರುತ್ತದೆ ಎಂಬುದನ್ನು ಪದ್ಯಗಳ ಮೂಲಕ ದಾಖಲಿಸುತ್ತಾರೆ. ಗೋಕರ್ಣದಿಂದ ದಕ್ಷಿಣಕ್ಕೆ ಅಂದಿನಿಂದ ಇಂದಿನವರೆಗೂ 'ಕನ್ನಡ' ಎಂಬ ಹೆಸರೇ ಪ್ರಸಿದ್ಧವಾಗಿದೆ. ರಾಜಾಧಿಕಾರದ ಬದಲಾವಣೆಯಿಂದಾಗಿ ತುಳುನಾಡೂ ಇದರೊಡನೆ ಬೆರೆತು ಉತ್ತರ ಕನ್ನಡವೆಂದೂ, ದಕ್ಷಿಣ ಕನ್ನಡವೆಂದೂ ಈಗ ಇಂಗ್ಲೀಷರ ಕಾಲದಲ್ಲಿ ಭಿನ್ನವಾಗಿದೆ. ಆ ದಕ್ಷಿಣೋತ್ತರದ ಬೆಸುಗೆಯನ್ನು ಬಿಚ್ಚಿದರೆ ಇದೇ 'ಕನ್ನಡಮೆನಿಪ್ಪಾನಾಡು' ಎಂಬ ಪ್ರಮುಖ ಅಂಶವನ್ನು ಮುಳಿಯರು ಸ್ಪಷ್ಟಪಡಿಸುತ್ತಾರೆ.

ನೃಪತುಂಗನ ಪದ್ಯದ ವಿವರಣೆಗೂ, ಆಂಡಯ್ಯನ ಪದ್ಯ ವಿವರಣೆಗೂ ಭಿನ್ನತೆಯಿರುವುದನ್ನು ಇಲ್ಲಿ ಚರ್ಚಿಸಿದ್ದಾರೆ. ಆ ಸೀಮಾಂತರ ದೇಶವಾಗಿದ್ದ ನಾಡು 'ಕನ್ನಡದೊಳ್ ಭಾವಿಸಿದ ಜನಪದಂ' ಎಂದುದರಿಂದ ಕನ್ನಡ ದೇಶದಲ್ಲಿ ಎಣಿಸಲ್ಪಟ್ಟಿದ್ದುದು ಎಂದು ಅರ್ಥವಾಗುತ್ತದೆಯಲ್ಲದೆ, ಆ ಇಡೀ ದೇಶಕ್ಕೆ 'ಕನ್ನಡ' ವೆಂಬ ಹೆಸರಿತ್ತೆಂದು ಹೇಳಿದಂತಾಗುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಹಾಗೆಯೇ ರಾಜಕೀಯ ನಿಯಮದಿಂದಾಗಿ ಈ ಭಿನ್ನತೆ ಕಂಡುಬರುತ್ತದೆ ಎಂಬುದಕ್ಕೆ ನಿದರ್ಶನ ಕೊಡುತ್ತಾರೆ.

'ಕನ್ನಡದೊಳ್ ಭಾವಿಸಿದ' ಎಂದೂ ಭೂತಕೃತ್ತುಗಳಿಂದ ಹೇಳುವ ಕಾರಣ ಆ ಕನ್ನಡ ಪ್ರಾಂತದ ಮೇರೆ ಆತನ ಕಾಲದಲ್ಲಿಯೇ ಶಿಥಿಲವಾಗುತ್ತಾ ಬಂದಿದೆಯೆಂದಾಯಿತು. ಅದರಿಂದ ಈಗಿನಂತೆ ಆಗಲೂ ಒಂದು ಪ್ರಾಂತದ ಅಂಶವು

ಇನ್ನೊಂದು ಪ್ರಾಂತದಲ್ಲಿ ಸೇರುತ್ತಿತ್ತೆಂದು ವ್ಯಕ್ತವಾಗುತ್ತದೆ. ಹೀಗೆ ನೃಪತುಂಗ ಇಂತಹ ಸೀಮಾಂತರದ ನಾಡು ಕನ್ನಡ ಪ್ರಾಂತವೆನ್ನುತ್ತಾನೆ. ಆಂಡಯ್ಯನೂ ಆ ಪ್ರಾಂತದೊಳಗೆ ಕನ್ನಡವೆಂಬುದು ಈ ನಾಡಿನ ಹೆಸರೆನ್ನುತ್ತಾನೆ. ಕಡೆಗೆ, 'ರಾಯನ ನಾಟ್ಕಳೊಳ್' ಎಂದು ಆಂಡಯ್ಯನು ಬಹುವಚನದಿಂದ ಸೂಚಿಸುವ ನಾಡುಗಳೇ ಕನ್ನಡ ಪ್ರಾಂತಕ್ಕೆ ಸೇರಿ ಕಾಮರಾಯನ ಆಧೀನದಲ್ಲಿದ್ದ ನಾಡುಗಳೆಂದು ನಿರ್ಧಾರಿತವಾಗುತ್ತದೆ.

ಹಾಗೆಯೇ ಕಾವನಗೆಲ್ಲದಲ್ಲಿರುವ ಕೆಲ ವರ್ಣನಾ ಭಾಗಗಳು, ಶಬ್ದ ವೈಶಿಷ್ಟ್ಯದಿಂದಲೂ 'ಕನ್ನಡಮೆನಿಪ್ಪಾನಾಡು' ಈ ಬನವಾಸಿ ಪ್ರಾಂತವೆಂದೇ ಊಹಿಸಬಹುದೆಂದು ಹೇಳುತ್ತಾರೆ. ಒಡೆಯರ್ 'ಕನ್ನಡನಾಡನ್ನು' ಸಮರ್ಥಿಸುವ ಇಲ್ಲಿನ ಗಾಳಿ, ಬೆಳೆಯನ್ನು, ಪರಿಸರವನ್ನು ವರ್ಣಿಸುವ ಕಾವ್ಯ ಭಾಗಗಳ ಉದಾಹರಣೆ ಕೊಡುತ್ತಾರೆ. ಈ ನಾಡಿನ ಜನರು ಬಳಸುವ ವಿಶಿಷ್ಟ ಪದಗಳನ್ನು, ಪದಾರ್ಥಗಳನ್ನು ಬಳಸುವುದು ಸಾಮಾನ್ಯ ಸಂಗತಿಯೆಂದು ಅಭಿಪ್ರಾಯಪಟ್ಟಿದ್ದಾರೆ.

ಕಾಮನು ಶಿವನೊಡನೆ ಯುದ್ಧಕ್ಕಾಗಿ ಸೈನ್ಯದೊಡನೆ ಗಟ್ಟ ಹತ್ತುವಾಗ ಕಂಡ ಯೋಗಸ್ಥನಾಗಿದ್ದ ಸವಣನನ್ನು ಕಾಮರಾಯನು ತನ್ನೊಳಗಿದ್ದ ಈ ಕನ್ನಡ - ತುಳು - ನಾಡುಗಳಿಂದ ಸೈನ್ಯವನ್ನು ರೂಪಿಸಿಕೊಂಡು ಬಲ್ಲಾಳರಾಜನೊಡನೆ ಯುದ್ಧಕ್ಕೆ ಹೋಗುವಾಗ ಎದುರಾಗುವ ಚಾವುಂಡರಾಯನಿಂದ ನಿರ್ಮಿಸಲ್ಪಟ್ಟ ಶ್ರವಣಬೆಳ್ಗೊಳದ ಗೊಮ್ಮಟಮೂರ್ತಿಯನ್ನೇ ಆಂಡಯ್ಯನ ಮನಸ್ಸಿನಲ್ಲಿಟ್ಟುಕೊಂಡು ವರ್ಣಿಸಿದ್ದಾನೆ ಎಂದು ಅಭಿಪ್ರಾಯಪಡುತ್ತಾನೆ

ಆಂಡಯ್ಯನು ಅನೇಕ ತದ್ಭವ ಪದಗಳನ್ನುಪಯೋಗಿಸಿರುವುದರಿಂದ ಅವುಗಳನ್ನು ಅಚ್ಚಗನ್ನಡ ಶಬ್ದಗಳೆಂದು ಹೇಳುವುದು ಹೇಗೆ? ಎಂಬುದು ಹಲವರ ಪ್ರಶ್ನೆ? ಆಧುನಿಕ ಭಾಷಾಶಾಸ್ತ್ರಜ್ಞರು ಇಂತಹ ಭಾಷೆಗಳು ಇಂತಹ ಮೂಲಭಾಷೆಯ ಸಂತಾನಗಳೆಂದು ವಿಭಾಗಿಸಿದ್ದಾರೆ. ತದ್ಭವ ಪದಗಳೆಂದರೆ 'ಇಂಡೋ - ಯುರೋಪಿಯನ್' ಭಾಷೆಗಳಲ್ಲಿ ಪ್ರಮುಖವಾದ ಸಂಸ್ಕೃತ ಜನ್ಯಗಳಾದುದರಿಂದ ಅವುಗಳೂ ದ್ರಾವಿಡ ಭಿನ್ನ ಜಾತೀಯವಾದ ಸಂಸ್ಕೃತದಲ್ಲಿಯೇ ಸೇರಿದವು. ಅಚ್ಚಗನ್ನಡ ಪದಗಳೆಂದರೆ ಭಿನ್ನ ಜಾತಿ ಭಾಷಾ ಸಂಬಂಧವಿಲ್ಲದೆ ಮೂಲದ್ರಾವಿಡ ಭಾಷೆಯಿಂದಲೇ ಹುಟ್ಟಿ ಕನ್ನಡದಲ್ಲಿ ನೆಲೆಗೊಂಡವುಗಳಾಗಿರಬೇಕು. ಅಚ್ಚಗನ್ನಡದ ಈ ಲಕ್ಷಣವನ್ನು ಮನಸ್ಸಿನಲ್ಲಿಟ್ಟುಕೊಂಡ ಆಧುನಿಕ ವಿದ್ವಾಂಸರು ಮಾತ್ರವೇ ತದ್ಭವವು ಅಚ್ಚಗನ್ನಡವೇ? ಎಂಬ ಪ್ರಶ್ನೆಯೆತ್ತಬಹುದು. ಆದರೆ ಆಂಡಯ್ಯನಿಗೆ ಅಚ್ಚಗನ್ನಡವು ಅಂತಹ ವಿಶಿಷ್ಟ ಲಕ್ಷಣವಾಗಿರಲಿಲ್ಲ. ಎಲ್ಲ ಭಾಷೆಗಳೂ ಸರ್ವಭಾಷಾಮಯ ದೇವ ಭಾಷೆಯ ಅಂಗಗಳೆಂದರೆ ಮೇಲೆ ನಾನಾ ಮೂಲ ಭಾಷೆಗಳ ತೊಡಕೇ ಇಲ್ಲ. ಸಂಸ್ಕೃತ ಪದವು ಕನ್ನಡದಲ್ಲಿ ತದ್ಭವವಾದೊಡೆ ಅದು ಅಚ್ಚಗನ್ನಡವಾಯಿತೆಂದು ಆಗಿನವರ ಅಭಿಪ್ರಾಯ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ.

ಆಂಡಯ್ಯನ ಈ ಬಗೆಯ ಕಾವ್ಯ ರಚನಾ ಪದ್ಧತಿಯನ್ನು ಯಾರೂ ಅನುಸರಿಸಿದಂತೆ ತೋರುವುದಿಲ್ಲವೆಂದು, ಕದಂಬ ಕಾಮರಾಜನು ಕ್ರಿ.ಶ. ಸುಮಾರು ೧೨೦೩ ರಲ್ಲಿ ಬಲ್ಲಾಳ ರಾಜನೊಡನೆ ಯುದ್ಧ ಮಾಡಿದ ಮೇಲೆ ಸ್ವಲ್ಪ ಕಾಲದೊಳಗೆ ರಾಜಭಕ್ತನಾದ ಆಂಡಯ್ಯನು ಈ ಕಾವ್ಯವನ್ನು ಬರೆದಿರಬೇಕೆಂದು ಊಹಿಸುತ್ತಾರೆ.[೨೨]

೨. ಇದಲ್ಲದೆ ಮುಳಿಯ ತಿಮ್ಮಪ್ಪಯ್ಯನವರು 'ಕನ್ನಡ ನಾಡೂ ದೇಶಿ ಸಾಹಿತ್ಯವೂ' ಎಂಬ ಕೃತಿಯ (೧೯೫೪) 'ಕನ್ನಡ ದೇಶಿ ಸಾಹಿತ್ಯದ ಸ್ವರೂಪ' ಎಂಬ ಲೇಖನದಲ್ಲಿ ಕನ್ನಡ ದೇಸಿ ಸಾಹಿತ್ಯದ ಸ್ವರೂಪದ ಕುರಿತ ಚರ್ಚೆಯಿದೆ. ಈ ಲೇಖನದ ಪ್ರತಿಪಾದನೆಗಳು ಹೀಗಿವೆ.

ಕನ್ನಡ ದೇಶಿಯ ಹುಟ್ಟಿನ ಬಗ್ಗೆ ಚರ್ಚಿಸುವ ಮುಳಿಯರು ರಾಷ್ಟ್ರಕೂಟರ ಕಾಲದ ಕವಿರಾಜಮಾರ್ಗದಲ್ಲಿಯ ಉಲ್ಲೇಖಗಳಿಂದ ಬಹು ಹಿಂದಿನಿಂದಲೂ ಕನ್ನಡದಲ್ಲಿ ಮಾರ್ಗ ಸಾಹಿತ್ಯ ಬೆಳೆದುಬಂದಿರಬಹುದೆಂದು ಊಹಿಸುತ್ತಾರೆ. ಕವಿರಾಜಮಾರ್ಗಕಾರನು ಕನ್ನಡಂಗಳೊಳ್ ಎಂದು ಪೂರ್ವಕಾಲದ ಕನ್ನಡದ ಬಹುರೂಪತೆಯ ಬಗ್ಗೆ ಖಚಿತವಾಗಿ ಹೇಳಿರುವುದು ಉತ್ತರೋತ್ತರ ಕನ್ನಡ ನಾಡಾದ ಆ ವಿಂಧ್ಯ ಪ್ರಾಂತದಲ್ಲಿ ದೇಸಿಯಾಗಿದ್ದ ನುಡಿಯೆಂದರೆ ಕನ್ನಡವೇ ಎಂಬುದು ಅವರ ತೀರ್ಮಾನ. ಋಗ್ವೇದ ಕಾಲದಲ್ಲಿ ಬರುವ 'ಬೇಕನಾಟ' ಉಲ್ಲೇಖವು ಈ ದೇಶೀಯ ಪ್ರಬಲ ಜನ ಸಮಾಜದ ವಿವರಣೆಯಾಗಿರಬಹುದು. ಕ್ರಮೇಣ ಅವರೇ ಡೆಕ್ಕನಿನ ಅಥವಾ ದಕ್ಷಿಣಾಪಥದ ಸಮತಳದಿಂದ ಕೆಳಗೆ ನೆಲಸಿ ತಮಿಳ (ದ್ರವಿಡ) ರೆಂದೆನ್ನಿಸಿರಬೇಕು. ಕಱು - ತಳದ ಅನಂತರದ ಕನ್ನಡಿಗರೆನಿಸಿರಬೇಕೆಂದು ಭಾಷೆಯಿಂದಲೂ ಆದಿಜನಾಂಗದಲ್ಲಿ 'ಕನ್' ಅಥವಾ 'ಕಳ್' ಎಂಬುವರೂ ಇದ್ದಂತೆ ತೋರುತ್ತದೆ. ಎಂದೂ ಆ ಕನ್ ಮತ್ತು ನಾಟರು ಬೆರೆತು ಕನ್ನಡಿಗರೆನಿಸಿರಲೂಬಹುದು ಎಂದೂ ಅಭಿಪ್ರಾಯಪಡುತ್ತಾರೆ.

ಮಾನವ ಜನಾಂಗದ ಹುಟ್ಟಿನೊಂದಿಗೆ ಭಾಷೆಯ ಉಗಮವೂ ಆಗಿರಬೇಕೆಂಬುದು ವಸ್ತುಸ್ಥಿತಿ. ಈ ಅವಲೋಕನದಿಂದ ಕನ್ನಡ ದೇಸಿ ಸಾಹಿತ್ಯವು ಹಿಂದೆ ನಿರ್ಧರಿಸಿದ ಪುರಾತನ ಕನ್ನಡನಾಡಾದ ವಿಂಧ್ಯಾವಳೀ ಪ್ರಾಂತದೊಳಗೆ ಯಾವಾಗ ಜನಿಸಿತು ಅದರ ಸ್ವರೂಪ ಆಗ ಹೇಗಿತ್ತು ಎಂದು ಇದುವರೆಗೂ ನಿರ್ಧರಿಸಲಾಗಿಲ್ಲ. ಅದರ ಹೆಸರು ಬೇಕನಾಟ ಅಥವಾ ವೆಂಗಿನಾಡು ಎಂಬುದೇ ಆಗಿತ್ತೆಂದು ಆ ವೆಂಗಿನಾಡಿನ ಮಹಿಮೆ, ವಿದ್ವತ್ತು ಸಂಸ್ಕೃತಿಗಳು ನಮ್ಮ ಕನ್ನಡ ಸಾಹಿತ್ಯದೊಳಗೆ ಬೇಕಾದಷ್ಟು ದೊರಕುತ್ತವೆ. ಅಲ್ಲಿಂದಲೇ ಸರಿದು ಹೋಗಿ ಅಲ್ಲಲ್ಲಿ ನೆಲೆಸಿದ ಮೇಲೆ ತಮಿಳು, ತೆಲುಗು, ಕನ್ನಡಗಳಾಗಿ ಭಿನ್ನಗಳಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದೆ ತಿರುಳ್ಗನ್ನಡ ನಾಡಿನ ಸಂಸ್ಕೃತಿಯೂ ದೇಸಿಯೂ ಎಂಬ ವಿಚಾರವಾಗಿ ಚರ್ಚಿಸಿದ್ದಾರೆ. ದೇಸಿ ಸಾಹಿತ್ಯದಿಂದಲೇ ಮಾರ್ಗ ಸಾಹಿತ್ಯದ ಉದಯವೆಂಬಲ್ಲಿ ಸಂಶಯವಿಲ್ಲ. ಉತ್ತರೋತ್ತರ ಮಾರ್ಗವೆಂಬ ಮೂರನೆಯ ಭೇದವನ್ನು ವಿಭಾಗಿಸಿ ತನ್ನ ಗ್ರಂಥದ ದ್ವಿತೀಯ ಪರಿಚ್ಛೇದದೊಳಗೆ ಉದಾಹರಣೆಯನ್ನು ಮಾರ್ಗಕಾರ ನೀಡಿದ್ದಾನೆ. ಆದ್ದರಿಂದ ಆ ವಿಂಧ್ಯಾವಳಿ ಪ್ರಾಂತದ ಕನ್ನಡ ನಾಡಿನಲ್ಲಿ ಮಾರ್ಗೀಯ ಕನ್ನಡ ಸಾಹಿತ್ಯವೂ ತಲೆದೋರಿದಂತೆ ಸಿದ್ಧವಾಗುತ್ತದೆ. ಅಲ್ಲದೆ ಪ್ರಾಚೀನ ಗ್ರಂಥವಾದ ಗಾಧಸಪ್ತಶತಿಯಲ್ಲಿಯೂ ಪೊಟ್ಟ, ತೀರ, ತುಪ್ಪ, ಪಳ್ಳಿ ಮುಂತಾದ ಅಚ್ಚಗನ್ನಡ ಪದಗಳ ಉಲ್ಲೇಖವಿದೆ.

ಇದರಿಂದ ಅಲ್ಲಿ ಹಲವಾರು ದೇಸಿ ಹಾಡುಗಳು, ಮಟ್ಟಗಳು ಉಂಟಾಗಿರಬೇಕೆಂಬಲ್ಲಿ ಸಂಶಯವಿಲ್ಲ. ಆ ದೇಸಿಗಬ್ಬಿಗರ ಮತ್ತು ನಾಡವರನ್ನು ಕವಿರಾಜಮಾರ್ಗಕಾರ ಮನದಟ್ಟಾಗುವಂತೆ ಬಣ್ಣಿಸಿದ್ದು ಅದಕ್ಕೆ ಪ್ರಥಮ ಪರಿಚ್ಛೇದದ ವಿವರಗಳನ್ನು ಉದಾಹರಿಸಿದ್ದಾನೆ. ಇದರ ಮುಂದಿನ ಚರ್ಚೆಯು ಅವರ ಕವಿರಾಜಮಾರ್ಗ ವಿವೇಕದಲ್ಲಿ

ಬಂದಿರುತ್ತದೆ. ಅಂದು ಸಂಸ್ಕೃತ, ಪ್ರಾಕೃತಕ್ಕಿಂತ ಕನ್ನಡದ ಸ್ಥಿತಿ ಭಿನ್ನವಾಗಿತ್ತು. ಕನ್ನಡಕ್ಕೆ ನಾಡವರೇ ಓವಜರಾಗಿದ್ದರು. ಇದು ಕನ್ನಡ ಸಾಹಿತ್ಯದೊಳಗಿದ್ದ ನ್ಯೂನ್ಯತೆಯನ್ನು ಗ್ರಂಥಕಾರರು ವರ್ಣಿಸಿರುವ ಬಗೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಂತರ ದೇಸಿಗಬ್ಬದ ಒಳಗವಲುಗಳ ಬಗ್ಗೆ ಚರ್ಚಿಸಿದ್ದಾರೆ. ಕವಿರಾಜಮಾರ್ಗಕಾರ ಹಿಂದಿನ ದೇಸಿ ಗಬ್ಬವನ್ನು ಎರಡಾಗಿ ವಿಂಗಡಿಸಿ ನಿರೂಪಿಸಿದ್ದಾನೆ. ಅವೇ ಚೆತ್ತಾಣ, ಬೆದಂಡೆ, ಅತಿ ಪುರಾತನರ ಕಾಲದಲ್ಲಿ ಅವಕ್ಕೆ ಯಾವ ಹೆಸರುಗಳಿದ್ದವು ಎಂಬುದು ತಿಳಿದು ಬಂದಿಲ್ಲ. ಆದರೆ ಕಾವ್ಯಾವಲೋಕನದಲ್ಲಿ ಕ್ರಿ.ಶ. ೧೧೪೫ ರಲ್ಲಿ ಈ ದೇಶಿಗಬ್ಬದ ಸ್ವರೂಪವು ವಿಸ್ತಾರವಾಗಿದ್ದು ಅವುಗಳೆಂದರೆ ೧. ಪದಂ, ೨. ಮೆಲ್ವಾಡು, ೩. ಪಾಡು, ೪. ಪಾಡುಗಬ್ಬಂ, ಮೆಲ್ವಾಡುಂ ಬೆದಂಡೆಗಬ್ಬಮಂ, ಅದರ ಜೊತೆಗೆ ಬಾಜನಗಬ್ಬದ ಬಗ್ಗೆಯೂ ವಿವರಿಸಿದ್ದಾರೆ. ಅದು ಹಿಂದಿನ ದೇಸಿ ದೃಶ್ಯ ಕಾವ್ಯವೆಂದೂ ಈ ಮೇಲಿನವು ದೇಸಿ ಶ್ರವ್ಯ ಕಾವ್ಯವೆಂದೂ ನನ್ನ ಭಾವನೆ ಎಂದು ಹೇಳಿದ್ದಾರೆ. ಮುಂದೆ ಮೇಲಿನ ದೇಸಿ ಗಬ್ಬಗಳ ವಿವರಣೆಯನ್ನು ನೀಡಿದ್ದಾರೆ.

೧. ಪದಂ

ಈ ಪದ ಎಂಬುದರೊಳಗಿರುವುದು ಎರಡೇ ಪದ್ಯವೆಂದು ಅರ್ಥ. ಇದು ದೇಸಿಯಾದುದರಿಂದ ವೃತ್ತ ರೂಪದಲ್ಲಿ ಒಂದಿಷ್ಟು ದೀರ್ಘವಾದ ಅಕ್ಕರ, ಪಿರಿಯಕ್ಕರವೇ ಮೊದಲಾಗಿ ಜಾತಿಯಲ್ಲಿ ಸೇರಿದ ಛಂದೋ ರೀತಿಯೇ ಆಗಿರಬೇಕಲ್ಲದೆ ಸಂಸ್ಕೃತದ ಅಕ್ಷರ ಛಂದಸ್ಸಿನ ವೃತ್ತವಾಗಿರಬಾರದು ಎಂದು ಅಭಿಪ್ರಾಯಪಟ್ಟಿದ್ದಾರೆ. ಮನುಷ್ಯ, ವ್ಯಕ್ತಿಯ ಪಾದ ಸಂಖ್ಯೆಯು ಸಮನಾಗಿ ಎರಡು ಪದ್ಯಗಳಿಂದ ಕೂಡಿದುದು ಎಂಬ ತಾತ್ಪರ್ಯದಲ್ಲಿ ಇದಕ್ಕೆ ಪದ ಎಂಬ ಹೆಸರಾಯಿತೋ ಎಂದು ಸಂದೇಹವಾಗುತ್ತದೆ ಎನ್ನುತ್ತಾರೆ. ಈ ಹೆಸರುಗಳೆಲ್ಲ ಅಚ್ಚಗನ್ನಡವೇ ಆಗಿರುವುದನ್ನು ಗುರುತಿಸಿದ್ದಾರೆ. ಪದಂ ಎಂದರೆ ಹದವೆಡೆದ ನುಡಿಗಳಿಂದ ಕೂಡಿದುದು ಎಂದು ನಿರ್ಧರಿಸಿದ್ದಾರೆ.

೨. ಮೆಲ್ವಾಡು

ಎರಡು ವಿಶಿಷ್ಟ ಪದ್ಯಗಳನ್ನೊಳಗೊಂಡು ರೂಪಿಸಿದ ಪದಗಳು ಮೆಲ್ವಾಡು, ಸಮಸಂಖ್ಯೆಯ ಕಂದಜಾತಿಗಳಿಂದೊಡಗೂಡಿದ ಇಪ್ಪತ್ತುನಾಲ್ಕು ಪದ್ಯಗಳಿರಬೇಕು. ಮೆಲ್ಲಿಯ + ನಾಡು = ಮೆಲ್ವಾಡು ಎಂದು ರೂಪಿಸಿದ ಅಚ್ಚಗನ್ನಡದ ಹೆಸರಿದು.

೩. ಪಾಡು

ಹದಿನೈದು ಮತ್ತು ಇಪ್ಪತ್ತೆರಡು ಪದಗಳು ಸೇರಿ ರಚಿತವಾದ ಪ್ರಬಂಧಕ್ಕೆ ಪಾಡು ಎಂದು ಹೆಸರು. ಪದ ಸಂಖ್ಯಾನುಸಾರವಾಗಿ ಇದರೊಳಗೆ ಎರಡು ಭೇದಗಳಿವೆ. ಆದರೆ ಎರಡಕ್ಕೂ ಪಾಡು ಎಂಬ ಒಂದೇ ಹೆಸರು. ಮೊದಲನೆಯದರಲ್ಲಿ ಮೂವತ್ತು ಪದ್ಯಗಳಿದ್ದರೆ, ಎರಡನೆಯದರಲ್ಲಿ ಐವತ್ತು ಪದ್ಯಗಳಿವೆ.

೪. ಪಾಡುಗಬ್ಬಂ

ಎರಡು-ಮೂರು ಅದಕ್ಕಿಂತಲೂ ಅಧಿಕ ಸಂಖ್ಯೆಯ ಪಾಡುಗಳಿಂದ ಕೂಡಿದುದು ಪಾಡುಗಬ್ಬ ಎಂದಾಯಿತು. ಪಾಡುಗಬ್ಬವು ನೂರ ನೂರೈವತ್ತು ಅಥವಾ ಅದಕ್ಕಿಂತ ಅಧಿಕ ಸಂಖ್ಯೆಯ ಪದ್ಯಗಳಿಂದ ಅಡಕವಾಗಿರಬೇಕು. ಗದುಗಿನ

ಭಾರತ, ಪ್ರಭುಲಿಂಗಲೀಲೆ, ಹರಿಶ್ಚಂದ್ರ ಕಾವ್ಯ, ಮೋಹನ ತರಂಗಿಣಿ, ಮತ್ತು ಭರತೇಶ ವೈಭವ ಮುಂತಾದವು ಹಾಡುಗಬ್ಬಗಳೇ ಆಗಿವೆ. ಅವು ಮಾರ್ಗಕ್ಕೂ ಕೈಗೊಟ್ಟಿವೆ. ಮೇಲಿನ ದೇಸಿಗಬ್ಬಗಳು ಸಂಪೂರ್ಣವಾಗಿ ದೊರೆತಿಲ್ಲ.

ಮುಂದೆ ದೇಸಿಯ ಉಗಮ ಮತ್ತು ಅದರ ಸ್ವರೂಪದ ಬಗ್ಗೆ ಚರ್ಚಿಸಿದ್ದಾರೆ. ಪಂಪ ಮೊದಲಾದ ಕವಿಗಳಲ್ಲಿ ದೇಶಿಯ ಉಲ್ಲೇಖದಿಂದಾಗಿ ಹಿಂದೆ ಉತ್ತಮವಾದ ದೇಸಿ ಪದ್ಧತಿ ಇದ್ದಿರಬಹುದೆಂದು ಊಹಿಸಲಾಗುತ್ತದೆ. ನಾಡಿನ ಸಾರ್ವಜನಿಕವಾದ ಸಂಸ್ಕೃತಿಯ ಸಾರವೆಂದರೆ ದೇಸಿ, ಅದನ್ನು ಯಾವ ಬಗೆಯಲ್ಲೂ ವಿಕೃತಿಗೊಳಿಸಬಾರದು ಮಾರ್ಗಸಾಹಿತ್ಯ, ಲಕ್ಷಣ ಸಾಹಿತ್ಯ ತನ್ನ ಹೊರೆಯನ್ನು ಅದರ ಮೇಲೆ ಬಾಗಿಸಿದರೆ ದೇಸಿಯ ತನ್ನತನ ಮಾಯವಾಗುವುದು. ದೇಸಿಯನ್ನು ಬಳಸಿಕೊಳ್ಳುವುದು ಮಹಾಕವಿಗಳ ಧರ್ಮವೆಂದು ಪಂಪನು ಸಾರಿ ಹೇಳಿದ್ದಾನೆ. ಆದರೆ ನಂತರದ ಕವಿಗಳು ಅತಿಯಾದ ಸಂಸ್ಕೃತ ಬಳಕೆ ಮಾಡಿದ್ದಾರೆ. ಇದರಿಂದ ದೇಸಿ ಅಂಚಿನ ಸ್ಥಿತಿ ತಲುಪಿತು, ಎಂಬುದನ್ನು ನಯಸೇನ ತನ್ನ ಧರ್ಮಾಮೃತದ ಆದಿಯಲ್ಲಿ ಈ ಸಂಸ್ಕೃತದ ಅತಿಕ್ರಮಣವನ್ನು ಖಂಡಿಸಿ ಕವಿಗಳನ್ನು ಎಚ್ಚರಿಸಿದ್ದಾನೆ. ಮಾರ್ಗ ಕೃತಿಯಾದರೂ ಅಲ್ಲಿ ದೇಸಿಗೆ ಹೆಚ್ಚು ಪ್ರಾಮುಖ್ಯತೆ ಇದೆ. ಹಾಲರಾಜನ ಗಾಥಸಪ್ತಶತಿಯಿಂದಲೇ ಅಂದು ವಿಂಧ್ಯಾವಳಿ ಪ್ರಾಂತದ ದೇಶಭಾಷೆ ಪ್ರಾಕೃತವಾಗಿರಲಿಲ್ಲವೆಂಬುದನ್ನು ಉಲ್ಲೇಖದಿಂದ ಸ್ಪಷ್ಟಪಡಿಸಿದ್ದಾರೆ. ಅಲ್ಲದೇ ಅಂದೇ ದೇಸಿಯ ಕಂಪು ಇತ್ತು. ಆದರೆ ರಾಜಸಭೆಗಳಲ್ಲಿ ಆಸರೆಯಿರಲಿಲ್ಲ. ಆದರೆ ಮಹಾಕಾವ್ಯಕ್ಕಿಂತಲೂ ಹೆಚ್ಚಾಗಿ ದೇಸಿ ಸಾಹಿತ್ಯ ಯಾವ ತಡೆ ತೊಡಕಿಲ್ಲದೆ ಹರಿಯುತ್ತಿತ್ತು ಎಂಬ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾನೆ.[೨೩]

ಮುಂದೆ ಕಾವ್ಯದಲ್ಲಿ ಉಲ್ಲೇಖಿತವಾಗಿರುವ ದೇಸಿ ಹಾಡುಗಳ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ಪಂಪನಂತಹ ಮಹಾಕವಿಗಳು ತಮ್ಮ ಕಾವ್ಯಗಳಲ್ಲಿ ಮನೋಹರವಾದ ದೇಶಿಗಳನ್ನು ಬಳಸಿಕೊಂಡಿರುವುದನ್ನು ಉಲ್ಲೇಖಿಸುತ್ತಾರೆ. ಪಂಪಭಾರತದ ಇಂದ್ರಪ್ರಸ್ಥ ನಗರದ ವರ್ಣನಾತ್ಮಕವಾದ ರಗಳೆಯ ದೇಸಿ ಹಾಡಿನ ಭಾಗವನ್ನು ಇಲ್ಲಿ ಉದಾಹರಿಸಿದ್ದಾರೆ. ಅದು ಪಂಪ ಮಹಾಕವಿಯ ಜಾಣ್ಮೆ ಮಾತ್ರವಲ್ಲ. ದೇಸಿಯ ಗುಣವೂ ಹೌದು ಎಂದು ಹೇಳುತ್ತಾರೆ. ಇಲ್ಲಿಯ ರಗಳೆ ಕಾವ್ಯಗಳಲ್ಲಿ ಬರುವ ಮಂದಾನಿಲ, ಲಲಿತ, ಉತ್ಸಾಹಗಳಂತಲ್ಲ, ಅದು ಅವುಗಳಿಗಿಂತ ಹಿಂದಿನದು ತಾಳಕ್ಕನುಗುಣವಾಗಿ ಮಾತ್ರೆಗಳನ್ನು ಅಲ್ಲಿಂದಿಲ್ಲಿಗೆ ತಂದು ಸಡಿಲಿಸಿ ಅಂದರೆ ಲಘು, ಗುರು, ಪ್ಲುತಗಳನ್ನು ಏರ್ಪಡಿಸಿ ಹೆಣೆದುಕೊಂಡು ರಾಗಾನುಸಾರವಾಗಿ ಹಾಡತಕ್ಕದ್ದು. ಈ ರಗಳೆಯಲ್ಲಿ ಆದಿಪ್ರಾಸದ ತೊಡಕಿಲ್ಲ. ಅಂತ್ಯಪ್ರಾಸವೇ ಹಾಡುಗಾರಿಕೆಗೆ ಕಳೆದುಂಬುವ ಜೀವಾಳ, ಕೊನೆಗೆ ಕವಿ ದೇಸಿ ಮಾರ್ಗ-ಪದ್ಧತಿಗಳೆರಡನ್ನೂ ಬೆಸುಗೆಗೊಳಿಸಿದ್ದಾನೆ.

ಪಂಪಾದಿಗಳ ಕಾಲದಲ್ಲಿಯೇ ದೇಸಿ ಮಾರ್ಗದೊಳಗೆ ಬೆರೆತು ತನ್ನ ಅಸ್ತಿತ್ವವನ್ನು ಉಳಸಿಕೊಂಡಿತ್ತು. ಆದರೆ ೧೨ ನೇ ಶತಮಾನದ ಶರಣರ ಕಾಲದಲ್ಲಿ ಹೇಗೆ ಇದುವರೆಗೆ ಮಾರ್ಗದೊಳಗೆ ದೇಸಿ ಜೀವಿಸಿಕೊಂಡಿತ್ತೋ ಹಾಗೆ ಮತ್ತೆ ದೇಸಿಯೊಳಗೆ ಮಾರ್ಗ ಸಾಹಿತ್ಯವು ಮೇಳೈಸಿಕೊಂಡಿರುವ ಕಾಲ. ಮುಂದಿನ ವೈಷ್ಣವ, ಜೈನ ಕವಿಗಳೂ ಇದೇ ಮಾರ್ಗ ಅನುಸರಿಸಿದರು. ಕೇವಲ ಒತ್ತಾಯದಿಂದ ಮಾತ್ರವಲ್ಲ, ಜನರಿಗೆ ದೇಸಿ ಸುಲಭವಾಗಿ ತಿಳಿಯುವಂತಹದು. ಮತ್ತು ಅಂದವಾದುದು. ಜನ್ನನಂತಹ ಮಹಾಕವಿಗಳೂ ಈ ಮಾರ್ಗವನ್ನು ಅನುಸರಿಸಿದರು. ಹಾಗಾಗಿ ಅಂದು ಮಾರ್ಗ ದೇಸಿ ಪ್ರಬಂಧಗಳಿಗೆ ಕ್ರಮವಾಗಿ ವಸ್ತುಕ ವರ್ಣಕ ಕಾವ್ಯಗಳು ಎಂಬ ಹೆಸರುಗಳು ಹೆಚ್ಚು ರೂಢಿಗೆ

ಬಂದಿರುವುದು ತೋರುತ್ತದೆ. ಅದಕ್ಕೆ ರತ್ನಾಕರವರ್ಣಿಯ ಭರತೇಶ ವೈಭವದ ಪದ್ಯವೊಂದರ ಗಾದೆಯನ್ನು ಉದಾಹರಿಸಿದ್ದಾರೆ.

ಪ್ರಾಚೀನದಲ್ಲಿ ಬಳಕೆಯಲ್ಲಿದ್ದ ಅಚ್ಚ ದೇಸಿಯ ಚಿತ್ರವನ್ನು ಕೊಟ್ಟಿದ್ದಾರೆ. ಭರತೇಶ ವೈಭವ ಮತ್ತಿತರ ಕಾವ್ಯಗಳು ಲಕ್ಷಣ / ಮಾರ್ಗವನ್ನು ಸಂಪೂರ್ಣವಾಗಿ ತೊರೆದವುಗಳಲ್ಲ ಹಾಗಾಗಿ ಅವುಗಳನ್ನು ಅಚ್ಚದೇಸಿ ಎಂದು ಕರೆಯಲಾಗದು. ಕೊರವಂಜಿ ಹಾಡು, ಜೋಗುಳ ಹಾಡು, ಒನಕೆ ಹಾಡು, ಏಕವಾಡು ಮೊದಲಾದ ನಾನಾ ಬಗೆಯ ಅಚ್ಚದೇಶಿ ಹಾಡುಗಳು ನಾಡಿನೊಳಗೆ ಈಗಲೂ ಹಾಸುಹೊಕ್ಕಾಗಿವೆ. ಈ ಅಚ್ಚದೇಸಿಗೆ ಉದಾಹರಣೆಯಾಗಿ ಉತ್ತರ ಕನ್ನಡದ ಚಂದಾವರೆಯ ಕವಿ ಸೋಮನಾಥನ ೧೧೦ ಪದ್ಯಗಳ ಹಾಡಿನ ಪುಸ್ತಕವೊಂದರ ಉದಾಹರಣೆ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಅಚ್ಚಗನ್ನಡ ಕಾವ್ಯ ಪರಂಪರೆ ಎಂಬುದನ್ನು ದೇಶೀ ಸಾಹಿತ್ಯ ಎಂದು ಪರಿಗಣಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ.[೨೪]

೩. ಡಾ.ಕೆ.ವಿ.ನಾರಾಯಣ ಅವರು ಮುಳಿಯ ತಿಮ್ಮಪ್ಪಯ್ಯನವರ ಕೃತಿಗಳ ಛಂದಸ್ಸು ಮತ್ತು ಶೈಲಿ ಎಂಬ ಲೇಖನವನ್ನು ಬರೆದಿದ್ದಾರೆ.[೨೫]

ಛಂದಸ್ಸಿನ ಬಗೆಗೆ ಪ್ರಸ್ತಾಪಿಸುತ್ತ ನಾರಾಯಣ ಅವರು ಬರಹಗಾರ ತನ್ನ ಭಾಷೆಯ ಬಳಕೆಯಲ್ಲಿ ಆ ಭಾಷೆಗೆ ಅಂತರ್ಗತವಲ್ಲದ ಹೊರಗಿನ ನಿಯಮಗಳ ಮೂಲಕ ಹಾಕಿಕೊಳ್ಳುವ ಕಡಿವಾಣವೇ ಛಂದಸ್ಸು ಎಂದು ಹೇಳುತ್ತಾರೆ. ಇದು ಅವನು ತೆಗೆದುಕೊಳ್ಳುವ ಸ್ವಾತಂತ್ರ್ಯ ಅನುಸರಿಸುವ ಮಾರ್ಗಾಂತರ ಬಯಸುವ ಬಿಡುಗಡೆಗಳಿಗೆ ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡುತ್ತದೆ, ಹೀಗೆ ಭಾಷೆಯ ಬಳಕೆಯಲ್ಲಿರುವ ಬಿಡುಗಡೆ ಕಟ್ಟುಪಾಡುಗಳ ನಡುವೆ ನಿರ್ಮಾಣಗೊಳ್ಳುವ ತಾತ್ಕಾಲಿಕ ಸಮತೋಲನವೇ ಭಾಷಿಕ ನೆಲೆಯಲ್ಲಿಯೇ ಚರ್ಚಿತವಾಗಬೇಕಾದ ಪರಿಕಲ್ಪನೆಗಳಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಛಂದಸ್ಸು, ಶೈಲಿಗಳು ಕಾಲದೇಶಬದ್ಧ ಪರಿಕಲ್ಪನೆಗಳು. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಕವಿಗಳ ಆಯ್ಕೆಯ ಭಾಷಾ ಪ್ರಭೇದಕ್ಕನುಗುಣವಾಗಿ ಛಂದೋರೂಪಗಳಲ್ಲೂ ಬದಲಾವಣೆ ಆಗಿರವುದನ್ನು ಕಾಣುತ್ತೇವೆ. ಅಕ್ಷರ ಛಂದಸ್ಸು ಹಾಗೂ ಹಳಗನ್ನಡ ಜೋಡಿ ಒಂದೆಡೆಯಾದರೆ, ಆಡುಗನ್ನಡದ ಒಳಗಿನ ರಾಚನಿಕ ಒತ್ತಾಯಗಳಿಗೆ ಅನುಗುಣವಾಗಿ ಅಂಶಛಂದಸ್ಸು ಬಳಕೆಯಾಗುವುದು ಮತ್ತೊಂದೆಡೆ ಕಾಣುತ್ತೇವೆ. ಇದೇ ಮಾದರಿಯ ಸಮಸ್ಯೆ ನವೋದಯ ಕಾಲದ ಎರಡನೆಯ ಕಾಲಘಟ್ಟದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಸಾಹಿತ್ಯದ ಚಟುವಟಿಕೆಗಳು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಳ್ಳಲು ಅನುವಾದದ್ದನ್ನು ಕಾಣುತ್ತೇವೆ. ಈ ಪ್ರಕ್ರಿಯೆ ಸಾಹಿತ್ಯದ ಭಾಷೆಗೂ ವಿಸ್ತರಿಸುತ್ತದೆ. ಕನ್ನಡ ನವೋದಯದ ಕರಾವಳಿ ಶಾಖೆ ಸಾಹಿತ್ಯದ ಭಾಷೆಗಾಗಿ ಪ್ರಾದೇಶಿಕ ವೈಶಿಷ್ಟ್ಯಗಳ, ಆಡುಮಾತಿನ ಮಾದರಿಯ ಮೊರೆಹೋಗುವ ಬದಲಾಗಿ ಬಳಕೆ ತಪ್ಪಿದ ಕನ್ನಡದ ಹಳೆಯ ರೂಪವೊಂದನ್ನು ಮರಳಿ ಬಳಸಲು ಸನ್ನದ್ಧವಾಯಿತು. ಮುದ್ದಣ್ಣ, ಗೋವಿಂದ ಪೈ, ಕಡೆಂಗೋಡ್ಲು, ಮುಳಿಯ ಹಾಗೂ ಕೊಂಚಮಟ್ಟಿಗೆ ಪಂಜೆ ಇವರೆಲ್ಲರ ಕವಿತೆಯ ಭಾಷೆ ಇದಕ್ಕೆ ಪುರಾವೆಯಾಗಿದೆ. ಇವರೆಲ್ಲರು ಬಳಸಿದ ಕನ್ನಡ ಖಂಡಿತಾ ಹಳಗನ್ನಡವಲ್ಲ. ಹಳಗನ್ನಡದ ತೋರಿಕೆಯ ರಚನೆಗಳು ಇದ್ದರೂ ಎಷ್ಟೋ ಶಾಬ್ದಿಕ ರೂಪಗಳು ನಡುಗನ್ನಡದವು. ವಾಕ್ಯರಚನೆಯ ಎಷ್ಟೋ ನಿರ್ಬಂಧಗಳು ಹೊಸಗನ್ನಡವು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂದುವರಿದು ಅವರು ಸೊಬಗಿನಬಳ್ಳಿಯು ಆಂಡಯ್ಯನಿಗೆ ಕಥಾವಸ್ತು ಹಾಗೂ ಭಾಷೆ ಎರಡರಲ್ಲೂ ಉತ್ತರಾಧಿಕಾರಿಯಾಗುವ ನೆಲೆಯನ್ನು ಹೊಂದಿದೆ. ಇಲ್ಲಿ ಸಂಸ್ಕೃತದ ಪದಗಳನ್ನು, ಸಮಾಸಗಳನ್ನು ಕನ್ನಡದಲ್ಲಿ ಬೆರಸದೆ ಕೃತಿಯ ಭಾಷೆಯನ್ನು ರೂಪಿಸಲು ತೊಡಗಿದ್ದಾರೆ. ಬಳಕೆಯಾಗಿರುವ ಕನ್ನಡದಲ್ಲಿ ಹಳಗನ್ನಡದ ರೂಪಗಳು, ನಡುಗನ್ನಡದ ರಚನೆಗಳು ಬೆರೆತಿವೆ. ಆದರೆ ಅದು ಸಮಕಾಲೀನ ಬಳಕೆಗನ್ನಡವಲ್ಲ, ಈ ಬಗೆಯ ಮಾದರಿಯ ಆಯ್ಕೆಯಿಂದಾಗಿ ಕಾವ್ಯದಲ್ಲಿ ಅನೇಕ ಸಮಸ್ಯೆಗಳು ಉಂಟಾಗಿವೆ ಎಂದೂ ಅಂತಹ ಸಮಸ್ಯೆಗಳ ಪರಾಮರ್ಶೆಯನ್ನೂ ಮಾಡಿದ್ದಾರೆ.

ನಾರಾಯಣ ಅವರ ಪ್ರಕಾರ ಕನ್ನಡದಲ್ಲಿ ಕಾವ್ಯ ಭಾಷೆಯ ಒಂದು ಮುಖ್ಯ ಲಕ್ಷಣವೆಂದರೆ ಕನ್ನಡ ಪದ ಕೋಶದೊಂದಿಗೆ ಅನ್ಯದೇಶ್ಯಪದಕೋಶವನ್ನು ಬೆರಸಿ ರಚಿಸಿದ ವಾಕ್ಯಗಳಲ್ಲಿನ ವೈಸಾದೃಶ್ಯವನ್ನೇ ತನ್ನ ಒಂದು ಗುಣಾತ್ಮಕ ಅಂಶವನ್ನಾಗಿ ರೂಢಿಸಿಕೊಂಡಿರುವುದು. ಆದ್ದರಿಂದಲೇ ಅನ್ಯದೇಶ್ಯ ಪದಗಳಿರಲಿ, ಅತಿ ದೀರ್ಘಸಮಾಸಗಳನ್ನು ಕನ್ನಡದ ವಾಕ್ಯಗಳಲ್ಲಿ ಬೆರೆಸಲು ಕೂಡ ನಮ್ಮ ಕವಿಗಳು ಹಿಂಜರಿದಿಲ್ಲ. ಹಾಗೆ ಬಳಸಿದ ಸಂಸ್ಕೃತದ ಪದ, ಸಮಾಸಗಳು ಒಟ್ಟು ಕನ್ನಡದ ಚೌಕಟ್ಟಿನಲ್ಲಿ ಪಡೆಯುವ ಸಾಂದರ್ಭಿಕತೆಯೇ ಮುಖ್ಯವಾಗುತ್ತದೆ. ಈ ಅಂಶವನ್ನು ಮರೆತರೆ ಅಚ್ಚಕನ್ನಡದ ಬೆನ್ನು ಹತ್ತುವದಾಗುತ್ತದೆ. ಇಲ್ಲಿಯೂ ಮುಳಿಯರು ಪ್ರಾಕೃತದ ಪದಗಳನ್ನು ಬಹಿಷ್ಕರಿಸುವುದಿಲ್ಲವೆಂಬುದನ್ನು ಗಮನಿಸಿದಾಗ ಪರ್ಯಾಯ ಪದಕೋಶವೊಂದನ್ನು ಬಳಸಿ ಸಂಸ್ಕೃತದ ನೆರವನ್ನು ಕಳೆಯುವ ಯತ್ನ, ಆದರೆ ಪರ್ಯಾಯ ಪದಕೋಶ ಸಂಸ್ಕೃತ ಪದಕೋಶಕ್ಕಿಂತ ಹೇಗೆ ಯುಕ್ತವಾದುದು ಎಂಬುದು ಪ್ರಬಂಧಕಾರರ ಮುಖ್ಯ ಪ್ರಶ್ನೆಯಾಗಿದೆ.

ಮತ್ತೊಂದು ದಿಕ್ಕಿನಿಂದ ಈ ಭಾಷಿಕ ಸಮಸ್ಯೆಯನ್ನು ಅವರು ಎತ್ತುತ್ತಾರೆ. ಸಂಸ್ಕೃತ ಪದಗಳಿಗೆ ಬದಲಾಗಿ ಬಳಸಲಾದ ಅಚ್ಚಗನ್ನಡದ ಪದಗಳು ಯಾವಾಗಲೂ ಕನ್ನಡದ ಪದರಚನೆಯ ನಿಯಮಗಳನ್ನು ಅನುಸರಿಸುತ್ತವೆ ಎನ್ನುವಂತಿಲ್ಲ ಎನ್ನುತ್ತಾರೆ. ಮುಳಿಯರು 'ಸೊಬಗಿನಬಳ್ಳಿ'ಗೆ ಬರೆದಿರುವ ಮುಮ್ಮಾತಿನ ಸಮಸ್ಯೆಯನ್ನು ಮೊದಲಿಗೆ ನಾರಾಯಣರು ಚರ್ಚಿಸುತ್ತಾರೆ. ಮುಳಿಯರು ಸಂಸ್ಕೃತ ಪದಗಳಿಗೆ ಬದಲಾಗಿ ಪರ್ಯಾಯ ಪದಕೋಶವೊಂದನ್ನು ರಚಿಸುವಾಗ ಎದುರಾಗುವ ಸಮಸ್ಯೆಯದು. ಇದು ಮುಳಿಯರು ಪ್ರಾಕೃತದ ನೆರವನ್ನು ಪಡೆಯುವುದು ಯುಕ್ತವೇ ಎಂಬುದೇ ಆ ಸಮಸ್ಯೆ. ಆಗೆಯೇ ಸಂಸ್ಕೃತದ ಬದಲಾಗಿ ರಚನೆಯಾದ ಅಚ್ಚಗನ್ನಡ ಪದಗಳು ಕನ್ನಡ ಪದರಚನೆಗನುಗುಣವಾಗಿರುವುದಿಲ್ಲ. (ಉದಾ: ಸಿರಿಯರಸ ಇಲ್ಲಿ ಅನುವಾದ ಮತ್ತು ಸಂಸ್ಕೃತ ಪದರಚನೆಯ ನಿಯಮಗಳಿವೆ. ಎಂಬುದು ಅವರ ಅಭಿಪ್ರಾಯ) ಎಂದು ನಾರಾಯಣರು ಅಚ್ಚಗನ್ನಡದಲ್ಲಿಯೂ ಸಂಸ್ಕೃತ ಪದರಚನೆಯೇ ಕದ್ದಡಗಿದೆ ಎಂಬುದಾಗಿ ತರ್ಕಿಸುತ್ತಾರೆ.

ಭಾಗ ಒಂದರ ಮೊದಲ ಚೌಪದಿಯಲ್ಲಿ ನಾಮಪದದ ಬಗ್ಗೆ ಅವರು ಚರ್ಚಿಸಿದ್ದಾರೆ. 'ಸಿರಿಯರಸ' ಈ ಪದರಚನೆಗೆ ಸಂಬಂಧಿಸಿದಂತೆ ಈ ರೀತಿಯಾಗಿ ವಿವರಿಸಿದ್ದಾರೆ. ೧. ಇದು ಅನುವಾದದಿಂದಲೂ ೨. ಸಂಸ್ಕೃತ ಪದರಚನೆಯ ನಿಯಮಗಳನ್ನು ಬಳಸುವುದರಿಂದಲೂ ಈ ಬಗೆಯ ಪದರಚನೆ ಸಾಧ್ಯವಾಗುತ್ತದೆ. ಇಂಥ ಎಷ್ಟೋ ರಚನೆಗಳು ಈ ಕೃತಿಯ ಉದ್ದಕ್ಕೂ ಇವೆ. ಇದರಿಂದ ಅಚ್ಚಗನ್ನಡದ ರಚನೆಗಳ ನೆಲೆಗಟ್ಟಿನಲ್ಲಿ ಸಂಸ್ಕೃತ ಪದರಚನೆ ಕದ್ದಡಗಿದಂತಾಗಿದೆ. ಇದನ್ನು ಆಕ್ಷೇಪವಾಗಿ ಹೇಳದೆ ಮುಳಿಯರು ಮಾಡಿದ ಭಾಷಿಕ ಆಯ್ಕೆಯ ಲಕ್ಷಣವೆಂದು ಹೇಳಲಾಗಿದೆ.

ಕಾವ್ಯದ ಮುಗುಳುಗಳು ಕ್ರಮವಾಗಿ ಚೌಪದಿ, ಶರಷಟ್ಪದಿ, ಕುಸುಮ ಚೌಪದಿ, ಲಲಿತರಗಳೆ, ಸಾಂಗತ್ಯ, ಮಂದಾನಿಲರಗಳೆ, ಕುಸುಮ ಷಟ್ಪದಿಗಳಲ್ಲಿವೆ. ಪ್ರಧಾನವಾಗಿ ಮಾತ್ರಾಲಯವನ್ನು ಪೂರಕವಾಗಿ ಅಂಶಲಯವನ್ನು ಬಳಸುವೆಡೆ ಒಲವಿದೆಯೆಂದಾಗುತ್ತದೆ. ಈ ಛಂದೋರೂಪಗಳ ಆಯ್ಕೆಯೇ ಭಾಷಿಕವಾಗಿ ಕೆಲವು ನಿರ್ಬಂಧಗಳನ್ನು ತರುತ್ತದೆ. ಹಳಗನ್ನಡದ ರೂಪಗಳು ಅಕ್ಷರ ಛಂದೋಬಂಧಗಳಿಗೆ ಒಗ್ಗುವ ಕ್ರಮದಲ್ಲಿಯೇ ಮಾತ್ರಾಗಣ ಘಟಿತ ಹಾಗೂ ಅಂಶಲಯಬದ್ಧ ಬಂಧಗಳಿವೆ. ನಡುಗನ್ನಡದ ಧ್ವನಿ ರೂಪಗಳು ಒಗ್ಗುತ್ತವೆ. ನಡುಗನ್ನಡದ ಪ್ರತ್ಯಯಗಳ ಪದಾಂತ್ಯಗಳ ಸ್ವರಾಂತ್ಯ ಲಕ್ಷಣ ಹಾಗೂ ಪ್ರತ್ಯಯಗಳ ಮುಕ್ತ ಪ್ರಸಾರದ ಉಪಾಕೃತಿಗಳು ಅಂಶಗಣ ಮತ್ತು ಮಾತ್ರಾಗಣಗಳನ್ನು ನಿರ್ವಹಿಸಲು ನೆರವಿಗೆ ಬರುತ್ತದೆ. ಮುಳಿಯರು ಹಳಗನ್ನಡ ಹಾಗೂ ನಡುಗನ್ನಡ ರೂಪಗಳೆರಡನ್ನೂ ಅಂದರೆ ವ್ಯಂಜನಾಂತ ಹಾಗೂ ಸ್ವರಾಂತ ರೂಪಗಳನ್ನು ಬೇಕಾದ ಹಾಗೆ ಬಳಸುವ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದಾರೆ.

ಮುಳಿಯರು ಈ ಕಾವ್ಯದಲ್ಲಿ ಬಳಸಿದ ಛಂದಸ್ಸು ಆಧುನಿಕವಾದುದಾದರೂ ಭಾಷಾರೂಪಗಳಲ್ಲಿನ ಆಯ್ಕೆ ತಂದಿರುವ ಸಂದಿಗ್ಧತೆಯೂ ಗಮನಾರ್ಹವಾಗಿದೆ. ಅವರ ರಚನೆಯಲ್ಲಿ ಪಾದದ ಕೊನೆಯ ಛಂದೋಗತಿಯಲ್ಲಿ ನಿಲುಗಡೆ ಇದ್ದರೂ ಭಾಷಿಕವಾಗಿ ಮುಂದಿನ ಸಾಲಿಗೆ ದಾಟದೆ ಗತ್ಯಂತರವಿಲ್ಲ ಹೀಗೆ ಹಳಗನ್ನಡದ ರೂಪಗಳಿಗೆ ಕಟ್ಟುಬಿದ್ದಿದ್ದಾರೆ. ಹಾಗೆಂದು ಕಟ್ಟುನಿಟ್ಟಾಗಿ ಹಳಗನ್ನಡ ರೂಪಗಳೇ ಉಳಿದಿವೆ ಎಂದೂ ಹೇಳುವಂತಿಲ್ಲ. ನಡುಗನ್ನಡದ ರೂಪಗಳೂ ಬಳಕೆಯಾಗಿವೆ. 'ಸೊಬಗಿನ ಬಳ್ಳಿ'ಯ ಉದ್ದಕ್ಕೂ ಇಂಥ ಶೈಲಿಯ ಇಕ್ಕಟ್ಟುಗಳು ಎದ್ದು ಕಾಣುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇನ್ನು ಕೃತಿಯಲ್ಲಿ ಬಳಸಿರುವ ಛಂದೋಬಂಧಗಳ ಔಚಿತ್ಯದ ಪ್ರಶ್ನೆಯನ್ನು ಪರಿಗಣಿಸಿದರೆ ವಸ್ತು, ವಿನ್ಯಾಸ, ಭಾವಗಳ ದೃಷ್ಟಿಯಿಂದ ಯಾವ ಮಹತ್ವವೂ ಇಲ್ಲ. ಚಂಪೂ ಕವಿಗಳಿಗೆ ಗದ್ಯ ಪದ್ಯಗಳ ಮಿಶ್ರಣದೊಂದಿಗೆ ಪದ್ಯದಲ್ಲೂ ಹಲವು ವೃತ್ತಗಳಲ್ಲಿ ಆಯ್ಕೆಯ ಸಾಧ್ಯತೆ ಇತ್ತು. ದೇಸೀ ಬಂಧಗಳಲ್ಲಿ ಒಂದೇ ಛಂದೋಬಂಧವನ್ನು ಕೃತಿಯ ಉದ್ದಕ್ಕೂ ಬಳಸುವ ಪ್ರವೃತ್ತಿ ಬಂದಾಗಲೂ ಹಲವರು ವಿವಿಧ ದೇಸಿ ಬಂಧಗಳನ್ನು ಬೆರೆಸುವ ಯತ್ನದಲ್ಲಿ ತೊಡಗಿದರು. ಕುಮುದೇಂದುವಿನ ರಾಮಾಯಣ ಇದಕ್ಕೊಂದು ಉದಾಹರಣೆ. ಮುಳಿಯರೂ ಇಂಥ ಪ್ರಯೋಗ ಮಾಡುತ್ತಿರುವುದಕ್ಕೆ ಕಾರಣಗಳು ಬೇರೆ ಇರುವಂತಿದೆ. ಅವರು ತಮಗೆ ವಿಶಿಷ್ಟವಾದ ಲಯವೊಂದನ್ನು ಹುಡುಕುತ್ತಿರುವಂತೆ ಕಾಣುತ್ತದೆ. ಐದು ಮಾತ್ರೆಯ ಲಯದ ವಿವಿಧ ಮಾದರಿಗಳನ್ನು ಈ ಕೃತಿಯಲ್ಲಿ ಬಳಸಲು ಯತ್ನಿಸಿದ್ದಾರೆ. ಪದಾಂತ್ಯದ ಗಣವನ್ನು ಮೂರು ಇಲ್ಲವೇ ನಾಲ್ಕು ಮಾತ್ರೆಗಳಿಗೆ ನಿಲ್ಲಿಸುವ ಪ್ರಯೋಗದ ಜೊತೆಗೆ ಕುಸುಮ ಚೌಪದಿಯಲ್ಲಿ ಐದೈದು ಮಾತ್ರೆಯ ಗಣಗಳನ್ನು ನಿಯತವಾಗಿ ಬಳಸಿದ್ದಾರೆ. ಇಂಥ ಓಟದಲ್ಲಿ ಪದಾಂತ್ಯದ ಗಣದಲ್ಲಿ ಸಾಲು ನಿಲುಗಡೆಗೆ ಬರದೆ ಮುಂದಿನ ಸಾಲಿಗೆ ದಾಟುತ್ತದೆ. ಇದಕ್ಕಾಗಿ ಪದವಿಚ್ಛೇದನ ಮಾಡಿರುವುದನ್ನು ನೋಡಬಹುದು. ಜೊತೆಗೆ ಆದಿಪ್ರಾಸದ ನಿಯಮವೂ ಇದೆ. ಇದರಿಂದ ಅವರ ಕುಸುಮ ಚೌಪದಿ ಐದು ಮಾತ್ರೆಯ ಏಳು ಗಣಗಳ ಸಾಲುಳ್ಳ ದ್ವಿಪದಿಯಂತೆ ಕಾಣುತ್ತದೆ. ಎರಡನೆಯ ಸಾಲಿನಿಂದ ಪದ ವಿಚ್ಛೇದವಾಗಿ ಮೂರನೆಯ ಸಾಲಿಗೆ ಹರಿಯುವುದು ಈ ಚೌಪದಿಗಳಲ್ಲಿ ಕಾಣುವುದಿಲ್ಲವಾದ್ದರಿಂದ ಇವುಗಳನ್ನು ದ್ವಿಪದಿಗಳೆಂದು ಕರೆಯಲು ಹೆಚ್ಚಿನ ಸಮರ್ಥನೆ ದೊರಕುತ್ತದೆ.

ಐದು ಮಾತ್ರೆಯ ಲಯದ ಬಂಧದಲ್ಲಿ ನಡೆಸಿದ ಪ್ರಯತ್ನಗಳು ಒಂದೆಡೆಯಾದರೆ ಇನ್ನೊಂದೆಡೆ ಮುಕ್ತ ಬಂಧವನ್ನು

ಈ ಕೃತಿಯ ಒಂದು ಭಾಗದಲ್ಲಿ ಬಳಸಿರುವುದನ್ನು ನೋಡಿದರೆ ಮುಳಿಯರಿಗೆ ಆಧುನಿಕ ಸಮಕಾಲೀನ ರಚನೆಗಳಿಗೆ ಓದುಬಂಧಗಳಿಗೆ ಮಾತ್ರಾಲಯದ ಓಟದ ಅನಿವಾರ್ಯವು ಮನವರಿಕೆಯಾಗಿರಬೇಕೆಂದು ತೋರುತ್ತದೆ. ದೇಸಿಯ ಅಚ್ಚಗನ್ನಡದ ಭಾಷಿಕ ನೆಲೆಗಳನ್ನು ಎತ್ತಿ ಹಿಡಿಯುತ್ತ ಇನ್ನೊಂದೆಡೆ ಅಷ್ಟು ದೇಶೀಯವಲ್ಲದ, ಅಂಶಲಯದಷ್ಟು ಮಾತ್ರಾಲಯವನ್ನು ಆಶ್ರಯಿಸಿರುವುದರ ಮೂಲಕವೇ ಮುಳಿಯರ ಶೈಲಿಯು ನಿರ್ಮಾಣಗೊಳ್ಳಲು ತವಕಿಸುತ್ತಿರುವಂತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಕೃತಿಯಲ್ಲಿ ಮುಳಿಯರು ಐದು ಮಾತ್ರೆಯ ನಿಯತಲಯಕ್ಕೆ ಬಂದು ನಿಂತಿದ್ದಾರೆ. ಸೊಬಗಿನ ಬಳ್ಳಿಯ ಭಾಷಿಕ ನಿಲುವುಗಳನ್ನು ಕೊಂಚ ಸಡಿಲಿಸಿದ್ದಾರೆ. ಹಾಗಾಗಿ ಈ ಲಯದ ಗತಿ ಹೆಚ್ಚು ಸರಾಗವಾಗಿದೆಂಬುದಕ್ಕೆ ಪದ್ಯವನ್ನು ಉಲ್ಲೇಖಿಸಿದ್ದಾರೆ.[೨೬]

ನವೋದಯ ಕಾಲಘಟ್ಟದಲ್ಲಿ ಕಾಣಬರುವ ಕೊಳಂಬೆಯವರ ಜೀವನ, ಸಾಹಿತ್ಯದ ಬಗ್ಗೆ ಚರ್ಚೆಗಳು ನಡೆದಿರುವುದು ವಿರಳ. ಅದರಲ್ಲಿ ಎನ್. ರಾಮಚಂದ್ರರ ಲೇಖನ ಪ್ರಮುಖವಾದುದು. ಸಂಕ್ಷಿಪ್ತವಾಗಿಯಾದರೂ ಅವರ ಎಲ್ಲ ಕೃತಿಗಳ ವೈಶಿಷ್ಟ್ಯತೆಯನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

ಕೊಳಂಬೆಯವರ ಕಾಲೂರ ಚೆಲುವೆಯಲ್ಲಿ ದೇಶೀಯ ವಸ್ತು, ದೇಶೀಯ ಭಾಷೆ, ದೇಶೀಯ ಛಂದಸ್ಸುಗಳ ಸಂಗಮವನ್ನು ಕಾಣಬಹುದು. ಗಂಡು ಹೆಣ್ಣಿನ ಭಗ್ನ ಪ್ರೇಮದ ದುರಂತ ಕತೆಯನ್ನು ಕಾವ್ಯದಲ್ಲಿ ಹೇಳಿದ್ದಾರೆ. ಈ ಕಥನ ಕವನದ ಸೊಗಸಿರುವುದು ಕಾವ್ಯದಲ್ಲಿ ಕಂಡುಬರುವ ವಿವಿಧ ವರ್ಣನೆಗಳಲ್ಲಿ, ನುಡಿಗಟ್ಟು, ನಾಣ್ನುಡಿಗಳಲ್ಲಿ ಅಚ್ಚಗನ್ನಡದಲ್ಲಿಯೇ ರಚಿಸುವ ತಮ್ಮ ಪ್ರಯತ್ನವನ್ನು ಕೊಳಂಬೆಯವರು ಪ್ರಜ್ಞಾಪೂರ್ವಕವಾಗಿಯೇ ಮಾಡಿರುವುದು ಅವರು ಬಳಸಿರುವ ಪದ ಸಂಪತ್ತಿನಿಂದಲೇ ತಿಳಿಯಬಹುದು. ಕನ್ನಡ ನುಡಿಯೇ ಕಾವ್ಯ ರಚನೆಗೆ ಸಮೃದ್ಧವಾದ ಶಬ್ದ ಸಂಪತ್ತನ್ನು ಒದಗಿಸುವಾಗ ಬೇರೆ ಭಾಷೆಯ ಪದಗಳ ಅಗತ್ಯವಿಲ್ಲ. ದೇಶ ಭಾಷೆಯ ಪದಗಳಿಂದಲೇ ಸುಂದರವಾದ ಕಾವ್ಯ ರಚಿಸಲು ಸಾಧ್ಯವೆಂಬ ಅವರ ನಿಲುವು ಪದ್ಯಗಳಿಂದ ತಿಳಿದುಬರುವುದು ಎಂದು ರಾಮಚಂದ್ರ ಅವರು ಚರ್ಚಿಸಿದ್ದಾರೆ.[೨೭]

ಈ ಸಮೀಕ್ಷೆಯಿಂದ ವಿವರವಾಗಿ ಸ್ಪಷ್ಟವಾಗುವಂತೆ ಅಚ್ಚಗನ್ನಡ ಕಾವ್ಯಗಳ ಬಗೆಗೆ ಗಂಭೀರವಾದ ಅಧ್ಯಯನಗಳು ನಡೆದಿಲ್ಲ. ಅಚ್ಚಗನ್ನಡ ಕಾವ್ಯ ಪರಂಪರೆಯ ಹಾಗೆ ಈ ಕುರಿತ ಅಧ್ಯಯನಗಳೂ ಅಲಕ್ಷಿತ ಕ್ಷೇತ್ರಗಳಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಅಚ್ಚಗನ್ನಡ ಕಾವ್ಯಗಳ ಕುರಿತ ನಿರ್ದಿಷ್ಟವಾದ ಚರ್ಚೆಯಾಗಿದೆ.

❐

ಅಧ್ಯಾಯ - ೩

ಅಚ್ಚಗನ್ನಡದ ಪರಿಕಲ್ಪನೆ

ಭಾಗ - ೧

ಅಚ್ಚಗನ್ನಡ ಎನ್ನುವ ಪರಿಕಲ್ಪನೆಯಲ್ಲಿ ಮತ್ತೆ ಮತ್ತೆ ಕೆಲವು ಪ್ರಮುಖ ಪರಿಭಾಷೆಗಳು ಚರ್ಚೆಯಾಗುತ್ತವೆ. ಇವುಗಳಿಲ್ಲದೆ ಈ ಅಚ್ಚಗನ್ನಡ ಪರಿಕಲ್ಪನೆಯ ಬಗೆಗೆ ವಿವರಿಸುವುದು ಸಾಧ್ಯವಿಲ್ಲ. ತತ್ಸಮ, ತದ್ಭವ, ದೇಶ್ಯ ಸಮಸಂಸ್ಕೃತ, ಅಪಭ್ರಂಶ ಮತ್ತು ಪ್ರಾಕೃತಗಳೇ ಆ ಮುಖ್ಯ ಪರಿಭಾಷೆಗಳು. ಇವುಗಳನ್ನು ಕೆಳಗೆ ವಿವರಿಸಲಾಗಿದೆ.

ವಯಾಕರಣಿಗಳು - ಕನ್ನಡ ಭಾಷೆಯ ಶಬ್ದಕೋಶವನ್ನು ಈ ಕೆಳಗಿನಂತೆ ವಿಂಗಡಿಸಿದ್ದಾರೆ.

ಕಶಿರಾಜ ಮಾರ್ಗಕಾರ	-	ಸಮಸಂಸ್ಕೃತ
ನಾವರ್ಮ	-	ಸಮಸಂಸ್ಕೃತ, ದೇಶ್ಯ, ಅಪಭ್ರಂಶ
ಕೇಳಿರಾಜ	-	ಸಮಸಂಸ್ಕೃತ, ಅಪಭ್ರಂಶ, ತತ್ಸಮ, ದೇಶ್ಯ
ಭಟ್ಟಾಕಳಂಕ	-	ತತ್ಸಮ, ತದ್ಭವ, ದೇಶ್ಯ
ಆಧುನಿಕ ವಯಾಕರಣಿಗಳು	-	ತತ್ಸಮ, ತದ್ಭವ, ದೇಶ್ಯ

ಈ ಒಟ್ಟು ವಿಂಗಡಣೆಯಲ್ಲಿ ಸಮಸಂಸ್ಕೃತ, ತತ್ಸಮ, ತದ್ಭವ ಹಾಗೂ ದೇಶ್ಯ ಪ್ರಭೇದಗಳೇ ಪ್ರಧಾನವಾಗಿ ಕಂಡುಬರುತ್ತವೆ. ಅವು ಅಚ್ಚಗನ್ನಡಕ್ಕೆ ಸಂಬಂಧಿಸಿದ ಪರಿಭಾಷೆಗಳೂ ಆಗಿವೆ. ಇನ್ನುಮುಂದೆ ಅವುಗಳ ಕುರಿತು ವಿವರಣೆ ನೀಡಲಾಗಿದೆ.[೧]

೧. ತದ್ಭವ : ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ತದ್ಭವಕ್ಕೆ ಸಂಬಂಧಿಸಿದ ಪದ್ಯಗಳು ಹೀಗಿವೆ.

ಈಕ್ಷಿಸಿ ಶಿಕ್ಷಾಸೂತ್ರದ
ಲಕ್ಷಣಮಂ ಲೋಕರೂಢಿ ಕಿಡಿದವೊಲಜೆವರ್
ಲಕ್ಷಿಪುದು ನುಡಿಗಳೊಳ್ ಬಹು
ಲಾಕ್ಷೇಪಣಮಿಲ್ಲದಿರೆಯುಮಜೆವುದು ಕೆಲವಂ

ಸಕ್ಕದದ ತದ್ಭವಂಗಳ
ಲಕ್ಕಣಮಂ ಕನ್ನಡಕ್ಕೆ ಲಕ್ಷಿಸಿ ಪೇೞ್ವೆಂ
ಸಕ್ಕದದ ಶಷದ್ವಿತಯ
ಕ್ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್

ಕೇಶಿರಾಜನ ಪ್ರಕಾರ ತದ್ಭವವೆಂದರೆ ಸಂಸ್ಕೃತಕ್ಕೆ ಪುಟ್ಟಿದ ಕನ್ನಡ ಪದಗಳು. ಸೂತ್ರ ೩೬೭ರ ವೃತ್ತಿಯಲ್ಲಿ ಅದು ಸ್ಪಷ್ಟವಾಗುತ್ತದೆ. ವೃತ್ತಿ ಹೀಗಿದೆ. 'ಸಂಸ್ಕೃತಕ್ಕೆ ಪುಟ್ಟಿದ ಕನ್ನಡದ ಲಕ್ಷಣಮಂ ನಿರೂಪಿಸುವೆಂ. ಸಂಸ್ಕೃತದ ಶಷಂಗಳ್ಗೆ ಸಕಾರಂ ಪ್ರಸಿದ್ಧಮಾಗೆಲ್ಲೆಡೆಯೊಳಮಕ್ಕುಂ'

ಈ ಸೂತ್ರದಲ್ಲಿ ಸಕ್ಕದದ ತದ್ಭವವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಅಂದರೆ ಅನ್ಯಭಾಷೆಯಿಂದ ಬಂದವುಗಳಿಗೆ ತದ್ಭವಗಳೆಂಬ ಹೆಸರಿದೆಯೆಂಬುದು ಸ್ಪಷ್ಟವಾಗುತ್ತದೆ.

ಶ, ಷಗಳು ಕನ್ನಡದಲ್ಲಿ ದೇಶ್ಯಗಳಾಗಿಲ್ಲ. ಅಪಭ್ರಂಶದಲ್ಲೂ ಅದೇ ರೀತಿ ಆದುದರಿಂದಲೇ ಸಂಸ್ಕೃತದ ಶ, ಷಗಳು ಅಪಭ್ರಂಶದ 'ಸ' ಕ್ಕೆ ಸಂವಾದಿಯಾಗುತ್ತವೆ. ಶ, ಷ ದ್ವಿತಯ ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್ (ಸೂ.೨೫೬, ಪ.೨೬೭) ಸಂಯುಕ್ತ ವ್ಯಂಜನಗಳು ಸಂಸ್ಕೃತದಲ್ಲಿ ಹೇರಳವಾಗಿವೆ. ಕನ್ನಡದಲ್ಲಿ ತೀರಾ ಅಪರೂಪವಾಗಿದೆ. ಅಪಭ್ರಂಶದಲ್ಲಿಯೂ ಸಂಯುಕ್ತಾಕ್ಷರಗಳು ವಿರಳಾಕ್ಷರಗಳಾಗುತ್ತವೆ. (ಸೂ.೨೫೭, ಪ.೨೬೮) ಅಘೋಷ ಮತ್ತು ಘೋಷ ವರ್ಣಗಳೊಳಗೆ ಕೆಲವು ದೇಶ ಪದಗಳಲ್ಲಿಯೇ ವ್ಯತ್ಯಯ ಹಾಗೂ ಅರ್ಥವೈದೃಶ್ಯವಿದ್ದರೂ, ಪದಾದಿಯಲ್ಲಿ ಘೋಷ ವ್ಯಂಜನಗಳ ಸಂಖ್ಯೆ ಕಡಿಮೆಯಾಗಿಯೂ ಪದಮಧ್ಯದಲ್ಲಿ ಹೆಚ್ಚಾಗಿಯೂ ಇದೆ. ಮಹಾಪ್ರಾಣಗಳು ದೇಶೀಯವಾಗಿ ಕನ್ನಡದಲ್ಲಿಲ್ಲ ಮಹಾ ಪ್ರಾಣಗಳು ಅಪಭ್ರಂಶದಲ್ಲಿ ಇದ್ದರೂ ಅವುಗಳ ಬಳಕೆ ಅಪೂರ್ವವಾಗಿರುವಂತಿದೆ. ಈ ಲಕ್ಷಣ ಕನ್ನಡ ಮತ್ತು ಅಪಭ್ರಂಶಕ್ಕೆ ಸಮಾನವಾಗಿ ಕಂಡುಬರುತ್ತದೆ. (ಸೂ.೨೫೮, ಪ.೨೬೯), ಪ>ವ, ಪ>ಹ, ವ>ಬ, ಬ>ವ (ಸೂ.೨೬೧, ಪ.೨೭೨), ಸಂಯುಕ್ತಾಕ್ಷರಗಳು ದ್ವಿತ್ವಾಕ್ಷರಗಳಾಗಿ ಪರಿವರ್ತನೆಗೊಳ್ಳುವಿಕೆ (ಸೂ.೨೬೩, ಪ.೨೭೪) ಸೂ.೨೬೪ ಪ.೨೭೫, ಸೂ.೨೬೫, ಪ.೨೭೬, ಸೂ.೨೬೭, ಪ.೨೭೮, ಸೂ.೨೬೮, ಪದ್ಯ.೨೭೯, ಸೂ.೨೬೯, ಪ.೨೮೦ ಮುಂತಾದವುಗಳಲ್ಲಿ ಕಂಡುಬರುತ್ತವೆ.[೨]

೨. ತತ್ಸಮ : ವ್ಯವಹಾರಿಕವಾಗಿ ನಾವು ಇಂದು ತತ್ಸಮ ಎಂದರೆ ಸಂಸ್ಕೃತ ಎಂದು ತದ್ಭವ ಎಂದರೆ ಅಪಭ್ರಂಶ ಎಂದು ಬಳಸುತ್ತೇವೆ. ಇವುಗಳಲ್ಲಿ ಇಂಗ್ಲೀಷ್, ಮರಾಠಿ ಮೊದಲಾದ ಭಾಷೆಗಳ ಪದಗಳೂ ಸೇರ್ಪಡೆಯಾಗಬಹುದು. ಕೇಶಿರಾಜನು ೨೧ ಪದಗಳನ್ನು ತತ್ಸಮಗಳೆಂದು ಗುರುತಿಸುತ್ತಾನೆ. ತತ್ಸಮಕ್ಕೆ ಸಂಬಂಧಿಸಿದ ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರವು ಹೀಗಿದೆ.

ಮಣಿ ಮಂಚಂ ಪಟ್ಟಂ ತೋ
ರಣಮಟ್ಟಂ ಗೋಣಿ ಸಬಳವಂಕಂ ಲತೆ ಕಂ
ಕಣಮೆಸೆವ ಕೋಂಟೆ ಬಲಮಂ
ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ (ಸೂತ್ರ. ೩೦೧, ಪದ್ಯ.೩೧೨, ಪು.೩೫೪)

ಗಲ್ಲಂ ಮಲ್ಲಂ ತಳಮಿಂ
ತೆಲ್ಲಂ ತತ್ಸಮಮುಮಿವಱುದಾಹರಣಮನಾಂ
ಸೊಲ್ಲಿಸವೆನೆರಡು ಮೈಗಂ
ಬಲ್ಲವರ್ಗಳ್ ಮೆಚ್ಚುತಿರೆ ಸಮಾಸೋಕ್ತಿಗಳಂ (ಸೂತ್ರ. ೩೦೨, ಪದ್ಯ.೩೧೩, ಪು.೩೫೬)

ಕೇಶಿರಾಜನು ತತ್ಸಮವೆಂದು ಹೇಳಿರುವ ಪದಗಳು ಬಹುಮಟ್ಟಿಗೆ ದ್ರಾವಿಡ ಮೂಲದವು. ಇವುಗಳನ್ನು ಸಂಸ್ಕೃತ ಜಾಯಮಾನಕ್ಕೆ ಬದಲಾಯಿಸದೆ ಸಂಸ್ಕೃತ ಶಬ್ದಕೋಶಕ್ಕೆ ಸೇರಿಸಿಕೊಳ್ಳಲಾಗಿದೆ. ಎಂಬುದು ಪಂಡಿತರ ಅಭಿಪ್ರಾಯ. ಆದುದರಿಂದಲೇ ಇವು ಸಂಸ್ಕೃತದಲ್ಲಿ ಅರಿಸಮಾಸ ದೋಷಕ್ಕೆ ಕಾರಣವಾಗುವುದಿಲ್ಲ. ಹಾಗೆಯೇ ಕನ್ನಡದಲ್ಲೂ ತತ್ಸಮಕ್ಕೆ ಅರಿಸಮಾಸ ದೋಷವಿಲ್ಲವೆಂಬುದು ಕೇಶಿರಾಜನ ಅಭಿಪ್ರಾಯ.

ತತ್ಸಮಪದ	ಸಂಸ್ಕೃತ ಸಮಾಸ	ಕನ್ನಡ ಸಮಾಸ
ಮಣಿ	ಮಕುಟಮಣಿ	ಉಡೆವಣಿ
	ದಿನಮಣಿ	ಕೆಲವಣಿ
	ದೇವಮಣಿ	
ಮಂಚ	ಕಾಂಚನ ಮಂಚಂ	ಸೆಳೆಮಂಚಂ
	ರತ್ನಮಂಚಂ	ತೂಗುಮಂಚಂ
ಪಟ್ಟ (ಮಹಾಭಾರತ)	ಪಟ್ಟಬದ್ಧಂ	ಪಟ್ಟವಣೆ
	ಪಟ್ಟಮಹಿಷಿ	ಪಟ್ಟಗಾರ
	ಪಟ್ಟಶರಂ	ಪಟ್ಟಗರ್ದುಗೆ (ಗಟ್ಟಿಗೆ)
ತೋರಣ (ಮಹಾಭಾರತ)	ಕಾಂಸ್ಯತೋರಣಂ	ಪಚ್ಚೆದೋರಣಂ
	ಮಕರ ತೋರಣಂ	ತಳಿರ್ದೋರಣಂ
ಅಟ್ಟಂ (ಪಾಣಿನಿ ೧ : ೧೭)	ಅಟ್ಟಹಾಸ	ಅಟ್ಟವಡಿ
		ಅಟ್ಟವಗಲ್
ಗೋಣಿ (ಪಾಣಿಸಿ ೩: ೯೦)	ಗೋಣಿಕಾಪುತ್ರಂ	ಕಿಱುಗೋಣಿ
		ಪೆರ್ಗೋಣಿ
ಸಬಳ	ಸಬಳತ್ರಿಣೇತ್ರಂ	ಸಬಳದೆಜೆ
	ಸಬಳಸಹಸ್ರಬಾಹು	
	ಸಬಳಗದ್ಯಾಣಂ	
ಅಂಕಂ	ಮೃಗಾಂಕಂ	ಕಟ್ಟಂಕಂ
	ವೃಷಾಂಕಂ	ಮಾಱಂಕಂ

		ಅಂಕವಣೆ
		ಅಂಕವಾತು
ಲತೆ	ನವಲತೆ	ಎಳಲತೆ
	ವನಲತೆ	ಲತೆವನೆ
	ಲತೆವಲ್ಲಿ	
ಕಂಕಣಂ	ಮಣಿಕಂಕಣಂ	ಹಿಂಡುಗಂಕಣಂ
	ಹಸ್ತಕಂಕಣಂ	ಗುಬ್ಬಿಗಂಕಣಂ
ಕೋಂಟೆ	ಧೂಳಿಗೋಂಟೆ	ಹೆಡಗೆಗೋಂಟೆ
		ತಳಿರ್ಗೋಂಟೆ
		ಹತ್ತುಗೋಂಟೆ
ಬಲಂ	ಭೂಬಲಂ	ಆಳ್ವಲಂ
	ಭುಜಬಲಂ	ತೋಳ್ವಲಂ
		ನೆಲವಲಂ
		ಪೆರ್ವಲಂ
		ಮಾರ್ವಲಂ
ಅಂಗಣ (ಅಂಗನ)	ಅಂಗಣವಲಯಂ	ಅಂಗಣವಾವಿ
		ಅಂಗಣವೆಚ್ಚು
ಬಿಲ	ಬಿಲಸರ್ಗಂ	ಪೆರ್ಬಿಲಂ
	ಬಿಲದ್ವಾರಂ	
ಬಂದಿ	ಬಂದಿಗ್ರಹಣಂ	ಬಲ್ವಂದಿಕಾರಂ
ಮಾಲೆ	ವನಮಾಲೆ	ಪೂಮಾಲೆ
	ಕಂಠಮಾಲೆ	ಪಚ್ಚೆಮಾಲೆ
ಗಳಂ	ಗಳಗಾಳಂ	ಸಣ್ಣಗಾಳಂ
		ಎಡಗಾಳಂ
ಗಂಡ	ಗಂಡಗರ್ವಂ	ಗಂಡವರಿಜು
	ಗಂಡಗುಣಂ	ಗಂಡಗಲಿ
		ಗಂಡವಸನಂ, ಗಂಡವಸದನಂ
ಗಲ್ಲ	ಗಲ್ಲಸ್ಥಳಂ	ಗಲ್ಲಗಿವಿ
		ಗಲ್ಲಮು (ಗ್ಗು) ಗ್ಗುಂ
		ಗಲ್ಲಗುಗ್ಗುಂ

		ತಳ್ಗಲ್ಲಂ
ಮಲ್ಲ	ಮಲ್ಲಮುರಾಂತಕುಂ	ಮಲ್ಲವಾತು
		ಮಲ್ಲಗಾಳೆಗಂ
ತಳ	ಕರತಳಂ	ಕೆಂದಳಂ
	ಧರಣೀತಳಂ	ತಟ್ಟಿತಳಂ
		ತಳೆಹಳ್ಳಂ

ತತ್ಸಮಗಳ ಬಗೆಗೆ ಸ್ಪಷ್ಟವಾಗಿ ಹೇಳಿದವರಲ್ಲಿ ಕೇಶಿರಾಜನೇ ಮೊದಲಿಗ. ಕವಿರಾಜಮಾರ್ಗದಲ್ಲಾಗಲೀ, ನಾಗವರ್ಮನಲ್ಲಾಗಲೀ, ನೇರವಾಗಿ ಈ ವಿಷಯ ಪ್ರಸ್ತಾಪವಾಗುವುದಿಲ್ಲ. ನಾಗವರ್ಮನ ಶಬ್ದಸ್ಮೃತಿ ಮತ್ತು ಭಾಷಾಭೂಷಣದಲ್ಲಿ ಸಮಸಂಸ್ಕೃತ ಎಂಬುದಾಗಿ ಪರೋಕ್ಷವಾಗಿ ಇದರ ಪ್ರಸ್ತಾಪ ಬರುತ್ತದೆ.[೪]

೩. **ಸಮಸಂಸ್ಕೃತ :** ಸಮಸಂಸ್ಕೃತದ ಪ್ರಸ್ತಾಪವು ಮೊದಲ ಬಾರಿಗೆ ಕವಿರಾಜಮಾರ್ಗದಲ್ಲಿಯೇ ಕಂಡುಬರುತ್ತದೆ.

ಸಮಸಂಸ್ಕೃತಂಗಳೊಳ್ ತ

ಳ್ತಮರ್ದಿರೆ ಕನ್ನಡ ಮನಱೆದು ಪೇಳ್ಗೆಂಬುದಿದಾ

ಗಮಕೋವಿದ ನಿಗದಿತ ಮಾ

ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ (ಸೂತ್ರ. ೨೮೨, ಪು.೧೭೮)

ಇದಕ್ಕೆ ಮುಳಿಯ ತಿಮ್ಮಪ್ಪಯ್ಯನವರು ಹೀಗೆ ವಿವರಣೆ ನೀಡಿದ್ದಾರೆ. ಇದರಿಂದ ಸಮಸಂಸ್ಕೃತದೊಡನೆ ಕನ್ನಡವನ್ನು ಪರಾಂಬರಿಕೆಯಿಂದ 'ಅಮರ್ದಿರೆ' ಬೆರಸಬಹುದು. ಸಂಸ್ಕೃತ ಪದದೊಡನೆ ಹಾಗೆ ಬೆರಸಲಾಗದು ಎಂದರ್ಥವಾಗುತ್ತದೆ. ಇಲ್ಲಿ ಗ್ರಂಥಕಾರನ ಸಮಸಂಸ್ಕೃತಕ್ಕೂ ಸಂಸ್ಕೃತಕ್ಕೂ ಒಂದಿಷ್ಟು ಭೇದವಿದೆ ಎಂದಾಗುತ್ತದೆ. 'ಅಱೆದು ಪೇಳ್ಗೆ ಇದು ಆಗಮ ಕೋವಿದ ನಿಗದಿತ ಮಾರ್ಗಂ' ಎಂಬುದರಿಂದ, ಈ ಸಮಸಂಸ್ಕೃತವನ್ನು ಅಱ ದುಕೊಳ್ಳುವುದು ಸಾಮಾನ್ಯರಿಗೆ ಸುಲಭವಲ್ಲ ಎಂದೂ ಸೂಚಿತವಾಗುತ್ತದೆ. ಈ ಸಮಸಂಸ್ಕೃತ ಎಂದರೆ ಎಂಥದು? ಎಂದು ಪೂರ್ವ ಪಕ್ಷವನ್ನು ಮುಂದಿಟ್ಟಿದ್ದಾರೆ. (ಪು.೧೨೪) ಅನಂತರ 'ಸಮಸಂಸ್ಕೃತೋದಿತ ಪದಂಗಳೊಳ್' ಕನ್ನಡವನ್ನು ಬೆರಸಬೇಕಾದ 'ಆಗಮಕೋವಿದ ನಿಗದಿತ' ಎಂದರೆ ಹೀಗೆ ಎಂದು ಕವಿರಾಜಮಾರ್ಗದ "ಬಹಿರುದ್ಯಾನಾಂತರದೊಳ್" ಎಂಬ ಪದ್ಯ (೧.೫೩) ನ್ನು ಉದ್ಧರಿಸಿದ್ದಾರೆ. ಇವಲ್ಲದೆ "ಅವ್ಯಯಂಗಳ ಸಹಾಯಂಗಳ್" ಎಂದು ಕೊನೆಗೊಳ್ಳುವ ಪದ್ಯ(೧.೫೨)ನ್ನು ಎತ್ತಿಕೊಂಡಿದ್ದಾರೆ. "ಇಲ್ಲಿಯ 'ಅಸಹಾಯಂಗಳ್' ಎಂಬ ವಿಶೇಷಣಕ್ಕೆ 'ಸಂಸ್ಕೃತ'ದಲ್ಲಿ ಇದ್ದಂತೆ ಇರುವ ಕನ್ನಡದ ಯಾವ ಬಗೆಯ ಸಹಾಯವನ್ನು ಎಂದರೆ ಕನ್ನಡ ಭಾಷಾ ಪ್ರತ್ಯಯಾದಿಗಳನ್ನು, ಒಳಗೊಳ್ಳದವುಗಳು ಎಂಬುದೇ ತಾತ್ಪರ್ಯವಿರಬೇಕು." (ಪು.೧೨೫) ಮೇಲೆ ಸೂಚಿಸಿದ ಅವ್ಯಯಗಳನ್ನು 'ಅಸಹಾಯಂಗಳಾಗಿ' ಎಂದರೆ ಸಮಾಸದಲ್ಲಿ ಬೆರಸದೆ ಸ್ವತಂತ್ರವಾಗಿ ಕನ್ನಡದಲ್ಲಿ ಬೆರಸಲಾಗದು ಎಂದು ಕವಿರಾಜಮಾರ್ಗ ಕಾರನೇ ಹೇಳುತ್ತಾನೆ.[೫]

''ಸಂಸ್ಕೃತ ಎಂದರೆ ಸಂಸ್ಕೃತ ಪ್ರತ್ಯಯದಿಂದ ಕೂಡಿದ ಸಂಸ್ಕೃತ ಪದ. ಸಮಸಂಸ್ಕೃತ ಎಂದರೆ ಕನ್ನಡ ಪ್ರತ್ಯಯದಿಂದ ಕೂಡಿದ ಸಂಸ್ಕೃತ ಪದ. ಇಂಥ ಸಮಸಂಸ್ಕೃತಗಳೊಡನೆ ತಳ್ತು ಅಮರ್ದಿರೆ ಕನ್ನಡಮಂ ಅಱೆದು ಪೇೞಬಹುದು. ಆದರೆ 'ಇದಂ (ಈ ಕನ್ನಡವನ್ನು) ಬೆರಸಲ್ಕಂ ಆಗದು ಈ ಸಕ್ಕದದೊಳ್ ಎಂದಿಷ್ಟೇ ಭೇದ'

ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಸಮಸಂಸ್ಕೃತ ಕುರಿತು ಹೀಗೆ ಹೇಳಲಾಗಿದೆ.

ಸಮುದಿತ ಸಂಖ್ಯಾವ್ಯಯರಹಿ

ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ

ತ್ತಮ ವರ್ಣ ಪ್ರಕೃತಿಗಳುಂ

ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಟ್ಪರ್'

ಅಂದರೆ ಸಂಸ್ಕೃತವೆಂದರೆ ಸಂಸ್ಕೃತ ಪ್ರತ್ಯಯಗಳಿಂದ ಕೂಡಿದ ಸಂಸ್ಕೃತ ಪದ. ಸಮಸಂಸ್ಕೃತ ಎಂದರೆ ಕನ್ನಡ ಪ್ರತ್ಯಯಗಳಿಂದ ಕೂಡಿದ ಕನ್ನಡ ಪದ. ಇದನ್ನು ಹೀಗೆ ವಿವರಿಸಲಾಗಿದೆ.

ಸಂಖ್ಯಾವಾಚಕಗಳನ್ನೂ ಅವ್ಯಯಗಳನ್ನೂ ಉಳಿದು ಮಿಕ್ಕ ಸಂಸ್ಕೃತ ಶಬ್ದಗಳನ್ನು ಕನ್ನಡಕ್ಕೆ ಪ್ರತ್ಯಯಗಳನ್ನಾಗಿ ತೆಗೆದುಕೊಳ್ಳುತ್ತಾರೆ. ಹಾಗೆ ಕನ್ನಡಕ್ಕೆ ಬಂದಾಗ ಆಗುವ ಕೆಲವು ಮುಖ್ಯ ವ್ಯತ್ಯಾಸಗಳನ್ನು ಇಲ್ಲಿ ತಿಳಿಸಿದೆ.

ಸ್ವರಾಂತಗಳು:

i. ಹ್ರಸ್ವಸ್ವರಾಂತವಾದ ಶಬ್ದಗಳು ಸಾಮಾನ್ಯವಾಗಿ ಯಾವ ವ್ಯತ್ಯಾಸವನ್ನೂ ಹೊಂದುವುದಿಲ್ಲ.

ಉದಾ: ಭುವನ, ಮುನಿ, ರಿಪು, ಪಿತೃ

ಕೆಲವು ಅಕಾರಾಂತಗಳು ಎಕಾರಾಂತವಾಗುವುದುಂಟು.

ಉದಾ: ಪ್ರಶ್ನೆ, ಧರ್ಬೆ, ಅಭಿಲಾಷೆ.

ಋ ಕಾರಕ್ಕೆ 'ಆರ' ಎಂಬ ಆದೇಶ ಬರುವುದೂ ಉಂಟು.

ಉದಾ: ದಾತೃ-ದಾತ, ಮಾಂಧಾತೃ-ಮಾಂಧಾತ, ವಿಧಾತೃ'ವಿಧಾತ್ರ

ii. ದೀರ್ಘಸ್ವರಾಂತವಾದ ಶಬ್ದಗಳು ಹ್ರಸ್ವ ಸ್ವರಾಂತಗಳಾಗುತ್ತವೆ.

ಉದಾ: ಕರುಣಾ-ಕರುಣ, ಗೌರೀ-ಗೌರಿ, ಸರಯೂ-ಸರಯು.

ಆ ಕಾರಾಂತಗಳು ಸಾಮಾನ್ಯವಾಗಿ ಎ ಕಾರಾಂತಗಳಾಗುತ್ತವೆ.

ಉದಾ: ಮಾಲಾ-ಮಾಲೆ, ಭಾಷಾ-ಭಾಷೆ ಇತ್ಯಾದಿ.

ಗ್ರೀವಾ ಭಿಕ್ಷಾ ಎಂಬೆರಡು ಶಬ್ದಗಳಿಗೆ ಗ್ರೀವ-ಗ್ರೀವೆ ; ಬಿಕ್ಷ-ಭಿಕ್ಷೆ ಎಂಬೆರಡು ರೂಪಗಳು ಬರುವುದುಂಟು ಏಕಾಕ್ಷರದ ಶಬ್ದಗಳು ಇದ್ದಂತೆಯೇ ಕನ್ನಡಕ್ಕೆ ಬರುವವು.

ಉದಾ: ಶ್ರೀ, ಸ್ತ್ರೀ, ಜ್ಯಾ ಇತ್ಯಾದಿ

ವ್ಯಂಜನಾಂತಗಳು

ಸಂಸ್ಕೃತದ ವ್ಯಂಜನಾಂತ ಶಬ್ದಗಳು ಕನ್ನಡಕ್ಕೆ ಬರುವಾಗ

i. ಕೆಲವಕ್ಕೆ ಅಂತ್ಯ ವ್ಯಂಜನ ಲೋಪವಾಗುತ್ತದೆ.

ಉದಾ: ರಾಜನ್-ರಾಜ, ಬ್ರಹ್ಮನ್-ಬ್ರಹ್ಮ, ಪುರೂರವಸ್‌ಪುರೂರವ, ಸೀಮನ್, ಊಷ್ಮನ್ ಶಬ್ದಗಳಿಗೆ ಸೀಮೆ, ಊಷ್ಮ ಎಂಬ ರೂಪಗಳುಂಟು.

ii. ಕೆಲವಕ್ಕೆ ಅಕಾರ ಸೇರುತ್ತವೆ.

ಉದಾ: ದಿವ್-ದಿವ, ಬುಧ್-ಬುಧ

iii. ಕೆಲವಕ್ಕೆ ಅಂತ್ಯವ್ಯಂಜನಕ್ಕೆ ದ್ವಿತ್ವ ಬಂದು 'ಉ'ಕಾರ ಸೇರುತ್ತದೆ.

ಉದಾ: ಅಪ್-ಅಪ್ಪು, ವಿದ್ಯುತ್-ವಿದ್ಯುತ್ತು, ಕ್ಷುತ್-ಕ್ಷುತ್ತು

iv. ಕೆಲವಕ್ಕೆ ಮೇಲಿನ i, ii, ಎರಡು ರೂಪಗಳೂ ಉಂಟು.

ಉದಾ: ತೇಜಸ್-ತೇಜ, ತೇಜಸ್ಸು, ಯಶಸ್-ಯಶ, ಯಶಸ್ಸು

v. ಕೆಲವಕ್ಕೆ ಯಾವ ವ್ಯತ್ಯಾಸಗಳೂ ಆಗುವುದಿಲ್ಲ.

ಉದಾ: ವಾಕ್, ಗೀರ್ (ಗಿರೆ ಎಂಬ ರೂಪವೂ ಉಂಟು)

vi. ಕೆಲವು ಸಂಸ್ಕೃತ ಪ್ರಥಮಾ ಬಹುವಚನಗಳು ಅಂತ್ಯ ವಿಸರ್ಗವನ್ನುಳಿದು ಕನ್ನಡದಲ್ಲಿ ಏಕವಚನದ ಪ್ರಕೃತಿಗಳಾಗುವವು.

ಉದಾ: ವಿದ್ವಾನ್ ಎಂಬುದರ ಪ್ರಥಮಾ ಬಹುವಚನರೂಪ ವಿದ್ವಾಂಸಃ. ಕನ್ನಡದಲ್ಲಿ ಇದು ವಿದ್ವಾಂಸ ಎಂದು ಆಗುತ್ತದೆ ಹಾಗೆಯೇ ಶ್ವಾನ, ಶ್ರೀಮಂತ, ಹನುಮಂತ ಇತ್ಯಾದಿ.[೮]

ನಾಗವರ್ಮನು ತನ್ನ ಶಬ್ದಸ್ಮೃತಿಯಲ್ಲಿ ಸಮಸಂಸ್ಕೃತ ಕುರಿತು ಹೀಗೆ ಹೇಳುತ್ತಾನೆ.

ಬೆರಸಿ ಸಮಸಂಸ್ಕೃತಂಗಳ್
ಬರೆ ಕನ್ನಡದೊಳಗೆ ಸಮತೆಯಿಂದ ಸಲ್ಗುಂ
ನಿರುವದ್ಯಮಾಗಿ ಪದವಿಧಿ
ವಿರುದ್ಧಮಕ್ಕುಂ ತದನ್ಯಥಾ ವೃತ್ತಿಗಳೊಳ್[೯]

ಈ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ನಾಗವರ್ಮ, ಅರಸುಗುಣ ಪರವೆಣ್ಣ, ಅಟಿಜನ ಎಂಬವುಗಳನ್ನು ಪ್ರಯೋಗವಾಗಿ ಕೊಟ್ಟಿರುವುದೇ ಈ ಭಿನ್ನಾಭಿಪ್ರಾಯಕ್ಕೆ ಕಾರಣ. ಡಾ.ಕಲಬುರ್ಗಿಯವರು ಸಮಸಂಸ್ಕೃತವೆಂದರೆ ಸಂಸ್ಕೃತವೇ ಎಂದು ತೀರ್ಮಾನಿಸುತ್ತಾರೆ. ಡಾ.ಎಸ್.ಎಸ್.ಕೋತಿನ ಅವರು ಸಮಸಂಸ್ಕೃತವೆಂದರೆ ಕೇಶಿರಾಜನ ತತ್ಸಮವೇ ಎಂದು ಅಭಿಪ್ರಾಯಪಟ್ಟಿದ್ದಾರೆ.[೧೦]

ಆದರೆ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಕೇಶಿರಾಜ ದರ್ಪಣದಲ್ಲಿ ಸಮಸಂಸ್ಕೃತವೆಂದರೆ ಮೂಲತಃ ಸಂಸ್ಕೃತದಲ್ಲಿದ್ದ ಶಬ್ದಗಳನ್ನು ಕನ್ನಡಕ್ಕೆ ಸರಿಮಾಡಿ ತಂದವೆಂದೂ, ಕನ್ನಡದಲ್ಲಿದ್ದವನ್ನು ಸಂಸ್ಕೃತಕ್ಕೆ ಸಮ ಮಾಡಿ ಒಯ್ದವುಗಳು ತತ್ಸಮಗಳೆಂದೂ ತೀರ್ಮಾನಿಸಿದ್ದಾರೆ. ಅಂದರೆ ಅವರ ಪ್ರಕಾರ ಸಮಸಂಸ್ಕೃತ ಬೇರೆ, ತತ್ಸಮ ಬೇರೆ.[೧೧]

ಭಟ್ಟಾಕಳಂಕನು ಸಮಸಂಸ್ಕೃತ ಎಂಬ ಪರಿಭಾಷೆಯನ್ನು ಬಳಸಿಲ್ಲ. ಬಹುಶಃ ಆತನ ಪ್ರಕಾರ ತತ್ಸಮ ಮತ್ತು ಸಮಸಂಸ್ಕೃತಗಳು ಒಂದೇ ಆಗಿರಬೇಕು.[೧೨]

೪. ಅಪಭ್ರಂಶ: ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಅಪಭ್ರಂಶಕ್ಕೆ ಸಂಬಂಧಿಸಿದ ಮೊದಲ ಪದ್ಯ ಹೀಗಿದೆ.

ಈಕ್ಷಿಸಿ ಶಿಕ್ಷಾಸೂತ್ರದ
ಲಕ್ಷಣಮಂ ಲೋಕರೂಢಿ ಕಿಡದವೊಲಱಿವರ್
ಲಕ್ಷಿಪುದು ನುಡಿಗಳೊಳ್ ಬಹು
ಲಾಕ್ಷೇಪಣಮಿಲ್ಲದಿರೆಯುಮಱಿವುದು ಕೆಲವಂ[೧೩]

ಈ ಪದ್ಯದಲ್ಲಿ ಕೇಶಿರಾಜನು ಅಪಭ್ರಂಶ ಎಂದರೇನು ಎಂಬುದನ್ನು ವಿವರಿಸಿಲ್ಲ. ನಿಘಂಟುಗಳಲ್ಲಿ ಅಪಭ್ರಂಶ ಎಂಬುದಕ್ಕೆ ಈ ಕೆಳಗಿನ ಅರ್ಥಗಳಿವೆ.

1. Falling down or away, A Fall.
2. A Corrupted word, corruption (hence) an incorrect word whether formed against the rules of grammer or used in sense not strictly sanskrit[೧೪]

ಈ ಅರ್ಥದಲ್ಲಿ ಅಪಭ್ರಂಶವೆಂದರೆ ಮೂಲರೂಪದಿಂದ ದೂರಸರಿದ ಪದಗಳು ಎಂದರ್ಥ. ಆದರೆ ಮೂಲ ಎಂದರೆ ಯಾವುದು ಎಂಬುದು ಸಮಸ್ಯೆ ಏಕೆಂದರೆ ಕನ್ನಡ ಭಾಷೆಯಲ್ಲಿ ಎಂದಿನಿಂದಲೂ ಬೇರೆ ಬೇರೆ ಭಾಷೆಯ ಪದಗಳು ಬಹುಸಂಖ್ಯೆಯಲ್ಲಿ ಸೇರಿಕೊಂಡಿವೆ. ತದ್ಭವ ಎಂದರೆ ಅದರಿಂದ ಹುಟ್ಟಿದುದು ಎಂದರ್ಥ. ಇಲ್ಲಿ ಅದರಿಂದ ಎಂದರೆ ಸಂಸ್ಕೃತದಿಂದ ಎಂದೇ ಅರ್ಥ. ಆದರೆ ಇಂಗ್ಲೀಷ್ ಭಾಷೆ ಅಥವಾ ಪರ್ಶೋ ಅರಾಬಿಕ್ ಶಬ್ದಗಳು ತದ್ಭವಗಳಲ್ಲ. ಸಂಸ್ಕೃತದಿಂದ ಕನ್ನಡದ ಜಾಯಮಾನಕ್ಕನುಗುಣವಾಗಿ ಬದಲಾದ ಪದಗಳೇ ತದ್ಭವಗಳು ಅಥವಾ ಅಪಭ್ರಂಶಗಳು.[೧೫]

ಮುಖ್ಯವಾಗಿ ಅಪಭ್ರಂಶದಲ್ಲಿ ತದ್ಭವ ಮತ್ತು ತತ್ಸಮಗಳು ಒಳಗೊಳ್ಳುತ್ತವೆ.

೫. ಪ್ರಾಕೃತ: ಸಂಸ್ಕೃತದಿಂದ ಕನ್ನಡಕ್ಕೆ ಪದಗಳು ಬರುವಾಗ ಮಧ್ಯೆ ಒಂದು ಕವಲು ದಾರಿಯನ್ನು ತುಳಿಯುತ್ತವೆ ಅದುವೇ ಪ್ರಾಕೃತ. ಅಂದರೆ ಕೆಲವೊಮ್ಮೆ ಸಂಸ್ಕೃತ ಪದಗಳು ನೇರವಾಗಿ ಕನ್ನಡಕ್ಕೆ ಬರದೆ ಪ್ರಾಕೃತದ ಮೂಲಕ ಕನ್ನಡ ಪದಕೋಶವನ್ನು ಸೇರುತ್ತವೆ ಅವುಗಳನ್ನು ಪ್ರಾಕೃತಗಳೆಂದು ಕರೆಯಲಾಗುವುದು. ಈ ಅರ್ಥದಲ್ಲಿ ಅಪಭ್ರಂಶದಲ್ಲಿ ಪ್ರಾಕೃತವೂ ಸೇರುತ್ತದೆ.

ತದ್ಭವಗಳು ಸಂಸ್ಕೃತದಿಂದ ನೇರವಾಗಿ ಕನ್ನಡಕ್ಕೆ ಬಂದಂತೆ ಹಳಗನ್ನಡ ವ್ಯಾಕರಣಗಳಲ್ಲಿ ಹೇಳಿದೆ. ಹಲವು ತದ್ಭವಗಳು ಪ್ರಾಕೃತದಿಂದ ಬಂದಿರುವವು ಎಂದು ಆಧುನಿಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉದಾ	ಸಂಸ್ಕೃತ	ಪ್ರಾಕೃತ	ತದ್ಭವ
	ದಂಷ್ಟ್ರಾ	ದಾಢಾ	ದಾಡೆ
	ವೃತ್ತಂ	ವಟ್ಟಂ	ಬಟ್ಟೆ
	ಯಜ್ಞಃ	ಜಣ್ಣೋ	ಜನ್ನ
	ಸಾಕ್ಷೀ	ಸಕ್ಖೀ	ಸಕ್ಕಿ
	ಶಯ್ಯಾ	ಸೆಜ್ಜಾ	ಸೆಜ್ಜೆ
	ವಿದ್ಯಾ	ವಿಜ್ಜಾ	ಬಿಜ್ಜೆ
	ಸಿಂಹಃ	ಸಿಂಘೋ	ಸಿಂಗ
	ಆಜ್ಞಾ	ಆಣಾ	ಆಣೆ
	ತ್ವರಿತಂ	ತುರಿಅಂ	ತುರಿಹ
	ಜೋತ್ಸ್ನಾ	ಜೋಣ್ಹಾ	ಜೊನ್ನ
	ಶ್ರದ್ಧಾ	ಸಡ್ಢಾ	ಸಡ್ಡೆ
	ನೂಪುರಂ	ಣೇವುರಂ	ನೇವುರ
	ಸ್ತ್ರೀ	ಇತ್ಥೀ	ಇತ್ತಿ, ಇತಿ

ಕೆಲವು ವೇಳೆ ಪ್ರಾಕೃತ ಶಬ್ದಗಳು ಯಾವ ವ್ಯತ್ಯಾಸವೂ ಇಲ್ಲದೆ ಕನ್ನಡದಲ್ಲಿ ಬಳಕೆಯಾಗುತ್ತವೆ. ಉದಾ.

ಸಂಸ್ಕೃತ	ಪ್ರಾಕೃತ	ಕನ್ನಡ
ಪ್ರತಿ	ಪಡಿ	ಪಡಿ
ಸ್ಥಾನ	ಠಾಣ	ಠಾಣ
ವಕ್ರ	ವಂಕ	ವಂಕ
ಕಾರ್ಯ	ಕಜ್ಜ	ಕಜ್ಜ
ಸ್ನೇಹ	ನೇಹ	ನೇಹ
ಅಂಗಾರ	ಇಂಗಾಲ	ಇಂಗಾಲ

(ಪುಟ್ಟಪ್ಪ.ಕೆ.ವಿ.(ಸಂ) ಕನ್ನಡ ಕೈಪಿಡಿ, ಸಂ.೧, ಪು.೩೧-೩೨)

೫. **ದೇಶ್ಯ:** ದೇಶ್ಯ ಎಂದರೆ ಅಚ್ಚಗನ್ನಡ ಮತ್ತು ಇವುಗಳಲ್ಲಿ ತತ್ಸಮ, ತದ್ಭವಗಳೂ ಸೇರುತ್ತವೆ. ಇದರ ವಿಸ್ತೃತ ಚರ್ಚೆಯನ್ನು ಮುಂದಿನ ಭಾಗದಲ್ಲಿ ಮಾಡಲಾಗಿದೆ.[೧೬]

ಭಾಗ - ೨

ಭಾಗ-೨ರಲ್ಲಿ 'ಅಚ್ಚಗನ್ನಡ' ಎನ್ನುವ ಪರಿಕಲ್ಪನೆಯ ಬಗೆಗೆ ನಡೆದಿರುವ ಚರ್ಚೆಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ವಿವಿಧ ಸಂದರ್ಭಗಳಲ್ಲಿ ಅಚ್ಚಗನ್ನಡದ ಬಗೆಗೆ ಚರ್ಚಿಸಿರುವ ಕವಿಗಳ ಮತ್ತು ವಿದ್ವಾಂಸರ ಅಭಿಪ್ರಾಯಗಳನ್ನು ಜೊತೆಜೊತೆಯಲ್ಲಿಯೇ ಚರ್ಚಿಸಲಾಗಿದೆ. ಅಂದರೆ ಪ್ರಾಚೀನ ಕಾಲದಿಂದ ಇಂದಿನ ವರೆಗಿನ

ಎಲ್ಲ ಚಿಂತನೆಗಳನ್ನು ಒಂದೆಡೆ ತರುವ ಪ್ರಯತ್ನ ಮಾಡಲಾಗಿದೆ. ಹಾಗಾದುದರಿಂದ ಸಹಜವಾಗಿಯೇ ಅಧ್ಯಾಯದ ಮೊದಲಲ್ಲಿ ಪೂರ್ವ ಕವಿಗಳನ್ನು ಅನಂತರ ಆಧುನಿಕ ವಿದ್ವಾಂಸರ ಅಭಿಪ್ರಾಯಗಳನ್ನು ಕಾಲಾನುಕ್ರಮದ ದೃಷ್ಟಿಯಿಂದ ಸಂಗ್ರಹಿಸಲಾಗಿದೆ. ಆ ದೃಷ್ಟಿಯಿಂದ ಧರ್ಮಾಮೃತವನ್ನು ಬರೆದ ನಯಸೇನ ಕವಿಯಿಂದ ಈ ಚರ್ಚೆಯನ್ನು ಆರಂಭಿಸಲಾಗಿದೆ.

ಮೊದಲ ಬಾರಿಗೆ ಕನ್ನಡ ಕಾವ್ಯ ಪರಂಪರೆಯಲ್ಲಿ ಅಚ್ಚಗನ್ನಡ ಬಗ್ಗೆ ಹೇಳಿದವನು ಕವಿ ನಯಸೇನ. ಈತನ ಕಾಲ ೧೧ - ೧೨ ನೇ ಶತಮಾನ (ಕ್ರಿ .ಶ. ೧೧೧೨) ಹಳಗನ್ನಡ ಮತ್ತು ನಡುಗನ್ನಡದ ಮಧ್ಯ ಸ್ಥಿತಿಯಲ್ಲಿ ಆತನು ಕಾವ್ಯ ರಚಿಸಿದನು. ತನ್ನ ಕಾವ್ಯ ರಚನೆಗಾಗಿ ಸಾಮಾಜಿಕ ಜೀವನದಲ್ಲಿ, ಜನಸಾಮಾನ್ಯರಲ್ಲಿ ಬಳಕೆಯಾಗಿರುವ ನುಡಿಗಟ್ಟು, ಗಾದೆಮಾತುಗಳು, ಶುದ್ಧಗನ್ನಡ ಪ್ರಯೋಗಗಳನ್ನು ಬಳಸಿಕೊಂಡಿರುವುದು ಆತನ ದೇಸೀ ಶೈಲಿಯ ವೈಶಿಷ್ಟ್ಯವಾಗಿದೆ. ಕೃತಿಯ ಆರಂಭದಲ್ಲಿ ಕನ್ನಡ ಸಂಸ್ಕೃತಗಳ ಸಂಬಂಧ ಬಗೆಗೆ ಆತ ಹೀಗೆ ಚರ್ಚಿಸುತ್ತಾನೆ.

> ''ಪೊಸಗನ್ನಡದಿಂ ವ್ಯಾವ
> ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
> ತಿಸಿ ಕೊಡಲಾರದಕ್ಕಟ
> ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ'' [೧೭]

ಹೊಸಗನ್ನಡದಲ್ಲಿ ಕೃತಿ ರಚಿಸುವನೆಂದು ಹೇಳಿಕೊಂಡರೂ ಪೂರ್ಣವಾಗಿ ಕನ್ನಡದಲ್ಲಿಯೇ ಕಾವ್ಯ ರಚಿಸಲಾಗದೆ, ಸಂಸ್ಕೃತವನ್ನು ತಂದು ಬೆರೆಸುವವನು ಕವಿಯೇ ಎಂಬುದು ಇಲ್ಲಿಯ ಪ್ರಶ್ನೆ ಮುಂದುವರಿದು ಅವನು

> ''ಸಕ್ಕದಮಂ ಪೇಳ್ವೊಡೆ ನೆಟೆ
> ಸಕ್ಕದಮಂ ಪೇಟ್ಗೆ ಸುದ್ದಗನ್ನಡದೊಳ್ತಂ
> ದಿಕ್ಕುವುದೇ ಸಕ್ಕದಮಂ
> ತಕ್ಕುದೇ ಬೆರಸಲ್ಕೆ ಘೃತಮಂ ತೈಲಮುಂ '' [೧೮]

ಸಂಸ್ಕೃತದಲ್ಲಿ ಹೇಳುವುದಾದರೆ ಸಂಸ್ಕೃತದಲ್ಲಿಯೇ ಹೇಳಲಿ, ಕನ್ನಡದಲ್ಲಿ ಹೇಳುವುದಾದರೆ ಕನ್ನಡದಲ್ಲೇ ಹೇಳಲಿ, ಶುದ್ಧಗನ್ನಡದಲ್ಲಿ ಸಂಸ್ಕೃತವನ್ನು ಬೆರೆಸಿದರೆ ತುಪ್ಪ ಎಣ್ಣೆ ಬೆರೆಸಿದಂತಾಗಾದೇ? ಎಂದು ಹೇಳುತ್ತಾನೆ.

ಕನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಬಳಕೆ ಅತಿಯಾಯಿತೆಂದು ಔಚಿತ್ಯವಿಲ್ಲದ ಅನಗತ್ಯವಾದ, ಅಪ್ರಸಿದ್ಧವಾದ ಸಂಸ್ಕೃತ ಪದಗಳನ್ನು ಉಪಯೋಗಿಸಿ ಓದುಗರ ತೊಡಕನ್ನು ಹೆಚ್ಚಿಸುವುದು ವಿವೇಕವಲ್ಲವೆಂಬುವುದು ನಯಸೇನನ ಮತ. ಕನ್ನಡಕಾವ್ಯವು ರಸವತ್ತಾಗಿರುವುದರ ಜೊತೆಗೆ ಅದರಲ್ಲಿ ನಾಣ್ನುಡಿಗಳಿರಬೇಕು. ದೇಸೀ ಪದ್ಧತಿಯ ರಚನೆಯಿರಬೇಕು. ಅದರ ಜೊತೆಗೆ ಮಾರ್ಗಶೈಲಿಯೂ ಇರಬೇಕು.ಹಾಗಿರದ ಕೃತಿ ಕೃತಿಯೇ ಅಲ್ಲವೆಂದು ನಯಸೇನ ಹೇಳುತ್ತಾನೆ. ಆತ ದೇಸೀ, ನಾಣ್ನುಡಿಗಳನ್ನು ಬೇಕಾದ ಹಾಗೆ ಬಳಸಿಕೊಂಡಿದ್ದಾನೆ. ಪಂಡಿತರ ಸಂತೋಷಕ್ಕಿಂತ, ರಾಜಮನ್ನಣೆಗಿಂತ ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವುದು ಅವನಿಗೆ ಮುಖ್ಯವಾಗಿತ್ತು.

ಭಾಷಾ ಮಿಶ್ರಣವನ್ನು ಖಂಡಿಸುವಾಗಲೇ ಅವನಿಗೆ ಸಂಸ್ಕೃತದ ಮೇಲೆ ದ್ವೇಷವಾಗಲೀ, ಅನಾದರವಾಗಲೀ ಇರಲಿಲ್ಲ. ಕನ್ನಡಿಗರ ಆಡುಮಾತಿನಲ್ಲಿರುವ ಹೆಚ್ಚು ಪ್ರಯತ್ನವಿಲ್ಲದೆ ಸುಲಭವಾಗಿ ಅರ್ಥವಾಗುವ ಸಂಸ್ಕೃತ ಪದಗಳ ಬಳಕೆ ನಯಸೇನನ ದೃಷ್ಟಿಯಲ್ಲಿ ಅಪರಾಧವಲ್ಲ. ಪಾಂಡಿತ್ಯ ಪ್ರದರ್ಶನಕ್ಕೋಸ್ಕರ ಶ್ಲೇಷ [೧೯], ಕಾವ್ಯಲಿಂಗ [೨೦], ಮೊದಲಾದ ಅಲಂಕಾರಗಳನ್ನು ತರುವುದಕ್ಕಾಗಿ ಕ್ಲಿಷ್ಟವಾದ ಕಠಿಣವಾದ ಅಪೂರ್ವ ಪದಗಳನ್ನು ಬಳಸಬಾರದೆಂಬುವುದಷ್ಟೇ ಕವಿಯ ಆಶಯ. ಕಾವ್ಯ ಸಹಜವಾಗಿರಬೇಕು ಪಾಂಡಿತ್ಯದ ಬಲದಿಂದ ಶ್ರಮಪಟ್ಟು ಜೋಡಿಸಿದ ಮಾತಿನ ಮಾಲೆ ಕಾವ್ಯವೆನಿಸುವುದಿಲ್ಲವೆಂದು ಅವನು ಅಭಿಪ್ರಾಯಪಟ್ಟಿದ್ದಾನೆ.

ನಯಸೇನನ ನಂತರ ೧೩ ನೇ ಶತಮಾನದ ಆಂಡಯ್ಯ ಅಚ್ಚಗನ್ನಡದಲ್ಲಿಯೇ ಕಾವ್ಯ ಬರೆಯುವ ಮೂಲಕ ಹೊಸ ಪ್ರಯೋಗವೊಂದನ್ನು ಕೈಗೊಂಡು ಪೂರ್ಣಗೊಳಿಸಿದನು. ಸಂಸ್ಕೃತವನ್ನು ಬೆರಸದೆ ಕಾವ್ಯ ರಚಿಸಲು ಸಾಧ್ಯವೇ ಇಲ್ಲವೆಂಬ ನಂಬಿಕೆಯಿದ್ದ ಕಾಲದಲ್ಲಿ ಅದಕ್ಕೆ ಪರ್ಯಾಯ ಮಾರ್ಗವೊಂದನ್ನು ಸೃಷ್ಟಿಸಿರುವುದಾಗಿ ಅವನು ಹೇಳಿಕೊಂಡಿದ್ದಾನೆ.

‘‘ ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳ ಪೇಟಲಾಜನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದಮನಾಳ್ದಿರೆ ಬಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ ’’[೨೧]

ಸೊಗಸಾಗಿರುವ ಸಂಸ್ಕೃತವನ್ನು ಬೆರೆಸಿದಲ್ಲದೆ ಕನ್ನಡದಲ್ಲಿ ಕಾವ್ಯವನ್ನು, ಸರಿಯಾಗಿ ಹೇಳಲಾಗದೆಂದು ಹಿಂದಿನ ಕವಿಗಳ ಅಭಿಪ್ರಾಯ. ಹಾಗಾಗಿ ಮಾತನಾಡಿದ ಹಾಗೆ ಅಂದವಾಗಿಯೂ, ಸಮರ್ಥವಾಗಿಯೂ, ಆಂಡಯ್ಯನ ಅಚ್ಚಗನ್ನಡ ಕಾವ್ಯದಲ್ಲಿ ಮಾತ್ರ ಸಿದ್ಧಿಸಲು ಸಾಧ್ಯ ಬೇರೆಯಾರಿಂದಲೂ ಅದು ಸಾಧ್ಯವಿಲ್ಲ ಎಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. ಆದುದರಿಂದ

‘‘ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸರಿಸುವೆನಿ
ನ್ನೆಂದಚ್ಚಗನ್ನಡ ಬಿಗಿ
ವೊಂದಿರೆ ಕಬ್ಬಿಗರ ಕಾವನೊಲವಿಂದೊರದೆಂ.’’[೨೨]

ಪಂಡಿತರು ತಮ್ಮ ತಮ್ಮಲ್ಲಿಯೇ ಮಾತಾಡಿಕೊಂಡಿರಲು, ಅವರ ಬಯಕೆಯನ್ನು ತೀರಿಸುವ ಸಲುವಾಗಿ ತಾನು ಅಚ್ಚಗನ್ನಡದಲ್ಲಿ ಬಿಗಿಯಾಗಿರುವ ರಚನೆಯಾದ ಈ ಕಾವ್ಯವನ್ನು ಪ್ರೀತಿಯಿಂದ ಹೇಳಿರುವೆನು ಎಂಬುದಾಗಿ ಆಂಡಯ್ಯನು ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ಎಂದರೆ ಸಂಸ್ಕೃತವನ್ನು ಬೆರಸದೆ ಕನ್ನಡದಲ್ಲಿ ಕಾವ್ಯ ರಚಿಸಲಾಗದು ಎಂದು ತಿಳಿದಿದ್ದ ಕಾಲದಲ್ಲಿ ಮಾತನಾಡಿದಂತೆ ಸರಳ ಸುಂದರವಾಗಿ ಅರ್ಥವಾಗುವಂತೆ ಕನ್ನಡದಲ್ಲಿಯೇ ರಚಿಸುವುದಾಗಿ

ಹಾಗೆಯೇ ಆಶಿಸಿದ್ದ ಪಂಡಿತರ ಬಯಕೆಯನ್ನು ತೀರಿಸುವುದಕ್ಕಾಗಿಯೇ ಅಚ್ಚಗನ್ನಡದಲ್ಲಿ ಕಬ್ಬಿಗರ ಕಾವ ರಚಿಸಿದ್ದಾಗಿ ಕವಿಯು ಹೇಳಿಕೊಂಡಿದ್ದಾನೆ.

ಇಲ್ಲಿ ಆಂಡಯ್ಯನು ಅಚ್ಚಗನ್ನಡದ ವಿವರಣೆಯನ್ನು ಕೊಟ್ಟ ಹಾಗೆ ತೋರುವುದಿಲ್ಲ. ಅಚ್ಚಗನ್ನಡದ ಬಿಗಿವೊಂದಿದ ಕಾವ್ಯ ರಚನೆಗೆ ತೊಡಗಿದ್ದರೂ ಛಂದಸ್ಸಿನ ವಿಷಯದಲ್ಲಿ ಸಂಸ್ಕೃತವನ್ನೇ ಅನುಸರಿಸಿದ್ದಾನೆ. ಅದುವರೆಗೂ ಪರಂಪರೆಯಾಗಿ ಬಂದ ಚಂಪೂವಿನ ರೂಪದಲ್ಲಿಯೇ ಅಚ್ಚಗನ್ನಡ ಭಾಷೆಗೆ ಸಂಸ್ಕೃತ ವೃತ್ತಗಳನ್ನು ಬಳಸಿಕೊಂಡು ಕಾವ್ಯರಚಿಸುವ ಶಕ್ತಿಯನ್ನು ಸಂಸ್ಕೃತ ಪ್ರಿಯರಾದ ಚಂಪೂ ಕವಿಗಳಿಗೆ ಹಾಗೂ ಚಂಪೂ ಪ್ರಿಯರಾದ ಕನ್ನಡ ಕವಿಗಳಿಗೆ ತೋರಿಸುವ ಉದ್ದೇಶ ಅವನಲ್ಲಿ ಎದ್ದು ಕಾಣುತ್ತದೆ. ಕಾವ್ಯದ ಭಾಷೆಗೆ ಸಂಬಂಧಿಸಿದಂತೆ ಅಚ್ಚಗನ್ನಡವನ್ನು ಭಾಷಾ ಪ್ರಯೋಗವೊಂದರಲ್ಲಿ ಬಿಟ್ಟು ಕಾವ್ಯದ ಉಳಿದ ವಿಷಯಗಳಾದ ಛಂದಸ್ಸು, ಶೈಲಿ, ವಸ್ತು ನಿರೂಪಣೆಯಲ್ಲಿ ಸಂಸ್ಕೃತ ಮಾದರಿಯನ್ನೇ ಅವಲಂಬಿಸಿದ್ದಾನೆ. ಸಂಸ್ಕೃತವನ್ನು ಬೆರಸದೆ ತತ್ಸಮ, ತದ್ಭವ, ದೇಶ್ಯ ಶಬ್ದಗಳ ಬಿಗುವಿನೊಂದಿಗೆ ಕಾವ್ಯ ರಚಿಸುವುದು ಇಲ್ಲಿ ಎದ್ದು ಕಾಣುವ ಅಂಶವಾಗಿದೆ.

ಅಚ್ಚಗನ್ನಡದ ಬಗೆಗೆ ಈ ಇಬ್ಬರು ಪ್ರಾಚೀನ ಕವಿಗಳು ಅಚ್ಚಗನ್ನದಲ್ಲಿ ಕಾವ್ಯ ರಚಿಸುವ ಕುರಿತು ಹೀಗೆ ಗಂಭೀರವಾಗಿ ಚಿಂತಿಸಿರುವುದು ಕಂಡುಬರುತ್ತದೆ. ಹಾಗೆ ನೋಡಿದರೆ ನಯಸೇನನಲ್ಲಿ ಒಂದು ಹೊಳಹಿನ ಹಾಗೆ ಕಂಡುಬರುವ ಅಚ್ಚಗನ್ನಡದ ಪರಿಕಲ್ಪನೆಯು ಆಂಡಯ್ಯನಲ್ಲಿ ಒಂದು ತಾತ್ತ್ವಿಕ ರೂಪದಲ್ಲಿ ಮತ್ತು ಪ್ರಾಯೋಗಿಕ ರೂಪದಲ್ಲಿ ರೂಪು ಪಡೆಯುತ್ತದೆ. ಈ ನಿಬಂಧದ ಬೇರೆ ಅಧ್ಯಾಯಗಳಲ್ಲಿ ತೋರಿಸಿರುವಂತೆ ಪ್ರಾಚೀನ ಕಾಲದಿಂದಲೂ ಕನ್ನಡದ ಕವಿಗಳು ತಂತಮ್ಮ ಕಾವ್ಯಗಳಲ್ಲಿ ಅಚ್ಚಗನ್ನಡದ ರಚನೆಗಳ ಬಗೆಗೆ ಆಸಕ್ತಿಯನ್ನು ತೋರಿಸುತ್ತಲೇ ಬಂದಿದ್ದಾರೆ. ಮಾರ್ಗ / ದೇಸಿಯ ಸಮನ್ವಯವೆಂದರೆ ಈ ದೃಷ್ಟಿಯಿಂದ ಅಚ್ಚಗನ್ನಡ ಮತ್ತು ಸಂಸ್ಕೃತ ಭೂಯಿಷ್ಠ ಶೈಲಿಗಳ ಮಿಶ್ರಣವೆಂಬುವುದನ್ನು ಮುಂದೆ ಚರ್ಚಿಸಲಾಗುವುದು. ಆದರೆ ಈ ಕಾವ್ಯ ಪರಂಪರೆಯ ಬಗೆಗೆ ಹಾಗೆಯೇ ಅಚ್ಚಗನ್ನಡ ಪರಿಕಲ್ಪನೆಯ ಕುರಿತು ಶಾಸ್ತ್ರೀಯವಾದ ಚರ್ಚೆ ವ್ಯವಸ್ಥಿತವಾಗಿ ಆಧುನಿಕ ಕಾಲಘಟ್ಟದಲ್ಲಿಯೇ ನಡೆದಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಆಧುನಿಕ ವಿದ್ವಾಂಸರು ಅಚ್ಚಗನ್ನಡದ ಬಗ್ಗೆ ಚರ್ಚಿಸುವಾಗಲೆಲ್ಲ ಅದರ ಐತಿಹಾಸಿಕತೆಯ ಬಗೆಗೂ ಚರ್ಚಿಸುತ್ತಾರೆ. ಮುಳಿಯರ ಲೇಖನದಲ್ಲಿ ಇದು ಸ್ಪಷ್ಟವಾಗುತ್ತದೆ. ಹಾಗಾದುದರಿಂದ ಆಧುನಿಕ ವಿದ್ವಾಂಸರ ಚಿಂತನೆಗಳಲ್ಲಿ ಮತ್ತೆ ನಯಸೇನ, ಆಂಡಯ್ಯರ ಕುರಿತ ವಿವರಗಳೇ ಪುನರಾವರ್ತನೆಯಾಗುವುದಾದರೂ ಒಂದು ಖಚಿತ ವಿವರಗಳಿಗಾಗಿ ಅವುಗಳನ್ನು ಯಥಾವತ್ತಾಗಿ ಇಲ್ಲಿ ನೀಡಲಾಗಿದೆ.

ಮುಳಿಯ ತಿಮ್ಮಪ್ಪಯ್ಯ:

ಅಚ್ಚಗನ್ನಡ ರಚನೆಯ ಬಗ್ಗೆ ಚರ್ಚಿಸಿದ ವಿದ್ವಾಂಸರಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಪ್ರಮುಖರು. ಅವರು ಅಚ್ಚಗನ್ನಡದ ಬಗೆಗೆ ವಿವರವಾಗಿ ಹೀಗೆ ಚರ್ಚಿಸಿದ್ದಾರೆ.[೨೩]

ಸಂಸ್ಕೃತ - ಕನ್ನಡ, ಮಾರ್ಗ-ದೇಸಿಗಳ ಚರ್ಚೆ ಕವಿರಾಜ ಮಾರ್ಗ ಕೃತಿಯ ಕಾಲದಿಂದಲೇ ನಡೆಯುತ್ತಾ ಬಂದಿದೆ. ಕನ್ನಡದಲ್ಲಿ ಸಂಸ್ಕೃತವನ್ನು ಬೆರಸಿ ಸಮಾಸ ಮಾಡಬಾರದು ಹಳಗನ್ನಡ ಪದಗಳನ್ನು ಬೆರಸಿ ಅಖಂಡ ಕರ್ನಾಟಕದಲ್ಲಿ ಕವಲೆಸಗಬಾರದು. 'ಸಕ್ಕದಮುಂ ಪಾಗ ದಮುಮಕ್ಕುಂ ಬಗೆದಂತೆ ಸಮಟೆ ಪೇಟಿಲ್' ಎಂದು ಕವಿರಾಜ ಮಾರ್ಗದಲ್ಲಿ

ಹೇಳಿದೆ. ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬೆರಸಲಾಗದು ಬೇಕಾದರೆ ಸಂಸ್ಕೃತ ಪ್ರತ್ಯಯಗಳನ್ನು ತೆಗೆದು ಕನ್ನಡದವುಗಳನ್ನಾಗಿ ಮಾಡಿ ಸಮಸಂಸ್ಕೃತವನ್ನಾಗಿಸಬಹುದು. ವಾಕ್ಯರಚನಕ್ರಮ, ಗುಣಲಂಕಾರಾದಿ ಪದ್ಧತಿ ಇವುಗಳಿಗೂ ಕೆಲವು ನಿಯಮ ಅವಶ್ಯಕವೆಂಬುದು ಮಾರ್ಗಕಾರನ ನಿಲುವು. ಮುಂದೆ ಬಂದ ನಯಸೇನ ಮೊದಲಾದವರ ನಿಲುವು ಇದೇ ಆಗಿದೆ. ಸಂಸ್ಕೃತದ ಅತಿಕ್ರಮವನ್ನು ನಯವಾಗಿಯೇ ವಿರೋಧಿಸಿದ ೧೩ನೇ ಶತಮಾನದ ಆಂಡಯ್ಯ 'ಕಬ್ಬಿಗರ ಕಾವ' ವನ್ನು ರಚಿಸಿ ಅಚ್ಚಗನ್ನಡವೆಂಬ ಹೊಸ ಪ್ರಯೋಗಕ್ಕೆ ಕಾರಣನಾದ ಆದರೂ ಆಂಡಯ್ಯನಿಗಿಂತಲೂ ಪೂರ್ವದಲ್ಲಿ ನಾಗವರ್ಮ ಮತ್ತು ಕೇಶಿರಾಜರಲ್ಲಿ ಶುದ್ಧಗೆಗಳ ವಿಚಾರ ಬರುವುದಾದರೂ ಒಂದು ಖಚಿತ ದೃಷ್ಟಿಕೋನದಿಂದ ಅಚ್ಚಗನ್ನಡದ ಶುದ್ಧಗೆಗಳ ಬಗೆಗೆ ಮೊದಲ ಬಾರಿಗೆ ಹೇಳಿದವನು ಕೇಶಿರಾಜನೆ ಎಂಬುದು ಮುಳಿಯರ ಅಭಿಪ್ರಾಯ. ಇದರ ಸಮರ್ಥನೆಗಾಗಿ ಅವರು ಕೇಶಿರಾಜನ ಈ ಪದ್ಯವನ್ನು ಉದಾಹರಿಸುತ್ತಾರೆ.

'' ತಿಳಿದೇಶೀಯಮಿವ್ವೆದಂ
ಕಳೆ ನೀಂ ಋ ಌ ವರ್ಣ ಶ ಷ ವಿಸರ್ಗ x ೦೦
ಕ್ಷಳನಂ ನಾಲ್ವತ್ತೇವಾ
ಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ''

(ಪದ್ಯ- ೪೩, ಪುಟ - ೬೩)

ಕೇಶಿರಾಜನು ಆಂಡಯ್ಯನು ಹೇಳುವ ಅಚ್ಚಗನ್ನಡವನ್ನೇ ನಿರ್ದೇಶಿಸಿ ಈ ನಿಯಮ ಹೇಳಿದನೆಂಬುದಾಗಿ ಮುಳಿಯರು ಬಲವಾಗಿ ಪ್ರತಿಪಾದಿಸುತ್ತಾರೆ. ಮುಂದುವರೆದು ಅವರು ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಉಲ್ಲೇಖಿತವಾಗಿರುವ ಅಚ್ಚಗನ್ನಡ ಪದ್ಯಗಳನ್ನು ವ್ಯಾಖ್ಯಾನಿಸುತ್ತಾ ಆ ಕಾಲದಲ್ಲಿ ಕೆಲವಾದರೂ ಅಚ್ಚಗನ್ನಡ ಕಾವ್ಯಗಳು ನೆಲೆಗೊಂಡಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅಚ್ಚಗನ್ನಡದ ಚಿಂತನೆಗೆ ಒಂದು ಪರಂಪರೆಯಿರುವುದನ್ನು ಮುಳಿಯರು ಗುರುತಿಸುತ್ತಾರೆ. ಹಾಗೆಯೇ ಆ ಪರಿಕಲ್ಪನೆಯನ್ನು ಹೀಗೆ ವಿವರಿಸುತ್ತಾರೆ.

ಆಂಡಯ್ಯನ ಪ್ರಕಾರ ಸಕ್ಕದಂಬೆರಸದುದೇ ಅಚ್ಚಗನ್ನಡ ಕೇಶಿರಾಜನು ಅಪಭ್ರಂಶಕ್ಕುಂ ದೇಶೀಯ ಪದಕಂ ಸಮಾಸಗೆಯ್ವುದು ಅಚ್ಚಗನ್ನಡಿಗರ ಪದ್ಧತಿಯೆಂದು ಹೇಳಿ ಸಕ್ಕದಂಬೆರಸದ ಅಂದರೆ

ಸಕ್ಕದಮುಂ ಮರೆಗೊಳ್ಳದೆ
ಚೊಕ್ಕಳಿಕೆಯಿನಚ್ಚಗನ್ನಡಂ ಬೇಬ್ಬರ ಕೆ
ಯ್ವೊಕ್ಕ ನಿಧಿಯೆನಿಪಪಭ್ರಂ
ಶಕ್ಕಂ ದೇಶೀಯ ಪದಕಮುಂಟು ಸಮಾಸಂ

ತದ್ಭವ, ತತ್ಸಮ, ದೇಶೀ ಪದಗಳಿಂದ ಕೂಡಿದುದೇ ಅಚ್ಚಗನ್ನಡವೆಂದು ಹೇಳಿದ್ದಾನೆ. ಮಾಗಧಿ ಶೂರಸೇನಿ ಮೊದಲಾದವುಗಳಂತೆ ಕನ್ನಡಕ್ಕೆ ಒಂದು ವಿಶಿಷ್ಟ ಪ್ರಾಕೃತ ಸ್ವರೂಪವನ್ನೊದಗಿಸುವುದೇ ಆಂಡಯ್ಯನ

ಉದ್ದೇಶವಾಗಿರಬೇಕೆಂದು ತೋರುತ್ತದೆ. ಇಲ್ಲಿ ಮುಳಿಯರು ನಯಸೇನ ಮತ್ತು ಆಂಡಯ್ಯರ ಬಗೆಗೆ ಕೆಲವರು ಮತ್ತೆ ಮತ್ತೆ ಎತ್ತಿರುವ ಆಕ್ಷೇಪಗಳಿಗೆ ಉತ್ತರಿಸುತ್ತಾರೆ. ಅದು ಈ ಇಬ್ಬರು ಕವಿಗಳು ತತ್ಸಮ ಮತ್ತು ತದ್ಭವಗಳನ್ನು ಬಳಸಿರುವುದರ ಬಗೆಗೆ ಕುರಿತ ಭಿನ್ನಾಭಿಪ್ರಾಯಗಳಿಗೆ ಸಂಬಂಧಿಸಿರುವುದಾಗಿದೆ. ಅಚ್ಚಗನ್ನಡ ರಚನೆಯಲ್ಲಿ ತತ್ಸಮ ತದ್ಭವಗಳಿಗೂ ಸಹಜವಾಗಿಯೇ ಸ್ಥಾನವಿದೆ ಎಂಬುದು ಮುಳಿಯರ ಖಚಿತ ಅಭಿಪ್ರಾಯ ಎಂಬುದನ್ನು ಗಮನಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮುಳಿಯರು ತಮ್ಮ ತರ್ಕವನ್ನು ಹೀಗೆ ಮುಂದುವರೆಸುತ್ತಾರೆ.

ತತ್ಸಮ; ಸಕ್ಕದ ಎರಡೂ ಬೇರೆ ಬೇರೆ ' ತೇನ ಸಮಂ ತತ್ಸಮಂ' ಅಂದರೆ ಸಂಸ್ಕೃತವಲ್ಲ ಅದರೊಡನೆ ಸಮಾನವಾದ ಬೇರೆ ಭಾಷೆಯ ಪದ. ಹಾಗಾಗಿ ಅದು ದೇಶಿ. ಇದರಿಂದ ತತ್ಸಮವು ದೇಶಿಯೊಡನೆ ಸಮಾಸಗೊಂಡರೂ ಅರಿಸಮಾಸ ದೋಷಕ್ಕೆ ಒಳಗಾಗದು. ಎಂಬುದನ್ನು ಕೇಶಿರಾಜನ ಪದ್ಯದಿಂದ ಸ್ಪಷ್ಟವಾಗುತ್ತದೆ. ಕೇಶಿರಾಜನು ತತ್ಸಮಗಳನ್ನು ಉದಾಹರಿಸಿದ್ದಾನೆ. (ಮಣಿ, ಮಂಚ, ತೋರಣಂ, ಪಟ್ಟಂ, ಇತ್ಯಾದಿ) ಇವೆಲ್ಲ ಸಂಸ್ಕೃತ ಗ್ರಂಥಗಳಲ್ಲಿ ಉಪಯೋಗಿಸುತ್ತಾ ಬಂದ ದೇಶಿಗಳೇ ಕಾರಣ ಇವುಗಳಲ್ಲಿ ಯಾವನ್ನು ತದ್ಭವವನ್ನಾಗಿ ಮಾಡಲಾಗದು. ಹಾಗಾಗಿ ತತ್ಸಮವೆಂದರೆ ಸಂಸ್ಕೃತ ಗ್ರಂಥದಲ್ಲಿ ಉಪಯೋಗಿಸುತ್ತ ಬಂದ ದೇಶೀಗಳೆಂದೇ ಮುಳಿಯರು ಅಭಿಪ್ರಾಯಪಡುತ್ತಾರೆ.

ಹೀಗೆ ಮುಳಿಯರು ಅಚ್ಚಗನ್ನಡ ಕಾವ್ಯ ಪರಂಪರೆಯು ಆಂಡಯ್ಯನಿಗಿಂತಲೂ ಪೂರ್ವದ್ದು ಎಂದೂ ಕೇಶರಾಜನ ಶಬ್ದಮಣಿದರ್ಪಣದಲ್ಲಿಯೇ ಅನೇಕ ಅಚ್ಚಗನ್ನಡ ರಚನೆಗಳಿವೆಯೆಂದೂ ತರ್ಕಬದ್ಧವಾಗಿ ಸಾಧಿಸಿದ್ದಾರೆ. ಅವರ ಪ್ರಕಾರ ಕೇಶಿರಾಜ ಅಚ್ಚಗನ್ನಡದ ಬಗೆಗೆ ಮೊದಲ ಬಾರಿಗೆ ವಿವರಣೆ ನೀಡಿದ ವೈಯಾಕರಣ ಆಂಡಯ್ಯ ಅಚ್ಚಗನ್ನಡ ಕಾವ್ಯ ಪರಂಪರೆಯನ್ನು ಕನ್ನಡ ಕಾವ್ಯ ಪರಂಪರೆಗೆ ಸೇರಿಸಿದ ಮುಖ್ಯ ಕವಿಗಳಲ್ಲೊಬ್ಬ.

ಕೊಳಂಬೆ ಪುಟ್ಟಣ್ಣಗೌಡರು:

ಕಾಲೂರ ಚೆಲುವೆ ಯನ್ನು ಬರೆದ ಕೊಳಂಬೆ ಪುಟ್ಟಣ್ಣಗೌಡರು ಆರಂಭದಲ್ಲಿ ಅಚ್ಚಗನ್ನಡದ ಬಗೆಗೆ ತಮ್ಮದೇ ಆದ ಅಭಿಪ್ರಾಯವನ್ನು ಹೀಗೆ ನೀಡಿದ್ದಾರೆ. ಅವರ ಮಾತುಗಳಲ್ಲಿಯೇ ವಿವರಿಸುವುದಾದರೆ ''ಇಂದು ನಾವಾಡುವ ನುಡಿಗಳಲ್ಲಿ ಕೆಲವೆಡೆ ನೂರರಲ್ಲಿ ನಲ್ವತ್ತರಿಂದ ಅರವತ್ತರವರೆಗೆ ಹೆರರ ನುಡಿಗಳೇ ತುಂಬಿರುತ್ತವೆ. ನಮ್ಮ ನುಡಿಗಳನ್ನು ಬೇಕಂತಲೇ ಕಡೆಗಣಿಸುತ್ತೇವೆ. ಕನ್ನಡ ನಾಡಿನ ಹೆಸರಿಗಾಗಿ ಕಚ್ಚಾಡುತ್ತೇವೆ. ಆದರೆ ಕನ್ನಡದಲ್ಲೇ ಮಾತನಾಡಬೇಕೆಂಬ ಒಲ್ಮೆಯಿಲ್ಲ. ಕನ್ನಡದಲ್ಲಿ ಮಾತನಾಡುವುದೆಂದರೆ ನಮ್ಮ ಮೇಲ್ಮೆಯನ್ನು ಇಳಿಕೈದಂತಾಗುವುದೆಂದು ಕೆಲವರು ಎಣಿಸಿದಂತೆ ತೋರುವುದು. ಹೀಗಾಗಿ ಕನ್ನುಡಿಯ ಚೆನ್ನಾದ ನುಡಿಯ ಹರಳುಗಳು ಅಲ್ಲಲ್ಲಿ ಕಣ್ಮರೆಯಾಗುತ್ತಾ ಬರುತ್ತಿವೆ. ಇದು ಸರಿಯಲ್ಲವೆಂಬುದು ನನ್ನ ಹುಚ್ಚೆಣಿಕೆ. ಈ ಹಂಬಲದ ಹೆಚ್ಚಳದಿಂದ ನೂರಾರು ಹಗಲಿರುಳು ಕನವರಿಸಿ ಕೊನೆಗೆ ಕಾಲೂರು ಚೆಲುವೆ ಬರೆದುದಾಗಿ ಹೇಳಿಕೊಂಡಿದ್ದಾರೆ. ಆಂಡಯ್ಯನಂತೆ ತದ್ಭವಗಳನ್ನೂ ಬಳಸದೆ ಸಂಪೂರ್ಣವಾಗಿ ಕನ್ನಡ ನುಡಿಯಲ್ಲೇ ಕಾವ್ಯ ರಚಿಸಿರುವುದು ಅವರ ವೈಶಿಷ್ಟ್ಯವಾಗಿದೆ.[೨೪] ಉದಾಹರಣೆಗೆ ಪ್ರಕೃತಿ ವರ್ಣನೆಯ ಪದ್ಯವನ್ನು ನೋಡಬಹುದು.

‘‘ಕನಲಿದುದು ಬಿರುವೆಲರ್

ಮರಗಿಡಂ ಬಾನ್ನೆಲಂ

ತೊನೆದಾಡಿ ನಡುಗಿದುದು

ಮೊದಲಾಯ್ತು ಮಳೆಗೆ

ಒನಲುತಿರೆ ಕಾರ್ಮೋಡ

ಪನಿವಲರ್ ಚೆಲ್ಲಿದುದು

ಹೊನ್ನಾಗಿ ಹೊಲವಾಗಿ

ಬೆಚ್ಚಾಯ್ತು ಕೊನೆಗೆ ’’[೨೫]

‘ಅಚ್ಚಗನ್ನಡ’ ಕುರಿತಾಗಿ ಇನ್ನೂ ಕೆಲವು ವಿದ್ವಾಂಸರು ಬೇರೆ ಬೇರೆ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅದರಲ್ಲಿ ಡಾ.ಎಸ್.ಎಸ್.ಕೋತಿನ ಮತ್ತು ರಾ.ಕುಲಕರ್ಣಿ ಅವರ ಅಭಿಪ್ರಾಯಗಳು ಮುಖ್ಯವಾದುವು. ಕೋತಿನ ಅವರು ಆಂಡಯ್ಯ ಎಂಬ ತಮ್ಮ ಸಂಶೋಧನಾ ಗ್ರಂಥದಲ್ಲಿ ಆ ಪರಿಕಲ್ಪನೆಯ ಕುರಿತು ಈ ರೀತಿ ವಿವರಿಸಿದ್ದಾರೆ.

ಡಾ.ಎಸ್.ಎಸ್.ಕೋತಿನ:

ಆಂಡಯ್ಯ ಅಚ್ಚಗನ್ನಡದಲ್ಲಿ ಕಾವ್ಯ ರಚಿಸುವುದಕ್ಕಿಂತಲೂ ಪೂರ್ವದಲ್ಲಿ ಚಂಪೂ ಕವಿಗಳು ಸಂಸ್ಕೃತ ಭೂಯಿಷ್ಟ ಶೈಲಿಯಲ್ಲಿ ಕಾವ್ಯ ರಚಿಸಿದರು. ಅವರು ಬದುಕಿದ್ದ ಪರಿಸರ ಮತ್ತು ಸಂಸ್ಕೃತ ಗ್ರಂಥಗಳನ್ನು ಓದಿ ಮೆಚ್ಚಿದ್ದ ಕವಿಗಳು ಅವುಗಳ ಸತ್ವ, ಸ್ವಾರಸ್ಯಗಳನ್ನು ಕನ್ನಡಕ್ಕೆ ಇಳಿಸಬೇಕೆಂದು ಬುದ್ಧಿಪೂರ್ವಕವಾಗಿ ಪ್ರಯತ್ನಿಸಿರುವುದರಿಂದಲೂ ಸಂಸ್ಕೃತದ ಪ್ರಭಾವ ಅವರ ಕನ್ನಡ ಕಾವ್ಯದಲ್ಲಿ ಬೆರೆತು ಬಂದಿರಬಹುದಾಗಿದೆಯೆಂದು ಅವರು ಅಭಿಪ್ರಾಯಪಡುತ್ತಾರೆ. ಮುಂದುವರೆದು ಅವರು ೧೧ನೇ ಶತಮಾನದ ಪೂರ್ವ ಮತ್ತು ನಂತರದ ಬಹುತೇಕ ಅರಸು ಮನೆತನಗಳು ಸಂಸ್ಕೃತ ಪಂಡಿತ ಕವಿಗಳಿಗೆ ಆಶ್ರಯ ನೀಡಿದ್ದರ ಪ್ರಭಾವವೂ ಕನ್ನಡ ಕವಿಗಳ ಮೇಲಾಗಿರಬಹುದು. ಅಲ್ಲದೆ ಸಂಸ್ಕೃತ ಭಾಷೆಗೆ ಮಾರ್ಗ ಎಂಬ ವಿಶ್ವಾತ್ಮಾಕ ವ್ಯಾಪ್ತಿಯೂ ಇತ್ತು. ಇದರಿಂದಾಗಿಯೇ ಅಧಿಕವಾಗಿ ಸಂಸ್ಕೃತ ಶಬ್ದಗಳನ್ನು ಬಳಸುವುದು ಕನ್ನಡಕ್ಕೆ ಕುಂದೆಂದು ಅವರು ಭಾವಿಸಿರಲಿಲ್ಲ ಎಂದೂ ತರ್ಕಿಸಿದ್ದಾರೆ.[೨೬]

ಕನ್ನಡದಲ್ಲಿ ಮಾರ್ಗ ಪರಂಪರೆಯನ್ನು ಒಪ್ಪಿಕೊಂಡಿದ್ದಾಗಲೂ ದೇಸಿಯನ್ನು ಕಡೆಗಣಿಸಿರಲಿಲ್ಲವೆಂಬುದಕ್ಕೆ ಪಂಪನ ಈ ಪದ್ಯವನ್ನು ಉದಾಹರಿಸಿದ್ದಾರೆ.

ಬಗೆಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್

ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧ ಮೊ

ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಬಿಯಿಂ ಬಟಲ್ದು ತುಂ

ಬಿಗಳನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲು (ಪ್ರ - ೩, ಪ - ೮)

ಕನ್ನಡದಲ್ಲಿ ಮಾರ್ಗವನ್ನು ಒಪ್ಪಿಕೊಂಡಾಗಲೂ ದೇಸಿಯನ್ನು ನಿರಾಕರಿಸಿಲ್ಲ. ಉಜ್ವಲವಾದ ಮಾರ್ಗ ಅಪೂರ್ವವಾದ ದೇಸಿ ಎರಡನ್ನೂ ತೂಕ ತಪ್ಪದಂತೆ ಬರೆಯುವುದು ಪಂಪನಂತವರಿಗೆ ಮಾತ್ರ ಸಾಧ್ಯ.

ಮುಂದುವರೆದು ಅವರು ಸಂಸ್ಕೃತದ ಅಳತೆ ಮೀರಿದ ಬೆರಕೆಯಿಂದ ಕನ್ನಡದ ಹದಗೆಡುತ್ತ ಹೋಗುತ್ತಿರುವ ಆತಂಕದ ಸ್ಥಿತಿಯನ್ನು ಅನೇಕ ಕವಿಗಳು ತಮ್ಮ ಕಾವ್ಯದ ಮೂಲಕ ಎಚ್ಚರಿಸಿದ್ದಾರೆ. ನಯಸೇನನಲ್ಲಿ ಅದು ಎದ್ದು ತೋರುತ್ತದೆ.

ಸಂಸ್ಕೃತ ಮಿಶ್ರವಾದ ಘನವಾದ ಪುರಾಣಗಳು ಅಪಂಡಿತರಾದ ಜನಸಾಮಾನ್ಯರಿಗೆ ಗಹನವಾದವು. ಅವರಿಗೆ ತಿಳಿಯತಕ್ಕದ್ದು ಬಳಕೆಯ ಮಾತು ಸುದ್ದಗನ್ನಡ. ಅದರಲ್ಲಿ ಅರ್ಥವಾಗದ ಸಕ್ಕದವನ್ನು ತಂದಿಕ್ಕಬಾರದು ಇಕ್ಕಿದರೆ ಕಾವ್ಯದ ಉದ್ದೇಶ, ಮತಪ್ರಚಾರ ಎರಡೂ ವ್ಯರ್ಥವಾಗುವವು. ಇದನ್ನು ಅರಿತ ಆಂಡಯ್ಯನು ಸಂಸ್ಕೃತವನ್ನು ಬಿಟ್ಟು ಕನ್ನಡದಲ್ಲಿ ಕಾವ್ಯ ರಚನೆ ಸಾಧ್ಯ ಎಂಬುದನ್ನು ತೋರಿಸುವ ಸಲುವಾಗಿಯೇ ಕಬ್ಬಿಗರ ಕಾವ ವೆಂಬ ಅಚ್ಚಗನ್ನಡ ಕಾವ್ಯ ರಚನೆಯ ಪ್ರಯತ್ನ ಮಾಡಿರುವುದಾಗಿ ಕಾವ್ಯದ ಆರಂಭದಲ್ಲಿ ಹೇಳಿಕೊಂಡಿರುವುದನ್ನು ಅವರು ವಿವರಿಸುತ್ತಾರೆ. ಎಲ್ಲಿಯೂ ಅವರು ಸಂಸ್ಕೃತವನ್ನು ತಿರಸ್ಕರಿಸುವುದಿಲ್ಲ, ಜರಿಯುವುದಿಲ್ಲ. 'ಅಚ್ಚಗನ್ನಡಂ ಬಿಗಿವೊಂದಿರೆ ಬರೆದಂ' ಎಂಬ ಮಾತಿನಲ್ಲಿ ಕನ್ನಡವೂ ಕಾವ್ಯ ರಚನೆಗೆ ಸಮರ್ಥವಾಗಿದೆ, ಸ್ವತಂತ್ರವಾಗಿದೆ ಎಂಬ ವಿಶ್ವಾಸವಿರುವುದಾಗಿ ತಿಳಿಸುತ್ತಾರೆ.

ಆಂಡಯ್ಯನ ಅಚ್ಚಗನ್ನಡವೆಂದರೆ ಶುದ್ಧ ದೇಶ್ಯ ಅಥವಾ ಕೇವಲ ಕನ್ನಡವಲ್ಲ, ತದ್ಭವಗಳ ಜೊತೆಗೆ - ಪಟ್ಟ, ತೋರಣ, ಅಟ್ಟ, ಸಬಳ, ಬಲ, ಅಂಗಣ, ಬಂದಿ ಮುಂತಾದ-ತತ್ಸಮಗಳೂ ಸೇರುತ್ತವೆ. ಕನ್ನಡದ ಸಂಸ್ಕಾರ ಪಡೆದ ಶಬ್ದಗಳೆಲ್ಲವೂ ಅಚ್ಚಗನ್ನಡ ಕೋಶಕ್ಕೆ ಸೇರುತ್ತವೆ. ಅಲ್ಲದೆ ಅನೇಕ ಸಂಸ್ಕೃತ ಪದಗಳನ್ನು ಬೇರೆ ಅರ್ಥದಲ್ಲಿಯಾದರೂ ನೇರವಾಗಿಯೇ ಬಳಸಿದ್ದಾನೆ. ಇವು ಕವಿಯ ಅರಿವಿಗೆ ಬಾರದಂತೆ ಕಾವ್ಯ ಭಾಷೆಯಲ್ಲಿ ಸೇರಿಕೊಂಡಿರಬಹುದೆಂದು ಊಹಿಸುತ್ತಾರೆ. ಮುಂದುವರೆದು ಅವರು ಕನ್ನಡಭಾಷೆಯು ಜೈನರಿಂದ ಕಾವ್ಯಭಾಷೆಯಾಗುವ ಸೌಭಾಗ್ಯ ಪಡೆದರೂ ವೈದಿಕ ಧರ್ಮದ ಪ್ರಭಾವಲಯದಲ್ಲಿಯೇ ಬೆಳೆದ ಪಂಡಿತರಿಗಾಗಿಯೇ ಕವಿಗಳು ಕಾವ್ಯ ರಚಿಸತೊಡಗಿದರು. ಹಾಗಾಗಿ ಕನ್ನಡದಲ್ಲಿ ಸಂಸ್ಕೃತದ ಅತಿಕ್ರಮಣ ಮುಂದುವರೆಯಿತು. ಧರ್ಮ ಪ್ರಚಾರದ ದೃಷ್ಟಿಯಿಂದ ಕನ್ನಡವನ್ನು ಅವಲಂಬಿಸಿದರೂ ಪಾಂಡಿತ್ಯದ ದೃಷ್ಟಿಯಿಂದ ಸಂಸ್ಕೃತವನ್ನು ಆರಾಧಿಸುತ್ತಾ ಬಂದರು. ಹಾಗೂ ಅವರು ಕನ್ನಡದಲ್ಲಿ ಸಂಸ್ಕೃತದ ಅತಿಕ್ರಮಣವನ್ನು ನಿಯಂತ್ರಿಸಲು ಸಮರ್ಥರಾದರೇ ಹೊರತು ತೊಡೆದು ಹಾಕಲು ಸಮರ್ಥರಾಗಲಿಲ್ಲ. ಮುಂದೆ, ವಸ್ತು, ವಿಷಯ, ಛಂದಸ್ಸು ಭಾಷೆಯಲ್ಲಿ ಕವಿಗಳು ಮಾತ್ರವಲ್ಲ ವಯಾಕರಣಿಗಳೂ ಕೂಡ ಸಂಸ್ಕೃತ ವ್ಯಾಕರಣದ ಚಾಕಟ್ಟಿನಲ್ಲಿ ಕನ್ನಡ ಭಾಷೆಯನ್ನು ಸೇರಿಸಲು ಯತ್ನಿಸಿದರು. ಅದುವರೆಗಿನ ಕನ್ನಡ ಕಾವ್ಯಗಳು ಸಂಸ್ಕೃತ ವಾಙ್ಮಯದ ವೈಭವಕ್ಕೆ ಬೆರಗಾಗಿ ಅನುಕರಿಸುತ್ತ ಅದನ್ನೇ ಆಕರವನ್ನಾಗಿ ಬಳಸಿಕೊಂಡು ಬೆಳೆದು ಬಂದವು. ಸಮಕಾಲೀನರಾದ ರುದ್ರಭಟ್ಟ, ನೇಮಿಚಂದ್ರ, ಜನ್ನರಂಥ ಜೈನಕವಿಗಳು ಸಂಸ್ಕೃತ ಭಾಷಾ ಕವಿಗಳು ಕನ್ನಡ ಭಾಷೆಯ ಬಗೆಗೆ ಅಭಿಮಾನವಿದ್ದಾಗಲೂ ಸಕ್ಕದವನ್ನು ಬೆರಸದೆ ಅಚ್ಚಗನ್ನಡದಲ್ಲಿ ಮನಂಗೊಳೆ ಕಾವ್ಯ ರಚಿಸುವಲ್ಲಿ ಹತಾಶರಾದರು. ಆದರೆ ಆಗ ಆಂಡಯ್ಯ ಮಾತ್ರ ಪ್ರತಿಜ್ಞಾರೂಢನಾಗಿ ಅಚ್ಚಗನ್ನಡದ

ರಚನೆಗೆ ತೊಡಗುತ್ತಾನೆ. ಕನ್ನಡ ಸಾಹಿತ್ಯ ಲೋಕದಲ್ಲಿ ಆಂಡಯ್ಯನ ಹೆಸರಿಗೆ ಅಮರತ್ವವನ್ನು ಕಲ್ಪಿಸಿ ಆತನ ಕಾವ್ಯಕ್ಕೊಂದು ಶಾಶ್ವತವಾದ ಪೀಠ, ಪ್ರತಿಷ್ಠೆಯನ್ನು ಆತನ ಅಚ್ಚಗನ್ನಡದ ಒಲವು ತಂದು ಕೊಟ್ಟಿದೆ. ಕಾವ್ಯದ ವೈಶಿಷ್ಟ್ಯ ಎದ್ದು ಕಾಣುವುದು ಅಚ್ಚಗನ್ನಡದ ಧೋರಣೆಯಲ್ಲಿ ಮಾತ್ರ.

ಅಚ್ಚಗನ್ನಡದಲ್ಲಿ ಕಾವ್ಯ ರಚನೆಗೆ ತೊಡಗಿದ ಆಂಡಯ್ಯನ ಉದ್ದೇಶ ಕನ್ನಡವು ಗ್ರಂಥಸ್ಥ ಭಾಷೆಯಾಗಲು ಬಹುವಿಧದಲ್ಲಿ ಸತ್ವವನ್ನು ತಂದುಕೊಟ್ಟ ಕನ್ನಡ ಸಾಹಿತ್ಯದ ಪ್ರೇರಕ ಪೋಷಕ ಗುರು ಎಂಬ ಅಭಿಮಾನಕ್ಕೆ ಪಾತ್ರವಾದ ಸಂಸ್ಕೃತದ ಬಗೆಗೆ ಅಸಹನೆಯನ್ನು ಪ್ರದರ್ಶಿಸುವುದಾಗಿರಲಿಲ್ಲ. ಅಚ್ಚಗನ್ನಡದಲ್ಲಿಯೇ ಕಾವ್ಯ ರಚಿಸಬೇಕೆಂಬ ಪೂರ್ವಾಲೋಚನೆಯಲ್ಲಿದ್ದಾಗಲೇ ಕನ್ನಡ ಭಾಷೆಯ ಇತಿಮಿತಿಯನ್ನು ಅದರ ಅಭಿವ್ಯಕ್ತಿಯ ಸಾಧ್ಯತೆಯ ಲೆಕ್ಕಾಚಾರದಲ್ಲಿದ್ದ ಕವಿ ಕೃತಿ ರಚನೆಗೊಳಗಾದಾಗ ಅದರ ಕಠಿಣ ಸಾಧ್ಯತೆಯನ್ನು ಕಂಡುಂಡವನಾಗಿದ್ದರಿಂದ ಅಂಥ ಒಂದು ಹೊಸ ಪ್ರಯೋಗ ಒಂದು ಹೊಸ ಪರಂಪರೆಯಾಗಿ ನಿಂತುಕೊಂಡೀತು ಎಂಬ ಭರವಸೆ ಸ್ವತಃ ಆಂಡಯ್ಯನಿಗೂ ಇರಲಿಕ್ಕಿಲ್ಲ. ಮಿಕ್ಕ ಕವಿಗಳ ಕಾವ್ಯದಲ್ಲಿ ಹಲ ಕೆಲವು ಪದ್ಯಗಳಲ್ಲಿ ಮಾತ್ರ ಅಚ್ಚಗನ್ನಡದ ದುಡಿಮೆ ಕಂಡುಬಂದಿರುವಾಗ ಸಮಗ್ರ ಕಾವ್ಯ ನಿರ್ಮಾಣಕ್ಕೆ ಬೇಕಾಗುವ ಕನ್ನಡ ಭಾಷೆಯ ಧಾರಣ ಶಕ್ತಿಯನ್ನು ಶಂಕಿಸಿದ ಪಂಡಿತ ಕವಿಗಳ ಸಂದೇಹ ನಿವಾರಣೆ ಆಂಡಯ್ಯನ ಕಾವ್ಯಕ್ಕೆ ಪ್ರೇರಣೆಯನ್ನೊದಗಿಸಿದಂತಿದೆ. ಅಚ್ಚಗನ್ನಡದ ಶಕ್ತಿಅದರ ಅಭಿವ್ಯಕ್ತಿಯ ಸಾಧ್ಯಸಾಧ್ಯತೆಗಳನ್ನು ಒರೆಗೆ ಹಚ್ಚಿ ಅದರ ತೇಜಸ್ಸನ್ನು ಕಂಡುಕೊಳ್ಳುವ ಪ್ರಯತ್ನ. ಅಲ್ಲದೆ ಅದನ್ನು ತೋರುಗೊಟ್ಟು ಕಬ್ಬಿಗರ ಹಾಗೂ ಕನ್ನಡ ಭಾಷೆಯ ಮಾನ ರಕ್ಷಣೆಯ ಪ್ರಯತ್ನ ಮಾಡಿರುವುದರ ಫಲವಾಗಿ ಕಬ್ಬಿಗರ ಕಾವ ಮೂಡಿಬಂದಿದೆಯಲ್ಲದೆ ಪರಂಪರೆಯ ನಿರ್ಮಾಣದ ಉದ್ದೇಶದಿಂದಲ್ಲ ಎಂದು ಕೋತಿನ ಹೇಳುತ್ತಾರೆ.

ಆಂಡಯ್ಯನ ಅಚ್ಚಗನ್ನಡ ಬಿಗಿವೊಂದಿದ ಕಾವ್ಯರಚನೆಗೆ ತೊಡಗಿದ್ದರೂ ನಿಸ್ಸಂಕೋಚವಾಗಿ ಛಂದಸ್ಸಿನ ವಿಷಯದಲ್ಲಿ ಸಂಪೂರ್ಣವಾಗಿ ತೆರೆದ ಮನಸ್ಸಿನಿಂದ ಸಂಸ್ಕೃತವನ್ನು ಅನುಸರಿಸಿದ್ದಾನೆ. ಒಟ್ಟಿನಲ್ಲಿ ಆಂಡಯ್ಯನ ಅಚ್ಚಗನ್ನಡವು ಕೇವಲ ಭಾಷಾ ಪದ ಪ್ರಯೋಗಕ್ಕೆ ಮಾತ್ರ ಮರ್ಯಾದಿತವಾಗಿರುವುದು ಪ್ರಧಾನ ಲಕ್ಷಣವಾಗಿದೆ. ಕನ್ನಡ ಭಾಷೆಯ ಶಬ್ದಕೋಶದಲ್ಲಿ ಪ್ರಧಾನವಾಗಿ ಸಮಸಂಸ್ಕೃತ ತತ್ಸಮ, ತದ್ಭವ ಹಾಗೂ ದೇಶ್ಯ ಪ್ರಭೇದಗಳು ಕಂಡುಬರುತ್ತವೆ. ಆಂಡಯ್ಯನ ಕಬ್ಬಿಗರ ಕಾವದಲ್ಲಿ ಹೇರಳವಾದ ರೀತಿಯಲ್ಲಿ ದೇಶ್ಯ ಶಬ್ದಗಳು. ಅದಕ್ಕೂ ಕಡಿಮೆ ಪ್ರಮಾಣದಲ್ಲಿ ತದ್ಭವಗಳು ಕೆಲವು ತತ್ಸಮಗಳು ಮತ್ತು ಇಂದಿನ ವಿಮರ್ಶಕರು ಸಮಸಂಸ್ಕೃತವೆಂದು ಹೇಳುವ ಕೆಲವು ಪದಗಳು ದೊರೆಯುತ್ತವೆ. ಆಂಡಯ್ಯನ ಪ್ರಕಾರ

೧. ಸಂಸ್ಕೃತವನ್ನು ಬೆರಸಬಾರದು

೨. ಅದು ಮಾತನಾಡಿದಂತೆ ಸೊಗಸಾಗಿರಬೇಕು

೩. ಅಚ್ಚಗನ್ನಡದಿಂದ ಅಂದರೆ ದೇಶ್ಯ ಶಬ್ದಗಳಿಂದ ಬಿಗುವಾಗಿರಬೇಕೆಂಬುದು ಆತನ ನಿಲುವು.

ಈ ಮೂರೂ ಆತನ ಪ್ರಜ್ಞೆಯಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ಅಂದರೆ ಸಂಸ್ಕೃತವನ್ನು ಬೆರಸದೆ ತತ್ಸಮ, ತದ್ಭವ, ದೇಶ್ಯ ಶಬ್ದಗಳ ಬಿಗುವು ಎದ್ದು ಕಾಣುವುದು ಆತನ ದೃಷ್ಟಿಯಲ್ಲಿ ಅಚ್ಚಗನ್ನಡದ ಸ್ವರೂಪ. ಅಚ್ಚಗನ್ನಡವೆಂದರೆ ಆಧುನಿಕರು ಭಾವಿಸುವಂತೆ ಕೇವಲ ಕನ್ನಡ ದೇಶ್ಯಗಳು ಮಾತ್ರವಷ್ಟೇ ಅಲ್ಲ ಒಟ್ಟಿನಲ್ಲಿ ದೇಶ್ಯ,

ತತ್ಸಮ. ತದ್ಭವ ಶಬ್ದಗಳು ಕೂಡಿ ಫಲಿತವಾದ ನುಡಿಗನ್ನಡ ಎಂದು ಮುಳಿಯರಿಗೆ ಪೂರಕವಾಗಿ ವಾದಿಸುತ್ತಾರೆ. ಸಂಸ್ಕೃತದ ಶಬ್ದ ಸ್ವೀಕರಣವನ್ನುಳಿದು ಉಳಿದೆಲ್ಲ ಬಗೆಯ ಅಂದರೆ ಸ್ಥಾನಾಂತರ ಸ್ವೀಕರಣ, ಭಾಷಾಂತರ ಸ್ವೀಕರಣ ಮತ್ತು ರೂಪಾಂತರ ಸ್ವೀಕರಣಗಳು ಅಚ್ಚಗನ್ನಡದಲ್ಲಿ ಸ್ವಾಗತಾರ್ಹ. ಅನ್ಯದೇಶ್ಯಗಳು ಉಚ್ಚಾರಣ ದೃಷ್ಟಿಯಿಂದ ಕನ್ನಡಕ್ಕೆ ಸಮೀಪವಾದ್ದರಿಂದ ಮೇಲಿನ ಎಲ್ಲ ಬಗೆಯ ಸ್ವೀಕರಣವೂ ನಡೆಯಬಹುದು ವಿದೇಶೀಯ ಪದಗಳನ್ನು ಸೌಂದರ್ಯಕ್ಕೆ ಬಾಧೆ ಬರದಂತೆ ತನ್ನ ಸೊಲ್ಲಿಗೆ ಅನುಗುಣವಾಗಿ ಬೇರೊಂದು ಭಾಷೆಯು ಪರಿವರ್ತಿಸಿಕೊಳ್ಳುವುದೇ ತದ್ಭವ ವಿಧಾನ. ಅದರಲ್ಲಿ ಸಹಜ ತದ್ಭವಗಳು ಮತ್ತು ಕೃತಕ ತದ್ಭವ ಪ್ರಧಾನವಾದವು. ಈ ತದ್ಭವಗಳನ್ನೇ ಕೇಶಿರಾಜ ಅಪಭ್ರಂಶ ಎಂದು ಕರೆದಿದ್ದಾನೆ. ಅಪಭ್ರಂಶವೆಂದರೆ ಸಂಸ್ಕೃತದಿಂದ ಹೆಚ್ಚು ಕಡಿಮೆ ವಿಕಾರ ಹೊಂದಿ ಪ್ರತ್ಯೇಕತೆಯನ್ನು ಪಡೆದುಕೊಂಡ ಶಬ್ದಗಳು. ತದ್ಭವಗಳನ್ನು ಅಚ್ಚಗನ್ನಡವೆಂದು ಆಂಡಯ್ಯ ಮಾತ್ರವಲ್ಲ ಆತನ ಸಮಕಾಲೀನ ಕವಿ, ವಯಾಕರಣಿಗಳೂ ತಿಳಿದಿರುವುದು ಕಂಡುಬರುತ್ತದೆಂದು ಅಭಿಪ್ರಾಯಪಡುತ್ತಾರೆ. ಇಲ್ಲೆಲ್ಲ ಮುಳಿಯರ ಚಿಂತನೆಯ ನೆರಳಿರುವುದು ಸ್ಪಷ್ಟವೇ ಇದೆ.

ರಾ.ಕುಲಕರ್ಣಿ:

ಮುಳಿಯರು ಹಾಗೆಯೇ ಆಂಡಯ್ಯನ ಸಮಕಾಲೀನನಾದ ಕೇಶಿರಾಜನ ಅಚ್ಚಗನ್ನಡದೊಂದಿಗೆ ಆಂಡಯ್ಯನ ಅಚ್ಚಗನ್ನಡವನ್ನು ಕುಲಕರ್ಣಿಯವರು ಹೋಲಿಸಿ ವಿಶ್ಲೇಷಿಸಿದ್ದಾರೆ.[೨೨] ಆಂಡಯ್ಯ ಅಚ್ಚಗನ್ನಡ ಬಿಗಿವೊಂದಿರೆ ಎಂದು ಹೇಳಿದನಲ್ಲದೆ ಅಚ್ಚಗನ್ನಡ ಲಕ್ಷಣವನ್ನೇನೂ ಹೇಳಿಲ್ಲ. ಅಚ್ಚಗನ್ನಡದ ಬಗ್ಗೆ ನಿರ್ದಿಷ್ಟವಾದ ಹಾಗೂ ಸ್ಪಷ್ಟವಾದ ಕಲ್ಪನೆ ಆಂಡಯ್ಯನ ಕಾಲದಲ್ಲಿ ಪ್ರಚಲಿತವಾಗಿರಬೇಕು. ಕೇಶಿರಾಜ ತನ್ನ ಅಪಭ್ರಂಶ ಪ್ರಕರಣದಲ್ಲಿ ಈ ರೀತಿ ಹೇಳಿದ್ದಾನೆ.

> ''ಸಕ್ಕದಮಂ ಮೆಟಿಗೊಳ್ಳದೆ
> ಚೊಕ್ಕಳಿಕೆಯಿನಚ್ಚಗನ್ನಡಂ ಬೇಲ್ವಿರ ಕ
> ಯ್ವೊಕ್ಕ ನಿಧಿಯನಿಪಭ್ರಂ
> ಶಕ್ಕಂ ದೇಶಿಯ ಪದಕಮಂಟು ಸಮಾಸಂ '' (ಪದ್ಯ - ೩೧೪, ಪುಟ - ೩೧೨)

ಸಂಸ್ಕೃತದಿಂದ ತದ್ಭವಗಳನ್ನು ಸ್ವೀಕರಿಸುವುದು ಅಚ್ಚಗನ್ನಡ ಲಕ್ಷಣಕ್ಕೆ ಸರಿಹೊಂದುವುದಿಲ್ಲ. ಆದರೂ ಆಂಡಯ್ಯನ ಅಚ್ಚಗನ್ನಡ ಪರಿಕಲ್ಪನೆಯಲ್ಲಿ ತದ್ಭವಗಳೂ ಸೇರುತ್ತವೆ ಎಂದು ಅವರು ನಯವಾಗಿ ಆಕ್ಷೇಪಿಸುತ್ತಾರೆ.

ಮಾತುಮಾತಿಗೂ ದೇಶಿಯನ್ನು ಹುಡುಕುವುದು ಕಷ್ಟವಾಗುತ್ತದೆ. ಹಾಗಾಗಿ ಆಂಡಯ್ಯನು ತದ್ಭವಗಳನ್ನು ಬಳಸಿಕೊಂಡಿದ್ದಾನೆ. ಹೊಸ ಸೃಷ್ಟಿಗಿಂತಲೂ ಹಳಯದನ್ನು ಮಾರ್ಪಡಿಸಿಕೊಂಡಿದ್ದಾನೆ. ಸಂಸ್ಕೃತ ಪದಗಳನ್ನು ವಿಕೃತಗೊಳಿಸುವ ಕೆಲಸ ಮಾಡದೆ ಕೆಲವೊಂದು ಜನ ಬಳಕೆಯಲ್ಲಿದ್ದ ಶಬ್ದಗಳನ್ನು ನೇರವಾಗಿಯೇ ಸ್ವೀಕರಿಸಿ ಬಳಸಿಕೊಂಡಿದ್ದಾನೆ. ಹಾಗಾಗಿ ಆಂಡಯ್ಯ ಅಚ್ಚಗನ್ನಡದ ಹಟಕ್ಕೆಬಿದ್ದು ವಿಚಿತ್ರ ತದ್ಭವಗಳನ್ನು ರೂಪಿಸಿಕೊಂಡನೆಂಬ ಆಕ್ಷೇಪ ಅರ್ಥವಿಲ್ಲದ್ದು, ಆದರೆ ಆಂಡಯ್ಯನಿಗಿಂತಲೂ ಪೂರ್ವದಲ್ಲಿ ಅನೇಕ ಕವಿಗಳು ಇಂತಹ ತದ್ಭವಗಳನ್ನು ಮಾಡಿಕೊಂಡಿರುವುದನ್ನು ಅವರು ಉದಾಹರಿಸುತ್ತಾರೆ. ನಾಗವರ್ಮನ ಕಾದಂಬರಿ ಮತ್ತು ಅಭಿಧಾನವಸ್ತುಕೋಶ,

ನಾಗಚಂದ್ರನ ರಾಮಚರಿತ ಪುರಾಣ, ಕರ್ಣಪಾರ್ಯನ ನೇಮಿನಾಥ ಪುರಾಣ, ನೇಮಿಚಂದ್ರನ ಅರ್ಧನೇಮಿಪುರಾಣ, ರಾಘವಾಂಕನ ಸಿದ್ಧರಾಮಚಾರಿತ್ರ್ಯ ಹಾಗೂ ಹರಿಶ್ಚಂದ್ರ ಕಾವ್ಯದಿಂದ ಉದಾಹರಣೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ-

ಅರ್ಘ್ಯ - ಅಗ್ಗ	ಅಸ್ಥಿರ - ಅಂಚಿರ
ಅಪ್ಸರಸ್ - ಅಚ್ಚರಸಿ	ಹನುಮಾತ್ - ಅಣುವ
ಉತ್ಕಟ - ಉಗ್ಗಡ	ದಿಗ್ದಂತಿ - ದಿಗುದಂತಿ
ದೂತಿ - ದೂದವಿ	ಕ್ರಮ - ಕವ
ವಾತಾಯಣ - ಬಾದವಣ	ಧರ್ಮ - ದಮ್ಮ
ಯಶೋಧ - ಜಸದೆ	ಹಿಂಸೆ - ಇಂಚೆ
ತ್ವರಿತ - ಚರಿತ	ಪಾಶ - ಹಾಸ, ಇತ್ಯಾದಿ.

ಪೂರ್ವಕವಿಗಳಿಗಿಂತ ಹೆಚ್ಚಾಗಿಯೇ ಆಂಡಯ್ಯನಿಗೆ ತದ್ಭವಗಳ ಅಗತ್ಯವಿದ್ದರಿಂದ ಸ್ವಲ್ಪ ಹೆಚ್ಚಾಗಿಯೇ ಸೃಷ್ಟಿಸಿದ. ಉದಾಹರಣೆಗೆ

ಶ, ಷ, ಸ ಗಳಿಗೆ ಸಬುದು, ಸಬರಿ, ಸಂಕೆ, ಸಾರಿ ಎಂದೂ

ಮ - ವಗಳಿಗೆ - ಚಂದವ, ಹಿವಗದಿರ, ಜವ, ಕುಂಕುವ

ವ - ಬಗಳಿಗೆ - ಬಾಸುಗಿ, ಬಲ್ಲಹ, ಬನ್ನ, ಬಾಡ, ಬಚ್ಚಣೆ

ಮಹಾಪ್ರಾಣ	-	ಅಲ್ಪಪ್ರಾಣ
ಖಡ್ಗ	-	ಕಡುಗ
ಶ್ರೀಕಂಠ	-	ಸಿರಿಕಂಟ
ಘೋಷ	-	ಗೋಸ
ದುಷ್ಟ	-	ದುಟ್ಟ

ವಿಜಾತೀಯ ದ್ವಿತ್ವ ಸಜಾತಿಯಾಗುವುದು.

ಗೋಷ್ಠಿ	-	ಗೊಟ್ಟಿ
ಉತ್ಕಟ	-	ಉಗ್ಗಡ
ದರ್ಪ	-	ದಪ್ಪ
ನಿರ್ಭರ	-	ನಿಬ್ಬರ

ಮುಂದುವರೆದು ಕುಲಕರ್ಣಿಯವರು ಕೇಶಿರಾಜನ ಶಬ್ದಮಣಿದರ್ಪಣದ ನಿಯಮಾನುಸಾರವೇ ಆಂಡಯ್ಯನ ತದ್ಭವಗಳಿವೆಯೆಂದು ವಿವರಿಸುತ್ತಾರೆ. ಉದಾಹರಣೆಗೆ ಅಮವಾಸ್ಯೆ - ಅವಸಿ, ಮರ್ಕಟಂ - ಮಂಕಡಂ, ಸೃಷ್ಟಿ - ಸಿಟ್ಟಿ ಇತ್ಯಾದಿ. ಆಂಡಯ್ಯ ಬಳಸಿರುವ ಶಬ್ದಗಳಲ್ಲಿ ಮುಕ್ಕಾಲು ಪಾಲು ದೇಶ್ಯವಿದ್ದು ಉಳಿದವು ತದ್ಭವಗಳಿವೆ.

ಆದರೆ ಆಂಡಯ್ಯನ ತದ್ಭವಗಳೆಲ್ಲವೂ ಸಮುಚಿತ ಮಾರ್ಪಾಡುಗಳೆಂದು ಹೇಳಲಾಗದು. ಆದರೂ ಇಂಥ ಶಬ್ದಗಳ ಸಂಖ್ಯೆ ತೀರಾ ಕಡಿಮೆಯಾದುದು. ತದ್ಭವಗಳನ್ನು ಸ್ವೀಕರಿಸುವುದು ಸಂಸ್ಕೃತಕ್ಕೆ ಒಪ್ಪಿಕೊಂಡ ಸೋಲು ಅಲ್ಲ, ಗೆಲವೂ ಅಲ್ಲ, ಸಂಸ್ಕೃತವನ್ನು ಕೆಡಸಿ ತದ್ಭವಗಳನ್ನು ಮಾಡಿಕೊಳ್ಳಲಿಲ್ಲ. ತದ್ಭವಗಳಾದದ್ದು ಭಾಷೆಯ ನಿಯಮದಿಂದ ಪ್ರತಿಯೊಂದು ನುಡಿಗೂ ಒಂದು ವೈಶಿಷ್ಟ್ಯ; ಭಾಷೆಯ ರೂಪ, ಗತಿ, ಧ್ವನಿಗಳಲ್ಲಿ ಒಂದು ವಿಶಿಷ್ಟವಾದ ಸಾಂಗತ್ಯ ಸಾಮರಸ್ಯವಿರುತ್ತದೆ. ಪರಭಾಷೆಯ ಶಬ್ದಗಳು ಅದರಲ್ಲಿ ಬರಬೇಕಾದರೆ ಅದಕ್ಕೆ ಹೊಂದಿಕೊಳ್ಳದೆ ಗತಿಯಿಲ್ಲ. ಈ ನಿಯಮವನ್ನನುಸರಿಸಿಯೆ ತದ್ಭವಗಳಾದುದು. ಹೀಗೆ ಸಂಸ್ಕಾರ ಹೊಂದಿ ಕನ್ನಡದ ಅಚ್ಚಿನಲ್ಲಿ ಹಾದು ಬಂದ ಶಬ್ದವೇ ಅಚ್ಚಗನ್ನಡ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.[೨೮]

ಕುಲಕರ್ಣಿಯವರ ಅಭಿಪ್ರಾಯದಂತೆ ಕೇವಲ ಶಬ್ದ ಸೃಷ್ಟಿಯಲ್ಲಿ ಮಾತ್ರವಲ್ಲದೆ ಬಳಸುವ ಹೆಸರಗಳೂ ಕನ್ನಡತನದ್ದೇ ಆಗುವಂತೆ ಆಂಡಯ್ಯನು ನೋಡಿಕೊಂಡಿದ್ದಾನೆ. ಪ್ರತಿ ಸಂದರ್ಭಕ್ಕೂ ಕನ್ನಡ ನುಡಿಯನ್ನೇ ಬಳಸಿದ್ದಾನೆ.

ಸಂಸ್ಕೃತ ಪುಷ್ಟವಾದ ಕನ್ನಡ ಚಂಪೂ ಕಾವ್ಯಗಳು ಪ್ರಚುರವಾಗಿದ್ದ ಕಾಲದಲ್ಲಿ ಆಂಡಯ್ಯನ 'ಕಬ್ಬಿಗರ ಕಾವ' ದ ಭಾಷೆ ಮಾತನಾಡಿದ ರೀತಿಯಲ್ಲಿಯೇ ಕಂಡುಬರುತ್ತದೆ. ಈ ಎಲ್ಲ ಅಂಶಗಳಿಂದ ಆಂಡಯ್ಯನ ಪ್ರತಿಜ್ಞೆ ಸಾರ್ಥಕವಾಯಿತೆಂದೇ ಅಭಿಪ್ರಾಯಪಡುತ್ತಾ ಆಂಡಯ್ಯನ ಬಿಗಿವೊಂದಿದ ಅಚ್ಚಗನ್ನಡವನ್ನು ಯಾರೂ ಮುಂದುವರೆಸಲಿಲ್ಲ. ಅದು ನಿರ್ದಿಷ್ಟ ಉದ್ದೇಶಕ್ಕಾಗಿಯೇ ರಚನೆಗೊಂಡುದುದು. ಕನ್ನಡದ ಬಲ್ಪನ್ನು ತೋರಿಸಿ ಕನ್ನಡ ಕಬ್ಬಿಗರ ಮೇಲಿನ ಆರೋಪವನ್ನು ನಿವಾರಿಸುವುದಕ್ಕೆ ಕಬ್ಬಿಗರ ಕಾವ ಹುಟ್ಟಿತು. ಆಂಡಯ್ಯನ ಅಚ್ಚಗನ್ನಡ ಕೇವಲ ಭಾಷಾವೈಚಿತ್ರ್ಯವಲ್ಲ, ಚಮತ್ಕೃತಿಯಲ್ಲ. ಕನ್ನಡ ಸಾಹಿತ್ಯ ಚರಿತ್ರೆಯ ಸಂಧಿಕಾಲದಲ್ಲಿ ಬಹುಮುಖ್ಯವಾಗಿ ಒಡಮೂಡಿದ ಸ್ವಾತಂತ್ರದ ಒಂದು ಮುಖ ಅದು. ಕನ್ನಡ ಕವಿಗಳ ಸ್ವಾಭಿಮಾನದ ಪ್ರತೀಕ ಸಂಸ್ಕೃತ ಬಾಹುಲ್ಯಕ್ಕೆ ಸ್ವಾಭಾವಿಕವಾಗಿ ಬಂದ ಪ್ರತಿಭಟನೆ ಎಂದು ಹೇಳುತ್ತಾರೆ.[೨೯]

ಅನಂತರದ ಕವಿಗಳ ಮೇಲೆ ಆಂಡಯ್ಯನ ಪ್ರಭಾವವಾಗಿದೆ. ಅಚ್ಚಗನ್ನಡದ ಔಚಿತ್ಯವನ್ನು ಕಂಡು ಅದರ ಗುಣವನ್ನು ಮಾತ್ರ ಅವರು ಗ್ರಹಿಸಿಕೊಂಡರು. ಸಂಸ್ಕೃತವಾಗಲಿ ಕನ್ನಡವಾಗಲಿ ಅತಿರೇಕವಾಗಬಾರದು. ಸರಳವಾದ ಮಧ್ಯಮ ಮಾರ್ಗವೆ ವಿಹಿತವೆಂದರು. ಸಂಸ್ಕೃತವೆನ್ನದೆ, ಕನ್ನಡವೆನ್ನದೆ ಎರಡೂ ಹಿತವಾಗಿ ಬೆರೆತ ಒಂದು ಪಕ್ವವಾದ "ಸುದ್ದಗನ್ನಡ" ಶೈಲಿಗಾಗಿ ಮುಂದಿನ ಕವಿಗಳು ಹವಣಿಸಿದರು. ಅತಿ ಸಂಸ್ಕೃತದ ಮೋಹಕ್ಕೆ ಮಾರುಹೋದ ಕನ್ನಡ ಕಾವ್ಯಶೈಲಿ ಈ ಹದಕ್ಕೆ ಬರಬೇಕಾದರೆ ಆಂಡಯ್ಯ ಅಚ್ಚಗನ್ನಡದಲ್ಲಿ ಹಾಯ್ದುಬಾರದೆ ಗತಿಯಿರಲಿಲ್ಲ. ಕನ್ನಡ ಕಾವ್ಯ ಭಾಷೆಯ ಪ್ರಗತಿ ಮಾರ್ಗದಲ್ಲಿ ಆಂಡಯ್ಯನ ಕೃತಿಯೊಂದು ಮೈಲಿಗಲ್ಲು ಎಂದು ಕುಲಕರ್ಣಿಯವರು ಶ್ಲಾಘಿಸಿದ್ದಾರೆ.

ಕೀರ್ತಿನಾಥ ಕುರ್ತಕೋಟಿ:

ಆಂಡಯ್ಯನ ಅಚ್ಚಗನ್ನಡ ಪ್ರಯೋಗ ಮತ್ತು ಅಚ್ಚಗನ್ನಡ ರಚನೆಯಲ್ಲಿ ಮುಖ್ಯವಾಗಿ ಕಂಡುಬರುವ ತದ್ಭವಗಳನ್ನು ಕುರಿತಂತೆ ಕೀರ್ತಿನಾಥ ಕುರ್ತಕೋಟಿಯವರು ಕನ್ನಡ ಸಾಹಿತ್ಯ ಸಂಗಾತಿ ಕೃತಿಯಲ್ಲಿ[೩೦] ಹೀಗೆ ಚರ್ಚಿಸಿದ್ದಾರೆ :

ಅಚ್ಚಗನ್ನಡದ ರಚನೆಯ ಬಗ್ಗೆ ನಯಸೇನ ಮೊದಲ ಬಾರಿಗೆ ಹೇಳಿದನಾದರೂ ಅದನ್ನು ಸಾಧಿಸಲಾರದೇ ಹೋದನು. ಆದರೆ ಆಂಡಯ್ಯ ಈ ಪ್ರಯೋಗವನ್ನು ಪೂರ್ಣಗೊಳಿಸಿದ. ಕನ್ನಡ ಭಾಷೆ ಸಂಸ್ಕೃತದ ಅನೇಕ ತದ್ಭವಗಳನ್ನು ತನ್ನದನ್ನಾಗಿಸಿಕೊಂಡು ಸ್ವೀಕರಿಸಿದ್ದಾಗಲೂ ಅವು ತಮ್ಮ ಮೂಲ ಕುಲಗೋತ್ರವನ್ನು ಮರೆತಿರುವುದಿಲ್ಲ. ಕನ್ನಡ ರೂಪವನ್ನು ಪಡೆದ ಈ ಸಂಸ್ಕೃತ ಶಬ್ದಗಳು ಕನ್ನಡದ ಪ್ರಕೃತಿಯೊಂದಿಗೆ ಹೊಂದಿಕೊಳ್ಳುತ್ತದೆ. ವ್ಯಾಕರಣದ ಮಾನ್ಯತೆಯೂ ಇವುಗಳಿಗೆ ದೊರೆಯುತ್ತದೆಂದೆನ್ನುತ್ತ ಕುರ್ತುಕೋಟಿಯವರು ಭಾಷೆಯ ದೃಷ್ಟಿಯಿಂದ ಆಗುವ ಪರಿಣಾಮವನ್ನು ಕುರಿತಂತೆ ಚರ್ಚಿಸುತ್ತಾರೆ. ತದ್ಭವ ಬಂದೊಡನೆ ಮೂಲ ಸಂಸ್ಕೃತದ ಶಬ್ದ ಮರೆಯಾಗುವುದಿಲ್ಲ. ಒಂದು ಅರ್ಥವನ್ನು ನಿರ್ದೇಶಿಸಲು ಎರಡು ಅರ್ಥಗಳು ಹುಟ್ಟಿಕೊಂಡಂತಾಗುತ್ತದೆ. ಉದಾಹರಣೆಗೆ 'ಕಾವ ' ಎಂಬ ಶಬ್ದ ಕಾಮ ಶಬ್ದದ ತದ್ಭವವಾದರೆ ಕಾಮ ಮತ್ತು ಕಾವ ಎರಡೂ ಶಬ್ದಗಳು ಭಾಷೆಯಲ್ಲಿ ಉಳಿದು ಬಿಡುತ್ತವೆ. 'ಕಬ್ಬಿಗರ ಕಾವ' ದಂಥ ಕೃತಿಯನ್ನು ಬಿಟ್ಟರೆ ಉಳಿದ ಕಾವ್ಯ ಕೃತಿಗಳಲ್ಲಿ ಆಗಿರುವುದು ಹೀಗೇ ಇದರಿಂದ ಕಾವ್ಯಕ್ಕೆ ಶ್ರೀಮಂತವಾದ ಶಬ್ದಕೊಶದಿಂದ ಲಾಭವಾಗುತ್ತದೆ. ಹಾಗೆಯೇ ಅರ್ಥವನ್ನು ಸೂಚಿಸುವ ಈ ಶಬ್ದಗಳು ಭಿನ್ನವಾದ ಅರ್ಥಛಾಯೆಯನ್ನುಪಡೆದುಕೊಳ್ಳುವ ಸಾಧ್ಯತೆ ಇರುತ್ತದೆ. ಮುಂದುವರೆದು ವಾಸ್ತವವಾಗಿ ಇಂತಹ ಶಬ್ದಗಳಿಗೆ ಅರ್ಥದೊಡನೆ ಬೇರೆ ಮೌಲ್ಯಗಳು ಅಂಟಿಕೊಳ್ಳುವುದನ್ನು ಅವರು ವಿವರಿಸುತ್ತಾರೆ. ಶಿವ ಎಂಬ ಶಬ್ದದ ಅರ್ಥ ಸಿವ ಶಬ್ದಕ್ಕೂ ಇರಬಹುದು. ಆದರೆ ಶಿವ ಶಬ್ದಕ್ಕಿರುವ ಗಾಂಭೀರ್ಯ ಸಿವ ಶಬ್ದಕ್ಕಿಲ್ಲವೆಂದು ತಿಳಿದು ಅದನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಬಹುದು. ನಮ್ಮ ಎಷ್ಟೋ ಬೈಗಳು ಹೀಗೆ ಮೂಲದಲ್ಲಿ ಗಂಭೀರಾರ್ಥವನ್ನು ಇಟ್ಟುಕೊಂಡ ಶಬ್ದಗಳಾಗಿವೆ. ಆಂಡಯ್ಯನ ಕಬ್ಬಿಗರ ಕಾವದ ತದ್ಭವಗಳು ಹೀಗೆ ಹೀನವಾದ ಅರ್ಥವನ್ನು ಪಡೆದುಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಆಂಡಯ್ಯ ಬದುಕಿದ್ದ ಕಾಲದ ಜೈನಧರ್ಮದ ಐತಿಹಾಸಿಕ ವಿಶ್ಲೇಷಣೆಯೂ ಮುಖ್ಯವಾಗುತ್ತದೆ. ಎಂಬುದು ಕುರ್ತುಕೋಟಿಯವರ ಅಭಿಪ್ರಾಯ.

ಆಂಡಯ್ಯನದೇ ಆದ ಸ್ವತಂತ್ರ ಕಾವ್ಯಮಾರ್ಗ ಮುಂದಿನ ಕವಿಗಳಿಗಾಗಿ ಹುಟ್ಟಿಬರದಿದ್ದರೂ ಭಾಷೆಯ ಒಡಲಲ್ಲಿ ನಡೆದಿದ್ದ ಪರಿವರ್ತನೆಯ ಆಸೆಗೆ ಆಂಡಯ್ಯ ಒಂದು ಲಕ್ಷಣವಾಗಿದ್ದಾನೆಂದು ತೋರುತ್ತದೆ. ಆಂಡಯ್ಯನಿಗಿಂತಲೂ ಮೊದಲೇ ವಚನಕಾರರು ಭಾಷೆಯ ಸೂತಕದಿಂದ ಪಾರಾಗಲು ಹವಣಿಸಿ ಅದರಲ್ಲಿ ತಕ್ಕಮಟ್ಟಿನ ಯಶಸ್ಸನ್ನು ಪಡೆದರು. ಆಂಡಯ್ಯನದು ಇನ್ನೊಂದು ರೀತಿಯ ಪ್ರಯತ್ನವಾಗಿದೆ. ಸಂಸ್ಕೃತವನ್ನು ತದ್ಭವಗೊಳಿಸಿ ಅದನ್ನು ಸ್ವತಂತ್ರವಾದ ಶಬ್ದವಾಗಿಸಿ ಬೇಕಾದ ಅರ್ಥವನ್ನು ನಿರ್ದೇಶಿಸಲು ಉಪಯೋಗಿಸಬಹುದು. ಕನ್ನಡ ಸ್ವತಂತ್ರವಾದ ಅರ್ಥವನ್ನು ಪಡೆಯುವ ದಿಕ್ಕಿನಲ್ಲಿ ಇದೂ ಒಂದು ಮಹತ್ವದ ಪ್ರಯತ್ನವಾಗಿದೆಯೆಂದು ಅವರು ಅಭಿಪ್ರಾಯಪಡುತ್ತಾರೆ.

❒

ಅಧ್ಯಾಯ -೪

ಅಚ್ಚದ್ರಾವಿಡ ಕಾವ್ಯಗಳು : ಐತಿಹಾಸಿಕ ಸಮೀಕ್ಷೆ

ಭಾಗ - ೧

ಈ ಅಧ್ಯಾಯದಲ್ಲಿ ಕನ್ನಡ ಭಾಷೆಯಲ್ಲಿ ನಡೆದಿರುವ ಅಚ್ಚಗನ್ನಡ ಪರಂಪರೆಗೆ ಪೂರಕವಾಗಿ ಇತರ ದ್ರಾವಿಡ ಭಾಷೆಗಳಲ್ಲಿಯೂ ಇರುವ ಸಮಾನಾಂತರ ಪರಿಕಲ್ಪನೆಗಳ ಬಗೆಗೆ ಚರ್ಚಿಸಲಾಗಿದೆ. ಕನ್ನಡ, ತೆಲುಗು, ತಮಿಳು, ಮಲಯಾಳಗಳನ್ನು ಪ್ರಮುಖ ದ್ರಾವಿಡ ಭಾಷೆಗಳೆಂದು ಗುರುತಿಸಲಾಗಿದೆ. ಬಹು ಹಿಂದಿನಿಂದಲೇ ಈ ಭಾಷೆಗಳು ಸ್ವತಂತ್ರವಾದ ಲಿಪಿ ವ್ಯವಸ್ಥೆಯನ್ನು, ಪದಗುಚ್ಛಗಳನ್ನು ಹೊಂದಿವೆ. ಮಾತ್ರವಲ್ಲ ಪ್ರಾಚೀನ ಕಾಲದಿಂದಲೇ ಸಾಹಿತ್ಯ ಇತಿಹಾಸವನ್ನು ಹೊಂದಿವೆ. ಈ ಸೋದರ ಭಾಷೆಗಳಲ್ಲಿ ಸಾಹಿತ್ಯಕವಾಗಿ ಕೆಲವು ಸಮಾನಾಂತರ ಪ್ರಭಾವ. ಪ್ರೇರಣೆಗಳುಂಟಾಗಿರುವುದು ಕಂಡುಬರುತ್ತದೆ. ಪ್ರಸ್ತುತ ಕನ್ನಡದ ಅಚ್ಚಗನ್ನಡಕ್ಕೆ ಸಮಾಂತರವಾಗಿ ಇತರ ದ್ರಾವಿಡ ಭಾಷೆಗಳಲ್ಲೂ ನಡೆದಿರುವ ಚಿಂತನೆಗಳು, ಪರಿಕಲ್ಪನೆಗಳನ್ನು ಇಲ್ಲಿ ಚರ್ಚಿಸಲಾಗುವುದು. ಇದಕ್ಕೆ ಪೂರಕವಾಗಿ ಈ ಅಧ್ಯಾಯದ ಮೊದಲ ಭಾಗದಲ್ಲಿ ದಕ್ಷಿಣ ಭಾರತದ ಪ್ರಮುಖ ದ್ರಾವಿಡ ಭಾಷೆಗಳ ಸಾಹಿತ್ಯ ಪರಂಪರೆಯಲ್ಲಿ ನಡೆದಿರುವ ಸಾಹಿತ್ಯ ಚಳುವಳಿಗಳನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ಕನ್ನಡದ ಅಚ್ಚಗನ್ನಡ ಸಾಹಿತ್ಯ ಕೃತಿಗಳನ್ನು ಅವುಗಳೊಂದಿಗೆ ತೌಲನಿಕವಾಗಿ ಚರ್ಚಿಸಲಾಗಿದೆ.

ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಗಳನ್ನೇ ಆಧರಿಸಿ ನಮ್ಮ ದೇಶದಲ್ಲಿ ಉತ್ತರ-ದಕ್ಷಿಣದ ಭಾಷೆಗಳೆಂದು ವಿಂಗಡಿಸಲಾಗಿದೆ. ಭಾಷಾಶಾಸ್ತ್ರಜ್ಞರು ಉತ್ತರ ದೇಶದ ಭಾಷೆಗಳನ್ನು ಆರ್ಯ ಭಾಷೆಗಳೆಂದೂ, ದಕ್ಷಿಣ ದೇಶದ ಭಾಷೆಗಳನ್ನು ದ್ರಾವಿಡ ಭಾಷೆಗಳೆಂದೂ ಗುರುತಿಸುತ್ತಾರೆ. ದಾಕ್ಷಿಣಾತ್ಯರಿಗೆ ಅಲ್ಲಿಯ ಭಾಷೆ ಮತ್ತು ಅಲ್ಲಿರುವ ಜನರಿಗೂ ಒಟ್ಟಾರೆಯಾಗಿ ದ್ರಾವಿಡ ಶಬ್ದ ಬಳಕೆಯಾಗುತ್ತದೆ. ಆಂಧ್ರ ಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ ರಾಜ್ಯಗಳಲ್ಲಿ ಬಳಕೆಯಲ್ಲಿರುವ ತೆಲುಗು, ತಮಿಳು, ಕನ್ನಡ, ಮಲಯಾಳಗಳು ದ್ರಾವಿಡ ಕುಟುಂಬಕ್ಕೆ ಸೇರಿದ ದ್ರಾವಿಡ ಭಾಷೆಗಳಾಗಿವೆ.

ಆಯಾ ಭಾಷೆಯ ಸಾಹಿತ್ಯ ಚರಿತ್ರೆಗಳನ್ನು ಅಧ್ಯಯನ ಮಾಡಿದಾಗ ಬಹುತೇಕ ದ್ರಾವಿಡ ಭಾಷೆಗಳು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿರುವ ಸಂಗತಿ ತಿಳಿದುಬರುತ್ತವೆ. ಶಾಸ್ತ್ರ ಸಾಹಿತ್ಯ ಮಾತ್ರವಲ್ಲದೆ ಕಾವ್ಯ ರಚನೆಯಲ್ಲೂ ಸಂಸ್ಕೃತದ ಬಳಕೆ ಒಂದು ಕಾಲದಲ್ಲಿ ಅತಿಯಾಗಿತ್ತು. ಅವುಗಳು ಆಸ್ಥಾನದ ಪಂಡಿತ ವರ್ಗಕ್ಕೆ ಮಾತ್ರ ಸೀಮಿತವಾಗಿದ್ದವು. ಹಾಗೆಯೇ ಪ್ರಾಚೀನ ಕಾಲದಿಂದಲೇ ಸಂಸ್ಕೃತ ಬಾಷೆ ದ್ರಾವಿಡ ಭಾಷೆಗಳ ಸಾಹಿತ್ಯದ ಮೇಲೆಯೂ ಪ್ರಭಾವ ಬೀರಿರುವುದನ್ನು ಕಾಣಬಹುದು.

ಭಾಷಾ ವಿಷಯದಲ್ಲಿ ದ್ರಾವಿಡ ಭಾಷೆಗಳು ಸ್ವತಂತ್ರವಾಗಿದ್ದರೂ ಅವು ಸಂಸ್ಕೃತದಿಂದ ಎಷ್ಟೋ ಶಬ್ದಗಳನ್ನು ಪಡೆದುಕೊಂಡಿವೆ. ತೆಲುಗು, ಕನ್ನಡ, ಮಲಯಾಳಗಳಲ್ಲಿ ತತ್ಸಮ, ತದ್ಭವ ರೂಪದಲ್ಲಿ ಅನೇಕ ಸಂಸ್ಕೃತ ಶಬ್ದಗಳು ಬೆರೆತು ಹೋಗಿವೆ. ತಮಿಳಿನಲ್ಲಿ ಆ ಪ್ರಮಾಣ ಕಡಿಮೆಯಾದರೂ ಸಂಸ್ಕೃತ ಪದಜಾಲವನ್ನು ತಮಿಳೂ ಕೂಡ ಸ್ವೀಕರಿಸಿದೆ. ಇದು ಸಹಜವಾಗಿಯೇ ದಕ್ಷಿಣದ ಭಾಷೆಗಳ ಸಾಹಿತ್ಯ ಭಾಷೆಯ ಮೇಲೂ ಪ್ರಭಾವ ಬೀರಿದೆ.

ಅಚ್ಚ ತಮಿಳು ಕಾವ್ಯಪರಂಪರೆ

ದ್ರಾವಿಡ ಭಾಷೆಗಳಲ್ಲೆಲ್ಲ ತಮಿಳು ಭಾಷೆ ಅತ್ಯಂತ ಪ್ರಚೀನವಾದುದು. ತಮಿಳು ಭಾಷೆಯಲ್ಲಿ ಪ್ರಾಚೀನ ಕಾಲದಿಂದಲೇ ಸಮೃದ್ಧ ಸಾಹಿತ್ಯ ರಚನೆಯಾಗಿರುವುದು ಕಂಡುಬರುತ್ತದೆ. ಇತರ ದ್ರಾವಿಡ ಭಾಷೆಗಳಂತೆ ತಮಿಳಿನ ಮೇಲೂ ಸಂಸ್ಕೃತ ಪ್ರಭಾವ ದಟ್ಟವಾಗಿದೆ. ಅಲ್ಲಿನ ಪ್ರಾಚೀನ ಪಂಡಿತ ಕವಿಗಳು ತಮಿಳಿನ ಜೊತೆ ಜೊತೆಗೆ ಸಂಸ್ಕೃತದ ಬಳಕೆಯನ್ನು ಒಪ್ಪಿಕೊಂಡು ಬಂದಿದ್ದರು. ಆದರೆ ಕಾಲಾಂತರದಲ್ಲಿ ತಮಿಳಿನ ಮೇಲೆ ಸಂಸ್ಕೃತದ ಪ್ರಭಾವ ತಡೆಯುವ ಸಲುವಾಗಿ ನಡೆದಿರುವ ಅನೇಕ ಪ್ರಯತ್ನಗಳನ್ನು ಕಾಣಬಹುದು. ತಮಿಳು ಸಾಹಿತ್ಯ ಇತಿಹಾಸವನ್ನು ಗಮನಿಸಿದಾಗ ಸಂಸ್ಕೃತದ ಪ್ರಭಾವ ತಡೆಯುವ ಸಲುವಾಗಿಯೇ 'ಅಚ್ಚ ತಮಿಳು' ಚಳುವಳಿಯೊಂದು ನಡೆದಿರುವುದೂ ಸ್ಪಷ್ಟವಾಗುತ್ತದೆ.[೧]

ತಮಿಳು ಭಾಷೆಯ ಪ್ರಾಚೀನತೆ

'ತೊಲ್‌ಕಾಪ್ಪಿಯಮ್' ಪ್ರಾಚೀನ ತಮಿಳು ಲಕ್ಷಣ ಗ್ರಂಥ. ಕ್ರಿ.ಪೂ. ೩ನೇ ಶತಮಾನದಲ್ಲಿಯೇ ಇದು ರಚನೆಯಾಯಿತು. ಇದಕ್ಕೂ ಮುಂಚೆಯೇ ಲಕ್ಷಣ ಗ್ರಂಥಗಳೂ ಅವಕ್ಕೆ ಲಕ್ಷ್ಯವಾದ ಸಾಹಿತ್ಯ ಗ್ರಂಥಗಳೂ ತಮಿಳಿನಲ್ಲಿ ಇದ್ದವು ಎಂಬುದು ಗೊತ್ತಾಗುತ್ತದೆ. ಆ ಗ್ರಂಥದಲ್ಲಿ ಇಯಜ್ಜೊಲ್ (ಸ್ವಾಭಾವಿಕ ಶಬ್ದ), ತಿರಿಶೊಲ್ (ವಿಕೃತಗೊಂಡ ಶಬ್ದ, ತದ್ಭವ) ತಿಶೈಚ್ಚೊಲ್ (ದಿಕ್ಕಿನ ಮಾತು, ಪ್ರಾಂತ ಶಬ್ದ). ವಡಶೊಲ್ (ಬಡಗಣ ಮಾತು, ಸಂಸ್ಕೃತ ಶಬ್ದ) ಎಂಬ ನಾಲ್ಕು ಬಗೆಯ ಮಾತುಗಳನ್ನು ಗುರುತಿಸುತ್ತಾರೆ. ಇಯಜ್ಜೊಲ್ (ಇಯಲ್ + ಶೊಲ್) ಎಂಬವು ಪದ್ಯದಲ್ಲಿ ಮಾತ್ರ ರೂಪ ಬೇರ್ಪಟ್ಟು ಬಳಸುವ ಶಬ್ದಗಳು. ತಿಶೈಚ್ಚೊಲ್ (ದಿಶೈ + ಶೊಲ್) ಎಂಬವು ನಾಡಿನ ಬೇರೆ ಬೇರೆಯ ಹಲವು ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬಳಸುತ್ತಿರುವ ಪ್ರಾದೇಶಿಕ ಶಬ್ದಗಳು ವಡಶೊಲ್ ಎಂಬವು ಸಂಸ್ಕೃತದಿಂದ ಬಂದು ತಮಿಳಿನಲ್ಲಿ ಬಳಸುತ್ತಿರುವ ಶಬ್ದಗಳು. ಈ ರೀತಿ ಸಂಸ್ಕೃತ ಶಬ್ದಗಳನ್ನು ಕಡ ತೆಗೆದುಕೊಳ್ಳುವಾಗ ಉತ್ತರದ ಭಾಷೆಯಾದ ಸಂಸ್ಕೃತಕ್ಕೆ ಸೇರಿದ ಧ್ವನಿಗಳನ್ನು ಬಿಟ್ಟು ತಮಿಳು 'ಉಲಿ'ಗಳೊಡನೆ

ವಿಧಿಸಿದ್ದಾರೆ. ಆ ಉಲ್ಲೇಖಗಳೆಲ್ಲಾ ತಮಿಳು ಭಾಷೆಯ ಚರಿತ್ರೆಯಲ್ಲಿ ಪುರಾತನ ಕಾಲದಲ್ಲಿಯೇ ನಡೆದಿರುವ ಮಾರ್ಪಾಡುಗಳನ್ನು ತಿಳಿಯಪಡಿಸುತ್ತವೆ.

ಅಲ್ಲದೆ ಶನ್ದಮಿಟ್, ಕೊಡನ್ದಮಿಟ್ ಎಂಬ ಒಂದು ಬಗೆಯ ವಿಂಗಡನೆಯೂ ಅನಂತರ ಕಾಲದಲ್ಲಿ ಕಂಡುಬರುತ್ತದೆ. ಶನ್ದಮಿಟ್ ಎಂಬುದು ಕವಿ ಪಂಡಿತರುಗಳಿಂದ ಸಾಹಿತ್ಯಕ್ಕೆ ತಕ್ಕದ್ದೆಂದು ಮನ್ನಣೆ ಹೊಂದಿದ ತಮಿಳು. ಕೊಡನ್ದಮಿಳ್ ಎಂಬುದು ಜನಸಾಮಾನ್ಯರ ಆಡುಮಾತಿನ ಬಳಕೆಯಲ್ಲಿ ಕಾಣುವ ತಮಿಳು. ಆದ್ದರಿಂದ ಪುರಾತನ ಕಾಲದಲ್ಲಿಯೇ ಸಾಹಿತ್ಯ ತಮಿಳಿಗೂ ದಿನಬಳಕೆಯ ಆಡುಮಾತಿಗೂ ನಡುವೆ ವ್ಯತ್ಯಾಸ ಬೆಳೆದುಬಿಟ್ಟಿತು ಎಂಬುದು ತಿಳಿದುಬರುತ್ತದೆ.[೨]

ಪ್ರಾಚೀನ ತಮಿಳು ಸಾಹಿತ್ಯ

ತಮಿಳು ಸಾಹಿತ್ಯಕ್ಕೆ ಸುಮಾರು ಇಪ್ಪತ್ತೈದು ಶತಮಾನಗಳ ಇತಿಹಾಸವಿದೆ. ದಕ್ಷಿಣ ಭಾರತದ ಉಳಿದ ದ್ರಾವಿಡ ಭಾಷೆಗಳ ಸಾಹಿತ್ಯಗಳು ಕ್ರಿ.ಶ. ೮ನೆಯ ಶತಮಾನದ ಅನಂತರ ರಚನೆಗೊಂಡರೆ ಅದಕ್ಕೆ ಹಿಂದಿನ ೧೨ ಶತಮಾನಗಳಿಗಿಂತ ಹಿಂದೆಯೇ ತಮಿಳು ಸಾಹಿತ್ಯ ರಚನೆಯಾಯಿತು. ಅಂದು ಬಳಕೆಯಲ್ಲಿದ್ದ ನಾಡಪದಗಳಿಂದಲೇ ಆರಂಭದ ಕಾಲದಲ್ಲಿ ಕ್ರಿ.ಪೂ. ೫೦೦ ಕ್ರಿ.ಶ. ೨೦೦ರ ವೇಳೆಗೆ ತಮಿಳು ಸಾಹಿತ್ಯ ರಚನೆಯಾಗುತ್ತಿದ್ದು, ಸಂಘ ಸಾಹಿತ್ಯದ ನಡುಗಾಲ ಕ್ರಿ.ಶ.೭ನೇ ಶತಮಾನದ ವೇಳೆಗೆ ನಗರ ಪ್ರದೇಶದ ತಮಿಳು ಸಾಹಿತಿಗಳಿಗೆ ಸಂಸ್ಕೃತದ ಸಂಪರ್ಕವೇರ್ಪಟ್ಟಿತು. ಹಾಗಾಗಿ ಸಂಸ್ಕೃತದ ದೈವ, ಆಜ್ಞಾ ಪದಗಳು ತಮಿಳಿಗೆ ಸೇರ್ಪಡೆಯಾದವು. ಜೈನಮತ, ಬೌದ್ಧಮತ ತಮಿಳುನಾಡಿನಲ್ಲಿ ಹರಡತೊಡಗಿದ ಮೇಲೆ ಈ ಮತಕ್ಕೆ ಸೇರಿದ ಹಲವರು ಸಂಸ್ಕೃತ, ಪಾಲಿ, ಪ್ರಾಕೃತ, ಭಾಷೆಗಳನ್ನು ಕಲಿತುದರಿಂದ ಉತ್ತರ ದೇಶದ ಭಾಷೆಗಳ ಶಬ್ದಗಳು ತಮಿಳಿನಲ್ಲಿ ಬೆರೆಯುವಂತಾಯಿತು. ಸಂಸ್ಕೃತ ಸಾಹಿತ್ಯದ ಪ್ರಭಾವದಿಂದಾಗಿ ಸಂಸ್ಕೃತದ ಹೆಚ್ಚು ಹೆಚ್ಚು ಶಬ್ದಗಳು ತಮಿಳಿನಲ್ಲಿ ಬೆರೆಯುವಂತಾಯಿತು. ಆ ಸಂದರ್ಭದಲ್ಲಿ ಭಾರತದಲ್ಲಿ ಸಾಹಿತ್ಯ ಭಾಷೆಗಳಾಗಿ ತಮಿಳು ಮತ್ತು ಸಂಸ್ಕೃತ ಭಾಷೆಗಳಷ್ಟೇ ಪರಿಗಣಿತವಾಗಿದ್ದವು. ಆದ್ದರಿಂದ ತಮಿಳನ್ನು ತೆನ್ ಮೊಟಿ (ದಕ್ಷಿಣದ ಭಾಷೆ) ಎಂದೂ ಸಂಸ್ಕೃತವನ್ನು ವಡಮೋಟಿ (ಉತ್ತರದ ಭಾಷೆ) ಎಂದೂ ಆ ಕಾಲದವರು ಕರೆಯುತ್ತ ಬಂದರು. 'ದ್ರಾವಿಡಮ್' ಎಂಬ ಮಾತು 'ತಮಿಟಿ' ಎಂಬುದಕ್ಕೆ ಸಂಸ್ಕೃತದವರು ಕೊಟ್ಟ ರೂಪ ಎಂದು ಭಾವಿಸಿರುವುದರಿಂದ ದ್ರಾವಿಡಮ್ ಎಂಬ ಮಾತು ಆ ಕಾಲದ ತಮಿಳು ಸಾಹಿತ್ಯದಲ್ಲಿ ಉಪಯೋಗಿಸಲ್ಪಡಲಿಲ್ಲ. ತಿರುನಾವುಕ್ಕರಸರು ಕ್ರಿ.ಶ.೭ನೇ ಶತಮಾನದಲ್ಲಿ ಶಿವಭಗವಂತನು ಎಲ್ಲವೂ ಆಗಿರುವನು ಎಂದು ಹಾಡುವ ಸ್ಥಳದಲ್ಲಿ ಆರಿಯನ್ ಕನ್ನಾಯ್, ತಮಿಟಿನ್ ಕಣ್ಣಾಯ್ (ಆರ್ಯ ಕಂಡಯ್ಯ, ತಮಿಳ ಕಂಡಯ್ಯ) ಎಂದು ಕಲಾ ಮಾರ್ಗದಲ್ಲಿ ಉಂಟಾದ ವಿಂಗಡಣೆಯನ್ನು ಎರಡು ಜಾತಿಗಳಾಗಿ ನಿರ್ದೇಶಿಸಿದ್ದಾರೆ. ಸ್ವಾಮಿ ಶಿವನ ಡಮರುಗದ ಒಂದು ಪಕ್ಕದಿಂದ ಹುಟ್ಟಿದ ಶಬ್ದ ಸಂಸ್ಕೃತ ಆಯಿತೆಂದೂ ಆ ಡಮರುಗದ ಮತ್ತೊಂದು ಪಕ್ಕದಲ್ಲಿ ಹುಟ್ಟಿದ ಶಬ್ದ ತಮಿಳು ಆಯಿತೆಂದೂ ಪುರಾಣ ಕಥೆ ಬಳಕೆಗೆ ಬರತೊಡಗಿತು. ಶಿವನು ವಡಮೊಟಿಯನ್ನು (ಸಂಸ್ಕೃತವನ್ನು) ಪಾಣಿನಿಗೂ, (ತೆನ್‌ಮೊಟಿ) ತಮಿಳನ್ನು ಅಗಸ್ತ್ಯರಿಗೂ ಕಲಿಸಿಕೊಟ್ಟು ಎರಡು ಭಾಷೆಗಳನ್ನು ಬೆಳೆಯುವಂತೆ ಮಾಡಿದನು ಎಂದು ಪುರಾಣ ಕಥೆಯಿದೆ.

ಕ್ರಿ.ಶ.ಎಂಟನೆಯ ಶತಮಾನದ ನಂತರ ಜೈನರು ಸಂಸ್ಕೃತದಿಂದ ತಮಿಳಿಗೆ ಕೆಲವು ಗ್ರಂಥಗಳನ್ನು ಅನುವಾದ ಮಾಡಿದರು. ಕೆಲವು ಗ್ರಂಥಗಳನ್ನು ಸಂಸ್ಕೃತದ ಮಾದರಿಯಲ್ಲಿಯೇ ಅನುಸರಿಸಿ ಬರೆದರು. ಕ್ರಿ.ಶ.೩ನೇ ಶತಮಾನದವರೆಗೆ ತಮಿಳುನಾಡನ್ನಾಳಿದ ಚೇರ, ಚೋಳ, ಪಾಂಡ್ಯರ ಕಾಲದಲ್ಲಿಯೂ ಇದು ಮುಂದುವರೆಯಿತು. ಅನಂತರದಲ್ಲಿ ಪಲ್ಲವರು ಅಧಿಕಾರಕ್ಕೆ ಬಂದರು. ಪಲ್ಲವರು ಸಂಸ್ಕೃತವನ್ನು ಹೆಚ್ಚಾಗಿ ಬಳಸುತ್ತಿದ್ದು ರಾಜ ಮಹೇಂದ್ರವರ್ಮನು ಸಂಸ್ಕೃತದಲ್ಲಿಯೇ ಮತ್ತ ವಿಲಾಸಮ್ ಎಂಬ ನಾಟಕ ರಚಿಸಿದನು. ಇವರ ಆಳ್ವಿಕೆಯ ಕಾಲದಲ್ಲಿಯೇ ತಮಿಳು ಮತ್ತು ಸಂಸ್ಕೃತ ಎರಡೂ ಭಾಷೆಗಳಿಗೂ ಸೇರಿದ ಕವಿಗಳಿಗೆ ಆಶ್ರಯ ದೊರೆಯಿತು. ಕಾಂಚೀಪುರ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನುಕೂಲವಾದ ನಗರವಾಯಿತು. ಹೀಗಾಗಿ ನಾಡಿನಲ್ಲಿ ಎರಡೂ ಭಾಷೆಗಳಲ್ಲಿ ಪಳಗಿದ ವಿದ್ವಾಂಸರ ಪರಂಪರೆಯೊಡನೆ, ಸಂಸ್ಕೃತ ಮತ್ತು ತಮಿಳಿನ ವಿಶೇಷಜ್ಞರು ಜೊತೆ ಜೊತೆಯಲ್ಲಿಯೇ ಆಶ್ರಯ ಪಡೆದಿದ್ದರು. ಈ ನಡುವೆ ಶಂಕರರ ಅದ್ವೈತ ಸಿದ್ಧಾಂತವೂ, ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತವೂ ಹರಡತೊಡಗಿದಾಗ ಸಂಸ್ಕೃತ ಕಲಿತವರ ಸಂಖ್ಯೆ ಹೆಚ್ಚಾಗತೊಡಗಿತು. ಸಂಸ್ಕೃತ ಪುರಾಣಗಳು ತಮಿಳಿಗೆ ಭಾಷಾಂತರವಾದವು. ಈ ಸಂದರ್ಭದಲ್ಲಿಯೇ ತಮಿಳು, ಸಂಸ್ಕೃತ ಬೇರೆ ಬೇರೆಯಿರುವುದನ್ನು ಅರಿತ ಕೆಲ ವಿದ್ವಾಂಸರು ಸಂಸ್ಕೃತ ತಮಿಳು ಶಬ್ದಗಳನ್ನು ಬೆರೆಸಿದ ಒಂದು ಭಾಷಾ ಶೈಲಿಯನ್ನು ಕಲ್ಪಿಸಿ ಅದಕ್ಕೆ ಮಣಿಪ್ರವಾಳವೆಂದು ಹೆಸರಿಟ್ಟು ಬರೆಯತೊಡಗಿದರು. ಇದರಿಂದ ಸಂಸ್ಕೃತಕ್ಕೂ ತಮಿಳಿಗೂ ನಿಕಟ ಸಂಬಂಧ ಉಂಟಾಗುವುದೆಂದು ಎರಡೂ ಭಾಷೆಯ ವಿದ್ವಾಂಸರು ಭಾವಿಸಿದರು. ಅನೇಕ ಸಂಸ್ಕೃತ ಗ್ರಂಥಗಳನ್ನು ಮಣಿಪ್ರವಾಳಶೈಲಿಯಲ್ಲಿ ಬರೆದರು. ಆ ಮೂಲಕ ತಮಿಳುನಾಡಿನಲ್ಲಿ ಮಣಿಪ್ರವಾಳ ಶೈಲಿಗೆ ಪ್ರೋತ್ಸಾಹಿಸಿದರು. ತಮಿಳು ಭಾಷೆಯ ಸ್ವಭಾವಕ್ಕೆ ಈ ಶೈಲಿಯು ವಿರೋಧವಾದ್ದರಿಂದ ಬಹಳ ದಿನ ಮುಂದುವರೆಯಲಿಲ್ಲ. ಮಹಾಕವಿ ಕಂಬ ಮೊದಲಾದವರು ಹಳೆಯ ಲಕ್ಷಣ ಗ್ರಂಥಗಳಿಗೆ ವ್ಯಾಖ್ಯಾನ ವಿವರಣೆ ಬರೆದ ವಿದ್ವಾಂಸರೂ ಆ ಪ್ರಯತ್ನವನ್ನು ಆದರಿಸಲಿಲ್ಲ. ತಮಿಳು ಭಾಷೆಯ ಸ್ವಭಾವವನ್ನರಿತುಕೊಂಡು ಅದಕ್ಕೆ ಒಪ್ಪುವ ರೀತಿಯಲ್ಲಿ ತಮ್ಮ ಗ್ರಂಥಗಳನ್ನು ರಚಿಸಿದರು. ಕಂಬ ಕವಿಯು ತನ್ನ ರಾಮಾಯಣದಲ್ಲಿ ಬರುವ ಮನುಷ್ಯರ ಹೆಸರುಗಳನ್ನು ಸಂಸ್ಕೃತಕ್ಕಿಂತ ಭಿನ್ನವಾಗಿ ತಮಿಳಿಗೆ ಸರಿಹೊಂದುವ ರೀತಿಯಲ್ಲಿ ಬದಲಾಯಿಸಿದನು. ಇನ್ನು ಸಂಸ್ಕೃತದ ಕೆಲವು ಹೆಸರುಗಳನ್ನು ತಮಿಳಿನಲ್ಲಿ ಭಾಷಾಂತರ ಮಾಡಿದನು. ಇದರಿಂದಾಗಿ ಲಕ್ಷ್ಮಣನನ್ನು ಇಲಕ್ಕುವನ್ ಎಂದೂ, ಸ್ವರ್ಣವರ್ಣನನ್ನು 'ಶುವಣವಣ್ಣನ್' ಎಂದೂ ಭಾಷಾಂತರಿಸಿದರು. ಹಾಗೆಯೇ ಯಜ್ಞಾ ವಿರೋಧವನ್ನು ವೇಳ್ವಿಪ್ಪಗೈಇನ್ ಎಂದು ಭಾಷಾಂತರ ಮಾಡಿದರು. ಅಹಲ್ಯೆಯನ್ನು ಅಹಲಿ ಹೈ ಮತ್ತು ಆಲಿ ಹೈ ಎಂದು ಕರೆದರು. ಹೀಗೆ ಏಕಕಾಲದಲ್ಲಿಯೇ ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಬೆರಸುವ ಪ್ರಯತ್ನ ಒಂದು ಕಡೆ ನಡೆದರೆ, ಇನ್ನೊಂದೆಡೆ ಅವಶ್ಯವಾದ ಕೆಲವು ಸಂಸ್ಕೃತ ಶಬ್ದಗಳನ್ನು ಮಾತ್ರ ತಮಿಳಿಗೆ ಸರಿ ಹೊಂದುವಂತೆ ಮಾರ್ಪಡಿಸಿ ರಚಿಸುವ ಪ್ರಯತ್ನವೂ ನಡೆಯಿತು. ಕೊನೆಯಲ್ಲಿ ತಮಿಳು ಶಬ್ದಗಳನ್ನು ತಮಿಳು ಧ್ವನಿಯನ್ನು ಉಳಿಸಿಕೊಳ್ಳುವ ಪ್ರಯತ್ನದೆಡೆಗೆ ಹೆಚ್ಚು ಒಲವು ತೋರಿಸಿರುವುದನ್ನು ಗಮನಿಸಬಹುದು.

ಕ್ರಿ.ಶ. ೧೧ರಿಂದ ೧೩ನೇ ಶತಮಾನವು ತಮಿಳು ಸಾಹಿತ್ಯದ ದೃಷ್ಟಿಯಿಂದ ಪರ್ವಕಾಲ. ಮಹಮದೀಯರ ದಾಳಿ ಮತ್ತು ವಿಜಯನಗರದ ಆಳ್ವಿಕೆಯಿಂದಾಗಿ ಪಲ್ಲವರು. ಚೋಳರು ಪತನಗೊಳ್ಳುವಂತಾದರೂ, ತಮಿಳು ಮತ್ತು

ತೆಲುಗು ಭಾಷೆಯ ಮೇಲೆ ಪರಸ್ಪರ ಪ್ರಭಾವಗಳುಂಟಾದವು. ತೆಲುಗು ಭಾಷೆಯನ್ನಾಡುವವರು ತಮಿಳಿನೊಡನೆ ಸ್ನೇಹ ಸಂಬಂಧ ಮಾಡಿಕೊಂಡರು. ಹಾಗೆಯೇ ತಮಿಳುನಾಡಿನ ಆಳ್ವಾರರ ಗೀತೆಗಳು ತೆಲುಗಿನಲ್ಲಿ ಪ್ರಚಾರಗೊಂಡವು. ಅಲ್ಲದೆ ಕನ್ನಡ ಗ್ರಂಥಗಳಾದ ಪ್ರಭುಲಿಂಗಲೀಲೆ ಮೊದಲಾದವು ತಮಿಳಿಗೆ ಭಾಷಾಂತರಗೊಂಡವು. ಕನ್ನಡದಲ್ಲಿ ತಮಿಳು ನಾಯನ್ಮಾರರ ಚರಿತ್ರೆಗಳು ಬರೆಯಲ್ಪಟ್ಟವು. ಹೀಗೆ ದ್ರಾವಿಡ ಭಾಷೆಗಳಲ್ಲಿ ಪರಸ್ಪರ ಸಂಬಂಧವೇರ್ಪಟ್ಟಿತು. ತಮಿಳುನಾಡಿನ ಮೇಲೆ ಮರಾಠರ ಆಳ್ವಿಕೆ, ಮಹಮದೀಯ ದಾಳಿಗಳಾದವು. ಕ್ರಿ.ಶ.೧೮-೧೯ನೇ ಶತಮಾನದ ಹೊತ್ತಿಗೆ ಯುರೋಪಿಯನ್ನರ ಆಗಮನ ಮತ್ತು ಆಳ್ವಿಕೆಯ ಕಾರಣದಿಂದಾಗಿ ಮರಾಠಿ ಶಬ್ದಗಳೂ, ಅರಬ್ಬೀ ಶಬ್ದಗಳೂ ಜೊತೆಗೆ ಇಂಗ್ಲೀಷ್ ಶಬ್ದಗಳೂ ತಮಿಳಿನ ಜೊತೆ ಸೇರಿದವು.

ಅಚ್ಚ ತಮಿಳು ಚಳುವಳಿ

ಈಗಾಗಲೇ ಹೇಳಿದಂತೆ ತಮಿಳಿನಲ್ಲಿ ಸಂಸ್ಕೃತ ಶಬ್ದಗಳನ್ನೂ, ಅಕ್ಷರಗಳನ್ನೂ ಹೆಚ್ಚು ಹೆಚ್ಚಾಗಿ ಬೆರೆಸುವ ಪ್ರಯತ್ನವೊಂದು ಹಲವು ಶತಮಾನಗಳಿಗೆ ಮೊದಲೇ ನಡೆಯಿತು. ಸಂಸ್ಕೃತ ಶಬ್ದಗಳನ್ನು, ತಮಿಳು ಶಬ್ದಗಳನ್ನೂ ಸೇರಿಸಿ ಬಳಸುವುದರಿಂದ ಮುತ್ತನ್ನು, ಹವಳವನ್ನೂ ಬೆರಸಿದ ಮಾಲೆಯ ಹಾಗೆ ವಿಶೇಷವಾದ ಸೊಗಸುಂಟಾಗುವುದೆಂದು ತರ್ಕಿಸಿದ ಸಂಸ್ಕೃತ ವಿದ್ವಾಂಸರು ಆ ಪ್ರಯತ್ನದಲ್ಲಿ ನಿರತರಾದರು. ಅದಕ್ಕೆ ಮಣಿಪ್ರವಾಳ ಶೈಲಿಯೆಂದು ಹೆಸರು ಕೊಟ್ಟು ಅದನ್ನು ಹರಡಲು ಪ್ರಯತ್ನಿಸಿರುವುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಮೊದಲು ಸಂಸ್ಕೃತವನ್ನು ಕಲಿತ ಜೈನ ವಿದ್ವಾಂಸರೂ ನಂತರದಲ್ಲಿ ವೈಷ್ಣವ ವಿದ್ವಾಂಸರೂ ಈ ಪ್ರಯೋಗಶೀಲ ಶೈಲಿಯನ್ನು ಮುಂದುವರೆಸಿದರು. ಅದಕ್ಕಾಗಿ ಗ್ರಂಥಾಕ್ಷರಗಳನ್ನು ಉಪಯೋಗಿಸಿಕೊಂಡರು ಆದರೆ ಕಾಲಾಂತರದಲ್ಲಿ ಸ್ವಾಭಾವಿಕವಾಗಿ ಸಾಹಿತ್ಯ ಸಮೃದ್ಧಿಯಿಂದಾಗಿ ಪಕ್ವತೆ ಪಡೆದ ತಮಿಳು ಭಾಷೆಯಲ್ಲಿ ಈ ಪ್ರಯತ್ನ ಜಯಪ್ರದವಾಗಲಿಲ್ಲ.

ಇದರ ಪರಿಣಾಮದಿಂದ ತಮಿಳು ಗ್ರಂಥಗಳನ್ನು ಸಂಸ್ಕೃತ ವಿದ್ವಾಂಸರು ಕಡೆಗಣಿಸಿದರು. ತಮಿಳುನಾಡಿನಲ್ಲಿ ತಮಿಳು ಮಾತೃ ಭಾಷಿಗರಾಗಿ ತಮಿಳರಾಗಿಯೇ ಬಾಳಿದ ಸಂಸ್ಕೃತ ವಿದ್ವಾಂಸರುಗಳು ತೇವಾರ, ತಿರುವಾಚಕ, ಮೊದಲಾದ ತಮಿಳು ಗ್ರಂಥಗಳನ್ನು ಓದದೆ ಕಡೆಗಣಿಸಿದರು. ತಮಿಳನ್ನು ಮಾತ್ರವೇ ಕಲಿತವರನ್ನು ಸತ್ಕರಿಸದೆ ಅವರೊಂದಿಗೆ ಕೀಳಾಗಿ ವರ್ತಿಸಿದರು. ಚೋಳ ರಾಜರುಗಳು ಹಲವಾರು ಮಾನ್ಯತೆಗಳನ್ನು ಕೊಟ್ಟು ಆದರದಿಂದ ಕಂಡ ತೇವಾರ ಗೀತೆಗಳಿಗೆ ದೇವಾಲಯಗಳಲ್ಲಿ ಮಾನ್ಯತೆಯನ್ನು ನೀಡಲಿಲ್ಲ. ಈ ಮನೋಭಾವ ಮುಂದುವರಿದಂತೆಲ್ಲ ತಮಿಳನ್ನು ನೀಚ ಭಾಷೆಯೆಂದು ಹೀಯಾಳಿಸಿ ಸಂಸ್ಕೃತ ಮಾತ್ರವೇ ದೇವಭಾಷೆಯೆಂದು ಮನ್ನಣೆ ನೀಡಲಾಯಿತು. ತಮಿಳಿನ ಯಾವ ಗ್ರಂಥದಲ್ಲಾದರೂ ಅತ್ಯುನ್ನತ ಚಿಂತನೆಗಳಿದ್ದಲ್ಲಿ ಅದು ಸಂಸ್ಕೃತದಲ್ಲಿನ ಯಾವುದಾದರೂ ಗ್ರಂಥದಿಂದ ಎರವಲು ಪಡೆದುದು ಎಂದು ಅದರ ಗೌರವವನ್ನು ಕುಗ್ಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ತಿರುವಳ್ಳುವರು ರಚಿಸಿದ ತಿರುಕ್ಕುರಳ್ ಮೊದಲಾದ ಗ್ರಂಥಗಳೂ ಸಂಸ್ಕೃತದಿಂದ ಎರವಲು ಪಡೆದದ್ದು ಎಂದು ಕಲ್ಪನೆ ಮಾಡಲಾಯಿತು. ಅಲ್ಲದೆ ತೃಣಧೂಮಾಗ್ನಿ ಎಂದು ಸಂಸ್ಕೃತ ಭಾಷೆಯ ಹೆಸರು ಅವರಿಗಿದ್ದಿತೆಂದೂ ಪ್ರಚಾರ ಮಾಡಲಾಯಿತು. ರಾಮಾಯಣ, ಭಾರತ, ಪುರಾಣಗಳು, ತತ್ವ ಗ್ರಂಥಗಳು ಮೊದಲಾದವುಗಳನ್ನು ಹೊರತುಪಡಿಸಿ ಬೇರೆ ಗ್ರಂಥಗಳೂ ತಮಿಳಿನಲ್ಲಿದ್ದರೂ ಅವುಗಳನ್ನು ಕಡೆಗಣಿಸಲಾಯಿತು. ಅದರಲ್ಲಿಯೂ ತಮಿಳಿಗೇ ಸೇರಿದ ಸಂಘ ಸಾಹಿತ್ಯ,

ನೀತಿಸಾಹಿತ್ಯ, ಭಕ್ತಿ ಸಾಹಿತ್ಯ ಮೊದಲಾದವನ್ನು ಕಡೆಗಣಿಸಿದರು. ಮುಂದೆ ವಿ.ಕೋ. ಸೂರ್ಯನಾರಾಯಣ ಶಾಸ್ತ್ರಿಗಳು ಮಟ್ರೈಮಲ್ಯೆ ಅಡಿಗಳ್ ಮೊದಲಾದ ವಿದ್ವಾಂಸರುಗಳು ತಮಿಳಿಗೆ ಇರುವ ಸಮೃದ್ಧಿಯನ್ನು ಎತ್ತಿ ಹೇಳಿದ ಬಳಿಕವೇ ಆ ಬಗೆಯ ಕೃತಕ ಪ್ರಯತ್ನಗಳೆಲ್ಲ ಮರೆಯಾದವು.

ಬರವಣಿಗೆಯ ತಮಿಳು :ಎರಡು ಮಾದರಿಗಳು

ಈ ಕೃತಕ ಪ್ರಯತ್ನದ ಕಾರಣದಿಂದಾಗಿಯೇ ತಮಿಳಿನಲ್ಲಿ ಇಬ್ಬಗೆಯ ಶೈಲಿ ಉಂಟಾಗಲು ಕಾರಣವಾಯಿತು. ಸೂರ್ಯನಾರಾಯಣ ಶಾಸ್ತ್ರಿಗಳೆಂಬ ತಮಿಳು ವಿದ್ವಾಂಸರು ತಮ್ಮ ಹೆಸರನ್ನು ಸಂಸ್ಕೃತ ಶಬ್ದವಾಗಿಲ್ಲದಂತೆ 'ಪರಿದಿ ಮಾಟ್ಕಲೈಞರ್' (ಪರಿದಿ + ಮಾಲ್ + ಕಲೈಞರ್) ಎಂದು ತಮಿಳಾಗಿ ಮಾರ್ಪಡಿಸಿಕೊಂಡರು. ಸ್ವಾಮಿ ವೇದಾಚಲಂ ಎಂಬ ವಿದ್ವಾಂಸರೂ ಸಂಸ್ಕೃತವನ್ನು ಚೆನ್ನಾಗಿ ಅರಿತಿದ್ದವರು. ಆದರೂ ತಮ್ಮ ಹೆಸರನ್ನು ಮಜೈಮಲ್ಯೆ ಅಡಿಗಳ್ ಮಜೈ-ವೇದ ಎಂದು ತಮಿಳಾಗಿ ಮಾಡಿಕೊಂಡರು. ಇಬ್ಬರೂ ಆರಂಭದಲ್ಲಿ ಸಂಸ್ಕೃತ ಶಬ್ದವನ್ನು ಬೆರಸಿಯೇ ಬರೆಯುತ್ತ ಬಂದವರು. ಸಂಸ್ಕೃತ ವಿದ್ವಾಂಸರ ಅಭಾಸ ಪ್ರಯತ್ನವನ್ನು ವಿರೋಧಿಸುವ ಮಾರ್ಗದಲ್ಲಿ ಅವರು ಸಂಸ್ಕೃತ ಶಬ್ದಗಳನ್ನು ಬೆರಸದೆ ಅಚ್ಚ ತಮಿಳಿನಲ್ಲಿ ಬರೆಯುವುದಕ್ಕೆ ಮುಂದೆ ಬಂದರು. ಸೂರ್ಯನಾರಾಯಣ ಶಾಸ್ತ್ರಿಗಳು ಮೃತರಾದ ಬಳಿಕ ಮಟ್ರೈಮಲ್ಯೆ ಅಡಿಗಳು ೧೯೧೬ರಿಂದ ಅದನ್ನು ಒಂದು ಚಳುವಳಿಯನ್ನಾಗಿ ಬೆಳಿಸಿದರು. ಈ ಅಚ್ಚ ತಮಿಳು ಚಳುವಳಿಯ ಪ್ರಭಾವ ಇನ್ನೂ ಇದೆ. ಈಗಲೂ ತಮಿಳಿನ ಬಗೆಗೆ ತುಂಬ ಅಭಿಮಾನವಿರುವವರು ತಮ್ಮ ಹೆತ್ತವರು ತಮಗಿಟ್ಟ ಸಂಸ್ಕೃತ ಭಾಷೆಯ ಹೆಸರನ್ನು ಬದಲಾಯಿಕೊಂಡು ತಮಿಳು ಹೆಸರನ್ನು ಇಟ್ಟುಕೊಳ್ಳುತ್ತಾರೆ. ತಮಿಳನ್ನು ಕೀಳಾಗಿ ನುಡಿಯುವುದಕ್ಕೆ ಕಾರಣವಾದ ಸಂಸ್ಕೃತ ಶಬ್ದವನ್ನು ಬೆರಸದಂತೆ ನೋಡಿಕೊಳ್ಳುತ್ತಾರೆ. ತಮಿಳು ವಿದ್ವಾಂಸರು ಸಂಸ್ಕೃತ ಶಬ್ದ ಬೆರೆಯದೆ ಅಚ್ಚ ತಮಿಳಿನಲ್ಲಿ ಬರೆಯುವುದೇ ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಬರೆಯುತ್ತ ಬರುತ್ತಿದ್ದಾರೆ. ಸಂಸ್ಕೃತ ವಿದ್ವಾಂಸರಿಗೆ ಒಂದು ಕಾಲದಲ್ಲಿ ಇದ್ದ ಸಂಸ್ಕೃತ ಪರವಾದ ನಿಲುವುಗಳೇ ಈಗ ಇರುವ ಅಚ್ಚ ತಮಿಳು ಚಳುವಳಿಗೆ ಕಾರಣವಾಯಿತು. ಈಗಲೂ ತಮಿಳು ಭಾಷಾ ವಿಜ್ಞಾನದಲ್ಲಿ ಭಿನ್ನ ಅಭಿಪ್ರಾಯಗಳಿವೆ. ಪಂಡಿತರುಗಳು ಅಚ್ಚ ತಮಿಳು ಶೈಲಿಯನ್ನು ಕಠಿಣವಾದದ್ದೆಂದೂ ಜೀವದ ಮಿಡಿತವಿಲ್ಲದ್ದೆಂದೂ, ಕೃತಕವಾದದ್ದೆಂದೂ ಅಭಿಪ್ರಾಯಪಡುತ್ತಾರೆ.

ತಮಿಳು ವಿದ್ವಾಂಸರ ಶೈಲಿಗೆ ಮಾರ್ಗದರ್ಶಕವಾಗಿ ಹಳೆಯ ಗದ್ಯ ಕರ್ತೃಗಳ ಶೈಲಿ ರಚಿತವಾಗಿದೆ. ಆ ಕರ್ತೃಗಳು ತಮಿಳಿನಲ್ಲಿ ಪರಿಮೇಲವಿಗರು ಮೊದಲಾದ ಸಂಸ್ಕೃತವನ್ನು ಕಲಿತ ವಿದ್ವಾಂಸರು ಬರೆದ ತಮಿಳಿನಲ್ಲೂ ಸಂಸ್ಕೃತ ಶಬ್ದಗಳು ಬಹಳ ಕಡಿಮೆ. ಅದು ಅಚ್ಚ ತಮಿಳು ಶೈಲಿಯಲ್ಲಿಯೇ ಬಹುಮಟ್ಟಿಗೆ ರಚಿತವಾಗಿವೆ. ಆ ಶೈಲಿಯನ್ನೇ ತಮಿಳು ಸಾಹಿತ್ಯವನ್ನು ಅಭ್ಯಾಸ ಮಾಡಿದ ಸಂಸ್ಕೃತ ವಿದ್ವಾಂಸರೂ ಅನುಸರಿಸುತ್ತಾರೆ.

ಪತ್ರಿಕೆಗಳಲ್ಲಿ ಬರೆಯುವ ಲೇಖಕರ ಶೈಲಿಯೂ ತಮಿಳು ಜನಗಳು ಮಾತನಾಡುವ ಬಳಕೆಯ ತಮಿಳನ್ನು ಅನುಸರಿಸಿ ರಚಿಸಿದ್ದಾಗಿರುವುದು. ಆಡುವ ಭಾಷೆಯಲ್ಲಿ ಪರಭಾಷೆಯ ಶಬ್ದಗಳು ಬೆರೆಯುತ್ತವೆ. ವಾಕ್ಯಗಳ ಅರ್ಥಗ್ರಹಣಕ್ಕೆ ತಕ್ಕ ರೀತಿಯಲ್ಲಿ ರೂಪಗೊಳ್ಳುತ್ತವೆ. ನಾಟಕ ರಂಗಗಳಲ್ಲಿಯೂ ಭಾಷಣ ವೇದಿಕೆಗಳಲ್ಲಿಯೂ ಆ

ಶೈಲಿಯೇ ಬಳಕೆಯಲ್ಲಿದೆ. ಕವಿತೆಗಳಲ್ಲಿ ಶುದ್ಧ ತಮಿಳನ್ನು ಬಹುಮಟ್ಟಿಗೆ ಉಪಯೋಗಿಸಿದ ಭಾರತಿಯವರೂ ಗದ್ಯ ಶೈಲಿಯಲ್ಲಿ ಪ್ರಬಂಧ ಬರೆದಾಗ ಆ ಶೈಲಿಯನ್ನೇ ಬಳಸಿದರು.

ವಿ.ಕಲ್ಯಾಣ ಸುಂದರರು ಒಂದರ್ಥದಲ್ಲಿ ಈ ಎರಡೂ ಶೈಲಿಗಳ ಸಮನ್ವಯಕಾರರಾದವರು ಅವರು ವಿದ್ವಾಂಸರಿಗೆ ವಿದ್ವಾಂಸರು, ಸಾಮಾನ್ಯ ಬರಹಗಾರರಿಗೆ ಬರಹಗಾರರೂ ಆಗಿ ಸಾಹಿತ್ಯ ಗ್ರಂಥಗಳನ್ನು ಬರೆದರು. ದಿನಪತ್ರಿಕೆ ವಾರಪತ್ರಿಕೆಗಳನ್ನು ನಡೆಸಿದರು. ವಿದ್ವಾಂಸರನ್ನೂ, ಬರಹಗಾರರನ್ನೂ ಪರಸ್ಪರ ಕೂಡಿಸುವ ಸೇತುವೆಯಾಗಿ ಅವರು ದುಡಿದವರು. ಪ್ರಾರಂಭದಲ್ಲಿ ಸಂಸ್ಕೃತ ಶಬ್ದಗಳು ಬೆರೆತ ಶೈಲಿಯಲ್ಲಿ ಬರೆಯತೊಡಗಿದರು. ಸರಿಯಾದ ತಮಿಳು ಶಬ್ದಗಳು ದೊರೆಯದೆ ಹೋದಾಗ ಮಾತ್ರ ಪರಭಾಷಾ ಶಬ್ದಗಳನ್ನು ಬಳಸಿದರು. ಅಸಹಜವಾದ ದೀರ್ಘ ವಾಕ್ಯಗಳನ್ನು ಬಿಟ್ಟು ಮಾತಾಡಿದ ರೀತಿಯಲ್ಲಿ, ಸುಲಭವಾಗಿ ತಿಳಿಯುವಂಥ ಸಣ್ಣ ಸಣ್ಣ ವಾಕ್ಯಗಳನ್ನು ತಮ್ಮ ಬರವಣಿಗೆಯಲ್ಲಿ ಉಪಯೋಗಿಸಿದರು. ಹೀಗೆ ಅವರ ಬರವಣಿಗೆಯೂ ಮಾತೂ ಎರಡೂ ಕಡೆಯವರನ್ನು ಸೇರಿಸುವ ಸೇತುವೆಯಾಗಿತ್ತು. ಆದರೂ ಎರಡೂ ಪಕ್ಷದವರಿಗೂ ನಡುವೆ ಉಂಟಾದ ಬಿರುಕನ್ನು ಹೋಗಲಾಡಿಸಲು ಸಾಧ್ಯವಾಗಲಿಲ್ಲ. ಈಗಲೂ ಈ ಎರಡೂ ಬಗೆಯ ತಮಿಳು ಶೈಲಿಗಳೂ ಬೇರೆ ಬೇರೆಯಾಗಿಯೇ ಮುಂದುವರೆಯುತ್ತಿವೆ.

ತಮಿಳುನಾಡಿನಲ್ಲಿ ಕಂಡುಬರುವ ಪ್ರಾದೇಶಿಕ ವೈವಿಧ್ಯತೆಗಳು

ಕರ್ನಾಟಕದಲ್ಲಿದ್ದಂತೆ ಇಂದೂ ತಮಿಳುನಾಡಿಲ್ಲಿ ಹಲವು ಪ್ರದೇಶಗಳಲ್ಲಿ ಜನ ಮಾತನಾಡುವ ತಮಿಳಿನಲ್ಲಿಯೂ ಸಣ್ಣ ಸಣ್ಣ ಮಾರ್ಪಾಡುಗಳು ಕಂಡು ಬರುತ್ತವೆ. ಪ್ರಾದೇಶಿಕ ವೈವಿಧ್ಯತೆ ಈ ಭಿನ್ನತೆಗೆ ಕಾರಣವಾಗಿದೆ. ಆದರೆ ಇಂದು ಸಂಚಾರ ಸಾರಿಗೆ ಸಂಪರ್ಕ, ವಿದ್ಯಾಭ್ಯಾಸ, ವೃತ್ತಪತ್ರಿಕೆ, ಆಕಾಶವಾಣಿ ಮೊದಲಾದವುಗಳ ಕಾರಣದಿಂದಾಗಿ ಭಾಷೆಯಲ್ಲಿನ ಈ ವ್ಯತ್ಯಾಸಗಳು ಕಡಿಮೆಯಾಗಿವೆ. ಆದರೂ ತಿರುನಲ್ವೇಲಿ ಮತ್ತು ಕೊಯಮುತ್ತೂರಿನ ತಮಿಳರ ಭಾಷೆಯಲ್ಲಿ ಕೆಲ ಭಿನ್ನತೆಗಳು ಕಂಡುಬರುವವು. ಹಾಗೆಯೇ ಈ ಪ್ರದೇಶದ ತಮಿಳಿಗೂ ತಾಂಜಾವೂರು, ತಿರುಚನಾಪಳ್ಳಿಯ ತಮಿಳಿಗೂ ವ್ಯತ್ಯಾಸವಿದೆ. ಮದರಾಸಿನ ತಮಿಳರ ಮಾತೂ ಭಿನ್ನವಾಗಿದೆ. ಆಡುಮಾತಿನ ಪದಗಳೇ ಹೆಚ್ಚಾಗಿ ಬಳಕೆಯಲ್ಲಿವೆ. ಜೊತೆಗೆ ಆಂಗ್ಲ ಶಬ್ದಗಳನ್ನೂ ಹೆಚ್ಚಾಗಿ ಬಳಸುತ್ತಾರೆ. ತಿರುನಲ್ವೇಲಿ ಪ್ರದೇಶದಲ್ಲಿ 'ಚ' ವ್ಯಂಜನದ ಸ್ಪಷ್ಟ ಉಚ್ಚಾರವಿದೆ. ಆದರೆ ತಮಿಳುನಾಡಿನ ಉತ್ತರ ಭಾಗದಲ್ಲಿ ಅದು ಶಬ್ದಗಳ ಮೊದಲಿನಲ್ಲಿ ಬರುವಾಗ 'ಸ' ಎಂದೇ ಉಚ್ಚಾರವಾಗುತ್ತದೆ. ತಮಿಳಿನ ವಿಶಿಷ್ಟ ಅಕ್ಷರವಾದ ೞ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಾಗಿ ಬಳಕೆಯಲ್ಲಿದೆ. ದಕ್ಷಿಣ ಪ್ರದೇಶದಲ್ಲಿ ಅದು 'ಳ' ಎಂದೂ ಸೇಲಮ್ ಭಾಗದಲ್ಲಿ 'ಯ' ಎಂದೂ ಚೆನ್ನೈ ಪ್ರದೇಶದಲ್ಲಿ ಮೇಲಿನ ಎರಡೂ ಬಗೆಯು ಬಳಕೆಯಲ್ಲಿದೆ. ಇೞು ಎಂಬುದನ್ನು ಇರು, ಐಳು ಎನ್ನುವವರೂ ಇದ್ದಾರೆ. ತಮಿಳುನಾಡಿನ ಬೇರೆ ಕಡೆಗಳಲ್ಲಿ ಹೇಳುವ ವಾೞೈಪ್ಪೞಮ್ ಎಂಬುದನ್ನು ಈ ಭಾಗದಲ್ಲಿ ವಾಳಪ್ಪಳಮ್, ವಾಯಪ್ಪಯಮ್ ಎಂದೂ ಹೇಳುತ್ತಾರೆ. ಇರುಕ್ಕಿೞದು ಎಂಬ ಮಾತು ಕೆಲವು ಪ್ರದೇಶದವರಿಂದ ಇರುಕ್ಕುದು ಎಂದೂ ಇನ್ನೂ ಕೆಲವು ಕಡೆ ಕೀದು ಎಂದೂ ಉಚ್ಚಾರಣೆಗಳಿರುತ್ತವೆ. ಶಯ್ದುವಿಟ್ಟಾರ್ ಎಂಬುದರ ಆಡುಮಾತಿನ ರೂಪಗಳು ಶೆಯ್ದುಟ್ಟಾರ್, ಶಯ್ಞ್ಞುಟ್ಟಾರ್, ಶೇಞ್ಞಿಟ್ಟಾರ್, ಶಾಞ್ಞಿಪುಟ್ಟಾರ್

ಮೊದಲಾದವಾಗಿವೆ. ಎಡತ್ತುಕ್ಕೊಣ್ಣಾ ಎಂಬುದು ಎಡುತ್ತುಕ್ಕಿನಾನ್, ಎಡುತ್ತುಕ್ಕಾನ್, ಎಡತ್ತುಕಾಟ್ಟಾನ್ ಮೊದಲಾಗಿ ಉಚ್ಛಾರ ರೂಪ ಹೊಂದುತ್ತವೆ.[೩]

ಅಚ್ಚ ಮಲಯಾಳ ಕಾವ್ಯ ಪರಂಪರೆ

ಕೇರಳ ರಾಜ್ಯಕ್ಕೆ ಶತಮಾನಗಳ ಇತಿಹಾಸವಿದ್ದರೂ ಕೇರಳ ಭಾಷೆಗೆ ಮಲಯಾಳಂ ಎನ್ನುವ ಹೆಸರು ಬಂದದ್ದು ಇತ್ತೀಚೆಗಷ್ಟೇ. ಪುರಾಣ, ಕಾವ್ಯಗಳೆಲ್ಲೆಲ್ಲ ಕೇರಳದ ಉಲ್ಲೇಖವಿರುವುದು ಸ್ಪಷ್ಟವಾಗಿದೆ. ಚೇರ ರಾಜರ ಆಡಳಿತ ಕಾಲದಲ್ಲಿ ಕೇರಳ ಪ್ರಮುಖ ರಾಜ್ಯಗಳಲ್ಲೊಂದಾಗಿತ್ತು. 'ಮಲಯಾಳಂ' ಮೊದಲು ದೇಶವಾಚಕ ಶಬ್ದವಾಗಿತ್ತು. 'ಮಲೆ'ಯೊಡನೆ (ಬೆಟ್ಟ) ಕೂಡಿಕೊಂಡಿರುವ 'ಆಳಂ' ಅಥವಾ 'ದೇಶ' ಎನ್ನುವ ಅರ್ಥದಲ್ಲಿ ಉತ್ಪತ್ತಿಯಾದ 'ಮಲಯಾಳಂ' ಎನ್ನುವ ಪದ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ 'ಮಲಯಾಳ' ಎಂದಾಗಿದ್ದು. ಅನಂತರ ಮಲಯಾಣ್ಮ, ಮಲಯಾಯ ಎನ್ನುವ ಪದಗಳು ಭಾಷಾವಾಚಿಯಾಗಿ ರೂಢಿಗೆ ಬಂದವು. ದೇಶವಾಚಕವಾದ ಮಲಯಾಳವನ್ನೇ ಇಂದು ಭಾಷಾವಾಚಕವಾಗಿ ಬಳಸಲಾಗುತ್ತಿದೆ.[೪]

ಮಲಯಾಳ ಮತ್ತು ತಮಿಳು ಸಂಬಂಧ:

ಮಲಯಾಳ ಭಾಷೆಯು ತಮಿಳಿನೊಂದಿಗೆ ದೀರ್ಘಕಾಲ ಸಂಪರ್ಕಹೊಂದಿದ್ದು, ವ್ಯಾಕರಣ ನಿಯಮ, ಪದಸಮೂಹ ಮೊದಲಾದವುಗಳಲ್ಲಿಯೂ ಕಂಡುಬರುವ ಸಾಮ್ಯತೆಯಿಂದಾಗಿಯೇ ಮಲಯಾಳವನ್ನೇ ತಮಿಳು ಎಂದು ಅನೇಕರು ಭಾವಿಸಿದ್ದರು. ತಮಿಳು, ಮಲಯಾಳಗಳ ನಡುವಿನ ಪ್ರಾದೇಶಿಕ ಹಾಗೂ ಚಾರಿತ್ರಿಕ ಸಂಪರ್ಕ ಸಾಮ್ಯತೆಯಿಂದಾಗಿಯೇ ಅವುಗಳ ನಡುವಿನ ಸಂಬಂಧ ಗಾಢವಾಗಿರುವಂತೆ ಗೋಚರಿಸುತ್ತದೆ.

ತಮಿಳಿನ ಶಬ್ದಗಳ ಕಡೆಯಲ್ಲಿ 'ಐ' ಕಾರವಾಗಿ ಮಾರ್ಪಟ್ಟ ಅಂಶವು 'ಅ' ಕಾರಾಂತವಾಗುವುದು. ತಮಿಳಿನಲ್ಲಿ ಕ್ರಿಯಾಪದಗಳಿಗೆ ಲಿಂಗ, ವಚನ ಪ್ರತ್ಯಯಗಳು ಸೇರುತ್ತವೆ. (ಉದಾಹರಣೆ ಅವನ್ - ವನ್ದಾನ್, ಅವಳ್ - ವನ್ದಾಳ್, ಅವರ್ - ವನ್ದಾರ್) ಮಲಯಾಳದಲ್ಲಿ ಇಂದಿಗೂ ಹಳೆಯ ರೀತಿಯನ್ನೇ ಮುಂದುವರೆಸಿಕೊಂಡು ಬರಲಾಗಿದೆ. ಆ, ಈ ಎನ್ನುವ ಚುಟ್ಟೆಳುತ್ತುಗಳನ್ನು (ಗುಣವಾಚಕಗಳು) ತಮಿಳಿನ ಕವಿತೆಯಲ್ಲಿ ಮಾತ್ರವೇ ಬಳಸಲಾಗುತ್ತದೆ. ಆದರೆ ಮಲಯಾಳದಲ್ಲಿ ಜನ ಸಾಮಾನ್ಯರ ಭಾಷೆಯಲ್ಲಿಯೂ ಅದನ್ನು ಪ್ರಯೋಗಿಸಲಾಗುತ್ತದೆ. ಮೂಲ ದ್ರಾವಿಡ ಭಾಷೆಯಲ್ಲಿ ಮಾತ್ರ ಇದ್ದು ತಮಿಳಿನಲ್ಲಿ ಇಂದು ಕಾಣದಿರುವ ಅನೇಕ ರೂಪಗಳು ನ್ಯೊ, ನಿನ್, ಆಯ ಉಚ್ಛಾರಣೆಗಳೂ ಮಲಯಾಳ ಭಾಷೆಯಲ್ಲಿ ಇಂದಿಗೂ ಕಂಡುಬರುತ್ತವೆ. ಇದು ಮಲಯಾಳ ಭಾಷೆಯು ತಮಿಳಿನ ಬದಲಾಗಿ ಮೂಲದ್ರಾವಿಡ ಭಾಷೆಯೊಡನೆ ನಿಕಟ ಸಂಬಂಧ ಹೊಂದಿರುವುದನ್ನು ಸೂಚಿಸುತ್ತದೆ.

ಮಲಯಾಳವನ್ನು ಪ್ರಾಚೀನ ಕಾಲದಿಂದಲೂ ತಮಿಳು ಎನ್ನುವ ಹೆಸರಿನಲ್ಲಿ ಕರೆಯುತ್ತಿದ್ದು, ಇದು ಮುಂದುವರೆದು ತಮಿಳು ಮತ್ತು ಮಲಯಾಳ ಒಂದೇ ಎಂದೂ ಮಲಯಾಳ ತಮಿಳಿನ ಒಂದು ಪ್ರಭೇದವೆಂದೂ ಭಾವಿಸಲು ಕಾರಣವಾಯಿತು. ಆದರೆ ತಮಿಳು ಶಬ್ದಕ್ಕೆ ಇಂದಿನ ಅರ್ಥದಲ್ಲಿ ಮಲಯಾಳ ಎಂದೂ ಕರೆದಿರಲಿಲ್ಲ. ಮೂಲದ್ರಾವಿಡ ಭಾಷೆಯ ವಿಭಾಗಗಳೆನ್ನುವ ದೃಷ್ಟಿಯಲ್ಲಿ ಕರ್ನಾಟಕವನ್ನು ಕರುನಾಟ್ಟು ತಮಿಳ್ ಎಂದೂ, ತುಳುವನ್ನು ತುಳುನಾಟ್ಟು

ತಮಿಳ್ ಎಂದೂ ಕರೆದ ಹಾಗೆ ಮಲಯಾಳವನ್ನು ಮಲೆನಾಟ್ಟು ತಮಿಳ್ ಎಂದು ಕರೆದದ್ದಾಗಿರಬಹುದು. ಕರಿನಾಟ್ಟು ತಮಿಳು ಹಿಂದಿನ ಕಾಲದಲ್ಲಿ ಕರ್ನಾಟಕವಾಗಿಯೂ ಮಲನಾಟ್ಟು ತಮಿಳು ಮಲಯಾಣ್ಮ ಅಥವಾ ಮಲಯಾಳವಾಗಿಯೂ, ತುಳುನಾಟ್ಟು ತಮಿಳು ತುಳುವಾಗಿಯೂ ಒಂದು ಕಾಲದಲ್ಲಿ ರೂಢಿಯಲ್ಲಿತ್ತು. ಹಾಗೆಯೇ ಮಲಯಾಳದ ವಿಷಯವಾಗಿ ಮೂಲಭಾಷೆಯನ್ನು ತಿಳಿಸುವ ತಮಿಳು ಸಂಜ್ಞೆಯೇ ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದದರಿಂದ ಮಲಯಾಳ ಭಾಷೆಯನ್ನು ಆ ಅರ್ಥದಲ್ಲಿ ತಮಿಳು ಭಾಷೆ ಎಂದು ಕರೆಯಬೇಕು."

ಸಾಹಿತ್ಯ ಪರಂಪರೆ:

ಭಾಷಾ ಸ್ವರೂಪದ ಆಧಾರದ ಮೇಲೆ ಮಲಯಾಳ ಸಾಹಿತ್ಯವನ್ನು ಪ್ರಾಚೀನ, ಮಧ್ಯಕಾಲೀನ, ಆಧುನಿಕ ಎಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

ಸ್ತೋತ್ರಗಳು, ವೀರಗೀತೆಗಳು, ಬೇಸಾಯದ ಹಾಡುಗಳು, ನಂತರಲ್ಲಿ ಕಂಡು ಬರುವ ತೋಟ್ಟಂಪಾಟ್ಟು ರೂಪಗಳೂ, ವೀರಕಥಾಗಾನಗಳು, ಸಾಮಾಜಿಕ ಆಚಾರ ವಿಚಾರಗಳಿಗೆ ಸಂಬಂಧಪಟ್ಟ ಪಾಟ್ಟುಗಳು ದೇವತಾರಾಧನೆಗೆ ಸಂಬಂಧಿಸಿದ ಹಾಡುಗಳೆಲ್ಲವೂ ಪ್ರಾಚೀನ ಮಲಯಾಳ ಸಾಹಿತ್ಯಕ್ಕೆ ಸೇರುತ್ತವೆ. ಗಾದೆಗಳು ಮತ್ತು ಒಗಟುಗಳು ಕೂಡ ಪ್ರಾಚೀನ ಭಾಷಾ ರೀತಿಯ ಲಕ್ಷಣಗಳನ್ನು ಅಳವಡಿಸಿಕೊಂಡು ಬಂದಿರುವುದು ಇಲ್ಲಿ ಉಲ್ಲೇಖನೀಯವಾಗಿದೆ. ನಂತರದ ಶತಮಾನಗಳಲ್ಲಿ ಚೇರರಾಜರೂ ಚೆಂದಮಿಳು ಸಾಹಿತ್ಯ ರಚನೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಅದರಲ್ಲಿ ಚೆಂದುಟ್ಟವನ್ ಪ್ರಮುಖನು. ಆ ಕಾಲದ ಪ್ರಮುಖ ಚೆಂದಮಿಳು ಕೃತಿಗಳೆಂದರೆ ಕ್ರಿ.ಶ. ಎರಡನೆಯ ಶತಮಾನದಲ್ಲಿ ರಚನೆಯಾದ ಶಿಲಪ್ಪದಿಕಾರಂ ಕ್ರಿ.ಶ. ಏಳನೇ ಶತಮಾನದಲ್ಲಿ ಐಯನರಿತನಾರ್ ವೆಣ್‌ಪಾಮಾಲ ಎಂಬ ಚೆಂದಮಿಳು ಕೃತಿ ರಚಿಸಿದ. ಹೀಗೆ ಚೇರರಾಜರ ಕಾರಣದಿಂದ ಚೆಂದಮಿಳು ಸಾಹಿತ್ಯ, ನಂಬೂದರಿಗಳ ಕಾರಣದಿಂದ ಸಂಸ್ಕೃತ ಸಾಹಿತ್ಯ ಕೇರಳದಲ್ಲಿ ಅಭಿವೃದ್ಧಿ ಹೊಂದುವಂತಾಯಿತು. ಕಾಲಾಂತರದಲ್ಲಿ ಸಂಸ್ಕೃತ ತಮಿಳು ಮಿಶ್ರಿತ ಕಾವ್ಯಗಳು ರಚನೆಯಾಗತೊಡಗಿದವು. ಕೂತ್ತು, ಕೂಡಿಯಾಟ್ಟಂ, (ನಾಟಕ) ಪ್ರಕಾರಗಳಲ್ಲಿ ಈ ಮಿಶ್ರಭಾಷಾ ಪ್ರಯೋಗಗೊಂಡಿತು. ಈ ಮಿಶ್ರ ಭಾಷೆ ಮುಂದೆ ಮಣಿಪ್ರವಾಳ ಶೈಲಿಯೆಂಬ ಹೆಸರಿನಿಂದ ಸಾಹಿತ್ಯದ ಭಾಷೆಯಾಗಿ ರೂಪಾಂತರಗೊಂಡಿತು.

ಆರಂಭದಲ್ಲಿ ಕಂಡುಬರುವ ಪಾಟ್ಟು ಪ್ರಕಾರದಲ್ಲಿ ಸಂಸ್ಕೃತದ ಪ್ರಭಾವ ಅತ್ಯಲ್ಪವಾಗಿದ್ದು ತಮಿಳು ಮಲಯಾಳ ಭಾಷೆಗಳ ಸಂಬಂಧ ಗಾಢವಾಗಿತ್ತು. ಈ ಪಾಟ್ಟು ಪ್ರಕಾರದಲ್ಲಿ ದೊರೆತ ೧೨ನೇ ಶತಮಾನದ ಪ್ರಾಚೀನ ಕೃತಿ ರಾಮಚರಿತಪಾಟ್ಟು. ಪಾಟ್ಟಿನ ಈ ಮಿಶ್ರಣವನ್ನು ಆಟ್ಟೂರ್ ಕೃಷ್ಣಪ್ಪಿಷಾರಡ ಮುಂತಾದ ವಿದ್ವಾಂಸರು ಅದರ ಕೃತಕ ಭಾಷೆಯ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬಗೆಯ ಸಾಹಿತ್ಯ ಭಾಷೆಯು ಬಳಕೆಯಲ್ಲಿದ್ದ ಕಾಲದಲ್ಲಿಯೇ ಅಚ್ಚಮಲಯಾಳಿ ಶೈಲಿಯೂ ಬಳಕೆಯಲ್ಲಿದ್ದು ಅದರಲ್ಲಿ ಹೆಚ್ಚಾಗಿ ಗಾನಗಳನ್ನೇ ಬರೆಯುತ್ತಿದ್ದುದು ಕಾಣಬರುತ್ತದೆ. ನಂತರದಲ್ಲಿ ಮಲಯಾಳವು ತಮಿಳಿನ ಹಿಡಿತದಿಂದ ಮುಕ್ತವಾಗಿ ಸಂಸ್ಕೃತ ಅತಿಯಾದ ಪ್ರಭಾವಕ್ಕೆ ಒಳಗಾದ್ದರಿಂದಾಗಿ ಮಣಿಪ್ರವಾಳಶೈಲಿ ರೂಪಗೊಳ್ಳಲು ಕಾರಣವಾಯಿತು.

ಮಣಿಪ್ರವಾಳ ಶೈಲಿ:

ಸಂಸ್ಕೃತಕ್ಕೆ ದೊರೆತ ಪ್ರಧಾನ್ಯತೆಯಿಂದಾಗಿ ಮಲಯಾಳಿಯೊಂದಿಗೆ ಸಂಸ್ಕೃತ ಬಳಕೆ ಅನಿವಾರ್ಯವೆಂಬಂತಾಯಿತು. ಹಾಗಾಗಿ ವಿದ್ಯಾಲಯಗಳಲ್ಲಿ, ಪಂಡಿತ ಸಭೆಗಳಲ್ಲಿ, ವಿನೋದ ರಂಗಗಳಲ್ಲಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಂಸ್ಕೃತ ಮಲಯಾಳ ಬೆರೆತ ಪುರಾಣ ಕಥನಗಳು, ತತ್ವಗಳು, ವ್ಯಾಖ್ಯಾನಗಳ ಚರ್ಚೆಗಳು ಹೆಚ್ಚಾದವು. ಕ್ರಮೇಣ ವಿದ್ವಾಂಸರು ಈ ಮಿಶ್ರಭಾಷೆಯಲ್ಲಿ ಕಾವ್ಯ ರಚಿಸಲಾರಂಭಿಸಿದರು. ಅದನ್ನೇ ಮಣಿಪ್ರವಾಳ ವೆಂಬ ಹೆಸರಿನಿಂದ ಸೂಚಿಸಲಾರಂಭಿಸಿದರು. ಮಣಿಯನ್ನು ಅಂದರೆ ಮಾಣಿಕ್ಯವನ್ನು, ಪ್ರವಾಳವನ್ನು ಅಂದರೆ ಹವಳವನ್ನು ಒಂದುಗೂಡಿಸಿ ಪೋಣಿಸಿದ ಮಾಲೆ ಅಥವಾ ಹಾಗಿರುವ ಸಾಹಿತ್ಯವೆಂದು ಇದಕ್ಕೆ ಅರ್ಥ, ಮಾಣಿಕ್ಯವು ಮಲಯಾಳವನ್ನೂ, ಹವಳವು ಸಂಸ್ಕೃತವನ್ನೂ ಸೂಚಿಸುತ್ತವೆ. ಎರಡು ಭಾಷೆಗಳು ಬೇರೆಯಾದರೂ ಅವುಗಳ ಗುಣ, ರೂಪ ಒಂದೇ ಎಂದು ತೋರಿಸುವ ಅರ್ಥದಲ್ಲಿ ಈ ಹೆಸರು ಬಳಕೆಗೆ ಬಂದಿದೆ.

ಈ ಮಣಿಪ್ರವಾಳ ಶೈಲಿಯು ತಮಿಳು ತೆಲುಗು ಮೊದಲಾದ ದ್ರಾವಿಡ ಭಾಷೆಗಳಲ್ಲಿಯೂ ಕಂಡುಬರುತ್ತದೆ. ಆದರೆ ಮಲಯಾಳದಂತೆ ಬೇರೆ ಯಾವ ಭಾಷೆಯಲ್ಲೂ ಅದೊಂದು ಸಾಹಿತ್ಯ ಪ್ರಕಾರವಾಗಿ ಬೆಳೆಯಲಿಲ್ಲ. 'ಲೀಲಾತಿಲಕ' ಕೃತಿಯು ಮಣಿಪ್ರವಾಳದ ಲಕ್ಷಣ, ನಿಯಮಗಳನ್ನು ತಿಳಿಸಲು ರಚಿತವಾದ ಶಾಸ್ತ್ರಗ್ರಂಥವಾಗಿದೆ. ಸಂಸ್ಕೃತದ ಮಿಶ್ರಣದಿಂದ ಮಲಯಾಳಿ ಭಾಷೆ ವಿಕೃತಗೊಳಿಸಿ ಮತ್ತೊಂದು ಶೈಲಿ ನಿರ್ಮಾಣಗೊಳ್ಳುತ್ತಿದೆಯೆಂದು ಅರಿತಿರಲಿಲ್ಲ. ಈ ಶೈಲಿಯಲ್ಲಿ ಎರಡು ವ್ಯವಸ್ಥೆಗಳನ್ನು ಗಮನಿಸಬೇಕಾಗುತ್ತದೆ. ಮಣಿಪ್ರವಾಳದಲ್ಲಿ ಬಳಕೆಯಾಗುವ ಮಲಯಾಳಿ ಪದಗಳು ಹೆಚ್ಚಾಗಿ ಪಾಮರರು ಬ್ರಾಹ್ಮಣರು ಬಳಸುವಂತಾಗಿರಬೇಕು ಎಂಬುದು ಒಂದು. ಎರಡನೆಯದು ಮಳೆಯಾಳದ ಪದಗಳಂತೆ ಸಂಸ್ಕೃತ ಪದಗಳು ಮಲಯಾಳಕ್ಕೆ ಸಮಾನ ಸ್ಥಾನದವಾಗಿರಬೇಕು ಆಗಲೇ ಮಣಿಪ್ರವಾಳ ಶೈಲಿ ಪರಿಪೂರ್ಣವಾಗುತ್ತದೆ. ಇಲ್ಲದಿದ್ದರೆ ಅದು ಪ್ರಮಾಣೀಕೃತ ಶೈಲಿಯಲ್ಲವೆಂದು ನಿರ್ಧರಿಸಲಾಗುತ್ತದೆ. ಆದರೂ ಮಲಯಾಳಕ್ಕೆ ಪ್ರಾಧಾನ್ಯತೆ ಇರುವುದರಿಂದ ಅದನ್ನು ಮಲಯಾಳ ಕೃತಿಯೆಂದು ಪರಿಗಣಿಸಬೇಕು. ಎಂಬುದು ಲೀಲಾತಿಲಕಕಾರನ ಅಭಿಪ್ರಾಯ. ಆ ಕಾಲದ ಆರ್ಯ ದ್ರಾವಿಡ ಸಂಸ್ಕೃತಿಗಳ ನಡುವೆ ನಡೆದ ಸಮನ್ವಯದ ರೂಪವೇ ಈ ಮಣಿಪ್ರವಾಳ.

೧೪ನೇ ಶತಮಾನದ ಮಧ್ಯದಲ್ಲಿ ರಚಿಸಿರಬಹುದಾದ ಲೀಲಾತಿಲಕ ಮಣಿಪ್ರವಾಳ ಶೈಲಿಗೆ ಸಂಬಂಧಿಸಿದ ಪ್ರಾಚೀನ ಶಾಸ್ತ್ರ ಗ್ರಂಥ. ದೇವತಾ ಸ್ತುತಿಗಳು, ರಾಜ ಪ್ರಶಂಸೆಗಳು, ಸ್ಥಳ ಮಹಾತ್ಮೆಗಳು, ನಾಯಿಕಾ ವರ್ಣನೆಗಳು, ಪ್ರೇಮ ಸಂದೇಶಗಳು, ಉತ್ಸವ ವರ್ಣನೆಗಳು ಚಾಟೂಕ್ತಿಗಳು ಈ ಬಗೆಯ ಹಲವು ಕೃತಿಗಳು ಈ ಸಮೂಹದಲ್ಲಿ ಕಂಡುಬರುತ್ತವೆ. ವೈಶಿಕ ತಂತ್ರಂ, ಆಟ್ಟ ಪ್ರಕಾರಂ, ಅನಂತಪುರವರ್ಣನಂ ಮೊದಲಾದವು ಪ್ರಮುಖ ಮಣಿಪ್ರವಾಳ ಶೈಲಿಯ ಕೃತಿಗಳಾಗಿವೆ. ಪ್ರಾಚೀನ ಮಣಿಪ್ರವಾಳ ಸಾಹಿತ್ಯದ ಪ್ರಮುಖ ಭಾಗದಲ್ಲಿ ಸಂದೇಶ ಕಾವ್ಯಗಳು ಪ್ರಮುಖವಾಗಿದೆ.

ಆರಂಭದಲ್ಲಿ ಶುದ್ಧ ಮಲಯಾಳದ ಧಾಟಿಯಲ್ಲಿ ರಚನೆಯಾಗುತ್ತಿದ್ದ ಅಜ್ಞಾತ ಕವಿಗಳ ಈ ಪಾಟ್ಟುಗಳು ನಂತರದಲ್ಲಿ ಮಣಿ ಪ್ರವಾಳ ಶೈಲಿಯ ಪ್ರಭಾವಕ್ಕೆ ಒಳಗಾದವು. ಅದರಲ್ಲಿ ಕಣ್ಣಶ್ಶನ್ ಕವಿಗಳ ಕೃತಿಗಳು ಪ್ರಮುಖ

ನಿದರ್ಶನಗಳಾಗಿವೆ. ಆ ಮೂಲಕ ಪಾಟ್ಟುಗಳು ತಮಿಳಿನ ಧಾಟಿಯನ್ನು ಬಿಟ್ಟು ಸಂಸ್ಕೃತದಿಂದ ಕೂಡಿದ ಕಾವ್ಯ ಪ್ರಕಾರದ ಧಾಟಿ ಪಡೆಯಿತು. ಇವುಗಳು ಹದಿನಾಲ್ಕು ಮತ್ತು ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಕಂಡು ಬರುತ್ತವೆ.

ಮಣಿಪ್ರವಾಳಕ್ಕಿಂದ ಮೊದಲೇ ಪ್ರಾಚೀನವಾದ ಈ ನಾಡೋಡಿ ಪಾಟ್ಟುಗಳು ಪ್ರಚಾರದಲ್ಲಿದ್ದವು. ಅವು ಅಜ್ಞಾತ ಜನ ಸಾಮಾನ್ಯ ಕವಿಗಳಿಂದ ರಚಿತಗೊಂಡವು. ಕ್ರಮೇಣ ಈ ಪಾಟ್ಟುಗಳು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿವೆಯಾದ್ದರಿಂದ ಹಾಡುಗಳಲ್ಲಿ ಸಂಸ್ಕೃತ ಪದಗಳು ಹೆಚ್ಚಾಗಿ ಕಂಡುಬರುತ್ತವೆ. ಕೇರಳದ ಕೆಳವರ್ಗದ ಸಮುದಾಯಗಳು ತಮ್ಮ ವಿಶೇಷ ಆಚರಣೆಗಳಿಗೆ ತಕ್ಕಂತೆ ಒಂದೊಂದು ವಿಶೇಷ ಪಾಟ್ಟುಗಳನ್ನು ಸೃಷ್ಟಿಸಿದ್ದ ಉದಾಹರಣೆಗಳಿವೆ. ಸರ್ಪದೋಷ ನಿವಾರಣೆಗೆ ಪುಳ್ಳವರ ಪಾಟ್ಟು, ಶತ್ರುದೋಷ ನಿವಾರಿಸಲು ವೇಲರ ಪಾಟ್ಟು ಇತ್ಯಾದಿಗಳು ಇಲ್ಲಿ ಉಲ್ಲೇಕಾರ್ಹ. ಈ ಪಾಟ್ಟುಗಳ ಕಥೆಯ ಜೀವಾಳ ಕೇರಳಿಯ ಸಂಸ್ಕೃತಿಯದ್ದೇ ಆಗಿದ್ದು, ಭಾಷೆಯೂ ಕೇರಳೀಯವೇ ಆಗಿದೆ. ಈ ಕಾರಣದಿಂದಲೇ ಇಂದಿಗೂ ಆ ಪಾಟ್ಟುಗಳು ಆಕರ್ಷಣೀಯವಾಗಿವೆ. ಇವು ಮಣಿಪ್ರವಾಳ ಶೈಲಿಗಿಂತ ಪೂರ್ವದ ಮಲಯಾಳ ಭಾಷಾ ಸಾಹಿತ್ಯವನ್ನು ಅರಿಯಲು ಈ ರಚನೆಗಳು ಸಹಾಯಕವಾಗಬಲ್ಲವು.

ಮುಂದಿನ ಮಲಯಾಳ ಸಾಹಿತ್ಯದ ಬೆಳವಣಿಗೆಯಲ್ಲಿ ಈ ಪಾಟ್ಟುಗಳ ಕೊಡುಗೆ ಅಪಾರವಾದುದು. ಮಣಿಪ್ರವಾಳ ಶೈಲಿ ಜನಪ್ರಿಯಗೊಂಡು ಸಂಸ್ಕೃತ ಭಾಷೆ ಪ್ರಾಧಾನ್ಯತೆ ಪಡೆದಿದ್ದ ಸಂದರ್ಭದಲ್ಲಿ ಶುದ್ಧ ಮಲಯಾಳ ಭಾಷೆ ಶೈಲಿಯನ್ನು ಸಂರಕ್ಷಿಸುವಲ್ಲಿ ಈ ಗಾನ ಪರಂಪರೆಗಳ ಪಾತ್ರ ಮಹತ್ವವಾದುದು. ನಂತರದ ದಿನಮಾನಗಳಲ್ಲಿ ಜನರು ಮಣಿಪ್ರವಾಳದ ಅಸಹಜತೆಯನ್ನು ಅರಿತು ಶುದ್ಧ ಮಲಯಾಳ ಸಾಹಿತ್ಯದ ಬೆಳವಣಿಗೆಯತ್ತ ಗಮನಹರಿಸಲು ಇವು ಪ್ರೇರಣೆ ನೀಡಿವೆ.

ಸಂಘುಕ್ಕಳಿ ಪಾಟ್ಟುಗಳು ಆರಾಧನೆಗೆ ಸಂಬಂಧಿಸಿದವು. ನಂಬೂದರಿಗಳ ಆಗಮನದಿಂದ ಕೇರಳ ಸಂಸ್ಕೃತಿಯಲ್ಲುಂಟಾದ ಸಾಂಸ್ಕೃತಿಕ ಮಿಶ್ರಣವನ್ನು ತಿಳಿಯುವಲ್ಲಿ ನೆರವಾಗಿವೆ. ವಡಕ್ಕನ್ ಪಾಟ್ಟುಗಳು (ಬಡಗಣ ಹಾಡುಗಳು) ಶೌರ್ಯ ಪ್ರಧಾನವಾದ ಹಾಡುಗಳಾಗಿವೆ. ಇವುಗಳ ಸಂಭಾಷಣಾ ಶೈಲಿ ಶುದ್ಧ ಜಾನಪದ ಶೈಲಿಯಲ್ಲಿಯೇ ಇದೆ. ಅಲ್ಲದೆ ಈ ತೆಕ್ಕನ್ ಪಾಟ್ಟುಗಳು ಉಪಕರಣಗಳ ಸಹಾಯದಿಂದ ಹಾಡುವುದು, ಮಲಯಾಳದ ಅಂದರೆ ತೆಂಕಣ ಕೇರಳದ ಭಾಗದ ಮೇಲೆ ತಮಿಳಿನ ಪ್ರಭಾವ ಉಂಟಾಗಿರುವುದನ್ನು ತಿಳಿಯುವಲ್ಲಿ ಸಹಾಯಕವಾಗಿವೆ.

ಅಚ್ಚ ಮಲಯಾಳ ಕಾವ್ಯವಾಗಿ ಕೃಷ್ಣಗಾಥ

ಜನಸಾಮಾನ್ಯರಲ್ಲಿ ಬಳಕೆಯಲ್ಲಿದ್ದ ಈ ಜಾನಪದ ಹಾಡುಗಳು ಕ್ರಮೇಣ ಸಾಹಿತ್ಯದ ಮಟ್ಟಕ್ಕೇರಿದವು. ವಿದ್ವಾಂಸರೂ ಈ ಗಾನಗಳನ್ನು ಜನಸಾಮಾನ್ಯರ ಧಾಟಿಯಲ್ಲಿಯೇ ರಚಿಸತೊಡಗಿದರು. ಹೀಗೆ ರಚನೆಯಾದ ಕೃತಿಗಳಲ್ಲಿ ೧೫ನೇ ಶತಮಾನದ ಮಧ್ಯಭಾಗದಲ್ಲಿ ರಚನೆಯಾದ ಕೃಷ್ಣಪಾಟ್ಟು ಅಥವಾ ಕೃಷ್ಣಗಾಥವೂ ಪ್ರಮುಖವಾದುದಾಗಿದೆ.

ಮಣಿಪ್ರವಾಳ ಶೈಲಿ ಪ್ರಾಮುಖ್ಯತೆ ಪಡೆದಿದ್ದ ಕಾಲದಲ್ಲಿಯೇ ಅದರ ಪ್ರಭಾವಕ್ಕೆ ಒಳಗಾಗದೆ ಚೆರುಶ್ಶೇರಿ ನಂಬೂದಿರಿಯು ದೇಶೀಯ ಪಾಟ್ಟುಗಳ ರಚನೆಯ ಮಾದರಿಯಲ್ಲಿಯೇ ತನ್ನ ಕೃಷ್ಣಗಾಥವನ್ನು ರಚಿಸಿದ್ದಾನೆ.

ಮಣಿಪ್ರವಾಳ ಶೈಲಿಗೆ ಕೃಷ್ಣಾಗಾಥ ಒಂದು ಸವಾಲಾಗಿಯೇ ಇದೆ.

ಕೃಷ್ಣಗಾಥದಲ್ಲಿಯೇ ಮೊದಲ ಬಾರಿಗೆ ಆಧುನಿಕ ಮಲಯಾಳ ಕಾವ್ಯದ ಲಕ್ಷಣಗಳು ಕಂಡುಬರುತ್ತವೆ. ಸರಳವಾದ ಮಲಯಾಳ ಭಾಷೆಯಲ್ಲಿ ರಚಿಸಿ ಚೆರುಶ್ಶೇರಿ ನಂಬೂದರಿ ಕೇರಳೀಯರ ಆರಾಧಕನಾಗಿದ್ದಾನೆ. ಭಾಷೆಯ ಬಳಕೆಯಲ್ಲಿ, ಅಲಂಕಾರಗಳ ವರ್ಣನೆಯಲ್ಲಿ ಸ್ಪಷ್ಟತೆ, ಸರಳತೆಯಿದೆ. ರೇಖಾಚಿತ್ರಗಳೂ ಕಾವ್ಯದಲ್ಲಿ ಕಂಡುಬರುತ್ತವೆ. ಪುರಾಣ ಮೂಲದ ವಸ್ತುವನ್ನು ಆಯ್ದುಕೊಂಡ ಕಾರಣದಿಂದಾಗಿ ಅಲ್ಲಲ್ಲಿ ಸಂಸ್ಕೃತ ಪದಗಳ ಬಳಕೆಯೂ ಕಂಡುಬರುತ್ತದೆ. ಹೆಸರೇ ಹೇಳುವಂತೆ ಇದು ಕೃಷ್ಣನಿಗೆ ಸಂಬಂಧಿಸಿದ ಕಥೆಯಾಗಿದೆ. ಕೃಷ್ಣನ ಜನನ, ನಂದಗೋಕುಲದಲ್ಲಿ ಆತನ ಬಾಲಲೀಲೆಗಳು, ನಂದಗೋಕುಲಕ್ಕೆ ಅಕ್ರೂರನ ಪ್ರವೇಶ, ಅಲ್ಲಿಯ ರಾಸಕ್ರೀಡೆ, ಅಕ್ರೂರನ ಸಂಹಾರ, ನಂತರದಲ್ಲಿ ಕಂಸವಧೆ, ನಂತರ ಕೃಷ್ಣನು ಕಾರಾಗೃಹದಲ್ಲಿ ನಂದಗೋಪರನ್ನು ಕಾಣುವ ಸಂದರ್ಭ. ಮಹಾಭಾರತದಲ್ಲಿ ಕೃಷ್ಣನ ನಿರ್ಣಾಯಕ ಪಾತ್ರವೆಲ್ಲವೂ ಕೃಷ್ಣಗಾಥದ ಕಥಾವಸ್ತುವಾಗಿದೆ.[೬]

ತೆಲುಗು ಸಾಹಿತ್ಯ ಪರಂಪರೆ

ದಕ್ಷಿಣ ಭಾರತದ ಪ್ರಧಾನ ಭಾಷೆಗಳಲ್ಲಿ ತೆಲುಗು ಭಾಷೆಯೂ ಒಂದು. ತೆಲುಗು ನಾಡಿಗೆ ಪ್ರಾಚೀನ ಇತಿಹಾಸವಿದೆ. ಶಾತವಾಹನರು, ಪಲ್ಲವರು, ಚಾಳುಕ್ಯರು, ರೆಡ್ಡಿಗಳು, ವಿಜಯನಗರದ ಅರಸರು ಇಲ್ಲಿ ರಾಜಾಧಿಪತ್ಯ ನಡೆಸಿದ್ದಾರೆ. ಹಾಗೆಯೆ ಬೌದ್ಧ, ಜೈನ, ವೈದಿಕ, ಶೈವ, ವೈಷ್ಣವ ಧರ್ಮಗಳ ಪ್ರಭಾವವನ್ನು ಕಾಣಬಹುದು. ಕ್ರಿ.ಶ.೧೧ ನೇ ಶತಮಾನದಲ್ಲಿ ಉಪಲಬ್ಧವಾದ ನನ್ನಯ್ಯ ಕೃತಿಯೇ ತೆಲುಗು ಸಾಹಿತ್ಯದ ಆದ್ಯ ಗ್ರಂಥವಾಗಿದೆ. ಅದಕ್ಕೂ ಮೊದಲು ಜನಪದ ಸಾಹಿತ್ಯ ಜಾರಿಯಲ್ಲಿದ್ದುದನ್ನು ಉಲ್ಲೇಖಿಸುತ್ತಾರೆ. ಅದಕ್ಕೂ ಪೂರ್ವದಲ್ಲಿಯೇ ಸಾಹಿತ್ಯ ರಚನೆಯಾಗಿರಬಹುದೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.[೬]

ತೆಲುಗು ಸಾಹಿತ್ಯ ಚರಿತ್ರೆಯನ್ನು ಆಗಿನ ಗ್ರಂಥಗಳ ಆಧಾರದ ಮೇಲೆ ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ.

೧. ಭಾಷಾಂತರ ಯುಗ: ಸಂಸ್ಕೃತ ಮೂಲದ ಗ್ರಂಥಗಳನ್ನು ಯಾವುದೇ ಬದಲಾವಣೆ ಮಾಡದೆ ತೆಲುಗು ಭಾಷೆಗೆ ಅನುವಾದಿಸುವುದು. ಉದಾಹರಣೆಗೆ ರಾಮಾಯಣ ಇತ್ಯಾದಿ ಗ್ರಂಥಗಳು ಈ ಕಾಲವನ್ನು ೧೧ ನೇ ಶತಮಾನದಿಂದ ೧೫ನೇ ಶತಮಾನದವರೆಗೆ ಗುರುತಿಸಲಾಗುವುದು.

೨. ಪ್ರಬಂಧ ಯುಗ: ಈ ಯುಗವನ್ನು ತೆಲುಗು ಸಾಹಿತ್ಯದ ಸುವರ್ಣ ಕಾಲವೆಂದು ಗುರುತಿಸಲಾಗಿದೆ. ಯಾವುದೇ ಭಾಷೆಯ ಅನುಕರಣೆಗೆ, ಪ್ರಭಾವಕ್ಕೆ ಒಳಗಾಗದೆ ತೆಲುಗು ಕವಿಗಳು ಸ್ವಂತತ್ರವಾಗಿ ಕಾವ್ಯ ರಚಿಸಿದ್ದಾರೆ.

೩. ತಾಮಸ ಯುಗ: ಈ ಕಾಲದಲ್ಲಿ ಯಾವುದೇ ಪ್ರಮುಖ ಸಾಹಿತ್ಯ ಕೃತಿಗಳು ರಚನೆಯಾಗಿಲ್ಲ. ಈ ೧೭ - ೧೮ ನೇ ಶತಮಾನದ ಕಾಲಘಟ್ಟವನ್ನೇ ತೆಲುಗು ಸಾಹಿತ್ಯದಲ್ಲಿ ಶುಷ್ಕ ಅಥವಾ ತಾಮಸಯುಗವೆಂದು ಕರೆಯಲಾಗಿದೆ.

೪. ಆಧುನಿಕ ಸಾಹಿತ್ಯ ೧೯ ನೇ ಶತಮಾನದ ಸುಮಾರಿನಲ್ಲಿ ತೆಲುಗು ಭಾಷೆ ಆಧುನಿಕ ಸಾಹಿತ್ಯದ ಪ್ರಭಾವಕ್ಕೆ ಒಳಗಾಯಿತು.

ಆರಂಭ ಕಾಲದಿಂದಲೂ ಆಂಧ್ರದೇಶದಲ್ಲಿ ದೇಶೀಯ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದಾರೆ ಮಾತ್ರವಲ್ಲ ಸ್ವತಃ ಅರಸರೇ ದೇಶೀ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಹಾಲರಾಜ, ಶ್ರೀಕೃಷ್ಣದೇವರಾಯ, ನನ್ನಿಚೂಡ ಪ್ರಮುಖರು. ನನ್ನಯನನ್ನು ತೆಲುಗು ಸಾಹಿತ್ಯದ ಪ್ರಥಮ ಕವಿಯೆಂದು ಗುರುತಿಸಲಾಗಿದೆ. ಅಲ್ಲದೆ ನನ್ನಯ, ತಿಕ್ಕನ, ಎರ್ರಾಪ್ರಗ್ಗಡ ತೆಲುಗು ಸಾಹಿತ್ಯದ ಕವಿತ್ರಯರೂ ಆಗಿದ್ದಾರೆ.

ಜೈನಧರ್ಮದ ಅವನತಿಯ ನಂತರ ೧೧ ನೇ ಶತಮಾನದ ಹೊತ್ತಿಗೆ ವೈದಿಕ ಮತದ ಪ್ರಾಬಲ್ಯವನ್ನು ಸಾರುವ ರಾಮಾಯಣ, ಮಹಾಭಾರತಗಳ ಅನುವಾದವನ್ನು ಮೊದಲಿಗೆ ಆರಂಭಿಸಿದವನು ನನ್ನಯ. ಅವನ ನಂತರ ೧೩ ನೇ ಶತಮಾನದ ವೇಳೆಗೆ ತಿಕ್ಕನನು ಆ ಕಾರ್ಯವನ್ನು ಮುಂದುವರೆಸಿದನು. ನಂತರ ೧೪ನೇ ಶತಮಾನದಲ್ಲಿ ತಿಕ್ಕನನು ಅನುವಾದಿಸದೆ ಬಿಟ್ಟ ಅರಣ್ಯಪರ್ವವನ್ನು ಭಾಷಾಂತರಿಸಿದ ಎರ್ರಪ್ರಗಡನು ತೆಲುಗು ಭಾರತದ ಭಾಷಾಂತರವನ್ನು ಪೂರ್ಣಗೊಳಿಸಿದನು. ಭಾಷಾಂತರ ತೆಲುಗು ಸಾಹಿತ್ಯವನ್ನು ಬೆಳೆಸಿದ ಇತರ ಕವಿಗಳಲ್ಲಿ ಒಂದನೆಯ ಪ್ರತಾಪರುದ್ರ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥ, ನನ್ನಿಚೂಡ, ರಂಗನಾಥ, ಅಥರ್ವಣ, ಮೂಲಘಟಿಕ ಕೇತನ, ಬೇಡಣ್ಣ, ಮಾರನ, ಮಂಚನ್ನ; ಹುಳಿಕ್ಕೆ ಭಾಸ್ಕರ, ನಾಚಿನ ಸೋಮ, ಶ್ರೀನಾಥ, ಪೋತನ ಮೊದಲಾದವರು ಪ್ರಮುಖರಾಗಿದ್ದಾರೆ.

ಪಾಲ್ಕುರಿಕೆ ಸೋಮನಾಥ: ವೀರಶೈವ ಕವಿ. ಕನ್ನಡ, ತೆಲುಗು, ಸಂಸ್ಕೃತದಲ್ಲಿ ಸಾಹಿತ್ಯರಚನೆ ಮಾಡಿದ್ದಾನೆ. ತೇಟ ತೆಲುಗು ಶೈಲಿಯಲ್ಲಿ ಅಲ್ಲದೆ ವೃತ್ತ ಮತ್ತು ರಗಳೆಯಿಂದ ಮಿಶ್ರಿತವಾದ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ್ದಾನೆ. ನಂತರದಲ್ಲಿ ನನ್ನಿಚೂಡನು ತನ್ನ ಸಾಹಿತ್ಯದಲ್ಲಿ ವಿಶೇಷವಾಗಿ ತಮಿಳು ಮತ್ತು ಕನ್ನಡ ಶಬ್ದಗಳ ಬಳಕೆ ಮಾಡಿದ್ದು. ದೇಶೀ ಶೈಲಿಗೆ ಒತ್ತು ಕೊಟ್ಟಿದ್ದಾನೆ.

ಶ್ರೀನಾಥನನ್ನು ತೆಲುಗು ಸಾಹಿತ್ಯದ ಪ್ರಮುಖ ಕವಿಯೆಂದು ಗುರುತಿಸಿದ್ದಾರೆ. ಸೀಸ ಪದ್ಯಗಳ ರಚನೆಯಿಂದಾಗಿ ಶ್ರೀನಾಥ ಹೆಚ್ಚು ಪ್ರಸಿದ್ಧಿ ಪಡೆದಿದ್ದ. ೧೫ ನೇ ಶತಮಾನದ ಆದಿಯಲ್ಲಿ ಕಂಡುಬರುವ ವೇವನ ಭಾಷಾ ರಚನೆಯ ಸರಳತೆಯಿಂದಾಗಿ ಹೆಚ್ಚು ಪ್ರಸಿದ್ಧಿಗೆ ಬರುವಂತಾದನು. ಈ ಅವಧಿಯ ಕೊನೆಯ ಪ್ರಮುಖ ಕವಿ ಅನ್ನಮಾಚಾರ್ಯ. ३೨೦೦ ಭಕ್ತಿಗೀತೆಗಳನ್ನು ರಚಿಸಿ ಪ್ರಸಿದ್ಧಿ ಪಡೆದಿದ್ದಾನೆ.

ಈ ಅವಧಿಯಲ್ಲಿ ಪುರಾಣಗಳು, ಲಕ್ಷಣ ಗ್ರಂಥಗಳು, ಹೆಚ್ಚು ರಚಿತಗೊಂಡಿವೆ.

ಪ್ರಬಂಧ ಯುಗ: ಕೃಷ್ಣದೇವರಾಯ ಮತ್ತು ಆತನ ಆಸ್ಥಾನ ಕವಿಗಳು ಪ್ರಬಂಧಯುಗದ ಸ್ಥಾಪಕರೆಂದು ಗುರುತಿಸಲಾಗಿದೆ. ಇಲ್ಲಿ ಸ್ವತಂತ್ರ ಕೃತಿ ರಚನೆಗೆ ಹೆಚ್ಚು ಅವಕಾಶ ಕಲ್ಪಿಸಲಾಯಿತು. ಕೃಷ್ಣದೇವರಾಯನ ಅಮುಕ್ತಮೌಲ್ಯದ, ಪೆದ್ದನ್ನನ ಮನುಚರಿತೆ, ರಾಮರಾಜಭೂಷಣನ ವಸುಚರಿತ, ಶ್ರೀನಾಥನ ಶೃಂಗಾರ ನೈಷಧ, ತೆನಾಲಿರಾಮಕೃಷ್ಣನ ಪಾಂಡುರಂಗಮಹಾತ್ಮೆ ಇವು ತೆಲುಗು ಭಾಷೆಯ ಪಂಚಮಹಾಕಾವ್ಯಗಳೆಂದು ಗುರುತಿಸಲ್ಪಟ್ಟಿವೆ. ತೆಲುಗಿನ ಮತ್ತೊಬ್ಬ ಪ್ರಸಿದ್ಧ ಕವಿಯಾದ ಪೆದ್ದನ ಈ ಪ್ರಬಂಧಯುಗದ ಸ್ಥಾಪಕನಾದ್ದರಿಂದ ಆತನನ್ನು ಆಂಧ್ರಕವಿತಾ ಪಿತಾಮಹ ಎಂದು ಕರೆಯಲಾಗುತ್ತದೆ.

ವಿಜಯನಗರದ ಪತನದ ನಂತರ ಸ್ವತಂತ್ರರಾದ ಸಾಮಂತರೂ ಕೂಡ ತೆಲುಗು ಸಾಹಿತ್ಯದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದರು. ಆ ಕಾರಣದಿಂದ ಜಾತಿ, ಲಿಂಗ ಬೇಧವಿಲ್ಲದೆ ಅನೇಕರು ಸಾಹಿತ್ಯ ರಚಿಸುವಂತಾಯಿತು. ತಂಜಾವೂರು, ಮಧುರೆ, ಪುದುಕೋಟೆ, ಮೈಸೂರು, ಗೋಲ್ಕಂಡಾ ನವಾಬರೂ ತೆಲುಗು ಸಾಹಿತ್ಯದ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ನೀಡಿದ್ದರಿಂದಾಗಿ ಅನೇಕ ಬಗೆಯಲ್ಲಿ ತೆಲುಗು ಸಾಹಿತ್ಯ ಅಭಿವೃದ್ಧಿಯಾಯಿತು ಮಾತ್ರವಲ್ಲ ವಿಶೇಷವಾಗಿ ಮಹಿಳೆಯರೂ ಸಾಹಿತ್ಯ ರಚನೆಯಲ್ಲಿ ಪಾಲ್ಗೊಳ್ಳುವಂತಾಯಿತು. ದೇಶಿ ಶೈಲಿ, ಛಂದಸ್ಸಿನಲ್ಲಿ ಕಾವ್ಯರಚನೆಯಾಗುವಂತಾಯಿತು. ಚಮಕೂರಿ ವೆಂಕಟ ಕವಿ ಕಂಡುಕುರಿ ರುದ್ರಯ್ಯ, ರಘುನಾಥನಾಯಕ, ವಿಜಯರಾಘುವ ನಾಯಕ, ವಿಶ್ವನಾಥನಾಯಕರಾದ ತೆಲುಗಿನ ಮಹಾಕವಿಗಳು ಸಾಮಂತ ಅರಸರಿಂದ ಪೋಷಿತರಾಗಿದ್ದರು. ಮೈಸೂರು ಅರಸರ ಆಶ್ರಯದಲ್ಲಿದ್ದ ಕನ್ನಡ ಕವಿಗಳನೇಕರು ತೆಲುಗು ಕೃತಿಗಳನ್ನು ಅನುವಾದಿಸಿದಕ್ಕೆ ಉದಾಹರಣೆಗಳು ದೊರೆಯುತ್ತವೆ.

ಗೋಲ್ಕಂಡದ ನವಾಬರೂ ತೆಲುಗು ಸಾಹಿತ್ಯದ ಅಭಿವೃದ್ಧಿಗೆ, ಕವಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಅದರಲ್ಲಿ ಪೊನ್ನಗಂಟಿ ತೆಲಗನಾರ್ಯ ಪ್ರಮುಖನು. ಇಬ್ರಾಹಿಂ ಕುತುಬ್‌ಷಾನ ಆಶ್ರಯದಲ್ಲಿ ಶುದ್ಧ ತೆಲುಗು ಭಾಷೆಯಲ್ಲಿ 'ಯಯಾತಿ ಚರಿತೆ' ಯನ್ನು ರಚಿಸಿ ಅಮೀರ್‌ಖಾನನಿಗೆ ಕೃತಿಯನ್ನು ಅಂಕಿತ ಮಾಡಿದ್ದಾನೆ. ಹಾಗಾಗಿ ಸ್ವಚ್ಛ, ಶುದ್ಧ ತೆಲುಗಿನಲ್ಲಿ ಕಾವ್ಯರಚನೆ ಮಾಡಿದವರಲ್ಲಿ ಇವನೇ ಮೊದಲಿಗನಾಗಿದ್ದಾನೆ. ಮುಂದೆ ಕೂಚಿಮಂಚಿ ತಿಮ್ಮಕವಿಯು 'ನೀಲಸುಂದರೀ ಪರಿಣಯಮು' ಎಂಬ ಕಾವ್ಯವನ್ನು ಈ ಮಾದರಿಯಲ್ಲಿಯೇ ರಚಿಸಿದ್ದಾನೆ. ಕಂಡುಕುರು ರುದ್ರಯ್ಯ, ಅಡ್ಡಂಕಿ ಗಂಗಾಧರ ಮೊದಲಾದವರು ಈ ಗೋಲ್ಗಂಡಾ ನವಾಬರ ಆಶ್ರಯದಲ್ಲಿದ್ದ ಸಂಗತಿ ತಿಳಿದು ಬರುವುದು.

೧೬ನೇ ಶತಮಾನದ ಅಂತ್ಯದ ವೇಳೆಗೆ ವಿಜಯನಗರ ಸಾಮ್ರಾಜ್ಯ ಪತನದಿಂದಾಗಿ ತೆಲುಗು ಸಾಹಿತ್ಯವೂ ಹಿನ್ನಡೆಗೆ ಸರಿಯುವಂತಾಯಿತು.[೮]

ಜಾನ ತೆಲುಗು ಅಥವಾ ಅಚ್ಚ ತೆಲುಗು

ನನ್ನಯನ ಸಮಕಾಲೀನನಾದ ಪಿಮ್ಮಟಿ ಕವಿರಾಜ ಶಿಖಾಮಣಿ ನನ್ನಚೊಡನ 'ಕುಮಾರ ಸಂಭವ' ಕೃತಿಯಲ್ಲಿ ಮೊದಲ ಬಾರಿಗೆ ಜಾನ ತೆಲುಗಿನ ಪ್ರಸ್ತಾಪ ಬರುತ್ತದೆ. ಅವನ ಪ್ರಕಾರ

ಜಾನತೆಲುಗಿನ ಮೊದಲ ಉಲ್ಲೇಖ ಬರುವುದು ನನ್ನಚೊಡು ಕವಿಯ ಕುಮಾರ ಸಂಭವದಲ್ಲಿ ಸರಳವಾದ ಭಾಗದಲ್ಲಿ ಇಂಪಾದ 'ಜಾನ ತೆಲುಗಿ'ನಲ್ಲಿ ತಾನು ಕಾವ್ಯ ಬರೆಯುವುದಾಗಿ ಈತನು ಹೇಳಿಕೊಂಡಿದ್ದಾನೆ. ಆತನ ಪ್ರಕಾರ ಸರಳವಾದ ಭಾವಗಳು, ಇಂಪಾದ ವರ್ಣನೆಗಳು, ಹೊಸ-ಹೊಸ ಅರ್ಥಗಳು, ಬಂಧುರವಾದ ರಚನೆಗಳು, ಮಧುವಿನಂತೆ ಮೃದುತ್ವವುಳ್ಳ ರಸಭಾವಗಳು ಗೂಡಾರ್ಥಗಳುಳ್ಳದ್ದು ಜಾನ ತೆಲುಗು. ಒಟ್ಟಾರೆಯಾಗಿ ಸರಳವಾದ ಭಾವನೆಗಳನ್ನು ವ್ಯಕ್ತಗೊಳಿಸುವುದೇ ಅವನ ಪ್ರಕಾರ ಜಾನತೆಲುಗು. ವಿಮರ್ಶಕರ ಪ್ರಕಾರ ಇದನ್ನು ನನ್ನಯ್ಯನೂ ಹೇಳಿದ್ದಾನಂತೆ.

ನನ್ನಿಚೊಡನ ಜಾನತೆಲುಗಿನ ಈ ವಿವರಣೆಯನ್ನು ಮುಂದಿನ ಪಾಲ್ಕುರಿಕೆ ಸೋಮನಾಥನೂ ಮುಂದುವರೆಸುತ್ತಾನೆ. ಗುರುತರ ಗದ್ಯಪದ್ಯೋಕ್ತಿಗಳು ಕಂಪನ್ನು ಸೂಸುತ್ತಿರುವುದೇ ಜಾನತೆಲುಗು ಎಂಬುದಾಗಿ ಆತನು ಹೇಳುತ್ತಾನೆ.

ಮುಖ್ಯವಾಗಿ ಸಂಸ್ಕೃತ ಭೂಯಿಷ್ಠವಾದ ರಚನೆಗಳನ್ನುಳಿದು ಸಾಮಾನ್ಯ ಜನರಿಗೆ ಅರ್ಥವಾಗುವ ಭಾಷೆಯನ್ನು ಬಳಸುವುದೇ ಜಾನತೆಲುಗು ಎಂದು ಆತನ ಅಭಿಪ್ರಾಯವಾಗಿದೆ.

ಕೆಲವರ ಪ್ರಕಾರ ಕನ್ನಡದ ಜಾಣ್ನುಡಿಗೆ ತೆಲುಗಿನಲ್ಲಿ ಸಂವಾದಿಯಾದ ಪದವೇ ಜಾನ ತೆಲುಗು. ಕೆಲವರ ಪ್ರಕಾರ ಇದು 'ಜ್ಞಾನ'ಕ್ಕೆ ಸಂವಾದಿಯಾದುದು. ಇನ್ನು ಕೆಲವರು ಜಾಣಕ್ಕೆ ಸಂಬಂಧಿಸಿದುದೆಂದೂ ಅಭಿಪ್ರಾಯ ಪಡುತ್ತಾರೆ. ತೆಲುಗು ನಿಘಂಟಿನಲ್ಲಿ ಅಂದ, ನೇರ್ಪು, ಒಪ್ಪು, ಸ್ಪಷ್ಟತೆ ಮೊದಲಾದ ಅರ್ಥಗಳಿವೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತೆಲುಗನಾರ್ಯನು ಜಾನ ತೆಲುಗನ್ನು ಅಚ್ಚ ತೆಲುಗು ಎಂದು ಕರೆಯುತ್ತಾನೆ. ಅಚ್ಚ ತೆಲುಗು ಎಂದರೆ ಅವನ ಪ್ರಕಾರ, ಶುದ್ಧ ದೇಶೀಯವಾದುದು ಎಂದರ್ಥ.

ಇನ್ನು ಅಚ್ಚತೆಲುಗಿಗೆ ಸಂಬಂಧಿಸಿದಂತೆಯೂ ಏಕಾಭಿಪ್ರಾಯಗಳಿಲ್ಲ. ಕೇತನನ ಪ್ರಕಾರ ತತ್ಸಮ, ತದ್ಭವ, ಅಚ್ಚತೆನುಗು, ದೇಶ್ಯ, ಗ್ರಾಮ್ಯವೆಂದು ತೆಲುಗು ಭಾಷೆಯ ವೈಶಿಷ್ಟ್ಯಗಳು, ದೇಶ್ಯೋದ್ಭವ, ಗ್ರಾಮ್ಯವೆಂದು ತೆಲುಗು ಭಾಷೆಯ ಪದರಚನೆಯನ್ನು ವಿವರಿಸುತ್ತಾನೆ. ಇಲ್ಲಿ ಸಹಜಾಂಧ್ರವೆಂದರೆ ಕೇತನ ಹೇಳಿದ 'ಅಚ್ಚತೆಲುಗು' ಎಂದೇ ಅರ್ಥ ಇದೀಗ ತತ್ಸಮ-ತದ್ಭವ, ದೇಶ್ಯ ಮತ್ತು ಗ್ರಾಮ್ಯ ಎಂಬುದಾಗಿ ಒಂದು ವರ್ಗ ಹಾಗೆಯೇ ದೇಶ್ಯ, ಆಂಧ್ರ ದೇಶ್ಯ, ಅನ್ಯದೇಶ್ಯ ಪದಗಳೆಂದು ಐದು ವರ್ಗದ ಪದಗಳನ್ನು ವರ್ಗೀಕರಿಸಬಹುದು. ಇವುಗಳಲ್ಲಿ ತದ್ಭವವೆನ್ನುವುದು ಕನ್ನಡ ಮತ್ತು ತೆಲುಗಿನಲ್ಲಿ ಸಮಾನಾರ್ಥಕವಾದವುಗಳೇ, ಇನ್ನು ತೆಲುಗಿನಲ್ಲಿಯೂ ಸಂಸ್ಕೃತ ಮತ್ತು ಪ್ರಾಕೃತವೆನ್ನುವ ವಿಧಾನಗಳಿವೆ. ಇವುಗಳೆರಡರಲ್ಲಿಯೂ ತತ್ಸಮ, ತದ್ಭವಗಳಿರುತ್ತವೆ. ಅನ್ಯದೇಶ್ಯವೆಂದರೆ ಅರಬ್ಬೀ, ಪಾರಸಿ, ಇಂಗ್ಲೀಷ್ ಮೊದಲಾದ ವಿದೇಶೀ ಭಾಷಾ ಮೂಲದ ಪದಗಳು. ದೇಶ್ಯ ಎಂದರೆ ತೆಲುಗು ಭಾಷೆಯ ವಿಶೇಷ ಪದಗಳು ಎಂದರ್ಥ.

ಇವುಗಳಲ್ಲಿ ಜಾನತೆಲುಗು ಮತ್ತು ಅಚ್ಚ ತೆಲುಗು ಕಾವ್ಯ ಪ್ರಕಾರಗಳು ಬಹುಮಟ್ಟಿಗೆ ಒಂದೇ ಆದರೂ ನಡುವೆ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಜಾನತೆಲುಗಿನಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಸುಲಭ ಸುಂದರ ಶೈಲಿಯೇ ಜಾನತೆಲುಗು. ಅದರಲ್ಲಿ ಮಹಾಪ್ರಾಣಾಕ್ಷರಗಳಿಗೆ ಸಂಯುಕ್ತ ಪದಗಳಿಗೆ ಪ್ರವೇಶವಿದೆ. ಆದರೆ ಅಚ್ಚತೆಲುಗು ಹಾಗಲ್ಲ. ಇದರಲ್ಲಿ ತತ್ಸಮಗಳಿಗೆ ಸ್ವಲ್ಪವೇ ಅವಕಾಶವಿರುವುದು ಆದರೆ ದೇಶೀಯ ಪದಗಳಿಗೆ ಅವುಗಳಲ್ಲಿ ತಪ್ಪದೇ ಪ್ರವೇಶವಿರುವುದು. ಅಂದರೆ ಅಚ್ಚತೆಲುಗು ಎಂಬುದು ಅಚ್ಚಗನ್ನಡಕ್ಕೆ (ಎಂದರೆ ಮುಳಿಯ ತಿಮ್ಮಪ್ಪಯ್ಯ ಹೇಳುವ ಅರ್ಥದಲ್ಲಿ) ಸಂವಾದಿಯಾದುದು.

ಜಾನತೆಲುಗಿನ ಕುರಿತು ತಿಕ್ಕನ ಮೊದಲಾದವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.[೯]

ಲಲಿತ ಪದ ಹೃದ್ಯಪದ್ಯಂ

ಬುಲನು ಕಥಾರ್ಥಂಬು ಘಟಿತ ಪೂರ್ವಾಪರಮೈ

ಯಲತಿ ಯಲತಿ ತುನಿಯಲಕಾ

ವಾಳ ಸಂಧಿಂಚಿನ ವಿಧಮುನ ಸಮರಗ ವಲಯ್ರು

ತಿಕ್ಕನ ನಿರ್ವಚನೋತ್ತರ ರಾಮಾಯಣಮು

ತೆನುಗುನ ತೆಲುಗಾಧಲು ತೆಲ್ಪಿನ ಕಾವ್ಯಮು ಪೊಂದುಲೇದು ಮ

ತ್ರಿನ ಪಸವಾಲ ದಂಡ್ರು ವಿಶದಂಬುಗ ಸಂಸ್ಕೃತ ಶಬ್ಧಮೂದಜೆ

ಪ್ಪಿನ ವಿದರ್ಪ ಮುಂಡ್ಲನುಚು ಬೊಟ್ಟರು ವಿನುಲಗಾವುರ್ನ ರುಚಿಲೊ

ದನರ ತೆನುಂಗು ದೇಶಿಯುನು ತದ್ದವಮುಲೊಗಲ ಯಂಗ ಜೆಪ್ಪಿದನ

ಕಾರಿವಿ ಗೋಪರಾಜ ಸಿಂಹಾಸನ ದ್ವಾತ್ರಿಂಶಿಕ ತೆನಸೊಕ ನಾರು

ತಿಯಯಗುರಿತಿಲೊನಯರ್ಥ ಮಲ್ಲ ದೋಪಕುಂಡ

ಗೂಢ ಶಬ್ದಮುಲನು ಗೂರ್ಚಿನ ಕಾವ್ಯಂಬು

ಮುಗ ಚೆವಿಟಿವಾರಿ ಮುಚ್ಚಟಂಡ್ರು

ಅವರೆಲ್ಲರಲ್ಲಿ ಪೊನ್ನಗಂಟಿ ತೆಲಗನಾರ್ಯನು ಹೊಸ ಸೂತ್ರದೊಂದಿಗೆ ಅಚ್ಚ ತೆಲುಗಿನ ಬಗೆಗೆ ಹೀಗೆ ಹೇಳಿದ್ದಾನೆ.

ಜಾನ ತೆಲುಗು - ಅಚ್ಚ ತೆಲುಗು

ಅಚ್ಚ ತೆನುಗೆಂದರೆ ಶುದ್ಧ ದೇಶೀ ಎಂದೇ ಅರ್ಥ.

* ಒಟ್ಟಾರೆಯಾಗಿ ಅಚ್ಚ ತೆಲುಗು ಎಂದರೆ ಈ ರೀತಿಯಾಗಿ ಅರ್ಥೈಸಿದ್ದಾರೆ.[೧೦]

೧. ಎಲ್ಲಾರಿಕೆ, ದೆಲಿಪಡಿಯಾಪಲಕು ಅಚ್ಚತೆನುಗಲ್ಯ ಬರಗುರ್ -ಕೇತನ.

೨. ನೆಲಕೊನು ಸಂಸ್ಕೃತ ತತ್ಸಮ -ಮುಲು ದೊರಲಕ ತಜ್ಜ ದೇಶ್ಯಮುಂ ಮೂಟನ ಸಂಧಲ ಕವಲಾಂಧ್ರಮುಲುನಾ -ನರುಲ ಕ್ಕತನ ನಚ್ಚತೆನುಗುಲಂಡ್ರುತೆಲುಗುರ್ನ.

೩. ಸಂಸ್ಕೃತಮೆ ತರಂಬೈನ ಈ ಭಾಷಯಚ್ಚಯನಂಬಡು.

೪. ಸಂಸ್ಕೃತ ಸಮೆತರಮ್ಯೆನ ಭಾಷ ಅಚ್ಚ ತೆನುಗು ತತ್ಸಮ, ದೇಶ್ಯದ ಮೃದು ಪದವೇ ಅಚ್ಚತೆಲುಗು.

ಅಚ್ಚ ತೆಲುಗನ್ನು ನಿರ್ಣಯಿಸುವಲ್ಲಿ ಲಾಕ್ಷಣಿಕರಲ್ಲಿ ಒಮ್ಮತಾಭಿಪ್ರಾಯವಿಲ್ಲ. ಆದರೆ ತೆಲುಗು ಲಾಕ್ಷಣಿಕನಾದ ಕೇತನನು ತತ್ಸಮ, ತದ್ಭವ, ಅಚ್ಚತೆನುಗು, ದೇಶ್ಯ ಗ್ರಾಮ್ಯವೆಂದು, ತತ್ಸಮವನ್ನು, ತದ್ಭವವನ್ನು ಸಮಾಜಾಂಧ್ರ ದೇಶಭವವನ್ನು ದೇಶ್ಯದ್ಭವವೆಂದು, ಗ್ರಾಮ್ಯವೆಂದು ತೆಲುಗು ಪದವನ್ನು ಐದು ವಿಧವಾಗಿ ವಿಭಜಿಸಿದ್ದಾನೆ. ವಿನ್ನಕೋಟಿ ಪೆದ್ದನನು ತತ್ಸಮ ತದ್ಭವವನ್ನು ಪಿಮ್ಮಟನು ಅಚ್ಚ ತೆನುಗುವನ್ನು ಸಮಾಜಾಂಧ್ರ ದೇಶಭವವೆಂದೂ ದೇಶ್ಯದ ಬದಲು ದೇಶ್ಯದ್ಭವೆಂದೂ ಪರ್ಯಾಯ ರೂಪಗೊಳಿಸಿದ್ದಾನೆ.

ತತ್ಸಮ, ತದ್ಭವ, ದೇಶ್ಯ, ಗ್ರಾಮ್ಯವೆಂದು ಚತುರ್ವಿಧ ವಿಭಾಗವಿದ್ದು ಅದನ್ನು ಅಪ್ಪಕವಿಯು ದೇಶ್ಯವನ್ನು ಆಂಧ್ರದೇಶ್ಯ ಇಲ್ಲವೆ ದೇಶ್ಯವೆಂದೂ, ಅನ್ಯದೇಶ್ಯವೆಂದೂ ಎರಡು ವಿಧವಾಗಿ ವಿಂಗಡಿಸಿದ್ದಾನೆ.

ಆಂಧ್ರ ಭಾಷೆಯ ಪದವಿಭಾಗದಲ್ಲಿ ತತ್ಸಮವನ್ನು ತದ್ಭವವಾಗಿ ದೇಶ್ಯದ ಸಮನಾಗಿ ಸ್ವೀಕರಿಸಲಾಗದು. ಕಾರಣ ತತ್ಸಮವು ತಪ್ಪಿ ತಿಕ್ಕನನು ಮೂರನೇ ವರ್ಗವನ್ನಾಗಿಸಿದ ಪ್ರಸ್ತುತ ಇದುವೇ ಅಚ್ಚ ತೆಲುಗಿನ ಬಳಕೆಯಲ್ಲಿದೆ.

ಈ ಪ್ರಯೋಜನಕ್ಕಾಗಿಯೇ ಇದರಲ್ಲಿ ಮಹಾಪ್ರಾಣಗಳು, ಸಂಯುಕ್ತಾಕ್ಷರಗಳು ಬರರಾದು ಆದರೆ ತತ್ಸಮಗಳಿಗೆ ಪ್ರವೇಶವಿದೆ. ಅಚ್ಚ ತೆಲುಗಿನಲ್ಲಿ ಹಾಗಿಲ್ಲ. ಅಚ್ಚತೆಲುಗಿನಲ್ಲಿ ತತ್ಸಮಗಳಿಗೆ ಕಡಿಮೆ ಅವಕಾಶವಿದೆ. ದೇಶೀಯ ಪದಗಳು, ನಿಘಂಟುಗಳಲ್ಲಿರುವ ಪದಗಳಿಗೆ ತಪ್ಪದೆ ಪ್ರವೇಶವಿದೆ.

ಆದರೆ ಇದನ್ನು ಅಚ್ಚತೆನುಗೆಂದು ಹೇಳಲಾಗದು ಕಾರಣ ಗೋಪರಾಜ ಹೇಳಿದ ಲಕ್ಷಣವು ಅಚ್ಚ ತೆನುಗಿಗೆ ಸರಿಹೊಂದದು. ತದ್ಭವಗಳಿಗೆ ವಿಕೃತಿ ಹೊಂದಿದವು ಎಂಬುದು ಮತ್ತೊಂದು ಹೆಸರು. ವಿಕೃತಿಗೊಂಡವು ಎಂದರೆ ಮೂಲಭಾಷೆಯಿಂದ ವರ್ಣಾಗಮನಗೊಂಡು ವರ್ಣದೋಶ, ವರ್ಣಲೋಪ, ವರ್ಣವ್ಯತ್ಯಯ, ಸ್ವರಪ್ಲುತವೆಂದು ಐದು ವಿಧವಾಗಿ ವಿಕಾರಗೊಂಡು ಸೇರ್ಪಡೆಯಾದವುಗಳಾಗಿರುತ್ತವೆ. ತೆನುಗಿಗೆ ಸಂಸ್ಕೃತ ಪಾಕೃತ ಎಂದು ಎರಡು ಬಗೆಯ ಪ್ರಕೃತಿಗಳಿವೆ. ಆದರೆ ಇಂದು ಎರಡೂ ಭಾಷೆಗಳಿಗೆ ತತ್ಸಮ ತದ್ಭಗಳು ಕಾಣಲಾರವು. ಈ ಭಾಷೆಯಲ್ಲಿ ವಿಕೃತಗಳಿಗೆ ಮತ್ತೊಂದು ಹೆಸರು ಪ್ರಾಕೃತವೆಂದೇ ಭ್ರಮಿಸಿದ್ದಾರೆ ಎಂಬುದು ಸಂಶೋಧಕರ ಅಭಿಪ್ರಾಯ.

ಅನ್ಯದೇಶ್ಯದಲ್ಲಿ ಅರಬ್ಬಿ, ಪಾರಸಿ, ತುರುಷ್ಕ, ಮೊದಲಾದ ಪ್ರದೇಶದ ಪದಗಳೆಲ್ಲ ಇಂದು ತಮಿಳು, ಕನ್ನಡ, ಮರಾಠಿ, ಪದಗಳೊಂದಿಗೆ ಸೇರಿಕೊಂಡು ಅಚ್ಚ ತೆನುಗಿಗಾಗಿ ಚಲಾವಣೆಯಾಗುತ್ತಿವೆ. ನಮ್ಮ ಭಾಷೆಯನ್ನು ದೇಶ್ಯವೆಂದು ಕರೆಯಲಾಗುವುದು. ಈ ಆಂಧ್ರದೇಶ್ಯಕ್ಕಿಂತ ಭಿನ್ನವಾದವುಗಳೇ ಅನ್ಯದೇಶ್ಯಗಳು. ಅನ್ಯದೇಶ್ಯಗಳೇ ಇಲ್ಲಿ ಅಧಿಕವಾಗಿವೆ.

ಜಾನ ತೆನುಗು, ಅಚ್ಚ ತೆಲುಗು ಎರಡು ಒಂದೆಯೇ ಎಂಬುದು ಕೆಲವರ ಅನಿಸಿಕೆ. ಆದರೆ ಅವೆರೆಡೂ ಬೇರೆ ಬೇರೆ. ಜಾನ ತೆನುಗನ್ನು ಮೊದಲಿಗೆ ಪರಿಚಯಿಸಿದ ನನ್ನಿಚೂಡ ಸೋಮನಾಥನು ಮತ ಪ್ರಚಾರದ ಉದ್ದೇಶದಿಂದಾಗಿ ಕವಿ ಮಾತನಾಡಿದಂತೆ ಜನರಿಗೆ ಅರ್ಥವಾಗಿಸುವ ಸಲುವಾಗಿ ಸುಲಭ ಸುಂದರ ಶೈಲಿಯಲ್ಲಿ ಹೇಳುವುದೇ ಇದರ ಪ್ರಧಾನ ಲಕ್ಷಣ. ಅಚ್ಚ ತೆಲುಗು ಕೃತಿಯನ್ನು ಇದುವರೆಗೆ ಪಾಲ್ಗುರಿಕೆ ಸೋಮನಾಥನು ತನ್ನ ಬಸವ ಪುರಾಣದಲ್ಲಿ ಈ ರೀತಿ ಹೇಳಿದ್ದಾನೆ.

ವಿರುತರ ಗದ್ಯ ಪದ್ಯಕುಲ ಕಂಟಿ
ಸರಸಮ್ಮೈ ಬರಗಿನ ಜಾನು ತೆನುಂಗು
ಚರ್ಚಿಂಪಗಾ ಸರ್ವಸಾಮಾನ್ಯ ಮಗುಟ
ಕೂರ್ಚದ ದ್ವಿಪದಮು ಕೊಕ್ಕದೈವಾರ
ಆರೂಢ ಗದ್ಯ ಪದ್ಯಾದಿ ಪ್ರಬಂಧ
ಪೂರಿತ ಸಂಸ್ಕೃತ ಭೂಯಿಷ್ಠ ರಚನ ಮಾನುಗಾ ಸರ್ವಸಾಮಾನ್ಯಂಬುಗಾಮಿ.

(ಮುಲ್ಲ ರಾಮಾಯಣಮು)

ಪೊನ್ನಗಂಟಿ ತೆಲುಗನಾರ್ಯನ ಯಯಾತಿ ಚರಿತ್ರೆ

ಪೊನ್ನಗಂಟಿ ತೆಲಗನಾರ್ಯನ ಕಾಲವನ್ನು ಕ್ರಿ.ಶ.೧೬ನೇ ಶತಮಾನವೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಮಹಾಭಾರತದ ಯಯಾತಿ ಮಹಾರಾಜನ ಚರಿತ್ರೆಯೇ ಈ ಕಾವ್ಯದ ವಸ್ತು.

ಯಯಾತಿ ಚರಿತ್ರೆ ತೆಲುಗಿನ ಆಂಧ್ರ ಸಾಹಿತ್ಯದ ಮೊಟ್ಟ ಮೊದಲ ಅಚ್ಚ ತೆಲುಗು ಕಾವ್ಯವಾಗಿದೆ. ಇದು ಆಂಧ್ರ ಸಾಹಿತ್ಯದ ಅಪೂರ್ವ ಕೃತಿಯಾಗಿದೆ. ತನ್ನ ಕಾವ್ಯ ರಚನೆಯಲ್ಲಿ ಅವನಿಗೆ ನನ್ನಯ್ಯನ ಕವಿತೆ, ತಿಕ್ಕನನ ಕಥಾವಿನ್ಯಾಸದ ಮಾದರಿ ಆದರ್ಶವಾಗಿದೆ. ಮಹಾಭಾರತದಲ್ಲಿ ಬರುವ ಯಯಾತಿ ಮಹರಾಜನ ವೃತ್ತಾಂತ, ದೇವ-ದಾನವರ ನಡುವಿನ ಸಂಜೀವಿನಿ ವಿದ್ಯೆಯ ಕಲಹ, ಕಚದೇವನ ವೃತ್ತಾಂತ, ದೇವಯಾನಿ-ಯಯಾತಿ ವಿವಾಹ, ಶರ್ಮಿಷ್ಠೆ-ಯಯಾತಿ ಮಿಲನ, ಯಯಾತಿ ನಂತರದ ರಾಜ್ಯಾಧಿಕಾರದ ಸ್ಥಾಪನೆಯವರೆಗೆ ತೆಲಗನಾರ್ಯನ ಯಯಾತಿ ಚರಿತ್ರೆ ವೃತ್ತಾಂತ ವ್ಯಾಪಿಸಿದೆ.

ಕತೆಯಿಂದ ಕತೆಗೆ ಕಾಲಸರಣಿ, ಮಾತಿನ ಸರಣಿ ಎಂಬ ಎರಡು ರೀತಿಯನ್ನು ಅನುಸರಿಸಿದ್ದಾನೆ. ಕಾಲಸರಣಿಯೆಂದರೆ ಕಥೆಯನ್ನು ಕಾಲಕ್ರಮಕ್ಕನುಗುಣವಾಗಿ ಹೇಳುವುದು. ಮಾತಿನ ಸರಣಿಯೆಂದರೆ ಕಥೆಯ ನಾಯಕನ ಜೀವಿತದಿಂದ ಆರಂಭಿಸಿ ನಂತರ ಕಾಲಘಟ್ಟದವರೆಗಿನ ಕಥೆಯ ವಿಸ್ತರಣೆಯಿದೆ. ತೆಲುಗನ್ನ ತನ್ನ ಮಾತಿನ ಸರಣಿಗೆ ಹೆಚ್ಚು ಮಹತ್ವ ನೀಡಿದ್ದಾನೆ.

ವಿಶಾಲವಾದ ಕಥಾಹಂದರ ಹೊಂದಿರುವ ಯಯಾತಿ ಚರಿತ್ರೆಯಲ್ಲಿ ತೆಲುಗನ್ನನು ಶಮಿಷ್ಠೆ ವಿವಾಹದವರೆಗೆ ಮಾತ್ರ ಸ್ವೀಕರಿಸಿದ್ದಾನೆ. ನನ್ನಯ್ಯನು ಮಹಾಭಾರತದ ಆದಿಪರ್ವದ ಮೂರನೇ ಆಶ್ವಾಸದಿಂದ ೯೭ ರಿಂದ ೨೨೫ ರವರೆಗೆ ಹಾಗೆಯೇ ೧೨೪ ಗದ್ಯ ಪದ್ಯಗಳಲ್ಲಿ ರಚಿಸಿದರೆ. ಅದನ್ನು ತೆಲುಗನ್ನನು ೧೭೬ ಪದ್ಯಗಳವರೆಗೆ ಅಂದರೆ ೮೨ ಪದ್ಯದ ವರೆಗಿನ ಕಥೆಯನ್ನು ಮಾತ್ರ ಗ್ರಹಿಸಿ ಅದನ್ನು ತಾನು ೭೩೭ ಗದ್ಯಪದ್ಯದ ವರೆಗೆ ಏಳನೇ ಆಶ್ವಾಸದವರೆಗೆ ಕಾವ್ಯ ರಚಿಸಿದ್ದಾನೆ. ಇದುವರೆಗಿನವರು ರಚಿಸಿದ ಕಾವ್ಯಗಳಲ್ಲಿ ಶರ್ಮಿಷ್ಠೆ ಪ್ರಧಾನಳಾಗಿದ್ದಳು. ಆದರೆ ತೆಲುಗನನು ಮಾತ್ರ ದೇವಯಾನಿಯನ್ನೇ ಪ್ರಧಾನವಾಗಿರಿಸಿಕೊಂಡು ಕಾವ್ಯ ರಚಿಸಿದವರಲ್ಲಿ ಮೊದಲಿಗನಾದನು.

ಅಂದಿನ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಪ್ರಬಲರಾಗಿದ್ದ ಬ್ರಾಹ್ಮಣರ ಪರವಾಗಿ ಕಾವ್ಯ ರಚಿಸುವ ಅಗತ್ಯವಿದ್ದ ಕಾರಣದಿಂದಲೇ ತೆಲುಗನ್ನನು ತನ್ನ ಕಥಾಹಂದರದ ಪಾತ್ರ ಚಿತ್ರಣದಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಮಾಡಿಕೊಂಡಿದ್ದಾನೆ. ಹಾಗಾಗಿ ದೇವಯಾನಿ ಶರ್ಮಿಷ್ಠೆಯರಲ್ಲಿ ಶರ್ಮಿಷ್ಠೆಯನ್ನು ರಾಜದರ್ಪದ, ಅಹಂಕಾರದ ಪಾತ್ರವಾಗಿ ಚಿತ್ರಿಸಿದ್ದಾನೆ. ಆ ಕಾಲದ ವರ್ಣವ್ಯವಸ್ಥೆಯೇ ಈ ಬಗೆಯ ಮಾರ್ಪಾಡಿಗೆ ಕಾರಣವಾಗಿದೆ. ಅಲ್ಲದೆ ಶರ್ಮಿಷ್ಠೆಯೇ ಮೊದಲಿಗೆ ದೇವಯಾನಿಯ ಸೀರೆಯನ್ನು ಉಡುವಂತೆಯೂ ತಿರುಗಿ ಆಕೆಯೇ ದೇವಯಾನಿಯನ್ನು ಸಾಮಾನ್ಯ ಗುರುಪುತ್ರಿಯ ಮಗಳ ವಸ್ತ್ರವೆಂದು ಜರಿದು ಜಗಳವಾಡಿ ಸಿಟ್ಟಿನಿಂದ ದೇವಯಾನಿಯನ್ನು ಬಾವಿಗೆ ದೂಡುವಂತೆಯೂ ಚಿತ್ರಿಸುವುದು ತೆಲುಗನಾರ್ಯನ ಉದ್ದೇಶವಾಗಿದೆ.

ದೇವತೆಗಳು ಅಮೃತವನ್ನು ಹೊಂದಿದ್ದರಿಂದ ದಾನವ ಗುರು ಶುಕ್ರಾಚಾರ್ಯ ಕಠೋರ ತಪಸ್ಸು ಮಾಡಿ ಸತ್ತವರನ್ನು ಬದುಕಿಸುವ ಸಂಜೀವಿನಿ ವಿದ್ಯೆಯನ್ನು ಸಂಪಾದಿಸಿದನು. ಈ ಸಂಗತಿ ದೇವತೆಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಹಾಗಾಗಿ ದೇವತೆಗಳೆಲ್ಲ ಸೇರಿ ಬೃಹಸ್ಪತಿಯ ಮಗ ಕಚನನ್ನು ಶುಕ್ರಾಚಾರ್ಯರಲ್ಲಿ ವಿದ್ಯಾರ್ಥಿಯಾಗಿ ಹೋಗಿ ವಿದ್ಯೆ ಸಂಪಾದಿಸಿಕೊಂಡು ಬರುವಂತೆ ಹೇಳಿಕಳಿಸುತ್ತಾರೆ.

ಶುಕ್ರಾಚಾರ್ಯರಲ್ಲಿಗೆ ವಿದ್ಯಾಭ್ಯಾಸಕ್ಕೆ ಬಂದ ಕಚನನ್ನು ದೇವಯಾನಿ ಮೋಹಿಸುತ್ತಾಳೆ. ಆದರೆ ಗುರುಪುತ್ರಿ ತನಗೆ ಸೋದರಿ ಸಮಾನಳೆಂದು ಕಚ ಆಕೆಯನ್ನು ನಿರಾಕರಿಸುತ್ತಾನೆ. ಇದರಿಂದ ಜಿಗುಪ್ಸೆಗೊಂಡ ದೇವಯಾನಿ ಕಲಿತ ವಿದ್ಯೆ ಫಲಿಸದಿರಲಿ ಎಂದು ಕಚನಿಗೆ ಶಾಪ ನೀಡುತ್ತಾಳೆ. ಪ್ರತಿಯಾಗಿ ಕಚನೂ ದೇವಯಾನಿಗೆ ಕ್ಷತ್ರಿಯನನ್ನು ಮದುವೆಯಾಗುವಂತೆ ಶಾಪಕೊಡುತ್ತಾನೆ. ಮುಂದೆ ಶರ್ಮಿಷ್ಠೆಯಿಂದ ಬಾವಿಯಲ್ಲಿ ಬಿದ್ದಿದ್ದ ದೇವಯಾನಿಯನ್ನು ಬೇಟೆಗೆಂದು ಬಂದಿದ್ದ ಯಯಾತಿ ಮಹರಾಜ ರಕ್ಷಿಸುತ್ತಾನೆ. ಅಲ್ಲದೆ ದೇವಯಾನಿಯ ಸೌಂದರ್ಯಕ್ಕೆ ಮನಸೋತ ಯಯಾತಿಯೇ ದೇವಯಾನಿಯನ್ನು ಬಯಸಿ ಮದುವೆಯಾಗುತ್ತಾನೆ. ನಂತರ ದೇವಯಾನಿಯ ಬಯಕೆಯಂತೆಯೇ ಶರ್ಮಿಷ್ಠೆ ದೇವಯಾನಿಯ ದಾಸಿಯಾಗಿ ಯಯಾತಿ ಮಹರಾಜನ ಅರಮನೆಗೆ ಬರುತ್ತಾಳೆ. ಮುಂದೆ ಯಯಾತಿ ಶರ್ಮಿಷ್ಠೆ ಪ್ರೇಮ ಪ್ರಸಂಗ, ಯಯಾತಿ ತನ್ನ ಮಗಳಾದ ಮಾಧವಿಯನ್ನು ಗಾಲವ ಮಹರ್ಷಿಗೆ ದಾನ ಕೊಡುವ ಪ್ರಸಂಗಗಳೂ ಚಿತ್ರಿತಗೊಂಡಿವೆ."[೫]

ಭಾಗ - ೨

ಭಾಗ -೧ ರಲ್ಲಿ ಅಚ್ಚಗನ್ನಡ ಕಾವ್ಯಗಳಿಗೆ ಸಂಬಂಧಿಸಿದ ಐತಿಹಾಸಿಕ ಸಮೀಕ್ಷೆಯನ್ನು ವಿವರವಾಗಿ ಚರ್ಚಿಸಲಾಗಿದೆ. ದಕ್ಷಿಣ ಭಾರತದ ಪ್ರಮುಖ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಗ್ರಂಥಗಳ ಚದುರಿರುವ ಮಾಹಿತಿಯನ್ನು ಈ ಭಾಗದಲ್ಲಿ ಕಲೆಹಾಕಲಾಗಿದೆ. ಹಾಗೆ ನೋಡಿದರೆ ವಿಷಯಕ್ಕೆ ಸಂಬಂಧಿಸಿದಂತೆಯೇ ಪ್ರತ್ಯೇಕ ಅಧ್ಯಯನವನ್ನು ಕೈಗೊಳ್ಳಬಹುದು. ಅಂತಹ ಅಧ್ಯಯನದ ಸಾಧ್ಯತೆಯೊಂದರತ್ತ ಬೆಟ್ಟುಮಾಡಿ ತೋರಿಸುವುದಷ್ಟೇ ಇದರ ಉದ್ದೇಶವಾಗಿದೆ.

ಇದೀಗ ಕನ್ನಡದ ಸಂದರ್ಭದಲ್ಲಿ ಅಚ್ಚಗಡ ಕಾವ್ಯ ಪರಂಪರೆಯನ್ನು ಈ ಐತಿಹಾಸಿಕ ಸಂದರ್ಭದಲ್ಲಿಟ್ಟು ಚರ್ಚಿಸುವ ಅಗತ್ಯವಿದೆ. ಈಗಾಗಲೇ ತಿಳಿದಿರುವಂತೆ ತಮಿಳು, ತೆಲುಗು, ಮಲಯಾಳಂ ಭಾಷೆಗಳಲ್ಲಿ ಸಮಾಂತರವಾದ ಇಂತಹ ಪ್ರಯತ್ನಗಳು ನಡೆದಿವೆ. ತಮಿಳಿನಲ್ಲಿ ಅಚ್ಚ ತಮಿಳು ಚಳುವಳಿ ೧೯ ನೇ ಶತಮಾನದಲ್ಲಿ ನಡೆದಿದೆ. ಆದರೆ ತಮಿಳು ಸಾಹಿತ್ಯವೆಲ್ಲವೂ ಅಚ್ಚ ತಮಿಳು ಸಾಹಿತ್ಯವೇ ಆಗಿದೆ. ಬೇರೆ ದ್ರಾವಿಡ ಭಾಷೆಗಳಲ್ಲಿ ಇರುವ ಹಾಗೆ ಒಂದರೆಡು ಕಾವ್ಯಗಳಷ್ಟೇ ತಮಿಳಿನಲ್ಲಿ ಬಂದಿರುವುದಿಲ್ಲ. ತಮಿಳಿನಲ್ಲಿ ನಡೆದಿರುವ ಅಚ್ಚ ತಮಿಳು ಚಳುವಳಿಯು ಸಂಸ್ಕೃತ ಪರವಾದ ಮನೋಧರ್ಮ ತಮಿಳು ವಿರೋಧಿ ನಿಲುವು ಮತ್ತು ಅಪರೂಪವಾಗಿ ಕಾಣಿಸಿಕೊಳ್ಳುವ ಸಂಸ್ಕೃತದ ಪ್ರಭಾವ. ಇವುಗಳು ಒಂದಷ್ಟು ಹೆಚ್ಚಾದಾಗಲೆಲ್ಲ ರೂಪುಗೊಂಡ ಚಳುವಳಿಯಾಗಿದೆ. ಅಂದರೆ ಪೂರ್ಣ ಪ್ರಮಾಣದಲ್ಲಿ ತಮಿಳಿಗೆ ಮಾನ್ಯತೆ ಸಿಗದಿದ್ದಾಗ, ಅಲ್ಪಸ್ವಲ್ಪ ಸಂಸ್ಕೃತ ಪ್ರಭಾವ ಉಂಟಾದಾಗ

ತಮಿಳು ಭಾಷಾ ಅಭಿಮಾನಿಗಳು ಅದನ್ನು ನಿರಾಕರಿಸುವ ಪ್ರಯತ್ನ ಮಾಡಿದರು. ಇತರ ದ್ರಾವಿಡ ಭಾಷೆಗಳಲ್ಲಿ ಇಂತಹ ಪ್ರಯತ್ನಗಳು ಅಪವಾದವಾಗಿಯಷ್ಟೇ ಕಂಡುಬರುತ್ತವೆ.

ಕನ್ನಡದಲ್ಲಿ ೧೩ ನೇ ಶತಮಾನದ ಆಂಡಯ್ಯನನ್ನು ಬಿಟ್ಟರೆ ೨೦ ನೇ ಶತಮಾನದಲ್ಲಷ್ಟೇ ಕ್ವಚಿತ್ತಾಗಿ ಅಂತಹ ಪ್ರಯತ್ನಗಳು ಕಂಡುಬರುತ್ತವೆ. ಮಲಯಾಳದಲ್ಲಿ ೧೫ ನೇ ಶತಮಾನದಲ್ಲಿ ಇದೇ ರೀತಿಯ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. ತೆಲುಗಿನಲ್ಲಿ ೧೪ ನೇ ಶತಮಾನದಲ್ಲಿ ಕೇವಲ ಒಬ್ಬ ಕವಿಯಿಂದಷ್ಟೇ ಆ ಪ್ರಯತ್ನ ನಡೆಯಿತು. ಹೀಗೆ ತಮಿಳಿನಲ್ಲಿ ನಿರಂತರವಾಗಿ ಕಂಡುಬರುವ ಎಚ್ಚರಿಕೆ, ಇತರ ಭಾಷೆಗಳಲ್ಲಿ ಅಪವಾದವಾಗಿಯಷ್ಟೇ ಕಾಣಬರುತ್ತವೆ. ಬಹುಶಃ ಇತರ ದ್ರಾವಿಡ ಭಾಷೆಗಳ ಕವಿಗಳಿಗೆ ಅಚ್ಚದ್ರಾವಿಡ ಕಾವ್ಯಗಳನ್ನು ಬರೆಯುವುದಕ್ಕೆ ತಮಿಳರ ಈ ನಿರಂತರ ಪ್ರಯತ್ನವೇ ಪ್ರೇರಣೆಯಾಗಿರಬೇಕು.

ಕನ್ನಡದಲ್ಲಿ ಅಚ್ಚಗನ್ನಡ ಕಾವ್ಯವನ್ನು ಬರೆಯುವುದಕ್ಕೆ ಆಂಡಯ್ಯನು ತಮಿಳಿನಿಂದ ಪ್ರೇರಣೆ ಪಡೆದಿರಬೇಕು. ಏಕೆಂದರೆ ಹರಿಹರನ ಕಾಲಕ್ಕಾಗಲೇ ಕನ್ನಡ ಮತ್ತು ತಮಿಳಿನ ನಡುವೆ ಸಾಹಿತ್ಯ ಸಂಪರ್ಕ ಏರ್ಪಟ್ಟಿತ್ತು. ಹರಿಹರನು ತಮಿಳು ಪುರಾತನರ ಕಥೆಯನ್ನು ತನ್ನ ಕನ್ನಡದ ರಗಳೆಯಲ್ಲಿ ಬರೆದಿರುವುದು ಐತಿಹಾಸಿಕ ಸಂಗತಿಯಾಗಿದೆ. ಆಧುನಿಕ ಕಾಲದಲ್ಲಿ ಮುಳಿಯ ತಿಮ್ಮಪ್ಪಯ್ಯ ಮತ್ತು ಕೋಳಂಬೆ ಪುಟ್ಟಣ್ಣಗೌಡರು ಅಚ್ಚಗನ್ನಡ ಕಾವ್ಯ ಬರೆಯುವ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ೧೯೧೬ ರಿಂದ ಮರೈಮಲೈ ಅಡಿಗಳು ಅಚ್ಚ ತಮಿಳು ಚಳುವಳಿಯನ್ನೇ ಆರಂಭಿಸಿದ್ದರು. ಹಾಗಾದುದರಿಂದ ತಮಿಳು ಸಾಹಿತ್ಯದ ಪ್ರೇರಣೆಯನ್ನು ಅಚ್ಚಕನ್ನಡ ಕಾವ್ಯಪರಂಪರೆಯಲ್ಲಿ ನಿರಾಕರಿಸಲಾಗದು.

ತೆಲುಗಿನ ಪೊನ್ನಗಂಟಿ ತೆಲಗನಾರ್ಯನ ಯಯಾತಿ ಚರಿತ್ರೆ ಎನ್ನುವ ಅಚ್ಚ ತೆಲುಗು ಕಾವ್ಯದ ಮೇಲೆ ಆಂಡಯ್ಯನ ಅಚ್ಚಕನ್ನಡ ಕಾವ್ಯವಾದ ಕಬ್ಬಿಗರ ಕಾವದ ಪ್ರೇರಣೆಯನ್ನು ನಿರಾಕರಿಸಲಾಗುವುದಿಲ್ಲ. ಏಕೆಂದರೆ ತೆಲುಗಿನ ಕೆಲ ವಿದ್ವಾಂಸರ ಪ್ರಕಾರ ತೆಲುಗಿನ ಜಾನು ತೆಲುಗಿನ ಮೂಲವೇ ಕನ್ನಡದ 'ಜಾಣ್ನುಡಿ' ಎಂಬುದರಲ್ಲಿದೆ ಎಂದು ಹೇಳುತ್ತಾರೆ.

ತಮಿಳನ್ನು ಹೊರತುಪಡಿಸಿ ಇತರ ದ್ರಾವಿಡ ಭಾಷೆಗಳಲ್ಲಿ ಇಂತಹ ಪ್ರಯತ್ನಗಳು ಎಂದೂಯಶಸ್ವಾಗಲಿಲ್ಲ. ಇತರ ಭಾಷೆಗಳಲ್ಲಿ ಇದನ್ನೊಂದು ಅಪವಾದವೆಂಬಂತೆಯೇ ಪರಿಗಣಿಸಲಾಗಿದೆ. ಸಾಹಿತ್ಯಿಕವಾಗಿ ತಮಿಳಿನಲ್ಲಿ ಸಾಧ್ಯವಾದದ್ದು ಇತರ ದ್ರಾವಿಡ ಭಾಷೆಗಳಲ್ಲಿ ಏಕೆ ಸಾಧ್ಯವಾಗಿಲ್ಲ. ಎನ್ನುವ ಪ್ರಶ್ನೆ ಕೊನೆಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಬೇರೆ ಮಾತಿನಲ್ಲಿ ಹೆಳುವುದಾದರೆ ತಮಿಳು ಮಾದರಿಯನ್ನನುಸರಿಸದ ಇತರ ದ್ರಾವಿಡ ಭಾಷೆಗಳು ತಮಿಳಿಗಿಂತ ಮಿಗಿಲಾಗಿ ಸಾಧಿಸಿದ್ದಾದರೂ ಏನನ್ನು ಎನ್ನುವುದೂ ಅರ್ಥವಾಗುವುದಿಲ್ಲ.

ದ್ರಾವಿಡ ಭಾಷೆಗಳೆಂಬ ಸಾಮಾನ್ಯ ವರ್ಗೀಕರಣ ದಕ್ಷಿಣ ಭಾರತದ ಭಾಷೆಗಳಲ್ಲಿರುವ ಸಾಮ್ಯತೆಯನ್ನು ಗಮನಿಸಿಕೊಂಡು ಮಾಡಿರುವ ಪರಿಕಲ್ಪನೆಯಾಗಿದೆ. ದಕ್ಷಿಣ ಭಾರತದ ಅನೇಕ ಭಾಷೆಗಳನ್ನು ಒಂದೆಡೆ ಕಲೆಹಾಕಿದರೆ ಅವುಗಳನ್ನು ದ್ರಾವಿಡ ಭಾಷೆಗಳೆಂಬ ಸಾಮಾನ್ಯ ಹೆಸರಿನಿಂದ ಕರೆಯಬಹುದು. ಹಾಗೆಂದು ದ್ರಾವಿಡ ಭಾಷೆಯೆಂದು ಕರೆಯಬಹುದಾದ ಯಾವುದೇ ಒಂದು ಭಾಷೆಇಲ್ಲ ತಮಿಳು, ಕನ್ನಡ, ತೆಲುಗು, ಮಲಯಾಳಿ, ತುಳು ಮುಂತಾಗಿ ದ್ರಾವಿಡ ಭಾಷೆಗಳೆಂದು ಕರೆಯಬಹುದಾದ ಬೇರೆ ಬೇರೆ ಭಾಷೆಗಳಿಗೆ ಅವುಗಳನ್ನು ಭಾರತದ ಬೇರೆ ಬೇರೆ ಭಾಗದಲ್ಲಿ

ಮಾತನಾಡುವ ಜನರಿದ್ದಾರೆ. ಹಾಗೆಯೇ ಅಚ್ಚ ದ್ರಾವಿಡ ಕಾವ್ಯ ಎಂಬ ಪರಿಕಲ್ಪನೆಯೂ ಕೂಡ. ಬೇರೆ ಬೇರೆ ಭಾಷೆಗಳಲ್ಲಿ ರೂಪುಗೊಂಡಿರುವ ಆಯಾ ಭಾಷೆಯ ಅಚ್ಚ ಕಾವ್ಯಗಳನ್ನು ಪರಿಗಣಿಸಿ ಇಂತಹ ಒಂದು ಸಾಮಾನ್ಯ ಪರಿಕಲ್ಪನೆಯನ್ನು ಮಾಡಲಾಗಿದೆ. ಇದು ಅಧ್ಯಯನದ ದೃಷ್ಟಿಯಿಂದ ರೂಪಿಸಿರುವ ಒಂದು ಪರಿಕಲ್ಪನೆಯಷ್ಟೇ ಆಗಿದೆ.

❐

ಅಧ್ಯಾಯ -೫

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ ರಚನೆಗಳು

ಭಾಗ -೧

ಕ್ರಿ.ಶ.೧೩ನೇ ಶತಮಾನದ ಆಂಡಯ್ಯನಿಂದ ರಚಿತವಾದ ಕಬ್ಬಿಗರ ಕಾವದಲ್ಲಿ ಮೊದಲ ಬಾರಿಗೆ ಸಂಸ್ಕೃತವನ್ನು ಬೆರಸದ ಪೂರ್ಣ ಪ್ರಮಾಣದ ಕನ್ನಡ ಕಾವ್ಯವೊಂದರ ರಚನೆ ಆರಂಭವಾಗಿರುವುದು ಕಂಡುಬರುತ್ತದೆ. ಆದರೆ ಮುಳಿಯ ತಿಮ್ಮಪ್ಪಯ್ಯನವರು 'ಅಚ್ಚಗನ್ನಡ' ಎನ್ನುವ ಲೇಖನದಲ್ಲಿ[1] ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೇ ಅಚ್ಚಗನ್ನಡಕ್ಕೆ ಸಂಬಂಧಿಸಿದ ಚಿಂತನೆಗಳು ಕಂಡುಬರುತ್ತವೆ ಎಂದು ಹೇಳುತ್ತಾರೆ. ಅಂದರೆ ಅಚ್ಚಗನ್ನಡದ ಬಗೆಗಿನ ಚಿಂತನೆ ಅಥವಾ ಕಾವ್ಯ ಪರಂಪರೆ ಕೇಶಿರಾಜನ ಕಾಲದಿಂದಲೇ ಆರಂಭಗೊಂಡಿರಬೇಕು ಎಂದರ್ಥ. ಇದಕ್ಕೆ ಸಮರ್ಪಕವಾದ ಆಧಾರಗಳನ್ನು ಅಥವಾ ಉಲ್ಲೇಖಗಳನ್ನು ಮುಳಿಯ ತಿಮ್ಮಪ್ಪಯ್ಯನವರು ವಿಶೇಷವಾಗಿ ಕೊಡುವುದಿಲ್ಲ.

ಆಂಡಯ್ಯನ ಕಬ್ಬಿಗರ ಕಾವದಿಂದಲೇ ಈ ಚರ್ಚೆಯನ್ನು ಆರಂಭಿಸೋಣ. ಯಾವುದೇ ಚಿಂತನೆ ಅಥವಾ ಪರಂಪರೆ ತಕ್ಷಣದ ಪ್ರತಿಭೆಯ ಫಲವೆಂದು ಸಾಧಿಸಲು ನಮಗೆ ಎಂದೂ ಸಾಧ್ಯವಾಗುವುದಿಲ್ಲ. ಅಂತಹ ಪರಂಪರೆ ಅಥವಾ ಸಾಧನೆಗಳಿಗೆ ಅದರದ್ದೇ ಆದ, ಆದರೆ ಅನುಕ್ತವಾದ ಪ್ರಯತ್ನವೊಂದು ಸತತವಾಗಿ ಕಾಲಕಾಲಕ್ಕೆ ನಡೆಯುತ್ತಲೇ ಇರುತ್ತದೆ. ಕನ್ನಡ ಸಾಹಿತ್ಯ ಒಂದು ಪರಂಪರೆಯಾಗಿ ರೂಪಗೊಳ್ಳಬೇಕಾದರೆ ಈಗ ಉಪಲಬ್ಧವಾಗಿರುವ ಹಲ್ಮಿಡಿ ಶಾಸನದಿಂದ ಆರಂಭಿಸಿ ಅನೇಕ ವರ್ಷಗಳ ಶಾಸನಗಳ ಪರಂಪರೆಯೊಂದು ಮತ್ತೆ ಮತ್ತೆ ಕನ್ನಡದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಈ ಶಾಸನಗಳು ಕನ್ನಡವನ್ನು ಕಾವ್ಯಭಾಷೆಯಾಗಿ ಪಳಗಿಸಿ ನಮ್ಮ ಮಹಾಕವಿಗಳ ಕೈಗೆ ಧಾರೆಯೆರೆದು ಕೊಟ್ಟಿವೆ. ಇದರ ಪರಿಣಾಮವಾಗಿ ಮುಂದಿನ ಕವಿಗಳು ಕನ್ನಡವನ್ನು ಸಮರ್ಥವಾಗಿ ಕಾವ್ಯಭಾಷೆಯಾಗಿ ಪಳಗಿಸುವಲ್ಲಿ ಯಶಸ್ವಿಯಾದರು. ಈ ತರ್ಕವನ್ನು ಮುಂದುವರೆಸುವುದಾದರೆ ಆಂಡಯ್ಯನಿಗಿಂತಲೂ ಪೂರ್ವದಲ್ಲಿ ಅಚ್ಚಗನ್ನಡದಲ್ಲಿ ಕಾವ್ಯ ಬರೆಯುವುದಕ್ಕೆ ಕವಿಗಳು ಆರಂಭದಿಂದಲೂ ಆಸಕ್ತರಾಗಿರಬೇಕು. ಏಕೆಂದರೆ

ಆಡು ನುಡಿಯಾಗಿದ್ದ ಕನ್ನಡ ಭಾಷೆ ಕಾವ್ಯ ಭಾಷೆಯಾಗುವಲ್ಲಿ ಸಂಸ್ಕೃತದ ಪ್ರಭಾವ ದಟ್ಟವಾಗಿ ಆಗಿರುವುದು ನಮಗೆಲ್ಲಾ ತಿಳಿದಿರುವ ಸಂಗತಿಯಾಗಿದೆ. ಅಂದರೆ ಕನ್ನಡ ಸಹಜವಾಗಿ ಸಂಸ್ಕೃತದ ಪ್ರಭಾವದಿಂದ ದೂರವಾಗಿತ್ತು ಎಂದೇ ಅರ್ಥವಾಗುತ್ತದೆ. ಕಾಲಾಂತರದಲ್ಲಿ ಇದು ಕಾವ್ಯದ ಅಭಿವ್ಯಕ್ತಿಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸಿರಲೇಬೇಕು. ಅಚ್ಚಗನ್ನಡದ ಬಗೆಗೆ ಚರ್ಚಿಸಿರುವ ವಿದ್ವಾಂಸರು ಅಂತಹ ಪರಂಪರೆಯ ಜಾಡನ್ನು ಅನುಸರಿಸಿ ಆಂಡಯ್ಯನ ಕಬ್ಬಿಗರ ಕಾವವನ್ನು ಚರ್ಚಿಸಿರುವುದು ಕಂಡುಬರುವುದಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ ಕನ್ನಡದ ಪದಗಳು ಸಂಸ್ಕೃತದ ಪದಗಳೊಂದಿಗೆ ಮೇಳೈಸಿ ಯಾವ ಹಂತದಲ್ಲಿ ಯಾವ ಯಾವ ಪರಿಣಾಮಗಳನ್ನು ಎದುರಿಸಿದೆ ಎಂದು ಯೋಚಿಸಿದಂತಿಲ್ಲ.

ಆಶ್ಚರ್ಯವೆಂದರೆ ಸ್ವತಃ ಆಂಡಯ್ಯನೇ ಕಣ್ಣಮಯ್ಯ, ಅಗ್ಗಳ, ಜನ್ನ, ರನ್ನ ಮೊದಲಾದ ಪೂರ್ವ ಕವಿಗಳನ್ನು ತನ್ನ ಕಾವ್ಯದಲ್ಲಿ ಸ್ಮರಿಸುತ್ತಾನೆ. ಈ ಪೂರ್ವಕವಿ ಸ್ಮರಣೆಗೆ ನಿರ್ದಿಷ್ಟವಾದ ಉದ್ದೇಶವೇನಾದರೂ ಇದೆಯೇ ಎನ್ನುವುದನ್ನು ನಾವೀಗ ಚಿಂತಿಸಬೇಕಾಗಿದೆ. ಹಾಗೆ ನೋಡಿದಾಗ ಕುತೂಹಲಕರವಾದ ಅನೇಕ ಸಂಗತಿಗಳು ನಮಗೆ ದೊರೆಯುತ್ತವೆ. ಪ್ರಸ್ತುತ ಅಧ್ಯಾಯವು ಅಂತಹ ಚಿಂತನೆಯ ಫಲವಾಗಿದೆ. ಇದರಲ್ಲಿ ಆಂಡಯ್ಯನು ಸ್ಮರಿಸುವ ಪೂರ್ವ ಕವಿಗಳ ಕಾವ್ಯದಲ್ಲಿ ಬಳಕೆಯಾಗಿರುವ ಅಚ್ಚಗನ್ನಡ ರಚನೆಗಳಿಂದ ತೊಡಗಿ ಕನ್ನಡದ ಇನ್ನಿಬ್ಬರು ಮಹಾಕವಿಗಳ ಕಾವ್ಯದಲ್ಲಿ ಬಳಕೆಯಾಗಿರುವ ಅಚ್ಚಗನ್ನಡ ರಚನೆಗಳನ್ನು ವಿಶೇಷವಾಗಿ ಅಭ್ಯಾಸ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಆಂಡಯ್ಯನಿಗಿಂತ ಪೂರ್ವದ ಕನ್ನಡದ ಮಹಾಕವಿಗಳ ಕೆಲವು ವಿಶಿಷ್ಟ ಅಚ್ಚಗನ್ನಡದ ರಚನೆಗಳನ್ನು ಆರಂಭದಲ್ಲಿ ಕಲೆಹಾಕಲಾಗಿದೆ. ಪ್ರಬಂಧದ ಎರಡನೆಯ ಭಾಗದಲ್ಲಿ ಅಂತಹ ರಚನೆಗಳ ವೈಶಿಷ್ಟ್ಯವನ್ನು ವಿಶೇಷವಾಗಿ ಚರ್ಚಿಸಲಾಗಿದೆ. ಆಂಡಯ್ಯನಿಗೆ ಹಿನ್ನೆಲೆಯಾಗಿದ್ದ ಕಾವ್ಯದ್ದೇ ಆದ ವಿಶಿಷ್ಟವಾದ ಹಿನ್ನಲೆಯೊಂದನ್ನು ಗುರುತಿಸುವ ಯತ್ನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ದೇವತಾಸ್ತುತಿ

ಕಾವ್ಯಾರಂಭದ ದೇವತಾಸ್ತುತಿ ಮತ್ತು ಕವಿಕಾವ್ಯ ಪ್ರಶಂಸೆಯ ಸಂದರ್ಭಗಳಲ್ಲಿ ಪ್ರಾಚೀನ ಮಹಾ ಕಾವ್ಯಗಳಲ್ಲಿ ಅಚ್ಚಗನ್ನಡದ ಪದ್ಯಗಳನ್ನು ಬಳಸಿದ್ದಾರೆ. ಉದಾಹರಣೆಗೆ ಪಂಪಭಾರತದ ಮೊದಲ ಆಶ್ವಾಸದಲ್ಲಿ ಬಳಕೆಯಾಗಿರುವ ಪದ್ಯವನ್ನು ಗಮನಿಸಬಹುದು.

ತಿಸುಳದೊಳುಚ್ಚಳಿಪ್ಪ ಪೊಸ ನೆತ್ತರೆ ಕೆಂದಳಿರಾಗಿ ಕಣ್ಣಗು
ರ್ವಿಸುವಿನಮೊಕ್ಕು ನೇಲ್ವ ಕರುಳೋಳಿಯೆ ಬಾಳ ಮೃಣಾಳಮಾಗೆ ಮಿ
ಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯನಾಜಿಸುತಿಂತೆ ತನ್ನ ಕೂ
ರಸಿಯೊಳಡುರ್ತು ಕೊಂದಸಿಯಳ (ರ್ಕ) ಸಿಯೋಳ್ ಪಡೆ ಮೆಚ್ಚೆ ಗಂಡನಾ ೨

ಹಿಡಿದ ತ್ರಿಶೂಲದಲ್ಲಿ ಉಕ್ಕುವ ಹೊಸ ನೆತ್ತರೆ ಕೆಂದಳಿರಾಗಲು, ಕಣ್ಣಿಗೆ ಭಯಂಕರವಾಗುವಂತೆ ಅದರಲ್ಲಿ ಜೋತಾಡುವ ಕರುಳ ಮಾಲೆಯೆ ಎಳೆಯ ತಾವರೆಯ ದಂಟಾಗಿರಲು ಮೀರಿದ ರಾಕ್ಷಸರ ಮೈಯಲ್ಲಾದ ನಿರಹ

ತಾಪವನ್ನು ಆರಿಸುತ್ತ ಅಂತೆಯೇ ಮೇಲೆಬಿದ್ದು, ತನ್ನ ಹರಿತವಾದ ಖಡ್ಗದಿಂದ ಆ ರಾಕ್ಷಸರನೆಲ್ಲ ಕೊಂದ ಲತಾಂಗಿ ಕಾಳಿಯು ಪಡೆಮೆಚ್ಚಗಂಡನಾದ ಅರಿಕೇಸರಿಯ ಖಡ್ಗದಲ್ಲಿ ನೆಲೆಸಿರಲಿ.

ಚಂಡಿಕೆಯ ವರ್ಣನೆಯ ಈ ಪದ್ಯದಲ್ಲಿ ಮೃಣಾಲ ಮತ್ತು ವಿರಹಾಗ್ನಿ ಪದಗಳನ್ನು ಬಿಟ್ಟರೆ ಉಳಿದೆಲ್ಲವು ಅಚ್ಚಗನ್ನಡ ಪದಗಳಾಗಿವೆ.

ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದಿ ದೇಸಿಯೊಳ್

ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ

ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಟಿಯಿಂ ಬಟಲ್ಲು ತುಂ

ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆ ಪೋಲ್[3]

ಬಗೆ ಹೊಸದಾಗಿ ಮೃದುಬಂಧನಾಗಿರಬೇಕು. ಆಗಿ ದೇಸಿಯಲ್ಲಿ ಹೊಂದಿಕೆಯಾಗಬೇಕು. ಅದು ಮಾರ್ಗದಲ್ಲಿ ಸಂಗಮಿಸಬೇಕು. ಹಾಗೆ ಸಂಗಮಿಸಿದರೆ ಕಾವ್ಯಬಂಧವು ಶೋಭಿಸುವುದು ಕೆಂದಳಿರಿನಿಂದ ದಪ್ಪ ಹೂ ಗೊಂಚಲಿನಿಂದ ಜಗ್ಗಿ, ತುಂಬಿಗಳಿಂದ ತುಂಬಿ ಕೋಗಿಲೆ ಕೂಗಿದರೆ ಸುಗ್ಗಿಯಲ್ಲಿ ಎಳೆಯ ಮಾವಿನ ಮರ ಹೇಗೆ ಶೋಭಿಸುವುದೋ ಹಾಗೆ

ಕಾವ್ಯ ಬಂಧವನ್ನು ವಿವರಿಸುವ ಪದ್ಯವಿದು. ಕಾವ್ಯ ಸದಾ ಹೊಸದಾಗಿ ಕಂಗೊಳಿಸಲು ಮಾರ್ಗಶೈಲಿಯ ಪ್ರವೇಶದಂತೆ ದೇಶೀ ಶೈಲಿಯ ಬಳಕೆ ಅಗತ್ಯವಾಗಿದೆ. ಆಗ ಕಾವ್ಯ ಸೊಗಸಾಗಿ ಕಾಣುವುದು.

ಕಾವ್ಯ ಲಕ್ಷಣವನ್ನು ವಿವರಿಸುವ ಈ ಪದ್ಯದಲ್ಲಿ ಮೃದುಬಂಧ, ಮಾರ್ಗ, ಕಾವ್ಯಬಂಧ ಎನ್ನುವ ಕೆಲವೇ ಪದಗಳು ಮಾತ್ರ ಸಂಸ್ಕೃತವಾಗಿದ್ದು ಉಳಿದವು ಅಚ್ಚಗನ್ನಡ ಪದಗಳಾಗಿವೆ.

ಬಾಲಲೀಲೆ

ಅಚ್ಚಗನ್ನಡ ಕವಿಗಳು ಅಚ್ಚಗನ್ನಡವನ್ನು ವಿರಳವಾಗಿ ಬಳಸಿರುವ ಮತ್ತೊಂದು ಸಂದರ್ಭವೆಂದರೆ ಬಾಲಲೀಲೆಯ ವರ್ಣನೆ. ಪಂಪಭಾರತದ ಪ್ರಥಮಾಶ್ವಾಸದಲ್ಲಿ ರಾಜನಾದ ಬದ್ದೆಗನ ಬಾಲ್ಯ ವರ್ಣನೆಯ ಪದ್ಯ ಹೀಗಿದೆ:

ಪುಟ್ಟಿದೊಡಾತನೊಳಱಿವೊಡ

ವುಟ್ಟಿದುದಱಿವಿಂಗೆ ಪೆಂಪು ಪೆಂಪಿನೊಳಾಯಂ

ಕಟ್ಟಾಯದೊಳಳವಳವಿನೊ

ಳೊಟ್ಟಜೆ ಪುಟ್ಟಿದುದು ಪೋಲ್ವರಾರ್ ಬದ್ದೆಗನಂ ೪

ಬದ್ದೆಗನ ಹುಟ್ಟುತ್ತಲೇ ಅವನೊಂದಿಗೆ ಅರಿವು ಒಡಹುಟ್ಟಿತು ಆ ಅರಿವಿಗೆ ಹಿರಿಮೆಗೆ ಆದಾಯ, ಆ ಆದಾಯಕ್ಕೆ ಪರಾಕ್ರಮ ಅದಕ್ಕೆ ಶ್ರೇಷ್ಠತೆ ಹುಟ್ಟಿತು. ಹಾಗಿರಲು ಆತನನ್ನು ಹೋಲುವವರು ಯಾರು?

ಬದ್ದೆಗನ ಬಾಲಲೀಲೆಯ ವರ್ಣನೆಯ ಪದ್ಯವಿದು. ಹಿರಿಮೆ, ಜ್ಞಾನ, ಸಂಪತ್ತು, ಪರಾಕ್ರಮ ಈ ಎಲ್ಲವುಗಳ ಸಂಗಮವಾಗಿ ಜನಿಸಿದ ಬದ್ದೆಗನಿಗೆ ಸರಿಸಮಾನರಾರು ಇಲ್ಲ.

ಪೂರ್ಣವಾಗಿ ಈ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ನಡೆವ ತಳರ್ನಡೆಯೊಳ್ ಪುಡಿ

ವುಡಿಯಾದುವು ಶಿಲೆಗಳೊಡೆದು ಕರಿಗಳ್ ಭೀಮಂ

ಪಿಡಿದಡದರ್ದೊಡೆ ಬಾಯ್ಬಿಟ್ಟೆ

ಲ್ವಡಗಾದವು ಮುದ್ದದಂತು ಸೊಗಯಿಸುವೇಡಾ”

ಭೀಮನ ಬಾಲಲೀಲೆಯ ವರ್ಣನೆಯ ಪದ್ಯವಿದು. ಅವನ ನಡೆಗೆ ಶಿಲೆಗಳೇ ಪುಡಿ ಪುಡಿಯಾಗುತ್ತಿದ್ದವು, ಅವನು ಆನೆಯನ್ನು ಹತ್ತಿ ಕುಳಿತರೆ ಆನೆಗಳು ಬಾಯಿಬಿಟ್ಟು ಮೂಳೆ ಮಾಂಸವಾದವು. ಮಕ್ಕಳ ಮುದ್ದಾಟ ಅಷ್ಟು ಸೊಗಸಾಗಿರಬೇಕು. ಅಲ್ಲವೇ?

ಮೇಲಿನ ಪದ್ಯದಲ್ಲಿ ಶಿಲೆ, ಕರಿ, ಭೀಮ, ಘಟೋದ್ಘಜ ಎನ್ನುವ ಕೆಲವೇ ಕೆಲವು ಸಂಸ್ಕೃತ ಪದಗಳು ಬಳಕೆಯಾಗಿವೆ. ಮಹಾಭಾರತದಲ್ಲಿ ಭೀಮನ ಬಾಲ ಲೀಲೆಯನ್ನು ವರ್ಣಿಸುವ ಈ ಪದ್ಯ ಬಹುತೇಕ ಅಚ್ಚಗನ್ನಡ ಪದಗಳಿಂದಲೇ ಕೂಡಿದೆ. ಮುಂದಿನ ಪದ್ಯ

ಒಡನಾಡಿಯುಮೊಡನೋದಿಯು

ಮೋಡವಳೆದುಂ ಗುಳ್ಳೆಗೊಟ್ಟೆ ಬಟ್ಟುಳಿಸೆಂಡುಂ

ಪೊಡೆಸೆಂಡೆಂಬಿವನಾಡು

ತ್ತೊಡವಳೆದರ್ ತಮ್ಮೊಳೆಳಸೆತಂತಂಗೆಡೆಗಳ್[೨]

ಒಡನಾಡಿಯೂ ಒಡನೋದಿಯೂ ಒಡನೆ ಬೆಳೆದೂ ಗುಳ್ಳೆಗೊಟ್ಟೆ-ಬಟ್ಟು-ಉಳಿಸಿಂಡು-ಪೊಡೆಸೆಂಡು ಎಂಬಿವನ್ನು ಆಡುತ್ತ ತಮ್ಮಲ್ಲೇ ಇತ್ತಂಡವಾಗಿ ಸ್ನೇಹದಿಂದ ಬೆಳೆದರು.

ಪರಿದನಿಬರುಮೊಡನಡಿರ್ದರೆ

ಮರನಂ ಮುಟ್ಟಲ್ಕೆ ಪಡೆಯದನಿಬರ್ಗಂ ಕಿಂ

ಕಿರಿವೋಗಿ ಭೀಮಸೇನಂ

ಮರನಂ ಪಿಡಿದಲ್ಗೆ ಪಣ್ಗೊಲನಿಬರುಮುದಿರ್ದರ್[೨]

ಓಡಿಹೋಗಿ ಎಲ್ಲರೂ ಮರವನ್ನು ಹತ್ತಿರಲು ಅವರನ್ನು ಮುಟ್ಟಲಾಗದೇ, ಅಷ್ಟೂ ಜನರ ಮೇಲೆ ರೇಗಿ, ಭೀಮಸೇನನು ಅಮರವನ್ನು ಹಿಡಿದು ಅಲುಗಾಡಲು ಆಲದ ಹಣ್ಣುಗಳಂತೆ ಅಷ್ಟು ಜನ ನೆಲಕ್ಕೆ ಉದುರಿದರು.

ಹಾಗೆಯೇ ಜನ್ನನ ಯಶೋಧರ ಚರಿತೆಯಲ್ಲಿಯೂ ಯಶೋಧರ ಕುವರನ ರೂಪಿನ ವರ್ಣನೆಯ ಪದ್ಯಗಳನ್ನು ನೋಡಬಹುದು.

ನೋಡುವ ಕಣ್ಗಳ ಸಿರಿ ಮಾ

ತಾಡುವ ಬಾಯ್ಗಳ ರಸಾಯನಂ ಸಂತಸದಿಂ

ಕೂಡುವ ತೋಳ್ಗಳ ಪುಣ್ಯಂ

ನಾಡಾಡಿಯೆ ರೂಪು ಕುವರ ವಿದ್ಯಾಧರನಾ”

ಯಶೋಧರ ಕುಮಾರನ ರೂಪಿನ ವರ್ಣನೆಯ ಪದ್ಯವಿದು. ಚಂದ್ರಮತಿ-ಯಶೌಘ ಮಹಾರಾಜನ ಮಗ ಯಶೋಧರ ಅಸಮಾನ್ಯ ಆಕರ್ಷಕನಾಗಿದ್ದ ಅವನನ್ನು ಎತ್ತಿ ಮುದ್ದಾಡುವುದೆ ತೋಳುಗಳ ಪುಣ್ಯ. ಅವನನ್ನು ನೋಡುವುದೇ ಕಣ್ಣುಗಳಿಗೆ ಸೊಬಗು; ಅವನೊಂದಿಗೆ ಮಾತಾಡುವುದೇ ಬಾಯಿಗಳಿಗೆ ರಸಾಯನ. ಹೀಗಿರಲು ಅವನ ರೂಪು ಸಾಮನ್ಯವಾದುದೇ!

ಇದರಲ್ಲಿ ಪುಣ್ಯ, ವಿದ್ಯಾಧರ ಪದಗಳು ಸಂಸ್ಕೃತದ್ದಾಗಿದ್ದು, ಉಳಿದಂತೆ ಅಚ್ಚಗನ್ನಡ ಪದಗಳು ಬಳಕೆಯಾಗಿವೆ.

ಎಳೆವೆಳ್ದಿಂಗಳ್ ನಗೆಗಣೆ
ಮಳಯಾನಿಳನಿಲ್ಲಿ ಮೂವರೊಳಗಾರೊ ಕುತೂ
ಹಳಮಾದಪುದೆನ್ನದ ಕ
ಣ್ಗೊಳವೆ ಯಶೋಧರ ಕುಮಾರನಂ ಕಾಣಲೊಡಂ (ಯ.ಚರಿತೆ, ದ್ವಿ.ಆ.ಪ, ಪದ್ಯ-೬)

ಅಗಾಧ ಸೌಂದರ್ಯ ಕಾಂತಿಯಿಂದ ಕಂಗೊಳಿಸುತ್ತಿದ್ದ ಯಶೋಧರನು ಬಾಲಚಂದಿರ, ಮನ್ಮಥ ಬಾಣದಂತೆ, ಮಲಯ ಮಾರುತವೆ ಈ ಮೂವರಲ್ಲಿ ಯಾರು ಎನ್ನುವಷ್ಟು ಕಾಂತಿಯಿಂದ ಕೂಡಿದ್ದನು.

ಶೌರ್ಯವರ್ಣನೆ

ಇಲ್ಲಿ ಕುತೂಹಳ, ಯಶೋಧರ ಕುಮಾರ ಪದಗಳನ್ನು ಹೊರತುಪಡಿಸಿದರೆ ಪದ್ಯ ಪೂರ್ಣ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ವೀರರಸಕ್ಕೆ ಸಂಬಂಧಿಸಿದಂತೆ ಮಾರ್ಗ ಕವಿಗಳು ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಬಳಸಿದ್ದಾರೆ. ಮಾರ್ಗ ಕಾವ್ಯದ ಯುದ್ಧ ಸಂದರ್ಭಗಳೆಲ್ಲ ಸಂಸ್ಕೃತ ಭೂಯಿಷ್ಠವಾಗಿರುವುದು. ಆದರೆ ಕನ್ನಡದ ಕವಿಗಳು ವೀರರಸದಲ್ಲಿಯೂ ಕೂಡ ಅಚ್ಚಗನ್ನಡವನ್ನು ಸಂದರ್ಭೋಚಿತವಾಗಿ ಬಳಸಿರುವುದು ಕಂಡುಬರುತ್ತದೆ. ಉದಾಹರಣೆಗೆ ಪಂಪಭಾರತದ ಈ ಕೆಳಗಿನ ಪದ್ಯಗಳನ್ನು ನೋಡಬಹುದು.

ತಡಕುಂ ಪಿಟ್ಟೆಯುಮೊತ್ತೆ ಮೆಲ್ಲಡಿಗಳಂ ಬಳ್ಕುತ್ತುಮಳ್ಕುತ್ತುಮೊ
ರಡಿಗೊರ್ಮೊರ್ಮೆ ಕುಳುತ್ತುಮೇಱುತಿರೆ ಕಂಡಿಂತಾಗದಿನ್ನೇಱಿಮೆಂ
ದೊಡನಂದಯ್ವರುಮಂ ನಿಜಾಂಸ ಯುಗದೊಳ್ ಪೊತ್ತೆತ್ತಿ ತಳ್ತೊಳ್ಪಸೀ
ಱಿಡುವಿಂದದ್ಭುತದಾ ಹಿಡಿಂಬವನಮಂ ಪೊಕ್ಕಂ ಮರುನ್ನಂದನಂ

ಕಲ್ಲೂ ಹೆಂಟೆಯೂ ಮೆಲ್ಲಡಿಗಳನ್ನು ಒತ್ತಲು, ಬಳುಕುತ್ತ ಆಳುಕುತ್ತ ಒಂದೊಂದು ಹೆಜ್ಜೆಗೂ ಒಮ್ಮೊಮ್ಮೆ ಕುಳಿತು ಅಳುತ್ತಿರಲು, ಅದನ್ನು ಕಂಡು ಹೀಗಾದರೆ ಆಗದು, ಇನ್ನು ಏಳಿರಿ ಎಂದು ಒಡನೆಯೇ ಐವರನ್ನೂ ತನ್ನ ಎರಡೂ ಭುಜಗಳ ಮೇಲೆ ಹೊತ್ತೆತ್ತಿ ಸೀರುಡು ತುಂಬಿದ ಅದ್ಭುತವಾದ ಆ ಹಿಡಿಂಬವನನ್ನು ಭೀಮನು ಹೊಕ್ಕನು.

ಭೀಮನ ಶಕ್ತಿ ಸಾಮಾರ್ಥ್ಯವನ್ನು ವಿವರಿಸುವ ಪದ್ಯವಿದು. ಪಾಂಡವರು ಹಿಡಿಂಬ ವನಕ್ಕೆ ಬರುವಾಗ ಕಲ್ಲು ಚೂರುಗಳನ್ನು ತುಳಿಯುತ್ತ, ಆಯಾಸದಿಂದ ಅಲ್ಲಲ್ಲಿ ಕುಳಿತುಕೊಳ್ಳುತ್ತಾ ಸಾಗಿರುವಾಗ ಭೀಮಸೇನನು ಅವರೆಲ್ಲರನ್ನು

ತನ್ನ ಬಲಿಷ್ಠ ಭಜಗಳ ಮೇಲೆ ಕೂಡಿಸಿಕೊಂಡು ಜೀರುಂಡೆಯಂತೆ ಶಬ್ದಮಾಡುತ್ತಾ ಒಮ್ಮೆಲೇ ಹಿಂಡಿಂಬ ವನವನ್ನು ಪ್ರವೇಶಿಸಿದನು.

ಈ ಪದ್ಯದಲ್ಲಿ ಯುಗ, ಅದ್ಭುತ, ಎರಡೇ ಸಂಸ್ಕೃತ ಪದಗಳು ಬಳಕೆಯಾಗಿವೆ. ಮುಂದಿನ ಪದ್ಯ

ನಿಡಿಯರ್ ಬಲ್ಲಾಯದ ಬ
ಲ್ದಡಿಗರ್ ವಂದಿರ್ದರಯ್ವರಾಲದ ಕೆಟಗಿಂ
ತೊಡರ್ದರ್ ನಮ್ಮಯ ಭಕ್ಷದೊ
ಳಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ[೧೦]

ಉದ್ದನೆಯವರೂ ಬಲು ದಪ್ಪನೆಯವರೂ ಆದ ಅತಿ ಶೂರರು ಬಂದು ಕುಳಿತಿದ್ದಾರೆ, ಆಲದ ಮರದ ಕೆಳಗೆ ಅವರು ಸಿಕ್ಕಿಬಿದ್ದರು ನಮಗೆ ಆಧಾರವಾಗಿ ಇನ್ನು ಅಡುಗೆ ಮಾಡಲು ಸಿದ್ಧಪಡಿಸು ನಡೆ ನೀನು ನಾನು ತಿನ್ನೋಣ.

ಎಟ್ಟೋಗು ದೂತನಪ್ಪನ
ಬೇಟ್ಪಿನ ನುಡಿಗೇಳ್ದು ಮುಳಿಯಲಾಗದು ನೀನುಂ
ಮೆಟ್ಪಿಟ್ಟು ವಿದುರನೆಂಬೀ
ತೊಟ್ಟುಟ್ಟಿಯ ಮನೆಯ ಕೂಟೆ ನುಡಿಯಿಸೆ ನುಡಿದೈ[೧೧]

ದುರ್ಯೋಧನನ ಕೋಪದ ಬಿಸು ನುಡಿಗಳನ್ನು ವರ್ಣಿಸುವ ಪದ್ಯವಿದು. ಕೃಷ್ಣನನ್ನು ಉದ್ದೇಶಿಸಿ ದುರ್ಯೋಧನನು ನೀನು ಕೂಡ ಪಾಂಡವರ ಪಕ್ಷಪಾತಿ. ತೊತ್ತಿನ ಕೂಳಿಗಾಗಿ ಇರುವ ವಿದುರನ ಮನೆಯಿಂದ ಬಂದಿರುವವನು. ನಿನ್ನ ಮಾತನ್ನು ಕೇಳುವ ಅಗತ್ಯವಿಲ್ಲ. ಈಗಲೇ ಇಲ್ಲಿಂದ ಎದ್ದು ಹೋಗು ಎಂದು ದುರ್ಯೋಧನನು ಕೂಗಾಡುವನು.

ಈ ಪದ್ಯದಲ್ಲಿ ದೂತ, ವಿದುರ ಎನ್ನುವ ನಾಮಪದಗಳನ್ನು ಬಿಟ್ಟರೆ ಬೇರಾವ ಪದಗಳು ಸಂಸ್ಕೃತದಲ್ಲಿಲ್ಲ.

ಶೌರ್ಯ ವರ್ಣನೆಗೆ ಸಂಬಂಧಿಸಿದಂತೆ ರನ್ನ ಕವಿಯ ಗದಾಯುದ್ಧ ಕಾವ್ಯದಲ್ಲೂ ಅಚ್ಚಗನ್ನಡ ರಚನೆಗಳು ಬಳಕೆಯಾಗಿರುವುದನ್ನು ಕಾಣಬಹುದು. ದ್ವಿತೀಯ ಆಶ್ವಾಸದ ೨೩-೨೪ನೆಯ ಈ ಕೆಳಗಿನ ಪದ್ಯಗಳನ್ನು ಗಮನಿಸಬಹುದು.

ಕರವಾಳಂ ಮಸೆವಂದದೆ
ಮರವಾಳಂ ಮಸೆಯೆ ಕೂರಿತಕ್ಕುಮೆ ಕಲಿಯಂ
ಪೊರೆದೊಡೆ ಕೂರ್ಪಂ ತೋರ್ಪಂ
ತಿರೆ ತೋರ್ಕುಮೆ ಪಂದೆ ಪತಿಗೆ ಸಂಗರದೆಡೆಯೊಳ್[೧೨]

ಅಶ್ವತ್ಥಾಮನಿಗೆ ಸಂಬಂಧಿಸಿದ ಪದ್ಯವಾಗಿದ್ದು. ವೀರನನ್ನು ಸಾಕಿದರೆ ಯುದ್ಧರಂಗದಲ್ಲಿ ಅವನು ತನ್ನ ಒಡೆಯನಿಗಾಗಿ ಧೈರ್ಯದಿಂದ ಖಡ್ಗ ಹಿಡಿದು ಹೋರಾಡುತ್ತಾನೆ. ವೀರನೆಂದರೆ ಉಕ್ಕಿನ ಖಡ್ಗವಿದ್ದಂತೆ ತಿಕ್ಕಿದಷ್ಟು ತೀಕ್ಷ್ಣವಾಗುತ್ತದೆ, ಮರದ ಖಡ್ಗದಂತಲ್ಲ.

ತಱುಗೋಳೊಳ್ ಪೆಣ್ಬುಯ್ಯಲೋ

ಳಱಿವೆಸದೊಳ್ ನಂಟನೆಡಱೊಳೂರಱಿ ವಿನೊಳಂ

ತಱಿಸಂದು ಗಂಡುತನಮನೆ

ನೆಱೆಪದವಂ ಗಂಡನಲ್ಲನೆಂತುಂ ಷಂಡಂ[೧೩]

ಅಶ್ವತ್ಥಾಮನ ಹೇಡಿತನವನ್ನು ದುರ್ಯೋಧನನು ಹೀಗಳಿಯುವ ಪದ್ಯವಾಗಿದೆ. ಗೋವುಗಳನ್ನು ಬಂಧಿಸಿ ಕೊಂಡೊಯ್ಯುವಾಗ, ವಿದ್ಯಾರ್ಜನೆ ಮಾಡುವಾಗ, ನಂಟನು ಸಂಕಟದಲ್ಲಿದ್ದಾಗ ಗ್ರಾಮವು ಹಾನಿಗೊಳಗಾದಗ, ಹೆಂಗಸರು ಮೊರೆಯಿಡುವಾಗ ದೈರ್ಯದಿಂದ ಹೋರಾಡಿ ಅವುಗಳನ್ನು ಕಾಪಾಡುವವನೇ ವೀರನು. ಇಲ್ಲದಿದ್ದರೆ ಷಂಡರೇ ಸರಿ.

ಎರಡೂ ಪದ್ಯಗಳಲ್ಲಿ ಕಲಿ, ಪತಿ, ಸಂಗರ, ಷಂಡಂ ಎನ್ನುವ ಕೆಲವೇ ಕೆಲವು ಸಂಸ್ಕೃತ ಪದಗಳು ಮಾತ್ರ ಬಳಕೆಯಾಗಿವುದನ್ನು ಹೊರತು ಪಡಿಸಿದರೆ ಬಹುತೇಕ ಪದ್ಯ ಅಚ್ಚಗನ್ನಡ ರಚನೆಯೇ ಆಗಿದೆ.

ಕೆಲರಂ ನುಣ್ಣನೆ ನೊಣೆದಂ

ಕೆಲರಂ ಪಿಡಿದಡಸಿ ನುಂಗಿದಂ ಕುರುಕುಲರಂ

ಕೆಲರಂ ಸೌಳನೆ ಸೀಳ್ದಂ

ಕೆಲರಂ ಮಾರುತಿ ಜವಂಗೆ ಬಾಣಸುಗೆಯ್ದಂ[೧೪]

ಕೆಲವರನ್ನು ನುಣ್ಣನೆ ಉಜ್ಜಿದ. ಕೆಲವರನ್ನು ಹಿಡಿದು ಪೂರ್ಣವಾಗಿ ನುಂಗಿದ ಕೌರವರಲ್ಲಿ ಕೆಲವರನ್ನು ಸೌಳನೆ (ಸೌಳನೆ) ಸೀಳಿದ. ಕೆಲವರನ್ನು ಭೀಮನು ಯಮನಿಗೆ ಅಡುಗೆ ಮಾಡಿ ಬಡಿಸಿದೆ.

ಇದರಲ್ಲಿ ಕುರುಕುಲ, ಮಾರುತಿ ಪದಗಳು ಮಾತ್ರ ಸಂಸ್ಕೃತದ್ದಾಗಿವೆ.

ಬಡಿಗೊಂಡು ಗೋಣಿಪಣ್ಣಂ

ಬಡಿವಂತಿರೆ ಪವನಸೂನು ಪೆಂಕುಳಿನಾಯಂ

ಬಡಿವಂತಿರೆ ಪಾಟುಡುವಂ

ಬಡಿವಂತಿರೆ ಬಡಿದನನಿಬರಂ ಕೌರವರಂ[೧೫]

ಭೀಮನ ಗಧಾಪ್ರಹಾರದ ಹೊಡೆತಕ್ಕೆ ಬಲಿಯಾದವರನ್ನು ವಿವರಿಸುವ ಪದ್ಯ. ಕೋಲಿನಿಂದ ಹೊಡೆದು ಗೋಳಿ ಮರದ ಹಣ್ಣುಗಳನ್ನು ಉರುಳಿಸುವಂತೆ, ಕೆಲವರನ್ನು ಹುಚ್ಚುನಾಯಿಯನ್ನು ಹೊಡೆಯುವಂತೆ, ಇನ್ನೂ ಕೆಲವರನ್ನು ಕೆಟ್ಟ ಉಡವನ್ನು ಕೊಲ್ಲುವಂತೆ ತನ್ನ ಗಧೆಯಿಂದ ಕೌರವರ ಬಲವನ್ನು, ನಾಯಕರನ್ನು ಹೊಸಕಿ ಹಾಕಿದನು.

ಇದರಲ್ಲಿ ಪವನಸೂನು, ಕೌರವರು ಎಂದೆರಡೇ ಸಂಸ್ಕೃತ ಪದಗಳಿವೆ.

ಉಡಿದಿರ್ದ ಕಯ್ದು ನೆತ್ತರ

ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕ

ಲಿಡಲೆಡೆವಡೆಯದೆ ಕುರುಪತಿ

ದಡಿಗವೆಣಂಗಳನೆ ಮೆಟ್ಟಿ ನಡೆಯುತ್ತಿರ್ದಂ[೧೬]

ದುರ್ಯೋಧನನು ಏಕಾಂಗಿಯಾಗಿ ರಣರಂಗದಲ್ಲಿ ನಡೆದು ಬರುತ್ತಿರುವಾಗ ಎದುರಾದ ರಣರಂಗದ ಚಿತ್ರಣವಿದು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆಯುಧಗಳು ಅವನ ಪಾದಗಳಿಗೆ ಹೆಜ್ಜೆ ಹೆಜ್ಜೆಗೂ ಚುಚ್ಚುತ್ತಿದ್ದವು, ಹೆಣದ ರಾಶಿಯಿಂದ ನಡೆಯಲು ದಾರಿ ಕಾಣದೇ ಹೆಣಗಳನ್ನೇ ದಾಟಿಕೊಂಡು ಹೋಗುತ್ತಿದ್ದ.

ಇದರಲ್ಲಿ 'ಕುರುಪತಿ' ಎಂಬ ಒಂದೇ ಒಂದು ಸಂಸ್ಕೃತ ಪದವಿದೆ.

ಪಲರಿರ್ದು ಕಾದಿದರ್ ಮೆ

ಯ್ಗಲಿಗಳ್ ನಿನ್ನೊಂದೆ ಮೆಯ್ಯೊಳಂ ತವೆ ಕೊಂದೈ

ಪಲರಂ ನಿನ್ನಂ ಪೆತ್ತಳ್

ಮೊಲೆವೆತ್ತಳೆ ವೀರನಜ ನಿವೆಸರಂ ಪೆತ್ತಳ್[೧೭]

ಹಲವರು ವೀರರು ಹಲವರೊಂದಿಗೆ ಹೋರಾಡಿದರು. ನೀನಾದರೋ ಏಕಾಂಗಿಯಾಗಿ ಹಲವರನ್ನು ಕೊಂದೆ. ನಿನ್ನ ಹೆತ್ತತಾಯಿ ಮೊಲೆವೆತ್ತ ತಾಯಿ. ಆಕೆಯೇ ನಿಜವಾಗಿ ವೀರ ಜನನಿ.

ಈ ಮೇಲಿನ ಪದ್ಯದಲ್ಲಿ ವೀರಜನನಿ ಎಂಬ ಒಂದೇ ಒಂದು ಪದ ಮಾತ್ರವೆ ಸಂಸ್ಕೃತದಾಗಿದ್ದು. ಉಳಿದವು ಅಚ್ಚಗನ್ನಡ ಪದಗಳಾಗಿವೆ.

ನಿನ್ನಂ ಕೊಂದಂ ಗಡಮೊಳ

ನಿನ್ನುಂ ಕೊಂದವನನಿಕ್ಕಿ ಕೊಲ್ಲದೆ ಮಾಣ್ದಾ

ನಿನ್ನುಮೊಳೆಂ ಗಡಿದಕ್ಕುಮೆ

ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ[೧೮]

ದುಶ್ಯಾಸನನ ಶವದ ಮುಂದೆ ದುರ್ಯೋಧನನ ಪ್ರಲಾಪದ ಪದ್ಯವಿದು. ನಿನ್ನನ್ನು ಕೊಂದ ಭೀಮ ಇನ್ನೂ ಬದುಕಿದ್ದಾನೆ. ಅವನನ್ನು ಮೆಟ್ಟಿ ನಾನು ಇನ್ನೂ ಇದ್ದೇನೆ. ನಿನ್ನ ಪ್ರೀತಿಗೂ ನನ್ನ ಸಹೋದರತ್ವಕ್ಕೂ ಇದು ಸರಿಗೊಂದುವುದೇ?

ಕಡೆಗಣ್ಣೊಳೆ ರಕ್ಕಸನಂ

ನಡೆ ನೋಡಿ ಕೊಲಲ್ಕೆ ಸತ್ತ್ವಮಪ್ಪಂತಿರೆ ಮುಂ

ಪೊಡೆವೆಂ ಕೂಟಿಂ ಬಟಿಯಂ

ಪೊಡೆವೆಂ ರಕ್ಕಸನನೆಂದು ಸಾಹಸಭೀಮಂ[೧೯]

ಭೀಮನು ಸಾಹಸ ಪರಾಕ್ರಮವನ್ನು ವರ್ಣಿಸುವ ಪದ್ಯ. ಹಿಡಿಂಬನನ್ನು ಕೊಲ್ಲಲು ವನಕ್ಕೆ ಬಂದ ಭೀಮನು ಕಡೆಗಣ್ಣಿನಿಂದಲೇ ರಕ್ಕಸನನ್ನು ನೋಡಿದನು. ಮೊದಲು ಅನ್ನವನ್ನು ಹೊಡೆಯುತ್ತೇನೆ ಆಮೇಲೆ ನಿನ್ನನ್ನು ಹೊಡೆಯುತ್ತೇನೆ ಎಂಬ ರೀತಿಯಲ್ಲಿಯೇ ನೋಡಿದನು.

ಸತ್ತ್ವ, ಸಾಹಸಭೀಮ ಪದಗಳು ಮಾತ್ರ ಸಂಸ್ಕೃತದ್ದಾಗಿದ್ದು ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿದೆ.

ಶೌರ್ಯ, ವೀರರಸಕ್ಕೆ ಸಂಬಂಧಿಸಿದ ಈ ಮುಂದಿನ ಪದ್ಯ ನೋಡಬಹುದು,

ಸಿಡಿಲವೊಲೆಱಗುವ ನರಗನ
ಪಡೆಗಗಿದುಮ್ಮಳದಿನುಂಡೆಡೆಯೊಳುಣ್ಣದೆಯುಂ
ಕೆಡೆದೆಡೆಯೊಳ್ (ಕೆ) ಡೆಯದೆ ನಿಂ
ದೆಡೆಯೊಳ್ ನಿಲ್ಲದೆಯುಮೋಡಿದಂ ಮಹಿಪಾಲಂ[೨೦]

ಅರಿಕೇಸರಿಯ ಸೈನ್ಯ, ಶೌರ್ಯದ ವರ್ಣನೆಯು ಇಲ್ಲಿದೆ. ಸಿಡಿಲ ಹಾಗೆ ಎರಗುವ ಅರಿಕೇಸರಿಯ ಸೈನ್ಯವನ್ನು ಎದುರಿಸಲಾರದೆ, ಉಣ್ಣುವಲ್ಲಿ ಉಣ್ಣಲಾರದೆ, ಮಲಗಿದಲ್ಲಿ ಮಲಗಲಾರದೆ, ನಿಂತಲ್ಲಿ ನಿಲ್ಲಲಾರದೆ ಮಹಿಪಾಲನು ಓಡಿಯೇ ಓಡಿದನು.

ಇದರಲ್ಲಿ ಮಹೀಪಾಲ ಪದವಷ್ಟೇ ಸಂಸ್ಕತದ್ದಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲಿ ರಚನೆಯಾಗಿದೆ.

ಪೊನ್ನ ಕವಿಯ ಶಾಂತಿಪುರಾಣದಲ್ಲೂ ಶೌರ್ಯ ವರ್ಣನೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದಕ್ಕೆ ಈ ಕೆಳಗಿನ ಪದ್ಯಗಳು ಉದಾಹರಣೆಗಳು.

ಇಡಿವಾಟ್ಟುಚುರ್ಱುವ ನೇರ್ವ ಸೀ (ಳ್ವ) ರಿವ ನೇರ್ಗೋರ್ಱಲ್ವೋಪ ಪೋಟ್ವೆಲ್ವಿನೊಳ್
ನಡುವುದ್ದಂ ಬಿರಿವಂಬಿನೊಳ್ ಕಿಡೆ ಮರುಳ್ವಳ್ಳಾಡು ವ (ಟ್ಟೊ) ಡು (ವೆ)
ಲ್ವಡಗಪ್ಪೊಪ್ಪಡ್ಡಟುವಟ್ಗೆ ತಟ್ಟುಗವಟುವುರ್ಕಾಟೆರ್ಪ ಕೋದಿರ್ಪ ಮಾ
ರ್ಪಡೆ ಗೆಲ್ಲಂಗುಡ ತಮ್ಮುತ್ತಿರ್ವರುಮಗುರ್ವುರ್ವೇಟ್ಟುನಂ ಕಾದಿದರ್[೨೧]

ಮೈಯನ್ನೆಲ್ಲಾ ಮುಸುಕುವ ಒಳನಟ್ಟು, ಹೂಳಿಕೊಳ್ಳುವ ಕತ್ತರಿಸುವ, ಸೀಳುವ, ನೇರವಾಗಿ ಚುಚ್ಚಿಕೊಂಡು ಆಚಗೆ ಹಾದು ಹೋಗುವ ತುಂಡರಿಸುವ ಮೂಳೆಗಳಲ್ಲಿ ನಾಟುವ, ಉದ್ದುದ್ದವಾಗಿ ಹೂಳುವ ಬಾಣಗಳು ಆಘಾತಕ್ಕೆ ಒಳಗಾಗಿ ಶತ್ರು ಸೈನ್ಯ ಕಕ್ಕವಿಕ್ಕಿಯಾಯಿತು. ಗದಗುಟ್ಟಿ ನಡುಗಿತ್ತು. ಮೂಳೆ ಮಾಂಸಗಳ ಮುದ್ದೆಯಾಯಿತು. ಚಲ್ಲಾಪಿಲ್ಲಿಯಾಯಿತು. ಕರಗಿ ಕುಗ್ಗಿತು ಸತ್ವ ಗುಂದಿತು. ಸಾಲು ಸಾಲಾಗಿ ಬಿದ್ದು ಸೋತುಹೋಯಿತು. ಹೀಗೆ ಅವರಿಬ್ಬರೂ ಭೀಕರವಾಗಿ ಕಾಳಗ ಮಾಡಿದರು.

ಅನಂತವೀರ್ಯ ಅಪರಾಜಿತರ ಶೌರ್ಯದ ವರ್ಣನೆಯ ಪದ್ಯವಿದು.

ಇದು ಪೂರ್ಣ ಪ್ರಮಾಣದಲ್ಲಿಯ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿವೆ.

ಪೊಱಮುಯ್ವುಂ ತಾಗೆ ತಿಣ್ಣಂ ತೆಗೆನೆಱೆದಿಸೆ ಬಲ್ಗಲ್ಪಿ ತನ್ನೇಱಿನೊಳ್ ಕ

ಣ್ದೆಱೆದತ್ತೆಂಬಂತುಮಂಬಿಂ ಸಮೆದುದೆ ನಭಮೆಂಬಂತುಮಾ ಮಿಟ್ತು ಪೋ ಬಾ

ಯ್ದೆಱೆದತ್ತೆಂಬಂತುಮೊಂದೊಂದೆಸೆವ ನಿಯತಮೆಂಬಂತುಮೀಲೋಕಮಂಬಿಂ

ಪೋಱಗಲ್ತೆಂಬಂತು ಮಾಗಳ್ಖಚರಪತಿ ಭರಂಗೆಯ್ದುಕೆಯ್ಪೋಗದೆಚ್ಚಂ[೨೨]

ಖೇಚರ ಚಕ್ರವರ್ತಿಯ ಬಾಣ ಪ್ರಯೋಗದ ವೈಶಿಷ್ಟ್ಯವನ್ನು ವರ್ಣಿಸುವ ಪದ್ಯವಿದು. ತನ್ನ ಬಿಲ್ಲಿನ ಹೆದೆ ಹೆಗಲು ದಾಟಿ ಹೋಗುವಂತೆ ಎಳೆದೆಳೆದು ಬಾಣಬಿಡುತ್ತಾ ಧನುರ್ವಿದ್ಯೆಯೇ ಕಣ್ದೆರೆಯಿತೆಂಬಂತೆ ಆಕಾಶವೆಂಬುದು ಬಾಣಗಳಿಂದಲೂ ರಚಿತವಾಗಿದೆಯೇ ಎಂದು ಭಾಸವಾಗುವಂತೆ, ಮೃತ್ಯುವೇ ಬಾಯ್ದೆರೆಯಿತೆಂಬಂತೆ ಒಂದೊಂದು ಎಸೆತಕ್ಕೆ ಅಸಂಖ್ಯ ಬಾಣಗಳು ನುಗ್ಗುವಂತೆ ಬಾಣಗಳಿಂದ ಆವರಿಸದ ಲೋಕವೇ ಇನ್ನಿಲ್ಲವೆಂಬಂತೆ ಖೇಚರ ಚಕ್ರವರ್ತಿಯು ಕೈಸೋಲದೆ ರಭಸದಿಂದ ಬಾಣ ಹೊಡೆದನು.

ಈ ಪದ್ಯದಲ್ಲಿ ನಭ, ನಿಯತ, ಲೋಕ, ಭರ ಪದಗಳು ಸಂಸ್ಕೃತದ್ದಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲೇ ರಚನೆಯಾಗಿವೆ.

ತೊಟ್ಟನೆ ಕೊಳೆ ಚತುರಂಗದ

ಮುಟ್ಟಂ ಕೆದಱಿದವೊಲಂತಕಂ ಪೆಣನಂ ಸಾ

ಲಿಟ್ಟವೊಲಿರೆ ಸೈನ್ಯಂ ಪಡ

ಲಿಟ್ಟವೊಲಿರೆ ಪರಿವ ಪಿರಿಯ ಕರಿಯ ವಿಜಯಂ [೨೩]

ಒಮ್ಮಲೇ ಚತುರಂಗದ ಕಾಯಿಗಳನ್ನು ಕೆದರಿದ ಹಾಗೆ, ಯಮನು ಹೆಣವನ್ನು ಸಾಲಿಟ್ಟ ಹಾಗೆ, ಸೈನ್ಯವನ್ನು ಸಾಲಾಗಿ ಮಲಗಿಸಿದ ಹಾಗೆ ವಿಜಯ ಕುಮಾರನ ಆನೆಯ ಸೈನ್ಯದ ಅಬ್ಬರ.

ವಿಜಯಕುಮಾರನ ಆಘಾತಕಾರಿ ಹೋರಾಟದ ವರ್ಣನೆಯ ಪದ್ಯವಿದು.

ಈ ಪದ್ಯದಲ್ಲಿ ಚತುರಂಗ, ಸೈನ್ಯಂ, ಪರಿ, ವಿಜಯಂ ಪದಗಳು ಸಂಸ್ಕೃತದ್ದಾಗಿವೆ.

ಈ ಪದ್ಯದಲ್ಲಿ ಕುರುಕುಲ, ಮಾರುತಿ ಪದಗಳನ್ನು ಬಿಟ್ಟರೆ ಉಳಿದಂತೆ ಅಚ್ಚಗನ್ನಡ ರಚನೆಯೇ ಅಧಿಕವಾಗಿ ಕಂಡು ಬರುತ್ತದೆ.

ಜನ್ನನ ಅಜಿತ ತೀರ್ಥಂಕರ ಪುರಾಣದಲ್ಲಿಯೂ ಶೌರ್ಯ ವರ್ಣನೆಯ ಅಚ್ಚಗನ್ನಡ ಪದ್ಯಗಳನ್ನು ಕಾಣಬಹುದು.

ಬತ್ತೆ ತೋಱೆ ಬೆಟ್ಟುಗಳ್ ನೆಲೆ

ವತ್ತೆ ಪಡಲ್ವಡೆ ಮಹಾದ್ರುಮಂಗಳ ನೆಲನಂ

ಪೊತ್ತ ಫಣಿತೆಣಱುತಿರೆ ನಡೆ

ದತ್ತಾಗಳ್ ಸಗರಚಕ್ರವರ್ತಿಯ ಕಟಕಂ[೨೪]

ಮಹಾದ್ರುಮ, ಫಣಿ, ಸಗರ ಚಕ್ರವರ್ತಿ ಪದಗಳು ಸಂಸ್ಕತದ್ದಾಗಿದ್ದು ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಸಾಮಾನ್ಯವಾಗಿ ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ ಶೌರ್ಯವರ್ಣನೆ ಮಾಡುವಾಗ ಮಹಾಪ್ರಾಣ, ಒತ್ತಕ್ಷರಗಳು ಬಳಕೆಯಾದರೆ, ಕನ್ನಡದ ಸಂದರ್ಭದಲ್ಲಿ ದ್ವಿತ್ವಾಕ್ಷರ, ಕರ್ಕಶ ವರ್ಣನೆ, ರೇಫ ಮತ್ತು 'ಳ' ಕಾರಗಳು ಬಳಕೆಯಾಗುತ್ತವೆ.

ಸ್ತ್ರೀವರ್ಣನೆ

ಇದರಂತೆ ಮಾರ್ಗ ಕವಿಗಳು ಉದ್ದೇಶ ಪೂರ್ವಕವಾಗಿ ಅಚ್ಚಗನ್ನಡವನ್ನು ಯಥೇಚ್ಛವಾಗಿ ಬಳಸುವ ಇನ್ನೊಂದು ಸಂದರ್ಭವೆಂದರೆ ಸ್ತ್ರೀ ವರ್ಣನೆ. ಪಂಪನಂತಹ ಸೂಕ್ಷ್ಮಮತಿಯ ಮಹಾಕವಿಗಳು ಇಂತಹ ಸಂದರ್ಭದಲ್ಲಿ ತುಂಬ ಎಚ್ಚರಿಕೆಯನ್ನು ವಹಿಸಿದ್ದಾನೆ ಎಂಬುದಕ್ಕೆ ಪಂಪಭಾರತದ ಈ ಪದ್ಯಗಳೇ ಸಾಕ್ಷಿಯಾಗಿವೆ.

ಪೊಸತಲರ್ದ ಬಿಳಿಯ ತಾವರೆ
ಯೆಸಲ್ಗಳ ನಡುವಿರ್ಪ ಸಿರಿಯುಮಾಕೆಯ ಕೆಲದೊಳ್
ನಸು ಮಸುಳ್ದು ತೋರ್ಪಳೆನೆ ಪೋ|
ಲಿಸುವೊಡೆ ಜಾಕವ್ವೆಗುಟಿದ ಪೆಂಡಿರ್ ದೊರೆಯೇ[೨೫]

ಈ ಪದ್ಯವು ಅರಿಕೇಸರಿಯ ತಾಯಿಯಾದ ಜಾಕವ್ವೆಯ ವರ್ಣನೆಯಾಗಿದೆ ಇದರಲ್ಲಿ ಪಂಪನು ರಾಜಮಾತೆ ಜಾಕವ್ವೆ ವರ್ಣನೆ ಮಾಡುವಾಗ ಅಪೂರ್ವ ಎಚ್ಚರ ಮತ್ತು ಗೌರವ ಕಾಪಾಡಿಕೊಂಡಿರುವುದನ್ನು ಕಾಣಬಹುದು. ಹೊಸದಾಗಿ ಅರಳಿದ ಬಿಳಿಯ ತಾವರೆಯ ಎಸಳುಗಳ ನಡುವೆ ಇರುವ ಸಿರಿಯೂ ಕೂಡ ಜಾಕವ್ವೆಯ ಪಕ್ಕದಲ್ಲಿ ನಿತಾಗ ಸ್ವಲ್ಪ ಮಸುಕಾಗಿ ತೋರುತ್ತಾಳೆ ಎಂದರೆ ಜಾಕವ್ವೆಗೆ ಉಳಿದ ಹೆಣ್ಣು ಮಕ್ಕಳು ಸರಿಮಿಗಿಲೇ?

ಒತ್ತಿದ ತಳ್ಕೆತ್ತಿದ ತಟಿ
ಮುತ್ತಿನ ಪೊಸದುಡುಗೆ ತಳಿರ ಸೋರ್ಮುಡಿ ಮನಮಂ
ಪತ್ತಿಸಿ ಜೊತ್ತಿಸಿ ಮದನೋ
ನ್ಮತ್ತೆಯರವಯವದೆ ಬಂದರರಸಿಯರರೆಂಬರ್[೨೬]

ಜಲಕ್ರೀಡೆಗೆ ಬಂದ ಅರಸಿಯರ ವರ್ಣನೆಯ ಪದ್ಯವಿದು. ಮೈಯಲ್ಲ ಗಂಧ ಲೇಪಿಸಿಕೊಂಡು ಮುತ್ತಿನ ಹೊಸ ಒಡವೆಗಳನ್ನು ಧರಿಸಿ ಚಿಗುರನ್ನು ತಲೆಗೆ ಸಿಕ್ಕಿಸಿಕೊಂಡು ಮದದಿಂದ ಕೂಡಿದ ಮದನೆಯರು ಜಲಕ್ರೀಡೆಗೆ ಆಗಮಿಸಿದರು.

ನೀಲದ ಬೆಳ್ಳಿಯ ಗಾಡಿಯು
ಮಿಾ ಲಲಿತಾಂಗಿಯರ ಕಣ್ಗೆ ಪೋಲ್ತುಂ (ನಾಂ) ಕ
ಣ್ಗೇಳಿದಮಾಗಿರೆವೆಂದಳ
ವಾಳೆಗಳೋಡಿದುವು ಬಾಲೆಯರ್ ಪುದುವಾಗಳ್[೨೭]

ಜಲಕ್ರೀಡೆಗೆ ಬಂದ ಸುಂದರಿಯರು ನೀರಿಗೆ ಇಳಿದಾಗ ಅವರನ್ನು ಕಂಡು ಬಾಳೆಮೀನುಗಳು ಓಡಿದವು. ಈ ಹುಡುಗಿಯರ ಕಣ್ಣಿನ ಹೋಲಿಕೆಗೆ ನಾವಿನ್ನೂ ಜನರ ಕಣ್ಣಿಗೆ ಕಡೆಯಾಗಿ ಕಾಣುವುದು ಬೇಡ. ಜಲದ ನೀಲಿ ರತ್ನಗಳಿಗೆ ಸಮಾನಾಗಿ ಅವರ ಕಣ್ಣ ಸೌಂದರ್ಯ ಕಂಗೊಳಿಸುವಂತಿತ್ತು.

ಸಮದ ಗಜಗಮನೆಯರ್ ಮುಗಿ

ಲ ಮೇಲೆ ನಡೆಪಾಡುವಾಕೆಗಳ್ ತಮಗೆ ಧರಾ

ಗಮನಂ ಪೊಸತಪ್ಪುದಱಿಂ

ದಮರ್ದಿರೆ ನಡೆ ನಡೆದು ನಡೆಯಲಾಱದೆ ಸುಟಿದರ್[೨೮]

ದೇವಗಣಿಕೆಯರ ನಡಿಗೆಯ ವರ್ಣನೆಯ ಪದ್ಯವಿದು. ಮದಿಸಿದ ಆನೆಯ ನಡಿಗೆಯಂತೆ, ಮುಗಿಲ ಮೇಲೆ ನಡೆದಾಡುವ ದೇವಗಣಿಕೆಯವರು ಭೂಮಿಗೆ ಬಂದರು. ಹೊಸದಾದ ಈ ನೆಲದಲ್ಲಿ ನಡೆಯಲಾರದೆ ಅವರ ಕಾಲುಗಳು ಸಿಕ್ಕಿಕೊಳ್ಳತೊಡಗಿದವು.

ಈ ಮೇಲಿನ ಪದ್ಯಗಳಲ್ಲಿ ಪತ್ತಿಸಿ, ಮದನೋನ್ಮತ್ತೆ, ಅರಸಿಯರ್, ನೀಲ, ಲಲಿತಾಂಗಿ, ಗಜಗಮನೆ, ಧರಾಗಮನಂ, ಪದಗಳು ಸಂಸ್ಕೃತದ್ದಾಗಿವೆ.

ಇದೇ ರೀತಿ ಪೊನ್ನನ ಶಾಂತಿ ಪುರಾಣದಲ್ಲಿ ಸ್ತ್ರೀ ವರ್ಣನೆಗೆ ಸಂಬಂಧಿಸಿದ ಈ ಕೆಳಗಿನ ಪದ್ಯಗಳನ್ನು ನೋಡಬಹುದು.

ಪುಗುವ ಪೊಱಮಡನಿವ ಜನದಿಂ

ಪುಗಲುಂ ಪೋಱಮಡಲುಮಲಸಿ ಬಾಗಿಲ ಕೆಲದೊಳ್

ಸೊಗಯಿಪ ಗುಣನೆಗಳೊಳ್ ನಿಂ

ದ ಗಾಡಿಕಾರ್ತಿಯರದೇಂ ಮನಂಗೊಳಿಸಿದರೋ[೨೯]

ಗಣಿಕೆಗಾರ್ತಿಯರ ವರ್ಣನೆಯ ಪದ್ಯವಿದು. ಬಲವಾಸುದೇವರ ಪಟ್ಟಾಭಿಷೇಕದ ವೈಭವ ನೋಡಲು ಬಂದ ಗಣಿಕೆಗಾರ್ತಿಯರು ಒಳ ಹೊರ ಹೋಗುವ ಜನಸಂದಣಿಯ ಕಾರಣದಿಂದ ಒಳಹೋಗಲು ಸಾಧ್ಯವಾಗದೆ ಈ ಸುಂದರ ಗಣಿಕಾರ್ತಿಯರೆಲ್ಲ ಹೊರಗಡೆ ಚಡಿಯ ಮೇಲೇಯೇ ನಿಲ್ಲುವಂತಾಯಿತು.

ಬರಗಲೆಯುಂ ಕೊಪ್ಪುಂ ನೂ

ಪುರಮುಂ ಲಂಬಳಮುಮಲ್ಲಿ ಮಲ್ಲಿಗೆಯ ಮುಗುಳ್

ಬಿರಿಮುಗುಳೆಂಬಿವು ತನಗಾ

ಗಿರಿ ದೇಸೆಯ ಮಾಸರಿಕ್ಕೆಯಂ ಪೊಸಯಿಸಿದಳ್[೩೦]

ವಜ್ರಾಯುಧನ ಹೆಂಡತಿಯ ಸಮೂಹದಲ್ಲಿ ಒಬ್ಬಾಕೆಯ ವರ್ಣನೆಯ ಪದ್ಯವಿದು. ಮಲ್ಲಿಗೆಯ ಮೊಗ್ಗು ಮತ್ತು ಹೊಗಳಿಂದಲೇ ಆಕೆ ತನ್ನ ಕಿವಿಯ ಓಲೆ, ಕಾಲಂದುಗೆ, ಕೊರಳಹಾರ, ತಯಾರಿಸಿಕೊಂಡು ಧರಿಸಿ ತನ್ನ ಸಹಜ ಸೌಂದರ್ಯಕ್ಕೆ ಹೊಸ ಕಳೆಯನ್ನು ತಂದುಕೊಂಡಳು.

ಒಡವುಗುವರಸಿಯರ ನೆೞಲ್
ಬೆಡಂಗುವೆತ್ತಿರ್ದುವೊಲಿದು ಜಲದೇವತೆಗಳ್
ತಡೆಯದಿದಿರ್ವಂದು ನೃಪನೊಡ
ನೊಡನೆ ಸರೋವರಮನೊಸೆದು ಪುಗುವಂತಾಗಳ್[೩೧]

ವಜ್ರಾಯುಧನ ಜೊತೆಯಲ್ಲಿ ಬಂದ ಕುಮಾರರ ಅರಸಿಯರ ವರ್ಣನೆಯ ಪದ್ಯವಿದು. ಕುಮಾರರೊಡನೆ ಸರೋವರಕ್ಕೆ ಬಂದ ಅರಸಿಯರ ಪ್ರತಿಬಿಂಬವು ಜಲದೇವತೆಗಳೇ ಅಲ್ಲಿಂದ ಬಂದು ಕುಮಾರರನ್ನು ಎದುರುಗೊಂಡಂತೆ ಸ್ಪಷ್ಟವಾಗಿ ಅವನ ಸೌಂದರ್ಯ ನೀರಿನಲ್ಲಿ ಶೋಭಿಸುತ್ತಿತ್ತು.

ಈ ಮೇಲಿನ ಪದ್ಯಗಳಲ್ಲಿ ಗುಣ, ಮನ, ನೂಪುರ, ಪವನ, ಹಿಮ, ಮನ ಮತ್ತು ಜಲದೇವತೆಗಳ್, ನೃಪನ, ಸರೋವರ ಸಂಸ್ಕೃತ ಪದಗಳು ಬಳಕೆಯಾಗಿವೆ.

ಹಾಗೆಯೇ ರನ್ನ ಕವಿಯ ಗದಾಯುದ್ಧ ಕಾವ್ಯದಲ್ಲಿಯೂ ಸ್ತ್ರೀ ವರ್ಣನೆಯ ಪದ್ಯಗಳನ್ನು ಕಾಣಬಹುದು. ಉದಾಹರಣೆಗೆ,

ಪನ್ನೆರಡು ಬರಿಸಮಲಸದೆ
ಬನ್ನದ ಕೂೞುಂಡು ಬರ್ದೞಲ್ ಪಿಂಗಲೊಡಂ
ತನ್ನಿಂ ಕಾಳಿಕೆ ಪಿಂಗಿದ
ಪೊನ್ನಿನ ತೆಱನಂತೆ ಕಾಂತೆ ಕರಮಸೆದಿರ್ದಳ್[೩೨]

ದ್ರೌಪದಿಯ ಸೌಂದರ್ಯ ಲಕ್ಷ್ಮೀಯ ಸೌಂದರ್ಯಕ್ಕೆ ಸಮಾನವಾದುದೆಂದು ಹೋಲಿಸುವ ಪದ್ಯವಿದು. ಹನ್ನೆರೆಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸದ ಅವಧಿಯಲ್ಲಿ ಅವಮಾನದ ಅನ್ನವನ್ನುಂಡು ಬದುಕಿದರೂ ಸ್ವಲ್ಪವೂ ಬೇಸರಿಸಲಿಲ್ಲ. ಈಗ ಮತ್ತೆ ರಾಜ್ಯ ಮರಳಿ ಪಡೆಯುವಾಗ ಅವಳ ರೂಪ ತನ್ನಲ್ಲಿದ್ದ ಕಿಲುಬನ್ನು ಕಳೆದುಕೊಂಡು ಬಂಗಾರದ ಗೊಂಬೆಯಂತೆ ಕಂಗೊಳಿಸುತ್ತಿದ್ದಳು.

ಸಂಪೂರ್ಣವಾಗಿ ಅಚ್ಚಗನ್ನಡದಲ್ಲಿಯೇ ಈ ಪದ್ಯ ರಚನೆಯಾಗಿದೆ. ಅಜಿತ ತೀರ್ಥಂಕರ ಪುರಾಣದಲ್ಲಿ ಸ್ತ್ರೀ ವರ್ಣನೆಯ ಪದ್ಯಗಳು ಕಂಡು ಬರುತ್ತವೆ.

ತರುಣಿಯ ಮುಖಚಂದ್ರಬಲಂ
ದೊರೆಕೊಳೆ ಪುರ್ವೆಂಬ ಕರಿಯ ಕರ್ಬಿನಬಿಲ್ಲಂ
ಮರಲೆದೆಗೆದತನು ಕಣ್ಣೆಂ
ಬರಲಂಬಿಂದೆಚ್ಚು ಜಗಮನಡಿಗೆಱಗಿಸುಗುಂ[೩೩]

ಮನ್ಮಥನು ತರುಣಿಯ ಮುಖಚಂದ್ರದ ಬಲವು ಸಿಗಲು ಹುಬ್ಬೆಂಬ ಕಪ್ಪಾದ ಕಬ್ಬಿನ ಬಿಲ್ಲಿಗೆ ಹೂವಿನ ಬಾಣ ಹೂಡಿ ಕಣ್ಣೆಂಬ ಬಾಣವನ್ನು ಬಿಟ್ಟು ಜಗತ್ತು ತಲೆಬಾಗುವ ಹಾಗೆ ಮಾಡಿದನು.

ಪಳವದ ತಿವಳಯ ಜುಂಕದ

ಮೊಳಸಿನ ಜೇಕಿರದ ನಿಱಿಂ ಸಿಪ್ಪಿನ ಲಯದಿಂ

ದೆಳಲದೆ ಕುಣಿದರ್ ಕೆಲಬರ್

ಕಳರು ತಿಗಳೆ ತಾಳಮಾಗೆ ಕುಣಿದರ್ ಕೆಲಬರ್[೩೪]

ಪವಳ, ತಿವಳ, ಜುಂಕ ಮೊದಲಾದ ವಾದ್ಯಗಳ ಮೊಳಗುವಿಕೆಗೆ ಮತ್ತು ಲಯಕ್ಕೆ ಸರಿಯಾಗಿ ಕೆಲವರು ಕುಣಿದರೆ ಮತ್ತೆ ಕೆಲವರು ಮಧುರವಾದ ಧ್ವನಿಗಳೇ ತಾಳವೆಂಬಂತೆ ಕುಣಿದರು.

ಪೊಸತೆನಿಪ ಸುರುಗೆವೆಕ್ಕಣ

ಮೆಸೆದಿರೆ ಕಡುವೊಸತು ಬಣ್ಣರಸಮೆಸೆದಿರೆ ನಿ

ಪ್ಪೊಸತೆನಿಪ ದೇಸೆ ಮಾಸಱ

ಮೆಸೆದಿರೆ ಸಭೆ ಮೆಚ್ಚೆ ಪೊಚ್ಚಪೊಸತಾಯ್ತು ರಸಂ[೩೫]

ಹೊಸತಾದ ಸುರಗೆಒಕ್ಕಣ ನೃತ್ಯವು ಶೋಭಿಸುತ್ತಿರಲು ಹೊಚ್ಚ ಹೊಸತಾದ ಶೃಂಗಾರ ಬಣ್ಣದ ರಸವು ಮೆರೆದಿರಲು ಮತ್ತಷ್ಟು ಹೊಸತೆನಿಸುವ ದೇಸಿಯು ಮನೋಹರವಾಗಿರಲು ಸಭೆಯಲ್ಲಾ ಮೆಚ್ಚಿಕೊಂಡಿತು.

ಈ ಮೇಲಿನ ಪದ್ಯಗಳಲ್ಲಿ ತರುಣಿ, ಮುಖಚಂದ್ರ, ಕರಿ, ಜಗ, ಲಯ, ಮತ್ತು ರಸಂ, ಸಭೆ ಎನ್ನುವ ಸಂಸ್ಕೃತ ಪದಗಳು ಬಳಕೆಯಾಗಿವೆ.

ಶೃಂಗಾರ ವರ್ಣನೆ

ಇದರಂತೆ ಶೃಂಗಾರ ವರ್ಣನೆಯಲ್ಲಿ ಕವಿಗಳ ಅಚ್ಚಗನ್ನಡದ ಬಳಕೆ ಮಾಡಿರುವುದನ್ನು ಕೆಳಗಿನ ಪದ್ಯಗಳಿಂದ ತಿಳಿದು ಬರುವುದು.

ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದ ಮೊಯ್ಯಗೊ

ಯ್ಯಗೆ ನಗೆಗಣ್ಗಳಾಲಿ ಮಗುಟ್ಚಿಂತಿರೆ ಮುಚ್ಚಿರೆ ಸುಯ್ಯಡಂಗೆ ಮ

ಲ್ಲಗೆ ಮಱಸೊಂದಿದಂದದೊಳೆ ಜೋಲ್ದ ನಿಜೇಶನ ಲತಾಂಗಿ ತೊ

ಟ್ಟಗೆ ಕೊಳೆ ನೋಡಿ ಕಟ್ಟೆನಿನಿಯಂ ಮಱಸೊಂದಿದನೋ ಬಟಲ್ದನೋ[೩೬]

ಅವಳನ್ನು ಬಿಗಿದು ಸುತ್ತಿದ ಅವನ ತೋಳು ಸಡಿಲಿತು. ಮುಕ ಓರೆಯಾಯಿತು. ಓರೆಯಾದ ಮುಖದಿಂದ ಮೆಲ್ಲ ಮೆಲ್ಲಗೆ ನಗೆ ಬಗೆಯ ಕಣ್ಣ ಗುಡ್ಡೆಯು ಓರೆಯಾದಂತಾಗಿ ಅರೆ ಮಚ್ಚಿತು. ಉಸಿರಾಟ ಅಡಗಿತು. ಜೋಲಿಹೋದ ತನ್ನ ಪತಿಯನ್ನು ಆ ಲತಾಂಗಿ ಮಾದ್ರಿ ತಟ್ಟನೆ ನೋಡಿದಳು.

ಈ ಪದ್ಯದಲ್ಲಿ ನಿಜೇಶ ಮತ್ತು ಲತಾಂಗಿ ಸಂಸ್ಕೃತ ಪದಗಳೆರೆಡು ಬಳಕೆಯಾಗಿವೆ. ಮುಂದೆ,

ಕಟಿಯಲರಾದ ಸಂಪಗೆಯ ಬಣ್ಣದವೋಲೆ ಬೆಳರ್ತ ಬಣ್ಣದೊಳ್
ಗಟಿಯಿಸೆ ಕೆಂಪು ಕಣ್ಗಳ ಮೊದಲ್ಗಳೊಳೊಯ್ಯನೆ ತೋ ಜೆ ಬಾಡಿ ಪಾ
ಡಟಿದು ಬಟಲ್ದು ಜೋಲ್ದಿರವು ಮೆಯ್ಯೊಳೆ ಮೆಯ್ಯುಡಿದೆನ್ನ ಕಣ್ಗಳೊಳ್
ಸುಟಿದುವುತಾಮೆ ಕನ್ನಡಿಸಿದಪ್ಪುವು ಕನ್ನೆಯ ಕನ್ನವೇಟಮಂ[೩೭]

ಸುಭದ್ರೆಯ ವರ್ಣನೆಯ ಪದ್ಯವಿದು. ಅರಿಕೇಸರಿಯು ಆನೆಯ ಮೇಲೆ ಕುಳಿತು ದ್ವಾರಕೆಗೆ ಬರುವುದನ್ನು ನೆನೆದು ಸುಭದ್ರೆ ವಿರಹ ವೇದನೆಯಿಂದ ಬಳಲುವ ವಿವರಣೆ ಈ ಪದ್ಯದಲ್ಲಿದೆ.

ಇದರಲ್ಲಿ ಯಾವುದೇ ಸಂಸ್ಕೃತ ಪದ ಬಳಕೆಯಾಗಿಲ್ಲ.

ಕುಱುಪಂ ಪುರ್ವಿನ ಜರ್ವೆ ತೋಜೆ ಬಗೆಯಂ ಕಣ್ಬನ್ನೆಗಳ್ ಪೇಟಿತೆ
ನ್ನೆಱಿಕಂ ತನ್ನ ಮನಕ್ಕೆ ಕೂಡೆ ಕೆಲಕಂ ಗಂಡಂಗಮೊಳ್ಪಂ ಕರಂ
ಮೆಱೆವಾ ಪ್ರೌಢೆಯೆ ಜೊಡೆಯಕ್ಕುಮೆಡೆಯೊಳ್ ದೊಂಟಿಂದೆ ದೂಂಟಿಂಗೆ ಪೆ
ರ್ಚಿಱೆಯಂ ಪೊಯ್ದಿ ಕೆಲಕ್ಕೆ ನಾಣ್ಚಿ ತಲೆಗುತ್ತಿರ್ಪಾಕೆಯೇಂ ಜೋಡೆಯೇ[೩೮]

ಸೂಳೆಯರ ವರ್ಣನೆಯ ಪದ್ಯವಿದು. ಅವರ ವಿವಿಧ ಭಾವ-ಭಂಗಿಗಳು, ಅವರ ನಡೆ-ನುಡಿಗಳ ವರ್ಣನೆ ಈ ಪದ್ಯದಲ್ಲಿದೆ.

ಇಲ್ಲಿ ಮನ, ಪ್ರೌಢೆ ಸಂಸ್ಕೃತ ಪದಗಳು ಮಾತ್ರ ಕಂಡುಬರುತ್ತವೆ.

ಪೊನ್ನ ಕವಿಯ ಶಾಂತಿ ಪುರಾಣದಲ್ಲೂ ಶೃಂಗಾರ ವರ್ಣನೆಯ ಪದ್ಯಗಳನ್ನು ಕಾಣಬಹುದು.

ಪೊಸಬಿಸುಸುಯ್ಯ ಪಾಡಟುದ ಮೆಯ್ಯ ಕದಂಪಿನ ಕೆಯ್ಯ ಭಂಗಿ ಕ
ಣ್ಗೆಸೆಯ ಪೊದಟ್ದ ಕಣ್ಬನಿಯ ಬಾನಲ ತಣ್ಣಸದೊಳ್ ಪಗಿಲ್ತು ಪಾ
ವಸೆಗೊಳೆ ಕಾರ ತಂದಲೊಳಗುಂದಲೆಯಾಗಿರೆ ನಟ್ಟು ಸೋರ್ವ ಪಾ
(ಬ್ದ) ನದಿಯ ಪೆಣ್ಣ ಜೋಹದವೊಲೊಪ್ಪಿದಳೊರ್ವಳನಂಗರಾಗದಿಂ[೩೯]

ಹೊಸನಿಟ್ಟುಸಿರಿಂದ, ಕಂದಿದ ಮೈಯಿಂದ ಕೆನ್ನೆಯ ಮೇಲಿಟ್ಟ ಕೈಯಿಂದ ಉಕ್ಕುಕ್ಕಿ ಹರಿವ ಧಾರೆಯಲ್ಲಿ ನೆನೆದು, ಉಟ್ಟ ಬಟ್ಟೆಯೆಲ್ಲ ಮೈಗೆ ಅಂಟಿಕೊಂಡಿರುವ ಸ್ಥಿತಿಯಿಂದ ಕಾಮಾಗ್ನಿಗೆ ಗುರಿಯಾದ ಕಾಂತೆಯೊಬ್ಬಳು ಮಳೆಗಾಲದ ಧಾರಾಪಾತದಲ್ಲಿ ಹಾಳು ಬಸದಿಯ ಹೆಣ್ಣು ಬೊಂಬೆಯಂತೆ ಹಾವಸಗಟ್ಟು ನಿಂತಹಾಗೆ ತೋರಿದಳು.

ಇದರಲ್ಲಿ ನದಿ, ಭಂಗಿ, ಅನಂಗರಾಗವೆಂಬ ಸಂಸ್ಕೃತ ಪದಗಳು ಬಳಕೆಯಾಗಿವೆ.

ಇನಿತೆನಗಿಂಬುಕೆಯ್ದಿನಿತು ಬೆಳ್ಪೆನಿತೊಳ್ದಿಳಿದೆನ್ನನಿನ್ನು ಮೊ
ರ್ವನೊಳವಳಿಂದೊಡಂಬಡುವಳೆಲ್ಲಿಯ ಬಾಟೆನಗೆಂಬ ಪಂಬಲಿಂ
ಮನದೊಳಬಲ್ದು ಚಿಂತಿಸಿ ಕಟಲ್ದು ಬಟಲ್ದು ಕನಲ್ದೊನೆಲ್ದು ಬೆ
ಳ್ಪೆನಿಸುವ ಬೆಳ್ಪಬೇರನಗುಬ್ದೊಗಸಕೆತ್ತದೆ ಸೂಳೆ ಮಾಣ್ಗುಮೆ[೪೦]

ಸೂಳೆಯ ವರ್ಣನೆಯ ಪದ್ಯವಿದು. ನನ್ನನ್ನು ಇಷ್ಟೊಂದು ಸಂತೋಷಪಡಿಸಿ, ಇಷ್ಟೊಂದು ಸ್ಪಷ್ಟವಾಗಿ ನನ್ನಂತರಂಗವನ್ನು ತಿಳಿದವಳಾಗಿ ಈಕೆ ಇನ್ನೂ ಒಬ್ಬನನ್ನು ಒಪ್ಪಿಕೊಳ್ಳುವಳಲ್ಲ ಇನ್ನು ನನಗೆಲ್ಲಿಯ ಬಾಳು ಎಂಬ ಹಂಬಲಿಕೆಯಿಂದ ಮನಸ್ಸಿನಲ್ಲಿ ನೊಂದುಕೊಂಡು ಚಿಂತಿಸಿ, ಕೊರಗಿ, ಕುದಿದು, ಕೋಪಗೊಂಡ ಚಡಪಡಿಸುತ್ತಿರುವ ಮೂರ್ಖನನ್ನು ಕಂಡ ಸೂಳೆ ಆತನ ಬೇರನ್ನು ಅಗೆದು ಅಕಾಶಕ್ಕೆ ಎಸೆಯದಿರುವಳೇ?

ಬೆಸವರಿಗೆಯ್ಯು ಬೇಸ (ಜಿ) ಸುವಿತ್ತುದನೆತ್ತುವ ಮೇಗುದೋರ್ಪ ಕಂ
ಟಿಸುವ ಕನಲ್ವ ಕಡ್ಡಯಿಸುವೇಟಿದನಂ ತಿಳಿಪಲ್ ಮನಂಗೊಳಲ್
ಬಸಯಿಸಲಿಂಬುಕೆಯ್ಸಲೊಳಪೊಯ್ಸಲೊಡಂಬಡಿಸಲ್ ಪ್ರಮೋದಮಂ
ಪೊಸಯಿಸಲಾಜಿಸಲ್ ನೆರೆದುಮೊಲ್ಲದೆ ಚಿತ್ತಮುದಾತ್ತ ಚಿತ್ರೆಯಾ"[೪೧]

ಸೂಳೆಗೇರಿ ಮತ್ತು ಸೂಳೆಯರ ವರ್ಣನೆಯ ಪದ್ಯವಿದು. ಬೇಸರಿಸುವ, ಕೊಟ್ಟುದನ್ನು ಮರಳಿ ತೆಗೆದುಕೊಳ್ಳುವ ತಾನೇ ಹೆಚ್ಚಿನವನೆಂದು ಜಂಬ ತೋರುವ, ಕಾಡುವ, ಕೋಪಗೊಂಡು ಪೀಡಿಸುವ ಹೀನ ವಿಟನನ್ನೂ ಹಿಡಿದು ಸಂತೈಸಿ ಮನವೊಲಿಸಿ ಆತನನ್ನು ಪೂರ್ಣವಾಗಿ ವಶಪಡಿಸಿಕೊಂಡು ಒಡಂಪಡಿಸಲೂ, ಸಂತೋಷವನ್ನುಂಟುಮಾಡಲೂ ಸಮರ್ಥಳಾದರೂ ಕೂಡ ಒಬ್ಬ ಉದತ್ತ ಚಿತ್ತದ ಚತುರೆಗೆ ಮನಸೇ ಒಪ್ಪದೆ ಬೇಸರವಾಯಿತು.

ಈ ಮೇಲಿನ ಪದ್ಯಗಳಲ್ಲಿ ಚಿಂತೆ, ಚಿತ್ತ, ಪ್ರಮೋದ, ಉದಾತ್ತ, ಮನ ಸಂಸ್ಕೃತ ಪದಗಳು ಬಳಕೆಯಾಗಿವೆ.

ರನ್ನ ಕವಿಯ ಅಜಿತ ತೀರ್ಥಂಕರ ಪುರಾಣದಲ್ಲಿ ಶೃಂಗಾರ ವರ್ಣನೆಯ ಪದ್ಯಗಳು ಕಂಡು ಬರುತ್ತವೆ.

ಪೊಳೆವಲರ್ಗಣ್ಣ ಬೆಳ್ಪುಗಳ ಪುರ್ವಿನ ಜರ್ವಿನ ಚೆಲ್ವುಗಳ್ ಮನಂ
ಗೊಳೆ ಸುರಕಾಂತೆಯರ್ ದಿವಿಜರಾಜನ ತೋಳ್ಗಳ ಮೇಲೆ ನಿಂದು ಗೊಂ
ದಳದೆ ವಿಚಿತ್ರ ನರ್ತನ ವಿಳಾಸಮನಾಡೆ ಮರುದ್ವಿಲಾಸಿನೀ
ವಿಳಸಿತ ಲಾಸ್ಯಮುಂ ಮಘುವ ತಾಂಡವಮೇಂ ರಮಣೀಯಮಾದುದೋ"[೪೨]

ಹೂವಿನ ಕಾಂತಿಯ ಹಾಗೆ ಹೊಳೆಯುತ್ತಿರುವ ಕಣ್ಣುಗಳ, ಡೊಂಕಾದ ಹುಬ್ಬುಗಳುಳ್ಳ ಸುಂದರಿಯರಾದ ದೇವತೆಗಳು ದೇವೇಂದ್ರನ ತೋಳಿನ ಮೇಲೆ ನಿಂತು ಗೊಂದಳದ ವಿಚಿತ್ರ ಸಾಮೂಹಿಕ ನರ್ತನವನ್ನು ಮಾಡಿದರು. ಈ ಸುಂದರಿಯರ ಆಕರ್ಷಕವಾದ ನಗು ಮತ್ತು ದೇವೇಂದ್ರನ ತಾಂಡವ ಜೊತೆಯಾಗಿ ಸೇರಲು ಅದು ರಮಣೀಯವಾಗಿ ಕಂಡಿತು.

ಈ ಪದ್ಯದಲ್ಲಿ ಮನ, ಸುರಕಾಂತೆ, ದಿವಿಜರಾಜ, ವಿಚಿತ್ರ ನರ್ತನ, ವಿಳಸಿತ, ಲಾಸ್ಯ, ಮೇಘುನ, ತಾಂಡವ, ರಮಣೀಯ ಎಂಬ ಸಂಸ್ಕೃತ ಪದಗಳು ಬಳಕೆಯಾಗಿವೆ.

ಜನ್ನಕವಿಯ ಅನಂತನಾಥ ಪುರಾಣದಲ್ಲೂ ಶೃಂಗಾರ ವರ್ಣನೆಯ ಪದ್ಯಗಳಲ್ಲಿ ಅಚ್ಚಗನ್ನಡ ರಚನೆಗಳು ಕಂಡು ಬರುತ್ತವೆ.

ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ಕೂಡಿ ತೋಡಗ
ಲ್ಚುವ ದಿವಸಾವಸಾನಸಮಯಕ್ಕೆ ಕನಲ್ದುರಿ ರಿದೇಟ್ಬಿ ಸಂಜೆ ಪೊ
ತ್ತುವ ತಮಮತ್ತಮಿತ್ತಮಳುರ್ದತ್ತಲೆ ಪೊರ್ದಿದ ಪೋಟಿಲೊಳ್ ಮಿಡುಂ
ಕುವ ಬೆಳುಗಾವಿನಂತಗಲಲಾರದಗಲ್ದುವು ಜಕ್ಕವಕ್ಕಿಗಳ್[೪೩]

ಸಂಜೆಯಾಗುತ್ತಲೇ ಜಕ್ಕವಕ್ಕಿಗಳು ಅನುಭವಿಸುವ ವಿರಹವೇದನೆಯ ವರ್ಣನೆಯ ಪದ್ಯವಿದು. ತವಕದಿಂದ ಅಪ್ಪಿಕೊಂಡು, ತಲ್ಲಣಗೊಂಡು ಚುಂಬಿಸಿದವು. ತಡಮಾಡದೆ ಕೂಡಿದವು. ಜೊತೆಯಾಗಿರುವುದರಿಂದ ಅಗಲುವ ದಿವಸದ ಅಂತಿಮ ಸಮಯಕ್ಕೆ ಸಿಟ್ಟುಗೊಂಡು ಉರಿದೇಳುವ ಸಂಜೆ ಹಾಗೂ ಹೊತ್ತಿಕೊಳ್ಳುವ ಕತ್ತಲು ಇವುಗಳಿಗೆ ಸಿಕ್ಕಿ ಅತ್ತ ಇತ್ತ ಭಯಗೊಂಡು, ಅಲ್ಲೇ ಇದ್ದು ಪಟ್ಟಣದಲ್ಲಿ ಮಿಡುಕುತ್ತಿರುವ ಬಿಳಿಯ ಹಸುವಿನ ಹಾಗೆ ಅಗಲಲಾರದೆ ಅವು ಅಗಲಿದವು.

ಈ ಪದ್ಯದಲ್ಲಿ ದಿವಸ, ಅವಸಾನ ಸಮಯ ಚುಂಬಿಸಿ ತಪವೆಂಬೆರಡು ಸಂಸ್ಕೃತ ಪದಗಳು ಬಳಕೆಯಾಗಿವೆ.

ಎರಲಲೆಪಿಂದೆಸಟ್ಮಿಸುಜೊ ನೆಯ್ದಿಲನೋಪಳೆಗೆತ್ತು ಗೆಂಟೆಟೊಳ್
ಕರೆದುದು ಬಾರಾಳಾಂ ಕರೆದೊಡಂ ಪ್ರಿಯೆಯೆಂದು ಕನಲ್ದು ಚಂಚುವಂ
ಮುರಿದುದು ಬಂದಡಂಗಿದಳೆಗೆತ್ತು ಬಿದಿರ್ಚಿ ದಳೆಂಗಳಂ ತೆಱಂ
ದಿರಿದುದು ಜಕ್ಕವಕ್ಕಿ ಮಿಗೆ ಮುಚ್ಚೆಗೆ ಸಂದುದು ಕಾಣದೋಪಳಂ[೪೪]

ಗಾಳಿ ತೀಡುತ್ತಿರಲು ಎಲೆಯ ಹಿಂದೆ ಇರುವ ನೈದಿಲೆಯನ್ನು ಪ್ರಿಯೆಯೆಂದೇ ಭಾವಿಸಿ ದೂರದಿಂದಲೇ ಕರೆಯಿತು. ಆಮೇಲೆ ನಾನು ಕರೆದರೆ ಪ್ರಿಯೆಳು ಬಾರಳೆಂದು ಸಿಟ್ಟುಗೊಂಡು ಕೊಕ್ಕನ್ನು ಮುರಿಯಿತು. ಬಂದು ಅಡಗಿದ್ದಾಳೆಂದುಕೊಂಡು ದಳಗಳನ್ನೆಲ್ಲ ಚೆಲ್ಲಾಪಿಲ್ಲಿಯಾಗಿ ಕಿತ್ತಿ ಆಮೇಲೆ ಜಕ್ಕವಕ್ಕಿಯು ಮೂರ್ಛೆ ಹೋಯಿತು.

ಈ ಪದ್ಯದಲ್ಲಿ ಪ್ರಿಯೆ ಎಂಬ ಪದವನ್ನು ಹೊರತುಪಡಿಸಿದರೆ ಪದ್ಯ ಪೂರ್ಣಪ್ರಮಾಣದಲ್ಲಿ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಗರಗರನಾದ ಬೆಳ್ಪಸದನಂ ಪೊಸಜವ್ವನದೇಟ್ಗೆ ದೇಸೆಯೊಳ್
ಪೊರೆದ ವಿಲಾಸಮೊಪ್ಪೆ ನಡೆತರ್ಪಳನಾನೃ ಪಕಂತು ಕಂಡು ಕ
ಪ್ಪುರದ ಪುರಂಧ್ರಿ ಮಲ್ಲಿಗೆಯ ಮಾನಿನಿ ಮುತ್ತಿನ ಮುಗ್ಧೆ ಚಿತ್ತಜಂ
ಕರುವಿಡೆ ಸಂದ ಚಂದನದ ಲೆಪ್ಪದ ಸುಂದರಿಯೆಂದು ನೋಡಿದಂ[೪೫]

ಗರಿಗರಿಯಾದ ಉಟ್ಟ ಬಿಳಿಯ ವಸ್ತ್ರ, ಏರು ಯವ್ವನದ ಸೊಬಗು, ದೇಸಿತನ ಇದೆಲ್ಲಕ್ಕೂ ಹಿನ್ನಲೆಯಾದ ಕಾಂತಿಯಿಂದ ನಡೆದು ಬರುವವಳನ್ನು ರಾಜ ಮನ್ಮಥನು ಕಂಡನು. ಹಾಗೆ ಅವನಿಗೆ ಅವಳು ಕರ್ಪೂರದ ಮುತ್ತೈದೆ, ಮಲ್ಲಿಗೆಯ ಮಾನಿನಿ, ಮುತ್ತಿನ ಮುಗ್ಧೆ ಮನ್ಮಥನು ಎರಕಹೊಯ್ಯಲು ರೂಪಗೊಂಡ ಮುತ್ತಿನ ಗೊಂಬೆಯಂತಹ ಸುಂದರಿ ಹಾಗೆ ಕಂಡಳು.

ಇದರಲ್ಲಿ ನೃಪಕಂತು, ಪುರಂಧ್ರಿ, ಮಾನಿನಿ, ಚಿತ್ತಜ, ಚಂದನ, ಸುಂದರಿ ಸಂಸ್ಕೃತ ಪದಗಳು ಬಳಕೆಯಾಗಿವೆ.

ಪ್ರಕೃತಿ ವರ್ಣನೆ

ಬಹುತೇಕ ಪ್ರಾಚೀನ ಕನ್ನಡ ಕವಿಗಳು ಪ್ರಕೃತಿ ವರ್ಣನೆಯ ಸಂದರ್ಭದಲ್ಲಿ ಅಚ್ಚಗನ್ನಡದ ಬಳಕೆ ಮಾಡಿರುವುದನ್ನು ಕಾಣಬಹುದು. ಈ ಅಧ್ಯಾಯದಲ್ಲಿ ಪಂಪ, ಪೊನ್ನ, ರನ್ನ, ಜನ್ನರ ಕಾವ್ಯಗಳಲ್ಲಿ ಅಚ್ಚಗನ್ನಡದಲ್ಲಿಯೇ ರಚನೆಯಾಗಿರುವ ಪ್ರಕೃತಿ ವರ್ಣನೆಯ ಪದ್ಯಗಳನ್ನು ಕಾಣಬಹುದು.

ಅಲರ್ದಿರ್ಮುತ್ತೆ ಪೂತ ಪೊಸ ಮಲ್ಲಿಗೆ ಕಂಪನವುಂಕುತಿರ್ಪ ತೆಂ
ಬೆಲರು (ಮಿದ)ಂ ಗೆಲಲ್ವಗೆವ ತುಂಬಿ ಗಳಧ್ವನಿಯಿಂ ಕುಕಿಲ್ವ ಕೋ
ಗಿಲೆ ನೆನೆದೋಱೆ ನುಣ್ಪೆಸೆವ ಮಾಮರನೊರ್ಮೊದಲಲ್ಲದುಣ್ಮೆವು
ಯ್ಯಲ ಪೊಸಗಾವರಂ ಪುಗಿಲೊಳೇನೆಸೆದತ್ತೊ ಬಸಂತ ಮಾಸದೊಳ್[೪೬]

ವಸಂತಕಾಲದ ವರ್ಣನೆಯ ಈ ಪದ್ಯದಲ್ಲಿದೆ. ಹೊಸ ಮಲ್ಲಿಗೆಯ ಕಂಪು, ತೆಂಕಣಗಾಳಿ ದುಂಬಿಗಳ ಝೇಂಕಾರ, ಶಬ್ದಮಾಡುವ ಕೋಗಿಲೆಗಳು, ಸೊಗಸಾದ ಮಾವಿನ ಮರದ ಅಂದ ವಸಂತಾರಂಭವನ್ನು ಸೂಚಿಸುತ್ತಿತ್ತು.

ಧ್ವನಿ, ಎಂಬ ಒಂದೇ ಒಂದು ಸಂಸ್ಕೃತ ಪದವನ್ನು ಹೊರತುಪಡಿಸಿದರೆ ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟ್ಪೊಡಾವ ಚಿ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್[೪೭]

ಬನವಾಸಿ ದೇಶದಲ್ಲಿ ಎಲ್ಲೆಲ್ಲೂ ಸೊಗಸಾದ ಮಾವಿನ ಮರವೇ, ಚಿಗುರಿದ ಎಲೆಯ ಬಳ್ಳಿಯೇ, ಹೂ ಬಿಟ್ಟ ಜಾಜಿ ಸಂಪಗೆಯೇ, ಕೂಗುತ್ತಿರುವ ಕೋಗಿಲೆಯೇ, ಹಾಡುವ ದುಂಬಿಯೇ, ನಲ್ಲರ ಸುಂದರವಾದ ಮುಖದಲ್ಲಿ ನಗುಮೊಗವಿಟ್ಟು ಮುತ್ತಿಟ್ಟು ಕೊಡುವ ನಲ್ಮೆಯೇ ಎಲ್ಲಿ ಯಾವ ಬೆಟ್ಟಗಳಲ್ಲಿ ನೋಡಿದರೂ, ಯಾವ ನಂದನವನಗಳಲ್ಲಿ ನೋಡಿದರೂ ಕಂಡುಬರುತ್ತಿತ್ತು.

ಈ ಪದ್ಯದಲ್ಲಿ ನಲ್ಲ, ನಗೆ, ನಂದನ, ವನ ಪದಗಳು ಸಂಸ್ಕೃತದ್ದಾಗಿವೆ. ಪಂಪ ಕವಿಯಲ್ಲಿ ಇನ್ನೂ ಅನೇಕ ಪ್ರಕೃತಿಯ ವರ್ಣನೆಗೆ ಸಂಬಂಧಿಸಿದ ಪ್ರಸಿದ್ದ ಪದ್ಯಗಳು ಅಚ್ಚಗನ್ನಡದಲ್ಲಿಯೇ ರಚನೆಯಾಗಿವೆ.

ಪೊನ್ನ ಮಹಾಕವಿಯ ಶಾಂತಿ ಪುರಾಣದಲ್ಲೂ ಪ್ರಕೃತಿಯ ಪದ್ಯಗಳು ಅಚ್ಚಗನ್ನಡಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಬಗ್ಗವಳ್ಳಿಯ ಬಳ್ಳಿಗಾವಣದೋಳಿಯಿಂ ಸೊಗಯಿಪ್ಪ ಸ
ಮ್ಯಗ್ಗವಾಕ್ಷದ ವಂಕದಾರದ ಕೇತಕಿರ್ಗಯಿನೊಂದಿನಿಂ
ದಗ್ಗಳಿಕ್ಕೆಯ ನೀಟ್ಟು ನೀಳ್ದ ನಿವೇಶದೊಳ್ ಮದನಂ ಮನ
ಕ್ಕೆಗ್ಗು ಪೊರ್ದದ ರೂಪಿನೊಳ್ ನೆಲಸಿರ್ಪವೋಲ್ ಸುಖಿಮಿರ್ಪಿನಂ[೪೮]

ಖೇಚರರಾಜನ ಅರಮನೆಯ ವರ್ಣನಾ ವಿಲಾಸ ಈ ಪದ್ಯದಲ್ಲಿದೆ ಬಳ್ಳಿ ಮಂಟಪಗಳ ಸಾಲುಗಳಿಂದ ಸುಂದರವಾದ ಕಿಟಕಿ, ಬಾಗಿಲುಗಳಿಂದ ಕೂಡಿದ ವಿಸ್ತಾರವಾದ ತನ್ನ ನಿವಾಸದಲ್ಲಿ ಮನ್ಮಥನಂತೆ ಆನಂದದಿಂದ ನೆಲೆಸಿದ್ದನು.

ಈ ಮೇಲಿನ ಪದ್ಯದಲ್ಲಿ ಸಮ್ಯಗವಾಕ್ಷ, ಮದನ, ಮನ, ರೂಪು, ಸುಖ ಎಂಬ ಸಂಸ್ಕೃತ ಪದಗಳು ಬಳಕೆಯಾಗಿವೆ.

ವನರುಹಮೆಡ್ಡಮಪ್ಪ ಮೊಗಮಾದ ತಳಿರ್‌ತಳಮಾದ ಕೋಕಿಳ
ಧ್ವನಿ ಸರಮಾದ ಪಣ್ಣಡಕೆ ಬಾಯ್ದರೆಯಾದೆಳವಳ್ಳಿಯೇಟ್ಗೆ ನೂ
ತನ ತನುವಾದ ಮಲ್ಲಿಗೆಯ ತುಂಬಿಯ ಕೂಟದು ನೋಟಮಾದ ನಂ
ದನವನ ಲಕ್ಷ್ಮಿ ಕಣ್ಗೆಸೆದು ತನ್ನನೆ ನೋಡಿಸಿದಳ್ ತದಾರ್ಯದಿಂ[೪೯]

ತಾವರೆಯಂತೆ ಸುಂದರವಾದ ಮುಖ, ಚಿಗುರೆಲೆಯೇ ಕೈಗಳು, ಕೋಗಿಲೆಗಳ ಕುಕಿಲೇ ಧ್ವನಿ, ಹಣ್ಣಡಕೆಯೇ ತುಟಿ, ಕೋಮಲವಾದ ಏಲಾಲತೆಯೇ ದೇಹ, ದುಂಬಿಗಳಿಂದ ಕೂಡಿದ ಮಲ್ಲಿಗೆಯೇ ಅವಳ ಕಣ್ಣುಗಳು ಹೀಗೆ ಮೈದಾಳಿದ ನಂದನವನದ ಲಕ್ಷ್ಮಿಯು ಕಂಗೊಳಿಸಿದಳು.

ಧ್ವನಿ, ನೂತನ, ತನು, ನೋಟ, ನಂದನವನ, ಲಕ್ಷ್ಮಿ ಪದ್ಯಗಳು ಸಂಸ್ಕೃತದಾಗಿದ್ದು ಉಳಿದಂತೆ ಅಚ್ಚಗನ್ನಡ ಪದಗಳೇ ಅಧಿಕವಾಗಿವೆ.

ಬಗೆಗೊಳ್ವ ಭದ್ರಶಾಲಂ
ಸೊಗಯಿಪ ನಂದನದ ಮಿಸುಪ ಸೌಮನಸದ ಮೇ
ಗೊಗೆದುಜ್ವಲ ಪಾಂಡುಕವನ
ದ ಗಾಡಿಯಂ ಕನಕನಗಮದೇನೋಪ್ಪಿದುದೋ[೫೦]

ಭದ್ರಶಾಲ, ನಂದನ, ಉಜ್ವಲ, ಪಾಂಡು ಕವನ, ಕನಕ ಸಂಸ್ಕೃತ ಪದಗಳು ಬಳಕೆಯಾಗಿವೆ.

ಸೊಗಸಾಗಿರುವ ಉಪ್ಪರಿಗೆಯ ಹಾಗೆ ಸುಂದರವಾದ ನಂದನವನದಲ್ಲಿ ಹೊಳೆಯುವ ಉಜ್ವಲವಾದ ಪಾಂಡು ಕವನದ ಸೌಂದರ್ಯದಿಂದ ಕನಕ ವರ್ಪತವು ವಿಶೇಷವಾಗಿ ಕಂಗೊಳಿಸುತ್ತಿತ್ತು.

ಪಪ್ಪಲದಲರ್ಗಣ್ ಸಂಬಳ
ಮಪ್ಪಿನಮುಪವನಕೆ ನಿಚ್ಚವಯಣಂ ಬರುತು
ಪಪ್ಪಕಮಾಗಿರೆ ಪಱಿಮೆಗ
ಳುಪ್ಪಯಣಂಗೆಯ್ದುವಂದು ಪೊಸಮಲ್ಲಿಗೆಯೊಳ್[೫೧]

ಪಪ್ಪಲದ ಚಿಗುರು ಆಹಾರವಾಗುವವರೆಗೆ ನಿತ್ಯವೂ ನಂದನ ವನಕ್ಕೆ ದುಂಬಿಗಳು ಬರುತ್ತವೆ. ಹಾಗೆ ಬಂದು ಬೇಟೆಯಾಡುವಂತೆ ಹೊಸ ಮಲ್ಲಿಗೆಯ ಕಡೆ ಹೋಗುತ್ತವೆ.

ಈ ಪದ್ಯ ಸಂಪೂರ್ಣವಾಗಿ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಹಾಗೆಯೇ ಜನ್ನನ ಅನಂತನಾಥ ಪುರಾಣದಲ್ಲೂ ಪ್ರಕೃತಿ ವರ್ಣನೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಎಳಲತೆಯೆಂಬ ನಚ್ಚಣಿಯನಾಡಿಸಿ ತುಂಬಿಗಳೆಂಬ ಗಾಯಕಾ
ವಳಿಯನಲಂಪಿನಿಂ ತಗುಳೆ ಪಾಡಿಸಿ ಕೂಡೆ ಬಟಿಲ್ದು ನೋಟ್ಪ ಪೆ
ಣ್ಗಳ ಮುಗುಳ್ಗಣ್ಗಳಂ ಬಯಸಿ ಬೇಡಿಸಿ ರಾಜಕುಮಾರಲೀಲೆಯಂ
ತಳೆವುದು ತತ್ಪುರೋಪವನ ವೀಥಿಯೊಳಾಡುವ ಮಂದಮಾರುತಂ[೯೨]

ಎಳಲತೆಂವೆಂಬ ನರ್ತಕಿಯನ್ನಾಡಿಸಿ ತುಂಬಿಗಳೆಂಬ ಗಾಯಕರನ್ನು ಜತೆಯಲ್ಲಿ ಹಾಡಿಸಿ ಆಗ ಆಸೆಯಿಂದ ನೋಡುವ ಹೆಂಗಸರ ಮುಗುಳ ಕಣ್ಣುಗಳನ್ನು ಬಯಸಿ, ಅವರನ್ನು ಬೇಡಿಸಿ ರಾಜಕುಮಾರನಂತೆ ಆ ಉಪವನದ ಬೀದಿಗಳಲ್ಲಿ ಬೀಸುವ ಮಂದಮಾರುತವು ಲೀಲೆಯಿಂದಿರುವುದು.

ಎಳಲತೆ, ಗಾಯಕ, ರಾಜಕುಮಾರಲೀಲೆಯಂ, ತತ್ಪುರೋಪವನ, ವೀಧಿ, ಮಂದಮಾರುತಂ ಸಂಸ್ಕೃತ ಪದಗಳು ಬಳಕೆಯಾಗಿವೆ.

ಪಳುಕಿನ ಪಸೆಯೊಳ್ ಕಪ್ಪುರ
ವಳುಕಿನ ಪುತ್ತಳಿಯನಿಟುಪಿದಂತೆ ಮೊಟಂ ಮೂ
ಱಳತೆಯ ತನುರುಚಿ ಕಂಪಿನ
ಪೊಳಲಿನ ಕೌಮುದಿಯನೇಂ ಕಡಲ್ವರಿಯಿಪುದೋ[೯೩]

ಸ್ಫಟಿಕದ ಮಂಚದಲ್ಲಿ ಕರ್ಪೂರದ ಬಳುಕಿನ ಬೊಂಬೆಯನ್ನಿರಿಸಿದಂತೆ ಮೂರು ಮೊಳ ಅಳತೆಯ ದೇಹ ಕಾಂತಿಯು ಪರಿಮಳ ಸೂಸುವ, ಹೊಳೆಯುವ ಕೌಮುದಿಯನ್ನು ಎಷ್ಟೊಂದು ಬೆಳಗಿವುದೋ?

ಪುತ್ತಳಿ, ತನುರುಚಿ, ಕೌಮುದಿಯೆಂಬ ಸಂಸ್ಕೃತ ಪದಗಳು ಬಳಕೆಯಾಗಿವೆ.

ಶೋಕವರ್ಣನೆ

ಪ್ರಾಚೀನ ಕನ್ನಡ ಕಾವ್ಯದಲ್ಲಿ ಶೋಕರಸಕ್ಕೆ ಸಂಬಂಧಿಸಿದ ಹಾಗೆ ಅಚ್ಚಗನ್ನಡ ರಚನೆಗಳು ಕಂಡುಬರುತ್ತವೆ. ಪಂಪ ಮಹಾಕವಿಯ ಈ ಕೆಳಗಿನ ಪದ್ಯಗಳನ್ನು ಗಮನಿಸಬಹುದು.

ಎನಗಿಂದಿನೊಂದು ಸೂಟುಮ
ನಿನಿಯಂ ದಯೆಗೆಯ್ದನೆನ್ನ ಸೂಟಂ ನಿನಗಾ
ನೆನಿತಾದೊಡಮೊವನೆ ಮ
ತ್ತನಯರ್ ಕೆಯ್ಯೊಡೆ ಪಲುಂಬದಿರ್ ಪೆಱಪೆಱವಂ[೯೪]

ಮಾದ್ರಿಯ ಸಹಗಮನದ ದೃಶ್ಯ. ಪಾಂಡುವಿನ ಮರಣದ ನಂತರ ಮಾದ್ರಿಯ ಮಕ್ಕಳನ್ನು ಕುಂತಿಗೆ ಒಪ್ಪಿಸಿ ಅಗ್ನಿ ಪ್ರವೇಶ ಮಾಡುತ್ತಾಳೆ.

ಪದ್ಯದಲ್ಲಿ ಯಾವುದೇ ಸಂಸ್ಕೃತ ಪದ ಬಳಕೆಯಾಗಿಲ್ಲ.

ನಿಮ್ಮೀ ನಾಲ್ವರೊಳೊರ್ವರು

ಮಿಮ್ಮಿಡುಕಲ್ವೇಡ ಮಕ್ಕಳೊಳರೆನಗಯ್ವರ್

ತಮ್ಮೊಳಗೆಸೆವಯ್ವರೊಳಂ

ನಾಮ್ಮಾಣದೆ ಬಕನ ಬಾರಿಗೊರ್ವನನೀವೆಂ[೫೫]

ಬ್ರಾಹ್ಮಣ ಕುಟುಂಬ ಒಂದರ ಶೋಕ ವರ್ಣನೆಯ ಪದ್ಯವಿದು. ಹಿಡಿಂಬನಿಗೆ ಬಲಿಯಾಗುವ ಮಗನನ್ನು ಕಂಡು ದಂಪತಿಗಳು, ಸಹೋದರಿಯು ದುಃಖದಿಂದ ಅಳುತ್ತಿರುವುದನ್ನು ಕಂಡು ಕುಂತಿಯು ನನಗೆ ಐವರು ಮಕ್ಕಳು ಅದರಲ್ಲಿ ಒಬ್ಬನನ್ನು ಬಕನಲ್ಲಿಗೆ ಕಳುಹಿಸುತ್ತೇನೆ. ನೀವು ನಿಶ್ಚಿಂತೆಯಿಂದಿರಿ.

ಈ ಪದ್ಯದಲ್ಲಿ 'ಬಕ' ಪದವೊಂದನ್ನು ಹೊರತು ಪಡಿಸಿದರೆ ಉಳಿದಂತೆ ಅಚ್ಚಗನ್ನಡ ರಚನೆಯೇ ಆಗಿದೆ.

ಅಱಿ ಮರುಳಂತುಟೆ ಸೊರ್ಕಿನ

ತೆಱದಂತುಟೆ ಮನಮೊಱಲ್ಬುದೆರ್ದೆಯುರಿವುದು ಮೆ

ಯೆಱಗುವುದು ಪದವುದಾನಿದ

ನಱಿಯೆನಿದೇಕೆಂದು ಕನ್ನೆ ತಳಿವೆಳಗಾದಳ್[೫೬]

ಅರಿಕೇಸರಿಯ ಚೆಲುವಿಗೆ ಮನಸೋತ ಸುಭದ್ರೆಯ ಮನಸ್ಸು ಚಂಚಲಗೊಳ್ಳುವುದನ್ನು, ಮನದಲ್ಲಿ ಪ್ರೀತಿಯುಂಟಾಗವುದನ್ನು ಕಂಡು ಭ್ರಾಂತಳಾದಳು.

ಈ ಪದ್ಯ ಪೂರ್ಣ ಪ್ರಮಾಣದಲ್ಲಿ ಅಚ್ಚಗನ್ನಡ ರಚನೆಯೇ ಆಗಿದೆ.

ರನ್ನನ ಗದಾಯುದ್ಧದಲ್ಲಿಯೂ ಶೋಕರಸಕ್ಕೆ ಸಂಬಂಧಿಸಿದ ಪದಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಆನುಂ ದುಶ್ಶಾಸನಮಂ

ನೀನುಂ ಮೂವರೆ ದಲಾತನುಂ ಕಟಿದ ಬಟಿ

ಕ್ಕಾನುಂ ನೀನೆ ದಲೀಗಳ್

ನೀನುಮಗಲ್ದೆತ್ತವೋದೆಯಂಗಾಧಿಪತೀ[೫೭]

ಈ ಕೆಳಗಿನ ಪದ್ಯಗಳನ್ನು ಹಳೆಗನ್ನಡ ಸಾಹಿತ್ಯದಲ್ಲಿಯೇ ಶೋಕರಸಕ್ಕೆ ಪ್ರಸಿದ್ಧವಾದ ಪದ್ಯಗಳೆಂದು ಗುರುತಿಸಲಾಗಿದೆ. ಕರ್ಣನ ಶವದ ಮುಂದೆ ದುರ್ಯೋಧನನ ಪ್ರಲಾಪವನ್ನು ವಿವರಿಸುವ ಪದ್ಯವಿದು. ದುಶ್ಶಾಸನದ ಮರಣದ ನಂತರ ನಾನು ನೀನು ಇಬ್ಬರೇ ಉಳಿದಿದ್ದು ಈಗ ನೀನೂ ನಮ್ಮನ್ನು ಅಗಲಿ ಎಲ್ಲಿಗೆ ಹೋದೆ.

ಈ ಪದ್ಯದಲ್ಲಿ ದುಶ್ಯಾಸನ, ದೂತ, ಅಂಗಾಧಿಪತಿ ಸಂಸ್ಕೃತ ಪದಗಳನ್ನು ಬಿಟ್ಟರೆ ಉಳಿದಂತೆ ಅಚ್ಚಗನ್ನಡ ಪದಗಳೇ ಹೆಚ್ಚಾಗಿ ಬಳಕೆಯಾಗಿವೆ.

ಪೞಿಯಂ ಕೇಳ್ದೆನೊ ಮೇಣ್ಣಡೆ

ವೞಿಯಂ ತಪ್ಪಿದೆನೊ ಕಾಣೆ ನಣ್ಮೆಂದಂ ಕೂ

ರ್ತೞಿದಿವರಂ ಪಗೆದನೊ ಪ

ಚ್ಚಟಿದೆನೊ ಪೇೞ್ ಕೂಡಿ ನಿನ್ನೊಳಂಗಾಧಿಪತೀ[೫೮]

ಕರ್ಣನ ಶವದ ಮುಂದೆ ದುರ್ಯೋಧನನು ಅವನನ್ನು ಸಂಬೋಧಿಸಿ ಹೀಗೆ ಹೇಳುತ್ತಾನೆ. ಲೋಕವೆಲ್ಲ ನಿನ್ನನ್ನು ದೂಷಿಸಿದರೂ ನಾನು ಮಾತ್ರ ನಿನ್ನನ್ನು ಪ್ರೀತಿಸಿದೆ, ಆಶ್ರಯ ನೀಡಿದೆ. ನನ್ನ ಮೇಲಿನ ನನ್ನನ್ನು ಪ್ರೀತಿ ಗೌರವದಿಂದ ನೀನು ಯುದ್ಧರಂಗದಲ್ಲಿ ವೀರಾವೇಶದಿಂದ ಹೋರಾಡಿದೆ. ಆದರೆ ಇಂದು ಮಾತ್ರ ಯಾಕೆ ಮೌನವಾಗಿರುವೆ ಎಂದು ರೋಧಿಸುತ್ತಾನೆ.

ಈ ಪದ್ಯದಲ್ಲಿ ಅಂಗಾಧಿಪತಿ ಸಂಸ್ಕೃತ ಪದವನ್ನು ಹೊರತು ಪಡಿಸಿದರೆ ಉಳಿದಂತೆ ಅಚ್ಚಗನ್ನಡದಲ್ಲಿಯೇ ಪೂರ್ಣ ಪ್ರಮಾಣದ ಪದ್ಯ ರಚನೆಯಾಗಿದೆ.

ಅಱಿಯೆನಿದಂ ನಿನ್ನಿಂದಿನ

ತೆಱನಂ ನೀನೆನಗದೇಕೆ ಮುಳಿದಿರ್ಪೆಯೊ ಮೇಣ್

ಮಱುವಾತುಗುಡದೆ ರವಿಸುತ

ಮಱಿಸುಂದಿರ್ದಪೆಯೊ ಮೇಣ್ಬಱಲ್ದಿರ್ದಪೆಯೋ[೫೯]

ದೀರ್ಘ ಹೋರಾಟದಿಂದ ಆಯಾಸಗೊಂಡಿರುವೆಯಾ, ಅದಕ್ಕಾಗಿ ಈ ಗಾಢ ನಿದ್ರೆಯಲ್ಲಿರುವಂತಿದೆ. ಈ ನಿನ್ನ ರೀತಿ ಇಂದು ವಿಚಿತ್ರವಾಗಿದೆ. ನನ್ನ ಮೇಲಿನ ಈ ಬಿಸಿ ಕೋಪವನ್ನು ತೊಡೆದು ಹಾಕಿ ಬೇಗನೇ ನನ್ನ ಪ್ರಶ್ನೆಗಳಿಗೆ ಉತ್ತರ ನೀಕೊಡು.

ಈ ಪದ್ಯದಲ್ಲಿ ಕವಿಸುವ ಪದವೊಂದನ್ನು ಬಿಟ್ಟರೆ ಉಳಿದಂತೆ ಅಚ್ಚಗನ್ನಡ ರಚನೆಯಿಂದ ಕೂಡಿದೆ.

ಕವಿಕಾವ್ಯ ಪ್ರಶಂಸೆ

ಪ್ರಾಚೀನ ಕನ್ನಡ ಕಾವ್ಯದಲ್ಲಿ ಕವಿಕಾವ್ಯ ಪ್ರಶಂಸೆಯ ಸಂದರ್ಭದಲ್ಲೂ ಅಚ್ಚಗನ್ನಡ ರಚನೆಗಳು ಬಳಕೆಯಾಗಿರುವುದನ್ನು ಕಾಣಬಹುದು. ಪಂಪಭಾರತದ ಈ ಕೆಳಗಿನ ಪದ್ಯಗಳನ್ನು ನೋಡಬಹುದು.

ಇದೇ ರೀತಿ ಪೊನ್ನ ಕವಿಯ ಶಾಂತಿಪುರಾಣದಲ್ಲೂ ಕವಿ ಕಾವ್ಯ ಪ್ರಶಂಸೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಕನ್ನಡಗವಿತೆಯೊಳಸಗಂ

ಗನ್ನೊರ್ಮಡಿರೇಖೆಗಗ್ಗಳಂ ಸಕ್ಕದದೊಳ್

ಮುನ್ನುಳ್ಳ ಕಾಳಿದಾಸಂ

ಗನ್ನಾಲ್ಪಡಿ ರಚನೆಯೊಳ್ ಕುರುಳ್ಗಳ ಸವಣಂ[೧೦]

ಪೊನ್ನನ ಕವಿಯ ಪ್ರಶಂಸೆಯ ಪದ್ಯವಿದು. ಆತನಿಗು ಕುರುಳ್ಗಳ ಅವಣ ಎಂಬ ಬಿರುದು ಗಳಿಸಿದವನು. ಕನ್ನಡದ ಅಸಗ ಕವಿಗಿಂತಲೂ, ಸಂಸ್ಕೃತದ ಕಾಳಿದಾಸನಿಗಿಂತಲೂ ಪೊನ್ನನ ಸಾಹಿತ್ಯ ರಚನೆ ಶ್ರೇಷ್ಠವಾದುದು. ಅವರಿಗಿಂತ ನಾಲ್ಕುಪಟ್ಟು ಮಿಗಿಲಾದುದು.

ರೇಖೆ, ಕಾಳಿದಾ, ರಚನೆ ಎಂಬ ಸಂಸ್ಕೃತ ಪದಗಳನ್ನು ಹೊರತು ಪಡಿಸಿದರೆ ಉಳಿದಂತೆ ಅಚ್ಚಗನ್ನಡ ರಚನೆಯೇ ಕಂಡುಬರುತ್ತದೆ.

ಎರೆದೆಡೆವರ್ಪವನುಂ ಮ

ಚ್ಚರಿಸುವನುಂ ನುಡಿಗೆ ಸಕ್ಕದಂ ಕನ್ನಡಮಂ

ಬೆರಡುಂ ಕವಿತೆಯ ಬಲ್ಮೆಗೆ

ಬೆರಲೆತ್ತಿದನಿಳೆಯೊಳೀಕುರುಳ್ಗಳಸವಣಂ[೧೧]

ಯಾಚಿಸಿ ಬಳಿಗೆ ಬರುವವನೇ ಆಗಲಿ, ಮತ್ಸರ ಪಡುವವನೇ ಆಗಲಿ ಬಂದು ಮಾತಾಡಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಕವಿತ್ವಕ್ಕೆ ತಾನೇ ಮೇಲೆಂದು ಕುರುಳ್ಗಳ ಸವಣನಾದ ಪೊನ್ನನು ಬೆರಳೆತ್ತಿ ಹೇಳುವುದು.

ಈ ಪದ್ಯ ಸಂಪೂರ್ಣವಾಗಿ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಜಸಮಡಿಗಿಡೆ ಪೆಱರಿಂ ಪೇ

ೞಿಸಿದ ಪೆಸರ್ ಪೆಱರದೆನಿಸಿ ಪೆಱರಿಂದಂ ಸೋ

ದಿಸದ ಪೞಂಗಿನಿಸೆಡೆಗುಡ

ದಸಹಾಯಕವೀಶ್ವರಂ ಕುರುಳ್ಗಳ ಸವಣಂ[೧೨]

ತನ್ನಯಶಸ್ಸಿಗೆ ಕುಂದು ಬರುವಂತೆ ಹೆರವರಿಂದ ಹೇಳಿಸದ, ಬೇರೆಯವರದೆಂದು ಹೆಸರಿಸಲಾಗದ, ಬೇರೆಯವರಿಂದ ತಿದ್ದಿಸದ, ಇತರರಿಗೆ ಎಳಷ್ಟೂ ಅವಕಾಶವೀಯದ ಅಸಹಾಯಕ ವೀರನು ಕುರುಳ್ಗಳ ಸವಣ

ಈ ಪದ್ಯದಲ್ಲಿ ಅಸಹಾಯಕ ಕವೀಶ್ವರ ಪದವೊಂದನ್ನು ಬಿಟ್ಟರೆ ಉಳಿದಂತೆ ಪೂರ್ಣವಾಗಿ ಅಚ್ಚಗನ್ನಡ ಪದಗಳೇ ಕಂಡುಬರುತ್ತವೆ.

ಎಸೆಯದೆ ಪೊಟ್ಟು ಕೆಟ್ಟ ಪಟಿಗಬ್ಬಮನಾವಗಮೆಮ್ಮವೆಂದು ಬಾ
ಚಿಸಿ ಪೆಱರ್ಗಿತ್ತುದಲ್ಲದೆ ಬಹುಶ್ರುತಮೆಂಬಿನಮೆಕ್ಕ ಲಾವಣಂ
ಪೊಸಯಿಪ ಕಮ್ಮಯಿಪ್ಪ ಸಮಕಟ್ಟುವ ಬಿನ್ನಣಮಿಲ್ಲದಕ್ಕೆ ರಂ
ಜಿಸುವೆರ್ದೆಗೊಳ್ಳದೀಗಡಿನ ಕಬ್ಬಿಗವಂದಿಗಳೊಂದವಿಂದಿಗಳ್[೬೩]

ಶೋಭಿಯಿಲ್ಲದಂತೆರಚಿಸಿ ಕೆಟ್ಟ ಹಳೆಯ ಕಾವ್ಯಗಳನ್ನು ತಮ್ಮವೆಂದು ಓದಿ ಬೇರಯವರಿಗೆ ಕೊಡುವರಲ್ಲದೆ ಬಹುಳುತತ್ವ ಆಗಲಿ, ಹೊಸತನವನ್ನು ಹೇಳದ, ರಂಜಿಸುವ ಗುಣವಿಲ್ಲದ, ಬಂಧದ ಬಿಗಿಯಿಲ್ಲದ ಕವಿತೆಯನ್ನು ತಮ್ಮದೆಂದು ಓದುವವರು ಕವಿಗಳೇ ಅಲ್ಲ.

ಬಹುಶ್ರುತ, ಲಾವಣ ಎಂಬೆರಡು ಸಂಸ್ಕೃತ ಪದಗಳು ಮಾತ್ರ ಬಳಕೆಯಾಗಿವೆ.

ರನ್ನನ ಅಜಿತ ತೀರ್ಥಕ ಪುರಾಣದಲ್ಲೂ ಕವಿಕಾವ್ಯ ಪ್ರಶಂಸೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿವೆ.

ನೆಗಟ್ದ ಕವಿರತ್ನನಂತೊಳ
ಪುಗುವುದು ಮೊಗ್ಗಾಯ್ತೆ ಜಿನಮತಾಂ ಬೋಧಿಯುಮಂ
ಪುಗದಾಗಮಮಱಿವರ ಬಗೆ
ವುಗದೆ ಕೆಲರ್ ಕವಿಗಳಾಡಿದರ್ ತಡಿತಡಿಯೊಳ್[೬೪]

ಶ್ರೇಷ್ಠನಾದ ಕವಿ ರತ್ನದಂತಿರುವ ರನ್ನನ ಹಾಗೆ ಜೈನ ಧರ್ಮವೆಂಬ ಮಹಾಸಮುದ್ರಕ್ಕೆ ಇಳಿಯಲು ಎಲ್ಲರಿಗೂ ಸಾಧ್ಯವೇ? ತಿಳಿದವರು ಹೀಗೆಂದು ಹೇಳಿದರೂ ಕೂಡ ಪ್ರಯತ್ನಿಸಿದ ಕೆಲವರು ಇನ್ನೂ ದಡದಲ್ಲಿಯೇ ಉಳಿದಿದ್ದಾರೆ.

ಈ ಪದ್ಯದಲ್ಲಿ ಕವಿರತ್ನ, ಜಿನಮತಾಂಬೋಧಿ, ಕವಿ ಮೊದಲಾದ ಸಂಸ್ಕೃತ ಪದಗಳಿವೆ.

ಕವಿಕಾವ್ಯ ಪ್ರಶಂಸೆಯ ಪದ್ಯಗಳು

ಜನ್ನನ ಅನಂತನಾಥ ಪುರಾಣದ ಕವಿಕಾವ್ಯ ಪ್ರಶಂಸೆಯ ಪದ್ಯಗಳು ಕೆಳಗಿನಂತಿವೆ.

ಬರೆಯಲ್ಮೇಣ್ಮಚ್ಚರದಿಂ
ದರಿಯಲ್ ಮೇಣ್ಕಯ್ಗೆ ಪಲಗೆ ಬರೆ ಕಾವ್ಯಕಲಾ
ಪರಿಣತಿಯೊಳ್ ಖಟ್ಗಿಕಳಾ
ಪರಿಣತೆಯೊಳ್ ಭಾಳನೇತ್ರನೆನಪಂ ಜನ್ನಂ[೬೫]

ಬರೆಯಲು ಮತ್ತು ಮತ್ಸರದಿಂದ ಕೊಲ್ಲಲು ಹಾಗೂ ಕೈಗೆ (ಬರೆಯುವ) ಹಲಗೆ ಬಂತೆಂದಾದರೆ ಕಾವ್ಯ ಕಲೆಯಲ್ಲಿ ಮತ್ತು ಕದನದಲ್ಲಿ ಜನ್ನನು ಶಿವನಿಗೆ ಸಮನಾದವನೇ ಸರಿ.

ಇದರಲ್ಲಿ ಕಾವ್ಯಕಲಾಪರಿಣತಿ, ಭಾಳನೇತ್ರ ಎಂಬ ಸಂಸ್ಕೃತ ಪದಗಳು ಮಾತ್ರವೆ ಬಳಕೆಯಾಗಿವೆ.

ತರುಣಿಯರ ಕುರುಳನಿಟಿಪಲ್

ಬೆರಲಂ ಕೊಳಲುರದ ಮೇಲೆ ಪೆಸರಕ್ಕರಮಂ

ಬರೆಯಲ್ಕಲ್ಲದೆ ಸಮಯಂ

ನೆರೆಯಲ್ಕಲ್ಲೆನಿಪ ಸೊಬಗಿನಭಿನವಮದನಂ[೬೬]

ತನ್ನ ಬೆರಳನ್ನು ತರುಣಿಯರ ಮುಂಗುರುಳನ್ನು ಸರಿಪಡಿಸುವ ಮತ್ತು ಅವರ ಎದೆಯ ಮೇಲೆ ತನ್ನ ಹೆಸರಿನ ಅಕ್ಷರವನ್ನು ಬರೆಯುವ ಸಮಯದಲಲ್ಲದೆ ವ್ಯರ್ಥಮಾಡುವನಲ್ಲ ಎಂದು ಪಂಥದವನು, ಈ ಅಭಿನವ ಮನ್ಮಥವಾದ ಜನ್ನ ಕವಿ.

ಈ ಪದ್ಯದಲ್ಲಿ ತರುಣಿ, ಸಮಯ, ಅಭಿನವ ಪದಗಳನ್ನು ಹೊರತು ಪಡಿಸಿದರೆ ಉಳಿದಂತೆ ಅಚ್ಚಗನ್ನಡ ಪದಗಳೇ ಅಧಿಕವಾಗಿವೆ.

ಪೆಱವುಳವುಳ್ಳ ವಿಲ್ಲಿಯೊಳವಾಗಮಭಾಷೆಗಳಲ್ಲಿಯುಳ್ಳವಂ

ಪೆಱವುಳಿ ಕಾಣಲಾಗದೆನೆ ಪಂಪನ ಪೊನ್ನನ ಪೆಟ್ಟಿ ಶಬ್ದದೊಳ್

ನೆಱೆಯೆ ಪರಿಸ್ಫುಟಂ ನೆಱೆಯದಿರ್ದುದುಮಲ ನುಡಿದೆಯ್ದೆ ಬಲ್ಮೆ ಕ

ಣ್ದೆಱೆಯೆ ನೆಗೞ್ಚಿದಂ ಕವಿಚತುರ್ಮುಖನಾಗಮವೇದಿಯಪ್ಪುದಂ[೬೭]

ಬೇರೆಯವರ ಕಾವ್ಯಗಳಲ್ಲಿ ಇರುವವು ಇಲ್ಲಿರಲಾರವು. ಪಂಪನ, ಪೊನ್ನರು ಹೇಳಿದ ಕಾವ್ಯಗಳಲ್ಲಿರುವವು ಯಾವಗಲೂ ಬೇರೆಯವರ ಕಾವ್ಯಗಳಲ್ಲಿರುವವೇ. ಅವರ ಕಾವ್ಯಗಳೊಂದಿಗೆ ಸಂಬಂಧವಿರಿಸಿ ಕೊಂಡಾಗಲಷ್ಟೆ ಅವು ಪರಿಪೂರ್ಣವೆನ್ನುವರು. ರನ್ನನ್ನೂ ಕೂಡ ಬೇರೆಯವರು ಹೇಳಿದಿದ್ದುದನ್ನೇ ಹೇಳಿ ಕವಿಚತುರ್ಮುಖನೆನಿಸಿದನು.

ಪಂಪನ, ಪೊನ್ನನ ಕಾವ್ಯದಲ್ಲಿ ಇರುವಂಥವು ಬೇರೆಯವರ ಕಾವ್ಯದಲ್ಲಿರಲು ಹೇಗೆ ಸಾಧ್ಯವಿಲ್ಲವೋ ಅಂತೆಯೇ ಕವಿ ಚತುರ್ಮುಖನಾದ ರನ್ನನ ಕಾವ್ಯದಲ್ಲಿಯೂ ಕೂಡ ಹೇಳಿರುವುದೆಲ್ಲೂ ಸ್ವತಂತ್ರವಾದವುಗಳೇ ಆಗಿವೆ.

ಈ ಪದ್ಯದಲ್ಲಿ ಆಗಮಭಾಷೆ, ಪರಿಸ್ಫುಟ, ಕವಿಚತುರ್ಮುಖ ಸಂಸ್ಕೃತ ಪದಗಳು ಬಳಕೆಯಾಗಿವೆ.

ಅಱಕೆಯ ಗಟ್ಟಗೆಯುಂ ಪೆ

ರ್ದೊಱೆಯುಂ ಪರಿವಲ್ಲಿ ತದ್ದವಾಡಿಗೆ ತೆಂಕಲ್

ತೊಱಗಲೆಗೆ ಬಡಗಲಿರ್ದುದು

ನೆಱೆಯೆ ಸುಖೋದ್ದೀಪಮೆನಿಸಿ ಬೆಳುಗಲಿ ದೇಶಂ[೬೮]

ಘಟಪ್ರಭಾ ಮತ್ತು ಕೃಷ್ಣಾನದಿಯೂ ಹರಿಯುವಲ್ಲಿ ತದ್ದವಾಡಿಗೆ ದಕ್ಷಿಣಕ್ಕೂ ಮತ್ತು ತೊರಗಲಿಗೆ ಉತ್ತರಕ್ಕೂ ಬೆಳುಗಲಿ ದೇಶವಿದೆ.

ಈ ಪದ್ಯದಲ್ಲಿ ಸುಖೋದ್ದೀಪನ ಎನ್ನುವ ಒಂದೇ ಸಂಸ್ಕೃತ ಪದ ಬಳಕೆಯಾಗಿದೆ.

ಇದೇ ರೀತಿ ಜನ್ನನ ಅನಂತನಾಥ ಪುರಾಣದಲ್ಲೂ ಕವಿಕಾವ್ಯ ಪ್ರಶಂಸೆಯ ಪದ್ಯಗಳು ಕಂಡುಬರುತ್ತವೆ.

ಎನಿತನೊಜಿಲ್ದು ಪೇೞ್ದು ಕವಿಯೇವನದಂ ಪೆಸರಿಟ್ಟು ಮೆಚ್ಚ ಬ

ಲ್ಲ ನನಱಸಲ್ಕೆವೇೞ್ಪುದವನಂ ಜಗದೊಳ್ಪಡೆಯಲ್ಕೆ ಬಾರದಾ

ತನ ಮುಖದಿಂದಮಲ್ಲದದು ಸಲ್ಲದು ಕಟ್ಟಿಯುಮೇನೋ ಮಾಲೆಗಾ

ಱನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೆ[೬]

ಏನೆಲ್ಲವನ್ನೂ ಕವಿಯು ಹೇಳಿದರೇನಂತೆ? ಅದನ್ನು ಗುರುತಿಸಿ ಮೆಚ್ಚುವಂತವನನ್ನು ಅರಸಿಕೊಂಡು ಹೋಗಬೇಕಾಗುತ್ತದೆ. ಅಂತಹವನನ್ನು ಜಗತ್ತಿನಲ್ಲಿ ಕಾಣುವುದೇ ಕಷ್ಟಸಾಧ್ಯ. ಆತನಿಂದ ಹೊಗಳಿಸಿಕೊಳ್ಳದಿದ್ದರೆ ಅದು ವ್ಯರ್ಥ. ಏಕೆಂದರೆ ಮಾಲಗಾರನೇನೂ ಹೊಸ ಹೂ ಮಾಲೆಯನ್ನು ಕಟ್ಟಬಹುದು. ಆದರೆ ಮುಡಿಯುವವರಿಲ್ಲದೆ ಅದು ಬಾಡಿಹೋಗಲಾರದೇ?

ಈ ಪದ್ಯದಲ್ಲಿ ಕವಿ, ಜಗ, ಮುಖ, ಭೋಗಿ ಸಂಸ್ಕೃತ ಪದಗಳು ಬಳಕೆಯಾಗಿವೆ.

ನಿಂದನೆಯ ಪದ್ಯಗಳು

ನಿಂದನೆಯ ಸಂದರ್ಭದಲ್ಲೂ ಪ್ರಾಚೀನ ಮಾರ್ಗಕಾವ್ಯಗಳಲ್ಲಿ ಅಚ್ಚಗನ್ನಡ ರಚನೆ ಬಳಕೆಯಾಗಿರುವುದನ್ನು ಕಾಣಬಹುದು. ಪಂಪಭಾರತದ ಈ ಕೆಳಗಿನ ಪದ್ಯಗಳನ್ನು ನೋಡಬಹುದು.

ಸಿರಿಮೆಯ್ಯೊಳಗಂದಱಿವಿರೆ

ನೆರವಿಯೊಳಾರಱಿವರೊರ್ಮೆ ಕಂಡರನಱಿಯ

ಲ್ಕರಿದೆಮ್ಮಂ ಬಡ ಪಾರ್ವರ

ನರಸರೆ ನೀಮಿಗಳಱಿವಿರಱಿಯಿರೊ ಪೇೞಿಂ[೭]

ಸಿರಿಯ ಸೊಕ್ಕಿನಲ್ಲಿ ಅಂತು ಹೇಗೆ ಅರಿತೀರಿ, ಎಲ್ಲೋ ಒಮ್ಮೆ ಕಂಡವರನ್ನು ಜಂಗುಳಿಯಲ್ಲಿ ಯಾರು ತಾನೆ ಅರಿತಾರು, ಬಡ ಹಾರುವರಾದ ನಮ್ಮನ್ನು ಅರಿಯುವುದು ಅಸಾಧ್ಯವೇ ಅಲ್ಲವೇ? ಅರಸದೇ ನೀವೀಗ ಅರಿಯುಲ್ತೇ ಅಥವಾ ಅರಿಯರೋ ಹೇಳಿರಿ.

ದ್ರೋಣನು ದ್ರುಪದನನು ಮೂದಲಿಸಿ ಹೇಳುವ ನುಡಿಗಳಿವು. ಶ್ರೀಮಂತಿಕೆಯ ಮತ್ತಿನಲ್ಲಿದ್ದ ತಮಗೆ ಈ ಬ್ರಾಹ್ಮಣನು ಅಂದು ಕಣ್ಣಿಗೆ ಕಾಣಲಿಲ್ಲ, ಈಗ ನಾನು ನಿಮ್ಮ ಕಣ್ಣಿಗೆ ಕಾಣುತ್ತಿರುವೆನೇ ಎಂದು ವ್ಯಂಗ್ಯವಾಡುತ್ತಾನೆ.

ಈ ಪದ್ಯದಲ್ಲಿ ಯಾವುದೇ ಸಂಸ್ಕೃತ ಪದಗಳು ಬಳಕೆಯಾಗಿಲ್ಲ.

ಕುಲಮೆಂಬುದುಂಟೆ ಬೀರಮೆ

ಕುಲಮಲ್ಲದೆ ಕುಲಮನಿಂತು ಪಕ್ಕದಿರಂ ನೀ

ಮಾಲಿದೆಲ್ಲಿ ಪುಟ್ಟಿ ಬಳೆದಿರೊ

ಕುಲಮಿರ್ದುದೆ ಕೊಡದೊಳಂ ಶರಸ್ತಂಭದೊಳಂ[೮]

ಕುಲವೆಂಬುದುಂಟೇ? ವೀರತ್ವದೇ ಕುಲವಲ್ಲವೇ? ಕುಲವನ್ನು ಹೀಗೆ ಹಿಂಜದಿರಿ. ನೀವಾದರೂ ಎಲ್ಲಿ ಹುಟ್ಟಿದಿರಿ ಕುಲವು ಕೊಡದಲ್ಲಿಯೋ, ಜೊಂಡುಹುಲ್ಲಿನಲ್ಲೋ ಇತ್ರೇ?

ಈ ಪದ್ಯದಲ್ಲಿ ಶರಸ್ಥಂಭ ಪದಮಾತ್ರ ಸಂಸ್ಕೃತದ್ದಾಗಿದ್ದು ಉಳಿದಂತೆ ಅಚ್ಚಗನ್ನಡ ರಚನೆ ಹೊಂದಿದೆ.

ಮನದೊಳಲಂಪು ಪೂಣ್ಕೆ ನುಡಿದುಂ ನಡೆ ನೋಡಿಯುಮಾಟಪಾಟಮುಂ
ಬಿನದಮುಮಾರುಮಂ ಮಱೆಯಿಸುತ್ತಿರೆ ಬೀದಿಗಳೊಳ್ ವಿಳಾಸದೊ
ಡ್ಡನಿಸಿ ತೊಟಲ್ವ ಪಾಂಡವರ ಪೋಗಿನೊಳುಂತೆ ಬೆಡಂಗುಗೆಟ್ಟು ಹ
ಸ್ತಿನಪುರ (ಮಿಂ) ದು ರಕ್ಕಸನ ತಿಂದ ಪೊಟಲ್ಗೆಣೆಯಾಗದಿರ್ಕುಮೇ[೨೨]

ಮನದಲ್ಲಿ ಹೊಮ್ಮುವ ಪ್ರೀತಿ ನೋನೆಟ್ಟಟ ಆಟ, ಪಾಟ ವಿನೋದರಿಂದ ಎಲ್ಲರನ್ನು ಮೈಮರೆಸುವಂತೆ ಬೀದಿಗಳಲ್ಲಿ ಉಲ್ಲಾಸದಿಂದ ತಿರುಗಾಡುತ್ತಿದ್ದ ಪಾಂಡವರ ಹೂಗಿಗೆ ತೀರ ಕಳೆಗುಂದಿದೆ ಈ ಹಸ್ತಿವಾ ಪುರ್ರ್ಪು ಇನ್ನೂ ರಾಕ್ಷಸ ತಿಂದುಬಿಟ್ಟ ಟಿಣ್ಣೆ ಎಡೆಯಾಗದೆ?

ಪಾಂಡವರ ಪದವೊಂದು ಮಾತ್ರ ಸಂಸ್ಕೃತದ ಬಳಕೆಯಾಗಿದೆ.

ಇದೇ ರೀತಿ ರನ್ನನ ಗದಾಯುದ್ಧದಲ್ಲೂ ನಿಂದನೆಯ ಪದ್ಯಗಳು ಕಂಡುಬರುತ್ತವೆ.

ಪೆಱರಂ ಪೊಗಟ್ವಪೆಯೆಮ್ಮಂ
ರೆಱಿಯರ್ ಮಾಡಿದಪೆಯೆಲವೊ ಸಂಜಯ ನೀನುಂ
ಪೆಱನೋರ್ವಂ ಬಿಲ್ಲೋಜಂ
ಪೆಱನೋರ್ವಂ ಸಿಂಧುಪುತ್ರನಾಗಲ್ ಬಗೆವೋ[೨೩]

ಸಂಜಯ ದುರ್ಯೋಧನನ ಜೊತೆಯಲ್ಲಿದ್ದಾಗಲೂ ವೈರಿಪಡೆಯ ಪಾಂಡವರನ್ನು ಹೊರಳಿದಾಗ ದುರ್ಯೋಧನ ಹೋಳುವ ಮಾತು ಶತ್ರುಗಳ ಮುಂದೆ ನಮ್ಮನ್ನು ಹೀಗಳೆದು ಸಣ್ಣವರನ್ನಾಗಿಸುತ್ತೀಯ ನೀನೂ ದ್ರೋಣ, ಭೀಷ್ಮರಂತೆಯೇ ವೈರಿಗಳನ್ನು ಹೊಗಳುವವನು ಹೀಗೆ ಹೇಳುವುದರಲ್ಲಿ ನಿನ್ನ ಉದ್ದೇಶವಾದರೂ ಏನು?

ಈ ಪ್ಯದಲ್ಲಿ ಸಂಜಯ, ಸಿಂಧುಪುತ್ರನೆನ್ನುವ ಸಂಸ್ಕೃತ ಪದಗಳು ಮಾತ್ರ ಬಳಕೆಯಾಗಿವೆ.

ನಾಟ್ಕಿಡೆಗಳೆದುಱೆ ಬೇರಂ
ಬೞ್ಕೆಯುಮಂ | ತಿಂದು ವನದೊಳಡಗಿರೆ ನೀಮುಂ |
ನೀಟ್ಕರಿಸಿ ನಿಂದುಮಿಾಗಳ್
ಪೇಟ್ಕಿಮ್ಮೈಸುವರೆ ಬಿರುದುಮಂ ಬೀರಮುಮಂ[೨೪]

ಬಿರುದು ಎಂಬ ಸಂಸ್ಕೃತ ಪದವನ್ನು ಹೊರತುಪಡಿಸಿದರೆ ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿದೆ.

ಯುದ್ಧರಂಗದಲ್ಲಿ ಪರಸ್ಪರ ಕೌರವರು ಪಾಂಡವರು ಎದುರಾದಾಗ ಪಾಂಡವರು ತಮ್ಮ ಶಕ್ತಿ ಸಾಮಾರ್ಥ್ಯಗಳನ್ನು ಹೊಗಳಿಕೊಳ್ಳುವರು. ಪ್ರತ್ಯುತ್ತರವಾಗಿ ದುರ್ಯೋಧನನು ವನವಾಸದ ವೇಳೆ ಕಾಡಿನಲ್ಲಿ ಹಣ್ಣುಗಳನ್ನು ಆಯ್ದುಕೊಂಡು ತಿಂದು ಬದುಕಿದ್ದವರು ಆಗ ಕೈಲಾಗದವರಂತೆ ಕಾಡಿನಲ್ಲಿ ಅವಿತಿದ್ದಿರಿ. ಈಗ ನನ್ನೆದುರು ನಿಮ್ಮ ಶಕ್ತಿ, ಸಾಮರ್ಥ್ಯ, ಬಿರುದುಗಳನ್ನು ಹೊಗಳಿಕೊಳ್ಳುವಿರಾ?

ಪುಟ್ಟಂ ಸಟ್ಟುಗಮಂ ಕೊ

ಡಟ್ಟಾಚಿಸಿ ಬೋನಮೆತ್ತಿಬಂದೆಯೊ ಗದೆಗೊಂ

ಡೊಟ್ಟೈ ಸಿಕಾದುವಂತುಟು

ತೊಟ್ಟನೆ ಕೊಳೆ ನಿನಗೆ ಗಂಡಗರ್ವಮುಮಾಯ್ತೇ

'ಗರ್ವ' ಪದವೊಂದೆ ಸಂಸ್ಕೃತದ್ದಾಗಿದೆ ೭೫

ದುರ್ಯೋಧನನು ಭೀಮನನ್ನು ಹೀಗಳಿಯುವ ಪದ್ಯವಿದು. ವನವಾಸ, ಅಜ್ಞಾತವಾಸದ ವೇಳೆ ಅಡಿಗೆಯವನ ವೇಷ ಧರಿಸಿ ಸೌಟನ್ನು ಕೈಯಲ್ಲಿ ಹಿಡಿದು ಎಲ್ಲರಿಗೂ ಉಣಬಡಿಸುವ ಅಭ್ಯಾಸವಿರುವ ನಿನಗೆ. ಇಂದು ಗಧೆ ಹಿಡಿದು ನನ್ನೊಂದಿಗೆ ಹೋರಾಡುವ ಚಪಲ ಉಂಟಾಯಿತೆ?

ಎಸರನಿಡುವಕ್ಕಿಗರ್ಚುವ

ಬೆಸನಂ ಕಯ್ಗೆಜೆವ ಕಂಚುಗರ್ಚುವ ಬೆಸನಂ

ಬೆಸನಲ್ಲದೆ ಮತ್ಸ್ಯನ ಬಾ

ಣಸಿಗಂಗಾರಿತ್ತಕೆಲವೊ ನಿನಗೀ ಬೆಸನಂ

ಮತ್ಸ್ಯಯೆಂಬ ಸಂಸ್ಕೃತ ಪದವೊಂದೆ ಬಳಕೆಯಾಗಿದೆ ೭೬

ಅನ್ನಕ್ಕೆ ಹೆಸರಿಡುವವನು, ಅನ್ನ ಮಾಡಿ ಬಡಿಸುವುದು. ಊಟವಾದ ಮೇಲೆ ಕೈ ತೊಳೆಯಲು ನೀರು ಕೊಡುವುದು ನಿನ್ನ ಕೆಲಸ. ಇಂದು ಅದನ್ನೆಲ್ಲ ತೊರೆದು ನನ್ನೊಡನೆ ಗಧಾಯುದ್ಧ ಮಾಡಲು ಬಂದೆಯಾ ಇದೇನೂ ಅಡಿಗೆ ಮನೆಯ ಕೆಲಸವೆಂದು ತಿಳಿದಿರುವೆಯೇನು. ಯುದ್ಧ ಮಾಡಲು ನಿನಗೆ ಆಹ್ವಾನ ಮಾಡಿದವರಾರು?

ಬೇಟೆಯ ವರ್ಣನೆಯ ಪದ್ಯಗಳು

ಇದಲ್ಲದೆ ಬೇಟೆಯ ವರ್ಣನೆಯ ಸಂದರ್ಭದಲ್ಲೂ ಅಚ್ಚಗನ್ನಡ ರಚನೆಗಳು ಕಂಡುಬರುತ್ತವೆ. ಪಂಪಭಾರತದಲ್ಲಿ ಬೇಟೆಯ ಸಂದರ್ಭದಲ್ಲಿ ಬಳಕೆಯಾಗಿರುವ ಈ ಕೆಳಗಿನ ಅಚ್ಚಗನ್ನಡ ರಚನೆಗಳನ್ನು ಕಾಣಬಹುದು.

ತೊಪ್ಪುಕ್ಕವಡಂ ಮರವಿಲ್

ಕಟ್ಟಿದ ಪಣೆಕಟ್ಟು ಬೇಂಟೆವಟೆ ದೊರೆಯೊಳೊಡಂ

ಬಟ್ಟಸಿಯ ಸುರಗಿ ದಳಿವದ

ತೊಟ್ಟಂಗಿಗೆ ತನ್ನೊಳಮರೆ ಬೇಂಟೆಯನೊರ್ವಂ೭೭

ಬೇಡನ ಆಗಮನದ ವರ್ಣನೆಯ ಪದ್ಯವಿದು. ಮರದ ದೊಡ್ಡ ಬಿಲ್ಲು, ಹಣೆಪಟ್ಟಿ ಕಟ್ಟಿ, ತೆಳುವಾದ ಕತ್ತಿಯೊಂದಿಗೆ ಮೇಲು ಹೊದಿಕೆ ಧರಿಸಿದ ಬೇಡನೊಬ್ಬನು ಅರಿಕೇಸರಿಯಿದ್ದಲ್ಲಿಗೆ ಬಂದನು.

ಬಂದು ಪೊಡವಟ್ಟು ಕಂಡಿಂ
ತೆಂದಂ ಪೊಲನುಡಗಿ ಬಂದುದುಡಿದುದು ಪುಲ್ ಕಾ
ಡುಂ ದಲಿಲೆಯಿಕ್ಕಿ ಘಳಿಲೆನೆ
ನಿಂದುವು ತಣಿದುವು ಮೃಗಂಗಳಿತ್ತಲುಮಿಾಗಳ್[೭೮]

ಬಂದು ನಮಸ್ಕರಿಸಿದ ಬೇಡನು ಹೊಲಗಳೆಲ್ಲ ತುಂಬಿ ಬಂದಿವೆ. ಎಲ್ಲೆಲ್ಲೂ ಹುಲ್ಲುಗರಿಕೆ ಒಡೆದಿದೆ. ಸಂಗ್ರಹ ಮಾಡಿದರು. ಹಾಗೆ ವಸಂತಕಾಲದಿಂದಾಗಿ ಕಾಡಿನ ಮರಗಳು ಸುಂದರವಾಗಿ ಬೆಳೆದು ನಿಂತವು. ಪ್ರಾಣಿಗಳು ವಸಂತನ ಆಗಮನದೊಂಗಿಗೆ ತೃಪ್ತಿಪಟ್ಟವು ಎಂದು ವಿವರಿಸಿದ.

ಬರಮಂ ಕಾಡಂ ಬೇಗೆಗೆ
ಕರಮಱಿದೆರಡುಂ ಮೃಗಂಗಳುಂ ತಣ್ಪುಟಿಯೊಳ್
ನೆರೆದೊಡವಂದುವು ತಪ್ಪದಿ
ದರಿಕೇಸರಿ ಕಂಡು ಮಚ್ಚುವ್ವೆ ಕೊಳ್ವಾಂಗಂ[೭೯]

ಕಾಡು ಬಹಳ ದೊಡ್ಡದು ಅದು ಹಾಳಾಗುವುದು ಸಾಧ್ಯವಿಲ್ಲ ಈಗಾಗಲೇ ಮೃಗಳೆರೆಡು ತಂಪಾದ ಮಳಲಲ್ಲಿ ಮಿಲನವಾಡಿ ಬಂದವು. ಇದು ಹೀಗೆ ನಡೆಯುತ್ತಲಿರುವುದು. ಅರಿಕೇಸರಿಯೆ ಬಾ ಕಂಡು ಮೆಚ್ಚೊಣ ಆ ಮೃಗಗಳ ಕೊಂಬುಗಳ ವಿವಿಧ ಆಕಾರಗಳನ್ನು.

ಅರಿಕೇಸರಿಯ ಬೇಟೆಯ ವರ್ಣನೆಯ ಪದ್ಯವಿದು. ಅವನು ಬೇಟೆಗೆ ಬಂದಾಗ ಪೊದೆಯಲ್ಲಿದ್ದ ಎರಡು ಜಿಂಕೆಗಳು ಎದುರಿಗೆ ಬಂದವು. ಬೃಹತ್ತಾದ ಕಾಡಿನ ವರ್ಣನೆಯು ಇಲ್ಲಿದ್ದು ಈ ಕಾಡು ಎಂದಿಗೂ ಹಾಳಾಗುವುದಿಲ್ಲ ಎಂದು ಅರಿಕೇಸರಿಯು ಮನದಲ್ಲಿಯೇ ಮೆಚ್ಚಿದನು.

ಈ ಮೇಲಿನ ಪದ್ಯಗಳಲ್ಲಿ ಅನುಕರಣಪದವಾದ ಘಳಿಲೆನೆ ಎಂಬುದು ಸಂದರ್ಭೋಚಿತವಾಗಿ ಅನಂತರ ಮೃಗಂಗಳುಂ ಎಂಬ ಪದಗಳೆರಡು ಮಾತ್ರ ಸಂಸ್ಕೃತದಲ್ಲಿದ್ದು ಉಳಿದಂತೆ ಪೂರ್ಣ ಪ್ರಮಾಣದ ಅಚ್ಚಗನ್ನಡ ಪದಗಳೇ ಕಂಡುಬರುತ್ತವೆ.

ಜನ್ನನ ಅನಂತನಾಥ ಪುರಾಣದಲ್ಲೂ ಬೇಟೆ ವರ್ಣನೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿವೆ.

ಕತ್ತುರಿಮಿಗಮಂ ಪಂದಿಯ
ಮುತ್ತುಂ ಪೊಂಬುಲಿಯ ಪೊವಲನಾನೆಯ ಕೊಂಬಂ
ಕುತ್ತಟಿಸದಡಸಿ ಪಿಡಿದುಗಿ
ದೆತ್ತಿದುವಂ ಪತಿಗೆ ಕಾಣ್ಕೆಗೊಟ್ಟಂ ತೆಂದಂ[೮೦]

ಕಸ್ತೂರಿ ಮೃಗವನ್ನು, ಹಂದಿಯ ಚಿಪ್ಪನ್ನು, ಹುಲಿಯ ಉಗುರನ್ನು, ಆನೆಯ ಕೊಂಬನ್ನು ಗಾಯ ಕಾಣದಂತೆ ಹಿಡಿದೆಳೆದು ತೆಗೆದು ತನ್ನ ಒಡೆಯನಿಗೆ ಕಾಣಿಕೆಕೊಟ್ಟು ಹೀಗೆಂದನು.

ಪುಲ್ಮುಱಿದುದು ಬೆಳಸುಡಗಿ ಬ

ಯಲ್ಮ ಸಗಿದುದಡವಿ ಕರಿಕುವರಿದುದು ಮೇಪಿಂ

ಪುಲ್ಮಿಗಮುಂ ಬೆಳ್ಮಿಗಮುಂ

ಪಲ್ಮಿಗಮುಂ ತಣಿದುವೆಯ್ದ ಕಾಪಿನ ಪೊಲದೊಳ್[೮೧]

ಈ ಮೇಲಿನ ಪದ್ಯಗಳಲ್ಲಿ ಮುತ್ತು, ಪತಿ, ಮಾತ್ರ ಸಂಸ್ಕೃತದವಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲಿಯೇ ಪದ್ಯಗಳು ರಚನೆಯಾಗಿವೆ.

ಸಂಭಾಷಣೆ ಪದ್ಯ

ಸಂಭಾಷಣೆ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

ಮುನಿಯಿಸಿದಂ ಕರಂ ಪಿರಿಯನಪ್ಪುದು ಬೇಟ್ಪಿನ ಬೇಟ್ಪಿ ವಸ್ತು ಕಾಂ

ಚನ ಗಿರಿಯಿಂದಮಗ್ಗಳಮೆನಿಪ್ಪುದ ದಾದೊಡಮೇನೊ ಜೀವಮು

ಳ್ಳಿನಮಿಱಿದರ್ಥಮುಳಿಳಿನೆಗಮಿತ್ತು ನೆಗಟ್ತೆಯನಾಂಪುದೆಂಬ ಪೆಂ

ಪಿನ ಸಮಕಟ್ಟು ಕಣ್ಗೆ ದೊರೆಯಾರರಿಕೇಸರಿ ನಿನ್ನವೋಲ್ ಪೆಱಂ[೮೨]

ಅರಿಕೇಸರಿಯ ಹಿರಿಮೆಯನ್ನು ಅಗ್ನಿದೇವನು ವಿವರಿಸುವ ಪದ್ಯವಿದು. ಬೇಡುವವರಿಗೆ ಕೇಳಿದ್ದನ್ನು ದಾನ ಮಾಡುವ, ಜೀವವಿರುವವರೆಗೂ ಶೌರ್ಯದಿಂದ ಮೆರೆದು ಕೀರ್ತಿ ಪಡೆದಿರುವ ಹಿರಿಮೆಯ ಅರಿಕೇಸರಿಗೆ ಸಮನಾದ ದೊರೆಗಳಾರೂ ಇಲ್ಲ.

ಇಂತಪ್ಪ ಬನಮನಿದ ನಿ

(ನ್ನೆ) ಂತನಲನನೊಡಲೆಂದು ಪೂಣ್ದಯ್ ಮುಂ ಪೂ

ಣ್ದಂತೂಡು ಪೊಡು (ಶಿತ) ಶರ

ಸಂತತಿಯಂ ಬಿಲ್ಲೊಳೇಕೆ ನೀಂ ತಡೆದಿರ್ಪಯ್[೮೩]

ಖಾಂಡವನ ದಹನದ ಪ್ರತಿಜ್ಞೆಯ ಪದ್ಯವಿದು. ಇಂತಹ ಕಾಡನ್ನು ಬೆಂಕಿಗೆ ಆಹುತಿ ಮಾಡುವೆನೆಂದು ಶಪಥ ಮಾಡಿದವನೆಂದು ಹೀಗಿ ಪ್ರತಿಜ್ಞೆಮಾಡಿದೆ. ಇನ್ನು ಪ್ರತಿಜ್ಞೆ ಮಾಡಿದಂತೆ ಈಗಲೇ ಉಣಿಸು. ಹರಿತವಾದ ಬಾಣಗಳನ್ನು ಬಿಲ್ಲಿಗೆ ಹೂಡು.

ಈ ಮೇಲಿನ ಪದ್ಯಗಳಲ್ಲಿ ವಸ್ತು, ಕಾಂಚನಗಿರಿ, ಜೀವ, ದೊರೆ, ಅರಿಕೇಸರಿ, ಶರ ಸಂಸ್ಕೃತ ಪದಗಳು ಬಳಕೆಗೊಂಡಿವೆ.

ಪೊನ್ನನ ಶಾಂತಿ ಪುರಾಣದಲ್ಲೂ ಸಂಭಾಷಣೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿವೆ.

ಆವಂ ಕುಡುವೊಂ ಕುಡಿಸುವ
ನಾವೊಂ ಕುಡೆ ಪಡೆವನಾವೊನಿರ್ವರುಮೇಕೀ
ಭಾವದಿನಿರೆ ನಿಮ್ಮೊಳಗಿನಿ
ತಾವುಗು ಭೇದಕ್ಕೆ ಪಕ್ಕು ಪೆಟತೇಂ ನೃಪತೀ[೮೯]

ಇದರಲ್ಲಿ ಕೊಡುವವನು ಯಾರು, ಕೊಡಿಸುವವನು ಯಾರು, ಪಡೆಯುವವನು ಯಾರು ನೀವಿಬ್ಬರೂ ಏರೇ ಭಾವದಿಂದ ಹೊಂದಿಕೊಂಡಿದ್ದರೆ ಬೇಧ, ಭಾವಕ್ಕೆ ಅವಕಾಶವಿಲ್ಲ.

ಭೇದ, ನೃಪತಿ ಸಂಸ್ಕೃತ ಪದಗಳ ಹೊರತುಪಡಿಸಿ ಉಳಿದಂತೆ ಪದ್ಯ ಅಚ್ಚಗನ್ನದಲ್ಲಿದೆ.

ತನಯೆ ತಪದಿಂದೆ ನೀಂ ನಿ
ನ್ನನೆಯಲ್ಲದೆ ನಮ್ಮ ಕುಲಮುಮಂ ಬೆಳಗಿದೆಯೆಂ
ತೆನೆ ಮುಗಿಲ ಮುತ್ತು ಮುಗಿಲಂ
ನೆನೆಯಿಸಿ ಮಂಡಲಿಯ ನಿಪುಣರಿಂ ಪೊಗಟಿಸದೇ[೯೦]

ಮಗಳೆ ತಪಸ್ಸಿನಿಂದ ನೀನು ನಿನ್ನೊಬ್ಬಳನ್ನಲ್ಲದೆ ನಮ್ಮ ವಂಸವನ್ನೇ ಬೆಳಗಿದೆ, ಮೋಡದಿಂದ ಹುಟ್ಟುವ ಮುತ್ತು ನಿಪುಣರಿಂದ ಆ ಮೋಡಗಳನ್ನು ಹೊಗಳಿಸುವುದಿಲ್ಲವೇ?

ಕುಲ, ಮುತ್ತು, ಮಂಡಲ ಸಂಸ್ಕೃತ ಪದಗಳು ಬಳಕೆಯಾಗಿವೆ.

ರನ್ನನ ಗದಾಯುದ್ಧದಲ್ಲಿಯ ಸಂಭಾಷಣೆಯ ಪದ್ಯಗಳು ಅಚ್ಚಗನ್ನಡದಲ್ಲಿವೆ.

ಪದುಳಂ ಕುಳ್ಳಿರ್ದೆಮಗಾ
ಯದ ಮಾತಂ ತಗುಳೆ ಗಟಿಪಿ ಪೋದಂ ಸಂದಿ
ರ್ದದಟರೊಳಿಜಿದಱಿಯಂತ
ಪ್ಪದೆ ಕಮ್ಮಱಿಯೋಜನೆ ನಿಸಿದಂಬಿಲ್ಲೋಜಂ[೯೧]

ಧನುರ್ವಿದ್ಯಾಗುರು ದ್ರೋಣನ ಅಪ್ರಯೋಜಕ ಹೋರಾಟವನ್ನು ಹೀಗಳೆಯುವ ಪದ್ಯ ಕೇವಲ ಕುಲಿತುಕೊಂಡೇ ತಮ್ಮ ಪರಾಕ್ರಮಗಳ, ಶೌರ್ಯ, ಸಾಹಸಗಳನ್ನು ಕೊಂಡಾಡಿದರೇ ಹೊರತು ವೀರರೊಂದಿಗೆ ನಿಂತು ಹೋರಾಡಲಿಲ್ಲ. ಈ ಬಿಲ್ಲೋಡ ಕಮ್ಮರಿಯೋಜನೇ ಆದನು.

ಈ ಪದ್ಯ ಪೂರ್ಣ ಪ್ರಮಾಣ ಅಚ್ಚಗನ್ನಡ ರಚನೆಯಲ್ಲಿದೆ

ಬಿಡಿಮೆನ್ನನೆಂದು ಮುಂದಿ
ರ್ದಡಿಗೆಱಗಿದ ಮಗನನಪ್ಪಿಕೊಂಡಶ್ರುಜಲಂ
ಗುಡುಗುಡನೆ ಸುರಿಯೆ ನಾಲಗೆ
ತಡತಡವರೆ ನುಡಿದನಂಧನೃಪನಾ ನೃಪನಂ[೯೨]

ದುರ್ಯೋಧನನ ಹೊರತು ಕುರುಪುತ್ರರೆಲ್ಲ ಆಳಿದ ಮೇಲೆ ದುರ್ಯೋಧನನು ತಂದೆ ದೃತರಾಷ್ಟ್ರನ ಪಾದಗಳಿಗೆ ನಮಸ್ಕರಿಸುತ್ತಾನೆ. ನನ್ನನ್ನು ಬಿಟ್ಟುಬಿಡಿ ನಾನು ಹೊರಟುಹೋಗುತ್ತೇನೆ ಎಂದು ಹೇಳಿದಾಗ ದೃತರಾಷ್ಟ್ರನು ದುಃಖದಿಂದ ಮಗನನ್ನು ತಬ್ಬಿಕೊಂಡು ಕಣ್ಣೀರಿಡುತ್ತಾನೆ, ನಾಲಗೆ ತಡವರಿಸಲು ಆತನು ಹೀಗೆ ಹೇಳಿದನು.

ಮಗ, ಅಶ್ರುಜಲ, ಅಂಧನೃಪ, ನೃಪಪದಗಳು ಸಂಸ್ಕೃತದ್ದಾಗಿವೆ

ರನ್ನನ ಅಜಿತ ತೀರ್ಥಂಕರ ಪುರಾಣದಲ್ಲೂ ಅಚ್ಚಗನ್ನಡ ರಚನೆಗಳು ಕಂಡುಬರುತ್ತವೆ.

ತಾನೊತ್ತಯಿಡಲ್ ಪೋದಡೆ

ನೀನಿನ್ನೆಮಗೆಮ್ಮ ತಂದೆಯ್ಯೆಯೊತ್ತಗೆ ಕ

ಯ್ಯನೆಮೆನೆ ಮೆಚ್ಚಿ ಸುೞಿದಂ

ಮಾನಿನಿಯರಜ್ಜನೊಟ್ಟಜಂ ಮೆಚ್ಚಿದ ಪೊಲ್[೮೮]

ತಾನು ಒತ್ತಿ ಹಿಡಲು ಹೋದರೆ ನೀನು ಈವರೆಗೂ ನಮ್ಮ ತಂದೆಯ ಸಮಾನನ್ನು ಆದ್ದರಿಂದ ಒತ್ತೆ ಇಟ್ಟುಕೊಳ್ಳುವುದಿಲ್ಲ ಎಂದು ಹೇಳಲು ಆತನು ಮೆಚ್ಚುಗೆಯಿಂದ ಸುಳಿದಾಡುವನು. ಅದೇ ದೊಡ್ಡ ಕಾಣಿಕೆ ಎಂದು ತಿಳಿದವರ ಹಾಗೆ.

ನಿನಗಂಜಿ ಬೆರ್ಚಿ ಬೆಸಕೆ

ಯ್ವನಿಬರನಿರಲಿತ್ತುದಿಲ್ಲ ಬಿದಿ ತಳರ್ದೆ ತಪೋ

ವನದತ್ತ ಜಗತ್ತ್ರಯಪಾ

ವನ ತಡೆದಿರೆವಾಗಿ ನಿನ್ನ ಲೋಕುಮೆ ಲೋಕಂ[೮೯]

ನಿನಗೆ ಅಂಜಿ ಬೆಚ್ಚಿ ಬೇಡಿಕೊಳ್ಳುವುದಕ್ಕಾಗಿ ನಮ್ಮನ್ನು ನಿನಗೆ ವಿಧಿಯು ಕೊಡಲಿಲ್ಲ. ವಿದಿಯು ತಡಮಾಡದೆ ತಪೋವನದತ್ತ ನಿನ್ನನ್ನು ನಡೆಸುತ್ತಿರಲು ಲೋಕವು ಪಾವನವಾಯಿತು.

ಈ ಮೇಲಿನ ಪದ್ಯಗಳಲ್ಲಿ ಅಜ್ಜ, ತಪೋವನ, ಜಗತ್ತ್ರಯ, ಲೋಕ, ಸಂಸ್ಕೃತ ಪದಗಳು ಬಳಕೆಯಾಗಿದ್ದು ಉಳಿದಂತೆ ಅಚ್ಚಗನ್ನಡ ಪದಗಳು ಕಂಡುಬರುತ್ತವೆ.

ಜನ್ನಿ ಮಹಾಕವಿಯ ಯಶೋಧರ ಚರಿತೆಯಲ್ಲು ಸಂಭಾಷಣೆಯ ಸಂದರ್ಭಗಳು ಅಚ್ಚಗನ್ನಡದಲ್ಲಿ ನಿರೂಪಿತವಾಗಿವೆ.

ತಡವಾದಪ್ಪುದು ಪೌರರ್

ಕುಡವೇಟ್ಟುದು ಪಲವು ಜೀವರಾಶಿಯ ಬಲಿಯಂ

ನಡೆಯೆನೆ ಹಸಾದಮಾಗಳೆ

ಪಿಡಿತಾರದ ಮಾಣರೆನ್ನ ಕಿಂಕರರೆನುತಂ[೯೦]

ಮಾರಿದತ್ತ ಮತ್ತು ತಳಾರ ಚಂಡಕರ್ಮರ ನಡುವಿನ ಸಂಭಾಷಣೆಯ ಪದ್ಯವಿದು. ದೇವಿಗೆ ಬಲಿ ನೀಡಲು ಕಿಂಕರರು, ನಾಗರಿಕರು ಜೀವ ಬಲಿ ತಂದಿರುವರೆಂದು ಮಾರಿದತ್ತ ಹೇಳಿದ ಕೂಡಲೇ ಚಂಡಕರ್ಮನು ಅಪ್ಪಣೆಯಿತ್ತನು.

ಅಣ್ಣನ ಮಾತಂ ಮನದೊಳ್

ತಿಣ್ಣಂ ತಳೆದೆಂದಳನುಜೆ ಮಾಡದುದಂ ನಾ

ವುಣ್ಣದೆ ಪೋಕುಮೆ ಭಯಮೇ

ಕಣ್ಣಾ ಭವಪ್ರಕೃತಿ ವಿಕೃತಿ ನಾವಱಿಯದುವೇ[೧]

ಅಭಯರುಚಿ ಮತ್ತು ಅಭಯಮತಿ ಅಣ್ಣ ತಂಗಿಯರ ಸಂಭಾಷಣೆಯ ಪದ್ಯವಿದು. ಭವಾಂತರಗಳಲ್ಲಿ ಅಣ್ಣ ತಂಗಿಯರಾಗಿ ಜನಿಸಿದ ಇವರನ್ನು ಮಾರಿಗುಡಿಗೆ ಬಲಿ ನೀಡಲು ಕರೆ ತಂದಾಗ ಅಣ್ಣನ ಮಾತನ್ನು ಆಲಿಸಿದ ಅಭಯಮತಿ ಹಿಂದೆ ಮಾಡಿದ ಪಾಪದ ಫಲ ಅನುಭವಿಸಲೇಬೇಕು. ಅದಕ್ಕೆ ಭಯಪಡುವ ಅಗತ್ಯವಿಲ್ಲ. ಭೂಮಿಯಲ್ಲಿ ಜನಿಸಿದ ಮೇಲೆ ಏನೇ ಕಷ್ಟ ಬಂದರೂ ಸಹಿಸಲೇಬೇಕು.

ಜೀವರಾಶಿ, ಬಲಿ, ಕಿಂಕರ, ಅನುಜೆ, ಭಯ, ಭವ, ಪ್ರಕೃತಿ, ವಿಕೃತಿ ಸಂಸ್ಕೃತ ಪದಗಳು ಅಧಿಕವಾಗಿ ಬಳಕೆಯಾಗಿವೆ.

ಯುದ್ಧ ವರ್ಣನೆಯ ಪದ್ಯಗಳು

ಪ್ರಾಚೀನ ಮಹಾಕಾವ್ಯಗಳಲ್ಲಿ ಆಶ್ಚರ್ಯವೆಂಬಂತೆ ಯುದ್ಧ ವರ್ಣನೆಯ ಸಂದರ್ಭದಲ್ಲಿ ವಿರಳವಾಗಿಯಾದರೂ ಅಚ್ಚಗನ್ನಡ ರಚನೆಗಳು ಬಳಕೆಯಾಗಿವೆ.

ಗಟ್ಟಿಸಿ ಸಿಂಧುರದೊಳ್ ನೆಲ

ಗಟ್ಟಿಸಿ ಚೆಂಬೊನ್ನ ನೆಲೆಯ ಚಾಪಳಿಗೆಗಳೊಳ್

ಕಟ್ಟಿಸಿ ಪಟಯಿಗೆಗಳನಳ

ವಟ್ಟರೆ ಬಯಮಲ್ಲಿ ಮೊಟಿಗೆ ಪಲವುಂ ಪಜೆಗಳ್[೨]

ಘಟ್ಟನೆ ಮಾಡಿ ಚಂದ್ರಗಾವಿಯಲ್ಲಿ ನೆಲ ಘಟ್ಟಿಸಿ ಚನ್ನದ ಮಹಡಿಯ ಮೊಗಸಾಲಿಯಲ್ಲಿ ಧ್ವಜಗಳನ್ನು ಕಲ್ಪಿಸಿ, ಅಪಾರವಾಗಿ ವೆಚ್ಚ ಮಾಡಲಾಯಿತು ಹಲಗೆಗಳು ಮೊಳಗಿದವು.

ಇದರಲ್ಲಿ ಸಿಂಧುರ, ನೆಲ, ನೆಲೆ, ಚಾಪ ಸಂಸ್ಕೃತ ಬಳಕೆಯಾಗಿವೆ.

ಜನ್ನನ ಅನಂತನಾಥ ಪುರಾಣದಲ್ಲಿಯೂ ಯುದ್ಧದ ವರ್ಣನೆಯು ಅಚ್ಚಗನ್ನಡದಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು.

ಬಲದೊಳ್ಪತ್ತಿದ ಮಂಡೆ ಚಮ್ಮಟಿಗೆ ಕೈವೀಣಂ ಬೆಡಂಗಾಗೆ ಮೈ

ಗಲಿ ಪೊಕ್ಕತ್ತಿದೊಡೊಡ್ಡಿ ದೊಡ್ಡಣದ ಕೈಗೊಂಬಾಳದಿಂ ಪೋದ ಮೆ

ಯ್ವಲಗಂಬೆತ್ತಿರೆ ಬಾಹು ಪೋರಗದೆ ಪೊಯ್ದಂ ಭೋಪನಾ ವೀರನಂ

ತಲೆಯುಂ ಮುಂಡಮುಮೊರ್ಮೆ ದಲ್ಪಲಗೆಯೊಳ್ಬೈವೆಟ್ಟವೋಳ್ಬೀೞ್ವಿನಂ[೩]

ಬಲವಾಗಿ ಒತ್ತಿ ಹಿಡಿದ ತಲೆ, ಚಮ್ಮಟಿಗೆ ಕೈವೀಣೆಯು ಆಕರ್ಷಕವಾಗಿರಲು ವೀರನು ಮುಂದೆ ಎದುರಾಗಿ ಬರಲು ವಡ್ಯಾಣ ಮತ್ತು ಕೈಯಲ್ಲಿ ಹಿಡಿದ ಖಡ್ಗದಿಂದ ಹೊಡೆಯಲು ದೇಹ ಎರಡು ಹೋಳಾಗಿ ಹೋಯಿತು. ಭಜಕ್ಕೆ ಆಯಾಸವಾಗದ ಹಾಗೆ ವೀರ ರಾಜನಿಗೆ ಹೊಡೆದ. ಇದರಿಂದ ದೇಹದಿಂದ ತಲೆ ಪ್ರತ್ಯೇಕವಾಯಿತು.

ಕೈವೀಣಂ, ವೀರ ಎಂಬ ಸಂಸ್ಕೃತ ಪದಗಳು ಬಳಕೆಯಾಗಿವೆ.

ಪೊಡವಿ ಕಡಂಗಿ ತಿಂದುಗುಳ್ದು ದೊಡ್ಡಿನ ಚಿತ್ರದ ಭಿತ್ತಿಯ ಸಿಡಿ
ಲ್ಪೊಡೆದುದು ಸುಟ್ಟುರೆತ್ತಿ ಪಡೆಪೊಯ್ದುದು ನಂಜಿನ ಘಾಳಿಯೆಂಬಿನಂ
ಪಡಲಿಡೆ ಕೃಷ್ಣನೊಂದು ಗಜದಿಂ ನಿಜವಾಹಿನಿ ಕಂಡು ದಾನವಂ
ಕಿಡಿರೆಡಿವೋಗಿ ತಾಂ ಪೊರೆದ ನಚ್ಚಿನ ಮೆಚ್ಚಿನ ದೈತ್ಯರೆಲ್ಲರಂ[೪]

ಭೂಮಿಯು ಆವೇಶಗೊಂಡು ತಿಂದುಗುಳಿತು. ದೊಡ್ಡದಾದ ಚಿತ್ರದ ಗೋಡೆಗೆ ಸಿಡಿಲು ಹೊಡೆಯಿತು. ಸುಟ್ಟು ಹೋಗುವ ಹಾಗೆ ನಂಜಿನ ಗಾಳಿಯು ಬೀಸಿತು. ಎಂಬ ಹಾಗೆ ಧಾಳಿಯಿಟ್ಟ ಕೃಷ್ಣನ ಆನೆಯನ್ನು ಕಂಡು ರಾಕ್ಷಸನು ಕಿಡಿ ಕಿಡಿಯಾದನು. ಆತನು ತಾನು ಕಾಪಾಡಿದ ಎಲ್ಲ ದೈತ್ಯರನ್ನು ಬಳಿಗೆ ಕರೆದನು.

ಚಿತ್ರ, ಘೌಳಿ, ನಂಜು, ಕೃಷ್ಣ, ಗಜ, ದೈತ್ಯ ಎಂಬ ಸಂಸ್ಕೃತ ಪದಗಳು ಬಳಕೆಯಾಗಿದೆ.

ಕಥಾನಾಯಕ ವರ್ಣನೆಯ ಪದ್ಯಗಳು

ನಾಯಕನ ವರ್ಣನೆಯ ಪದ್ಯಗಳೂ ವಿಶೇಷವೆಂಬಂತೆ ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಮನದೊಳೊಱಲ್ದು ಜೊಲ್ದಳಿಪಿ ನೋಡಲೊಡಂ ಸೆಱೆಗೆಯು ಕಣ್ಣುಮಂ
ಮನಮುಮನಂಗಜನ್ಮನರಲಂಬುಗಳಿಂ (ದೆ) ಮುರುಳ್ಚಿ ಬಂದ ಮಾ
ವಿನ ಬನದೊಳ್ ತೆರಳ್ಚಿ ಪೊಳೆವಿಂದುಮರೀಚಿಗಳಿಂದುರಳ್ಚಿ ಪೂ
ವಿನ ಪಸೆಯೊಳ್ ಪೊರಳ್ಚಿದನಳುರ್ಕೆಯ ಬರ್ದೆಯರಂ ಗುಣಾರ್ಣವಂ[೫]

ಗುಣಾರ್ಣವನಾದ ಅರಿಕೇಸರಿಯು ಪ್ರೌಢ ವನಿತೆಯರನ್ನು ಮನದಲ್ಲಿ ಬಯಸಿ ಆಸೆ ಪಟ್ಟು ನೋಡಿದಾಗಲೇ ಕಣ್ಣನ್ನು ಮನವನ್ನು ಸೆರೆಹಿಡಿದು ಕಾಮನ ಹೂಬಾಣಗಳಿಂದ ಮರುಳುಗೊಳಿಸಿ ಹೂ ಕಾಯಿ ತುಂಬಿದ ಮಾವಿನ ತೋಟದಲ್ಲಿ ಅಲೆದಾಡಿಸಿ ಹೊಳೆಯುವ ಬೆಳದಿಂಗಳಲ್ಲಿ ಉರುಳಿಸಿ ಹೂವಿನ ಹಾಸಿಗೆಯಲ್ಲಿ ಹೊರಳಾಡಿಸಿದನು.

ಜನ್ಮ, ನರ, ಗುಣಾರ್ಣವಂ ಎಂಬ ಸಂಸ್ಕೃತ ಪದಗಳನ್ನು ಹೊರತುಪಡಿಸಿದರೆ ಉಳಿದಂತೆ ಅಚ್ಚಗನ್ನಡದಲ್ಲಿಯೇ ಪದ್ಯ ರಚನೆಯಾಗಿದೆ.

ಬೆಳಗುವ ಸೊಡರೊಳ್ ಸೊಡರಂ
ಬೆಳಗಿ ಪಲರ್ ಕೊಂಡುಪೋಗೆಯುಂ ಕುಂದದೆ ಪ
ಜ್ಜಳಿಸುವವೊಲ್ ಬಗಮೆಲ್ಲಂ
ಕೊಳಲುಂ ತವದಿತ್ತು ಮಱೆವನಿಱಿವ ಬೆಡಂಗಂ[೬]

ಬೆಳಗುತ್ತಿರುವ ಸೊಡರಿಂದ ಇನ್ನೊಂದು ಸೊಡರನ್ನು ಬೆಳಗಿಸಿ ಹಲವು ಜನ ತೆಗೆದುಕೊಂಡು ಹೋದರೂ ಆ ಸೊಡರು ಬೆಳಗುವ ಹಾಗೆ ಜಗತ್ತೆಲ್ಲವು ಕೊಂಡುಹಾದಾಗಲೂ ಕ್ಷ ಭಂಡಾರವು ಕ್ಷಯಿವಾಗದ ಹಾಗೆ ಕೊಟ್ಟು ಇರಿವ ಬೆಡಂಗಳು ಬೆಳಗುತ್ತಾನೆ.

ಜಗ, ಕೊಳಲು ಪದಗಳನ್ನು ಹೊರತುಪಡಿಸಿದರೆ ಪೂರ್ಣ ಪ್ರಮಾಣದಲ್ಲಿ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಅಜಿತ ತೀರ್ಥಂಕರ ಪುರಾಣದಲ್ಲಿಯೂ ನಾಯಕ ವರ್ಣನೆಯ ಪದ್ಯ ಅಚ್ಚಗನ್ನಡದಲ್ಲಿ ರಚನೆಯಾಗಿದೆ.

ಒಡಲನುಪವಾಸದಿಂ ತ
ನ್ನೊಡಮೆಯನನವರತ ದಾನದಿಂ ತವಿಸಿ ಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನೆ ಜನನಿಗೆ ಣೆ ಪಱಿರೊಳರೇ[೯೭]

ದೇಹವನ್ನು ಉಪವಾಸದಿಂದಲೂ ತಮ್ಮ ಸಂಪತ್ತನ್ನು ನಿರಂತರವಾದ ದಾನದಿಂದಲೂ ತ್ಯಜಿಸಿ ನೂರ್ಮಡಿ ತೈಲಪನ ತಾಯಿಯು ಕೀರ್ತಿಯನ್ನು ಪಡೆದಳು. ಹೀಗಿರಲು ನೂರ್ಮಡಿ ತೈಲಪನನ್ನು ಪಡೆದವಳ ಪಣ್ಯಕ್ಕೆ ಸರಿಸಮಾನರಾದವರು ಬೇರೆ ಯಾರಾದರೂ ಇದ್ದಾರೆಯೇ?

ತೈಲಪ, ಜನನಿ ಎಂಬೆರಡು ಸಂಸ್ಕೃತ ಪದಗಳು ಮಾತ್ರ ಬಳಕೆಯಾಗಿವೆ.

ಪುರವರ್ಣನೆಯ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಕತ್ತುರಿಯ ಸಗಣ ನೀರ್ ಬಿಡು
ಮುತ್ತಿನ ರಂಗವಲಿ ಮಿಳಿರ್ವ ದುಗುಲದ ಗುಡಿ ಸಂ
ಪತ್ತಿನ ಬಿತ್ತರದೆತ್ತಿದ
ಮುತ್ತಿನ ಮಂಡವಿಗೆ ಪೊಲಿಲ ಮನೆಗಳೊಳೆಲ್ಲಂ[೯೮]

ಆಊರಿನ ಕಸ್ತೂರಿಯ ಸಗಣಿ ನೀರನ್ನು ಚೆಲ್ಲಲಾಗಿತ್ತು. ಬಿಡಿಯಾದ ಮುತ್ತುಗಳಿಂದಲೇ ರಂಗೋಲಿ ಹಾಕಲಾಗಿತ್ತು ರೇಷ್ಮೆಯ ವಸ್ತ್ರದಿಂದ ಕಟ್ಟಿದ ಗುಡಿ ಸಂಪತ್ತಿಗೆ ಮಿಗಿಲಾದ ವಿಸ್ತಾರವಾಗಿ ಕಟ್ಟಿದ ಮುತ್ತಿನ ಮಂಟಪಗಳು ಆ ಊರಿಗಲ್ಲಲ್ಲಿ ಕಂಡುಬರುತ್ತವೆ.

ಮುತ್ತಿನ ಪದವೊಂದನ್ನು ಬಿಟ್ಟರೆ ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿದೆ.

ಪೊನ್ನನ ಶಾಂತಿಪುರಾಣದಲ್ಲೂ ಪುರವರ್ಣನೆಯ ಪದ್ಯ ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

ಆಡುವ ನಡೆ ನೋಡುವ ನಡೆ
ಪಾಡುವ ಕೊಳೆ ಪಾಡುವುಡುವ ತುಡುವಱಿನಂ ಕೊಂ
ಡಾಡುವ ಜನದಿಂ ಪುಣ್ಯದ
ಬೀಡೆನಿಪುದು ಪುರಮಿದಂಬರೇಚರ ಪತಿಯಾ[೯೯]

ಓಡಾಡುವ, ಕಣ್ಣೆಟ್ಟು ನೋಡುವ, ಚೆನ್ನಾಗಿ ಹಾಡುವ, ಚೆನ್ನಾಗಿ ಉಟ್ಟು ತೊಟ್ಟ ಚೆಲುವಾಗಿರುವ ಕೊಂಡಾಡುವ, ಧರ್ಮವನ್ನು ಆಚರಿಸುವ ಜನರಿಂದ ಕೂಡಿದ ಈ ಬೀಡು ಪುಣ್ಯದ ನೆಲಮನೆಯೆನಿಸುವುದು.

ಪುಣ್ಯ, ಪುರು, ಪತಿ ಮೊದಲಾದ ಪದಗಳು ಸಂಸ್ಕೃತವಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲಿ ಪದ್ಯ ರಚನೆಯಾಗಿದೆ.

ಅಜಿತ ತೀರ್ಥಂಕರ ಪುರಾಣದಲ್ಲಿ ಪುರುವರ್ಣನೆಯ ಪದ್ಯ ಹೀಗಿವೆ.

ಪೆರ್ವೀದಿಗಳಿಂ ನೇಸಱು
ಮಿರ್ವಡಗಲು ಮಸೆಯೆ ಬೀದಿಬೀದಿಗಳೆಲ್ಲಂ
ಸರ್ವಮಣಿ ತೋರಣಂಗಳ್
ಪರ್ವಿರೆ ಸೊಗಯಿಪುದು ಸಮವಸರಣ ವಿಲಾಸಂ[೧೦೦]

ಹೆದ್ದಾರಿಗಳಿಂದು ಸೂರ್ಯನ ಬೆಳಕಿನ ಕಿರಣಗಳಿಂದ ಶೋಭಿಸುತ್ತಿರಲು ಬೀದಿ ಬೀದಿಗಳಲ್ಲಿ ಮಣಿ ತೋರಣಗಳು ಶೋಭಿಸಲು ಸಮವಸರಣ ವೈಭವವು ರಂಜನೀಯವಾಯಿತು.

ಸರ್ವಮಣಿ, ತೋರಣ, ವಿಲಾಸ, ಸಮವಸರಣ ಪದಗಳು ಸಂಸ್ಕೃತದ್ದಾಗಿವೆ.

ನೀತಿ ಬೋಧನೆಯ ಪದ್ಯಗಳು

ವಿಶೇಷವಾಗಿ ಮಹಾಕಾವ್ಯಗಳಲ್ಲಿ ನೀತಿ ಪದ್ಯಗಳು ಅಚ್ಚಗನ್ನಡದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

ಕಾಯ್ಪುಟಲುಱೆ ಜತುಗೃಹದೊಳ
ಗೆಯ್ವುರುಮಂ ಮಂತ್ರಬಲದೆ ಸುಟ್ಟೊಡಮವರಂ
ದಯ್ವಬಲಮೊಂದೆ ಕಾದುದು
ದಟ್ಟಮನಾರಯ್ಯ ಮೀಱೆ ಬಾಟಲ್ ನಟೆವರ್[೧೦೧]

ಅರಗಿನ ಮನೆಯಲ್ಲಿ ಪಾಂಡವರನ್ನು ಕೂಡಿಹಾಕಿ ಬೆಂಕಿ ಹಚ್ಚಿದರೂ ಅವರು ಸಾಯದೆ ಬುದ್ಧಿಬಲ, ಆಲೋಚನ ಶಕ್ತಿಯಿಂದ ತಪ್ಪಿಸಿಕೊಂಡರು ಮೇಲಾಗಿ ದೈವಬಲ ಅವರ ಮೇಲಿದ್ದರಿಂದ ಅವರು ಬದುಕುಳಿದರು. ವಿಧಿಯನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ.

ಜತುಗ್ನಹ, ಮಂತ್ರ, ಬಲ ಸಂಸ್ಕೃತ ಪದಗಳು ಬಳಕೆಯಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲಿಯೇ ಕಾವ್ಯ ರಚನೆಯಾಗಿವೆ.

ಜನ್ನಕವಿಯ ಅನಂತನಾಥ ಪುರಾಣದಲ್ಲಿ ಅಚ್ಚಗನ್ನಡದಲ್ಲಿ ಬಳಕೆಯಾಗಿರುವ ನೀತಿ ಪದ್ಯಗಳನ್ನು ಗಮನಿಸಬಹುದಾಗಿದೆ.

ಪೊಸಸುಣ್ಣ ಸೂಡು ಬಾಡಿರೆ
ಬಸಮಱಿದು ಬಟಲ್ದು ನೆೞಲ ಕಳಕಳದಿಂ ಪೊ
ಕ್ಕಸಿ ಪತ್ರವನದ ಕೋರೆಲೆ
ಕುಸುಮದ ಕೊನೆಕೊಯ್ದು ಕೊಱಿದು ಕುಱಿದಱಿಯಪ್ಪರ್[೧೦೨]

ಹೊಸ ಚೂರ್ಣದ ಗೊಂಚಲು ಬಾಡಿರಲು ಆಯಾಸ ಪಟ್ಟು ಬಳಲಿ ನೆರಳನ್ನು ಆಶ್ರಯಿಸಿರಲು ಖಡ್ಗದ ವನದಲ್ಲಿ ಹೂವಿನ ತೊಟ್ಟನ್ನು ಕೊಯ್ದು ಕೊರೆದು ತುಂಡು ತುಂಡು ಮಾಡುವರು.

ಪತ್ರ, ಕುಸುಮ, ಕೋಕಿಲೆ, ಪದಗಳು ಸಂಸ್ಕೃತದ್ದಾಗಿದ್ದು ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿದೆ.

ಪೊನ್ನ ಕವಿಯ ಶಾಂತಿ ಪುರಾಣದಲ್ಲಿ ಬಳಕೆಯಾಗಿರುವ ಪಗ್ಯ

ಬಗೆಯದಿರೆಯಿರೆ ಕೃತಾಂತಂ
ಬಗೆದಂ ಪೞತೊಂದನಾದ ಪು (ಟು) ವಗೆಯುಮವಂ
ಬಗೆಯದಿರೆ ನಿಮಿರ್ಗುಮಾತಂ
ಬಗೆದೊಡೆ ಬಗೆದಂತೆ ಬಗೆದ ಬಗೆ ನಿಮಿರ್ದಪುದೇ[೧೦೩]

ಬೇರಾವ ಯೋಚನೆಯನ್ನು ಮಾಡದಿದ್ದರೂ ಕೃತಾಂತನು ಬೇರೊಂದು ಯೋಚನೆ ಮಾಡಿದನು. ಆತನು ಬಗೆಹರಿಯದಿರಲು ಯಾರ ಕೆಟ್ಟ ಯೋಚನೆಯಾದರೂ ಈಡೇರಲಾರದು. ಆತನ ಯೋಚನೆ ಮಾತ್ರ ಆತ ಯೋಚಿಸಿದಂತೆಯೇ ನಡೆಯಿತು. ಈ ಪದ್ಯದಲ್ಲಿ ಕೃತಾಂತ ಪದವೊಂದನ್ನು ಹೊರತುಪಡಿಸಿದರೆ ಉಳಿದಂತೆ ಪದ್ಯ ಅಚ್ಚಗನ್ನಡದಲ್ಲಿಯೇ ರಚನೆಯಾಗಿದೆ.

ಅಜಿತ ತೀರ್ಥಂಕರ ಪುರಾಣದಲ್ಲಿಯೂ ಅಚ್ಚಗನ್ನಡದಲ್ಲಿ ಬಳಕೆಯಾಗಿರುವ ನೀತಿ ಪದ್ಯಗಳನ್ನು ಕಾಣಬಹುದಾಗಿದೆ.

ನೆನೆಯದೆ ಕಾಣದೆ ಕೇಳದೆ
ತನುವಿನ ಪೊಲ್ಲಮೆಯನಱಿದುಮಱಿತೆಯದೆ ತೋವೆಯಲ್
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾದ್ಯ ಕಾರಣಂ ಪೆಱತುಂಟೇ[೧೦೪]

ನೆನಪಿಸದೆ, ಕಾಣದೆ, ಕೇಳದೆ ದೇಹದ ಕೇಡನ್ನು ತಿಳಿದೂ ತಿಳಿಯದೆ ತ್ಯಾಗ ಮಾಡುವುದಕ್ಕೆ ಮನಸಿರುವುದಾದರೆ ಜೀವಕ್ಕೆ ಈ ದೇಹ ಇರುವುದಾದರೆ ವೈರಾಗ್ಯಕ್ಕೆ ಇದಕ್ಕಿಂತ ಬೇರೆ ಕಾರಣ ಇರುವುದೇ?

ಪೊಲ್ಲಮೆ ಪರಮತದೊಳ್ ಫಲ
ವಿಲ್ಲವಜೋಳ್ ತೊಡರ್ದು ಕಿಡದಿರಲೆ ಜೀವನೆ ನೀ
ನಲ್ಲಿಯ ತೊಡರ್ವಯ್ ತಿಂಬರ
ನಲ್ಲದೆ ಮೆಚ್ಚದೆಂಬ ನುಡಿ ತಪ್ಪುಗುಮೇ[೧೦೫]

ಬೇರೆ ಧರ್ಮದ ಬಗೆಗೆ ತಿರಸ್ಕಾರವಿರುವುದು ಸರಿಯಲ್ಲ. ಅವರಲ್ಲಿ ಜಗಳವಾಡಿ ಎಲ್ಲೈ ಜೀವವೆ ಕೆಟ್ಟು ಹೋಗದೇ ಹಾಗೆನಾದರೂ ಮಾಡಿದರೆ ನೀನು ಅಲ್ಲಿಯೇ ಬಂಧಿಯಾಗುವೆ. ಏಕೆಂದರೆ ಕುರಿಯು ತನ್ನನ್ನು ಯಾರು ತಿನ್ನುತ್ತಾರೆಯೋ ಅವರನ್ನೇ ಹೆಚ್ಚು ಆಶ್ರಯಿಸುತ್ತದೆ. ಎಂಬ ಮಾತು ತಪ್ಪಾಗುವುದೇ?

ಈ ಪದ್ಯಗಳಲ್ಲಿ ಪರಮತ, ಫಲ, ಜೀವ, ಸಂಸ್ಕೃತ ಪದಗಳು ಬಳಕೆಯಾಗಿದ್ದು ಉಳಿದಂತೆ ಅಚ್ಚಗನ್ನಡದಲ್ಲಿ ಕಾವ್ಯ ರಚನೆಯಾಗಿದೆ.

ಪಿಡಿ ಪಿಡಿ ಕಟ್ಟು ಕಟ್ಟಡಸಿ ಘಾತಿಸು ಘಾತಿಸು ಸಂಧಿಸಂಧಿಯಂ
ಕಡಿ ಕಡಿ ಕುತ್ತು ಕುತ್ತು ಬಲಿಗೆಯ್ ಬಲಿಗೆಯ್ ಪೆಱವೆಣ್ಗೆ ಸೋಲ್ವ ಕ
ಳ್ಗುಡಿವಡದಿಂಬ ನಂಬಿದರನೋವದೆ ಛಿದ್ರಿಪ ಕಳ್ವ ಕಳ್ಳರೊಳ್
ನುಡಿವಱಿಯಾದನೆಂದು ನವನಾರಕರಂ ಪರಿದೆಯ್ದೆ ನಾರಕರ್[೧೦೯]

ಪರನಾರಿಯರನ್ನು ಬಯಸುವವರು, ಕಳ್ಳುಕುಡಿದು, ನಂಬಿದವರನ್ನು ಹಿಂದೂಮುಂದೆ ನೋಡದೆ ತೊಂದರೆ ಕೊಡುವವರನ್ನು, ಕಳ್ಳರನ್ನು, ಪಾಪಿಗಳನ್ನು ಹಿಡಿದು ಕಟ್ಟಿ ಬಲವಾಗಿ ಹೊಡೆದು ಚುಚ್ಚಿ ಬಲಿಕೊಡತೊಡಗಿದ್ದರು.

ಘಾತಿಸು, ಸಂಧಿ, ಛಿದ್ರಿಪ, ನವನಾರಕ, ನಾಯಕ ಎಂಬ ಹಲವು ಸಂಸ್ಕೃತ ಪದಗಳು ಪ್ರಯೋಗಗೊಂಡಿವೆ.

ಭಾಗ - ೨

ಮೇಲಿನ ವರ್ಣನೆಗಳ ಸಂದರ್ಭದಲ್ಲಿ ಮಾತ್ರವಲ್ಲದೆ ಮಹಾಕಾವ್ಯಗಳ ಇನ್ನೂ ಅನೇಕ ವರ್ಣನೆಗಳಲ್ಲಿ ಈ ಅಚ್ಚಗನ್ನಡ ರಚನೆ ಪ್ರಯೋಗಗೊಂಡಿದೆ. ಉದಾಹರಣೆಗೆ ಶುಭ ಹಾರೈಕೆಯ ಪದ್ಯಗಳು, ವೀರತ್ವ, ಉತ್ಸವ ವರ್ಣನೆ, ಕುಮಾರೋದಯ ವರ್ಣನೆ, ಹಾಸ್ಯ, ತಪಸ್ಸು, ಸಲುಗೆ, ಸ್ನೇಹ ವರ್ಣನೆ ನಾಡು ನುಡಿಯ ವರ್ಣನೆಯ ಸಂದರ್ಭಗಳಲ್ಲೂ ಅಚ್ಚಗನ್ನಡ ರಚನೆಗಳು ಬಳಕೆಯಾಗಿವೆ. (ನೋಡಿ : ಅನುಬಂಧ-೨)

ಕನ್ನಡ ಕಾವ್ಯ ಭಾಷೆ ಮತ್ತು ಸಂಸ್ಕೃತ ಎನ್ನುವ ನಿಬಂಧದಲ್ಲಿ ಜೆ.ಶ್ರೀನಿವಾಸ ಮೂರ್ತಿಯವರು ಸಂಸ್ಕೃತ ಮಹಾಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಗಳು ಅದರಲ್ಲೂ ಪ್ರಕೃತಿಯನ್ನು ಕುರಿತಂತೆ ಹಲವಾರು ವರ್ಣನೆಗಳ ಕಟ್ಟು ಹೇಳಿದೆ. ಕವಿಗಳು ಪ್ರಾಯಿಕವಾಗಿ ಅದನ್ನು ಅನುಸರಿಸಿದ್ದಾರೆ ಅದಲ್ಲದೆ ಹೊಸ-ಹೊಸ ವರ್ಣನೆಗಳು ಕವಿಸ್ವಭಾವಕ್ಕೆ ಅನುಗುಣವಾಗಿ ವಸ್ತು ನಿರ್ವಹಣೆಗೆ ಅನುಗುಣವಾಗಿ ಬಂದಿವೆ. ಕವಿ ಅಥವಾ ಒಂದು ಕಾಲದ ಕವಿಗಳು ಎಂತಹ ವಸ್ತು ಅಥವ ಎಂಥ ಪ್ರಸಂಗದ ನಿರ್ವಹಣೆಗೆ ಸಂಸ್ಕೃತವನ್ನಾಶ್ರಯಿಸುತ್ತಾರೆ ಮತ್ತು ಹೇಗೆ ಎಂದು ನೋಡಬಹುದು. ಉದಾಹರಣೆಗೆ ಸ್ತುತಿಗೆ ಬಹಳ ಮಟ್ಟಿಗೆ ಸಂಸ್ಕೃತ ಬಳಸಿದರೆ, ಪ್ರಕೃತಿ ವರ್ಣನೆಗೆ ಪಂಪ ಮೊದಲ ಆಶ್ವಾಸದಲ್ಲಿ (ಹಿಮಾಲಯದ ವರ್ಣನೆಗೆ) ಸಂಸ್ಕೃತ ಹೆಚ್ಚಾಗಿ ನಾಲ್ಕನೆ ಆಶ್ವಾಸದಲ್ಲಿ (ಬನವಾಸಿಯ ಪರಿಸರಕ್ಕೆ) ಕನ್ನಡ ಹೆಚ್ಚಾಗಿ ಬಳಸಿದ್ದಾನೆ. ಕುವೆಂಪು ರಾಮಾಯಣದರ್ಶನದಲ್ಲಿ ಪ್ರಕೃತಿ ಚಿತ್ರಣ ಸಂದರ್ಭದಲ್ಲಿ ಕನ್ನಡವೇ ಹೆಚ್ಚು ಸಹಜವಾಗಿ ಬಂದಿದ್ದರೆ ಯುದ್ಧದಲ್ಲಿ ಆಧುನಿಕ ವಿಷಮಸ್ಥಿತಿಗೆ ಸರಿಹೊಂದುವ ಭಾಗದಲ್ಲಿ ಸಂಸ್ಕೃತ ಹೆಚ್ಚಾಗಿದೆ. ಇವುಗಳ ವಿಸ್ತಾರವಾದ ಆಳವಾಗ ವಿಶ್ಲೇಷಣೆ ಕನ್ನಡ ಕಾವ್ಯಕ್ಕೆ ಸಂಸ್ಕೃತದ ಆಯ್ಕೆ ಯಾವ ಸಂದರ್ಭಕ್ಕೆ ಬೇಕಾಗಿದೆ ಎಂದು

ಗುರುತಿಸಬಹುದು. ''ಕವಿಯ ಕೃತಿಯನ್ನು ಹೀಗೆ ಎಲ್ಲೆಲ್ಲ ಯಾವ ಹದದಲ್ಲಿ ಯಾವ ಅರ್ಥ ಸಾಧನೆಗೆ ಸಂಸ್ಕೃತದ ಬಳಕೆಯಾಗಿದೆ, ಅದು ಉಳಿದ ಭಾಗದೊಡನೆ ಪಡೆಯುವ ಸಾವಯವ ಸಂಬಂಧವೇನು? ಎಂದು ಪರ್ಯಾಲೋಚಿಸಿದರೆ ಆ ಕವಿಯ ಭಾಷೆ ಹಾಗೂ ಆಯಾ ಕವಿಯ ಭಾಷೆಯಲ್ಲಿ ಸಂಸ್ಕೃತದ ಪಾತ್ರವೇನ ಎಂದು ಗುರುತಿಸಬಹುದು.'' (ಪು-೧೯೬)

ಆದರೆ ಮೇಲೆ ಚರ್ಚಿಸಿದ ಪದ್ಯಗಳು ಮುಖ್ಯವಾಗಿ ಮಾರ್ಗ ಕವಿಗಳು ತಮ್ಮ ಕಾವ್ಯಗಳಲ್ಲಿ ಅಚ್ಚಗನ್ನಡದ ರಚನೆಗಳನ್ನು ಎಷ್ಟು ಪ್ರಮಾಣದಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುದಕ್ಕೆ ನಿದರ್ಶನವಾಗಿದೆ. ಹೀಗೆ ನೋಡಿದರೆ ಕನ್ನಡ ಕವಿಗಳು ಸಂಸ್ಕೃತ ರಚನೆಗಳಿಗೆ ಸರಿಮಿಗಿಲಾಗಿ ಅಚ್ಚಗನ್ನಡ ರಚನೆಗಳನ್ನು ಪ್ರಯೋಗಿಸಿರುವದು ಕಂಡುಬರುತ್ತದೆ. ಸಾಮಾನ್ಯವಾಗಿ ಶೃಂಗಾರ ಮತ್ತು ಸ್ತ್ರೀ ವರ್ಣನೆಗಳನ್ನು ಬಳಸಿದ್ದಾರೆ. ಯುದ್ಧದ ಸಂದರ್ಭದಲ್ಲೂ ಇವುಗಳ ಪ್ರಮಾಣ ಅಧಿಕಾವಾಗಿದೆ. ಹಾಗಾದುದರಿಂದ ಕೆಲವು ಸಲ ಕನ್ನಡ ಸಂಸ್ಕೃತದ ಅಚ್ಚಗನ್ನಡ ರಚನೆಗಳಿಗೆ ನಿರ್ದಿಷ್ಟ ಕಾರಣವೇನು ಎಂದು ಗುರುತಿಸುವುದು ಕಷ್ಟ. ಜೆ.ಶ್ರೀನಿವಾಸ ಮೂರ್ತಿಯವರು ತಮ್ಮ ನಿಬಂಧದ ಭಾಗ ಮೂರರಲ್ಲಿ ಈ ಕುರಿತು ಕೆಲವು ವಿವರಗಳನ್ನು ನೀಡಿದ್ದಾರೆ. ಈ ಕುರಿತ ಹೆಚ್ಚಿನ ಅಧ್ಯಯನಕ್ಕೆ ಅವಕಾಶವಿದೆ.

ಪ್ರಾಚೀನ ಕನ್ನಡ ಕವಿಗಳು ತಮ್ಮ ಬಗ್ಗೆ ಹೇಳಿಕೊಳ್ಳುತ್ತಾ ಉಭಯ ಭಾಷಾ ವಿಶಾರದರು ಎಂದು ಸ್ಪಷ್ಟಪಡಿಸಿದ್ದಾರೆ. ಈ ಉಭಯಭಾಷಾ ವಿಶಾರದರು ಎಂದರೆ ಯಾವ ಅರ್ಥದಲ್ಲಿ ಎಂಬುದು ಇದೀಗ ಚರ್ಚಿಸಬಹುದಾದ ವಿಷಯವಾಗಿದೆ. ಉಭಯ ಭಾಷೆಗಳೆಂದರೆ ಕನ್ನಡ ಸಂಸ್ಕೃತಗಳೆಂದು ಬಹುಮಟ್ಟಿಗೆ ವಿದ್ವಾಂಸರು ನಿರ್ಧರಿಸಿದ್ದಾರೆ. ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ಹೇಳುವುದಾದರೆ ಅದು ಕೇವಲ ಕನ್ನಡವಲ್ಲ ಅಚ್ಚಗನ್ನಡಕ್ಕೆ ಸಂಬಂಧಿಸಿದ ವಾದ ಎಂದು ನಾವು ತರ್ಕಿಸಬಹುದಾಗಿದೆ. ಪ್ರಾಚೀನ ಕನ್ನಡ ಕವಿಗಳು ಅಲ್ಲಲ್ಲಿ ತಿರುಳುಗನ್ನಡದ ಕುರಿತು ಪ್ರಾಸ್ತಾಸಿದ್ದನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಅದರಿಂದ ಅಚ್ಚಗನ್ನಡ ಮತ್ತು ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ ತಾವು ಕಾವ್ಯವನ್ನು ಬರೆಯಬೇಕೆಂದು ಅವರು ಅಂದುಕೊಂಡಂತಾಗಿದೆ.

ಇಲ್ಲಿ ಸಂಗ್ರಹಿಸಿರುವ ಮತ್ತು ಚರ್ಚಿಸಿರುವ ಪದ್ಯಗಳು ಇದಕ್ಕೆ ಪೂರಕವಾದ ನಿದರ್ಶನಗಳಾಗಿವೆ.

ಆಂಡಯ್ಯನಿಗೆ ಹಿನ್ನೆಲೆಯಾಗಿ ಇಂತಹ ವಿಫುಲವಾದ ಅಚ್ಚಗನ್ನಡ ರಚನೆಗಳು ಅಚ್ಚಗನ್ನಡದಲ್ಲಿ ಕಾವ್ಯ ಬರೆಯುವುದಕ್ಕೆ ಪ್ರೇರಣೆಯಾಗಿವೆ ಎಂದು ಈಗ ಈ ಮೇಲಿನ ಆಧಾರದಿಂದ ಪ್ರತಿಸಾಧಿಸಬಹುದು. ಪ್ರಾಚೀನ ಕನ್ನಡ ಕವಿಗಳು ಪ್ರಸಂಗವಶಾತ್ ಪ್ರಯೋಗಿಸಿರುವ ಅಚ್ಚಗನ್ನಡ ಭಾಷೆಯನ್ನೇ ಕಾವ್ಯ ಮಾಧ್ಯಮವಾಗಿ ಆಂಡಯ್ಯ ಬಳಸಿ ಯಶಸ್ವಿಯಾದ. ಅಂತಹ ಸಾಧ್ಯತೆಯನ್ನು ಮಾರ್ಗ ಕವಿಗಳು ಈಗಾಗಲೇ ನಿರ್ಮಿಸಿದ್ದರು ಎಂಬುದಕ್ಕೆ ಈ ಅಧ್ಯಾಯದಲ್ಲಿ ವಿಫುಲವಾದ ಮಾಹಿತಿಯನ್ನು ನೀಡಲಾಗಿದೆ.

❐

ಅಧ್ಯಾಯ -೬

ಅಚ್ಚಗನ್ನಡ ಕವಿಗಳು ಮತ್ತು ಕಾವ್ಯ ಸಮೀಕ್ಷೆ

ಭಾಗ - ೧

ಪ್ರಸ್ತುತ ಅಧ್ಯಾಯದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಅಚ್ಚಗನ್ನಡ ಕವಿಗಳ ಬದುಕಿನ ಬಗ್ಗೆ ವಿವರಣೆಯಿದೆ. ಅಚ್ಚಗನ್ನಡ ಕವಿಗಳಲ್ಲಿ ಆಂಡಯ್ಯನು ಪೂರ್ವಕಾಲದವನಾಗಿರುವುದರಿಂದ ಆತನ ಕುರಿತು ವಿದ್ವಾಂಸರು ಮಾಡಿರುವ ಎಲ್ಲ ಚರ್ಚೆಗಳನ್ನು ಒಂದೆಡೆ ಕಲೆಹಾಕಲಾಗಿದೆ. ಹಾಗೆಯೇ ಇನ್ನುಳಿದ ಅಚ್ಚಗನ್ನಡ ಕವಿಗಳಾದ ಮುಳಿಯ ತಿಮ್ಮಪ್ಪಯ್ಯ ಮತ್ತು ಕೊಳಂಬೆ ಪುಟ್ಟಣ್ಣಗೌಡರ ಬಗೆಗೂ ಮಾಹಿತಿ ನೀಡಲಾಗಿದೆ. ಎರಡನೆಯ ಭಾಗದಲ್ಲಿ ಅಚ್ಚಗನ್ನಡ ಕಾವ್ಯಗಳ ಕಥೆಯನ್ನು ಇದಕ್ಕೆ ಪೂರಕವಾಗಿ ನೀಡಲಾಗಿದೆ. ಪ್ರಸ್ತುತ ಅಧ್ಯಾಯವು ನಿಬಂಧದ ಇತರ ವಿವರಗಳಿಗೆ ಪೂರಕವೆಂಬ ನೆಲೆಯಲ್ಲಿ ಅದಕ್ಕೆ ಅಗತ್ಯವಾದಷ್ಟೇ ವಿವರಗಳನ್ನು ಇಲ್ಲಿ ನೀಡಲಾಗಿದೆ.

೧. ಆಂಡಯ್ಯ:

'ಕಬ್ಬಿಗರ ಕಾವಂ' ಕಾವ್ಯದ ಕರ್ತೃವಾದ ಆಂಡಯ್ಯ ಕಾವ್ಯಾರಂಭದಲ್ಲಿಯೇ ಸ್ವವಿಷಯವನ್ನು ಕುರಿತು ಕೆಲವು ಸಂಗತಿಗಳನ್ನು ಹೇಳಿಕೊಂಡಿದ್ದಾನೆ. ತನ್ನ ತಂದೆ, ತಾಯಿ, ಅಜ್ಜರ ಬಗ್ಗೆ, ವಂಶ, ಕಾಲ, ಮತಧರ್ಮದ ಜೊತೆಗೆ ಸಂಸ್ಕೃತವನ್ನು ಬೆರಕೆ ಮಾಡದೆಯೇ ಕನ್ನಡದಲ್ಲಿ ಕಾವ್ಯ ರಚನೆ ಮಾಡಿದ ಕವಿಗಳು ಹಿಂದೆ ಹುಟ್ಟಿರಲಿಲ್ಲ; ಮಾತನಾಡುವ ಭಂಗಿಯಲ್ಲಿ ಅಂದಚೆಂದಗಳಿಗೆ ಭಂಗ ಬರದಂತೆ ಕಾವ್ಯ ರಚನೆ ಮಾಡಬಲ್ಲ ಕವಿಯೆಂದರೆ ಆಂಡಯ್ಯನೊಬ್ಬನೇ ಎಂಬುದಾಗಿ ವಿದ್ವಾಂಸರು ಮೆಚ್ಚಿ ನುಡಿಯಲಾಗಿ ತಾನು ಅಚ್ಚಗನ್ನಡದಲ್ಲಿ ಕಾವ್ಯವನ್ನು ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಈ ಕಾವ್ಯವನ್ನೋದಿ ಇದರ ನಾವಿನ್ಯವನ್ನು ಮೆಚ್ಚಿ ತಲೆದೂಗಿದ ವಿದ್ವಾಂಸರು ಇದಕ್ಕೆ 'ಸೊಬಗಿನ ಸುಗ್ಗಿ' ಎಂದು ನಾಮಕರಣ ಮಾಡಿದುದಾಗಿಯೂ ಕವಿ ಕಾವ್ಯದ ಕೊನೆಯ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.[೧]

ಕವಿಯ ಕಾಲ:

ಆಂಡಯ್ಯನು ತನ್ನ ಆತ್ಮ ಪ್ರಶಂಸೆಯ ಸಂದರ್ಭದಲ್ಲಿ, ತಕ್ಕಮಟ್ಟಿನ ಚಾರಿತ್ರಿಕ ಅಂಶಗಳನ್ನು ಹೇಳಿಕೊಂಡಿದ್ದರೂ ತನ್ನ ಹಾಗೂ ತನ್ನ ಕೃತಿಯ ಕಾಲದ ಬಗೆಗೆ ನೇರವಾಗಿ ಹೇಳಿಕೊಂಡಿಲ್ಲ. ಆತನ ಕಾಲ ನಿರ್ಣಯಕ್ಕೆ ಕಾವ್ಯದಲ್ಲಿ

ಸ್ಮರಿಸಿದ ಪೂರ್ವಕವಿಗಳ ಆಧಾರವನ್ನು ಬಿಟ್ಟರೆ ಬೇರೆ ಯಾವ ಖಚಿತವಾದ ಆಂತರಿಕ ಆಧಾರಗಳಿಲ್ಲ. ಬಾಹ್ಯ ಪ್ರಮಾಣಗಳೂ ದೊರೆಯುವುದಿಲ್ಲ.

ಮುಳಿಯ ತಿಮ್ಮಪ್ಪಯ್ಯನವರು ಆಂಡಯ್ಯನು ಕದಂಬ ಕಾಮನ ಆಶ್ರಯದಲ್ಲಿದ್ದು ಈ ಕಾವ್ಯ ಬರೆದನೆಂದೂ, ನಾಯಕನೊಡನೆ ಈ ಕದಂಬ ಕಾಮನು ಅಭಿನ್ನವಾಗಿ ವರ್ಣಿಸಲ್ಪಟ್ಟಿರುವನೆಂದೂ ಹೇಳಿದ್ದಾರೆ.[೨] ಹಾಗೆಯೇ ಈ ನಾಯಕನೊಡನೆ ಕಾವ್ಯವು ರಾಜಕೀಯ ವಿಶ್ಲೇಷಣೆಯಿಂದ ಕೂಡಿದೆಯೆಂದೂ ಅವರು ಸುದೀರ್ಘ ವಿವರಣೆಯಿಂದ ಪ್ರತಿಪಾದಿಸಿದ್ದಾರೆ. ಮುಳಿಯರ ಈ ಅಭಿಪ್ರಾಯದತ್ತ ರಂ ಶ್ರೀ ಮುಗಳಿಯವರೂ ವಾಲಿದ್ದಾರೆ.[೩] ಸದಾನಂದ ನಾಯಕರೂ, ದೇ ಜವರೇಗೌಡರೂ ಇದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಇದೇ ಕಾರಣವನ್ನು ಮುಂದುಮಾಡಿ ಕದಂಬ ಕಾಮದೇವನು ಕ್ರಿ.ಶ.ಸುಮಾರು ೧೨೦೩ರಲ್ಲಿ ಬಲ್ಲಾಳನೊಡನೆ ಯುದ್ಧ ಮಾಡಿದ ಮೇಲೆ ಸ್ವಲ್ಪ ಕಾಲದೊಳಗೆ ರಾಜಭಕ್ತನಾದ ಆಂಡಯ್ಯನು ಈ ಕಾವ್ಯವನ್ನು ಬರೆದಿರಬೇಕೆಂದು ಮುಳಿಯ ತಿಮ್ಮಪ್ಪಯ್ಯನವರು ತರ್ಕಿಸಿದ್ದಾರೆ. ದೇ.ಜವರೇಗೌಡರು 'ಗೋಸಣೆ ಮೀರುವನ್ನಮಿದು ರಾಯನ ನಾಟ್ಕಿಳೊಳ್ಕೆ' ಎನ್ನುವ ಕವಿಯ ಮಾತಿನಿಂದ ಈ ಕೃತಿ ಕಾಮದೇವನ ಜೀವಿತ ಕಾಲದಲ್ಲಿಯೇ ರಚಿತವಾಗಿರಬೇಕೆಂದೂ ಸದಾನಂದನಾಯಕರು ತೀರ್ಮಾನಿಸಿರುವಂತೆ ಕಬ್ಬಿಗರ ಕಾವದ ಕಾಲವು ಸುಮಾರು ೧೨೧೭ ಎಂದು ನಿರ್ಣಯಿಸಿದ್ದಾರೆ.[೪]

ಆಂಡಯ್ಯನ ಕಾಲದ ಈಚಿನ ಗಡುವನ್ನು ನಿರ್ಧರಿಸುವಲ್ಲಿ ಕೇಶಿರಾಜನ ಶಬ್ದಮಣಿದರ್ಪಣವೂ ಒಂದು ಮಹತ್ವದ ಸಾಧನವಾಗಿ ನಿಲ್ಲುತ್ತದೆ. ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ಅಪಭ್ರಂಶ ಪ್ರಕರಣದ ಕೊನೆಗೆ

ಸಕ್ಕದಮಂ ಮರೆಗೊಳ್ಳದೆ
ಚೊಕ್ಕಳಿಕೆಯಿನಚ್ಚಗನ್ನಡಂ ಪೇವ್ವಿರ ಕೈ
ವೊಕ್ಕ ನಿಧಿಯೆನಿಪಪಭ್ರಂ
ಶಕ್ಕಂ ದೇಶೀಯ ಪದಕಮುಂಟು ಸಮಾಸಂ[೫]

ಎಂದು ಹೇಳಿರುವುದರಿಂದ ಸಂಸ್ಕೃತವನ್ನು ಮೊರೆ ಹೋಗದೆ ಅಪಭ್ರಂಶವನ್ನೇ ಕೈವೊಕ್ಕ ನಿಧಿಯನ್ನಾಗಿ ಮಾಡಿಕೊಂಡು ಅಚ್ಚಗನ್ನಡದಲ್ಲಿ ಕಾವ್ಯರಚಿಸಿದ ಕವಿಗಳ ಕೃತಿಯನ್ನೇ ಗಮನಿಸಿ ಈ ಮಾತನ್ನು ಹೇಳಿರುವಂತೆ ಭಾವಿಸುವುದು ಸರಳ. ಅಲ್ಲದೆ ಆಂಡಯ್ಯನ ಅಚ್ಚಗನ್ನಡ ಕಾವ್ಯದಲ್ಲಿ ಅಪಭ್ರಂಶವೇ ಕೈವೊಕ್ಕ ನಿಧಿಯಾಗಿದೆ. ಆದ್ದರಿಂದ ಕೇಶಿರಾಜನು ಆಂಡಯ್ಯನನ್ನು ಹಾಗೂ ಅವನ ಕೃತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ಮಾತನ್ನು ಹೇಳಿರುವನೆಂದು ಭಾವಿಸುವದೂ ಅಷ್ಟೇ ಸಹಜ. ಆದರೆ

''ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳ ಪೇವಿಲಾಱಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತಾಡಿದವೊಲಂದಮನಾಳ್ದಿರೆ ಬಲ್ಬುನೆ
ಟ್ಟಗೆ ದೊರಕೊಂಡು ದಿಂತಿವನೊಳಲ್ಲದೆ ಕೇಳ್‌ದೊರೆಕೊಳ್ಳಿದಾರೋಳಂ''[೬]

ಎಂಬ ಆಂಡಯ್ಯನ ಈ ಮಾತಿನಲ್ಲಿಯ ಪೇಟಲಾಜನಿತುಂ ಸಲೆ ಮುನ್ನಿನ ಪೆಂಪನಾಳ್ದ ಕಬ್ಬಿಗರ್ ಎಂಬ ಬಹುವಚನವನ್ನು ಲಕ್ಷಿಸಿದರೆ ಸಕ್ಕವವನ್ನು ಬೆರಸದೆ ಕನ್ನಡದಲ್ಲಿ (ಅಚ್ಚಗನ್ನಡದಲ್ಲಿ) ಕಾವ್ಯ ರಚಿಸಿದ ಕವಿಗಳುಂಟು ಆದರೆ ಆ ಕಾವ್ಯಗಳು ಪೆಂಪನಾಳ್ದ ಕಾವ್ಯಗಳಾಗಲಿಲ್ಲ ಮತ್ತು ಆ ಕವಿಗಳೆಲ್ಲರೂ ಅಚ್ಚಗನ್ನಡದ ಕಾವ್ಯ ರಚಿಸುವಲ್ಲಿ ಯಶಸ್ವಿಗಳಾಗಲಿಲ್ಲ ಎಂದು ಅರ್ಥವಾಗುತ್ತದೆ. ಅಂಥವರ ಸೋಲನ್ನು ಅದಕ್ಕೆ ಕಾರಣವನ್ನು ಅರ್ಥಮಾಡಿಕೊಂಡ ಕೇಶಿರಾಜ ''ಸಂಸ್ಕೃತಮಂ ಮಱೆಗೊಳ್ಳದೆ ನಱೆವಣಿಗೆಯಿಂದಚ್ಚಗನ್ನಡಮಂ ಪೇೞ್ವೆರ್ಗೀಯಪಭ್ರಂಶಮಂ'' (ಶ.ದರ್ಪಣ ೩೧೪ ನೇ ಸೂತ್ರ) ಎಂದು ಅಚ್ಚಗನ್ನಡ ಕಾವ್ಯರಚನೆಯ ಯಶದ ಗುಟ್ಟನ್ನು ಸೂಚಿಸುವಂತೆ ಕಂಡುಬರುತ್ತದೆ. ಹೀಗೆ ಅಚ್ಚಗನ್ನಡ ಕಾವ್ಯ ರಚಿಸುವಲ್ಲಿ ಕೇಶಿರಾಜನು ಸೂಚಿಸಿದ ಮಾರ್ಗದಲ್ಲಿಯೇ ಮುನ್ನಡೆದ ಆಂಡಯ್ಯ ಕೇಶಿರಾಜನ ನಂತರದ ಅಥವಾ ಸಮಾಕಾಲೀನನೆಂದು ನಂಬುವುದು ಹೆಚ್ಚು ಸೂಕ್ತವಾಗುತ್ತದೆ ಎಂಬುದು ಕೋತಿನ ಅವರ ಅಭಿಪ್ರಾಯ.[೭]

ಹೆಸರಿನ ಕುರಿತು: ಆಂಡಯ್ಯ ಕವಿಯ ಹೆಸರಿಗೆ ಸಂಬಂಧಿಸಿದಂತೆಯೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ತಮಿಳಿನಲ್ಲಿ ಆಂಡಯ್ಯನೆಂಬ ಶಬ್ದಕ್ಕೆ (ಅಂಡ+ಅಯ್ಯ) 'ಆಳಿದಸ್ವಾಮಿ' ಎಂಬ ಅರ್ಥವಿದ್ದು ಜೈನರಲ್ಲಿ ಅರ್ಥದ ಹೆಸರು ರೂಢಿಯಲಿಲ್ಲವೆಂದೂ ಆಂಡಯ್ಯ ಎಂದರೆ (ಅಂಡಕ್ಕೆ+ಅಯ್ಯ) ಬ್ರಹ್ಮಯ್ಯ ಅಥವಾ ಭರ್ಮಪ್ಪ ಎಂಬ ಹೆಸರು ಅವರಲ್ಲಿ ವಾಡಿಕೆಯಲ್ಲಿರುವುದರಿಂದ ಅವನ ಹೆಸರು ಅಂಡಯ್ಯನೆಂದಿದ್ದು, ಅನಂತರ ಆಂಡಯ್ಯನೆಂಬ ರೂಪ ತಾಳಿರಬೇಕೆಂದು ಶ್ರೀಮಾನ್ ಮಂ.ಆ.ರಾಮಾನುಜಯ್ಯಂಗಾರರು ಊಹಿಸುತ್ತಾರೆ.[೮]

ಜೈನ ಕವಿಗಳು ಸಂಸ್ಕೃತ ಶಬ್ದಗಳ ವಿಕೃತ ರೂಪಗಳನ್ನೇ ತಮ್ಮ ಹೆಸರನ್ನಾಗಿ ಇಟ್ಟುಕೊಳ್ಳುತ್ತಿರುವುದು ಕನ್ನಡ ಸಾಹಿತ್ಯದಲ್ಲಿ ಕಂಡ ವಿಷಯವಾಗಿದೆ. ಆದಿನಾಥನ ಹೆಸರನ್ನು ಸಂಕ್ಷೇಪಮಾಡಿ ಆದಯ್ಯ ಎಂದು ಇಟ್ಟುಕೊಳ್ಳುತ್ತಾರೆ. ಆದಯ್ಯ ಎಂಬುದರ ವಿಕೃತ ರೂಪವೇ ಆಡಯ್ಯ. ಅದುವೇ ಆಂಡಯ್ಯವಾಗಿರಬೇಕೆಂದು ಪ್ರೊ.ಡಿ.ಕೆ.ಭೀಮಸೇನರಾಯರು ಅಭಿಪ್ರಾಯಪಡುತ್ತಾರೆ.[೯]

ಮೂಲದಲ್ಲಿ ಅಂಡಯ್ಯ ಎಂಬ ಹೆಸರೇ ಇದ್ದು ಅರಿಸಮಾಸ ದೋಷವನ್ನು ಮರೆಯಿಸುವ ಸಲುವಾಗಿ ಕವಿ 'ಆಂಡಯ್ಯ' ಎಂದು ಮಾರ್ಪಡಿಸಿಕೊಂಡಿರಬೇಕೆಂದು ಡಾ.ರಂ.ಶ್ರೀ ಮುಗಳಿಯವರು ಅಭಿಪ್ರಾಯ ಪಡುತ್ತಾರೆ.[೧೦]

ಅಣ್ಡೆ ಎಂದರೆ ತಮಿಳಿನಲ್ಲಿ ಶೈವ ಸನ್ಯಾಸಿಯೆಂದೂ ಶಿವಭಕ್ತರಿಗೆ ತಾನು ಮಿಗಿಲಾಗಿ ಅವರ ಕಣ್ಣು ತೆರೆಯುವಂತೆ ಮಾಡಿದ್ದರಿಂದ ಅವನು ತನ್ನ ಹೆಸರನ್ನು ಆಣ್ಡೆಯರ ಅಯ್ಯ - ಅಣ್ಡೆಯಯ್ಯ - ಆಂಡಯ್ಯನೆಂಬುದಾಗಿ ಇಟ್ಟುಕೊಂಡಿರಬೇಕೆಂದೂ ಸದಾನಂದನಾಯಕರು ಊಹಿಸಿದ್ದಾರೆ.[೧೧]

ಆದರೆ ಸದಾನಂದ ನಾಯಕರ ಊಹೆಯನ್ನು ನಿರಾಕರಿಸುವ ದೇ.ಜವರೇಗೌಡರು ಈ ಕಾವ್ಯವನ್ನು ರಚಿಸಿದ ನಂತರ ಕವಿ ತಂದೆ ತಾಯಿಯರಿಟ್ಟ ಹೆಸರನ್ನು ತ್ಯಜಿಸಿ ಬೇರೊಂದು ಹೆಸರನ್ನಿಟ್ಟುಕೊಂಡನೆ? ಅದು ನಿಜವಾದರೆ ಅವನ ಅಜ್ಜನಿಗೂ ಅದೇ ಹೆಸರಿತಲ್ಲ?. ಅದಕ್ಕೆ ಸಿಗುವ ಸಮಾಧಾನವೇನು? ಆದ್ದರಿಂದ ಬ್ರಹ್ಮಯ್ಯ ಎಂಬರ್ಥದ ಅಂಡಯ್ಯ ಮತ್ತು ಆಂಡಯ್ಯ ಎಂಬ ಹೆಸರೇ ನಿಜವಿರಬೇಕೆಂದು ಸದ್ಯಕ್ಕೆ ಒಪ್ಪಿಕೊಳ್ಳಲಾಗಿದೆಯೆಂದು ತಮ್ಮ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೧೨]

ಆಂಡಯ್ಯನ ವಂಶ:

ಆಂಡಯ್ಯನ ವಂಶದ ಬಗ್ಗೆಯೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕವಿಯ ಅಜ್ಜನನ್ನು 'ಲೆಕ್ಕಿಗರ ಪಿರಿಯ'ನೆಂದು ಕರೆದದ್ದರಿಂದ ಅವನು ಸೇನಬೋವ ಅಥವಾ ಕರಣಿಕನಾಗಿದ್ದಿರಬಹುದೆಂದು ರೈಸ್ ಕರ್ನಾಟಕ ಶಬ್ದಾನುಶಾಸನದ ಉಪೋದ್ಘಾತದಲ್ಲಿ ಹೇಳಿದ್ದಾರೆ.

ಲೆಕ್ಕಿಗ ಎನ್ನುವ ಶಬ್ದವನ್ನು 'ಸಂಖ್ಯಾವಾನ್' ಶಬ್ದಕ್ಕೆ ಸಮಾನಾರ್ಥಕವೆಂದು ಪರಿಗಣಿಸಿ 'ಲೆಕ್ಕಿಗರ ಪಿರಿಯ' ಎಂದರೆ ವಿದ್ವಾಂಸರಲ್ಲಿ ಶ್ರೇಷ್ಠನಾದವನೆಂಬುದಾಗಿ ಕೆಲವರು ಅರ್ಥಮಾಡುತ್ತಾರೆ. ಲೆಕ್ಕಿಗ ಶಬ್ದದ ಅರ್ಥವ್ಯಾಪ್ತಿಯನ್ನು ಲಂಬಿಸಿ ಗಣಿತಜ್ಞ ಎಂದೂ ಜ್ಯೋತಿಷ್ಯಜ್ಞ ಎಂದೂ ಅರ್ಥಮಾಡಬಹುದು. ಲೆಕ್ಕಿಗ ಶಬ್ದದ ಮೂಲವಾದ ಲೇಖನಿಕಃ ಶಬ್ದಕ್ಕೆ ಬರಹಗಾರ; ಕರಣಿಕ ಎಂಬ ಅರ್ಥವ್ಯಾಪ್ತಿಯಿದೆ. ಮೂಲರೂಪ ವಿಕಾರಹೊಂದಿ ಕನ್ನಡಕ್ಕೆ ಬರುವಾಗ ಅರ್ಥವೂ ವ್ಯತ್ಯಾಸವಾಗಬಹುದು. ಆಂಡಯ್ಯ ಕರಣಿಕರ ವಂಶಕ್ಕೆ ಸೇರಿದವನೆಂದರೆ ಅವನ ಘನತೆಗೆ ಎಳ್ಳಷ್ಟೂ ಕುಂದು ಬರುವುದಿಲ್ಲ. ಬಸವೇಶ್ವರರು, ಹರಿಹರರು ಮೊದಲಾದವರೂ ಲೆಕ್ಕಿಗರಾಗಿದ್ದರು? ಕರಣಿಕ ವಂಶದಲ್ಲಿ ಮಹಾವಿದ್ವಾಂಸ ಹುಟ್ಟಬಾರದೆಂದಿಲ್ಲ, ಆದ್ದರಿಂದ ಆಂಡಯ್ಯ ಕರಣಿಕರ ಕುಲದಲ್ಲಿ ಹುಟ್ಟಿದ ದೊಡ್ಡ ವಿದ್ವಾಂಸನೆಂದು ನಿಸ್ಸಂಶಯವಾಗಿ ಹೇಳಬಹುದೆಂಬುದು ದೇ.ಜವರೇಗೌಡರ ಅಭಿಮತವಾಗಿದೆ.[೧೩]

ಕವಿಯ ಜನ್ಮಸ್ಥಳ:

ಕಾವ್ಯದುದ್ದಕ್ಕೂ ಪ್ರಕೃತಿ ವರ್ಣನೆಗಳು ವಿಪುಲವಾಗಿವೆ. ಉದಾ: ಎಳನೀರ್ಗಳಂ ಪೊತ್ತಾಗಸದೆಡೆಗೆಡರ್ವ ಚೆಂದಂಗಿನ ಮರಂಗಳು (ಪು.೨೭) 'ಏಡವಿಡದೆ ಕಡಲ ತಡಿಗಳೊಳ್ ಪೊಂಬಾಳೆಯ ಕಂಪು ಪೊಂಪುಟಿವೋಗೆನೆಗೆದ ಕೌಂಗಿನ ಸಾಲಸಂದಣಿಗಳು (ಪ.೪೫) ಅಡರ್ದೆಲೆವಳ್ಳಿಗಳೆಲೆಯಂ ಪಿಡಿದಿರ್ಪಳಗೌಂಗಿನ ಚೆಲುವು (ಪ.೮೨) ಬಿಳೆಯ ಕರ್ವಿನ ಕೋಲ್ಗೆ ಕೊರಲುದ್ದಮಾದೆಳನೀರ ಪೊನಲು; ಎಲ್ಲಿಯಂ ಸೊಗಯಿಸುವ ಕಟಿವೆ (ಪು.೨೨) ಕಟಿವೆಯಂ ಮಡಿಗಳ ಬಟಿವಿಡಿದು ಬಳೆದ ಚೆಂಗಣಗಿಲೆ (ಪ.೪೫) ಬೆಂಗದಿರ್ಗಂ ತಣ್ಣದಿರ್ಗಂ ತೆಱಪುಗುಡದ ಸರಗಿ, ಸುರಹೊನ್ನೆ, ಇರುವಂತಿ, ಸೇವಂತಿಯ, ಪಲಸಿನ, ಮಾವಿನ, ದಾಳಿಂಬದ ಸಸಿಗಳ ಪಾಲ್ಗಳ ಚಿತ್ರ ಅದರಂತೆ ಕೆಂಗಣ್ಣಕ್ಕಿ, ಅಲರ್ವಕ್ಕಿ, ಕನ್ನಡ ವಕ್ಕಿ ಇತ್ಯಾದಿ. ಇದನ್ನು ಗಮನಿಸಿ ಆಂಡಯ್ಯನು ಮಲೆನಾಡಿನವನಿರಬೇಕೆಂದು ಕೋತಿನ ಅವರು ಊಹಿಸಿದ್ದಾರೆ.[೧೪]

''ಮಿಗೆ ಬೆಲೆಯೇಱಿದ ಪೊಲಿಯ, ಮಗರಿಯ, ದೋರಿಯದ, ಪಟಿಯ, ತಳಿರ್ವಟ್ಟೆಯ, ಕಾಡಿಗೆ ನೀರಿನ ಬಟ್ಟೆಯ, ಮಮಿಣೆಗೆಗಳು, ಸೋಲಿಪುವು ಸೀರೆವರದರ ಪಸರಂ[೧೫] ಎಂಬಲ್ಲಿಯ ಸೀರೆಗಳ ಹೆಸರುಗಳು, ಮಟಿಗೆ ಎನ್ನುವ ಶಬ್ದ ಮಲೆನಾಡಿನ ಪ್ರದೇಶದ ಜನರ ಭಾಷೆಗೆ ಸಮೀಪವಾದವುಗಳಾಗಿವೆ. ಆಂಡಯ್ಯನು ಉಪಯೋಗಿಸುವ ಬಂದಿ, ಮೋರೆ, ಅಣಂವೆ, ಕಣಗಿಲೆ, ಬಡಿಗ, ಎಲೆ ಮೊದಲಾದ ಶಬ್ದಗಳನ್ನು ಕೊರಳಬಂದಿ, ವಾವೆ, ನಾಯಿಕೊಡೆ ಒಂದು ಜಾತಿಯ ಕರವೀರ ಪುಷ್ಪ, ಕೋಲು, ವೀಳೆಯದೆಲೆ ಎಂಬ ಅರ್ಥದಲ್ಲಿಯೇ ಕನ್ನಡ ಜಿಲ್ಲೆಯ ಪ್ರದೇಶದಲ್ಲಿಯೇ ಉಪಯೋಗಿಸುತ್ತಾರೆ. ಎಂಬ ಮುಳಿಯರ ಮಾತನ್ನು ಕೋತಿನ ಅವರು ಉಲ್ಲೇಖಿಸುತ್ತಾರೆ.

'ಕನ್ನಡ ಮೆನಿಪ್ಪಾನಾಡು ಚೆಲ್ವಾಯ್ತು' ಎಂದು ಕನ್ನಡ ನಾಡಿನ ವರ್ಣನೆಯಿಂದ ಕಾವ್ಯ ಪ್ರಾರಂಭವಾಗುತ್ತದೆ. ಇಲ್ಲಿ ಬಳಕೆಯಾದ ಕನ್ನಡ ಮನಿಪ್ಪಾನಾಡು ಸಮಗ್ರ ಕನ್ನಡ ನಾಡಾಗಿರದೆ ಇಂದಿನ ಕನ್ನಡ ಜಿಲ್ಲೆಗಳನ್ನೊಳಗೊಂಡ ಬನವಾಸಿಯ ಪ್ರಾಂತಕ್ಕೆ ಮಾತ್ರ ಸೀಮಿತವಾಗಿರಬೇಕೆಂದು ಮುಳಿಯರು ಅಭಿಪ್ರಾಯ ಪಡುತ್ತಾರೆ.[೨]

ಮುಳಿಯರ ಹೇಳಿಕೆಯಂತೆ 'ಕನ್ನಡ ಮೆನಿಪ್ಪಾನಾಡು' ಬನವಾಸಿ ಪ್ರಾಂತವೆಂದೂ ಕನ್ನಡ ಜಿಲ್ಲೆಗಳ ಪ್ರದೇಶವೆಂದೂ ತಿಳಿಯುವುದಾದರೆ ಕನ್ನಡದಲ್ಲಿ ಕಬ್ಬಮಂ ಬಗೆಗೂಳ ಪೇಟಿಲಾರರ್ ಎನ್ನುವಲ್ಲಿ ಅಚ್ಚಗನ್ನಡಂ ಬಿಗಿವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆಂ[೨] ಎಂದು ಹೇಳುವಲ್ಲಿ ಕವಿಯು ಕೇವಲ ಬನವಾಸಿಯ ಪ್ರಾಂತದ ಭಾಷೆಯನ್ನಷ್ಟೇ ಅನುಲಕ್ಷಿಸಿ ಈ ಮಾತುಗಳನ್ನು ಹೇಳಿರುವನೆಂದು ಭಾವಿಸಬೇಕಾದೀತು. ಇಲ್ಲವಾದರೆ ಕನ್ನಡ ಎಂಬ ಪದವನ್ನು ಪ್ರದೇಶಕ್ಕೆ ಹೊಂದಿಸಿಕೊಳ್ಳಬೇಕಾದಾಗ ಕೇವಲ ಬನವಾಸಿ ಪ್ರಾಂತವೆಂದು ಸೀಮಿತ ಅರ್ಥದಲ್ಲಿ ಸ್ವೀಕರಿಸಿರುವುದು ಭಾಷೆಗೆ ಸ್ವೀಕರಿಸಿಕೊಳ್ಳುವಲ್ಲಿ ಮಾತ್ರ ಸಮಗ್ರ ಕರ್ನಾಟಕವನ್ನು ಹೊಂದಿಸಿಕೊಳ್ಳುವುದು ವಿಪರ್ಯಾಸವೆನಿಸುತ್ತದೆ. ಇದನ್ನು ಲೆಕ್ಕಿಸಿದರೆ ಅಖಂಡ ಕನ್ನಡ ನಾಡನ್ನೇ ಅಂದರೆ ಸಮಗ್ರ ಕರ್ನಾಟಕವನ್ನೇ ಕುರಿತು 'ಕನ್ನಡಮೆನಿಪ್ಪಾನಾಡು' ಎಂದು ಹೇಳಿರುವನೆಂಬುದೇ ಗಟ್ಟಿಗೊಳ್ಳುತ್ತದೆ.[೯]

ಒಟ್ಟಿನಲ್ಲಿ ಮುಳಿಯರು ಊಹಿಸಿದಂತೆ, ಮುಗುಳಿಯವರು ಒಪ್ಪುವಂತೆ 'ಕನ್ನಡಮೆನಿಪ್ಪಾನಾಡು' ಕೇವಲ ಈಗಿನ ಕನ್ನಡ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿರದೆ ರಾಮಾನುಜಯ್ಯಂಗಾರರು ಅಭಿಪ್ರಾಯಪಡುವಂತೆ ಕನ್ನಡನಾಡೇ ಎಂದರೆ ಕನ್ನಡ ಭಾಷೆ ನಡೆದಾಡುವ ನಾಡೇ ಈತನ ದೇಶ ಎಂದೇ ಅರ್ಥ ಎಂದು ಕೋತಿನ ಅವರ ಅಭಿಪ್ರಾಯ. ಒಟ್ಟಿನಲ್ಲಿ ಕವಿಯು ಕನ್ನಡ ನಾಡಿನ ಬನವಾಸಿಯ ಪ್ರದೇಶಕ್ಕೆ ಸೇರಿದವನೆಂದು ಸಾಮಾನ್ಯವಾಗಿ ಭಾವಿಸಲಾಗಿದೆ.

ಕವಿಯ ಮತ:

ಆಂಡಯ್ಯನ ಮತಕ್ಕೆ ಸಂಬಂಧಿಸಿದಂತೆಯೂ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಜವರೇಗೌಡರು ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಅವನು ಜೈನನೆಂಬ ಅಂಶಕ್ಕೆ ಪೂರಕವಾದ ಸಂದರ್ಭಗಳನ್ನು ಉಲ್ಲೇಖಿಸಿರುವುದರ ಮೂಲಕ ಅವನು ಜೈನನೇ ಆಗಿದ್ದನೆಂಬ ಖಚಿತ ನಿಲುವಿಗೆ ಬಂದಿದ್ದಾರೆ.[೯]

ಎಱಗುವನರುಹಂಗುಟಿದಿರ್ಗೆಱಗಂ ಕನಸಿನೊಳಂ ಎಂದು ಅಜ್ಜನ ವಿಷಯವಾಗಿಯೂ

ಅರುಹಂತನ ಮೆಲ್ಲಡಿದಾ

ವರೆಗಳ್ ಬಗೆಯಲ್ಲಿ ನಿಂದುವೆಂದೊಡೆ ನಲವಿಂ

ಸಿರಿವೆಣ್ಣವನೊಳ್ ನಿಚ್ಚಂ

ಬೆರಸಿರ್ದಪಳೆಂಬುದಿಂತಿದೇನಚ್ಚರಿಯೇ[೨೦]

ಎಂದು ಹೇಳುವಾಗ ಆತನ ಮತಧರ್ಮದ ಬಗೆಗಿರುವ ನಿಷ್ಠೆ ವ್ಯಕ್ತವಾಗುವುದು. ಅಲ್ಲದೆ ಅವನ ಮೆಚ್ಚುಗೆಯ ಕವಿಗಳೆಲ್ಲರೂ ಜೈನರೇ ಆಗಿದ್ದಾರೆ. ಕರ್ವುವಿಲ್ಲ ಈಶ್ವರನ ಮೇಲೆ ಯುದ್ಧ ಸನ್ನದ್ಧನಾಗಿ ಹೋಗುವಾಗ ಮಾರ್ಗ ಮಧ್ಯದಲ್ಲಿ ಬೆಟ್ಟವೊಂದು ಬರುತ್ತದೆ. ಕಟ್ಟಿದ ತಂತಿಯನ್ನು ಮಿಡಿದು ಗೊಂದಣದಿಂದ ಅರುಹಂತನ ಏಳ್ಗೆಯನ್ನು

ಹಾಡುತ್ತಿದ್ದ ಅಪ್ಸರೆಯರ ನುಣ್ದನಿಗೆ ಮಾರುಹೋಗಿದ್ದ ಎಳೆ ಹುಲ್ಲೆಗಳೂ ಸೌಂದರ್ಯವೇ ಸಾಕಾರತೆ ಪಡೆದಂತಿದ್ದ ಬೆಟ್ಟವು ದೊರೆಯ ಗಮನವನ್ನು ಸೆಳೆಯುತ್ತವೆ ಆ ಬೆಟ್ಟದಲ್ಲಿ.

ಕೊಲ್ಲದುದೆ ದಿಟದಿನಱನೆಂ
ದೆಲ್ಲಾ ಪರಿಯಿಂದೆ ಪೇೞ್ದ ಪಿರಿಯರ ನುಡಿಯಂ
ಬಲ್ಲಿತನೆ ನಂಬಿ ಬೇಂಟೆಯ
ನೊಲ್ಲದೆ ಬಿಟ್ಟಿರ್ದ ಬಯದರೊಪ್ಪಿದರರದಱೊಳ್ [೨೦]

ಅಂತಹ ಪರ್ವತದಲ್ಲಿ -ಮೆಯ್ ಮಣ್ಕೊರಲ್ಗೆ ಪುತ್ತಿಡೆ, ಪರ್ಬಿದ ಬಳ್ಳಿ ಸುತ್ತಲುಂ ಸೊಗಯಿಸೆ ತನ್ನನೆ ತಾನೊಲವಿಂದೆ ಜಾನಿಸುತ್ತಗಲದೆ ನಿಂದಿರ್ದ ಸವಣ ಕಾಣಿಸಿಕೊಳ್ಳುತ್ತಾನೆ ಇನ್ನಗಮೆನಗಿದಿರಾಗಿ ಮಲೆದು ಪೋಗದೆನಿಲ್ಪ ತವಸಿಗಳನೊರ್ವರುಮಂ ಕನಸಿನೊಳಂ ಕಂಡೆನಿಲ್ಲ ಸವಣನೊರ್ವನೆ ತೊಲಗದಿದಿರಾಗಿನಿಂದಂ; ಇದರ್ಕೆ ತಕ್ಕುದಂ ಮಾಡ್ಪೆನೆಂದು ಕರ್ವುವಿಲ್ಗೆ ಕೈಯಂ ನೀಡುವಲ್ಲಿ ಬಸಂತ ತಡೆದು ಗಂಡುತನಮಂ ಮೇೞೆ ತಿಸುಳಿಯೊಳೆಱಗು ಪಿಱಿಯವರ್ಗೆಳೆಯೊಡೆಯ - ಎಂದು ಬುದ್ಧಿ ಹೇಳುತ್ತಾನೆ . ಈಶ್ವರನನ್ನು ಪುಷ್ಪ ಬಾಣದಿಂದ ಸದೆಬಡಿಯುವುದಾಗಿ ಪ್ರತಿಜ್ಞೆಗೈದು ಹೊರಟು ಕರ್ವುವಿಲ್ಲ ಸವಣನ ಮುಂದೆ ಶರಣಾಗುತ್ತಾನೆ. ತಿಸುಳಿಗೆ ಮೀಸಲಾದ ಬಾಣ ತವಸಿಯ ಮೇಲೆರಗಿದರೆ ಹುಸಿಯಾಗುತ್ತದೆಂಬ ಮಾತು ನಿಜವಾಗಿ ಶಿವ ಶರಣರಲ್ಲಿ ಸವಣವೇ ಶ್ರೇಷ್ಠನೆಂಬ ಭಾವನೆ ಈ ಪದ್ಯದಲ್ಲಿ ಹೊಳೆಯುತ್ತದೆ.

ಉಱದಱಲಿಂದಮಾ ತವಸಿಯಂ ಮುಳಿದೆಚ್ಚೊಡೆ ಕರ್ವುವಿಲ್ಲು ತಾಂ
ಮುಱಿಯದೆ ಪೂವಿನಂಬು ಕರಿಕೇಱದೆ ತುಂಬಿಯನಾರಿ ಬೇಗದಿಂ
ಪಱಿಯದೆ ತನ್ನ ನೆಚ್ಚಿನೆಲಕೊಯ್ಯನೆ ಜಾಱದೆ ಬಂದ ಮಾವು ಬೀ
ತೊಱಗದೆ ಗಂಡುಗೋಗಿಲೆಯ ಸೊರ್ಕೊಳಸೋಱದೆ ಸೈತೆ ಪೋಕುಮೇ [೨೨]

ಕಾಮ ಶಿವನನ್ನು ಅರೆವೆಣ್ಣು ಮಾಡಿ ಅವನನ್ನು ಸೋಲಿಸುವ ಪ್ರಕರಣ ಸಾಮಾನ್ಯವಾಗಿ ಜೈನರಲ್ಲಿಯೇ ಬಂದಿದ್ದು ಅಲ್ಲದೆ ಸ್ವಮತ ಪಕ್ಷಪಾತವೂ ಅಲ್ಲಲ್ಲಿ ಕಂಡುಬರುವುದು. ಆದರೆ ಎಲ್ಲೂ ಅನ್ಯಮತದ ಅನಾದರವಿಲ್ಲ. ಎರಡನೆಯ ಪದ್ಯದಲ್ಲಿಯೇ ತ್ರಿಮೂರ್ತಿಗಳನ್ನು ನೆನೆಯುತ್ತಾನೆ. ಸಾಮಾನ್ಯವಾಗಿ ಬೇರೆ ಯಾವ ಜೈನ ಮತದ ಕವಿಯೂ ಜೈನೇತರರನ್ನು ಸುತ್ತಿಸಿರುವುದು ಕಂಡುಬರುವುದಿಲ್ಲ. ಮೊದಲನೆಯ ಪದ್ಯ ಮನ್ಮಥ ಪರವಾದ ಸ್ತುತಿಯಗಿದೆ. ಜೈನ ಪುರಾಣದಲ್ಲಿ ಕಾಮನಿಗೆ ಅತ್ಯುಚ್ಚಸ್ಥಾನವಿದೆ ಎಂದಾದರೂ ಶಿವ ಕಾಮನ ಮುಂದೆ ಮಣಿಯಲೇಬೇಕು. ಆದರೆ ಅಂಥ ಮನ್ಮಥನನ್ನು ಗೆದ್ದವನು ಬಾಹುಬಲಿ ಇಪ್ಪತ್ತುನಾಲ್ಕು ಜನ ಕಾಮದೇವರಲ್ಲಿ ಒಬ್ಬ. ಆದ್ದರಿಂದ ಅವನು ತೀರ್ಥಂಕರನಿಗೆ ಸಮೀಪನಾದ ವ್ಯಕ್ತಿ. ಅವನೂ ಪೂಜಾರ್ಹನಾದ್ದರಿಂದ ಗ್ರಂಥಾರಂಭಲ್ಲಿ ಮನ್ಮಥನ ಸ್ತುತಿ ಇದೆ. ಅದುದರಿಂದ ಆಂಡಯ್ಯನು ಜೈನನೇ ಎಂದು ದೇ.ಜವರೇಗೌಡರ ಅಭಿಪ್ರಾಯ.

ರಾಜಾಶ್ರಯ

ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೆಂದಚ್ಚಗನ್ನಡಂ ಬಿಗಿ
ವೊಂದಿರೆ ಕಬ್ಬಿಗರ ಕಾವನೊಲವಿಂದೊರೆದಂ (ಪದ್ಯ.೧೬)

ಎಳೆಗಿಳಿವಿಂಡಿನಂತೆ ಮಿಳಿರ್ದಾಡುವ ತುಂಬಿಯ ಒಂಬಲಂತೆ ಕೆಂ
ದಳಿರ್ಗಳ ತೊಂಗಲಂತೆ ನಡೆನೋಡುವ ಪೆಂಡಿರ ನೋಟದಂತೆ ಪೂ
ಗಳ ಪೊಸಗಂಪಿನೊಳ್ ಪೊರೆದು ತೀಡುವ ತಂಬೆಲರಂತೆ ತೋರ್ಪ ತಿ
ಗಳ ಸಿರಿಯಂತೆ ಸೋಲಿಸದೆ ಕಾವನ ಕಬ್ಬಮುದಾರನಾದೊಡಂ (ಪದ್ಯ.೧೪)

ಹಾಗೆಯೇ

ದೋಸದ ಮಾತು ಪೊರ್ದದೆನೆ ಬಲ್ಲವರಗ್ಗದ ಕನ್ನಡಂಗಳಿಂ
ಬಾಸಣಮಾಗೆ ಪೇಟ್ದೆನೊಲವಿಂ ನೆಟಿಕಬ್ಬಿಗರೊಪ್ಪೆ ನಾಡೆಯುಂ
ಗೋಸಣೆ ಮೀರವನ್ನಮಿದು ರಾಯನ ನಾಟ್ಕನೊಳಿರ್ಕೆ ನಿಚ್ಚಮಂ
ದೇಸೆಯ ಗೊತ್ತು ಜಾಣ್ನುಡಿಯ ತಾಯ್ವನೆ ನುಣ್ನುರುಳೇಟ್ಗೆಯೆಂಬಿನಂ (ಪದ್ಯ.೨೭೧)

ಈ ಪದ್ಯದ ಮೂಲಕ ಮುಳಿಯರು, ಆಂಡಯ್ಯನು ತನ್ನ ಕಾವ್ಯದ ನಾಯಕನೊಡನೆ ಅಭಿನ್ನವಾಗಿ ವರ್ಣಿಸಲ್ಪಟ್ಟ ಕಾಮನೆಂಬರಸನ ಆಶ್ರಯದಲ್ಲಿದ್ದು ಕಾವ್ಯ ಬರೆದನೆಂದು ಊಹಿಸಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೨೩]

ರಾಮಾನುಜಯ್ಯಂಗಾರರು ರಾಜಾಶ್ರಯವಿದ್ದುದರ ಬಗ್ಗೆ ಕವಿಯೇ ಹೇಳಿಕೊಂಡಿರದ ವಿಷಯವನ್ನು ಪ್ರಸ್ತಾಪಿಸಿ ಕವಿಗೆ ರಾಜಾಶ್ರಯವಿದ್ದ ಬಗ್ಗೆ ಕಾವ್ಯದಲ್ಲಿಯ ಕೆಲವು ಉಕ್ತಿಗಳು ಆಧಾರವಾಗಲಾರವೆಂಬುದನ್ನು ನಿರ್ಧರಿಸಿ ಅದಕ್ಕಾಗಿ ಹೆಚ್ಚಿನ ಪ್ರಮಾಣಗಳನ್ನು ಮುಂದಿಟ್ಟು ''ಯಾವುದೊಂದು ಬಾಹ್ಯ ಪ್ರಮಾಣಗಳ ಅಂತರ್ ಪ್ರಮಾಣಗಳ ಸಹಾಯವಿಲ್ಲದೆ ಕಬ್ಬಿಗರ ಕಾವನೆಂಬ ರಾಜನ ಒಲವಿಂದ ಕಬ್ಬಿಗರ ಕಾವನಾದ ಕವಿಯು ಬರೆದನೆಂದು ಹೇಗೆ ಅರ್ಥಮಾಡಲಾದೀತು? ಎಂದು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ ಮೇಲೆ ಸಂಶೋಧನಾ ಕ್ಷೇತ್ರದಲ್ಲಿ ಅದೊಂದು ಮಹತ್ವದ ಸಮಸ್ಯೆ ಪರಿಣಮಿಸಿತು.[೨೪]

ಸದಾನಂದ ನಾಯಕರು ''ಗೋಸಣೆ ಮೀರುವನ್ನಮಿದು ರಾಯನ ನಾಟ್ಕಿಳೊಳಿರ್ಕೆ ನಿಚ್ಚಮುಂ'' ಎಂದ ಕಾರಣ ಕಾವ್ಯದಲ್ಲಿ ಅಲ್ಲಲ್ಲಿ ಬರುವ ನೆನವಿಲ್ಲ ಬಲ್ಲಹನ ಸ್ತುತಿಯಿಂದಲೂ ಕವಿಯು ಯಾವನೋ ಒಬ್ಬ ರಾಯನ ಪ್ರಶಂಸಾ ಪರವಾಗಿಯೇ ಬರೆದಿರುವನೆಂಬುದನ್ನು ನಿರ್ವಿವಾದವಾಗಿ ಹೇಳಬಹುದು.[೨೫] ಈ ರೀತಿ ತಮ್ಮ ಸಂದೇಹವನ್ನು

ವ್ಯಕ್ತಪಡಿಸಿದರೂ ಅವರ ಒಟ್ಟು ಪ್ರಬಂಧವನ್ನು ಓದಿದಾಗ ಈ ಕುರಿತ ಅವರ ಅಭಿಪ್ರಾಯ ಕವಿಗೆ ರಾಜಾಶ್ರಯವಿದ್ದ ಕಡೆಗೇ ವಾಲಿರುವುದು ಕಾಣುತ್ತದೆ ಎಂಬುದು ಕೋತಿನ ಅಭಿಪ್ರಾಯ.[೨೬]

ಇದರ ಸತ್ಯಾಸತ್ಯತೆಯನ್ನು ನಿರ್ಣಯಿಸುವುದು ಸುಲಭವಲ್ಲವೆಂದು ಒಪ್ಪಲೇಬೇಕು ಎಂದ ಮುಗಳಿಯವರು ಆದರೂ ಇದು ಬಹುಮಟ್ಟಿಗೆ ಸತ್ಯವಾಗಿರಬೇಕೆಂದು ತಿಳಿಯಲು ಗ್ರಂಥಸ್ಥವಾದ ಕೆಲವು ಪ್ರಮಾಣಗಳಿವೆ ಎಂದು ಮುಳಿಯರ ಊಹೆ ತರ್ಕಗಳನ್ನು ಬೆಂಬಲಿಸಿದ್ದಾರೆ.[೨೭]

ಅದೇ ಜಾಡನ್ನು ಹಿಡಿದು ದೇ.ಜವರೇಗೌಡರು ''ಆಶ್ರಯದಾತನಾದ, ಸ್ನೇಹಿತನಾದ ರಾಜನ ದಿಗ್ವಿಜಯ ವರ್ಣಿಸಿ ಅವನ ಕೀರ್ತಿಯನ್ನು ಚಿರಸ್ಥಾಯಿಗೊಳಿಸುವುದೇ ಕವಿಯ ಪ್ರಧಾನೋದ್ದೇಶ ಎಂದು ತಾವು ಸಂಪಾದಿಸಿರುವ ಕಬ್ಬಿಗರ ಕಾವದ ಪೀಠಿಕೆಯಲ್ಲಿ ಹೇಳಿ ಮುಳಿಯ ತಿಮ್ಮಪ್ಪಯ್ಯನವರ ಸಿದ್ಧಾಂತವನ್ನೇ ಅಂಗೀಕರಿಸಿದ್ದಾರೆ.[೨೮]

ಸಿ.ಎ.ಕವಲಿಯವರು 'ಕದಂಬ ಕಾಮದೇವ ಕವಿಗೆ ಆಶ್ರಯವನ್ನು ಕೊಟ್ಟಿದ್ದರೆ ಆ ಮಾತನ್ನು ಬಹಿರಂಗಪಡಿಸುವುದಕ್ಕೆ ಬೇರಾವ ಕಾರಣವೂ ತೋರುವುದಿಲ್ಲ. ಆದ್ದರಿಂದ ಕವಿಗೆ ರಾಜಶ್ರಯವಿರಲಿಲ್ಲವೆಂದು ಹೇಳುವುದು ತಪ್ಪಾಗಲಿಕ್ಕಿಲ್ಲ. ಎಂದು ತಮ್ಮದೇ ಆದ ಊಹೆಯಿಂದ ಪ್ರತಿಪಾದಿಸಿ ರಾಮಾನುಜಯ್ಯಂಗಾರರ ಪರವಾಗಿದ್ದಾರೆ.[೨೯]

ಬಿ.ಎಸ್.ಕುಲಕರ್ಣಿಯವರು ರಾಮಾನುಜಯ್ಯಂಗಾರರ ಪರವಾಗಿದ್ದಾರೆ. ಆ ಕಾಲದಲ್ಲಿ ಜೈನ ಕವಿಗಳಿಗೆ ರಾಜಾಶ್ರಯವು ತಪ್ಪುತ್ತಲಿತ್ತೆಂಬುದನ್ನು ನೆನಪಿಗೆ ತಂದುಕೊಂಡರೆ ಕವಿಗೆ ರಾಜಾಶ್ರಯವಿದ್ದಿಲ್ಲವೆಂದೇ ಹೆಚ್ಚು ಸಮಂಜಸವಾಗಿ ತೋರುತ್ತದೆ ಎಂಬ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ.[೩೦]

ಅಂತಿಮವಾಗಿ ದೇ.ಜವರೇಗೌಡರೂ ಮುಳಿಯರ ಅಭಿಪ್ರಾಯವನ್ನು ಒಪ್ಪಿ ಸಮರ್ಥಿಸಿದ್ದಾರೆ ಹಾಗಾಗಿ ಆಂಡಯ್ಯನ ಕಾಲ ೧೩ನೇ ಶತಮಾನದ ಉತ್ತರಾರ್ಧವೆಂಬ ಖಚಿತ ತೀರ್ಮಾನಕ್ಕೆ ಬಂದಿದ್ದಾರೆ.[೩೧]

ಕೃತಿ ಸಂಖ್ಯಾ ನಿರ್ಣಯ: ವಿದ್ವಾಂಸರ ಅಭಿಪ್ರಾಯ

ಕವಿ ಕಾಮನ ಕಾಲ ೧೨೦೦ ಎಂದೂ ಆಂಡ್ಯನ ಕಾಲ ಸುಮಾರು ೧೨೭೫ ಅಲ್ಲದೆ ಕವಿಕಾಮ ಶೈವ ಆದರೆ ಆಂಡಯ್ಯ ಜೈನನೆಂದೂ, ಕವಿಕಾಮನಿಗೆ ರಾಜಾಶ್ರಯವಿತ್ತು. ಆಂಡಯ್ಯನಿಗೆ ರಾಜಾಶ್ರಯವಿರಲಿಲ್ಲ ಎಂಬ ಕಾರಣಗಳಿಂದ ಕವಿಕಾಮ ಹಾಗೂ ಆಂಡಯ್ಯರು ಅಭಿನ್ನರೆಂದು ಸಾಧಿಸಲು ಹೊರಟ ಪಂಡಿತರ ವಾದ ಬಿದ್ದು ಹೋಗುತ್ತದೆ. ಆದ್ದರಿಂದಲೇ ಆಂಡಯ್ಯ ವಿರಚಿತ ಕೃತಿ ಇದುವರೆಗೆ ತಿಳಿದ ಮಟ್ಟಿಗೆ ಒಂದೇ ಒಂದು ಅದು ಕಬ್ಬಿಗರ ಕಾವ ಎಂದು ದೇ.ಜವರೇಗೌಡರು ಅಭಿಪ್ರಾಯಪಟ್ಟಿದ್ದಾರೆ.[೩೨]

ಕಥಾ ಸಾರ:

ಜೈನಧರ್ಮೀಯನಾದ ಆಂಡಯ್ಯ ಮೂಲಕತೆಯನ್ನು ಮಾರ್ಪಡಿಸಿಕೊಂಡು ಶಿವ ಕಾಮರ ಯುದ್ಧದ ನಡುವೆ ಜಿನ ಸರ್ವೋತ್ತಮತೆಯನ್ನು ಎತ್ತಿ ಹಿಡಿದಿರುವುದು ಕಾಣಬಹುದು. ಕಬ್ಬಿಗರ ಕಾವ್ಯದ ಕಥೆ ಹೀಗಿದೆ:

ಕಥಾ ಸಾರ:

ಹಲವು ನಾಲಗೆಯುಳ್ಳ ಆದಿಶೇಷನಿಂದಲೂ ಬಣ್ಣಿಸಲಾಗದ ಕನ್ನಡ ನಾಡಿನಲ್ಲಿ ಪೂವಿನ ಪೂಟಿಲು ಎಂಬ ಪಟ್ಟಣವನ್ನು ಶೌರ್ಯ, ಕೀರ್ತಿ, ತ್ಯಾಗ, ಸತ್ಯ, ಸೈರಣೆಯಿಂದ ನೆನೆಯಂಬ ರಾಜನು ಆಳುತ್ತಿದ್ದನು. ಆಗಲೇ ತೆಂಕಣಗಾಳಿ ಬೀಸಲಾರಂಭಿಸಿದ ಸಮಯದಲ್ಲಿ ವಸಂತಮಾಸದ ಆಗಮನವಾಯಿತು. ಆ ಒಂದು ಮುಂಜಾವಿನಲ್ಲಿ ಅರಸನಿಗೆ ಕನಸೊಂದು ಬಿದ್ದಿತು. ಅದರಲ್ಲಿ ಸುಂದರವಾದ ಅಪ್ಸರ ಸ್ತ್ರೀಯೊಡನೆ ಕೂಡಿಕೊಂಡಂತೆ ಭಾಸವಾಗುತ್ತಿತ್ತು. ಮರುದಿನ ಆ ವೃತ್ತಾಂತವನ್ನು ರಾಜ ತನ್ನ ಗೆಳೆಯ ನಗೆಗಾರನಿಗೆ ಹೇಳಿದಾಗ ಆತನು ಆ ಕನಸು ಆದಷ್ಟು ಬೇಗನೇ ನಿಜವಾಗುವುದೆಂದು ಹೇಳಿದ ನಗೆಗಾರನು ಸುಂದರ ಸ್ತ್ರೀಯೊಬ್ಬಳು ಬೇಗನೆ ಆತನಿಗೆ ವಶವಾಗಲಿರುವ ಸತ್ಯವನ್ನು ತಿಳಿಸುತ್ತಾನೆ. ಅಲ್ಲದೆ ಈಗಲೇ ಹೂ ದೋಟಕ್ಕೆ ಹೋಗಿ ನೋಡಬೇಕೆಂದೂ ವಿನಂತಿಸಿಕೊಳ್ಳುತ್ತಾನೆ. ದೊರೆ ಸಕಲ ಪರಿವಾರ ಸಮೇತನಾಗಿ ಉಪವನಕ್ಕೆ ಹೊರಡುತ್ತಾನೆ. ಪಚ್ಚೆ, ಪಡ್ಡಳಿ, ಪಾದರಿ, ಪಲಸು, ತೆಂಗು, ಕೌಂಗು, ದಾಳಿಂಬ, ದವನ, ಮರುಗ, ಮಲ್ಲಿಗೆ, ಮಾವು; ಸುರಗಿ, ಸುರಹೊನ್ನಿ ಮೊದಲಾದ ತರುಲತೆಗಳಿಂದ ಕೂಡಿ ಚೆಲುವಿನ ಸುಗ್ಗಿಯಂತೆ ಕಂಗೊಳಿಸುತ್ತಿದ್ದ ವನವನ್ನು ನೋಡಿ ಹರ್ಷಗೊಳ್ಳುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಮಾವಿನ ಮರದ ಅಡಿಯಲ್ಲಿ ನಿಂತಿದ್ದ ಹೆಣ್ಣೊಬ್ಬಳು ಕಣ್ಣಿಗೆ ಬೀಳುತ್ತಾಳೆ. ಆಕೆಯ ಸೌಂದರ್ಯಕ್ಕೆ ಬೆರಗಾಗಿ ಆಕೆ ದೇವಲೋಕದ ಸುಂದರಿಯೇ ಇರಬೇಕೆಂದುಕೊಂಡು ಆಕೆಯ ಬಗೆಗೆ ವಿಚಾರಿಸಿದಾಗ ಅವಳು ಅಪ್ಸರ ಸ್ತ್ರೀಯೆಂಬುದು ಗೊತ್ತಾಗುತ್ತದೆ. ಈ ವನವನ್ನು ತಾನು ಹಿಂದೆ ನೋಡಿರುವುದಾಗಿಯೂ ಈ ವಿಷಯದ ರಹಸ್ಯವೇನಿರಬಹುದೆಂದು ದೊರೆ ಅವಳನ್ನು ಪ್ರಶ್ನಿಸುತ್ತಾನೆ. ಆಗ ಅವಳು ತಮ್ಮ ಪೂರ್ವ ಜನ್ಮದ ಕಥೆಯನ್ನು ಹೇಳುತ್ತಾಳೆ:

ಕರ್ವುವಿಲ್ಲನೆಂಬುವನು ಕಂಪಿನಪೊಳಲೆಂಬ ನಾಡನ್ನು ಆಳುತ್ತಿದ್ದ. ಅವನ ಹೆಂಡತಿಯೇ ಇಚ್ಛೆಗಾರ್ತಿ. ಅವರು ತಮ್ಮ ನಾಡಿನಲ್ಲಿ ಸುಃಖ ಸಂತೋಷದಿಂದ ಕಾಲ ಕಳೆಯುತ್ತಿರುವಾಗ ಜೊನ್ನವಕ್ಕಿ ಎಂಬ ದೂತಿ ಓಲಗಕ್ಕೆ ಬಂದಲು ಆಕೆಯು ಅದು ಶಿವನೆಂಬ ದುಷ್ಟಗೊರವನು ಮಂಜುವೆಟ್ಟವನ್ನು ಆಕ್ರಮಿಸಿಕೊಂಡು ದೊರೆಯನ್ನು ಲೆಕ್ಕಿಸದೆ ದುರುಳತನದಿಂದ ವರ್ತಿಸುತ್ತಿದ್ದಾನೆಂದು. ಕಾಳಗದಲ್ಲಿ ಚಂದ್ರನನ್ನು ಸೆರೆಹಿಡಿದುಕೊಂಡು ಹೋಗಿರುವನೆಂದು ತಿಳಿಸುವಳು. ಅವನನ್ನು ಆಗ ಯುದ್ಧಕ್ಕೆ ಮುಂಚೆ ದೂತನನ್ನಟ್ಟಿ ಸಂಧಾನ ನಡೆಸಬೇಕೆಂದೂ ಅದಕ್ಕೊಪ್ಪದಿದ್ದರೆ ಮುಂದಿನ ಕಾರ್ಯ ಕೈಗೊಳ್ಳಬಹುದೆಂದೂ ವಸಂತ ಸಲಹೆ ನೀಡುತ್ತಾನೆ. ಸಲಹೆಯನ್ನು ಆಲಿಸಿದ ದೊರೆಯು ತಂಗಾಳಿಯೆಂಬ ದೂತನನ್ನು ಕರೆಸಿ, ಗೊರವನಲ್ಲಿಗೆ ಹೋಗಿ ಚಂದ್ರನನ್ನು ಬಿಡಿಸಿಕೊಂಡು ಬರುವಂತೆ ಆಜ್ಞಾಪಿಸುತ್ತಾನೆ.

ಪಿರಿದಪ್ಪಾಳ್ತನದಿಂದೆ ಕೂರ್ಪವರ ಮಾತಂ ಮೀಱಿದಾಳ್ಗೆಯ್ತದೊಳ್
ನೆರೆದಿಂತೀಗಳೆ ಪೋಗಿ ತಳ್ತಱಿವೆನೆಂಬಾ ಮಾತದಂತಿರ್ಕೆ ಚೆ
ಚ್ಚರದಿಂ ನಮ್ಮರಸಾಳನಟ್ಟೆ ಮಗುಳ್ದಾತಂ ಬಂದು ಪೇಟ್ಬಿಂತುಟಂ
ತಿರದಿಂದಂ ತಿಳಿದೆತ್ತಿ ಕಾದುವುದು ಲೇಸಲ್ಲಗ್ರಿದೇ ಮಂತಣಂ [೩೩]

ದೊರೆಯ ಅಪ್ಪಣೆಯಂತೆ ಮಂಜುವೆಟ್ಟಕ್ಕೆ ಬಂದ ತಂಗಾಳಿಯು ತನ್ನ ದೊರೆಯ ಮಹಿಮಾತಿಶಯವನ್ನು ಹೊಗಳಿ, ಗೊರವನ ಔದಾರ್ಯವನ್ನು ಪ್ರಶಂಸಿಸುವನು. ನಿಮ್ಮೊಳಾತಂ ಕಳೆಗೊಂಡೊಡೆ ತೀರದುದಿನಿತಿಲ್ಲ, ಈಗಡೆ ಬಿಡುವುದು

ಪೆಜೆಯ ಸೆಜೆಯನ್ ಇದು ಲೇಸತ್ತಿ ಎಂದು ವಾದಿಸುತ್ತಾನೆ. ಅದಕ್ಕೆ ಗೊರವನು ''ಅಱಿಕೆಯ ರೂಪವಿಲ್ಲದ ನಿನ್ನೆಱಿಯಂಗುಬ್ಬಟೆಯು ಬೀರಮುಂಟೆದುದ್ದಂ ಜಟುಟಿದೆ'' ನಿನ್ನ ಒಡೆಯನಿಗೆ ಪೌಡರ್ಪು, ಧೈರ್ಯ ಇರುವುದಾದರೆ ಕಾಳಗದಲ್ಲಿ ತೋರಿಸಲಿ ಎಂದು ಜರಿದು ನುಡಿದುದನ್ನು ತಂಗಾಳಿಯು ಕರ್ವುವಿಲ್ಲನ ಮುಂದೆ ನಿವೇದಿಸುತ್ತಾನೆ.

ಅದಟಿನಳುರ್ಕೆಯಂ ಕಿಡಿಸಿ ಬಿಂಕಮನಟ್ಟಿಸಿಯೆನ್ನ ಕೋಲ್ಗಳಿಂ

ಸದೆದರೆವೇಣ್ಣನಂ ಬಿಡದೆ ಮಾಡಿ ಕಡಂಗಿ ನೆಲಂಗಳೊಳ್ ಸಮಂ

ತೊದವಿಸಿ ಪೆರ್ಮೆಯಂ ಸೆಳೆದು ಬಲ್ಲೆಯನಿಟ್ಟುಳಿಗೊಂಡು ಬೇಗದಿಂ

ಕದಕದಪಂ ತೊಡರ್ಚಿಯೆಳೆದೇರನ ನೋಡಿಪೆನೆಂದು ಪೊಸರಂ ೩೪

ಅವನ ಪರಾಕ್ರಮ ಜ್ವಾಲೆಯನ್ನು ಕುಗ್ಗಿಸಿ ಅವನ ಬಿಂಕವನ್ನು ತಗ್ಗಿಸಿ ತನ್ನ ಬಾಣಗಳಿಂದ ಗಾಯಗೊಳಿಸಿ ಅವನನ್ನು ಅರೆವೆಣ್ಣಾಗಿ ಮಾಡಿ ಹೆಮ್ಮೆಯನ್ನು ಯುದ್ಧದಲ್ಲಿ ಹಾಳು ಮಾಡುವುದಾಗಿ ಶಪಥ ಮಾಡಿ ಕರ್ವುವಿಲ್ಲ ಯುದ್ಧಕ್ಕೆ ಸನ್ನದ್ಧವಾಗುತ್ತಾನೆ. ಆಮೇಲೆ ತನ್ನ ಪರಿವಾರವನ್ನೆಲ್ಲ ಸಿದ್ಧಗೊಳಿಸಿಕೊಂಡು ಕರ್ವುವಿಲ್ಲ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಹೊಸದಳಿರೆ ಹಳವಿಗೆಯಾಗಿ; ಗಿಳಿಗಳನ್ನು ಕುದುರೆಗಳನ್ನಾಗಿ, ತಂಗಾಳಿಯನ್ನು ಸೂತನಾಗಿ; ಎಳಮಾವಿನ ತೇರನ್ನೇರಿ ಕರ್ವುವಿಲ್ಲ ಯುದ್ಧರಂಗ ಪ್ರವೇಶಿಸುತ್ತಾನೆ.

ಅರಗಿಳಿವಿಂಡು ವಾರುವದ ಮೋಹರವಾಱಿಡಿವಿಂಡು ಬಿಲ್ಲ ಬೀ

ರರ ಪಡೆ ಕೊಂಚೆವಿಂಡು ಪಲವಡ್ಡಣ ದೊಡ್ಡಮಳ್ವಕ್ಕಿವಿಂಡು ಮೆ

ಯ್ವೆರಸುವ ಕೊಂತಗಾಱಿರಣೆಯಾಗಿರೆ ಬಂದು ಬಸಂತನೊಲ್ದು ಸಂ

ವರಣೆಯನೆಯ್ದೆ ತೋಱಿ ತಲೆದೂಗಿಸಿದಂ ನನೆವಿಲ್ಲಬೀರನಾ ೩೫

ಗಿಳಿ, ಕೊಂಚೆ, ದುಂಬಿ, ಕೋಗಿಲೆ, ಚಕ್ರವಾಕಗಳೇ ಅವನ ಸೈನ್ಯದ ಮುಂದಾಳುಗಳಾಗಿ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತ ಮುನ್ನಡೆಯುತ್ತಿರುವಾಗ ಎದುರಿಗೆ ಅಡ್ಡಬರುವ, ತಪವನ್ನಾಚರಿಸುವ, ಹುತ್ತಗಟ್ಟಿರುವ ಸವಣನನ್ನು ಕಂಡು ಕಾಮ ಕಿಡಿ ಕಿಡಿಯಾಗುತ್ತಾನೆ. ತನ್ನೆದುರಿಗೆ ಧೈರ್ಯವಾಗಿ ನಿಂತಿರುವ ಸವಣನ ತಪ್ಪಸ್ಸನ್ನು ಹಾಳುಮಾಡಲು ಬತ್ತಳಿಕೆಯಿಂದ ಬಾಣ ಹೊರದೆಗೆಯುತ್ತಾನೆ. ಆದರೆ ಅಡ್ಡಬಂದ ವಸಂತನು ಕಾಮನಿಗೆ ಹೀಗೆ ಹೇಳುತ್ತಾನೆ.

ತನಗೆ ಸವನಪ್ಪವಂ ಪೊಣ

ರ್ದನೆ ಕಾದುವುದಜ್ಞನಪ್ಪವಂಗೇಱುಗುವುದೆಂ

ಬಿನಿತೆ ವಲಮರಸು ಗಾದೆಗೆ

ಳನುವಂ ನೀನಱಿದು ಬಿಲ್ಗೆ ಕೈ ನೀಡುವರೇ

ಸಮಯಕ್ಕೆ ಸರಿಯಾಗಿ ಅಡ್ಡಬಂದು ತಡೆದು ವಸಂತನು ಸವಣನು ಅರಿಷಡ್ವರ್ಗಗಳನ್ನು ಗೆದ್ದು ಸುಸ್ಥಿರನಾಗಿ ನಿಂತಿರುವನು. ಆತನ ಮೇಲೆ ಕೈ ಮಾಡುವುದರ ಬದಲು ನಿನ್ನ ಗಂಡುತನವನ್ನು ತ್ರಿಶೂಲಿಯ ಮೇಲೆ

ಮರೆಯುವುದುಚಿತವೆಂದು ದೊರೆಯಲ್ಲಿ ವಿನಂತಿಸಿಕೊಳ್ಳುತ್ತಾನೆ. ಅಜ್ಞಾನದಿಂದ ಎಚ್ಚೆತ್ತ ದೊರೆಗೆ ಜ್ಞಾನೋದಯವಾಗಿ ಮುಂದೆ ಸಂಭವಿಸಬಹುದಾಗಿದ್ದ ಅನಾಹುತವನ್ನು ನೆನೆದು ಸವಣನಿಗೆ ತಲೆಬಾಗಿ ವಂದಿಸಿ ನಡೆಯುತ್ತಾನೆ. ಆಮೇಲೆ ಕಾಮನು ತನ್ನ ಮೇಲೆ ಪರಿವಾರ ಸಮೇತನಾಗಿ ಯುದ್ಧಕ್ಕೆ ಬಂದಿರುವುದನ್ನು ತಿಳಿದ ಶಿವ ಕೋಪಗೊಂಡು ವೀರಭದ್ರನನ್ನು ಕರೆಯುತ್ತಾನೆ. ಸೈನ್ಯದ ನಾಯಕತ್ವ ವಹಿಸಿ ಕಾಮನೊಂದಿಗೆ ಹೋರಾಡಿ ಅವನನ್ನು ನಾಶಗೊಳಿಸುವಂತೆ ಆತನಿಗೆ ಆಜ್ಞಾಪಿಸುತ್ತಾನೆ. ಶಿವ ಕಾಮರ ಸೈನ್ಯಗಳ ನಡುವೆ ನಡೆದ ಭಯಂಕರ ಯುದ್ಧದಲ್ಲಿ ವೀರಭದ್ರ ಸೋಲುತ್ತಾನೆ. ಕಾಮ ಸೈನ್ಯ ಸಮೇತನಾಗಿ ಮುನ್ನೆಡೆದು ಮಂಜವೆಟ್ಟವನ್ನು ಆಕ್ರಮಿಸುತ್ತಾನೆ.

ಕಟ್ಟದಿರೊಳಾಂತರಂ ನೆಜೆ
ನಿಟ್ಟಿಸಿ ನನೆವಿಲ್ಲ ಬಲ್ಲಹಂ ಮಾಱಣೆಯಂ
ನೆಟ್ಟನೆ ತೊಳ್ವಲದಿಂದೆ
ಟ್ಟಿಟ್ಟದನವನಿದಿರೊಳಾವನುಂ ನಿಂದಪನೇ [೩೭]

ಹೀಗಾಗಿ ವಿರಭದ್ರನ ಸೋಲಿನಿಂದಾಗಿ ಶಿವನೇ ಯುದ್ಧರಂಗವನ್ನು ಪ್ರವೇಶಿಸುತ್ತಾನೆ. ಶಿವ ಕಾಮರ ಯುದ್ಧ ನೋಡಲು ದೇವಲೋಕದ ಪರಿವಾರವೆಲ್ಲ ಬಂದು ಸೇರುತ್ತದೆ.

ನನೆವಿಲ್ಲಾತನ ಮುಕ್ಕ
ಣ್ಣನ ತಕ್ಕಂ ನೋಡವೇಟ್ಕುಮೆಂದೊಲವಿಂದಂ
ತನ ತನಗೆ ಬಂದು ಮುಗಿಲೊ
ಡ್ಡಿನ ಕೆಲದೊಳ್ ಸಗ್ಗದವರ್ಗಳೆಲ್ಲರ್ ನಿಂದರ್ [೩೮]

ಅಂತೂ ಸೈನ್ಯವೆಲ್ಲ ನಾಶವಾದರೂ ಶಿವನೊಬ್ಬನೇ ಏಕಾಂಗಿಯಾಗಿ ಕಾಮನನ್ನು ಎದುರಿಸಿ ನಿಲ್ಲುತ್ತಾನೆ. ಚಂದ್ರನನ್ನು ಬಿಡುಗಡೆಗೊಳಿಸಲು ನಿರಾಕರಿಸಿದ ಶಿವನ ಸೊಕ್ಕನ್ನು ಅಡಗಿಸಲು ಕೊನೆಗೆ ಕಾಮನು ಜಗತ್ತಿನ ಅತಿರಥ, ಮಹಾರಥರನ್ನು ನಾಶಗೊಳಿಸಿರುವ ತನ್ನ ಕಾಮ ಬಾಣವನ್ನು ಪ್ರಯೋಗಿಸಲು ಸಿದ್ಧನಾಗುತ್ತಾನೆ.

ಕೆಟ್ಟೋಡಿ ಪಾಡಿಯೆಲ್ಲಂ
ಪಿಟ್ಟುಂ ಪಿಟ್ಟಾಗಿ ಪೋದೊಡಂ ಬಗೆಯದೆ ಕ
ಣ್ಣೆಟ್ಟಿಳವೆನಿಸಿ ಬೆಳ್ಳಿಯ
ಬೆಟ್ಟನೆ ಪೆಱದೆಗೆಯದೀಸನೋರ್ವನೆ ನಿಂದಂ [೩೯]

ಕಾಮಬಾಣ ತಾಗಿದ್ದರಿಂದಾಗಿ ಶಿವನು ತೀವ್ರವಾಗಿ ಗಾಯಗೊಳ್ಳುತ್ತಾನೆ. ಅವನ ಹಣೆ, ತೊಡೆ, ದೇಹ, ಕೈ, ಕಾಲುಗಳಲ್ಲಿ ಬಾಣ ನಾಟಿಕೊಳ್ಳಲಾಗಿ ಶಿವನು ಅರೆವೆಣ್ಣಾಗುತ್ತಾನೆ. ಜಯಶೀಲನಾದ ಕಾಮನ ಮೇಲೆ ಅಪ್ಸರ ಸ್ತ್ರೀಯರು ಹೂ ಮಳೆಗೆರೆಯುತ್ತಾರೆ. ಇತ್ತ ಕಾಮನ ಉದ್ಧಟತನಕ್ಕೆ ಕೋಪಗೊಂಡ ಶಿವನು ಹುಬ್ಬುಗಂಟಿಕ್ಕಿ,

ಕಣ್ಣು ಕೆರಳಿಸಿ, ಶಾಪಾಕ್ಷರಗಳನ್ನು ಹೊರಡಿಸಲು ತುಟಿ ನಡುಗಿಸುತ್ತಾ ಭಯಂಕರ ರೂಪದ ರುದ್ರನಾಗುತ್ತಾನೆ. ಅವನ ಕೋಪಾವೇಶಕ್ಕೆ ಕಾಮನ ಸೈನ್ಯ ತತ್ತರಿಸುತ್ತದೆ. ಆಗ

ಎಱಗುವ ತುಂಬಿ ವಿಂಡಗಿಯೆ ಬಗ್ಗಿಪ ಕೋಗಿಲೆ ಕೊಂಬುಗೊಂಡು ಬ
ಳ್ಕುಱೆ ಮುಳಿದಡ್ಡವಾಯ್ದು ಗಿಳಿ ಮಲ್ಲಮಿಗೊಂಡೊಳಸಾರೆ ಮಾವು ಕೈ
ಮಱೆಯೆ ತೆರಳ್ದು ರೂವುಗಿಡೆ ತುಂಬೆಲರಂಚೆಗಳೊಡ್ಡು ಪಾಱೆ ಬಾಂ
ದೊಱೆದಲೆಯಂ ಕನಲ್ದು ನಡೆತಂದು ಬಸಂತನ ಸೊಕ್ಕು ಸೋರ್ವಿನಂ [೪೦]

ಹಿರಿಯರೆನ್ನದೆ ಮರ್ಯಾದೆಯನ್ನು ಮರೆತು ನನ್ನೊಡನೆ ಸೊಕ್ಕಿನಿಂದ ಯುದ್ಧ ಮಾಡಿದೆಯಾದ್ದರಿಂದ ನಿನ್ನ ಪ್ರಿಯೆಯನ್ನಗಲಿ ಯಾರಿಗೂ ಅರಿಯದಂತೆ ಎಲ್ಲಿಯಾದರೂ ತಲೆಮರೆಸಿಕೊಂಡಿರು ಎಂದು ಶಿವ ಕಾಮನನ್ನು ಶಪಿಸುತ್ತಾನೆ.

ಶಾಪದ ವಿಚಾರ ತಿಳಿದೊಡನೆ ಇಚ್ಛೆಗಾರ್ತಿ ಕಾಮನ ದಯನೀಯ ಸ್ಥಿತಿ ನೆನದು ದುಃಖದಿಂದ ಮೂರ್ಛೆ ಹೋಗುತ್ತಾಳೆ. ವಿರಹದ ನೋವಿನಿಂದ ತೊಳಲಾಡುತ್ತಾಳೆ. ತನ್ನ ದೊರೆಯನ್ನು ಮತ್ತೆ ಕೊಡುವುದಾದರೆ ಪ್ರಾಣಿ, ಪಕ್ಷಿಗಳಿಗೆ ಪ್ರಿಯವಾದುದನ್ನು ಕೊಡುವುದಾಗಿ ಹೇಳುತ್ತಾಳೆ, ವಿನಂತಿಸುತ್ತಾಳೆ. ಕರ್ವುವಿಲ್ಲನ ಧ್ಯಾನದಲ್ಲಿಯೇ ಕಾಲಕಳೆಯುತ್ತಾಳೆ. ಅವಳಾದರೋ -

ತನಿವಣ್ಣಂ ಲಂಚಮಿಾವೆಂ ಪುರುಳಿ ನಿನಗೆ ಪೊಗೊಂಚಲಂ ಬೇಗದಿಂದಂ
ನಿನಗೀವೆಂ ತುಂಬಿ ಕೆಂದಾವರೆಯ ಮಿಸುಗಾಪಮೆಲ್ಮೊಗ್ಗೆಯಂ ಮಾಣದೆಂದುಂ
ನಿನಗೀವೇನಂಚೆ ಕಂಪಂ ನಿನಗೆ ಸಲಿಸುವೆಂ ಕೂಡೆ ತಣ್ಗಾಳಿಯೆನ್ನೋ
ಪನನಿಂದಾರಯ್ದು ತಂದೆನ್ನೊಡನಿರಸಿದೊಡೆಂದಾಕೆ ಮಾತುಡುತಿರ್ಪಳ್ [೪೧]

ಎಂದು ನಿತ್ಯವೂ ಹಂಬಲಿಸುತ್ತಾಳೆ. ಈಶ್ವರನ ಶಾಪದಿಂದ ನೀನು ಈ ಪೂವಿನ ಪೊಳಲಿನಲ್ಲಿ ನೆನಯಂಬನೆಂಬ ರಾಜನಾದೆ. ನನ್ನ ಮಾತನ್ನು ಕೇಳಿದಾಗಲೇ ನಿನ್ನ ಶಾಪ ಕಳೆದುಹೋಯಿತು. ಈ ಹೂದೋಟದ ಸಕಲ ವಾಸಿಗಳೆಲ್ಲ ನಿನ್ನ ಪಡೆಯಾಗಿದೆ. ಇದನ್ನೆಲ್ಲ ಇಂದು ನೀನು ಮರಳಿ ಪಡೆಯುವೆ ಎಂದು ಹೇಳಿ ಆ ಅಪ್ಸರ ಸ್ತ್ರೀ ತನ್ನ ನೆಲೆಗೆ ಹಾರಿ ಹೋಗುತ್ತಾಳೆ.

ಅಪ್ಸರ ಸ್ತ್ರೀಯ ಮಾತನ್ನು ಕೇಳಿಸಿಕೊಂಡ ಗಿಳಿಯೊಂದು ಕಂಪಿನಪೊಳಲಿಗೆ ಹಾರಿಹೋಗಿ ಬಸಂತನ ಮೂಲಕ ಇಚ್ಛೆಗಾರ್ತಿಗೆ ವಿಷಯ ತಿಳಿಸುತ್ತದೆ. ವಿಷಯ ತಿಳಿದ ಇಚ್ಛೆಗಾರ್ತಿ ಹರ್ಷಗೊಂಡು ತನ್ನ ಪತಿಯನ್ನು ಸ್ವಾಗತಿಸುವ ಸಲುವಾಗಿ ಪಟ್ಟಣವನ್ನು ಸಿಂಗಾರಗೊಳಿಸಿ ಪರಿವಾರದೊಡನೆ ಕರ್ವುವಿಲ್ಲನನ್ನು ಸ್ವಾಗತಿಸುತ್ತಾಳೆ. ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ.

ಬಿರಿದೊಳ್ದಾವರೆಗಂಪಂ

ಕೊರಲುದ್ದಂ ಪಿರ್ವ ತುಂಬಿಯನೆ ನೀಱಿನ ಚೆ

ಲ್ವೊರೆದ ಸವಿದುಟಿಯನೊಲವಿಂ

ಬರೆ ಪೀರ್ದುವು ನೋಡುವಿಚ್ಚೆಗಾರ್ತಿಯ ಕಣ್ಣಳ್ [೨]

ಇಷ್ಟು ಕತೆಯನ್ನು ಅಪ್ಸರೆಯು ಹೇಳಿದಾಗ ನನೆಯಂಬನ ಶಾಪ ವಿಮೋಚನೆಯಾಗಿ ನೆನಯಂಬನು ಮನ್ಮಥನು ಹಾಗೂ ಅಪ್ಸರೆಯು ಹಿಂದಿನ ಇಚ್ಚೆಗಾರ್ತಿಯಾದಳು. ನಂತರ ಕಾಮನು ಇಚ್ಚೆಗಾರ್ತಿಯೊಡನೆ ಮಾವೆಂಬ ಆನೆಯನ್ನೇರಿ ಕಂಪಿನ ಪೊಳಲನ್ನು ಸೇರಿ ರಾಜ್ಯಭಾರ ನಡೆಸುವನು. ಇದು ಕತೆಯ ಸಾರ.

ಈ ಕತೆಯಲ್ಲಿ ಕವಿ ಹಲವು ಮಾರ್ಪಾಡುಗಳನ್ನು ಮಾಡಿದ್ದಾನೆ. ಮೂಲ ಜನಪ್ರಿಯ ಕತೆಯನ್ನು ಪಲ್ಲಟ ಮಾಡಿರುವುದರಿಂದ ಹೊಸಕತೆಯಂತೆ ಭಾಸವಾಗುತ್ತದೆ. ಪ್ರಕೃತಿ ಕ್ರಿಯಾಶೀಲವಾಗಿರುವುದು ಈ ಕಾವ್ಯದ ಮತ್ತೊಂದು ವೈಶಿಷ್ಟ್ಯವಾಗಿದೆ. ಪ್ರಾಣಿ, ಪಕ್ಷಿ ಸಂಕುಲಗಳ ಜೊತೆಗೆ ಅನುಭವಕ್ಕೆ ಬರುವ ದೃಷ್ಟಿಗೆ ಗೋಚರಿಸದ ಗಾಳಿ, ಕಂಪುಗಳೂ ಮನ್ಮಥನ ಸೈನ್ಯದಲ್ಲಿ ಪಾತ್ರ ವಹಿಸಿದೆ. ತಂಗಾಳಿಯು ಕಾಮ ಶಿವನ ನಡುವೆ ದೂತನಾಗಿ ಕಾರ್ಯ ನಿರ್ವಹಿಸಿದರೆ ನವಿಲು, ಕೋಗಿಲೆಗಳು ಸೈನ್ಯಾಧಿಕಾರಿಗಳಾಗಿ ಕಾಣಿಸಿಕೊಳ್ಳುತ್ತವೆ. ಹೂವು, ಹಣ್ಣಗಳು ಆಭರಣಗಳಾಗಿ ಕಬ್ಬು ಬಿಲ್ಲಾಗಿ, ಹೂ ಬಾಣವಾಗಿ ಕಾಮನಲ್ಲಿ ಕಂಡುಬಂದರೆ, ಶಿವನ ಸೈನ್ಯ ಸಹಜ ಸೈನಿಕ ದಳವೇ ಆಗಿರುವ ಚಿತ್ರಣ ಕಾಣಬರುತ್ತದೆ.

ಪ್ರಾಚೀನ ಕಾವ್ಯ ಸಂಪ್ರದಾಯದಂತೆ ಕಬ್ಬಿಗರ ಕಾವವೂ ಪುರವರ್ಣನೆಯ ಮೂಲಕ ಆರಂಭವಾಗುವುದು. ಪೂವಿನಪೊಟಿಲು, ಬನ, ಕೋಟೆ, ರಾಜಬೀದಿ, ನಂತರ ರತ್ನದ, ಕಂಚುಗಾರರ, ಸೀರೆ ವರದರ, ಪಸರ, ಮಾಲೆಗಾರ್ತಿಯರ ಸೂಳೆಗೇರಿಯ ವರ್ಣನೆಯೂ ಇಲ್ಲಿದೆ. ದೇಸೀ ನುಡಿ, ಗಾದೆ ಮಾತುಗಳು, ತತ್ಸಮ, ತದ್ಭವಗಳಿಂದ ಕಥೆಯನ್ನು ಹೆಣೆದಿದ್ದಾನೆ.

೨. ಮುಳಿಯ ತಿಮ್ಮಪ್ಪಯ್ಯ

ಆಂಡಯ್ಯನ ನಂತರ ನವೋದಯ ಕಾಲಘಟ್ಟದಲ್ಲಿ ಅಚ್ಚಗನ್ನಡ ಕಾವ್ಯರಚನೆ ಮಾಡಿದವರು ಮುಳಿಯ ತಿಮ್ಮಪ್ಪಯ್ಯನವರು. ಪಂಡಿತ ಪರಂಪರೆಯ ಶ್ರೇಷ್ಠ ಪ್ರತಿನಿಧಿಯಾದ ಮುಳಿಯ ತಿಮ್ಮಪ್ಪಯ್ಯನವರು ದಕ್ಷಿಣ ಕನ್ನಡ ಜಿಲ್ಲೆಯವರು. ಕ್ರಿ.ಶ. ೧೮೮೮ ಮಾರ್ಚ ೩ ರಂದು ವಿಟ್ಲ ಸಮೀಪದ ಮುಳಿಯ ಎಂಬಲ್ಲಿ ಜನಿಸಿದರು. ಕೇಶವಭಟ್ಟ ಮತ್ತು ಮೂಕಾಂಬಿಕಾ ಇವರ ತಂದೆ ತಾಯಿಗಳು. ೧೯೧೧ ರಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದ ಮುಳಿಯರು ಕೊನೆಯವರೆಗೂ ಅದೇ ವೃತ್ತಿಯಲ್ಲಿ ಮುಂದುವರೆದರು. ೧೯೧೭ ರಿಂದ ೧೯೧೯ ರ ವರೆಗೆ ಕನ್ನಡ ಕೋಗಿಲೆ ಪತ್ರಿಕೆಯ ಸಂಪಾದಕರಾಗಿ ಸೇವೆಸಲ್ಲಿಸಿದರು. ಶಿಕ್ಷಕ ವೃತ್ತಿಯ ಜೊತೆಗೆ ಅವರು ಯಕ್ಷಗಾನ, ಸಂಗೀತ, ಪುರಾಣ ವಾಚನಗಳಲ್ಲಿ ಆಸಕ್ತಿ ಹೊಂದಿದ್ದರು. ಸಂಶೋಧನೆ, ವಿಮರ್ಶನ, ಅನುವಾದ ಸಂಗ್ರಹ, ಪ್ರಯೋಗ ಕಾರ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ೧೯೩೧ ರಲ್ಲಿ ಕಾರವಾರದಲ್ಲಿ ನಡೆದ ೧೭ ನೇ ಕನ್ನಡ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೆ ಅವಿರೋಧವಾಗಿ ಆಯ್ಕೆಯಾದ ಮುಳಿಯರ ಸಾಹಿತ್ಯಿಕ ಸೇವೆ ಅಪಾರವಾದುದು. ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ಸಂಗ್ರಹ ಮೊದಲಾದ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ್ದಾರೆ."

ಅವರು ಚಂದ್ರಾವಳೀ ವಿಲಾಸಂ - ಹಳಗನ್ನಡ ಗದ್ಯಕಾವ್ಯ (೧೯೧೩), ಸೊಬಗಿನ ಬಳ್ಳಿ - ಪದ್ಯಕಾವ್ಯ (೧೯೧೭), ನಡೆತೆಯ ನಾಡು - ಅಚ್ಚಗನ್ನಡ ಗದ್ಯ ಕೃತಿ (೧೯೧೭), ಬಡಹುಡುಗಿ - ಕಥನಕಾವ್ಯ (೧೯೧೭), ಹಗಲಿರುಳು - ನಾಟಕ (೧೯೧೮), ಪಶ್ಚಾತ್ತಾಪ - ಕಾದಂಬರಿ (೧೯೩೪, ೧೯೪೫) ನಾಡೋಜ ಪಂಪ - ಪಂಪನ ಜೀವನ ಮತ್ತು ಅವನ ಕೃತಿಗಳ ಸಮೀಕ್ಷೆ (೧೯೩೮, ೧೯೭೭), ನವನೀತ ರಾಮಾಯಣ - ರಗಳೆ ಕಾವ್ಯ (೧೯೪೦), ಆದಿಪುರಾಣ ಸಂಗ್ರಹ - ಪಂಪನ ಆದಿಪುರಾಣದ ಸಂಗ್ರಾನುವಾದ ಗದ್ಯಕೃತಿ (೧೯೩೮), ಸಮಸ್ತ ಭಾರತ ಸಾರ ಪಂಪನ ವಿಕ್ರಮಾರ್ಜುನ ವಿಜಯದ ಗದ್ಯಾನುವಾದ (೧೯೪೧), ತ್ರಿಪುರದಾಹ - ಶಿಶುಮಾಯಣನ ತ್ರಿಪುರದಹನ ಸಾಂಗತ್ಯದ ಗದ್ಯಾನುವಾದ (೧೯೪೧) ಶಿವರಾಮ ಚರಿತ - ನತ್ತ ಮೆಟ್ಟುವ ಹಾಡು (೧೯೪೩), ಪಾರ್ತಿಸುಬ್ಬ - ಯಕ್ಷಗಾನ ಕವಿ ಪಾರ್ತಿಸುಬ್ಬನ ಜೀವನ ಮತ್ತು ಕೃತಿ ಸಮೀಕ್ಷೆ (೧೯೪೫), ಕವಿರಾಜಮಾರ್ಗ ವಿವೇಕ - ೧ ಕೃತಿ-ಕೃತಿಕಾರನ ವಿವೇಚನೆ (೧೯೪೮) ವೀರಬಂಕೆಯ - ಐತಿಹಾಸಿಕ ಕಾದಂಬರಿ (೧೯೪೮, ೧೯೪೯, ೧೯೮೩), ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು - ಲೇಖನಗಳ ಸಂಗ್ರಹ (೧೯೫೦), ಕನ್ನಡ ನಾಡೂ ದೇಸಿ ಸಾಹಿತ್ಯವೂ - ಮೂರು ಉಪನ್ಯಾಸಗಳ ಸಂಗ್ರಹ (೧೯೫೪), ರಾವುತ ರಂಗಪ್ಪ - ಅಪೂರ್ಣ ಗೀತಾನಾಟಕ (೧೯೫೯), ಪ್ರೇಮಪಾಶ-ಷಟ್ಪದಿ - ಕಾವ್ಯ (೧೯೧೭), ಕವಿರಾಜಮಾರ್ಗ ವಿವೇಕ - ೨ - ಎರಡೂ ಭಾಗಗಳು ಸೇರಿ (೧೯೭೩), ಸಂಸ್ಕೃತಿ - ೧೯೮೧, ಸೂರ್ಯಕಾಂತಿ ಕಲ್ಯಾಣ - ಯಕ್ಷಗಾನ ಕೃತಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಸೊಬಗಿನ ಬಳ್ಳಿ:

ಸೊಬಗಿನ ಬಳ್ಳಿ ಕಾವ್ಯವು ಮೊತ್ತ ಮೊದಲು ೧೯೧೭ ರಲ್ಲಿ ಪ್ರಕಟವಾಯಿತು. ಅನಂತರ ೧೯೩೧ ರಲ್ಲಿ ಎರಡನೆಯ ಮುದ್ರಣವನ್ನು ಕಂಡಿದೆ. ಆರಂಭದಲ್ಲಿ ಏಳು ಮುಗುಳುಗಳನ್ನು ಹೊಂದಿದ್ದ ಕಾವ್ಯ ನಂತರದಲ್ಲಿ ಎಂಟು ಮುಗುಳಾಗಿ ರೂಪಗೊಂಡಿದೆ. ಮೊದಲ ಮುದ್ರಣದ ಕೊನೆಯಲ್ಲಿ ಕಾವ್ಯದ ಗದ್ಯಾನುವಿದ್ದರೆ, ಎರಡನೆಯ ಮುದ್ರಣದ ಮುನ್ನುಡಿಯಲ್ಲಿ ಕೆಳಗಿನ ಅಚ್ಚಕನ್ನಡದ ವಿವರಣೆಯಿದೆ."

ಕನ್ನಡ ಭಾಷೆಯಲ್ಲಿ ಸಂಸ್ಕೃತದ ಅತಿಕ್ರಮವು ರೂಢಿಯಂತೆ ಬೆಳೆದು ಬಂದಿರುವ ದಾರಿ ಸರಿಯಲ್ಲವೆಂಬುದನ್ನು ಅರಿತ ಆಂಡಯ್ಯ ಸ್ವತಃ ಅಚ್ಚಗನ್ನಡ ಕಾವ್ಯವನ್ನು ರಚಿಸಿ ಹೊಸ ದಾರಿಯನ್ನು ನಿರ್ಮಿಸಿದ. ಹಾಗೆಯೇ ಅಚ್ಚಗನ್ನಡದ ಕೃತಿಗಳು ಆಂಡಯ್ಯನಿಗಿಂತ ಮೊದಲೇ ಇದ್ದುವೇ? ಅದು ಯಾವಾಗ? ಯಾವ ವಸ್ತು, ವಿನ್ಯಾಸದಿಂದ ಕೂಡಿರಬಹುದು ಎಂಬುದನ್ನು ಊಹಿಸಿ ಅಚ್ಚಗನ್ನಡದ ಲಕ್ಷಣವನ್ನು ವಿವರಿಸಿ ತಾವು ಹೇಗೆ ಆ ದಾರಿಯಲ್ಲಿ ಮುಂದುವರಬೇಕೆಂದು ಆಲೋಚಿಸಿದ ಬಗೆಯನ್ನು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಎಲ್ಲೆಲ್ಲಿ ಸಂಸ್ಕೃತವನ್ನು ತುರುಕಿಸಬೇಕು. ಸಂಸ್ಕೃತವನ್ನುಳಿದರೆ ಕನ್ನಡದ ಅಸ್ತಿತ್ವವೇ ಇಲ್ಲವೆಂಬಂತೆ ಭಾವಿಸಲಾಗಿದೆ. ಸಂಸ್ಕೃತದ ಅತಿಕ್ರಮವು ಯೋಗ್ಯವಲ್ಲವೆಂಬುದನ್ನು ತಿಳಿಸಲಿಕ್ಕಾಗಿ ಈಗಿನ ಕಾಲದಲ್ಲಿಯೂ ಇರುವ ಕನ್ನಡದ ಸ್ವಾತಂತ್ರ್ಯವನ್ನು ತೋರಿಸಲಿಕ್ಕಾಗಿ ಮಾತ್ರವೇ ಇದನ್ನು ಬರೆದುದಾಗಿ ಮುಳಿಯರು ಹೇಳಿಕೊಂಡಿದ್ದಾರೆ.

ಭಾಗವತದೊಳಗಿನ ಶಂಬಾಸುರ ವಧೆಯನ್ನು ಕಾವ್ಯದ ಸಂವಿಧಾನಕ್ಕೆ ತಕ್ಕಂತೆ ಕಥೆಯನ್ನು ವ್ಯತ್ಯಾಸಮಾಡಿಕೊಂಡಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಮುಮ್ಮಾತುವಿನ ಮೊದಲನೆಯ ಭಾಗದಲ್ಲಿ ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಸಂಬಂಧವು ಕಾವ್ಯ ಭಾಷೆಯ ದೃಷ್ಟಿಯಿಂದ ಹೇಗೆ ಇರಬೇಕು ಎನ್ನುವುದನ್ನು ವಿವೇಚಿಸಿದ್ದಾರೆ. ಜೊತೆಗೆ ಕನ್ನಡ ಮತ್ತು ಮಲಯಾಳಂ ಮೇಲೆ ಸಂಸ್ಕೃತ ಭಾಷೆಯ ಪ್ರಭಾವದ ಭಿನ್ನತೆಯನ್ನು ಹೇಳುವುದಕ್ಕಾಗಿಯೇ ಮುಳಿಯರು ಅಚ್ಚಗನ್ನಡದ ದಾರಿಯನ್ನು ಆಯ್ಕೆಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ.

ಮುಮ್ಮಾತುವಿನ ಎರಡನೆಯ ಭಾಗದಲ್ಲಿ ಹೊಸ ಮಾರ್ಗದ ಪ್ರವರ್ತಕ ಆಂಡಯ್ಯ ಪರೋಕ್ಷವಾಗಿ ಕನ್ನಡ ಕವಿಶಾಸ್ತ್ರಕಾರರ ಮೇಲೆ ಪ್ರಭಾವ ಬೀರಿರುವ ವಿಚಾರವನ್ನು ನಿದರ್ಶನಗಳ ಸಹಿತ ವಿವೇಚಿಸಿ ಪರೋಕ್ಷವಾಗಿ ಲಾಕ್ಷಣಿಕರು ಈ ಅಚ್ಚಗನ್ನಡದ ಮಾರ್ಗವನ್ನು ಒಪ್ಪಿಕೊಂಡಿರುವುದಾಗಿ ತಿಳಿಸಿದ್ದಾರೆ.

ಮುಮ್ಮಾತುವಿನ ಮೂರನೆಯ ಭಾಗದಲ್ಲಿ ಅವರು ಆಂಡಯ್ಯ ಕೇಶಿರಾಜರ ಅಚ್ಚಗನ್ನಡದ ಲಕ್ಷಣವನ್ನು ವಿಮರ್ಶೆ ಮಾಡುವ ಮೂಲಕ ತತ್ಸಮ ಪದಗಳು, ಸಮಸಂಸ್ಕೃತ ಪದಗಳು, ತದ್ಭವಗಳು ಕನ್ನಡ ಭಾಷಾ ಪ್ರಯೋಗದಲ್ಲಿ ಬಳಕೆಯಾಗಬೇಕಾದ ಕ್ರಮದ ಜೊತೆ ಜೊತೆಗೆ ಕರ್ನಾಟಕ ಸಾಹಿತ್ಯದಲ್ಲಿ ಅಚ್ಚಗನ್ನಡಕ್ಕೂ ಒಂದು ಸ್ಥಾನವಿದೆಯೆಂಬುದು ನಿರ್ವಿವಾದವೆಂದು ಲೇಖಕರು ಉಲ್ಲೇಖಿಸುತ್ತಾರೆ.

ಮುಮ್ಮಾತುವಿನ ಕೊನೆಯ ನಾಲ್ಕನೆಯ ಭಾಗದಲ್ಲಿ ಕವಿಗಳು ತಮ್ಮ 'ಸೊಬಗಿನ ಬಳ್ಳಿ' ಕಾವ್ಯವು ಅಚ್ಚಗನ್ನಡ ಕಾವ್ಯ ಮಾರ್ಗದ ಒಂದು ನಿದರ್ಶನವೆಂದು ಹೇಳುತ್ತಾ ಅಚ್ಚಗನ್ನಡ ಕಾವ್ಯ ಮಾರ್ಗವನ್ನು ಕಾಲುದಾರಿ ಎನ್ನುವ ತಿಮ್ಮಪ್ಪಯ್ಯನವರು ಈಗಿನವರೂ ಕೂಡ ನಡೆಯಲಾರದಷ್ಟು ಅಚ್ಚವಾಗಿ ಈ ದಾರಿ ಉಂಟೆಂಬುದನ್ನು ಕಾಣಿಸಲಿಕ್ಕಾಗಿ ಸೊಬಗಿನ ಬಳ್ಳಿ ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ.

''ಈ ನನ್ನ ಪ್ರಯತ್ನವನ್ನು ನೋಡಿ ಕನ್ನಡಿಗರು ಸಂಸ್ಕೃತ ವಿರೋಧಿ ಇವನು ಎಂದು ಭಾವಿಸಬಾರದು. ಸಂಸ್ಕೃತಾಭಿಮಾನವು ಎಲ್ಲರಂತೆ ನನ್ನಲ್ಲಿಯೂ ಇದೆ. ನಮ್ಮ ದೇಶದಲ್ಲಿ ಮಾತ್ರವಲ್ಲ ಇಡೀ ಪ್ರಪಂಚದಲ್ಲಿಯೇ ನಮ್ಮ ಸಂಸ್ಕೃತ ಎಡೆವಡೆದಿದೆಯೆಂಬುದು ಅಭಿಮಾನಾಸ್ಪದವು. ಅದರಿಂದೊದಗಿದ ಸಂಸ್ಕೃತ ಮಾಸಿ ಹೋಗುವುದಿಲ್ಲ. ಮರೆಯತಕ್ಕದ್ದೂ ಅಲ್ಲ. ಅಷ್ಟೇ ಅಲ್ಲ ಕನ್ನಡ ಸಾಹಿತ್ಯದಿಂದ ಸಂಸ್ಕೃತವನ್ನು ನೂಕಿ ಬಿಡಬೇಕೆಂಬ ಭಾವನೆಯೂ ನನ್ನದಲ್ಲ. ಹಾಗೆಲ್ಲ ಭಾವಿಸುವುದು ಅಸಾಧ್ಯ. ಇದೊಂದು ಪಾಪವೆಂದು ನನ್ನಣಿಕೆ. ಆದ್ದರಿಂದಲೇ ಈ ಮುನ್ನುಡಿಯನ್ನು ಕರ್ನಾಟಕದಲ್ಲಿ ಬರೆದಿರುವುದು. ಆದರೆ ಎಲ್ಲೆಲ್ಲಿಯೂ ಸಂಸ್ಕೃತವನ್ನು ತರುಕಿಸಬೇಕು ಸಂಸ್ಕೃತವನ್ನುಳಿದರೆ ಕನ್ನಡದ ಅಸ್ತಿತ್ವವೆ ಇಲ್ಲವೆಂದು ಹೇಳುವವರ ಸಂಸ್ಕೃತಾತಿಕ್ರಮವು ಮಾತ್ರ ಯೋಗ್ಯವಲ್ಲವೆಂಬುದನ್ನು ತಿಳಿಸಲಿಕ್ಕಾಗಿ ಮಾತ್ರವೇ ಇದನ್ನು ಬರೆದಿರುವುದು. ಇದರಲ್ಲಿಯೂ ಒಂದೆರಡು ಸಂಸ್ಕೃತದ ರೂಢನಾಮ ಪದಗಳನ್ನು ಹಾಗೆಯೇ ಇರಿಸಿದೆ. ಈ ಅಚ್ಚಗನ್ನಡವು ಈಗಿನ ಹೊಸಗನ್ನಡ ಸಾಹಿತ್ಯಕ್ಕೂ ಸಹಾಯವಾಗಬಹುದೆಂದು ನಂಬಿದ್ದೇನೆ.''[೪೫] ಹೀಗೆ ಕನ್ನಡ-ಸಂಸ್ಕೃತ ಭಾಷೆಗಳ ಸಂಬಂಧದ ಬಗೆಗೆ ಮುಳಿಯರು ಸ್ಪಷ್ಟವಾದ ನಿಲುವು ಹೊಂದಿರುವುದನ್ನು ಅವರ ಮಾತುಗಳಿಂದಲೇ ತಿಳಿಯಬಹುದು.

ಕಥಾ ಸಾರ

ಆಂಡಯ್ಯನ ಕಾವ್ಯದ ಮುಂದಿನ ಭಾಗವನ್ನು ಎಂದರೆ ಭಾಗವತದೊಳಗಿನ ಶಂಬಾಸುರ ವಧೆಯನ್ನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಮುಳಿಯರು ಕಾವ್ಯ ವಸ್ತುವಾಗಿಸಿದ್ದಾರೆ. ಸಕಲ ಸಂಪತ್ತುಗಳಿಂದ ಕೂಡಿದ ದ್ವಾರಕೆಯಲ್ಲಿ ಶ್ರೀಕೃಷ್ಣನು ಸುಖದಿಂದ ಇರುವಾಗ ಪಟ್ಟದರಸಿ ರುಕ್ಮಿಣಿಗೆ ನೋವು ಉಂಟಾದ ಸಂಗತಿ ದಾಸಿಯರಿಂದ ಕೃಷ್ಣನಿಗೆ ತಿಳಿಯುತ್ತದೆ. ಶ್ರೀಕೃಷ್ಣನು ಆತಂಕಗೊಂಡು ವಿಚಾರಿಸಿದಾಗ ರುಕ್ಮಿಣಿ ಮಕ್ಕಳ ಬಯಕೆಯಿಂದ ದುಃಖಿತಳಾಗಿರುವುದು ತಿಳಿಯುತ್ತದೆ. ಶ್ರೀಕೃಷ್ಣನು ಶಂಬರನನ್ನು ಕೊಲ್ಲುವ ಮಗನನ್ನು ಅವಳು ಪಡೆಯುವುದಾಗಿ ಸಂತೈಸುತ್ತಾನೆ.

ಅದವಳಲ್ಸಾಕು ಪೇಳ್ದಪೆನು ಸಂಬರನಂ
ಸದೆವುದಕ್ಕಾಗಿ ಪಡೆದಪೆ ಮುದ್ದುಮಗನಂ
ಇದು ಬೊಮ್ಮನಾಣೆ ಪುಸಿಯಾಗದರೆವೀಸಂ
ಅದರಿಂದೆ ಪಾರ್ವುದುನೆಲವೆ ನಿನ್ನ ಕೂಸಂ
ಕಾಡಿಗೆಯನೊಂದೆ ಕರ್ಮಣಿಯೆಂದು ಕದಪಂ
ಜೋಡಲಣ್ಪೆನಸೆಂದುರದೆ ರನ್ನಗೆಂಪೆಂ
ದಾಡಿ ಜಗುಳುತ್ತ ತುಟಿಗಿಳಿಯೆ ಕಂಬನಿಯಂ
ನೋಡಿ ಮುತ್ತೆಂದೊಲವಿನಿಂದಾಯ್ದನಿನಿಯಂ [೪೬]

ಹೀಗೆ ರುಕ್ಮಿಣಿಯನ್ನು ಸಂತೈಸುತ್ತಾನೆ. ಆಮೇಲೆ ರುಕ್ಮಿಣಿಯೂ ಬಸಿರಿಯಾಗುತ್ತಾಳೆ. ಮಣಿಪುರದಲ್ಲಿ ಶಂಬರನೆಂಬ ರಾಕ್ಷಸನು ಸೊಕ್ಕಿನಿಂದ ರಾಜ್ಯಭಾರ ನಡೆಸುತ್ತಿದ್ದನು ಒಮ್ಮೆ ಮೃಗಯಾ ವಿಹಾರಕ್ಕೆ ಹೋದಾಗ ಪೊದರೊಳಗಿನಿಂದ ಹೆಂಗಸೊಬ್ಬಳು ಹೊರಬರುವುದನ್ನು ಕಂಡು ವಿಸ್ಮಿತನಾದ ಶಂಬರನು ಆಕೆಯ ಪರಿಚಯವನ್ನು ಕೇಳುತ್ತಾನೆ. ಅದಕ್ಕೆ ಆಕೆಯು ನಾನು ಚಿಕ್ಕವಳಿರುವಾಗಲೇ ತಂದೆ ತಾಯಿ ಅಗಲಿದರು. ಕಾವನೊಬ್ಬನನ್ನು ಕೈಹಿಡಿದು ಇಲ್ಲೇ ತಿರುಗುತ್ತಿದ್ದೆ ಆದರೆ ಅವನು ಇಲ್ಲೆ ಬೂದಿಯಾದನು. ಈಗ ನಾನು ಅನಾಥಳಾಗಿದ್ದೇನೆ, ನೀವು ರಕ್ಷಿಸುವುದಾದರೆ ನಿಮ್ಮಲ್ಲಿ ಮನೆಗೆಲಸವನ್ನಾದರೂ ಮಾಡಿಕೊಂಡಿರುತ್ತೇನೆ ಎಂದು ಹೇಳಿದಳು. ಆಗ

ಪುಟ್ಟಿದುದಕ್ಕರೆ | ತಟ್ಟನೆ ಬಿದಿರಿನ
ಕಟ್ಟೆಯೊಳಗೆ ನೆಲ್ಲೊಗೆವಂತೆ
ಒಟ್ಟಿಗೆ ಪೆಣ್ಣಂ | ಪಟ್ಟಣಕೊಯ್ಯು
ತ್ತಿಟ್ಟಂಬಾಣಸುವಾಳ್ತಿಯೊಳು [೪೭]

ಹೀಗೆ ಶಂಬರನು ಆವಳನ್ನು ತನ್ನ ಮನೆಗೆ ಸೇರಿಸಿಕೊಳ್ಳುತ್ತಾನೆ. ಒಂದು ದಿನ ನಾರದನು ಬಂದು ಶಂಬರನ ವೈರಿ ದ್ವಾರಕೆಯಲ್ಲಿ ಹುಟ್ಟಿದುದನ್ನು ತಿಳಿಸಿದನು. ಇದರಿಂದ ಕೋಪಗೊಂಡ ಶಂಬರನು ರಾತ್ರಿ ದ್ವಾರಕೆಗೆ ಹೋಗಿ

ಕತ್ತಲೆಯ ನೂಲ್ಗೋದ ಬಟ್ಟೆಯಂ ಸಂಬರಂ
ಸುತ್ತಿ ಪಾಯ್ದಂ ದಡದೊಳಿದ್ದ ಮೊಸಳೆ
ಒತ್ತಿ ಹರಿವಾ ಕಾಳ್ಪುರಕೆ ಧಳಮ್ಮನೆ ಧುಮುಕೆ
ದತ್ತೆನಲ್ ಕಡಲ ತಡಿಯಂಸಾರ್ದನು [೪೮]

ಆಯಾ ಶಂಬರನು ಮಗುವನ್ನು ಕಡಲಿಗೆ ಎಸೆದನು. ಆದರೆ ಆ ಮಗುವನ್ನು ಕಡಲು ಕಾಪಾಡಿತು. ಅಂಬಿಗನೊಬ್ಬನು ಅದನ್ನು ಕೊಂಡೊಯ್ದು ಶಂಬರನಿಗೇ ಕೊಡುತ್ತಾನೆ. ಮತ್ತೆ ಶಂಬರನು ಆ ಮಗುವನ್ನು ಅಡಿಗೆಯವಳಿಗೆ ನೀಡುತ್ತಾನೆ. ಹೀಗೆ ಅಡಿಗೆಯವಳಿಂದ ಪೋಷಿತಗೊಂಡು ಬೆಳೆದು ದೊಡ್ಡವನಾದ ಮಗುವೇ ಇಚ್ಛೆಗಾರ. ಒಂದು ಹೂದೋಟದಲ್ಲಿ ದುಃಖಿಸುತ್ತ ಕುಳಿತಿದ್ದ ರತಿದೇವಿಯನ್ನು ಕಂಡ ನಾರದನು ಅವಳ ಬಳಿ ಬಂದು ಸ್ವಲ್ಪ ಸಮಯದಲ್ಲಿಯೇ ಇಚ್ಛೆಗಾರನು ಇಲ್ಲಿಗೆ ಬರಲಿರುವ ಸುದ್ದಿಯನ್ನು ತಿಳಿಸುತ್ತಾನೆ. ಈ ಸುದ್ದಿ ಕಿವಿಗೆ ಬಿದ್ದ ತಕ್ಷಣವೇ ಇಚ್ಛೆಗಾರ್ತಿಗೆ ತನ್ನ ಪೂರ್ವರೂಪದ ಜೊತೆಗೆ ಪೂರ್ವ ಸ್ಮರಣೆಯೂ ಮರುಕಳಿಸುವುದು.

ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿಗೆ ಇಚ್ಛೆಗಾರನೂ ಬರುತ್ತಾನೆ. ಅವನಿಗೆ ನಾರದನು ಅವನ ಹುಟ್ಟಿನ ಕಾರಣ, ಮುಂದೆ ಅವನು ಮಾಡಬೇಕಾದ ಕಾರ್ಯದ ಬಗೆಗಿನ ಪೂರ್ವ ವೃತ್ತಾಂತವನ್ನು ತಿಳಿಸಿ ಶಂಬರನ ವಧೆಗೆ ಪ್ರೇರಣೆಯನ್ನು ಕೊಡುತ್ತಾನೆ.

ಇತ್ತ ಶಂಬರನಿಗೆ ಶಂಕೆ ತಲೆದೋರಿದ್ದರಿಂದ ಇಚ್ಛೆಗಾರ್ತಿಯನ್ನು ಹುಡುಕುತ್ತಾ ಹೂದೋಟಕ್ಕೆ ನುಗ್ಗುತ್ತಾನೆ. ಅಲ್ಲಿ ಅವನು ಇಚ್ಛೆಗಾರ್ತಿಯ ಚೆಲುವಿಗೆ ಮನಸೋತು ಆಕೆಯನ್ನು ಮೋಹಿಸುತ್ತಾನೆ. ಆಕೆಯನ್ನು ತನ್ನವಳನ್ನಾಗಿಸಿಕೊಳ್ಳಲು ಬಯಸುತ್ತಾನೆ. ಅವಳು ತಾನು ಕಾಮನ ಹೆಂಡತಿ ರತಿಯೆಂದೂ ತನ್ನನ್ನು ಬಯಸಿದರೆ ಮರಣವೇ ಗತಿಯೆಂದು ಎಚ್ಚರಿಕೆ ನೀಡುತ್ತಾಳೆ. ಆದರೆ ರಕ್ಕಸನು ಅವಳ ಮಾತನ್ನು ಆಲಿಸದೆ ಆಕೆಯ ಸೆರಗಿಗೆ ಕೈ ಹಾಕುವನು. ಅಷ್ಟರಲ್ಲಿಯೇ ರಕ್ಕಸನ ಎದುರಿಗೆ ಪ್ರತ್ಯಕ್ಷನಾದ ಕಾಮನಿಗೂ ರಕ್ಕಸನಿಗೂ ಮಾತಿಗೆ ಮಾತು ಬೆಳೆದು ಹೋರಾಟ ಆರಂಭವಾಗುತ್ತದೆ. ಕೊನೆಯಲ್ಲಿ ಕಾಮನು ತನ್ನ ಬಿಲ್ಲಿಗೆ ಬಾಣ ಹೂಡಿ ಶಂಬರನ ಅಂತ್ಯ ಕಾಣಿಸುತ್ತಾನೆ. ಮುಂದೆ ಶಂಬರನ ಮಗನಿಗೆ ರಾಜ್ಯಾಧಿಕಾರವನ್ನಿತ್ತು ರತಿಕಾಮರು ದ್ವಾರಕೆಗೆ ತೆರಳುತ್ತಾರೆ.

ಅಂತಿಂತೆನುವುದಿರ್ಕೆ | ಸಂತಸದ ಕಡಲೊಳೋ
ರಂತೆಲ್ಲರುಂ ಮುಳುಗಿದರ್ ಮೂಡಿದರ್ |
ಎಂತೆಂತೊ ತಡಿಗದ | ರ್ದಾಂತು ರಕ್ಕಸನಣುಗ
ನಂ ತಳ್ಕಿಸುತ್ತರಸಿ ಸೊಸೆಗೆಂದಳು [೪೯]

ಆಂಡಯ್ಯನು ಕಾವ್ಯ ಭಾಷೆಯ ಬಳಕೆಯಲ್ಲಿ ಅನುಸರಿಸಿರುವ ಧೋರಣೆಗಿಂತ ಸ್ವಲ್ಪ ಭಿನ್ನವಾಗಿ ಮುಳಿಯರು ಅನುಸರಿಸಿದ್ದಾರೆ. ಕೆಲವೊಂದು ಸಂಸ್ಕೃತ ಪದಗಳನ್ನು ಹಾಗೆಯೇ ಬಳಸಿದ್ದಾರೆ. ಆದರೆ ಇಲ್ಲಿಯೂ ಹೇರಳವಾದ ನಾಣ್ನುಡಿ, ದೇಶೀನುಡಿಗಳನ್ನು ಪ್ರಯೋಗಿಸಿದ್ದಾರೆ. ಕನ್ನಡದ ಕಟ್ಟಾಭಿಮಾನವೆಷ್ಟೋ ಸಂಸ್ಕೃತದ ಪ್ರೇಮವೂ ಅಷ್ಟೇ

ಎನ್ನುವ ನಿಲುವು ಮುಳಿಯರದೆಂದು ಮುನ್ನುಡಿಯಿಂದ ತಿಳಿದು ಬರುತ್ತದೆ. ಆಂಡಯ್ಯನದು ಸಕ್ಕದಂ ಬೆರಸಿದಲ್ಲದೆ ಕನ್ನಡ ಕಾವ್ಯ ಬರೆಯಲು ಬರುವುದಿಲ್ಲ ಎನ್ನುವವರಿಗೆ ಸವಾಲು. ಆದರೆ ಅಚ್ಚಗನ್ನಡ ಕಾವ್ಯ ಮಾರ್ಗವು ಹೆದ್ದಾರಿಯಂತಲ್ಲವಾದರೂ ಒಳದಾರಿ ಕಾಲುದಾರಿ ಎಂದೇ ಭಾವಿಸುತ್ತಾರೆ. ಅವರ ಪ್ರಕಾರ ಅದು ಗಾಡಿಯೋಡುವಷ್ಟು ವಿಶಾಲವಾದುದಲ್ಲ. ಆದರೂ ಕೆಲವರು ಅದರಲ್ಲಿ ನಡೆದಿದ್ದರು ಎಂಬುದನ್ನು ತೋರಿಸಲು ಮತ್ತು ಸಂಸ್ಕೃತಾತಿಕ್ರಮವು ಸಾಧುವಲ್ಲ ಎನ್ನುವ ಅರಿವು ಮೂಡಿಸುವ ಸಲುವಾಗಿ ಅಚ್ಚಗನ್ನಡ ಕಾವ್ಯ ಬರೆಯಲಾಗಿದೆಯೇ ಹೊರತು ಸಂಸ್ಕೃತದ ಮೇಲಿನ ದ್ವೇಷದಿಂದಲ್ಲ ಎಂಬುದು ಮುಳಿಯರ ಅಭಿಪ್ರಾಯ.

೩. ಕೊಳಂಬೆ ಪುಟ್ಟಣ್ಣಗೌಡ

ಆಂಡಯ್ಯ ಹಾಗೂ ಮುಳಿಯ ತಿಮ್ಮಪ್ಪಯ್ಯನವರ ಅನಂತರ ಅಚ್ಚಗನ್ನಡದಲ್ಲಿ ಕಾವ್ಯ ರಚಿಸಿದವರು ಕೊಳಂಬೆ ಪುಟ್ಟಣ್ಣಗೌಡರು. ತಮ್ಮ ಕಾವ್ಯ ರಚನೆಯ ಉದ್ದೇಶವನ್ನು ಕುರಿತು ಈ ರೀತಿ ಹೇಳಿದ್ದಾರೆ. ''ಇಂದು ನಾವಾಡುವ ನುಡಿಗಳಲ್ಲಿ ಕೆಲವೆಡೆ ನೂರರಲ್ಲಿ ನಲ್ವತ್ತರಿಂದ ಅರವತ್ತರವರೆಗೆ ಹೆರರ ನುಡಿಗಳೇ ತುಂಬಿರುತ್ತವೆ. ನಮ್ಮ ನುಡಿಗಳನ್ನು ಬೇಕಂತಲೇ ಕಡೆಗಣಿಸುತ್ತೇವೆ. ಕನ್ನಡ ನಾಡಿನ ಹೆಸರಿಗಾಗಿ ಕಚ್ಚಾಡುತ್ತೇವೆ. ಆದರೆ ಕನ್ನಡದಲ್ಲೇ ಮಾತನಾಡಬೇಕೆಂಬ ಒಲ್ಮೆಯಿಲ್ಲ. ಕನ್ನಡದಲ್ಲಿ ಮಾತನಾಡುವುದೆಂದರೆ ನಮ್ಮ ಮೇಲ್ಮೆಯನ್ನು ಇಳಿಕೈದಂತಾಗುವುದೆಂದು ಕೆಲವರು ಎಣಿಸಿದಂತೆ ತೋರುತ್ತದೆ. ಇದು ಸರಿಯಲ್ಲವೆಂಬುದು ನನ್ನ ಹುಚ್ಚೆಣಿಕೆ. ಈ ಹಂಬಲದ ಹೆಚ್ಚಳದಿಂದ ನೂರಾರು ಹಗಲಿರುಳು ಕನವರಿಸಿ ಕೊನೆಗೆ 'ಕಾಲೂರ ಚೆಲುವೆ' ಎಂಬ ಹಾಡೇ ಒಡಲಾಗಿ ಕಾವ್ಯ ಬರೆದು ಮುಗಿಸಿದೆನು. ಕನ್ನುಡಿಯಲ್ಲೇ ಬರೆಯಲು ಎಡೆಯಿಲ್ಲವೇ ಎಂದೆನೆಸಿ ಬರೆಯಲು ತೊಡಗಿಸಿ ಕನ್ನುಡಿಯ ನೇಯ್ಗೆಯ ಹಾಡುಗಳನ್ನು ಬರೆದು ಓದಿದಾಗ ಬಾಯಿಂದ ಹೇಳಲಾಗದ ಅದೊಂದು ಇಂಪು ಮೈಗೂಡಿ ನನ್ನ ಬಗೆಯನ್ನು ಬಾನಲ್ಲಿ ತೂಗುವಂತೆ ತೋರಿತು. ಎಂದು ಕಾಲೂರ ಚೆಲುವೆ ಕನ್ನಡದ ಅಳವುಗೆ ಸಂಬಂಧಿಸಿ ಬರೆದುದಾಗಿದೆ.

ಪುಟ್ಟಣ್ಣಗೌಡರು ಆಗಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನವರು, ಪುತ್ತೂರು ತಾಲೂಕಿನ ಅಮರ ಪಡ್ನೂರು ಗ್ರಾಮದ ಚೊಕ್ಕಾಡಿಯಲ್ಲಿ ಸುಬ್ರಾಯಗೌಡ ಮತ್ತು ಸುಬ್ಬಮ್ಮ ದಂಪತಿಗಳ ಮೂರನೆಯ ಮಗನಾಗಿ ೧೯೦೩ ರ ಜುಲೈ ೧೫ ರಂದು ಜನಿಸಿದರು. ಶಿಕ್ಷಕ ವೃತ್ತಿಯಲ್ಲಿ ಸೇವೆ ನಿರತರಾಗಿದ್ದ ಕೊಳಂಬೆಯವರು ೧೯೫೮ರಲ್ಲಿ ನಿವೃತ್ತಿರಾಗುವವರೆಗೂ ಅಧ್ಯಾಪನ ವೃತ್ತಿಯಲ್ಲಿಯೇ ತೊಡಿಗದ್ದರು. ೧೯೩೯ ನೇ ಇಸವಿಯಲ್ಲಿ ಪುಟ್ಟಣ್ಣಗೌಡರು ಬಾಲಕಿ ಎಂಬುವರೊಂದಿಗೆ ವಿವಾಹವಾದರು. ಈ ದಂಪತಿಗಳ ಮಗನೇ ಚಿದಾನಂದ ಗೌಡ. ಕೊಳಂಬೆಯವರು ತಮ್ಮ ಪತ್ನಿ ತೀರಿಕೊಂಡ ಬಳಿಕ ಸೀತಮ್ಮ ಎಂಬುವರನ್ನು ಮದುವೆಯಾದರು. ಅವರಿಗೆ ಹುಟ್ಟಿದ ಮಗಳೇ ಶೀಲಾವತಿ. ೧೯೫೮ ರಲ್ಲಿ ವೃತ್ತಿಯಿಂದ ನಿವೃತ್ತರಾದ ಗೌಡರು, ಅನಾರೋಗ್ಯದ ಕಾರಣದಿಂದಾಗಿ ೧೯೮೧ ನೇ ಜನವರಿ ೨೬ ರಂದು ನಿಧನರಾದರು.

ಅಚ್ಚಗನ್ನಡದ ಬಗೆಗೆ ವಿಶೇಷ ನಿಷ್ಠೆಯಿಂದ ಕೊಳಂಬೆಯವರು ಸುಮಾರು ೧೧ ಪುಸ್ತಕಗಳನ್ನು ಬರೆದಿದ್ದಾರೆ. ಅವರ ಅಚ್ಚಗನ್ನಡ ನುಡಿಕೋಶವು ಈ ಮಾದರಿಯ ಕೃತಿಗಳಲ್ಲಿಯೇ ವಿಶಿಷ್ಟವಾದುದು. ಪುಟ್ಟಣ್ಣಗೌಡರು ನಾಡು ನುಡಿಗಳಿಗೆ ಸಲ್ಲಿಸಿದ ಸೇವೆಯನ್ನು ಮನಗೊಂಡ ಅವರ ಶಿಷ್ಯಮಿತ್ರ ಅಭಿಮಾನಿಗಳೆಲ್ಲ ಸೇರಿ ೧೯೭೫ರಲ್ಲಿ

ಚೊಕ್ಕಾಡಿಯಲ್ಲಿ ಪ್ರೊ. ಎಂ ಮರಿಯಪ್ಪಭಟ್ಟರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ಮಾಡಿ 'ಅಭಿನವ ಅಂಡಯ್ಯ' ನೆಂಬ ಬಿರುದನ್ನು ನೀಡಿ ಸನ್ಮಾನಿಸಿದರು. ೭೮ ವರ್ಷಗಳ ಸಂತೃಪ್ತ ಜೀವನವನ್ನು ಬಾಳಿದ ಕೊಳಂಬೆಯವರು ೧೯೮೧ ರ ಜನರವರಿ ೨೬ ರಂದು ಸ್ವರ್ಗಸ್ಥರಾದರು.

ಕೊಳಂಬೆ ಪುಟ್ಟಣ್ಣಗೌಡರ ಪ್ರಥಮ ಕೃತಿ 'ಅಂಥಕಾಸುರ ಕಾಳಗ' (೧೯೨೬) ಎಂಬ ಯಕ್ಷಗಾನ ಕೃತಿ, ನಲ್ಲೂರಗೆಲ್ಲ ಅವರ ಮತ್ತೊಂದು ಯಕ್ಷಗಾನ ಕೃತಿ, ಹೂವೀಡು ಮತ್ತು ಮಾತಿಲ್ಲಾ ಮಾತಿಲ್ಲಾ ಅವರ ಎರಡು ಶಿಶುಗೀತೆಗಳ ಸಂಕಲನವಾಗಿದೆ. ಅವರ ಮೂರನೇ ಕೃತಿಯೇ 'ಕಾಲೂರ ಚೆಲುವೆ' ಎಂಬ ಅಚ್ಚಗನ್ನಡ ಕಾವ್ಯ. ತಿಳಿಗನ್ನಡದಲ್ಲಿಯೇ ಕಾವ್ಯ ರಚಿಸಿ ಅನೇಕ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾದ ಕೊಳಂಬೆಯವರ ಎರಡನೇ ಅಚ್ಚಗನ್ನಡ ಕೃತಿ 'ನುಡಿವಣಿಗಳು' ಎಂಬ ಸಾವಿರ ಮುಕ್ತಕಗಳ ಸಂಕಲನ. ಇದರಲ್ಲಿ ಕೊಳಂಬೆಯವರು ತಮ್ಮ ಜೀವನದುದ್ದಕ್ಕೂ ಕಂಡುಂಡ ಅನುಭವಗಳ ಸಾರವನ್ನು ಚೌಪದಿಯ ರೂಪದಲ್ಲಿ ರಚಿಸಿದ್ದಾರೆ. ಸಾಹಿತ್ಯ ಮಾತ್ರವಲ್ಲದೆ ಹಸ್ತ ಸಾಮುದ್ರಿಕ ಶಾಸ್ತ್ರದಲ್ಲಿಯೂ ಆಸಕ್ತಿಯಿದ್ದ ಗೌಡರು ಬೆರಳುಗಳಿಂದ ಅದೃಷ್ಟ ಹಾಗೂ ಇನ್ನಿತರ ಸಾಮುದ್ರಿಕಾ ಶಾಸ್ತ್ರ ಗ್ರಂಥಗಳನ್ನು ಬರೆದಿದ್ದಾರೆ. ಅವರ ಮತ್ತೊಂದು ಅಪೂರ್ವ ಸಾಧನೆ ಅಚ್ಚಗನ್ನಡದ ನಿಘಂಟು. ಈ ನಿಘಂಟಿನಲ್ಲಿ ತಿಳಿಗನ್ನಡದ ಪದಗಳಿಗೆ ಕನ್ನಡದಲ್ಲಿ ಅರ್ಥಗಳನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಅವರ ಎಲ್ಲ ಪ್ರಕಟಿತ ಕೃತಿಗಳು ಅವರ ಸ್ವಂತ ಪ್ರಕಾಶನದಿಂದ ಹೊರಬಂದವುಗಳು. ದಕ್ಷಿಣ ಕನ್ನಡ ಜಿಲ್ಲೆಯ ಪಂಜರ ಪ್ರತಿಮಾ ಪ್ರಕಾಶನದ ಅಧ್ಯಕ್ಷರಾಗಿದ್ದ ಕೊಳಂಬೆಯವರು ವಿವಿಧ ಲೇಖಕರ ಕತೆಗಳನ್ನೊಳಗೊಂಡ 'ಕಣ್ ಕನಸು ತೆರೆದಾಗ' ಎಂಬ ಕಥಾ ಸಂಕಲನವನ್ನು ೧೯೬೪ ರಲ್ಲಿ ಹೊರತಂದರು. ಯಕ್ಷಗಾನ ಮನೆತನದಲ್ಲಿ ಜನಿಸಿದ ಕೊಳಂಬೆಯವರು ಪ್ರಸಿದ್ಧ ಅರ್ಥದಾರಿಯಾಗಿದ್ದರು. ಜಪಾನು ಮಾದರಿಯ ಕೃಷಿ ಪದ್ಧತಿ ಭಾರತಕ್ಕೆ ಕಾಲಿಟ್ಟ ಸಮಯದಲ್ಲಿ ಆ ಪದ್ಧತಿಯ ಉದ್ದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಉದ್ದೇಶದಿಂದ ಗೌಡರು ಅದೇ ವಸ್ತುವನ್ನು ಆಧರಿಸಿ 'ನಲ್ಲೂರಗೆಲ್ಲ' ಎಂಬ ಸಾಮಾಜಿಕ ಕಥಾ ಪ್ರಸಂಗವನ್ನು ರಚಿಸಿದರು. [೫೦]

ಕಥಾಸಾರ:

ಹೊಸವೂರು ಎಂಬ ಹಳ್ಳಿಯ ಕೊರಗು ಮತ್ತು ಮಸೆ ಎಂಬ ಬೇಸಾಯಗಾರ ದಂಪತಿಗಳ ಮಕ್ಕಳೇ ಕಾಳು ಮತ್ತು ಬೆಳ್ಳಿ. ಒಂದು ದಿನ ನೆರಮನೆಯ ಮದುವೆಯ ನಿಮಿತ್ತ ಬೆಳ್ಳಿ ತಂದೆಯೊಂದಿಗೆ ನೆಲ್ಲೂರಿಗೆ ಹೊರಟಳು. ಮದುವೆ ಮನೆಯಲ್ಲಿ ಅನೇಕ ಯುವಕರು ಬೆಳ್ಳಿಯ ಸೌಂದರ್ಯಕ್ಕೆ ಮನಸೋತರು; ಈಗಾಗಲೇ ಮದುವೆಯಾದ ಕೆಲವರು ಮದುವೆಯಾದದ್ದೇ ತಪ್ಪಾಗಿ ಹೋಯಿತೆಂದು ಕೈತಿಕ್ಕಿಕೊಂಡರು; ಮದುವೆ ನಿಶ್ಚಯವಾದ ಕೆಲವರು ತಮ್ಮ ನಿರ್ಧಾರವನ್ನು ಬದಲಿಸಬೇಕೆಂದು ಯೋಚಿಸುತ್ತಿದ್ದರು. ಅಲ್ಲಿಗೆ ದೊಡ್ಡನೆನ್ನುವ ಯುವಕನೂ ಬಂದಿದ್ದನು. ದೊಡ್ಡನು ಬೆಳ್ಳಿಯಿಂದಲೂ, ಬೆಳ್ಳಿಯು ದೊಡ್ಡನಿಂದಲೂ ಪರಸ್ಪರರು ಆಕರ್ಷಿತರಾದರು.

ಎಡ್ಡಮಂ ಮಬ್ಬಿನೊಳ್
ದೊಡ್ಡನುಂ ನೋಡಿದಂ
ದೊಡ್ಡವಂ ಕಿರಿದಾಗಿ

ಬಯಕೆಯೊಳಗಿಳಿದಂ

ಹುಡುಗಿ ಚೆಲ್ಲುವ ನಗೆಯ

ನಡೆಯ ಸೆರಗಿನ ಕಯ್ಯ

ಪಿಡಿದ ಬಗೆಯಳ್ಳುಗಳ

ಮಿಂಚುಗಳ ಸೆಳೆದಂ [೫೧]

ದೊಡ್ಡ ಬೆಳ್ಳಿಯರು ಪರಸ್ಪರ ಆಕರ್ಷಿತರಾಗಿರುವುದನ್ನು ಅರಿತ ಬೆಳ್ಳಿಯ ತಂದೆ ಕೊರಗು ಮಳೆಗಾಲದ ನಂತರ ಬೆಳ್ಳಿ ದೊಡ್ಡರ ಮದುವೆ ಮಾಡಲು ಚಿಂತಿಸಿದ. ನೆಲ್ಲೂರಿನ ಹೊನ್ನ - ಹೊನ್ನಿಯರ ಮಗನೇ ಈ ದೊಡ್ಡ. ಮಗನ ಮನದ ಬಯಕೆಯನ್ನು ಅರಿತ ದೊಡ್ಡನ ತಂದೆ - ತಾಯಿಯರೂ ಬೆಳ್ಳಿಯೊಂದಿಗೆ ದೊಡ್ಡನ ಮದುವೆ ಮಾಡಲು ನಿಶ್ಚಯಿಸಿದರು.

ಹೀಗೆ ದೊಡ್ಡ ಬೆಳ್ಳಿಯರ ಪರಸ್ಪರರು ಮದುವೆಯ ಕನಸು ಕಾಣುತ್ತಿರುವಾಗಲೇ ಚಳಿಗಾಲ ಆರಂಭವಾಯಿತು. ಈ ಸಮಯದಲ್ಲಿಯೇ ನೆಲ್ಲೂರಿನ ಮೇಲೆ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಯಿತು. ಚಳಿ ಹೆಚ್ಚಾದಂತೆಯೇ ಚಳಿಯನ್ನೂ ನಡುಗಿಸುವಂತಹ ಹೆಬ್ಬುಲಿಯೊಂದು ನೆಲ್ಲೂರನ್ನು ಪೀಡಿಸತೊಡಗಿತು. ಹೆಬ್ಬುಲಿಯೊಂದು ಹಟ್ಟಿಯ ದನಕರುಗಳ ಮೇಲೆ ಧಾಳಿ ಮಾಡಿ ದನಕರುಗಳನ್ನು ಹಿಡಿದು ಕೊಂದಿತು. ಇದರಿಂದ ಆತಂಕಗೊಂಡ ಕಾಲೂರಿನ ಜನರೆಲ್ಲ ಸೇರಿ ಇದು ಮಲೆದೈವದ ಕಾಟವಿರಬೇಕೆಂದು ಅದಕ್ಕೆ ಹರಕೆ ತೀರಿಸಲು ಹಣ್ಣು ಕಾಯಿಗಳಳನ್ನು ಒಟ್ಟಾಗಿ ಸಂಗ್ರಹಿಸಿದರು. ಆಗಲೇ ಹುಲಿ ಮತ್ತೊಂದು ಎತ್ತನ್ನು ತಿಂದು ಹಾಕಿತು. ಆಗ ಊರವರೆಲ್ಲ ಸೇರಿ ಹುಲಿಯನ್ನು ಬೇಟೆಯಾಡಲು ನಿಶ್ಚಯಿಸಿ ಕಾಡಿಗೆ ಬಂದರು. ಆದರೆ ಅವರ ಕಣ್ಣಿಗೆ ಹುಲಿ ಕಾಣಿಸಲೇ ಇಲ್ಲ. ಒಂದು ದಿನ ದೊಡ್ಡನ ದನವೇ ಕಾಣದಾಯಿತು. ಗುಡ್ಡದ ಬಳಿಗೆ ಬಂದ ದೊಡ್ಡನಿಗೆ ಹುಲಿಯು ದನವನ್ನು ಕೆಡವಿ ಹಿಡಿದಿರುವುದನ್ನು ಕಂಡನು. ದೊಡ್ಡನನ್ನು ಕಂಡ ಹುಲಿಯು ನೆಗೆದು ಹೋಡಿಹೋಯಿತು. ಆದರೆ ದನ ಮಾತ್ರ ಸತ್ತುಹೋಗಿತ್ತು. ಇದನ್ನು ಕಂಡು ದೊಡ್ಡನಿಗೆ ದುಃಖವಾಯಿತು ನೇರವಾಗಿ ಮನೆಗೆ ಬಂದ ದೊಡ್ಡನು ನೆರೆಹೊರೆಯವರನ್ನು ಕರೆದುಕೊಂಡು ದನ ಸತ್ತು ಬಿದ್ದಲ್ಲಿಯೇ ಬಂದು ಮರದಲ್ಲಿ ಹುಲಿಯ ಬೇಟೆಗಾಗಿ ಕಾದು ಕುಳಿತರು. ಅಂದಿನ ಬೆಳದಿಂಗಳ ಕಾರಣದಿಂದಾಗಿ ಹುಲಿ ಬರುವುದು ಸ್ಪಷ್ಟವಾಗಿ ಕಂಡುಬಂದಿತು. ದೊಡ್ಡನು ಸರಿಯಾದ ದಿಕ್ಕಿನಿಂದ ಗುಂಡು ಹೊಡೆದು ಹುಲಿಯನ್ನು ಕೊಂದನು. ಹುಲಿ ಸತ್ತು ಬಿದ್ದದ್ದನ್ನು ಕಂಡು ಊರವರೆಲ್ಲ ಮರುದಿನ ದೊಡ್ಡನನ್ನು ಹಾಡಿ ಹೊಗಳಿದರು.

ಮೆಚ್ಚಿದಂ ನೆರೆಯವಂ

ಗುರಿವೆತ್ತುದಂ, ಕೋವಿ

ಬಿಚ್ಚಿದೊಸಗೆಯಿದೆಂದು

ದೊಡ್ಡನದ ಮೆರೆಗುಂ

ಪೊಚ್ಚಳಿಪುದೇಂ ಕೋವಿ
ಕಾಲೂರ ಕಿಚ್ಚಳಿದ
ಕೆಚ್ಚೆನಲ್ ಸಯ್ತಿರ್ಪು
ದಾಳ್ಕೆಯಂ ಕರೆಗುಂ [೫೨]

ಮರುದಿನ ಸತ್ತ ಹುಲಿಯ ಮೆರವಣಿಗೆಯಾಯಿತು. ಆಗಲೇ ಅವರಿಗೆ ಮತ್ತೊಂದು ಹುಲಿ ಇರುವುದು ತಿಳಿದು ಬಂದಿತು. ಆಗ ಮತ್ತೆ ದೊಡ್ಡನ ಮುಂದಾಳತ್ವದಲ್ಲಿ ಊರಿನ ಉತ್ಸಾಹಿ, ಧೈರ್ಯವಂತ ಯುವಕರೆಲ್ಲ ಸೇರಿ ಬೇಟೆಗೆ ಹೊರಟರು. ಹೀಗೆ ಇವರ ದಂಡು ಕಾಡಿನಲ್ಲಿ ನಡೆದು ಹೋಗುತ್ತಿರುವಾಗಲೇ ಹುಲಿಯು ಎದುರಿಗೆ ಪ್ರತ್ಯಕ್ಷವಾಯಿತು. ಜಾಗ್ರತೆಗೊಂಡ ದೊಡ್ಡನ ಕೂಡಲೇ ಗುರಿನೋಡಿ ಗುಂಡು ಹಾರಿಸಿದನು. ಆದರೆ ಹುಲಿ ಸಾಯಲಿಲ್ಲ. ಗಾಯಗೊಂಡ ಹುಲಿ ದೊಡ್ಡನ ಮೇಲೆರಗಿತು. ದೊಡ್ಡನು ಕೋವಿಯು ಸಿದ್ಧಗೊಂಡಿರಲಿಲ್ಲವಾದ್ದರಿಂದಲೇ ದೊಡ್ಡನು ತನ್ನ ಬಾಳುಕತ್ತಿಯಿಂದಲೇ ಹುಲಿಗೆ ತಿವಿದನು. ಹುಲಿಯೂ ಅವನನ್ನು ಪರಚಿ ಗಾಯಗೊಳಿಸಿತು. ದೊಡ್ಡನ ಬೇಟೆ ನಾಯಿಗಳು ಹುಲಿಯ ಮೇಲೆರಗಿದವು ಕೊನೆಗೆ ದೊಡ್ಡನು ಬಲವಾಗಿ ಕತ್ತಿಯಿಂದ ತಿವಿದದ್ದರಿಂದ ಹುಲಿ ಆ ಕಡೆ ಸತ್ತು ಬಿದ್ದಿತು. ಕೂಡಲೇ ಉಳಿದ ಸ್ನೇಹಿತ ಬೇಟೆಗಾರರು ಓಡಿಬಂದು ದೊಡ್ಡನಿಗೆ ಆರೈಕೆ ಮಾಡಿದರು. ನಂತರ ಕೆಲವರು ದೊಡ್ಡನನ್ನು, ಇನ್ನೂ ಕೆಲವರು ಹುಲಿಯನ್ನು ಹೊತ್ತು ಊರಕಡೆ ನಡೆದರು. ದೊಡ್ಡನಿಗೆ ಮೈಯಲ್ಲಿ ಗಾಯವಾಗಿತ್ತು. ವೈದ್ಯರಿಂದ ಮದ್ದು ಮಾಡಿಸಲಾಯಿತು. ಕ್ರಮೇಣ ದೊಡ್ಡ ಚೇತರಿಸಿಕೊಳ್ಳಲಾರಂಭಿಸಿದ. ಊರೂರಿಗೆ ಹರಡಿದ ಈ ಸುದ್ದಿಯು ಹುಲಿಯೂರಿನಲ್ಲೂ ಹರಡಿತು. ಅಲ್ಲಿ ಹುಲಿಯೇ ದೊಡ್ಡನನ್ನು ಕೊಂದಿತೆಂಬಂತೆ ಸುದ್ದಿಯಾಯಿತು. ಈ ವಿಷಯ ಕೇಳಿದ ಬೆಳ್ಳಿ, ಅವರ ತಂದೆ ತಾಯಿಯರು ದುಃಖಿತರಾದರು. ಆದರೆ ಬೆಳ್ಳಿಯ ಅಣ್ಣ ಕಾಳನು ನಿಜ ಸಂಗತಿಯನ್ನು ತಿಳಿದು ಬರಲು ನೆಲ್ಲೂರಿಗೆ ಹೊರಟನು. ಅಲ್ಲಿ ದೊಡ್ಡನು ಕ್ಷೇಮದಿಂದಿರುವುದನ್ನು ಕಂಡು ಸುದ್ದಿಯನ್ನು ತಂದೆ ತಾಯಿಗೆ ತಿಳಿಸಿದನು ತಿಂಗಳ ಆರೈಕೆಯ ನಂತರ ದೊಡ್ಡನು ಹಾಸಿಗೆಯಿಂದೆದ್ದು ಮೊದಲಿನಂತೆಯೇ ಆದನು. ಆದರೆ ಗಾಯದ ಕಲೆಯು ಮಾತ್ರ ಮುಖದ ಮೇಲೆ ಹಾಗೆಯೇ ಉಳಿಯಿತು. ಹೀಗೆ ಕಾಲ ಉರುಳುತ್ತಿರಲಾಗಿ ಸುಗ್ಗಿಯ ಆಗಮನ ಹೀಗೆ ಆಯಿತು.-

ಪಸುಗೆಯ ಪೊಸವೂರು
ನೆಲ್ಲೂರುಗಳ್ ಬಯಕೆ
ಯುಸಿರ ಮಾರ್ಪಡಿಸೆ ಪೊ
ಳ್ತಿಗೆ ಕಯ್ಯ ಮುಗಿದು
ಒಸಗೆಯಂ ನಲ್ಮೆಯಳ
ಲುಗಳಿಂದ ತಿದ್ದುತಿರೆ
ಹಸೆಗೆ ಚೆಲ್ವಂ ಕರೆವ
ಸುಗ್ಗಿ ಬರುತಿಹುದು. [೫೩]

ಆ ಸುಂದರ ಸಮಯದಲ್ಲಿಯೇ ಬೆಳ್ಳಿಯು ವಾರಗೆಯವರೊಂದಿಗೆ ಕಟ್ಟಿಗೆ ತರಲು ಕಾಡಿಗೆ ಹೋದಳು. ಕಟ್ಟಿಗೆ ಹೊತ್ತು ಬರುವಾಗ ಬೋಳನೆಂಬ ಕಾಡು ಕಾಯುವ ವ್ಯಕ್ತಿ ಇವಳನ್ನು ತಡೆದು ವಿಚಾರಣೆ ಮಾಡಲಾರಂಭಿಸಿದ. ಮಾತಿಗೆ ಮಾತು ಬೆಳೆದು ಜಗಳ ಶುರುವಾಯಿತು. ಇದು ಕಾನೂನಿನ ಅತಿಕ್ರಮಣವೆಂದು ಬೋಳ ಬೈಯತೊಡಗಿದನು. ಬೆಳ್ಳಿಯೂ ಅದಕ್ಕೆ ಪ್ರತಿಯಾಗಿ ಕೆಟ್ಟು ಹೋಗುವ ಒಂದೆರಡು ಹೊರೆ ಕಟ್ಟಿಗೆಯನ್ನು ಕೊಂಡು ಹೋದರೆ ಕಾಡಿನ ಚೆಲುವಿಕೆಯೇನು ಮಾಯವಾಗುತ್ತದೆಯೇ ಎಂದು ಪ್ರಶ್ನಿಸುತ್ತಾಳೆ. ಇದರಿಂದ ಕೋಪಗೊಂಡ ಬೋಳನು ಆಕೆಯ ಕೈಯಲ್ಲಿದ್ದ ಕತ್ತಿಯ ಅಲಗಿಗೆ ಕೈ ಹಾಕಿ ಎಳೆಯುತ್ತಾನೆ. ಆದರೆ ಕೂಡಲೇ ಬೆಳ್ಳಿಯು ಕತ್ತಿಯನ್ನು ರಭಸದಿಂದ ಹಿಂದಕ್ಕೆಳೆದುಕೊಳ್ಳುತ್ತಾಳೆ. ಇದರಿಂದ ಕತ್ತಿ ಅವನ ಕೈಗೆ ತಾಗಿ ಐದು ಬೆರಳುಗಳೂ ಗಾಯಗೊಂಡು ರಕ್ತ ಚಿಮ್ಮುತ್ತದೆ. ಕೋಪಗೊಂಡ ಬೋಳನು ಪೋಲಿಸರಿಗೆ ದೂರು ಕೊಡುವುದಾಗಿ ಹೆದರಿಸಿ ಅಲ್ಲಿಂದ ಹೊರಟುಹೋದ. ಮದುವೆಗಿನ್ನು ಎರಡು ದಿನಗಳು ಮಾತ್ರ ಉಳಿದಿರುವಾಗಲೇ ಹೀಗಾಯಿತಲ್ಲ ಎಂದು ಬೆಳ್ಳಿ ತನ್ನ ಹಣೆಬರಹವನ್ನು ದೂರಿ ಅಳತೊಡಗಿದಳು. ಅಲ್ಲದೆ ಪೋಲಿಸರ ಆಗಮನದ ಭಯದೊಂದಿಗೆ ಮನಸ್ಸಿನಲ್ಲಿಯೇ ಕೊರಗಲಾರಂಭಿಸಿದಳು. ಇದರಿಂದ ಮನೆಯವರೆಲ್ಲ ಭೀತಿಗೊಂಡರು. ಅಲ್ಲದೆ ಜ್ವರ ಜಾಸ್ತಿಯಾಗಿ ಏನೋ ಕೇಡೊದಗಿದೆಯೆಂಬಂತೆ ಚಿಂತಿಸಲಾರಂಭಿಸಿದಳು -

ನೊಸಲ ಬರೆಹಮಿದೆಂದು
ತಡೆತಡೆದು ನಡೆದುದಂ
ಉಸುರಿದಳ್ ಬಾಳ್ಮರದ
ಕಿಚ್ಚಾದುದಳಲು
ಒಸಗೆಯಿಂ ದಹಮದುವೆ
ಗುಳಿದಿರಲ್ ಪಗಲೆರಡು
ಬೆಸೆಯಿತೇ ಕೇಡೆಂದು
ಬಿಸುಸುಯ್ದುಳವಳು [೫೪]

ಮದುವೆಯ ದಿನ ಬಂದೇ ಬಿಟ್ಟಿತು. ಮದುಮಗ ಮದುಮಗಳನ್ನು ಸಿಂಗರಿಸಿ ಬಂಧುಗಳು ಸಂತೋಷದಲ್ಲಿದ್ದರು. ಉದ್ದೇಶಪೂರ್ವಕವಾಗಿ ಅದೇ ಸಮಯಕ್ಕೆ ಸರಿಯಾಗಿ ಬೋಳನಿಗೆ ನೀಡಿದ ಆಶ್ವಾಸನೆಯ ಮೇರೆಗೆ ಮದುವೆಯ ದಿನವೇ ಪೋಲೀಸರು ಮದುವೆಯ ಚಪ್ಪರಕ್ಕೆ ಆಗಮಿಸಿದರು. ಇದರಿಂದ ನೆರೆದಿದ್ದ ಜನರೆಲ್ಲ ಆತಂಕಗೊಂಡರು ಅಲ್ಲದೆ ಮದುವೆಯ ಸಡಗರದ ಕಾರ್ಯಗಳು ಅಲ್ಲಲ್ಲೇ ನಿಂತವು. ಕಾಳನು ಅವರನ್ನು ಕುಳ್ಳಿರಿಸಿ ಸತ್ಕರಿಸಲು ಪ್ರಯತ್ನಿಸಿದನಾದರೂ ಪೋಲೀಸರು ವಿಚಾರಣೆಗೆಂದು ಮದುಮಗಳನ್ನು ಚಪ್ಪರಕ್ಕೆ ಬರಹೇಳಿದರು. ವಿಷಯ ತಿಳಿದ ಬೆಳ್ಳಿಗೆ ಭಯ ಆತಂಕದ ಕಾರಣದಿಂದ ಜ್ವರದ ಪ್ರಮಾಣ ಏರುತ್ತಾ ಹೋಯಿತು. ಇದರಿಂದ ಎಲ್ಲರೂ ಕಳವಳಗೊಂಡರು. ನಡುಗುತ್ತಲೇ ಚಪ್ಪರಕ್ಕೆ ಬಂದ ಬೆಳ್ಳಿಯನ್ನು ಕುರಿತು ಪೋಲೀಸರು ನೀನೇಕೆ ಬೋಳನನ್ನು ಕಡಿದೆ ಎಂದು ಕೇಳಲು ಅಪ್ರಜ್ಞಾ ಸ್ಥಿತಿಯಲ್ಲಿದ್ದ ಬೆಳ್ಳಿ ಸಿಟ್ಟಿನಿಂದ ಹೌದು ಕಾಡಿನ ಒಡೆತನವನ್ನು ಪಡೆಯಲು

ಎಂದು ಹೇಳಿದಳು. ಇದರಿಂದ ಕೋಪಗೊಂಡ ಪೋಲೀಸನೊಬ್ಬನು ಬೆಳ್ಳಿಯ ಕೆನ್ನೆಗೆ ಒಂದೇಟು ಹೊಡೆಯುವನು. ಮೊದಲೇ ನಿಶ್ಶಕ್ತಿಯಿಂದ ಕಳೆಗುಂದಿದ್ದ ಬೆಳ್ಳಿ ನೆಲಕ್ಕೆ ಬೀಳುತ್ತಾಳೆ. ಮೇಲುಸಿರು ಬಿಡುತ್ತಲೇ ಕ್ಷಣ ಕಾಲದಲ್ಲಿಯೇ ಆಕೆಯ ಕೈಕಾಲು ತಣ್ಣಗಾಗಿ ಆಕೆ ಪ್ರಾಣ ಬಿಡುತ್ತಾಳೆ. ಅಲ್ಲಿಗೆ ಸಡಗರದಿಂದ ನಡೆಯುತ್ತಿದ್ದ ಮದುವೆ ದುಃಖದಲ್ಲಿ ಕೊನೆಯಾಗುವಂತಾಗುತ್ತದೆ.

ಕಾದು ಕೊಂಡಿರ್ದದಂ
ದುಗಮದುವೆಗೈತಂದು
ಮೋದಿತೇಂ ನಿನ್ನ ಬಾ
ಳ್ವೆಯ ನೆನ್ನ ಮಗಳೆ
ಪೋದುದೇ ಮನೆಯಾಳ್ಪ
ನಿನ್ನ ನೋಡುವ ಕಣ್ಣು
ಸೀದುದೇ ನಮ್ಮೆಲ್ಲ
ರಂ ಬಿಟ್ಟೆ ಮಗಳೆ [೫೫]

'ಕಾದುಕೊಂಡಿದ್ದ ಕೇಡು ಮದುವೆ ದಿನವೇ ಬಂತೆ?' ಹೆಗಲಿನಲ್ಲಿ ಹೊತ್ತು ಸಾಕಿದ ನಿನ್ನನ್ನು ಇಂದು ಕಾಡಿಗೆಸೆಯುವಂತಾಯಿತಲ್ಲ ಎಂದು ಬೆಳ್ಳಿಯ ತಂದೆ ತಾಯಿಯರು ದುಃಖಿಸತೊಡಗಿದರು. ದೊಡ್ಡನು ದುಃಖದಿಂದ ಮಾತನಾಡದೇ ಹೋದನು. ಆ ದಿನವೇ ಮದುಮಗನು ಮನೆಬಿಟ್ಟು ಹೊರಟು ಹೋದನು. ಹೀಗೆ ಸಾವಿನಲ್ಲಿ ಕಾಲೂರಿನ ಮದುವೆಯ ಸಂಭ್ರಮವು ಕೊನೆಯಾಗುತ್ತದೆ.

ಈ ಘಟನೆಯಿಂದ ದುಃಖಿತನಾದ ದೊಡ್ಡನು ಎಲ್ಲೆಲ್ಲೋ ಅಲೆದು ಆರು ತಿಂಗಳ ನಂತರ ಮನೆಗೆ ಹಿಂದಿರುಗುತ್ತಾನೆ. ಆಗ ಮತ್ತೆ ಹೆತ್ತವರ ಒತ್ತಾಯಕ್ಕೆ ಮಣಿದು ಮದುವೆಯಾಗುತ್ತಾನೆ. ಮದುವೆಯ ಉತ್ಸಾಹವೆಲ್ಲ ಮುಗಿದ ಮೇಲೆ ಬೆಳ್ಳಿ ಆತನಿಗೆ ಕನಸಿನಲ್ಲಿ ಕಾಣುತ್ತಾಳೆ. ಬಂಗಾರದ ಹರಿವಾಣದಲ್ಲಿ ಹೂಗಳನ್ನು ತಂದು ಹೊಸ ಮದುಮಗ ಮದುಮಗಳಿಗೆ ಆರತಿ ಬೆಳಗಿ

ತಂಗಿ ಬಾರೆಂದಪ್ಪಿ
ದೊಡ್ಡನಂ ಕಯ್ಪಿಡಿದ
ಮುಂಗುರುಳ ಚೆಲ್ವೆಯಂ
ನುಡಿಸಿ ಹೂಮುಡಿಸಿ
ಮುಂಗೈಯೊಳಪ್ಪಿ ಪ
ಣ್ಣಿಕವಿಟ್ಟು ಬಾಯ್ಬಿಟ್ಟು
ಕಂಗೆಡದೆ ಬಾಳೆಂದು
ಪರಸಿ ಕಣ್ಣೊರಸಿ [೫೬]

ಕಥೆಯ ವಸ್ತುವಿನ ದೃಷ್ಟಿಯಿಂದ ನೋಡಿದಾಗ ಆಂಡಯ್ಯ, ಮುಳಿಯರು ಪೌರಾಣಿಕ ವಸ್ತುವನ್ನು ಆಯ್ದುಕೊಂಡು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕಾವ್ಯ ರಚಿಸಿದರು. ಅಲ್ಲದೆ ತದ್ಭವ, ದೇಶಿಗಳನ್ನು ತಮ್ಮ ಅಚ್ಚಗನ್ನಡ ಕಾವ್ಯಗಳಿಗೆ ಬಳಸಿಕೊಂಡಿದ್ದಾರೆ. ಅಲ್ಲದೆ ಮುಳಿಯರು ಕೆಲವು ಕಡೆ ಸಂಸ್ಕೃತ ಪದಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಆದರೆ ಕೊಳಂಬೆಯವರ ಕಾಲೂರ ಚೆಲುವೆಯಲ್ಲಿ ದೇಶೀಯ ವಸ್ತು, ದೇಶೀಯ ಭಾಷೆ, ದೇಶೀಯ ಛಂದಸ್ಸುಗಳ ಸಂಗಮವನ್ನು ಕಾಣಬಹುದಾಗಿದೆ.

ಭಾಗ - ೨

ಅಚ್ಚಗನ್ನಡ ಕಾವ್ಯ ಪರಂಪರೆಯಲ್ಲಿ ಮೊದಲನೆಯದಾದ ಆಂಡಯ್ಯನ ಕಬ್ಬಿಗರ ಕಾವ ಐತಿಹಾಸಿಕವಾಗಿ ಬೇರೆ ಬೇರೆ ಕಾರಣಗಳಿಂದಾಗಿ ಮುಖ್ಯವಾದುದು. ಮೊದಲನೆಯದಾಗಿ ನಯಸೇನನಲ್ಲಿ ಚಿಗುರೊಡೆದಿದ್ದ ಅಚ್ಚಗನ್ನಡದ ಚಿಂತನೆ ಆಂಡಯ್ಯನ ಕಾವ್ಯದಲ್ಲಿ ಪ್ರಾಯೋಗಿಕವಾಗಿ ಸಾಧನೆಯಾಗಿದೆ. ಆಂಡಯ್ಯನು ಮತಧರ್ಮದಲ್ಲಿ ಜೈನನಾಗಿದ್ದರೂ ತನ್ನ ಕಾವ್ಯಕ್ಕೆ ಭಾಗವತದ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಕಥೆಯ ಸನ್ನಿವೇಷಗಳಲ್ಲಿ ಬಹುಮಟ್ಟಿಗೆ ಆಂಡಯ್ಯನದೇ ಆದ ಸ್ವಂತಿಕೆಯಿದೆ. ಜೈನ ಧರ್ಮೀಯನಾದ ಆಂಡಯ್ಯನು ಆ ಧರ್ಮಕ್ಕೆ ಸಂಬಂಧಿಸಿದ ಕಥಾವಸ್ತುವನ್ನು ಆಯ್ಕೆ ಮಾಡಿಕೊಳ್ಳದಿರುವುದೇ ವಿಶೇಷ. ಇಲ್ಲಿ ಆಂಡಯ್ಯನು ಹೊಸ ಕಾವ್ಯವನ್ನು ಹೊಸದಾಗಿ ಹೇಳುವ ತೊಡಕುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾನೆ ಎಂದೆನಿಸುತ್ತದೆ. ಮುಖ್ಯವಾಗಿ ಹೊಸ ಸಂಪ್ರದಾಯವನ್ನು ಆರಂಭಿಸುವಾಗ ಅದರ ಜನಪ್ರಿಯತೆಯ ಕಡೆಗೂ ಯೋಚನೆ ಮಾಡಬೇಕಾಗುತ್ತದೆ. ಕಬ್ಬಿಗರ ಕಾವದಲ್ಲಿ ನಿರೂಪಣೆಯಾಗಿರುವ ಕಥೆಯು ಜೈನ ಪುರಾಣಗಳ ಕಥೆಯಷ್ಟು ಜಿಗುಟಾಗಿಲ್ಲ. ಹಾಗೆಯೇ ಪುರಾಣಗಳಲ್ಲಿ ಭಾಗವತ ಪುರಾಣವು ಅತ್ಯಂತ ಜನಪ್ರಿಯವಾದದೂ ಹೌದು. ಹೀಗೆ ಆಂಡಯ್ಯನು ಈ ಜನಪ್ರಿಯ ಕಥೆಯನ್ನು ಹೊಸ ಕಾವ್ಯ ಪರಂಪರೆಗೆ ಆಯ್ಕೆಮಾಡಿಕೊಂಡಿರುವುದು ಆಕಸ್ಮಿಕವಾದುದಲ್ಲ, ಉದ್ದೇಶಪೂರ್ವಕವಾದುದೇ.

ಮುಳಿಯರ ಕಾವ್ಯ ಈ ಪರಂಪರೆಯಲ್ಲಿ ಎರಡನೆಯದು. ಆಂಡಯ್ಯನದೇ ಆದ ಕಥಾ ಸಂಪ್ರದಾಯ ಇಲ್ಲಿ ಮುಂದುವರೆದಿದೆ. ಮುಳಿಯರು ಹೇಳಿದ ಹಾಗೆ ಅದು ಭಾಗವತದೊಳಗಿನ ಶಂಬರಾಸುರ ವಧೆಯ ಕಥೆ. ಅದನ್ನು ಸಂದರ್ಭಾನುಸಾರ ಅವರು ವ್ಯತ್ಯಾಸವನ್ನು ಮಾಡಿಕೊಂಡಿದ್ದಾರೆ. ಅಚ್ಚಗನ್ನಡದ ಕುರಿತು ಜಿಜ್ಞಾಸೆಯನ್ನು ಮಾಡಿರುವ ಮುಳಿಯರು ಈ ಕಾವ್ಯದಲ್ಲಿ ಇನ್ನೊಂದು ಹಂತವನ್ನು ತಲುಪಿದ್ದಾರೆ. ಕಾವ್ಯದ ಮೂಲಕ ಅಚ್ಚಗನ್ನಡದ ಪ್ರತಿಜ್ಞೆಯನ್ನು ನೆರವೇರಿಸಬಹುದು ಎಂಬುದಾಗಿ ಅವರ ಬಯಕೆ ಇದ್ದಂತಿದೆ. ಕಥೆಯು ಜನಪ್ರಿಯವಾಗುವುದರಿಂದ ಸಂವಹನಕ್ಕೆ ತೊಡಕಾಗದು ಎಂದು ಮುಳಿಯರು ಬಾವಿಸಿದಂತಿದೆ. ಮುಳಿಯರ ರಚನೆಗಳು ಆಂಡಯ್ಯನ ಹಾಗೆ ಬಿಗುವಾದ ರಚನೆಗಳಲ್ಲ. ಸಹಜವಾದ ಹೊಸಗನ್ನಡ ರಚನೆಗಳಾಗಿವೆ. ಮುಳಿಯರು ಕನ್ನಡದ ನವೋದಯ ಕಾಲಘಟ್ಟದವರು. ಈ ಹೊತ್ತಿಗೆ ಹಳಗನ್ನಡದ ಬಿಗುವು ಸಂಪೂರ್ಣವಾಗಿ ಮರೆಯಾಗಿತ್ತು. ಹೊಸಗನ್ನಡ ಸರಳವಾಗತೊಡಗಿತ್ತು. ಇದಕ್ಕೆ ಅನುಗುಣವಾಗಿಯೇ ಮುಳಿಯರು ಹೊಸಗನ್ನಡದ ರಚನೆಯಲ್ಲಿಯೇ ಅಚ್ಚಗನ್ನಡ ಕಾವ್ಯ ಬರೆಯುವ ಪ್ರಯತ್ನ ಮಾಡಿದಂತಿದೆ. ಈ ಪರಂಪರೆಯಲ್ಲಿ ಕೊನೆಯ ಕಾವ್ಯ ಕೊಳಂಬೆಯವರ ಕಾಲೂರ ಚೆಲುವೆ. ಆಂಡಯ್ಯನಿಂದ ಆರಂಭವಾದ ಜನಪ್ರಿಯವಾದ ಕಥಾ ಪರಂಪರೆ ಕೊಳಂಬೆಯವರಲ್ಲಿ ಇನ್ನಷ್ಟು ಸರಳವಾಯಿತು. ಕೊಳಂಬೆಯವರ

ಕಾವ್ಯದ ಪಾತ್ರಗಳು ಜನಸಾಮಾನ್ಯರ ಮಧ್ಯದಿಂದ ಒಡಮೂಡಿದವು. ಇಲ್ಲಿ ಯಾವ ಪಾತ್ರಗಳಿಗೂ ಐತಿಹಾಸಿಕ, ಪೌರಾಣಿಕ ಹಿನ್ನೆಲೆಗಳಿಲ್ಲ. ಕಥೆಯೂ ಕೂಡ ಅಂತಹ ಮಹತ್ತಾದ ಘಟನೆಗಳನ್ನು ಹೇಳುವುದಿಲ್ಲ. ಹಳ್ಳಿಯ ಮುಗ್ಧೆಯರು, ರೈತಾಪಿ ವರ್ಗ, ಅರಣ್ಯ ರಕ್ಷಕರು, ಮೊದಲಾದ ಪಾತ್ರಗಳು ಈ ಕಾವ್ಯದಲ್ಲಿ ಬರುತ್ತವೆ. ದೈನಂದಿನ ಬದುಕಿನ ವಿವರಗಳೇ ಕಾವ್ಯದಲ್ಲಿ ಪ್ರಧಾನವಾಗಿವೆ.

ಇದನ್ನೆಲ್ಲ ಗಮನಿಸಿದಾಗ ಅಚ್ಚಗನ್ನಡ ಕವಿಗಳು ಅಚ್ಚಗನ್ನಡ ಕಾವ್ಯ ಪರಂಪರೆ ಮುಂದುವರೆಸುವಾಗಲೆಲ್ಲ ಅತ್ಯಂತ ಎಚ್ಚರ ವಹಿಸಿರುವುದನ್ನು ಕಾಣಬಹುದಾಗಿದೆ. ಮುಖ್ಯವಾಗಿ ಜನಸಾಮಾನ್ಯರು ಇಂತಹ ಪರಂಪರೆಯನ್ನು ಬರಮಾಡಿಕೊಳ್ಳಬೇಕೆಂಬುದು ಅವರ ಪ್ರಮುಖ ಆಶಯವಾದಂತಿದೆ. ಜನ ಸಾಮಾನ್ಯರ ಭಾಷೆಯಲ್ಲಿ (ಪಂಡಿತರನ್ನು ಉಳಿದು) ಕಾವ್ಯ ಬರೆಯಬೇಕಾಗಿ ಬಂದಾಗ ಜನಸಾಮಾನ್ಯರೇ ಅದರ ಪೋಷಕರಾಗಿರಬೇಕು ಎನ್ನುವ ಎಚ್ಚರಿಕೆ ಆರಂಭದಿಂದಲೂ ಈ ಕವಿಗಳಿಗೆ ಇದ್ದಂತಿದೆ. ಅದು ಕಾವ್ಯಕ್ಕಾಗಿ ಕಾವ್ಯ ಬರೆಯುವ ಸಂಪ್ರದಾಯವಲ್ಲ; ಕಾವ್ಯದ ಮೂಲಕ ಕನ್ನಡಿಗರನ್ನು ಎಚ್ಚರಿಸುವ ಪ್ರಯತ್ನವೂ ಇಲ್ಲಿ ಆಗಿದೆಯೆಂದು ತಿಳಿಯಬಹುದಾಗಿದೆ.

❒

ಅಧ್ಯಾಯ - ೭

ಅಚ್ಚಗನ್ನಡ ಕಾವ್ಯಗಳ ತೌಲನಿಕ ಅಧ್ಯಯನ

ಕಬ್ಬಿಗರ ಕಾವ

ಈಗಾಗಲೇ ಜನಪ್ರಿಯವಾಗಿರುವ ಪುರಾಣ ಮೂಲದ ಕಾಮ ದಹನದ ವಸ್ತುವನ್ನು ಆಯ್ದುಕೊಂಡ ಆಂಡಯ್ಯ ಕಬ್ಬಿಗರ ಕಾವ ಕೃತಿ ರಚನೆ ಮಾಡಿದ್ದಾನೆ. ಈ ವಸ್ತುವನ್ನಾಧರಿಸಿ ಕಾಳಿದಾಸನ ಕುಮಾರ ಸಂಭವ, ಹರಿಹರನ ಗಿರಿಜಾಕಲ್ಯಾಣ ಮುಂತಾದ ಕಾವ್ಯಗಳು ರಚನೆಯಾಗಿವೆ. ಆಂಡಯ್ಯನು ವಸ್ತು ನಿರ್ವಹಣೆಯಲ್ಲಿ ಸ್ವಾತಂತ್ರ್ಯವನ್ನು ವಹಿಸಿದ್ದಾನೆ. ಹಾಗಾಗಿ ಜೈನ ಧರ್ಮದ, ಜಿನನ ಸರ್ವೋತ್ತಮತೆಯನ್ನು ಎತ್ತಿ ಹಿಡಿಯುವ ಸಲುವಾಗಿ ಕಾಮದಹನವನ್ನು ಕಾಮವಿಜಯವನ್ನಾಗಿಸಿದ್ದಾನೆ.

ಜೈನ ಸಂಪ್ರದಾಯದಲ್ಲಿ ಶಿವನಿಗೆ ಸ್ಥಾನವಿಲ್ಲ. ಅಲ್ಲದೆ ಅಂದಿನ ಶೈವ-ವೀರಶೈವ ಮತಗಳ ಪ್ರಾಬಲ್ಯವೂ ಈ ಬಗೆಯ ವಸ್ತು ಬದಲಾವಣೆಗೆ ಕಾರಣವಿರಬಹುದು. ಅಲ್ಲದೆ ಜೈನ ಪುರಾಣ ಪರಂಪರೆಯಲ್ಲಿ ಕಾಮನಿಗೆ ವಿಶಿಷ್ಟ ಸ್ಥಾನಮಾನಗಳಿವೆ ಹಾಗಾಗಿ ಶಿವನ ಪ್ರತಾಪ ಜಿನನ ಮುಂದೆ ನಡೆಯದು. ವೈದಿಕ ಸಂಪ್ರದಾಯದ ಪ್ರಕಾರ ಶಿವ ಕಾಮನನ್ನು ದಹಿಸಿಬಿಟ್ಟಿದ್ದರೆ ಅವನು ಮತ್ತೆ ಗಿರಿಜೆಯನ್ನೇಕೆ ಮದುವೆಯಾದ ಎಂಬ ಪ್ರಶ್ನೆಯೂ ಹಾಗಾಗಿ ಮದನ ವಿಜಯದ ಕಲ್ಪನೆ ಜೈನರಲ್ಲಿ ಮೂರ್ತರೂಪ ಪಡೆಯುವಂತಾಯಿತು. ಶಿವನಿಗಿಂತ ಜಿನ ಶ್ರೇಷ್ಠನೆಂಬ ಕಲ್ಪನೆಯನ್ನು ಸ್ಥಿರೀಕರಿಸಲು ಈ ಕಥೆ ಆಂಡಯ್ಯನಿಗೆ ಸಹಾಯಕವಾಗಿದೆ ಎಂದು ದೇ.ಜವರೇಗೌಡರು ಕಾವ್ಯದ ಪೀಠಿಕಾ ಭಾಗದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೧]

ಈ ಮೇಲಿನ ಕಾರಣದಿಂದಾಗಿಯೇ ಆಂಡಯ್ಯ ಸ್ವಶಕ್ತಿ ಸಾಮರ್ಥ್ಯಗಳಿಂದ ಅದಕ್ಕೆ ಕಲ್ಪನೆಯ ಹೂರಣವನ್ನು ತುಂಬಿ ತನ್ನ ಖಂಡಕಾವ್ಯವನ್ನು ರಚಿಸಿದ್ದಾನೆ. ಅವನ ದೃಷ್ಟಿಯಲ್ಲಿ ಕಾಮನೇ ಜಿನ, ಜಿನನೇ ಕಾಮ. ಇಬ್ಬರೂ ಅವಿಭೇದ ಶಕ್ತಿಗಳು ಆದ್ದರಿಂದ ಅವನ ಕೃತಿಗೆ ಕಾಮನೇ ಕಥಾನಾಯಕನೆಂದು ಬೇಂದ್ರೆಯವರು ಅಭಿಪ್ರಾಯಪಟ್ಟಿದ್ದಾರೆ.[೨]

ಕಾವ್ಯದ ಆರಂಭದಲ್ಲಿ ಕಾಮದೇವ, ಸರಸತಿ, ಸಿರಿಯರಸ, ಮಾದೇವರ ವರ್ಣನೆಯ ಸ್ತುತಿ ಪದ್ಯಗಳಿವೆ. ನಂತರದ ಪದ್ಯಗಳಲ್ಲಿ ತನಗೆ ಆದರ್ಶಪ್ರಾಯವಾಗಿದ್ದ ಕಣ್ಣಮಯ್ಯ, ರನ್ನ, ಗಜಗ, ಅಗ್ಗಳ, ಜನ್ನರನ್ನು ನೆನೆಯುತ್ತಾನೆ. ಮತ್ತು ತನ್ನ ಕಾವ್ಯದ ಉನ್ನತ ಅಂಶಗಳ ಬಗ್ಗೆ ಹೇಳಿಕೊಂಡಿದ್ದಾನೆ. ಮುಂದೆ ಅಚ್ಚಗನ್ನದಲ್ಲಿ ಕಾವ್ಯರಚನೆ ಮಾಡುವುದರ ಕಾವ್ಯೋದ್ದೇಶವನ್ನು ಹೇಳಿಕೊಂಡಿದ್ದಾನೆ. ಕನ್ನಡ ನಾಡನ್ನು, ಪೂವಿನ ಪೊಳಲನ್ನು, ಅಲ್ಲಿನ ಸಿರಿವಂತಿಕೆಯ ಸೊಬಗು ಆ ಪೂವಿನ ಪೊಳಲಿನ ರಾಜನಾದ ನೆನೆಯಂಬನ ವರ್ಣನೆಯ ಪದ್ಯಗಳು ಕಥಾರಂಭದಲ್ಲಿ ಮೊದಲಿಗೆ ಕಾಣಬರುತ್ತವೆ.

ಕಥಾಸಾರ:

ಸಕಲ ಸಂಪತ್ತು ವೈಭೋಗದಿಂದಿದ್ದ ನೆನೆಯೆಂಬ ರಾಜನಿಗೆ ವಸಂತ ಮಾಸದಲ್ಲೊಂದು ದಿನ ಸುಂದರ ಕನಸೊಂದು ಬೀಳುತ್ತದೆ. ಅದನ್ನು ಗೆಳೆಯನಾದ ನಗೆಗಾರನಿಗೆ ಹೇಳುತ್ತಾನೆ. ಅಲ್ಲದೆ ಕನಸಿನಲ್ಲಿ ಸುಂದರ ಸ್ತ್ರೀಯನ್ನು ಕಂಡದ್ದಾನ್ನು ವಿವರಿಸುತ್ತಾನೆ. ಕೂಡಲೇ ನಗೆಗಾರನು ಸುಂದರ ಸ್ತ್ರೀಯೊಬ್ಬಳು ತಮಗೆ ವಶವಾಗಲಿದ್ದಾಳೆಂದು ಕನಸನ್ನು ಅರ್ಥೈಸುತ್ತಾನೆ. ನಗೆಗಾರನು ನೆನೆಯೆಂಬನನ್ನು ಕರುಮಾಡದಲ್ಲಿದ್ದ ಉಪವನಕ್ಕೆ ಕರೆದುಕೊಂಡು ಹೋಗುತ್ತಾನೆ. ಉಪವನದ ಸೌಂದರ್ಯವನ್ನು ಆಸ್ವಾದಿಸುತ್ತಿರುವಾಗಲೇ ನನೆಯೆಂಬನಿಗೆ ಸುಂದರ ಸ್ತ್ರೀಯೊಬ್ಬಳು ಕಣ್ಣಿಗೆ ಬೀಳುತ್ತಾಳೆ. ಅವಳ ಬಳಿ ಹೋಗಿ ವಿಚಾರಿಸಿದಾಗ ಅವಳು ಅಚ್ಚರಸಿ ಎಂಬುದು ತಿಳಿಯುತ್ತವೆ. ಈ ಉದ್ಯಾನವನ್ನು ನಾನು ಹಿಂದೆ ಯಾವಾಗಲೋ ನೋಡಿವಂತೆ ನನಗೆ ಭಾಸವಾಗುತ್ತಿದೆ ಎಂದು ಹೇಳಿದಾಗ, ಅಚ್ಚರಸಿ ಅವನ ಪೂರ್ವ ವೃತ್ತಾಂತವನ್ನು ಹೇಳುತ್ತಾಳೆ.

ಕಂಪಿನ ಪೊಳಲೆಂಬ ನಾಡಿನಲ್ಲಿ ಕರ್ವುವಿಲ್ಲ, ಇಚ್ಛೆಗಾರ್ತಿಯರು ಸುಖದ ಕಾಲ ಕಳೆಯುತ್ತಿರುವಾಗಲೇ ಜೊನ್ನವಕ್ಕಿಯು ಆಗಮಿಸಿ ನಿನ್ನೆಯ ಕಾಳಗದಲ್ಲಿ ಶಿವನು ಚಂದಿರನನ್ನು ಬಂಧಿಯನ್ನಾಗಿಸಿದ ಸಂಗತಿಯನ್ನು ವಿವರಿಸುತ್ತಾನೆ. ಇದುವರೆಗೆ 'ನಿನಗೆಂದುಂ ತಲೆವಾಗದ, ನನಗಳ್ಕದ, ನಿನ್ನ ವೇಳೆಗಾಯದ, ನಿನಗೆ ಬೆಸಕೆಯ್ಯುದ ಬಾಟದ ನಿನಗೋಡದ ಪಗೆವರೆಂಬರಿಲ್ಲ' ಆದರೆ ಈಗ ಶಿವನೆಂಬ ಗೊರವನು ನಿನಗೆ ಎದುರಾಗಿ ಚಂದಿರನನ್ನು ಬಂಧಿಸಿದ್ದಾನೆ ಅವನಿಗೆ ಸರಿಯಾದ ಶಿಕ್ಷೆ ನೀಡುವುದು ನಿಮಗೆ ಬಿಟ್ಟದ್ದು ಎಂದು ಭಿನ್ನವಿಸಿಕೊಳ್ಳುತ್ತಾನೆ.

ವಿಷಯ ತಿಳಿದು ಕೋಪಗೊಂಡ ಕರ್ವುವಿಲ್ಲ

ಕಡಲೊಳ್ ನೇಸಱನಿರ್ದ್ದಿಲುಂ ಪೊಡವಿಯಂ ನುರ್ಗೊತ್ತಲುಂ ಕೊಂಕಿ ಘೀ
ಳಿಡೆ ತಳ್ಕಿಂ ದೆಸೆಯಾನೆಯಂ ಮುಱಿಯಲುಂ ಪೊಂಬೆಟ್ಟಮಂ ನೂಂಕಲುಂ
ಪೆಡೆಯಂ ತೊಟ್ಟನೆ ಮೆಟ್ಟಿ ಬಾಸುಗಿಯನಾದಂ ಸೀೞಲುಂ ಪೊತ್ತು ಬಾ
ನೆಡೆಯಂ ಬೇಗದಿನೆತ್ತಲುಂ ಬಗೆದನಾಗಳ್‌ದಪ್ಪದಿಂ ದಪ್ಪಗಂ [೩]

ಎಂದು ಕೋಪದ ನುಡಿಗಳನ್ನಾಡುವನು. ನಂತರ ವಸಂತನ ಸಲಹೆಯ ಮೇರೆಗೆ ತಂಗಾಳಿಯನ್ನು ದೂತನನ್ನಾಗಿ ಶಿವನಲ್ಲಿ ಸಂಧಾನಕ್ಕಾಗಿ ಕಳಿಸುವನು. ತಂಗಾಳಿಯ ಯಾವ ಚತುರ ನುಡಿಗೂ ಕಿವಿಗೊಡದ ಶಿವನು 'ಅಱಿಕೆಯ

ರೂವಿಲ್ಲದ ನಿನ್ನೆಡೆಯಂಗುಬ್ಬಟೆಯ ಬೀರಮುಂಟೆಂದುಂದ್ವಂ ಜಱುಚಿದೆ' ಎಂದು ಕಾಮನನ್ನು ಹೀಗಳಿಯುತ್ತಾನೆ. ತಂಗಾಳಿಯಿಂದ ವಿಷಯ ತಿಳಿದ ಕರ್ವುವಿಲ್ಲ ಕೋಪಗೊಂಡು ತನ್ನ ಬಾಣಗಳಿಂದಲೇ ಶಿವನನ್ನು ಅರೆವೆಣ್ಣುಮಾಡಿ ಅವನ ಅಹಂಕಾರವನ್ನು ಮಟ್ಟಹಾಕುವುದಾಗಿ ಶಪಥಮಾಡಿ ಯುದ್ಧಸನ್ನದ್ಧನಾಗುತ್ತಾನೆ.

ಹೊಸದಳಿರೆ ಹಳವಿಗೆಯಾಗಿ, ಗಿಳಿಗಳೆ ಹೂಡಿದ ಕುದುರೆಗಳಾಗಿ, ತಂಗಾಳಿಯೆ ಸೂತನಾಗಿರಲು, ಎಳಮಾವಿನ ತೇರನ್ನೇರಿ ಕಾಮ ಪ್ರಯಾಣ ಮುಂದುವರೆಸುತ್ತಾನೆ. ದಾರಿಯಲ್ಲಿ ಎದುರಾದ ಸವಣನನ್ನು ಕಂಡು ಸಿಡಿಮಿಡಿಗೊಂಡ ಕರ್ವುವಿಲ್ಲ ಅವನನ್ನು ನಾಶಗೊಳಿಸುವುದಾಗಿ ಕೈಗೆ ಬಿಲ್ಲನ್ನು ತೆಗೆದುಕೊಳ್ಳುತ್ತಾನೆ. ಕೂಡಲೇ ಅಡ್ಡಬಂದ ಬಸಂತ ಅರಿಷಡ್ವರ್ಗಗಳನ್ನು ಗೆದ್ದ ಸವಣನ ಮೇಲೆ ಯುದ್ಧ ಮಾಡುವುದು ಸರಿಯಲ್ಲವೆಂದು ಎಚ್ಚರಿಸಿದ ಮೇಲೆ ಕರ್ವುವಿಲ್ಲನಿಗೆ ತನ್ನ ತಪ್ಪಿನ ಅರಿವಾಗುವುದು.

ಕಾಮ ಯುದ್ಧಕ್ಕೆ ಬಂದ ಸುದ್ದಿಯನ್ನು ತಿಳಿದ ಶಿವ ವೀರಭದ್ರನ ನಾಯಕತ್ವದಲ್ಲಿ ತನ್ನ ಸೈನ್ಯವನ್ನು ಕಳಿಸುವನು. ಶಿವ ಕಾಮರ ಬಲಗಳ ನಡುವೆ ಯುದ್ಧ ಆರಂಭವಾಗುವುದು. ಈ ಘನಘೋರ ಯುದ್ಧದಲ್ಲಿ ವೀರಭದ್ರ ಸೋಲುತ್ತಾನೆ. ಕಾಮ ಮುಂದುವರೆದು ಶಿವನ ವಾಸಸ್ಥಾನ ಮಂಜುವೆಟ್ಟವನ್ನು ಮುತ್ತುತ್ತಾನೆ.

ವೀರಭದ್ರನ ಸಾವಿನಿಂದ ಶಿವನೇ ಯುದ್ಧರಂಗ ಪ್ರವೇಶಿಸುವಂತಾಯಿತು. ಕರ್ವುವಿಲ್ಲ. ಮುಕ್ಕಣ್ಣರ ಯುದ್ಧ ನೋಡಲು ದೇವಗಣವೆಲ್ಲ ಆಕಾಶದಲ್ಲಿ ನೆರೆಯುತ್ತದೆ. ಹೀಗೆ ಯುದ್ಧ ನಡೆದಿರುವಾಗಲೇ ಶಿವನ ಮೇಲೆ ಕಾಮ ಬಾಣ ಪ್ರಯೋಗಿಸುತ್ತಾನೆ. ಕಾಮಬಾಣ ತಗುಲಿದ್ದರಿಂದಾಗಿ ಶಿವ ಅರೆವೆಣ್ಣಾಗುತ್ತಾನೆ.ಇದರಿಂದ ಕಾಮನ ಮುಂದಿನ ದುಸ್ಥಿತಿಯನ್ನು ನೆನೆದು ಸಗ್ಗದವರು ಭಯಭೀತರಾಗುತ್ತಾರೆ. ಜಯಶೀಲನಾದ ಕಾಮನ ಮೇಲೆ ಅಪ್ಸರೆಯರು ಹೂಮಳೆ ಗರೆದರೆ, ಕ್ರೋಧಿತನಾದ ಶಿವ ಶಾಪಾಕ್ಷರದ ಮಂತ್ರ ಸುರಿಸುತ್ತಾನೆ. ಹಿರಿಯರೆನ್ನುವ ಮರ್ಯಾದೆಯಿಲ್ಲದೆ ನನ್ನ ಮೇಲೆ ಧಾಳಿ ಮಾಡಿದ್ದರಿಂದ ನಿನ್ನ ಪ್ರಿಯೆಯನ್ನಗಲಿ ಯಾರಿಗೂ ಕಾಣದಂತೆ ನೆಲೆಸಿರು ಎಂದು ಶಾಪ ನೀಡುತ್ತಾನೆ.

ಹೀಗೆ ನಂತರದಲ್ಲಿ ಶಿವನು ಅರೆವೆಣ್ಣಾಗುವುದು, ಮನ್ಮಥನು ಶಿವನ ಶಾಪದಿಂದಾಗಿ ಯಾರ ಕಣ್ಣಿಗೂ ಕಾಣದಂತೆ ಇರುವುದು. ರತಿಯ ರೋದನ ಮತ್ತೆ ರತಿ ಮನ್ಮಥರ ಸಮಾಗಮವಾಗುವುದು ಕಾವ್ಯದ ಒಟ್ಟಾರೆ ಸಾರಾಂಶವಾಗಿದೆ. ಈ ಬದಲಾವಣೆ ಆಂಡಯ್ಯನ ಕಾವ್ಯದ ವೈಶಿಷ್ಟ್ಯವಾಗಿದೆ. ಈ ಕಾವ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಹಳಗನ್ನಡದ ಇತರ ಕಾವ್ಯಗಳಲ್ಲಿ ಕದನವೆಂದರೆ ಸೈನ್ಯ, ಚದುರಂಗ ಬಲ, ಮೊದಲಾದವುಗಳು. ಆದರೆ ಇಲ್ಲಿ ಕೋಗಿಲೆ, ದುಂಬಿ, ಗಿಳಿ, ಚಕ್ರವಾಕ, ಮೊದಲಾದುವುಗಳೇ ಸೈನ್ಯ. ಯುದ್ಧದ ವಿವರಗಳನ್ನು ತಿಳಿಸುವ ದೂತನೇ ಜೊನ್ನವಕ್ಕಿ, ತಂಗಾಳಿ, ರಾಯಭಾರಿ, ನೆನೆಯಂಬನೇ ರಾಜ (ಮನ್ಮಥ), ಇಚ್ಛೆಗಾರ್ತಿಯೇ ನೆನೆಯಂಬನ ಪತ್ನಿ ರತಿದೇವಿ. ನಗೆಗಾರನೇ ಗೆಳೆಯ, ಕಂಪಿನ ಪೊಳಲೇ ಮನ್ಮಥನ ರಾಜಧಾನಿ. ಕಬ್ಬು ನೆನೆಯಂಬನ ಕರ್ವುವಿಲ್ಲಾಗಿದೆ. ಹೀಗೆ ಹಳಗನ್ನಡ ಕಾವ್ಯ ಪರಂಪರೆಯಲ್ಲಿ ಕವಿ ಸಮಯವಾಗಿರುವುದೆಲ್ಲವೂ ಇಲ್ಲಿ ಕತೆಯ ಭಾಗವಾಗಿದೆ ಮತ್ತು ಕಾವ್ಯದ ಪಾತ್ರಗಳಾಗಿ ಕಂಡುಬರುತ್ತವೆ. ಇದು ಆಂಡಯ್ಯನ ಕಾವ್ಯದ ಮತ್ತೊಂದು ವೈಶಿಷ್ಟ್ಯವಾಗಿದೆ.

ಮನ್ಮಥನ ಪರಿವಾರಕ್ಕೆ ಸೇರಿದ ಚಂದಿರನನ್ನು ಶಿವನು ಬಂಧಿಸಿದ್ದರಿಂದಾಗಿ ಶಿವ ಮನ್ಮಥರ ನಡುವೆ ಯುದ್ಧವೇರ್ಪಡುತ್ತದೆ. ಕಾಮನು ಸೊಕ್ಕಿನಿಂದ ತಪಸ್ಸಿಗೆ ಕುಳಿತ ಶಿವನ ಮೇಲೆ ಧಾಳಿ ಮಾಡುವುದರಿಂದ ಶಿವನು

ಅರೆವೆಣ್ಣಾಗುವನು. ಮನ್ಮಥನ ಉದ್ಧಟತನಕ್ಕೆ ಕ್ರೋಧಗೊಂಡ ಶಿವನು ಮನ್ಮಥನಿಗೆ ಯಾರ ಕಣ್ಣಿಗೂ ಕಾಣದಿರುವಂತೆ ಶಾಪ ನೀಡುವನು. ಆದರೆ ರತಿಯ ಪ್ರಲಾಪದಿಂದಾಗಿ ಮತ್ತೆ ರತಿ ಕಾಮರ ಮಿಲನವಾಗುವುದು ಕಾವ್ಯದ ಒಟ್ಟಾರೆ ಕಥೆಯಾಗಿದೆ.

ಸೊಬಗಿನ ಬಳ್ಳಿ :

ಮುಳಿಯರ ಸೊಬಗಿನ ಬಳ್ಳಿ ಆಂಡಯ್ಯನ ಕಾವ್ಯದ ಮುಂದುವರೆದ ಭಾಗವಾಗಿದೆ. ಆಂಡಯ್ಯನ ಕಬ್ಬಿಗರ ಕಾವದಲ್ಲಿ ಶಿವನ ಶಾಪದಿಂದಾಗಿ ಬೇರೆ ಬೇರೆಯಾಗಿದ್ದ ರತಿ ಕಾಮರ ಮಿಲನವಾಗುವಲ್ಲಿಗೆ ಮುಂದುವರೆದ ಭಾಗ ಸೊಬಗಿನ ಬಳ್ಳಿಯಲ್ಲಿ ಆರಂಭವಾಗುತ್ತದೆ. ಲೋಕ ಕಂಟಕನಾದ ಶಂಬರಾಸುರನ ವಧೆಗಾಗಿ ಕಾಮು ಜನಿಸಬೇಕಾಗುತ್ತದೆ. ಕೃಷ್ಣ ರುಕ್ಮಿಣಿಯರ ಮಗನಾಗಿ ಕಾಮ ಜನಿಸುತ್ತಾನೆ. ಮುಂದೆ ಅವನು ಶಂಬರನ ಸಂಹಾರ ಮಾಡುವನು. ಭಾಗವತದೊಳಗಿನ ಶಂಬರಾಸುರ ವಧೆಯನ್ನು ಇಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಕಾವ್ಯದ ವಸ್ತುವಾಗಿಸಿದ್ದಾರೆ. ಸಂತಾನ ಭಾಗ್ಯವಿಲ್ಲದೆ ದುಃಖಿಸುತ್ತಿದ್ದ ರುಕ್ಮಿಣಿಯನ್ನು ಸಂತೈಸಿದ ಕೃಷ್ಣನು ಶಂಬರನ್ನು ಕೊಲ್ಲುವ ಮಗನನ್ನು ತನ್ನಲ್ಲಿ ಪಡೆಯುವುದಾಗಿ ಹೇಳಿ ಸಮಾಧಾನಗೊಳಿಸುತ್ತಾನೆ. ಇತ್ತ ಮಣಿಪುರದ ಅರಸ ಶಂಬರನು ಸ್ವೇಚ್ಛೆಯಾಗಿ ಸೊಕ್ಕಿನಿಂದ ಅಧಿಕಾರ ನಡೆಸುತ್ತಿದ್ದು, ಲೋಕದ ಎಲ್ಲ ಆಗು ಹೋಗುಗಳು ಅವನ ಆಜ್ಞೆಯಂತೆಯೇ ನಡೆಯುವಂತೆ ನೋಡಿಕೊಳ್ಳುತ್ತಿದ್ದ ಶಂಬರನು ಒಂದು ದಿನ ಬೇಟೆಗೆ ಹೋದಾಗ ವಿಹಾರಕ್ಕೆಂದು ಹೊರಟಾಗ ಪೊದೆಯಿಂದ ಹೊರಬಂದ ಹೆಂಗಸನ್ನು ಕಾಣುವನು. ಆಕೆಯನ್ನು ತಡೆದು ವಿಚಾರಿಸಿದ ಶಂಬರನಿಗೆ ಆಕೆಯು ನನ್ನ ತಂದೆ ತಾಯಿಯರು ನಾನು ಚಿಕ್ಕವಳಿದ್ದಾಗಲೇ ಸ್ವರ್ಗವಾಸಿಗಳಾದರು. ನನ್ನ ಕೈಹಿಡಿದ ಗಂಡನು ಇಲ್ಲೇ ಬೂದಿಯಾದನು ಅಂದಿನಿಂದಲೇ ನಾನು ಈ ಪೊದೆಯಲ್ಲಿ ವಾಸಿಸುತ್ತಿದ್ದು. ತಮ್ಮ ಆಗಮನದ ಕಾರಣದಿಂದಾಗಿ ಹೊರಬರುವಂತಾಯಿತೆಂದು ಹೇಳಿ ಅನಾಥಳಾದ ನನಗೆ ಆಶ್ರಯ ನೀಡಬೇಕೆಂದು ಕೇಳಿಕೊಳ್ಳುತ್ತಾಳೆ. ಆಕೆಯನ್ನು ತಂದು ಅಡಿಗೆಯವಳನ್ನಾಗಿ ನೇಮಿಸುವನು. ಇತ್ತ ನಾರದನಿಂದ ತನ್ನ ವಧೆಗಾಗಿ ಜನಿಸಿದ ಮಗುವಿನ ವಿಷಯ ಅರಿತ ಶಂಬರನು ಅದನ್ನು ಎತ್ತಿಕೊಂಡು ಬಂದು ಕಡಲಿಗೆ ಎಸೆಯುತ್ತಾನೆ. ಆಗ ಕಡಲು ಮಗುವನ್ನು ರಕ್ಷಿಸಿ ಮೀನುಗಾರನಿಗೆ ನೀಡುತ್ತದೆ. ಮೀನುಗಾರ ಆ ಮಗುವನ್ನು ತಂದು ಶಂಬರನಿಗೆ ಒಪ್ಪಿಸುವನು. ಅರಸ ಶಂಬರನು ಆ ಮಗುವನ್ನು ಅಡಿಗೆಯವಳ ಕೈಗೆ ನೀಡುವನು. ಅಡಿಗೆಯವಳ ಆರೈಕೆಯಲ್ಲಿ ಬೆಳೆವ ಮಗುವೇ ಶಂಬರನ ವಧೆಗಾಗಿ ಜನಿಸಿದ ಮನ್ಮಥ, ಇಚ್ಛೆಗಾರ.

ಹೂದೋಟದಲ್ಲೊಂದು ದಿನ ತನ್ನ ದುಸ್ಥಿತಿಯನ್ನು ನೆನೆದು ದುಃಖಿಸುತ್ತಿದ್ದ ಅಡಿಗೆಯವಳ ಬಳಿ ಬಂದ ನಾರದನು. ಆಕೆಯ ಹಿಂದಿನ ಜನ್ಮದ ಬಗ್ಗೆ ಎಚ್ಚರಿಸುವನು. ನಾರದನ ಸಹಾಯದಿಂದ ಪೂರ್ವಸ್ಮರಣೆಗೊಳಗಾದ ಅಡಿಗೆಯವಳಿಗೆ ತಾನು ಕಾಮನ ಹೆಂಡತಿ ರತಿದೇವಿಯೆಂಬುದು ತಿಳಿದುಬರುತ್ತದೆ. ತನ್ನ ಕೈಯಲ್ಲಿ ಬೆಳೆಯುತ್ತಿರುವ ಮಗುವೇ ಶಂಬರನ ವಧೆಯಾಗಿ ಜನಿಸಿದ ಮನ್ಮಥನಾಗಿದ್ದು, ಶೀಘ್ರದಲ್ಲಿ ಶಂಬರನ ವಧೆಯಾಗಿ ತಮ್ಮಿಬ್ಬರ ಸಮ್ಮಿಲನವಾಗುವುದೆಂಬ ವಿಷಯವನ್ನು ನಾರದನಿಂದ ತಿಳಿದು ಹರ್ಷಿತಳಾಗುತ್ತಾಳೆ. ಅದೇ ಸಮಯಕ್ಕೆ ಹೂದೋಟಕ್ಕೆ ಆಗಮಿಸಿದ ಮನ್ಮಥನೂ ನಾರದ ಮತ್ತು ಅಡಿಗೆಯವಳಿಂದ (ರತಿ) ತನ್ನ ಜನನದ ಉದ್ದೇಶವನ್ನು ಅರಿಯುವನು.

ಇತ್ತ ಹೂದೋಟದಲ್ಲಿ ಇವರೆಲ್ಲರ ಸಂಗಮವನ್ನು ಕಂಡು ಅನುಮಾನಗೊಂಡ ಶಂಬರನೂ ಅಲ್ಲಿಗೆ ಆಗಮಿಸುವನು. ಅಲ್ಲಿ ರತಿಯ ರೂಪವನ್ನು ಕಂಡು ಮರಳಾಗಿ ಆಕೆಯನ್ನು ಮೋಹಿಸುವನು. ಮತ್ತೆ ಆಕೆಯ ಸೆರಗಿಗೆ ಕೈ ಹಾಕುವನು. ಈ ಕಾರಣದಿಂದಾಗಿಯೇ ಶಂಬರಾಸುರ ಮತ್ತು ಮನ್ಮಥರ ನಡುವೆ ಯುದ್ಧವೇರ್ಪಡುವುದು. ಕೊನೆಯಲ್ಲಿ ಶಂಬರನ ವಧೆಯಾಗುವುದು. ಶಂಬರನ ವಧೆಯಿಂದಾಗಿ ಅವನ ಮಗನಿಗೆ ರಾಜ್ಯಾಧಿಕಾರ ವಹಿಸಿ ರತಿ ಮನ್ಮಥರು ದ್ವಾರಕೆಗೆ ಮರಳುವದು ಸೊಬಗಿನ ಬಳ್ಳಿಯ ಕಥಾಸಾರಾಂಶವಾಗಿದೆ.

ಕಾಲೂರ ಚೆಲುವೆ

ಆರಂಭದ ಕವಿಗಳಿಬ್ಬರು ಪುರಾಣ ಮೂಲದ ಕಥೆಯಲ್ಲಿ ತಮ್ಮ ಅಚ್ಚಗನ್ನಡ ಕಾವ್ಯಗಳನ್ನು ರಚಿಸಿದರೆ. ಕೊಳಂಬೆಯವರು ಅವರಿಗಿಂತ ಭಿನ್ನವಾಗಿ ದೇಶೀಯ ವಸ್ತುವಿನಲ್ಲಿಯೇ ಅಚ್ಚಗನ್ನಡ ಪ್ರಯೋಗ ನಡೆಸಿದ್ದಾರೆ. ಇದರಲ್ಲಿ ಹಳ್ಳಿಗಾಡಿನ ಜನಸಾಮಾನ್ಯರ ಬದುಕಿನ ಚಿತ್ರಣವಿದೆ. ದುರಂತ ಸಾವಿನ ಮೂಲಕ ಸುಖಾಂತವಾಗುವುದು. ಕಾಲೂರು ಚೆಲುವೆ ಕಾವ್ಯದ ಕಥಾಹಂದರವಾಗಿವೆ.

ಕೊಳಂಬೆಯವರು ದೇಶೀಯ ವಸ್ತುವಿನ ನಿರೂಪಣೆಯನ್ನು ಅಚ್ಚಗನ್ನಡದಲ್ಲಿ ಪ್ರಯೋಗ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಜೊತೆಗೆ ಸಮಕಾಲೀನ ಬದುಕಿನಲ್ಲಿ ಹಳ್ಳಿಯ ಜನರು ಎದುರಿಸುತ್ತಿದ್ದ ಸಮಸ್ಯೆಗಳತ್ತ ಹೆಚ್ಚು ಗಮನ ಹರಿಸಿದ್ದಾರೆ. ಕಾಡು ಪ್ರಾಣಿಗಳ ಹಾವಳಿ, ಅದಕ್ಕೆ ಬಲಿಯಾಗುತ್ತಿದ್ದ ಸಾಕು ಪ್ರಾಣಿಗಳು, ಮನುಷ್ಯರ ಪ್ರಾಣಹಾನಿಯನ್ನು ಜೊತೆಗೆ ಜನಸಾಮಾನ್ಯರ ಮೇಲೆ ಸರಕಾರದ ಕಾಡಿನ ರಕ್ಷಕರು, ಅಧಿಕಾರಿಗಳು, ಪೋಲೀಸರು ನಡೆಸುತ್ತಿದ್ದ ದೌರ್ಜನ್ಯ, ಬೆಳ್ಳಿಯ ದುರಂತ ಸಾವು ಮೊದಲಾದ ವಿವರಗಳಿವೆ.

ಕಾಲೂರಿನ ಕೊರಗ ಮತ್ತು ಮಸೆಯರ ಮಕ್ಕಳೇ ಕಾಳು ಬೆಳ್ಳಿಯರು. ನೆರೆಮನೆಯ ಮದುವೆಗೆಂದು ಕೊರಗ ಮಗಳು ಬೆಳ್ಳಿಯೊಂದಿಗೆ ಮದುವೆಗೆ ಬಂದಿದ್ದಾಗ ಅನೇಕ ಯುವಕರು ಬೆಳ್ಳಿಯ ಸೌಂದರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅದರಲ್ಲಿ ದೊಡ್ಡನೆಂಬುವನು ಒಬ್ಬನು. ನೆಲ್ಲೂರಿನ ಹೊನ್ನ ಹೊನ್ನಿಯರ ಮಗನೇ ಈ ದೊಡ್ಡ. ದೊಡ್ಡ. ಬೆಳ್ಳಿಯರು ಪರಸ್ಪರ ಆಕರ್ಷಿತರಾಗಿರುವುದನ್ನು ಅರಿತ ಹಿರಿಯರು ಮಳೆಗಾಲ ಕಳೆದ ನಂತರ ಅವರ ಮದುವೆ ಮಾಡಲು ನಿಶ್ಚಯಿಸುತ್ತಾರೆ.

ಚಳಿಗಾಲದಲ್ಲೊಂದು ದಿನ ಹೆಬ್ಬುಲಿಯೊಂದು ನೆಲ್ಲೂರನ್ನು ಕಾಡತೊಡಗಿತು. ದನ, ಕರುಗಳು, ಎತ್ತು ಮನುಷ್ಯರಿಗೆ ಉಳಿಗಾಲವಿಲ್ಲದಂತಾಯಿತು. ಹೆಬ್ಬುಲಿಯ ಅರಿವಿರದ ಜನ ಸಾಮಾನ್ಯರು ಇದು ಮಲೆದೈವದ ಕಾಟವಿರಬೇಕೆಂದು ಅದಕ್ಕೆ ಹೂ ಹಣ್ಣು ಕಾಯಿಗಳನ್ನು ಸಂಗ್ರಹಿಸಿ ಹರಕೆ ಕೊಡಲು ಸಿದ್ಧರಾದರು. ಆಗಲೇ ಹುಲಿ ಮತ್ತೊಂದು ದನವನ್ನು ಕೊಂಡೊಯ್ದಿತು. ಕೆಲದಿನದ ನಂತರ ದೊಡ್ಡನು ಮೇಯಲು ಬಿಟ್ಟಿದ್ದ ದನವನ್ನೇ ಹುಲಿಯು ಹೊತ್ತೊಯ್ದಿರುವುದನ್ನು ಅರಿತ ದೊಡ್ಡನು ಕಾಡಿನಲ್ಲಿ ಹುಡುಕಾಡತೊಡಗಿದನು. ದೊಡ್ಡನು ಆಗಮನದಿಂದ ಭೀತಿಗೊಂಡ ಹುಲಿ ಹೋಡಿಹೋಯಿತು. ಆದರೆ ದನಮಾತ್ರ ಸತ್ತು ಬಿದ್ದಿತ್ತು. ಅಂದೇ ರಾತ್ರಿ ದೊಡ್ಡನು ಕೋವಿಯನ್ನು ಸಿದ್ಧಪಡಿಸಿಕೊಂಡು ಗೆಳೆಯರೊಂದಿಗೆ ಹುಲಿಯ ಭೇಟೆಗಾಗಿ ಕಾದು ಕುಳಿತನು. ಬೆಳದಿಂಗಳ ಕಾರಣದಿಂದಾಗಿ

ಹುಲಿಯು ಸತ್ತ ಆಕಳತ್ತ ಬರುವುದು ಸ್ಪಷ್ಟವಾಗಿ ಕಂಡುಬಂದಿತು. ದೊಡ್ಡನು ಹುಲಿಗೆ ಗುರಿಯುಟ್ಟು ಹೊಡೆಯಲಾಗಿ ಹುಲಿಯು ಸತ್ತು ಬಿದ್ದಿತು.

ಮರುದಿನ ಸತ್ತ ಹುಲಿಯ ಮೆರವಣಿಗೆಯಾಯಿತು. ಆಗಲೇ ಇನ್ನೊಂದು ಹುಲಿ ಇರುವುದು ತಿಳಿದುಬಂದಿತು. ಊರಿನ ಯುವಕರೆಲ್ಲ ಸೇರಿ ದೊಡ್ಡನ ನಾಯಕತ್ವದಲ್ಲಿ ಹುಲಿಯ ಭೇಟಿಗಾಗಿ ಬರುತ್ತಿದ್ದಾಗೇ ಎದುರಿಗೇ ಹುಲಿಯು ಪ್ರತ್ಯಕ್ಷವಾಯಿತು. ಹುಲಿ ಕಂಡ ಗೆಳೆಯರು ಮರವೇರತೊಡಗಿದರು. ದೊಡ್ಡ ಬಂದೂಕಿನಿಂದ ಗುಂಡು ಹಾರಿಸಿದನಾದರೂ ಅದು ಹುಲಿಗೆ ತಗಲಿದೆ ಹೋಯಿತು. ತನ್ನ ಸೊಂಟದಲ್ಲಿದ್ದ ಕತ್ತಿಯಿಂದಲೇ ಹುಲಿಗೆ ತಿವಿದನು. ಹುಲಿಯು ಬಲವಾಗಿಯೇ ದೊಡ್ಡನನ್ನು ಗಾಯಗೊಳಿಸಿತು. ದೊಡ್ಡ ಬಲವಾಗಿ ತಿವಿದಿದ್ದರಿಂದ ಹುಲಿ ಸತ್ತುಬಿದ್ದಿತು. ಗೆಳೆಯರು ಹುಲಿಯನ್ನೂ, ದೊಡ್ಡನನ್ನೂ ಹೊತ್ತುಕೊಂಡು ಬಂದರು. ಊರೆಲ್ಲೆಲ್ಲ ಮೆರವಣಿಗೆಯಾಯಿತು. ತಿಂಗಳ ಆರೈಕೆಯ ನಂತರ ದೊಡ್ಡ ಮೊದಲಿನಂತಾದನು.

ಸುಗ್ಗಿಯ ಆಗಮನದಿಂದಾಗಿ ಬೆಳ್ಳಿ ದೊಡ್ಡರ ಮದುವೆಯ ಸಿದ್ಧತೆಗಳು ಭರದಿಂದ ನಡೆಯತೊಡಗಿದವು. ಅದೇ ಸಮಯದಲ್ಲಿ ಬೆಳ್ಳಿ ಗೆಳತಿಯರ ಒತ್ತಾಯದ ಮೇರೆಗೆ ಕಟ್ಟಿಗೆ ತರಲು ಕಾಡಿಗೆ ಹೋದಳು. ಅಲ್ಲಿ ಕಾಡಿನ ಕಾವಲುಗಾರ ಬೋಳ ಅವಳನ್ನು ತಡೆದು ಕಾಡನ್ನು ದೋಚಬೇಕೆಂದಿರುವಿರೇನು ಎಂದು ಗದರುವನು. ಅವಳ ಕೈಯಲ್ಲಿದ್ದ ಕತ್ತಿಯನ್ನು ಎಳೆದುತೊಡಗಿದಾಗ ಬೆಳ್ಳಿಯು ಅಷ್ಟೇ ವೇಗವಾಗಿ ಅವನ ಕೈಯಿಂದ ಕತ್ತಿ ಎಳೆದುಕೊಂಡಳು. ಬೋಳನ ಕೈ ಕತ್ತಿಯ ಮೊನೆಗೆ ತಾಗಿದ್ದರಿಂದ ರಕ್ತ ಸುರಿಯತೊಡಗಿತು. ಒಡನೆಯೇ ಅವನು ಸಿಟ್ಟಿನಿಂದ ಪೋಲೀಸರಿಗೆ ದೂರು ನೀಡುವುದಾಗಿ ಹೇಳಿ ಹೊರಟುಹೋದನು.

ಮಳೆಗಾಲದ ನಂತರ ಹಿರಿಯರ ಒಪ್ಪಿಗೆಯಂತೆ ಬೆಳ್ಳಿ ದೊಡ್ಡರ ಮದುವೆ ನಿಶ್ಚಯವಾಗುತ್ತದೆ. ಬೋಳನ ಮಾತಿನಿಂದ ಹೆದರಿದ ಬೆಳ್ಳಿಗೆ ಜ್ವರ ಬರಲಾರಂಭಿಸಿತು. ಆದರೆ ತಂದೆ ತಾಯಿ,ಅಣ್ಣ ಕಾಳನ ಧೈರ್ಯದಿಂದಾಗಿ ಬೆಳ್ಳಿ ಮದುವೆಯ ಸಡಗರದಿಂದ ಓಡಾಡತೊಡಗಿದಳು. ಬೋಳನಿಗೆ ಕೊಟ್ಟ ಮಾತಿನಂತೆಯೇ ಪೋಲೀಸರು ಮದುವೆಯ ದಿನದಂದೇ ಬೆಳ್ಳಿಯ ವಿಚಾರಣೆಗೆ ಆಗಮಿಸಿದರು. ಕೊರಗ, ಕಾಳನು ಎಷ್ಟು ವಿನಂತಿಸಿಕೊಂಡರೂ ಕೇಳದೆ ಬೆಳ್ಳಿಯೇ ಚಪ್ಪರಕ್ಕೆ ಆಗಮಿಸಿಬೇಕಾಯಿತು. ಪೋಲೀಸರು ಬೋಳನ ಕೈ ಏಕೆ ಗಾಯಗೊಳಿಸಿದೆ ಎಂಬ ಪ್ರಶ್ನೆಗೆ ಬೆಳ್ಳಿಯು ಜ್ವರದಿಂದ ತತ್ತರಿಸುತ್ತಲೇ ಕಾಡಿನ ಒಡೆತನ ಪಡೆಯಲು ಎಂದು ಹೇಳಿದಳು. ಕೋಪಗೊಂಡ ಪೋಲೀಸನು ಅವಳ ಕೆನ್ನಗೆ ಹೊಡೆದನು. ಕೆಳಗುರುಳಿದ ಬೆಳ್ಳಿ ಮೇಲುಸಿರು ಬಿಡುತ್ತಾಳೆ. ಅಧಿಕಾರಿ ವರ್ಗದ ದರ್ಪದ ನುಡಿಗೆ ಹೆದರಿದ ಬೆಳ್ಳಿಯು ಭಯದಿಂದಲೇ ನರಳಿ ನರಳಿ ತತ್ತರಿಸಿ ಪ್ರಾಣ ಕಳೆದುಕೊಳ್ಳುತ್ತಾಳೆ. ಬೆಳ್ಳಿಯ ಸಾವಿನಿಂದ ದುಃಖಿತನಾದ ದೊಡ್ಡ ಅಂದೇ ಮನೆಬಿಟ್ಟು ಹೋಗುತ್ತಾನೆ. ಕಾಲೂರಿನ ಮದುವೆಯ ಸಂಭ್ರಮವೆಲ್ಲ ದುಃಖದಲ್ಲಿ ಕೊನೆಯಾಗುತ್ತದೆ. ಕಾಲಾಂತರದಲ್ಲಿ ಮನೆಗೆ ಮರಳಿ ಬಂದ ದೊಡ್ಡನು ಮನೆಯವರ ಒತ್ತಾಯ ಮತ್ತು ಕನಸಿನಲ್ಲಿನ ಬೆಳ್ಳಿಯ ಆಪೇಕ್ಷೆಯಂತೆ ಬೇರೊಂದು ಮದುವೆಯಾಗುತ್ತಾನೆ. ನಿಶ್ಚಿತವಾದ ಮದುವೆಗೆ ಬದಲಾಗಿ ಬೇರೊಬ್ಬಳೊಂದಿಗೆ ದೊಡ್ಡನ ಮದುವೆಯಾಗುವಲ್ಲಿ ಕಾವ್ಯ ಮುಕ್ತಾಯವಾಗುವುದು.

ಕಥಾವಸ್ತು: ಸಾಮ್ಯತೆ

ಈ ಮೂರು ಅಚ್ಚಗನ್ನಡ ಕಾವ್ಯಗಳ ಕಥಾವಸ್ತು ಮೇಲ್ನೋಟಕ್ಕೆ ಭಿನ್ನವೆನಿಸಿದರೂ ಒಟ್ಟಾರೆಯಾಗಿ ಸಾಮ್ಯತೆ ಹೊಂದಿರುವುದು ಕಂಡುಬರುತ್ತದೆ. ಮೊದಲ ಕಾವ್ಯದಲ್ಲಿ ಕಥಾರಂಭದಲ್ಲಿ ಒಂದಾಗಿದ್ದ ದಂಪತಿಗಳು, ಮಧ್ಯದಲ್ಲಿ ಶಿವನ ಶಾಪದಿಂದಾಗಿ ಬೇರೆಯಾಗುತ್ತಾರೆ. ಆದರೆ ಕೊನೆಯಲ್ಲಿ ಈ ದಂಪತಿಗಳು ಒಂದಾಗುತ್ತಾರೆ. ಎರಡನೆಯ ಕಾವ್ಯದಲ್ಲೂ ಮತ್ತೆ ರತಿ ಮನ್ಮಥ ದಂಪತಿಗಳ ಪ್ರಸ್ತಾಪ ಬರುವುದು. ಇಲ್ಲಿ ಪೂರ್ವವನ್ನು ಮರೆತಿದ್ದ ದಂಪತಿಗಳಿಗೆ ಪೂರ್ವ ಸ್ಮರಣೆ ಉಂಟಾಗಿ ಮತ್ತೆ ಒಂದಾಗುತ್ತಾರೆ. ಈ ಮಧ್ಯೆ ತೊಡಕಾಗಿದ್ದ ಸಮಸ್ಯೆಯು ಶಂಬರನ ವಧೆಯಿಂದಾಗಿ ನಿವಾರಣೆಯಾಗುತ್ತದೆ. ಮೂರನೆಯ ಕಾವ್ಯದಲ್ಲಿ ಪೂರ್ವ ನಿಶ್ಚಿತವಾದ ಮದುವೆ ನಿಂತುಹೋದರೂ ಮತ್ತೆ ಅಲ್ಲಿ ಮರುಮದುವೆಯೇರ್ಪಡುತ್ತದೆ. ವಿಘಟನೆಯಾಗಬೇಕಿದ್ದ ಬದುಕು ಕೊನೆಗೂ ಮುಂದುವರೆಯುತ್ತದೆ. ಹೀಗೆ ಮೂರು ಕಾವ್ಯಗಳಲ್ಲೂ ದಾಂಪತ್ಯದ ವಿವಿಧ ಮಗ್ಗಲುಗಳು ಕಾಣಸಿಕೊಳ್ಳುತ್ತದೆ. ಮೂರು ಕಾವ್ಯಗಳ ದಾಂಪತ್ಯ ಜೀವನ ಮೂರು ರೀತಿಯದಾದರೂ ಅವುಗಳ ಮೂಲಸೆರೆಯಲ್ಲಿ (ಪ್ರೀತಿ, ಪ್ರೇಮ) ವ್ಯತ್ಯಾಸ ಕಂಡುಬರುವುದಿಲ್ಲ. ಕಬ್ಬಿಗರ ಕಾವದಲ್ಲಿ ದಾಂಪತ್ಯಕ್ಕೆ ಸಂಬಂಧಿಸಿದ ಸಮಸ್ಯೆಗೆ ಶಾಪ ಕಾರಣವಾಗುತ್ತದೆ. ಸೊಬಗಿನ ಬಳ್ಳಿಯಲ್ಲಿ ರಕ್ಕಸನ ವಧೆಯಿಂದಾಗಿ ಪತಿ - ಪತ್ನಿಯರು ಒಂದಾಗುತ್ತಾರೆ. ಕಾಲೂರ ಚೆಲುವೆಯಲ್ಲಿ ದಾಂಪತ್ಯಕ್ಕೆ ಸಂಬಂಧಿಸಿದಂತೆ ಆಕಸ್ಮಿಕವಾದ ವಿಧಿಲೀಲೆ ಕಾರಣವಾಗಿರುತ್ತದೆ. ಮೊದಲಿನ ಎರಡು ಅಚ್ಚಗನ್ನಡ ಕಾವ್ಯಗಳಲ್ಲಿ ಪೌರಾಣಿಕ ಚೌಕಟ್ಟು ಸ್ಪಷ್ಟವಾಗಿದೆ. ಕಾಲೂರ ಚೆಲುವೆಯಲ್ಲಿ ಜನಸಾಮಾನ್ಯರ ಬದುಕು ಪೌರಾಣಿಕ ಮಾದರಿಯಲ್ಲಿ ನಿರೂಪಿತಗೊಂಡಿದೆ.

ಉದಾಹರಣೆಗೆ

ಕಾಲೂರಿನಲ್ಲೊಡೆಯ
ಮೈವಿಟ್ಟು ಮಲಗಿಹಂ
ಚೆಲ್ಲಿರ್ಪ ಹಸುರ ಪಾಲ್
ಗಡಲೊಡಲಿನಲ್ಲಿ.
ನಲ್ಲೆ, ಹೂ ಬಿಸಿಲಿಂದ
ಬೀಸುತಿರುವೆಲರಿಂದ
ಕಾಲ್ಪಿಡಿಯು ತೋಲಯಿಸಿ
ಮೈವಡೆವಳಿಲ್ಲಿ [೪]

ಇಲ್ಲಿ ಪಾಲ್ಗಡಿನ ಬದಲಾಗಿ ಪಸುರ ಪಾಲ್ಗಡಲು ಬಂದಿರುವುದನ್ನು ಗಮನಿಸಬಹುದು. ಪಾಲ್ಗಡಲ್ಲಿ ವಿಷ್ಣು, ಪಸುರ ಪಾಲ್ಗಡಲಲ್ಲಿ ಒಡೆಯ ಮಲಗಿದ್ದಾನೆ. ಹಾಗೆಯೇ ಆತನಲ್ಲೆ ಆರೈಕೆಯನ್ನು ಮಾಡುತ್ತಿದ್ದಾಳೆ. ವಿಷ್ಣು ಲಕ್ಷ್ಮಿಯವರ ಪೌರಾಣಿಕ ವಿವರಣೆಯನ್ನು ಊರು ಮತ್ತು ಹೂ ಬಿಸಿಲುಗಳ ಹೋಲಿಕೆಯಿಂದ ಇಲ್ಲಿ ವರ್ಣಿಸಲಾಗಿದೆ. ಹೀಗೆ ಮೂರೂ ಕಾವ್ಯಗಳು ಅಚ್ಚಗನ್ನಡ ಸಂಪ್ರದಾಯವನ್ನು ಮುಂದುವರೆಸಲು ನಿರ್ದಿಷ್ಟವಾದ ಉದ್ದೇಶ ಹೊಂದಿರುವುದಂತೂ ಸ್ಪಷ್ಟವಾಗಿದೆ.

ಛಂದಸ್ಸು: ಕಬ್ಬಿಗರ ಕಾವ

ಅಚ್ಚಗನ್ನಡ ಪರಿಕಲ್ಪನೆಯ ಉದ್ದೇಶ ಕವಿಗಳಲ್ಲಿ ಒಂದೇ ಆಗಿದ್ದರೂ ಛಂದಸ್ಸಿನ ಬಳಕೆಯಲ್ಲಿ ಭಿನ್ನತೆಯಿದೆ. ಆಯಾ ಕಾಲದ ಅಥವಾ ಪರಂಪರೆಯ ಪ್ರಭಾವ, ಪ್ರೇರಣೆಯಿಂದಲೂ, ಜೊತೆಗೆ ಅವರು ಆಯ್ದುಕೊಂಡಿರುವ ಕಥಾವಸ್ತುವಿನ ಕಾರಣದಿಂದಲೂ ಅವರ ಅಚ್ಚಗನ್ನಡ ಕಾವ್ಯಗಳ ಛಂದಸ್ಸಿನಲ್ಲಿ ಭಿನ್ನತೆಯಿರುವುದು ಸ್ಪಷ್ಟವಾಗಿದೆ.

ಆಂಡಯ್ಯನು ಆರಂಭದ ಪದ್ಯಗಳಲ್ಲಿ ತನ್ನ ಕಾವ್ಯದ ಛಂದಸ್ಸು, ಶೈಲಿಗಳ ಬಗ್ಗೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

ಒಪ್ಪಂಬೂಸಿದವೋಲ್ ತೆಱಂಬೊಳವ ಕೊಂಕು ಪಾಲೊಳೊಂದಿರ್ಪವೋ

ಲೊಪ್ಪಂಬೆತ್ತಿನಿದಾದ ಬರ್ದುನುಡಿಯುಂ ತಳ್ತೋಜೆಯುಂ ನಿಲ್ವಿನಂ

ತಪ್ಪೊಂದುಂ ತಲೆದೋಱದಂತೆ ಪಲರೆಲ್ಲರ್ ತಿರ್ದಿದೀ ಕಬ್ಬಮೆಂ

ತಪ್ಪಂಗಂ ಪೊಸಮುತ್ತಿನೆಕ್ಕಸರದಂತೆಂದುಂ ಕೊರಲ್ಗೊಳ್ಳದೇ [೫]

ತನ್ನ ಅಚ್ಚಗನ್ನಡ ಕಾವ್ಯ ಶೈಲಿ ಎಲ್ಲೂ ಹದಗೆಡದಂತೆ ಹಿರಿಯರು ಅತ್ಯಂತ ಪ್ರೀತಿಯಿಂದ ತಿದ್ದಿ ಹೊಸಮುತ್ತಿನ ಸರದಂತೆ ಕಂಗೊಳಿಸುವಂತೆ ಮಾಡಿದ್ದರಿಂದ ಎಲ್ಲ ಕಾಲಕ್ಕೂ ಅದು ರಂಜಿಸುತ್ತಿರುತ್ತದೆ. ಹಾಗೆಯೇ

ಪುರುಳುಂ ಲಕ್ಕಣಮುಂ ಮೆ

ಯ್ಸಿರಿಯುಂ ತಳ್ತೆಸೆಯೆ ಪೇಟ್ದ ಕಬ್ಬಮದೆಂತುಂ

ಪುರುಳುಂ ಲಕ್ಕಣಮುಂ ಮೆ

ಯ್ಸಿರಿಯುಂ ತಳ್ತಸೆವ ರನ್ನದಂತೆರ್ದೆವುಗದೇ [೬]

ಸುಂದರವಾದ ವಕ್ರೋಕ್ತಿ, ಮೆಯ್ಸಿರಿ, ಸೊಬಗಿನಿಂದ ಕೂಡಿ ತನ್ನ ಕಾವ್ಯವು ಕಂಗೊಳಿಸುತ್ತದೆ. ಈ ಬಗೆಯ ಕಾವ್ಯ ಲಕ್ಷಣಗಳಿಂದ ಕಾವ್ಯ ತುಂಬಿಕೊಂಡಿದೆಯೆಂದೂ

ದೋಸದ ಮಾತು ಪೊರ್ದದೆನೆ ಬಲ್ಲವರಗ್ಗದ ಕನ್ನಡಂಗಳಿಂ

ಬಾಸಣಮಾಗೆ ಪೇಟ್ದೆನೊಲವಿಂ ನೆಱೆಕಬ್ಬಿಗರೊಪ್ಪೆ ನಾಡೆಯುಂ

ಗೋಸಣೆ ಮೀಱುವನ್ನಮಿದು ರಾಯನ ನಾಟ್ಕಳೊಳಿರ್ಕೆ ನಿಚ್ಚಮುಂ

ದೇಸೆಯ ಗೊತ್ತು ಜಾಣ್ನುಡಿಯ ತಾಯ್ವನೆ ನುಣ್ಬುರುಳೇಟ್ಗೆಯೆಂಬಿನಂ [೭]

ಶ್ರೇಷ್ಠವಾದ, ಸುಂದರವಾದ ಕನ್ನಡದ ನುಡಿಗಳ ಒಲವಿಂದ ಕಾವ್ಯ ರಚಿಸಿದ್ದು ಅಲ್ಲಿ ಜಾಣ್ನುಡಿ, ದೇಸೀ ನುಡಿಗಳ ಬಳಕೆಯಾಗಿರುವುದರಿಂದ ದೋಷದ ಮಾತೇ ಬರದು.

'ಮಾತನಾಡಿದವೊಲಂದವನಾಳ್ದಿರೆ ಬಲ್ಪು ನೆಟ್ಟಗೆ ದೊರೆಕೊಂಡುದಿಂತಿವನೊಳ್' (ಪ - ೧೫) ಎನ್ನುವಂತೆ ಕಾವ್ಯ ರಚನೆ ಮಾಡುವುದಾಗಿ ಆಂಡಯ್ಯ ಹೇಳಿಕೊಂಡಿದ್ದಾನೆ. ತತ್ಸಮಗಳ, ತದ್ಭವಗಳ, ವರ್ಣನೆಗಳ ಆಡಂಬರವಿಲ್ಲದ ಸರಳ ರೀತಿಯ ಕಾವ್ಯ ರಚನೆಯಲ್ಲಿ ಅವನ ಅಚ್ಚಗನ್ನಡದ ಉದ್ದೇಶ ಸಫಲಗೊಂಡಿರುವುದನ್ನು

ಕಾಣಬಹುದು. ಈ ಬಗೆಯ ವಿಶಿಷ್ಟ ಸೊಬಗಿನ; ಲಕ್ಷಣದ ಕಾರಣದಿಂದಾಗಿಯೇ ವಿದ್ವಾಂಸರು ಈ ಕಾವ್ಯವನ್ನು ಮೆಚ್ಚಿ 'ಸೊಬಗಿನ ಸುಗ್ಗಿ'ಯೆಂದು ಕರೆದುದಾಗಿ ಹೇಳಿಕೊಂಡಿದ್ದಾನೆ.

ಅಚ್ಚಗನ್ನಡದಲ್ಲಿ ಕಾವ್ಯ ರಚಿಸುವ ಸಾಹಸಕ್ಕೆ ಕೈ ಹಾಕಿರುವ ಆಂಡಯ್ಯ ತನ್ನ ಇತಿಮಿತಿಗೆ ತಕ್ಕಂತೆ ವಸ್ತುವನ್ನು ಆಯ್ದುಕೊಂಡು ಅಗತ್ಯವಿರುವ ಕಡೆ ಮಾರ್ಪಾಡಿಸಿಕೊಂಡಿದ್ದಾನೆ. ಕಾವ್ಯದ ವಸ್ತು ರೂಪ, ರಸೋದ್ದೇಶಕ್ಕೆ, ತಕ್ಕಂತೆ ಭಾಷೆಯನ್ನು ಹದಗೊಳಿಸಿ ಬಳಸಿದ್ದಾನೆ. ಅಚ್ಚಗನ್ನಡಕ್ಕಿರುವ ಪ್ರೌಢಿಮೆಯನ್ನು ಚಂಪೂವಿನ ಆರಾಧಕರಾದ ಪ್ರೌಢ ಕವಿಗಳಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದಲೇ ಚಂಪೂವನ್ನು ಆಯ್ದುಕೊಂಡಂತಿದೆ. ಡಾ.ಎಸ್.ಎಸ್.ಕೋತಿನ ಅವರು ಹೇಳುವಂತೆ, ಸಂಸ್ಕೃತ ಭಾಷೆಗೆ ಇಲ್ಲವೇ ಸಂಸ್ಕೃತ ಭೂಯಿಷ್ಠವಾದ ಕನ್ನಡ ಭಾಷೆಗೆ ಮಾತ್ರ ಒಗ್ಗುವ ವೃತ್ತಗಳಿಂದಲೇ ಕೂಡಿರುವ ಚಂಪೂವನ್ನು ತನ್ನ ಅಚ್ಚಗನ್ನಡಕ್ಕೆ ಒಗ್ಗಿಸಿಕೊಂಡಿರುವಲ್ಲಿಯೇ ಆತನ ಸಾಮರ್ಥ್ಯ ಗುರುತಿಸಬಹುದು ಆ ಅಚ್ಚಗನ್ನಡದಲ್ಲಿ ಸಂಯುಕ್ತಾಕ್ಷರಗಳು ತೀರಾ ವಿರಳ. ಶಬ್ದಾರಂಭ ದಲ್ಲಿಯಂತೂ ಇಲ್ಲವೇ ಇಲ್ಲ. ರೌದ್ರ, ವೀರ, ಭೀಭತ್ಸಾದಿಗಳನ್ನು ನಿರೂಪಿಸಲು ಅನಿವಾರ್ಯವಾದ ಮಹಾಪ್ರಾಣಗಳು ದೊರೆಯಲಾರವು. ಸರಳವಾದ, ಮೃದುವಾದ, ನುಣುಪಾದ, ವರ್ಣಗಳಿಂದ ಕೂಡಿದ ಲಾಲಿತ್ಯ, ಆರ್ಭಟ, ಆವೇಶವಿಲ್ಲದ ಮೃದುಮಧುರವಾದ ರಸಭಾವಗಳಿಗೆ ಸಹಕಾರಿಯಾದ ಲಯ, ಅಂತೆಯೇ ಅದಕ್ಕೆ ಅನುಕೂಲವಾದ ಶೃಂಗಾರ ರಸ ಪ್ರಧಾನವಾದ ವಸ್ತುವನ್ನು ಆಯ್ಕೆಮಾಡಿಕೊಂಡಿರುವನಲ್ಲದೆ ಕನ್ನಡ ಭಾಷೆ, ಲಯಕ್ಕೆ ಹೊಂದಿಕೊಳ್ಳುವ ಖ್ಯಾತ ಕರ್ನಾಟಕವನ್ನೇ ಬಳಸಿಕೊಂಡಿದ್ದಾನೆ. ವೃತ್ತದ ಗುಣಶೀಲ ಶಕ್ತಿಗೆ ತಕ್ಕಂತೆ ಬಳಸಿಕೊಂಡಿದ್ದಾನೆ. [೮]

ಕಬ್ಬಿಗರ ಕಾವದ ವಸ್ತು ದೃಷ್ಟಿಯಿಂದ ಪ್ರಾಚೀನ ಹಳಗನ್ನಡ ಕಾಲಕ್ಕೆ ಸೇರಿದೆ. ಹಾಗೆಯೇ ಛಂದಸ್ಸಿನ ದೃಷ್ಟಿಯಿಂದಲೂ ಹಳಗನ್ನಡ ಮಾದರಿ ಹೊಂದಿದೆ. ಇದರಲ್ಲಿ ಕನ್ನಡದಲ್ಲಿ ಬಳಕೆಯಾದ ಪ್ರಸಿದ್ಧ ಖ್ಯಾತ ಕರ್ನಾಟಕ ವೃತ್ತಗಳು ಬಳಕೆಯಾಗಿವೆ. ಕಬ್ಬಿಗರ ಕಾವದಲ್ಲಿ ಒಟ್ಟು ೨೭೨ ಪದ್ಯಗಳಿದ್ದು ಅದರಲ್ಲಿ ೫೩ ಚಂಪಕಮಾಲೆ, ೨೪ ಉತ್ಪಲಮಾಲೆ, ೨೨ ಮತ್ತೇಭ ವಿಕ್ರೀಡಿತ, ೪ ಶಾರ್ದೂಲ ವಿಕ್ರೀಡಿತ, ೧ ಸ್ರಗ್ಧರೆ, ೫ ಮಹಾಸ್ರಗ್ಧರೆ, ೧೬೦ ರಷ್ಟು ಕಂದ ಪದ್ಯಗಳು, ೧ ಉತ್ಸಾಹ ರಗಳೆ ಬಳಕೆಯಾಗಿದೆ.

ಹೀಗೆ ನೋಡಿದಾಗ ಚಂಪಕಮಾಲೆ ಸಂಖ್ಯೆಯಲ್ಲಿ ಹೆಚ್ಚಿರುವುದು ಕಂಡುಬರುತ್ತದೆ. ಖ್ಯಾತ ಕರ್ನಾಟಕ ವೃತ್ತಗಳಲ್ಲಿ ಚಂಪಕಮಾಲೆಯು ಲಲಿತವಾದ, ಶೃಂಗಾರ ನಯವಾದ ವರ್ಣನೆಗೆ ಮೀಸಲಾದ ವೃತ್ತವಾಗಿದೆ.

'ಮಾತನಾಡಿದವೊಲಂದಮನಾಳ್ದಿರೆ' ಎನ್ನುವುದು ಕವಿಯ ಪ್ರತಿಜ್ಞೆಯಾದ್ದರಿಂದ ಗದ್ಯದ ಬಳಕೆಯಲ್ಲೂ ಅಪೂರ್ವ ಕೌಶಲ್ಯವನ್ನು ಮೆರೆದಿದ್ದಾನೆ. ಬಿಡಿ ಬಿಡಿಯಾಗಿ ವಿವರಗಳನ್ನು ವರ್ಣಿಸುವಲ್ಲಿ ಸಹಾಯಕವಾಗಿದೆ. ಕಾವ್ಯದಲ್ಲಿ ಪ್ರಧಾನ ಪಾತ್ರ, ಸನ್ನಿವೇಶ ಇರದೆ ಜೈನಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದೇ ಪ್ರಧಾನವಾದುದರಿಂದ ವಿವರಗಳಲ್ಲಿ ಅಂತರವಿದೆ. ಆ ವಿವರಗಳನ್ನು ಎಳೆ ಎಳೆಯಾಗಿ ನಿರೂಪಿಸುವಲ್ಲಿ ಗೇಯಕ್ಕಿಂತಲೂ ವಾಚ್ಯ ಪ್ರಧಾನ ಸೂಚಕಗಳಾದ ವೃತ್ತಗಳ ಬಳಕೆ ಅಗತ್ಯವಾಗಿದೆ. ಶೃಂಗಾರ ರಸ ಪ್ರಧಾನವಾದ ಕಬ್ಬಿಗರ ಕಾವದಲ್ಲಿ ಹಾಸ್ಯ ಹಾಗೂ ಮೃದು ಮಧುರವಾದ ಭಾವನೆ, ಕಲ್ಪನೆಗಳನ್ನು ಅಭಿವ್ಯಕ್ತಿಗೊಳಿಸುವಲ್ಲಿ ಈ ಚಂಪೂಶೈಲಿ ಯಶಸ್ವಿಯಾಗಿದೆ. ಗದ್ಯವನ್ನೂ ಕಾವ್ಯದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ.

'ಕಬ್ಬಿಗರ ಕಾವ' ಕಾವ್ಯ ಭಾಷೆಗೆ ಕಂದ ಪದ್ಯಗಳು ಹೆಚ್ಚು ಹೊಂದಿಕೊಂಡಿರುವಂತೆ ಕಂಡುಬರುತ್ತವೆ. ಕಾವ್ಯದಲ್ಲಿ ಬಹುಪಾಲು ಕಂದ ಪದ್ಯಗಳೇ ಇವೆ. ಶೃಂಗಾರ, ಹಾಸ್ಯ, ಕರುಣಾದಿ ರಸಗಳ ಅಭಿವ್ಯಕ್ತಿಯಲ್ಲಿ ಕಂದಗಳು ಬಳಕೆಯಾಗಿವೆ.

ಆಂಡಯ್ಯನ ಕಂದಪದ್ಯ ಸೊಬಗಿಗೆ ಒಂದು ಉದಾಹರಣೆ:

ಅವಳ ಮೊಗದಂತೆ ಮೆಯ್ಸಿರಿ

ಸವನಿಸದೆನಗೆಂದು ಕುಂದನೆರ್ದೆಯೊಳ್ ತಾಳ್ದಂ

ಹಿವಗದಿರನೆಂದೊಡಿನ್ನು ಟಿ

ದವರೇನಂ ಪೊಗಟಲಾರ್ಪರಾಕೆಯ ಮೊಗಮಂ [೯]

ಆಕೆಯ ಮುಖದ ಸೌಂದರ್ಯವು ತನಗೆ ದೊರೆಯಲಾರದೆಂದು ಚಂದ್ರನು ಕೊರಗಿ ತನ್ನೆದೆಯಲ್ಲಿ ಕಳಂಕವನ್ನು ತಾಳಿದಾಗ, ಉಳಿದವರು ಏನೆಂದು ಹೊಗಳಬಲ್ಲರು.

ಆಂಡಯ್ಯ ತನ್ನ ಅಚ್ಚಗನ್ನಡ ಕಾವ್ಯದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿದರೂ ಎಲ್ಲೂ ಪುನರುಕ್ತಿಯ ದೋಷ ಕಾಣದು. ಹಾಗೆಯೇ ಎಲ್ಲೂ ಶಬ್ದ ದಾರಿದ್ರ್ಯವನ್ನು ತೋರಗೊಟ್ಟಿಲ್ಲ. ಸಮಾಸ ಪದಗಳ ನಿರ್ಮಾಣ ಹಾಗೂ ಉಚಿತ ಬಳಕೆಯಿಂದ ಆ ಕೊರತೆಯನ್ನು ತುಂಬಿಕೊಂಡಿದ್ದಾನೆ. ಅದಕ್ಕಾಗಿಯೇ ಎಳವಿಸಿಲ್, ಕಡುವಿಸಿಲ್, ಕೆಂಬಿಸಿಲ್, ಪೊಸಬಿಸಿಲ್, ಪೂಬಸಿಲ್ ತಂಬಿಸಿಲ್, ಕಿರುನಗೆ, ಪೆರ್ನಗೆ, ಮುಗುಳ್ನಗೆ, ಮೆಲ್ನಗೆ, ನಸುನಗೆ, ಹಾಗೆಯೇ ಮೇಲೋರು, ಗಾಳಿವಟ್ಟೆಯೊಳ್ ನಡೆವನ್ ಪಲವಂ ನಾಲಗೆಯುಳ್ಳವಂ, ಸಮೆದಿರ್ಪ ಬೆಟ್ಟು ಮೊದಲಾದವುಗಳನ್ನು ನಿರ್ಮಿಸಿ ತನ್ನ ಶಬ್ದಶಕ್ತಿಯನ್ನು ತೋರಿದ್ದಾನೆ. ಈ ಯಾವ ಶಬ್ದ ಸೃಷ್ಟಿಗಳು ಆಂಡಯ್ಯನ ಅಚ್ಚಗನ್ನಡ ಶೈಲಿಗೆ ಭಂಗಬರಿಸಿಲ್ಲ.ಕಬ್ಬಿಗರ ಕಾವವು ಶೃಂಗಾರ ಪ್ರಾಧಾನ್ಯತೆಗೆ ಸಂಬಂಧಿಸಿದ ಕಾವ್ಯವಾದುದರಿಂದ ಚಂಪಕಮಾಲೆಯ ಹೆಚ್ಚಳವು ಔಚಿತ್ಯವಾದುದೇ ಆಗಿದೆ.

ಆಂಡಯ್ಯನು ತನ್ನ ಕಾವ್ಯ ರಚನೆಯ ಆರಂಭದಲ್ಲಿ ಮಾತನಾಡಿದವೋಲ್ ಕಾವ್ಯ ರಚಿಸುವುದಾಗಿ ಹೇಳಿಕೊಂಡಿದ್ದಾನೆ. ಕೇವಲ ಭಾಷೆಯ ಆಯ್ಕೆಯಲ್ಲಿ ಮಾತ್ರವಲ್ಲ. ಅದನ್ನು ಮೇಲ್ನೋಟಕ್ಕೆ ವೃತ್ತಗಳಿಂದ ಕೂಡಿರುವ ಬಿಗಿ ಎಂದೆನಿಸಿದರು. ಸರಳವಾಗಿ ಓದಲು ಮತ್ತು ಅರ್ಥ ಮಾಡಿಕೊಳ್ಳಲು ಸಾಧ್ಯ ಈ ದೃಷ್ಟಿಯಿಂದ ಸಲುವಾಗಿಯೇ ಆಂಡಯ್ಯನ ಪದ್ಯಗಳನ್ನು ಸರಳವಾಗಿ ಅರ್ಥಕ್ಕೆ ಭಂಗ ಬರದಂತೆ ಕೆಳಗೆ ವಿಂಗಡಿಸಲಾಗಿದೆ.

ಚಂಪಕಮಾಲೆ

ಅಣೆದುದುಕೊತ್ತಿ ನೂಂಕಿದುದು

ಪೊಕ್ಕಡನಿಕ್ಕಿದುದೇಱ ಬಾಯ್ಗಳಿಂ

ನೆಣನುಗೆ ನೆತ್ತರುಚ್ಚಳಿಸೆ

ಜಾದಿನ ಬೆಟ್ಟುಮಗುಟ್ಟುವಂತೆ

ಬಂಡಣದೆಡೆಯೊಳ್ ಪೊಣರ್ವ ಪಲವಾನೆಗಳಂ ಕೆಡಪಿತ್ತದೊಂದು ಮನ್ನಣೆವಡೆದಾನೆ

ಬೊಬ್ಬಿಱಿಯೆ ತನ್ನಯ ಮೇಗಣ ಜೋದನಾರ್ಪಿನಿಂ [೧೦]

೨. ಉತ್ಪಲಮಾಲೆ

ಆವನಗಾಡಿ ನೋಡಿದದವರಂ
ಸಲೆ ಸೋಲಸುತಿರ್ಪುದುರ್ಕಿನಿಂದ
ಆವನ ಪೂವಿನಂಬದಟರಂ ತಲೆವಾಗಿಸುತಿರ್ಪುಟ್ಟೆಯಿಂದ
ಆವನ ಪಜ್ಜಳಿಪ್ಪ ಜಸಮುಣ್ಣೆಸೆಯೊಳ್ ನೆಲಸಿರ್ಪುದು
ಆತನಿಗಾವಗಮೆನ್ನ ಜಾಣ್ನುಡಿಗೆ ಮೆಯ್ಸಿರಿಯಂ
ನನೆವಿಲ್ಲ ಬಲ್ಲಹಂ [೧೧]

೩. ಶಾರ್ದೂಲ ವಿಕ್ರೀಡಿತ

ಮುತ್ತುಂ ಪಚ್ಚೆವರಲ್ಗಳುಂ ಕುಳಿಸಮುಂ ಮುಂತಾಗಿ
ಕುಂದಿಲ್ಲದೊಂಬತ್ತುಂ ರನ್ನದ ನುಣ್ಗದಿರ್
ನೆಗೆದು ನೀಳ್ಪೊಂದೊಂದಜೊಳ್ ಕೂಡಿ ಮೆಯ್ವೆತ್ತಿರ್ದಿಂದಿರವಿಲ್ಲ
ಪಾಂಗನೆನಸುಂ ಬಾಂಬಟ್ಟೆಯೊಳ್ ಬೀಱಿ
ಕಣ್ಗೆತ್ತಂ ಸೋಲಮನೀವ ರನ್ನವಸರಂ
ಚೆಲ್ವಾದುದಾ ಬೀದಿಯೊಳ್ [೧೨]

೪. ಮತ್ತೇಭ ವಿಕ್ರೀಡಿತ

ಕಡಲೊಳ್ ಮೆಯ್ಗರೆದಿರ್ದೊಡಂ
ಪೊಡವಿಯೊಳ್ ಪೊಕ್ಕಿರ್ದೊಡಂ
ಬೆಟ್ಟದೊಳ್ ನಡೆದೇಱಿರ್ದೊಡಂ
ಅಳ್ಕುತುಂ ದೆಸೆಗಳೊಳ್ ಬಳ್ಕುತ್ತಡಂಗಿರ್ದೊಡಂ
ಕಡುಪಿಂದೊರ್ಮೆಯೆ ಪೂವಿನಂಬದಟರಂ
ಮೆಯ್ವಾಗಿ ನೋಯಿಪ್ಪುದೆಂದೊಡೆ ಕೇಳ್
ಎನ್ನಯ ಬಾರಿಯೊಳ್ ತಿಸುಳಿ ತಾನಿನ್ನೆತ್ತಪೋಗಿರ್ದಪಂ [೧೩]

೫. ಸ್ರಗ್ಧರೆ

ತೊಂಗಲ್ಗೊಂಡಿರ್ದು ಕೆಂಪಾದಸುಗೆಯ ತಳಿರಂ
ಕಂಪುದೀವಿರ್ದ ಪೂವಂ, ಮಂಗಾಯಂ
ಪೊಚ್ಚ ಪೊಂಬಾಱಿಯ, ಮರುಗಮ್
ಇಂಬಾದ ನಲ್ವಾಱಿವಣ್ಣಂ ಪೊಂಗಿರ್ದಾ ನೈದಿಲ್
ಒಳ್ದಾವರೆಯ ಮುಗಳ್ಗಳಂ ಸೊಂಪಿನಿಂ ಬೆಳ್ಪುವೆತ್ತಿರ್ದಿಂಗೋಲಂ
ತೋಂಟಿಗಂ ಕೊಟ್ಟನೊರ್ವಂ [೧೪]

೬. ಮಹಾಸ್ರಗ್ಧರೆ

ಮುಳಿಸಿಂದಂ ಕಿಟ್ಟು ಬಾಳಂ
ಜಡಿದಳವಿಯನಾರಯ್ದು
ಝೂರೇ ಜಝೂರೇ ಹುಳುರೇ ಹೋ ಹೋ ಮಝೂ
ಎಂಬುಲಿ ನಗೆವಿನೆಗಂ ಬಿಟ್ಟು ಮಾಱಾಂತ
ಮೇಲಾಳ್ಗಳನಾಗಳ್ ತಳ್ತು ಪೊಯ್ದಾರ್ದಿಱಿಪಿ
ಕುದುರೆಯಂ ಕೊಂಡು ತಮ್ಮೊಡಿಯೊಳ್
ಕಣ್ಗೊಳಿಪನ್ನಂ ಪೊಕ್ಕು ಗೆಲ್ಲಂಬಡೆದರ್
ಅದಟಿನಿಂ ರಾಯರಾವುತ್ತರಾಗಳ್ [೧೫]

ಹೀಗೆ ಅರ್ಥಾನುಸಾರಿಯೂ ಪದ್ಯಗಳನ್ನು ವಿಂಗಡಿಸಿದಾಗ ಕವಿಯೋ ಹೇಳಿದಂತೆ ಮಾತನಾಡಿದ ಹಾಗೆ ಸಹಜನೆ ಇರುವುದು ಕಂಡು ಬರುತ್ತದೆ. ಆಂಡಯ್ಯನು ಚಾರಿತ್ರಿಕವಾಗಿ ವೃತ್ತಗಳನ್ನು ಬಳಸಿದರೂ ಅದರಲ್ಲಿ ಕನ್ನಡದ ಸೊಗಡು ಮರೆಯಾಗಿಲ್ಲ ಎಂಬುದನ್ನು ತೋರಿಸುವುದಕ್ಕಾಗಿ ವೃತ್ತಗಳನ್ನು ಹೆಗೆ ಅರ್ಥಾನುಸಾರಿಯಾಗಿ ವಿಂಗಡಿಸಲಾಯಿತು.

ಸೊಬಗಿನ ಬಳ್ಳಿ: ಛಂದಸ್ಸು

ಆಂಡಯ್ಯ ಸಂಸ್ಕೃತವನ್ನು ಬೆರಸದೆ ಕನ್ನಡದಲ್ಲಿ ಕಾವ್ಯವನ್ನು ಬರೆಯಲು ಅಸಾಧ್ಯವೆಂಬುವರ ಮಾತಿಗೆ ಸವಾಲಾಗಿ ಕಬ್ಬಿಗರ ಕಾವವನ್ನು ಬರೆದನೆಂಬುದು ಸರ್ವವಿದಿತವಾದ ವಿಷಯ. ಅಚ್ಚಗನ್ನಡವೆಂದರೆ ಅಪಭ್ರಂಶ (ತದ್ಭವ) ರೂಪಗಳು ಬೆರೆತ ಕನ್ನಡ. ಅವನ ಪ್ರಯತ್ನ ಮುಂದೆ ಕೊಂಡಾಡುವವರಿಲ್ಲದೆ ನಿಂತುಹೋಗಿತ್ತು. ಅವನ ದಾರಿಯಲ್ಲಿ ಮುಂದುವರೆದು ಅವನಿಗಿಂತ ಆರೇಳು ಶತಮಾನಗಳ ಆನಂತರ ಮುಳಿಯರು ಸೊಬಗಿನ ಬಳ್ಳಿ ಕಾವ್ಯ ರಚಿಸಿದರು. (೧೯೩೧) ಅಚ್ಚಗನ್ನಡ ದೇಸೀ ರೂಪವೊಂದು ಕನ್ನಡದಲ್ಲಿದ್ದಿರಬೇಕೆಂದು ಅದು ರಾಜಮಾರ್ಗವಲ್ಲದಿದ್ದರೂ, ಕಾಲುದಾರಿಯಂತೆ ಇತ್ತು. ಇಂದಿಗೂ ನಾವು ಆ ದಾರಿಯಲ್ಲಿ ನಡೆಯಲು ಸಾಧ್ಯವೆಂದು ತೋರಿಸಲು ಈ ಕೃತಿಯನ್ನು ರಚಿಸಿದ್ದಾಗಿ ಮುನ್ನುಡಿಯಲ್ಲಿ ಮುಳಿಯರು ಹೇಳಿಕೊಂಡಿದ್ದಾರೆ. [೧೬]

ಭಾಷಾ ಬಳಕೆಯ ಆಯ್ಕೆಯ ಕಾರಣದಿಂದಾಗಿಯೇ ಛಂದೋರೂಪಗಳಲ್ಲೂ ಬದಲಾವಣೆ ಕಂಡುಬರುವುದು. ಆದರೆ ಆಂಡಯ್ಯನ ಭಾಷಿಕ ಮಾದರಿಯನ್ನೇ ಅನುಸರಿಸಿದ ಮುಳಿಯರು ಸಂಸ್ಕೃತದ ಪದಗಳನ್ನು, ಸಮಾಸಗಳನ್ನು ಕನ್ನಡದಲ್ಲಿ ಬೆರಸದೆ ಕೃತಿಯ ಭಾಷೆಯನ್ನು ರೂಪಿಸಿದ್ದಾರೆ. ಇಲ್ಲಿ ಬಳಕೆಯಾಗಿರುವ ಕನ್ನಡದಲ್ಲಿ ಹಳಗನ್ನಡದ ರೂಪಗಳು ಮತ್ತು ನಡುಗನ್ನಡದ ರಚನೆಗಳು ಬೆರೆತಿವೆ. ಅಲ್ಲದೆ ಮುಗುಳುಗಳಲ್ಲಿ ಕ್ರಮವಾಗಿ ಚೌಪದಿ, ಶರ ಷಟ್ಪದಿ, ಕುಸುಮ ಚೌಪದಿ, ಲಲಿತ ರಗಳೆ, ಸಾಂಗತ್ಯ, ಮುಂದಾನಿಲ ರಗಳೆ, ಕುಸುಮ ಷಟ್ಪದಿಗಳಿದ್ದು, ಪ್ರಧಾನವಾಗಿ ಮಾತ್ರಾ ಲಯವನ್ನು ಪೂರಕವಾಗಿ ಅಂಶಲಯವನ್ನು ಬೆರೆಸಿರುವುದು ಕಂಡುಬರುತ್ತದೆ.

ಮುಳಿಯರು ಕೆಲವು ಸನ್ನಿವೇಶಗಳನ್ನು ಛಂದಸ್ಸಿಗೆ ತಕ್ಕಂತೆ ಹೊಂದಿಸಿಕೊಂಡಿರುವುದನ್ನು ನೋಡಬಹುದು. ಶಂಬರಾಸುರನ ಬೇಟೆಯ ವರ್ಣನೆಗೆ ಶರಷಟ್ಪದಿ ಛಂದಸ್ಸನ್ನು ಬಳಸಿದ್ದಾರೆ. ಬೇಟೆಗೂ, ಬಾಣಕ್ಕೂ

ಸಂಬಂಧವಿರುವುದರಿಂದ ಇದನ್ನು ಆಯ್ದುಕೊಂಡಿರಬಹುದೆನಿಸುತ್ತದೆ. ತ್ವರಿತಗತಿ, ವೀರಾವೇಶ ಮುಂತಾದವಕ್ಕೆ ಇದು ಅನುಕೂಲವಾಗಿದೆ.

ಆಸರ್ವಡೆದಾನೇಸರ್ತನ್ನಯ
ಸಾಸಿರಗಯ್ಯಿಂ ಮೊಗೆಮೊಗೆದು
ಆಸುಂನೀರ್ಗುಡಿದೀಸುಂ ತಣಿಯದೆ
ಬೀಸುಂಗಾಳಿಯನೀಂಟಿದನೇ [೧೭]

ಏರಿತು ಬಿಸಿಲುರಿಯಾರಿತು ನೆಲದಡಿ
ತಾರಿತು ಮರಗಿಡು ಪುಲ್ಬೊದರು
ಜಾರಿತು ಮಿಸುಕಂತೀರಿತೆಲರದೇಂ
ಪಾರಿತೊ ಬನವೆಣ್ಣಿನ ಸುಯ್ಯಂ [೧೮]

ಕನ್ನಡ ನವೋದಯದ ಕರಾವಳಿ ಶಾಖೆ ಸಾಹಿತ್ಯದ ಭಾಷೆಗಾಗಿ ಪ್ರಾದೇಶಿಕ ವೈಶಿಷ್ಟ್ಯಗಳ, ಆಡುಮಾತಿನ ಮಾದರಿಯ ಮೊರೆಹೋಗುವ ಬದಲು, ಬಳಕೆ ತಪ್ಪಿದ ಕನ್ನಡದ ಹಳೆಯ ರೂಪವೊಂದನ್ನು ಮರಳಿ ಬಳಸಲು ಸನ್ನದ್ಧವಾದದ್ದು ಮುಳಿಯರ ಕಾವ್ಯದಿಂದ ಸ್ಪಷ್ಟಗೊಳ್ಳುವುದು.

ಸಂಸ್ಕೃತ ಪ್ರಾಕೃತ ಭಾಷೆಗಳಿಂದ ರೂಪಿಸಿಕೊಂಡ ಹಳಗನ್ನಡ ಭಾಷೆಗೆ ಬದಲಾಗಿ ಮುಳಿಯರು ಅಚ್ಚಗನ್ನಡ ಕಾವ್ಯ ಭಾಷೆಯ ಪರವಾಗಿ ನಿಲ್ಲುತ್ತಾರೆ. ಅಲ್ಲದೆ ಆಂಡಯ್ಯನ ಈ ಅಚ್ಚಗನ್ನಡ ಪರಂಪರೆಗೆ ಉತ್ತರಾಧಿಕಾರಿಗಳಾಗಿ ಹಲವು ಕವಿಗಳು ಇದ್ದಿರಬೇಕೆಂಬುದು ಅವರ ವಾದ. ಅಲ್ಲದೆ ತದ್ಭವಗಳನ್ನು ಬಳಸುವುದರಿಂದಲೇ ಅಚ್ಚಗನ್ನಡದ ಲಕ್ಷಣಗಳು ಸ್ಪಷ್ಟವಾಗುತ್ತವೆ ಎಂಬುದು ಅವರ ನಿಲುವು. ಇಲ್ಲಿ ಸಂಸ್ಕೃತದ ಪದಗಳನ್ನು, ಸಮಾಸಗಳನ್ನು ಕನ್ನಡದೊಂದಿಗೆ ಬೆರಸದೆ ಕಾವ್ಯದ ಭಾಷೆಯನ್ನು ರೂಪಿಸಲು ತೊಡಗಿದ್ದಾರೆ. ಬಳಕೆಯಾಗಿರುವ ಕನ್ನಡದಲ್ಲಿ ಹಳಗನ್ನಡದ ರೂಪಗಳು, ನಡುಗನ್ನಡದ ರಚನೆಗಳೇ ಹೆಚ್ಚಾಗಿ ಕಂಡುಬರುತ್ತವೆ.

ಸೊಬಗಿನ ಬಳ್ಳಿಯಲ್ಲಿ ಒಟ್ಟು ೮ ಮುಗುಳುಗಳಿವೆ. ಅದರಲ್ಲಿ ಮೊದಲ ಮುಗುಳಿನ ೨೮ ಪದ್ಯಗಳು, ಚೌಪದಿಯಲ್ಲೂ, ಎರಡನೆಯ ಮುಗುಳಿನ ೩೬ ಪದ್ಯಗಳು ಶರಷಟ್ಪದಿಯಲ್ಲೂ, ಮೂರನೇ ಮುಗುಳಿನ ೩೯ ಪದ್ಯಗಳು ಕುಸುಮ ಚೌಪದಿಯಲ್ಲೂ, ನಾಲ್ಕನೇ ಮುಗುಳಿನ ೨೧ ಪದ್ಯಗಳು ಲಲಿತ ರಗಳೆಯಲ್ಲೂ, ಐದನೆಯ ಮುಗುಳಿನ ೫೫ ಪದಗಳು ಸಾಂಗತ್ಯದಲ್ಲೂ, ಆರನೆಯ ಮುಗುಳಿನ ೩೯ ಪದ್ಯಗಳು ಮುಂದಾನಿಲ ರಗಳೆಯಲ್ಲೂ, ಏಳನೇ ಮುಗುಳಿನ ೬೧ ಪದ್ಯಗಳು ಕುಸುಮ ಷಟ್ಪದಿಯಲ್ಲೂ ೮ನೇ ಮುಗುಳಿನ ಪದ್ಯಗಳು ಕುಸುಮ ಷಟ್ಪದಿಯಲ್ಲೂ ರಚನೆಯಾಗಿವೆ.

ಹೀಗೆ ಸೊಬಗಿನ ಬಳ್ಳಿಯಲ್ಲಿ ವಿವಿಧ ಛಂದೋ ಪ್ರಕಾರಗಳ ಪ್ರಯೋಗವನ್ನು ಮಾಡಲಾಗಿದೆ. ಮೇಲುನೋಟಕ್ಕೆ ಇದು ಚಂಪೂ ಸಾಹಿತ್ಯದ ವೈವಿಧ್ಯತೆಯನ್ನು ನೆನಪಿಗೆ ತರಬಹುದು. ಆದರೆ ಮುಳಿಯರ ಈ ಛಂದೋ ವೈವಿಧ್ಯಕ್ಕೆ ಯಕ್ಷಗಾನ ಪ್ರೇರಣೆಯಾಗಿರಬೇಕು. ಯಕ್ಷಗಾನದಲ್ಲಿ ಬಳಕೆಯಾಗುವ ಶರಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸುಗಳು ಕಾವ್ಯದಲ್ಲಿ ಬಳಕೆಯಾಗಿವೆ. ಅದರಂತೆ ಛಂದೋವೈವಿಧ್ಯತೆ ಯಕ್ಷಗಾನದ ಬಹುಮುಖ್ಯವಾದ ಲಕ್ಷಣವಾಗಿದೆ. ಯಕ್ಷಗಾನದಲ್ಲಿ ಕತೆಯಿಂದ ಕತೆಗೆ ಛಂದಸ್ಸಿನ ಬದಲಾವಣೆ ಸಹಜವಾಗಿದೆ. ಮುಳಿಯರು ಯಕ್ಷಗಾನದ ಭಾಗವತರಾದ್ದರಿಂದ ಸಹಜವಾಗಿಯೇ ಈ ಛಂದೋ ವೈವಿಧ್ಯತೆಯನ್ನು ತಮ್ಮ ಕಾವ್ಯದಲ್ಲಿ ತಂದಿದ್ದಾರೆ ಎನ್ನಬಹುದು.

ಸೊಬಗಿನ ಬಳ್ಳಿಯ ಆರಂಭದ ೧ನೇ ಮುಗುಳು ಚೌಪದಿಯಲ್ಲಿ ರಚನೆಗೊಂಡಿದೆ. ಇದರ ಮೇಲೆ ಯಕ್ಷಗಾನದ ಮಧುಮಾಧವಿ ಏಕ ತಾಳ ಎಂಬ ಛಂದಸ್ಸಿನ ಪ್ರಭಾವವನ್ನು ಕಾಣಬಹುದು.

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ

ನಾಲ್ಕು ಪಾದಗಳನ್ನು ಹೊಂದಿದ್ದು ಎಲ್ಲ ಪಾದಗಳಲ್ಲೂ ಐದು ಮಾತ್ರೆಯ ಮೂರು ಸಮಾನ ಗಣಗಳು ಬರುತ್ತವೆ. ಅಲ್ಲದೆ ಪ್ರತಿಪಾದದ ಕೊನೆಯಲ್ಲಿ ಮೂರು ಮಾತ್ರೆಯ ಗಣಗಳು ಉಳಿದು ಪದ್ಯವನ್ನು ದೀರ್ಘವಾಗಿ ಹಾಡಲು ಸಹಾಯಕವಾಗಿವೆ. [೯]

ಕೇಳಯ್ಯ	ಖಳರಾಯ	ಪೂರ್ವದೊಳು	ನಾನು	೫ ೫ ೫ ಪ
ಪೇಳಿದಂ	ದದಿನಿನ್ನ	ಬಯಸಿಬಂ	ದಿಹೆನು	೫ ೫ ೫ ಪ
ಕೋಳುಗೊಂ	ಡುದುಮನವು	ವರಿಸೆನ್ನ	ನೀನು	೫ ೫ ೫ ಪ
ಕೇಳಿಕೊಂ	ಡಪೆನಿನ್ನ	ದೈನ್ಯದಲಿ	ನಾನು	೫ ೫ ೫ ಪ

ಮೇಲಿನ ಪದ್ಯದ ಮಾದರಿಯಲ್ಲಿಯೇ ಮುಳಿಯರ ಈ ಚೌಪದಿ ಪದ್ಯವನ್ನು ವಿಂಗಡಿಸಬಹುದು.

ಬಗೆಯೊಪ್ಪು	ವಂತೆಬ	ಣ್ಣನೆಯುಡುಗ	ರೆಗಳು
ಸಿಗದಾಗೆ	ಕಂಡುಬ	ಟ್ಟೆಯಮೆಚ್ಚು	ಗೊಡಲು
ಮಿಗುವಕಿಡು	ವಗೆಯನಿ	ನ್ನಂಕರೆದ	ರಾರು
ತಗದುನುಸು	ಳುತ್ತೆಡೆವ	ಡೆಯೆಸಾರು	ಸಾರು

ಮುಳಿಯರಸೊಬಗಿನ ಬಳ್ಳಿಯ ಎರಡನೆಯ ಮುಗುಳು ಶರಷಟ್ಪದಿಯಲ್ಲಿ ರಚನೆಯಾಗಿದ್ದು. ಅದರ ಮೇಲೆ ಯಕ್ಷಗಾನದ ಆರ್ಯ ಸವಯ್ಯ ಏಕತಾಳದ ಪ್ರಭಾವವಿರುವುದನ್ನು ಕಾಣಬಹುದು.

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ

ಯಕ್ಷಗಾನದ ಈ ಛಂದಸ್ಸಿನ ವಿಷಮ ಪಾದಗಳ ತಾಲೇಯ ಗಣದಲ್ಲಿ ಅಂತಃಪ್ರಾಸವಿರುವುದರಿಂದ ಇದು ಶರಷಟ್ಪದಿಯ ಲಕ್ಷಣವನ್ನು ಹೋಲುವುದು. ಯಕ್ಷಗಾನದಲ್ಲಿ ಅಂತ ಪ್ರಾಸ ಬರಬೇಕೆಂಬ ನಿಯಮವಿಲ್ಲದಿದ್ದರೂ ರಂಗಕಲೆಗೆ ತಕ್ಕಂತೆ ಅಂತಃಪ್ರಾಸ ಬಳಕೆಯಾಗುವುದು.

ಇದು ನಾಲ್ಕು ಪಾದಗಳನ್ನ ಹೊಂದಿದ್ದು ಒಂದು ಮತ್ತು ಮೂರನೆಯ ಪಾದಗಳು ನಾಲ್ಕು ಮಾತ್ರೆಯ ನಾಲ್ಕು ಸಮಾನ ಗಣಗಳನ್ನ ಹೊಂದಿದ್ದರೆ ಎರಡು ಮತ್ತು ನಾಲ್ಕನೆಯ ಸಾಲುಗಳು ನಾಲ್ಕು ಮಾತ್ರೆಯ ಮೂರು ಗಣಗಳು ಮತ್ತು ಕೊನೆಯಲ್ಲಿ ಒಂದು ಗುರುವನ್ನು ಹೊಂದಿರುತ್ತದೆ.

ಬರುವನ	ಪಲಿರೆಸಿ	ಸರಸಿಯ	ಕೇಳಿಯ	೪೪೪೪
ತೊರೆಯಂ	ತಸತಿಯ	ರುಹಾರು	ವನ	೪೪೪ಗುರು
ಪರಿರೆಸಿ	ಕುಪ್ಪಸ	ಧರಿಸುತ	ಶಾಲೆಯ	೪೪೪೪
ಮರೆಸುತ	ನಾಚಲು	ಧರಣಿಪ	ನೂ	೪೪೪ಗುರು

ಮೇಲಿನ ಪದ್ಯದ ಹಿನ್ನಲೆಯಲ್ಲೇ ಮುಳಿಯರ ಈ ಕೆಳಗಿನ ಶರಷಟ್ಪದಿ ಪದ್ಯವನ್ನು ವಿಭಾಗಿಸಬಹುದು.

ಸಿರಿಯೆರೆಯಂ ನಲವಿರಲಿತ್ತಂ ಮಣಿ
ವುರ ದೊಡೆಯಂ ಸಂಬರನೆಂಬ
ದುರುಳನ ಕೆಯ್ಮೆಯ ದುರುದುಂಬಿತನಂ
ಪೊರೆಯೇರುತ್ತಿರ್ದತ್ತೆತ್ತಂ

ಸೊಬಗಿನ ಬಳ್ಳಿಯ ಒನೆಯ ಮುಗುಳಿನಲ್ಲಿ ಕುಸುಮ ಚೌಪದಿಯಿಂದ ರಚನೆಗೊಂಡ ಪದ್ಯಗಳಿವೆ. ಇದು ಯಕ್ಷಗಾನದ ಭೈರವಿ ಝುಂಪೆರೂಪದ ವಿವಿಧ ವಿನ್ಯಾಸಗಳಲ್ಲಿ ಒಂದಾಗಿದೆ. [೨೧]

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ

ಇದರಲ್ಲಿ ನಾಲ್ಕು ಪಾದಗಳಿದ್ದು ಕ್ರಮವಾಗಿ ಒಂದು ಮತ್ತು ಮೂರನೆ ಸಾಲಿನಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು, ಎರಡು ಮತ್ತು ನಾಲ್ಕನೆಯ ಸಾಲಿನಲ್ಲಿ ಐದು ಮಾತ್ರೆಯ ಮೂರು ಗಣಗಳು ಮತ್ತು ಕಡೆಯಲ್ಲಿ ಒಂದು ಗುರು ಉಳಿಯುವುದು. ಒಂದು ವೇಳೆ ಕಡೆಯಲ್ಲಿ ಲಘು ಉಳಿದಿದ್ದರೂ ಅದನ್ನು ಗುರುವೆಂದೇ ಪರಿಗಣಿಸಬೇಕು.

ಮಾರಪಿತ	ನಿಗೆ ಲಕ್ಷ್ಮಿ	ನಾರಾಯ	ಣಗೆಯೋಗಿ	೫೫೫೫
ವಾರವಂ	ದಿತಸದಾ	ನಂದಮಯ	ಗೆ	೫೫೫ಗುರು
ಶ್ರೀರಮಾ	ಧವಕರುಣ	ವಾರಿನಿಧಿ	ಭಕ್ತಜನ	೫೫೫೫
ವಾರಿರುಹ	ತರಣಿಭವ	ದೂರಹರಿ	ಗೆ	೫೫೫ಗುರು

ಈ ಮೇಲಿನ ರಚನೆಯ ಹಿನ್ನಲೆಯಲ್ಲಿಯೇ ಸೊಬಗಿನ ಬಳ್ಳಿಯ ಕುಸುಮ ಚೌಪದಿ ಪದ್ಯವನ್ನು ವಿಭಾಗಿಸಬಹುದು.

ನಾರದಂ ಬರಲೊಮ್ಮೆ ನೋಡಿ ರಕ್ಕಸರಾಯ

ನೇರಿದಾರನ್ನವಣೆಯಿಳಿದಿದಿರ್ಗೆ

ಸಾರಿ ಕೆಯ್ವಿಡಿದೊಯ್ದು ಕುಳ್ಳಿರಿಸಿ ಮನ್ನಿಸ

ಲ್ಕಾರಯ್ದು ನಗುತೆ ಕಿತ್ತಡಿ ನುಡಿದನು

ಸೊಬಗಿನ ಬಳ್ಳಿಯ ನಾಲ್ಕನೆಯ ಮುಗುಳಿನ ಪದ್ಯಗಳು ಲಲಿತ ರಗಳೆಯಲ್ಲಿ ರಚನೆಯಾಗಿವೆ. ಇದೂ ಕೂಡ ಯಕ್ಷಗಾನ ಪ್ರಕಾರದಲ್ಲಿ ಬಳಕೆಯಾಗಿರುವ ಒಂದು ಛಂದೋಪ್ರಕಾರ. ಇದು ಯಕ್ಷಗಾನದ ಭೈರವಿ ಝುಂಪೆ ತಾಳದ ಇಮ್ಮಡಿ ರಚನೆಯಾಗಿದೆ. ಇದನ್ನು ಯಕ್ಷಗಾನದಲ್ಲಿ ತುಜಾವಂತು ಝಂಪೆತಾಳ ಎಂಬ ಛಂದಸ್ಸಿನಿಂದ ಕರೆಯುತ್ತಾರೆ. [೨೨]

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ :

ಇಲ್ಲಿ ಎರಡೆರಡು ಪಾದಗಳ ರಚನೆ ಮಾತ್ರ ಕಂಡುಬರುವುದು. ಮತ್ತು ಇಲ್ಲಿ ಐದು ಮಾತ್ರೆಯ ನಾಲ್ಕುಗಣಗಳು ಎರಡು ಸಾಲುಗಳಲ್ಲಿ ಸಮನಾಗಿ ಬರುತ್ತವೆ. ಈ ಒಂದು ಪ್ರಕಾದಲ್ಲಿಯೇ ವಿವಿಧ ವಿನ್ಯಾಸದ ರಚನೆಗಳನ್ನು ಕಾಣಬಹುದಾಗಿದೆ. ಇದು ಈಗಾಗಲೇ ಗಮನಿಸಿದ ಭೈರವಿ ಝುಂಪೆ ಯ ಇಮ್ಮಡಿ ವಿನ್ಯಾಸ. ನಾಲ್ಕು ಪಾದಗಳಲ್ಲಿ ಕ್ರಮವಾಗಿ ೨೦,೧೯,೨೦,೧೯ ಮಾತ್ರೆಗಳು ಬರುತ್ತವೆ. ಏಳು ಪಂಚಮಾತ್ರಗಣ ಮತ್ತು ಒಂದು ಚರಣದ ಆವರ್ತ ಎರಡು ಬಾರಿ ಉಂಟಾದಾಗ ಈ ಬಂಧ ಸಿದ್ಧಿಸುತ್ತದೆ. ಸಮಪಾದಾಂತ್ಯದ ಚರಣವನ್ನು ಪದ್ಮಗಣ ಎದು ತಿಳಿಯಬಹುದು.

ಮರಿದುಂಬಿ	ಗುರುಳೆಅಹಿ	ವೇಣಿಪ	ಲ್ಲವಪಾಣಿ	೫೫೫೫
ಮಿರುದರ್ಪ	ವಿಧುಫಾಲೆ	ಮಣಿದರ್ಪ	ಣಕಪೋಲೆ	೫೫೫೫
ಮೆರೆವತಿಲ	ಕವನಿಟ್ಟು	ಮಣಿಭೂಷ	ಣವತೊಟ್ಟು	೫೫೫೫
ಧುರದಸ	ನ್ನಹತರಿಸಿ	ಧನುಶರಂ	ಗಳಧರಿಸಿ	೫೫೫೫

ಈ ಮೇಲಿನ ಹಿನ್ನೆಲೆಯಲ್ಲಿಯೆ ಮುಳಿಯರ ಸೊಬಗಿನ ಬಳ್ಳಿಯ ನಾಲ್ಕನೆಯ ಮುಗುಳಿನ ಲಲಿತರಗಳೆಯ ರಚನೆಯನ್ನ ಹೀಗೆ ವಿಭಾಗಿಸಬಹುದು.

ಬಗೆಯೊಳಗೆ	ಬೇಸತ್ತು	ಮನೆಗೆಲಸ	ಮಂಮಾಡಿ
ಉಗುವಕ	ಣ್ಣೀರುಕಾ	ಲಾಗಿಹರಿ	ಯಲುಕೂಡಿ
ರಕ್ಕಸನ	ಬಾಣಸಿಗ	ಳೊಮ್ಮೆತಾ	ನೆಕ್ಕಟಿಯ
ಲೊಕ್ಕಣಿಸಿ	ಕೊಳುತೆಸು	ಯ್ಯುತ್ತಿದ್ದ	ಳೀಪರಿಯ

ಸೊಬಗಿನ ಬಳ್ಳಿಯ ೫ನೇ ಮುಗುಳಿನಲ್ಲಿ ಪದ್ಯಗಳು ಸಾಂಗತ್ಯದಲ್ಲಿ ರಚನೆಯಾಗಿವೆ. ಇದು ಯಕ್ಷಗಾನದ ಛಂದಸ್ಸೂ ಹೌದು. ಅಥವಾ ಲಯದಿಂದಾಗಿ ಇದು ಯಕ್ಷಗಾನದ ರೂಪಕತಾಳಕ್ಕೆ ಹೆಚ್ಚು ಹೊಂದಿಕೆಯಾಗುತ್ತವೆ.[೨೩]

ಸಾಂಗತ್ಯದ ಲಕ್ಷಣ ಮತ್ತು ಮೂರನೇ ಪಾದಗಳಲ್ಲಿ ನಾಲ್ಕು ವಿಷ್ಣುಗುಣಗಳೂ, ಎರಡು ಮತ್ತು ನಾಲ್ಕನೇ ಪಾದಗಳ್ಲಿ ಎರಡು ವಿಷ್ಣು ಮತ್ತು ಒಂದು ಬ್ರಹ್ಮಗಣವು ಬಂದಾಗ ಅದು ಸಾಂಗತ್ಯವಾಗುತ್ತದೆ.

ಭೀಮನ ಪ್ರಿಯದೊಳು ಕಾಮಿನಿ ಕರೆವಳು	ವಿ: ವಿ: ವಿ: ವಿ
ಆ ಮಹಾತ್ಮನ ತಳ್ಳಿ ಸುವೆಳು	ವಿ: ವಿ: ಬ್ರ
ಕಾಮನ ಕಲೆಯೊಳು ನೇಮವಾಗಿರುವಳು	ವಿ: ವಿ: ವಿ: ವಿ
ಪ್ರೇಮದಿ ಮಾತನಾ ಡುವಳು	ವಿ: ವಿ: ಬ್ರ

ಮುಳಿಯರ ಸೊಬಗಿನ ಬಳ್ಳಿಯ ಐದನೆಯ ಮುಗುಳುನಲ್ಲಿರುವ ಈ ಸಾಂಗತ್ಯದ ರಚನೆಯನ್ನು ಈ ಹಿನ್ನೆಲೆಯಲ್ಲಿ ಹೀಗೆ ವಿಭಾಗಿಸಬಹುದು.

ಮಾಡಿದುದನು ತಿಂದೆ ತೀರಬೇಕೆಂಬೊಂದು
        ನಾಡಿನ ನುಡಿಗೆಡೆಯಲ್ಲಿ
ಜೋಡಾದುದೆಂದೆನೆ ಕಿರುಗೂ ಸೊಂದಂ ಕೆಯ್ಯ
        ಳಾಡಿಸುತೆಯ್ದಿ ರಕ್ಕಸನು

ಸೊಬಗಿನ ಬಳ್ಳಿಯ ೬ನೇ ಮುಗುಳಿನ ಪದ್ಯಗಳು ಮಂದಾನಿಲ ರಗಳೆಯಲ್ಲಿವೆ. ಯಕ್ಷಗಾನ ಕವಿಗಳು ಈ ಲಯಕ್ಕೆ 'ಮಾರವಿ ಏಕ ತಾಳ' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಮಂದಾನಿಲ ರಗಳೆ ಅಥವಾ ಮಂದಾನಿಲ ಚೌಪದಿಯಲ್ಲಿ ನಾಲ್ಕು ಮಾತ್ರೆಯ ಸಮಾನ ಗಣಗಳು ಕಂಡುಬರುತ್ತವೆ. ಈ ಸೊಬಗಿನ ಬಳ್ಳಿಯಲ್ಲಿ ಬಳಕೆಯಾಗಿರುವ ಈ ಛಂದೋ ಪ್ರಕಾರವನ್ನೇ ಡಿ.ಎಸ್.ಕರ್ಕಿಯವರು ತಮ್ಮ ಛಂದೋ ವಿಕಾಸದಲ್ಲಿ ಗುರುತಿಸಿದ್ದು ಇದು ಇನ್ನೂ ಹಲವಾರು ವಿನ್ಯಾಸಗಳಲ್ಲಿ ಬಳಕೆಯಾಗಿರುವುದನ್ನು ಉದಾಹರಿಸುತ್ತಾರೆ.[೨೪]

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ.

ಇಂತಾ	ತಾಮ್ರ	ಧ್ವಜನಾ	ಡಿದನುಡಿ	೪: ೪: ೪: ೪
ಕಾಂತೇ	ಯನುಕೇ	ಳುತತಾ	ರೋಷದಿ	೪: ೪: ೪: ೪
ಆಂತುಂ	ಧನುಕಾ	ಮಾರಿಯೆ	ನಲ್ಕೇ	೪: ೪: ೪: ೪
ನಿಂತಾ	ಡಿದನವ	ನೊಂದು	ತ್ತರಮಂ	೪: ೪: ೪: ೪

ಮುಳಿಯರ ಸೊಬಗಿನ ಬಳ್ಳಿಯ ೬ನೇ ಮುಗುಳಿನ ಮಂದಾನಿಲ ರಗಳೆಯನ್ನು ಮೇಲಿನ ಛಂದಸ್ಸಿಗನುಗುಣವಾಗಿ ಹೀಗೆ ಮರುವಿಂಗಡಿಸಬಹುದು.

ಬೆಕ್ಕಸ ಮುತ್ತೆ ಲ್ಲೆಡೆಯಂ ನೋಡೇ
ಹಕ್ಕಿಗ ಳುಲಿಯೆಂ ದೇಬಗೆ ಯೋಡೇ
ಚೆಕ್ಕನೆ ಕಂಡೊಂ ದೆಡೆ ಕಣ್ಬಗೆಯಂ
ಮಿಕ್ಕಾ ಕೆತ್ತಡಿ ವರಿಜಂ ರಯ್ಯಂ

ಸೊಬಗಿನ ಬಳ್ಳಿಯಲ್ಲಿ ೭ ಮತ್ತು ೮ನೆಯ ಮುಗುಳಿನ ಪದ್ಯಗಳು ಕುಸುಮ ಷಟ್ಪದಿಯಲ್ಲಿವೆ. ಮೇಲ್ನೋಟಕ್ಕೆ ಇದು ಕುಸುಮ ಷಟ್ಪದಿ ಎನಿಸಿದರೂ ಯಕ್ಷಗಾನದಲ್ಲಿ ಇದೊಂದು ಛಂದೋ ಪ್ರಕಾರವೂ ಹೌದು. ಇದನ್ನು ಭೂಪಾಳಿ ಝಂಪೆತಾಳ ಎಂದು ಕರೆಯುತ್ತಾರೆ.[೨೫]

ಇದರ ಲಕ್ಷಣ ಮತ್ತು ಲಕ್ಷ್ಯ ಹೀಗಿದೆ.

ಇದು ಪಂಚಮಾತ್ರಾಯುಕ್ತ ಗಣಗಳುಳ್ಳ ಷಟ್ಪದಿ. ಪಾದಗಳಲ್ಲಿ ಹ್ರಸ್ವಪಾದಗಳಲ್ಲಿ ಎರಡೆರಡು ಪಂಚ ಮಾತ್ರಾಗಣಗಳೂ, ದೀರ್ಘಪಾದಗಳಲ್ಲಿ ಮೂರು ಪಂಚ ಮಾತ್ರಾಗಣ ಮತ್ತು ಒಂದು ಗುರು ಸೇರಿರುತ್ತದೆ.

ಸೃಷ್ಟಿಯಲಿ	ನಡೆಯುವವಿ	ಶಿಷ್ಟಕ	ರ್ಮಂಗಳಲಿ	೫: ೫: ೫: ೫
ಶಿಷ್ಟರಿಂ	ಪ್ರಥಮಪೂ	ಜೆಯನುಕೊಂ	ಬಾ	೫: ೫: ೫ ಗುರು
ಇಷ್ಟದಾ	ಯಕರಭ	ಕ್ತರಕ್ಷಹ	ರಬೆಲ್ಲಾ	೫: ೫: ೫: ೫
ಕಟ್ಟೆಗಣ	ಪತಿಯಂಪ್ರಿ	ಗಭಿವಂದಿ	ಪೇ	೫: ೫: ೫ ಗುರು

ಸೊಬಗಿನ ಬಳ್ಳಿಯ ೮ನೇ ಮುಗುಳಿನ ಈ ಕೆಳಗಿನ ಪದ್ಯ ಯಕ್ಷಗಾನ ಛಂದಸ್ಸಿನ ಭೂತಾಳಿ ಝಂಪೆತಾಳದ ಮಾದರಿಯಲ್ಲಿರುವುದನ್ನು ನೋಡಬಹುದು.

ಮೂರಿಗಾ	ಳಿಯೊಳೊಂದಿ	ಪಾರುವಂ	ತಾಸುದ್ದಿ
ಯೂರಕಿವಿ	ಯಡರಿನಾ	ಲಗೆಯೊಳಿಳಿ	ದುದು
ಸಾರಿತ್ತು	ಚೆಕ್ಕಸಂ	ಬೀರಿತ್ತು	ಬಗೆಗೆತಲೆ
ದೋರಿತ್ತು	ರಾಣಿವಾಡ	ದೋಳಿತ್ತ	ಲುಂ

ಈ ಎಲ್ಲ ದೃಷ್ಟಿಯಿಂದ ಮುಳಿಯ ತಿಮ್ಮಪ್ಪಯ್ಯ ಮತ್ತು ಕೊಳಂಬೆಯವರ ಕಾವ್ಯಗಳಲ್ಲಿ ಯಕ್ಷಗಾನದ ಪ್ರಭಾವವಿದೆ ಎನ್ನಬಹುದು. ಅಲ್ಲದೆ ಮುಳಿಯರು ಸ್ವತಃ ಯಕ್ಷಗಾನ ಕಲಾವಿದರಾಗಿದ್ದರು. ಅವರ ಕಾವ್ಯದ ಛಂದಸ್ಸಿನ ಮೇಲೆ ಯಕ್ಷಗಾನದ ಪ್ರಭಾವವಿರುವುದನ್ನು ಗುರುತಿಸುವ ಸಲುವಾಗಿಯೇ ಈ ರೀತಿ ವಿಂಗಡಣೆಯನ್ನು ಮಾಡಲಾಗಿದೆ.

೩. ಕಾಲೂರ ಚೆಲುವೆ : ಛಂದಸ್ಸು

ಅಚ್ಚಗನ್ನಡ ಕವಿಗಳಲ್ಲಿ ಕೊನೆಯವರಾದ ಕೊಳಂಬೆ ಪುಟ್ಟಣ್ಣಗೌಡರು ವಸ್ತು, ಛಂದಸ್ಸಿನ ಬಳಕೆಯಲ್ಲಿ ಆಂಡಯ್ಯ ಮತ್ತು ಮುಳಿಯರಿಗಿಂತ ಭಿನ್ನರಾಗಿದ್ದಾರೆ. ಆಂಡಯ್ಯ, ಮುಳಿಯರು ತಮ್ಮ ಅಚ್ಚಗನ್ನಡ ಕಾವ್ಯ ರಚನೆಯಲ್ಲಿ ಹೇರಳವಾಗಿ ತದ್ಭವ ಪದಗಳನ್ನು ಬಳಸಿದ್ದಾರೆ. ಮತ್ತು ಕಾವ್ಯ ವಸ್ತುವನ್ನು ಪುರಾಣ ಮೂಲದಿಂದ ತೆಗೆದುಕೊಂಡಿದ್ದಾರೆ. ಆದರೆ ಕೊಳಂಬೆಯವರು ಜನಪದೀಯ ವಸ್ತುವನ್ನಾಧರಿಸಿದ ದೇಶೀ ವಸ್ತುವಿನ ಜೊತೆಗೆ ದೇಶೀ ನುಡಿಗಳಿಂದ ಕಾವ್ಯ ರಚಿಸಿದ್ದಾರೆ. ಮತ್ತು ಕಾವ್ಯ ನಿರ್ವಹಣೆಯ ತಂತ್ರಗಾರಿಕೆಯಲ್ಲೂ ನಾವಿನ್ಯತೆಯನ್ನು ಮೆರೆದಿದ್ದಾರೆ.

ಪುಟ್ಟಣ್ಣಗೌಡರ ಕಾಲೂರ ಚೆಲುವೆಯು ಹೊಸಗನ್ನಡದ ಒಂದು ಛಂದೋ ಪ್ರಕಾರ ಸಾಮಾನ್ಯವಾಗಿ ಇದನ್ನು ಸರಳ ರಗಳೆ ಎಂದು ಕರೆದಿರುವುದು ಕಂಡು ಬರುತ್ತದೆ. ಛಂದಸ್ಸಿನ ದೃಷ್ಟಿಯಿಂದ ಕಾಲೂರ ಚೆಲುವೆ ಹೊಸಗನ್ನಡ ಛಂದೋಪ್ರಕಾರಕ್ಕೆ ಸೇರಿದೆ.

ಕಡಲಳಿಯನೇಂ ಮಗುವೇ?
        ಪಾಲ್ಗಡಲ ತೊಟ್ಟಿಲಲಿ
ಬಿಡದೆ ತೂಗಲಿ! ಬೆಟ್ಟ
        ಳಿಯನುಂ ಬಳವ ಕೂಸೆ
ತಡೆಯಿರದ ಬಾನ್ಬಯಲೊ
        ಳಾಡಲೇಂ? ಮಗಳಲ್ತೆ
ನುಡಿವೆಣ್ಗೆ ಕಯ್ಗೊಳಿಸಿ
        ಬಾತಾಯೆ ಪರಸಿ (ಕಾ.ಚೆ.ಪದ್ಯ - ೧)

ಇದರಲ್ಲಿ ಲಲಿತ ರಗಳೆಯ ಲಯ ಇದೆಯೆಂದು ತಿಳಿದು ಈ ಅಭಿಪ್ರಾಯಕ್ಕೆ ಬರಲಾಗಿದೆ.[೨] ಆದರೆ ಇದು ಯಕ್ಷಗಾನದ ಒಂದು ಛಂದೋಪ್ರಕಾರವೆಂದು ಈ ಕೆಳಗಿನ ನಿದರ್ಶನದಿಂದ ಸ್ಪಷ್ಟಪಡಿಸಬಹುದಾಗಿದೆ.

ಕಡಲಳಿಯನೇಂಮಗುವೆ ಪಾಲ್ಗಡಲ ತೊಟ್ಟಿಲಲಿ
ಬಿಡದೆ ತೂಗಲಿ ಬೆಟ್ಟಳಿಯನುಂ ಬಳವೆ ಕೂಸೆ ||
ತಡೆಯರದೆ ಬಾನ್ಬಯಲೊಳಾಡಲೇಂ ಮಗಳಲ್ತೆ
ನುಡಿವಣ್ಗೆ ಕಯ್ಗೊಳಿಸಿ ಬಾತಾಯೆ ಪರಸೆ. ||

ಇದು ದಾಸರ ಹಾಡುಗಳಲ್ಲಿ ಅಥವಾ ಯಕ್ಷಗಾನಗಳಲ್ಲಿ ಕಂಡುಬರುವ ಮಾರವಿ ಝಂಪೆತಾಳ ಎಂಬ ಛಂದಸ್ಸು. ಈ ಛಂದಸ್ಸಿನಲ್ಲಿ ಒಟ್ಟು ನಾಲ್ಕು ಸಾಲುಗಳಿದ್ದು, ಮೊದಲ ಸಾಲಿನಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು. ಎರಡನೆಯ ಸಾಲಿನಲ್ಲಿ ಐದು ಮಾತ್ರೆಯ ಒಂದು ಗಣ ಮೂರು ಮಾತ್ರೆಯ ಒಂದು ಗಣ ಬರುತ್ತದೆ.

ಕೊಳಂಬೆ ಪುಟ್ಟಣ್ಣಗೌಡರು ಈಗಾಗಲೇ ಹೇಳಿರುವಂತೆ ಯಕ್ಷಗಾನ ಕಲಾವಿದರು, ಕವಿಯೂ ಹೌದು. ಯಕ್ಷಗಾನದ ಕೃತಿಗಳಲ್ಲಿ ಬರುವ ಈ ಛಂದಸ್ಸನ್ನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಇಂತಹ ಛಂದಸ್ಸುಗಳು ಗೇಯತೆಗೆ ಸಂಬಂಧಿಸಿದವುಗಳಾಗಿವೆ. ಪೌರಾಣಿಕ ಇಲ್ಲವೆ ಐತಿಹಾಸಿಕ ಕತೆಗಳಿಗೆ ವೃತ್ತಗಳು, ಕಂದಪದ್ಯಗಳು, ಬಹುಮಟ್ಟಿಗೆ ಒಗ್ಗಿಕೊಳ್ಳುತ್ತವೆ. ಕಾಲೂರ ಚಲುವೆಯಂತಹ ಹಳ್ಳಿಗಳ ಬದುಕಿನ ಕಥಾನಕಗಳಿಗೆ ಅವು ಉಪಯೋಗಕ್ಕೆ ಬರಲಾರವು ಎಂಬುದರಿಂದ ಬಹುಶಃ ಕೊಳಂಬೆಯವರು ಈ ಛಂದಸ್ಸನ್ನು ಪ್ರಯೋಗಿಸಿದರು. ಆಗಿನ್ನೂ ಹೊಸಗನ್ನಡದಲ್ಲಿ ಹೊಸ ಹೊಸ ಛಂದೋ ಪ್ರಯೋಗಗಳು ವಿರಳವಾಗಿದ್ದರಿಂದ ಕೊಳಂಬೆಯವರು ಇಂತಹ ರಚನೆಗಳನ್ನು ಬಳಸಿದ್ದಾರೆ. ಇದಲ್ಲದೆ ಕರಾವಳಿಯಲ್ಲಿ ಯಕ್ಷಗಾನ ಜನಪ್ರಿಯವಾದ ಸಾಹಿತ್ಯ ಪ್ರಕಾರವಾದುದರಿಂದಲೂ ಕೊಳಂಬೆಯವರು ಯಕ್ಷಗಾನದ ಛಂದಸ್ಸನ್ನು ಬಳಕೆ ಮಾಡಿದ್ದಾರೆ.

ಅಚ್ಚಗನ್ನಡ ಕಾವ್ಯಗಳು ಛಂದಸ್ಸಿನ ದೃಷ್ಟಿಯಿಂದ ನೋಡಿದಾಗಲೂ ವಿಶಿಷ್ಟವಾಗಿವೆ. ಕಬ್ಬಿಗರ ಕಾವದಲ್ಲಿ ಸಂಸ್ಕೃತ ಛಂದಸ್ಸಿನ ಪ್ರಯೋಗವು ಐತಿಹಾಸಿಕ ನೆಲೆಯಿಂದ ಬಂದದ್ದು. ಎಂದರೆ ಸಂಸ್ಕೃತ ಛಂದೋಪ್ರಕಾರಗಳಲ್ಲಿಯೇ ಕಾವ್ಯ ರಚಿಸುತಿದ್ದ ಕಾಲವದು. ಆದರೆ ಆ ವೃತ್ತಗಳನ್ನು ಅರ್ಥಾನುಸಾರಿಯಾಗಿ ವಿಭಜಿಸಿದಾಗ, ಅವು ಆಡುಮಾತಿನ ಸಹಜ ಅಭಿವ್ಯಕ್ತಿಗಳಂತೆ ಕಂಡಬರುತ್ತವೆ, ದೇಶೀಯವಾಗಿವೆ.

ಆಧುನಿಕ ಕವಿಗಳಿಬ್ಬರ ಕಾವ್ಯಗಳು ಶುದ್ಧ ದೇಶೀಯ ಛಂದಸ್ಸಿಗೆ (ಯಕ್ಷಗಾನ) ಸಂಬಂಧಿಸಿದವು. ಅವುಗಳ ಸಾಮ್ಯತೆ ತನಗೆ ತಾನೇ ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ಛಂದೋ ವಿನ್ಯಾಸದಲ್ಲಿಯೂ ಇವುಗಳ ಪರಸ್ಪರ ಸಂಬಂಧವನ್ನು ಅಲ್ಲಗೆಳೆಯಲಾಗದು.

❐

ಅಧ್ಯಾಯ -೮

ಸಂಸ್ಕೃತ ಮತ್ತು ಅಚ್ಚಗನ್ನಡ ಕಾವ್ಯಭಾಷೆ

ಪ್ರಾಚೀನ ಕಾಲದಿಂದಲೂ ಸಂಸ್ಕೃತ ಮತ್ತು ಕನ್ನಡದ ಸಂಬಂಧ ನಿರಂತರವಾಗಿ ಬೆಳೆದುಕೊಂಡು ಬಂದಿದೆ. ಇದರ ವ್ಯಾಪಕವಾದ ಪರಿಣಾಮ ಕನ್ನಡ ಕಾವ್ಯದಲ್ಲಿ ಕಂಡುಬರುತ್ತದೆ. ಈ ವಿಶಿಷ್ಟವಾದ ಸಂಬಂಧದ ಕುರಿತಾಗಿ ಶ್ರೀನಿವಾಸಮೂರ್ತಿಯವರು ಕನ್ನಡ ಕಾವ್ಯಭಾಷೆ ಮತ್ತು ಸಂಸ್ಕೃತ ಎಂಬ ನಿಬಂಧವನ್ನು ರಚಿಸಿದ್ದಾರೆ. ಅಚ್ಚಗನ್ನಡ ಕವಿಗಳು ಆತಂಕ ವ್ಯಕ್ತಪಡಿಸುವ ಈ ಸಂಬಂಧ ಯಾವ ರೀತಿಯದು ಎಂಬ ವಿವರಣೆ ಈ ಸಂದರ್ಭದಲ್ಲಿಯೂ ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ಅಧ್ಯಾಯದ ಮೊದಲ ಭಾಗದಲ್ಲಿ ಸಂಸ್ಕೃತ ಮತ್ತು ಕನ್ನಡ ಕಾವ್ಯಭಾಷೆಯ ಸಂಬಂಧದ ಕುರಿತು ಡಾ. ಶ್ರೀನಿವಾಸಮೂರ್ತಿಯವರ ವಿಚಾರಗಳನ್ನು ಈ ಅಧ್ಯಾಯದ ಮೊದಲ ಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಭಾಗ - ೧

ಕನ್ನಡ ಕಾವ್ಯದ ಪ್ರಧಾನ ವೈಶಿಷ್ಟ್ಯಗಳು

ಕನ್ನಡ ಭಾಷೆಯು ಸಂಸ್ಕೃತ ಪ್ರಭಾವಕ್ಕೆ ಒಳಗಾಗಿರುವುದನ್ನು ಹಲ್ಮಿಡಿ ಶಾಸನದಿಂದಲೇ (ಕ್ರಿ.ಶ.೪೫೦) ಗುರುತಿಸಬಹುದು. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ ಮತ್ತು ದೇಶಿ ಛಂದಸ್ಸಿನ ಎಳೆಗಳನ್ನು ಗುರುತಿಸಬಹುದಾದರೂ ಸ್ವತಂತ್ರವಾದ ಕನ್ನಡತನವನ್ನು ಗುರುತಿಸುವುದು ಕಷ್ಟ. ಜನಬಳಕೆಯಲ್ಲಿ ಅಚ್ಚಗನ್ನಡ ಪ್ರಯೋಗಗಳಿರಬಹುದಾದರೂ ಬರವಣಿಗೆಯಲ್ಲಿ ಸಂಸ್ಕೃತ ಪ್ರಭಾವವಿತ್ತು, ಒಟ್ಟಾರೆ ಪೂರ್ವದ ಕನ್ನಡ ಭಾಷೆಯ ಪದಗಳು ಸಂಸ್ಕೃತ ವ್ಯಾಕರಣ ಮಾದರಿಯ ನಿಯಮಗಳಿಗೆ ಒಳಪಟ್ಟು ಕನ್ನಡವು ಲಿಖಿತ ಭಾಷೆಯಾಯಿತು. ಮುಖ್ಯವಾಗಿ ಸಂಸ್ಕೃತ ಭಾಷೆಗೆ ದ್ರಾವಿಡ ಮೊದಲಾದ ಭಾಷೆಗಳಿಂದ ಪದಗಳು ಸೇರಿಕೊಂಡಾಗ ಅವು ಸಂಸ್ಕೃತ ವ್ಯಾಕರಣ ನಿಯಮಗಳಿಗನುಸಾರವಾಗಿ ಹೊಂದಿಕೊಳ್ಳುತ್ತವೆ. ಆದರೆ ದ್ರಾವಿಡ ಭಾಷೆಗಳಿಗೆ ಸಂಸ್ಕೃತ ಪದಗಳು

ಸೇರಿಕೊಂಡಾಗ ಅವು ಆ ಭಾಷೆಯ ನಿಯಮಗಳಿಗನುಸಾರವಾಗಿ ಸೇರಿಕೊಳ್ಳುವುದಿಲ್ಲ. ಸಂಸ್ಕೃತ ನಿಯಮಗಳನ್ನೇ ಉಳಿಸಿಕೊಳ್ಳುತ್ತವೆ.[೧]

ಹೀಗಾಗಿ ಕನ್ನಡದ ಮಟ್ಟಿಗೆ ಹೇಳುವುದಾದರೆ ಕನ್ನಡ ಭಾಷೆಯ ಒಂದು ಭಾಗವೆಂದು ತಿಳಿಯುವಷ್ಟರ ಮಟ್ಟಿಗೆ ಬದಲಾವಣೆಗೊಳಗಾದ ಸಂಸ್ಕೃತದ ಪ್ರಯೋಗಗಳಿವೆ. ಅಲ್ಪಪ್ರಮಾಣದಲ್ಲಿ ಕನ್ನಡದ ಪ್ರಭಾವಕ್ಕೆ ಒಳಗಾಗಿರುವ ಸಂಸ್ಕೃತ ಪದಗಳೂ ಇವೆ. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ಪ್ರಾಕೃತದ ಮೂಲಕ ಸಂಸ್ಕೃತ ಪದಗಳು ಕನ್ನಡಕ್ಕೆ ಬರುತ್ತವೆ. ಯಾವುದೇ ಭಾಷೆಗೆ ಶಿಷ್ಟ ರೂಪದ ಅತ್ಯುತ್ತಮ ಮಾದರಿಯೊಂದು ಸಿದ್ಧಗೊಳ್ಳುವುದು ಕಾವ್ಯದ ಮೂಲಕ. ಹೀಗೆ ಮಾತಿನ ನೆಲೆಯಿಂದ ಹೋಗುತ್ತಾ ಆ ಭಾಷೆಯ ಒಂದು ವಿಶಿಷ್ಟ ರೂಪವೇ ಸಂಸ್ಕೃತವಾಗುತ್ತದೆ. ಕನ್ನಡದ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳ ಮೂಲಕ ಕನ್ನಡವನ್ನು ಈ ಹಿನ್ನಲೆಯಲ್ಲಿ ಸಂಸ್ಕೃತವಾಗಿಸಿದ್ದಾರೆ.[೨]

ಇನ್ನು ಕನ್ನಡ ಕಾವ್ಯಭಾಷೆ ಮತ್ತು ಕಾವ್ಯ ಸ್ವರೂಪದ ಕುರಿತು ಹೇಳುವುದಾದರೆ ಇದರಲ್ಲಿ ಎರಡು ಬಗೆಗಳಿವೆ. ಮೊದಲನೆಯದು ದೇಶೀಯತೆಯಿಂದ ಕೂಡಿದ ಸಂಸ್ಕೃತ ಕಾವ್ಯ ಮಾದರಿ-ಎಂದರೆ ಮಹಾಭಾರತ, ರಾಮಾಯಣದ ಕಥೆಯನ್ನುಳ್ಳ ಕನ್ನಡ ಕಾವ್ಯಗಳು, ಇವುಗಳನ್ನು ಕನ್ನಡ ಮತ್ತು ಕರ್ನಾಟಕದ ಸಂದರ್ಭಕ್ಕೆ ಅನ್ವಯಿಸಿ ಕಾವ್ಯಹೇಳುವುದು.

ಎರಡನೆಯದು ಸಂಸ್ಕೃತ ಪಾಂಡಿತ್ಯ ಪ್ರೌಢಿಮೆಗಳನ್ನು ಕನ್ನಡ ಕಾವ್ಯದಲ್ಲೂ ಪ್ರಯೋಗಿಸುವುದು ಅಥವಾ ವಿರೋಧಿಸುವುದು.[೩] (ಅಚ್ಚಕನ್ನಡ ಕವಿಗಳು ಈ ಸಂಸ್ಕೃತ ಪಾಂಡಿತ್ಯ ಮತ್ತು ಪ್ರೌಢಿಮೆಗಳನ್ನು ವಿರೋಧಿಸುವವರಾಗಿದ್ದಾರೆ.)

ಸಂಸ್ಕೃತದ ಬಗೆಗೆ ಕನ್ನಡ ಅಲಂಕಾರಿಕರ ಅಭಿಪ್ರಾಯ

ಪಂಪನಿಂದ ಹಿಡಿದು ಆಧುನಿಕ ಕವಿಗಳ ಕಾವ್ಯದಲ್ಲಿ ಬಳಕೆಯಾಗಿರುವ ಸಂಸ್ಕೃತ ಶಬ್ದ, ಪದರೀತಿ, ಪರಂಪರೆಗಳ ಚರ್ಚೆ ನಡೆದಿದೆ. ಪ್ರಾಚೀನ ಸಂಸ್ಕೃತ ಅಲಂಕಾರದ ಹಿನ್ನೆಲೆಯಲ್ಲಿಯೇ ಕನ್ನಡ ಭಾಷೆಯ ವೈಶಿಷ್ಟ್ಯತೆಯನ್ನೂ, ಕನ್ನಡದಲ್ಲಿ ಸಂಸ್ಕೃತವು ಪ್ರವೇಶಿಸುವಾಗಿನ ಗುಣ ದೋಷಗಳ ವಿವೇಚನೆಯ ಹಿನ್ನೆಲೆಯಲ್ಲಿಯೇ ಮಾಡಲಾಗಿದೆ. ಕವಿರಾಜಮಾರ್ಗ ಸಂಸ್ಕೃತದ ಮಾದರಿಯಲ್ಲಿಯೇ ರಚಿತವಾಗಿದ್ದರೂ ಕವಿರಾಜಮಾರ್ಗದಲ್ಲಿ ಮಾರ್ಗಕಾರನು ಕನ್ನಡದ ವೈಶಿಷ್ಟ್ಯತೆಯ ಕುರಿತು ಚರ್ಚಿಸಿದ್ದಾನೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಕವಿರಾಜಮಾರ್ಗದಲ್ಲಿಯೇ ಮಾರ್ಗ-ದೇಸಿಗಳ ಕಲ್ಪನೆ ಆರಂಭವಾಗಿದೆ. ಮಾರ್ಗವೆಲ್ಲ ಸಂಸ್ಕೃತವೆಂದೂ, ದೇಸಿಯೆಲ್ಲ ಕನ್ನಡ ಎನ್ನುವ ಭಾವನೆ ಸರಿಯಲ್ಲ. ಕವಿರಾಜಮಾರ್ಗದಲ್ಲಿ

ದೋಸಮನಿತೆಂದು ಬಗೆದುದ್ಭಾಸಿಸಿ
ತಱಿಸಂದು ಕನ್ನಡಂಗಳೊಳೆಂದುಂ
ವಾಸುಗಿಯು ಮಱಿಯಲಾಱದೆ ಬೇಸರಗುಂ
ದೇಸಿಬೇಱೆ ಬೇಱೆಪ್ಪುದಱಂ

ಎಂದರೆ ದೇಸಿ ರೂಪಗಳು ಈಗಿನಂತೆ ಆಗಲೂ ಅನೇಕ. ಅವುಗಳಿಗೆ ಕನ್ನಡಂಗಳ್ ಎಂದು ಹೆಸರು. ಅದನ್ನು ಪ್ರಾಮಾಣೀಕೃತ ಕನ್ನಡ ರೂಪಕ್ಕೆ ಒಗ್ಗಿಸಿಕೊಳ್ಳದಿದ್ದಲ್ಲಿ ದೋಷವಾಗುವುದು.

ದೇಸಿಯು ದೇಶದ ಕಟ್ಟನ್ನು ಮೀರಿದಂತೆ ಕಾಲದ ಕಟ್ಟನ್ನೂ ಮೀರಬೇಕಾದ ಬಗ್ಗೆಯೂ ಎಚ್ಚರವಿದ್ದು. ಮಾತ್ರವಲ್ಲ ತತ್ಕಾಲೀನ ಪ್ರಯೋಗವೂ ದೇಸಿಯ ಇನ್ನೊಂದು ಮುಖ್ಯ ಗುಣವೆಂದಾಯಿತು. ಕವಿರಾಜಮಾರ್ಗಕಾರನ ಕನ್ನಡ ಅಥವಾ ತಿರುಳಕನ್ನಡ ಅಥವಾ ಮಾರ್ಗ ಕನ್ನಡ ಸ್ವರೂಪವೂ ಅದೇ ತುಡಿತವನ್ನು ಹೊಂದಿದೆ. ಅಂದರೆ ಸಂಸ್ಕೃತ ಭಾಷೆಗಿಂತ ಭಿನ್ನವಾದ ಕನ್ನಡದ ಸಂಸ್ಕೃತೀಕರಣ ಅಥವಾ ಮಾರ್ಗವನ್ನು ಕವಿರಾಜಮಾರ್ಗ ಹೇಳುತ್ತದೆ.

ಕನ್ನಡಕ್ಕೆ ದೋಷವಾಗುವ ಸಂಸ್ಕೃತದ ಅವ್ಯಯ, ಸಮಸಂಸ್ಕೃತ, ಕಾರಕ, ವಚನ ದೋಷದ ಜೊತೆಗೆ ಸಂಸ್ಕೃತಕ್ಕೆ ದೋಷವಾಗಿ ಯತಿಭಂಗ, ಪ್ರಾಸದ ಅತಿಶಯದ ಬಗೆಗಿನ ಚರ್ಚೆಯಿದೆ. ಎರಡನೆಯ ಪರಿಚ್ಛೇದದಲ್ಲಿ ದೇಶ್ಯದ ಸೊಗಸು, ಬೆಡಗು ಇದ್ದಾಗಲೂ ಕನ್ನಡದ ಮಾತಿನಲ್ಲಿ ವಿಕಟಾಕ್ಷರಗಳಿಂದ ತೊಡರದ ಸಂಸ್ಕೃತ ಪ್ರವೇಶಿಸುವುದೇ ಮಾರ್ಗವೆಂಬ ಅಭಿಪ್ರಾಯವಿದೆ. ಇಲ್ಲಿಯೂ ಕನ್ನಡದ ಬಿಗಿಯ ಒಂದು ತುದಿಯಲ್ಲಿ ದೇಸಿ, ಇನ್ನೊಂದು ತುದಿಯಲ್ಲಿ ಸಂಸ್ಕೃತವಿರುವುದನ್ನು ಹೇಳುತ್ತಾ ಇದನ್ನೇ ಪಂಪ 'ಮೃದು ಪದಬಂಧ' ವೆಂದು ಕರೆದಿದ್ದಾನೆಂದು ಹೀಗೆ ಕನ್ನಡ ಕಾವ್ಯಭಾಷೆ ರೂಪಗೊಳ್ಳುವ ಮಹತ್ವದ ವಿಚಾರವು ಕವಿರಾಜಮಾರ್ಗದಿಂದ ಬೆಳೆದುಬರುವುದನ್ನು ಉಲ್ಲೇಖಿಸುತ್ತಾರೆ.[೪]

ಸಂಸ್ಕೃತ ಸ್ವೀಕರಣೆಯ ಬಗೆಗೆ ಕನ್ನಡ ಕವಿಗಳ ಪ್ರತಿಕ್ರಿಯೆ

ಪ್ರಾಚೀನ ಕಾಲದಿಂದಲೇ ಕನ್ನಡ ಕವಿಗಳು ಸಂಸ್ಕೃತ ಭಾಷಾ ಸ್ವೀಕರಣೆ ಮಾಡಿದ್ದಾರೆ. ಈ ಭಾಷೆಯೊಂದಿಗಿನ ಪ್ರತಿಕ್ರಿಯೆಯು ಸಂಸ್ಕೃತ ಭಾಷೆ ಕನ್ನಡ ಕಾವ್ಯ ಭಾಷೆ, ಮಾರ್ಗ- ದೇಸಿ, ಪೂರ್ವಕವಿ ಸ್ಮರಣೆ, ಉಲ್ಲೇಖ, ಅನುವಾದ, ಉಕ್ತಿ ವಿಸ್ತರಣೆ, ಕವಿಕಾವ್ಯ ಕಲ್ಪನೆಗಳ ಮೂಲಕವೂ ಆಗಿರಬಹುದು.

ಪಂಪ ರನ್ನಾದಿ ಕವಿಗಳು ಧರ್ಮ, ಕಾವ್ಯಧರ್ಮಗಳೆರಡಕ್ಕೂ ಸಂಸ್ಕೃತದ ಮಾದರಿಯನ್ನು ಅನುಸರಿಸಿದ್ದಾರೆ. ಧರ್ಮವನ್ನು ಸಕಲ ಜನರಿಗೆ ವ್ಯಾಪಿಸುವ ಉದ್ದೇಶದಿಂದ ಕನ್ನಡದಲ್ಲಿ ಬರೆದರೂ ಅದನ್ನು ಪುರಾಣ ರೂಪದಲ್ಲಿ ಬರೆಯದೆ ಮಾರ್ಗ ಕಾವ್ಯದಲ್ಲಿ ರಚಿಸಿದ್ದಾರೆ. ಅನುವಾದದ ಮೂಲಕ ೧೨ ನೇ ಶತಮಾನದಲ್ಲಿ ನಾಗವರ್ಮ ಸಂಸ್ಕೃತದಲ್ಲಿರುವ ಜಗತ್ ಪ್ರಸಿದ್ಧವಾದುದನ್ನು ಕನ್ನಡದಲ್ಲಿ ತರುವ ಉದ್ದೇಶದಿಂದಲೇ ಕಾವ್ಯ ರಚಿಸಿದ. ಇಂದು ಜಗತ್ತಿನ ಸಾಹಿತ್ಯ ಇಂಗ್ಲೀಷಿನ ಮೂಲಕ ಬರುವಂತೆ ಪ್ರಾಕೃತಾದಿಗಳ ಭಾಷೆಗಳ ಸಾಹಿತ್ಯ ಹಿಂದೆ ಸಂಸ್ಕೃತದಲ್ಲಿ ಬಂದಿದೆ.

ಸಂಸ್ಕೃತ, ಕನ್ನಡ ಭಾಷೆಗಳಂತೆ, ಕಾವ್ಯ ಮಾದರಿಗಳನ್ನು ಮಾರ್ಗ-ದೇಸಿ ಎಂದು ಕರೆಯಲಾಗಿದೆ. ಪಂಪನು ಕಾವ್ಯದ ಮಾರ್ಗಶೈಲಿಗೆ ಸಂಬಂಧಿಸಿದಂತೆ ಮಾರ್ಗ ದೇಸಿ ಜೊತೆಗೂಡುವುದರ ಮಹತ್ವವನ್ನು

ಬಗೆಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧ ಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಜೆಯಿಂ ಬಟಿಲ್ದು ತುಂ
ಬಿಗಳನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (ಪಂ.ಭಾರತಂ, ಪ್ರ.ಆ.ಪ.೮)

ಈ ಪದ್ಯದಲ್ಲಿ ಹೇಳಿದ್ದಾನೆ.

ಮಾರ್ಗ ನಿರಂತರವಾಗಿ ದೇಸಿ ಪೊಸದಾಗಿ ಸೇರುವ ವಿಷಯ ಗಮನಾರ್ಹವಾಗಿದ್ದು ಪೊಕ್ಕ ಮಾರ್ಗದಲ್ಲಿ ತಳ್ವುದು ಎಂದರೆ ಮಾರ್ಗದ ನಿರಂತರತೆ, ಸಾತತ್ಯಗಳನ್ನು ಕಾಪಾಡಿಕೊಳ್ಳಬೇಕು. ಹಾಗಾಗಿ ಪಂಪ ಸಾಜದ ಪುಲಿಗೆರೆಯ ತಿರುಳ್ಗನ್ನಡದಲ್ಲಿ ಪ್ರಾಮಾಣೀಕೃತ ಕನ್ನಡವನ್ನು ಕಂಡುಕೊಂಡರೆ, ರನ್ನ ಪುಲಿಗೆರೆ, ಬೆಳ್ವೊಲ ಎರಡರ ಕನ್ನಡವನ್ನು - ಸಂಸ್ಕೃತವನ್ನು ಸಮಾನವಾಗಿ ಸ್ವೀಕರಿಸಿದ್ದಾರೆ.

ಕವಿರಾಜಮಾರ್ಗಕಾರ ಪಂಪನಂತೆ ಮುದ್ದಣ್ಣ ಪ್ರಾಂತದ ಎಲ್ಲೆಯಿಂದ ತಿರುಳ್ಗನ್ನಡ ಗುರುತಿಸದೆ ಸಂಸ್ಕೃತದಂತೆ ಅವನಿಗೆ ತಿರುಳ್ಗನ್ನಡ ಪ್ರಾಚೀನ ಶಿಷ್ಟಕವಿ ಭಾಷೆ. ಕನ್ನಡದಲ್ಲಿ ಸಂಸ್ಕೃತವನ್ನು ಹೊಂದಿಸುವ ಮೂಲಕ ದೇಸಿಯ ತಿರಸ್ಕಾರ ಮುದ್ದಣ್ಣನಲ್ಲಿದೆ. ಆದರೆ ನಯಸೇನ 'ನಾಣ್ನುಡಿ ದೇಸಿವೆತ್ತ ಪೊಸನುಡಿ' ಎಂದು ಹೇಳುವ ಮೂಲಕ ಸಂಸ್ಕೃತದ ಅತಿಯಾದ ಬಳಕೆಯನ್ನು ತಿರಸ್ಕರಿಸಿದ್ದಾನೆ.

೧೨ ನೇ ಶತಮಾನದ ವಚನ ಚಳುವಳಿಯಲ್ಲಿ ವಿಭಿನ್ನ ಸ್ತರದ ಜನರ ನುಡಿಗಳು ಸಾಹಿತ್ಯವನ್ನು ಪ್ರವೇಶಿಸಿದರೂ ಅಲ್ಲಿಯೂ ಸಂಸ್ಕೃತದ ಪ್ರಭಾವ ಕಂಡು ಬರುತ್ತದೆ. ಈ ಅಭಿಜಾತ ಕಾವ್ಯ ಪರಂಪರೆಯಲ್ಲಿ ಸ್ಪಷ್ಟವಾದ ಸಂಸ್ಕೃತದ ವಿರೋಧ ಕಂಡುಬರುವುದು ಆಂಡಯ್ಯನಲ್ಲಿಯೇ

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ

ಬಗೆಗೊಳೆ ಪೇಟಿಲಾಜಿರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ

ಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಬಲ್ಪು ನೆ

ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ (ಕ. ಕಾವ, ಪ. ೧೫. ಪು. ೮೨)

ಸಂಸ್ಕೃತ ಬೆರಸದೆ ಕಾವ್ಯ ಮಾಡಲಾಗದು ಎಂದದ್ದಕ್ಕೆ ಸವಾಲಾಗಿ ಈ ಕಾವ್ಯ ರಚಿಸಿದುದಾಗಿಯೂ, ತನ್ನ ಕಾವ್ಯದಲ್ಲಿ ರನ್ನನ ಮೆಯ್ಸಿರಿ, ಗಜಗನ ಭಿನ್ನಾಣಗಳಿದ್ದು 'ಕನ್ನಡದೊಳ್ಪಿನ ನುಡಿಯಂ ಮುನ್ನಿದಜೊಳೆ ನೋಡಿ ತಿಳಿದುಕೊಳ್ವುದು' ಎಂದು ತನ್ನ ಹೊಸ ಮಾರ್ಗದ ಬಗ್ಗೆ ಹೇಳಿಕೊಂಡಿದ್ದಾನೆ.

'ಮಾತನಾಡಿದ ವೊಲಂದ' ಮೂಲಕ ಬಳಕೆ ಮಾತಿನಲ್ಲಿದ್ದ ಸಂಸ್ಕೃತವನ್ನು ಪ್ರಜ್ಞಾಪೂರ್ವಕವಾಗಿಯೇ ತಡೆದಿದ್ದಾನೆ. ಹಾಗಾಗಿ ಆತನ ಕಾವ್ಯ ತದ್ಭವಗಳ ಆಗರವಾಗಿದೆ. ಇವನಿಗೆ ಸಂಸ್ಕೃತವೆಂದರೆ ಸಂಸ್ಕೃತ ರೂಪದಲ್ಲಿಯೇ ಇರುವ ಪದ. ಹಾಗಾಗಿ ತದ್ಭವ, ಪ್ರಾಕೃತ, ಅಪಭ್ರಂಶಗಳು ಆತನ ಅಚ್ಚಗನ್ನಡಕ್ಕೆ ಹೊಂದಿದವು. ವಸ್ತುವಿನಲ್ಲಿ ನಾವಿನ್ಯ ಸಾಧಿಸಲು ಹೊರಟರೂ ಪಾತ್ರಗಳು ಈಗಾಗಲೇ ಇರುವ ಪ್ರಸಿದ್ಧ ಪರಂಪರೆಗೆ ಸೇರಿದ್ದು. ಈತ ಸೂಚಿಸುವ ಅಚ್ಚಗನ್ನಡ ಹೆಸರುಗಳು ಮುಕ್ಕಣ್ಣ, ನನೆವಿಲ್ಲ ಮುಂತಾದವು. ತ್ರಿಲೋಚನ - ಶಿವ, ಪುಷ್ಪಚಾಪ - ಮನ್ಮಥ ಎಂಬ ಸಂಸ್ಕೃತ ಮಾದರಿಯ ಅರ್ಥ ವೃತ್ತಿಯನ್ನೇ ಪಡೆದಿವೆ. ಭಾಷೆಯ ಹೊರ ರಚನೆ ಬದಲಿಸಿದಾಗಲೂ ಅದರ ಒಳರಚನೆ ಹೇಗೆ ಸಂಸ್ಕೃತ ಪ್ರಭಾವದಲ್ಲಿಯೇ ಇದೆ ಎಂಬುದು ಸಾಂಸ್ಕೃತಿಕ ಸಂಗತಿಯೆಂದು ಅಭಿಪ್ರಾಯಪಟ್ಟಿದ್ದಾರೆ.

ಹೊಸಗನ್ನಡ ಕಾವ್ಯದಲ್ಲಿ ಸಂಸ್ಕೃತ - ಕನ್ನಡವನ್ನು ಶುದ್ಧ ಭಾಷಾ ರೂಪವಾಗಿ ಕಾಣುವ ಬದಲು ಸಾಂಸ್ಕೃತಿಕ ಸವಾಲಾಗಿ ಕಾಣಲಾಗುತ್ತದೆ. ಆಂಗ್ಲಭಾಷೆಯ ಪ್ರಭಾವದಲ್ಲಿ ಹುಟ್ಟಿದ ಹೊಸಗನ್ನಡ ಕಾವ್ಯ ಸಂಸ್ಕೃತವನ್ನು ಹೊಸ

ವಿದೇಶಿಯ ದಾಳಿಯ ಎದುರಿನಲ್ಲಿ ದೇಶ್ಯವಾಗಿಯೇ ಕಂಡಿತು. ಹಾಗಾಗಿ ಇಂದು ಇರುವುದು ಕೇವಲ ಸಂಸ್ಕೃತದ ಪ್ರಾಚೀನ ಪರಂಪರೆಯ ಸೆಳೆತ ಮಾತ್ರ ಎಂಬುದಕ್ಕೆ ಕುವೆಂಪು ರಾಮಾಯಣದ ಉದಾಹರಣೆ ಕೊಡುತ್ತಾರೆ.

ಒಟ್ಟಿನಲ್ಲಿ ಕನ್ನಡ ಕವಿಗಳಲ್ಲಿ ಸಂಸ್ಕೃತ ಬಳಕೆಗೆ ಸಂಬಂಧಿಸಿದಂತೆ ಮೂರು ಬಗೆಯ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಸಂಸ್ಕೃತವನ್ನು ಅನುಕೂಲವೆಂದು ಭಾವಿಸುವ ಪಂಡಿತ ವರ್ಗ, ಕನ್ನಡದಲ್ಲಿ ಸಂಸ್ಕೃತವನ್ನು ಹೊಂದಿಸುವ ಸಮನ್ವಯದ ಮತ್ತೊಂದು ವರ್ಗ. ಸಂಸ್ಕೃತವನ್ನು ಕನ್ನಡಕ್ಕೆ ಆತಂಕಕಾರಿಯೆಂದು ಭಾವಿಸುವ ಮತ್ತೊಂದು ವರ್ಗ.[೫]

ಕನ್ನಡ ವಿಮರ್ಶಕರು ಗುರುತಿಸುವ ಸಂಸ್ಕೃತ ಸಂಬಂಧ

ಹೊಸಗನ್ನಡದ ಆರಂಭ ಘಟ್ಟದಲ್ಲಿ ಬಿ.ಎಂ.ಶ್ರೀ, ಎ.ಆರ್. ಕೃಷ್ಣಶಾಸ್ತ್ರಿ ಭಾಷಿಕ ಸಾಹಿತ್ಯಿಕ ಆಯಾಮವಾಗಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶೈಲಿಗೆ ಸಂಬಂಧಿಸಿದಂತೆಯೂ ಚರ್ಚೆ ನಡೆದಿದೆ. ಕೃತಿನಿಷ್ಠ ವಿಮರ್ಶೆಯ ಭಾಗವಾಗಿ ನಾಡೋಜ ಪಂಪದಲ್ಲಿ ಸಂಸ್ಕೃತ ದೇಸಿಗಳ ಚರ್ಚೆ ಇದೆ. ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಜಿ.ಎಸ್. ಕುಳ್ಳಿಯವರು ರನ್ನನ ಭಾಷೆ ಬಗೆಗೆ, ಕನಕಾದಿಗಳ ಬಗ್ಗೆ ಹಂಪನಾ ಅವರು ಚರ್ಚಿಸಿದ್ದಾರೆ. ಈ ಎಲ್ಲ ವಿಮರ್ಶೆಗಳಲ್ಲಿ ಸಂಸ್ಕೃತ ಶಬ್ದಗಳ ಪ್ರಯೋಗದ ಬಗ್ಗೆಯೂ ಹೆಚ್ಚು ಚರ್ಚೆ ನಡೆದಿದ್ದು. ಆ ಶಬ್ದದ ಆಯ್ಕೆಯಿಂದಾಗುವ ಪ್ರಯೋಜನ, ಕವಿಯ ಮೌಲ್ಯಮಾಪನದ ಮಾದರಿಯಲ್ಲಿ ಆ ಚರ್ಚೆ ನಡೆದಿದೆ.

ಭಾಷೆಯ ಬಳಕೆಯಲ್ಲಿ ಅಥವಾ ಭಾಷೆಯನ್ನು ಉಪಯೋಗಿಸುವ ರೀತಿಯಲ್ಲಿ ಭೇದವಿದ್ದು ದೈನಂದಿನ ಬಳಕೆಗಿಂತ ಮತ್ತು ಬುದ್ಧಿವಂತಿಕೆಯ ಬಳಕೆಗಿಂತ ಭಿನ್ನವಾದ ಭಾಷೆಯ ಕಲಾತ್ಮಕ ಬಳಕೆಯೇ ಕಾವ್ಯ ಅಥವಾ ಸಾಹಿತ್ಯ. ಈ ಸಾಹಿತ್ಯ ಭಾಷೆಯ ಬಗ್ಗೆ ಭಾಷಾಶಾಸ್ತ್ರಜ್ಞರು ತಮ್ಮದೇ ಆದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಸಾಹಿತ್ಯದಲ್ಲಿ ಈ ಭಾಷಿಕ ರಚನೆಯ ವೈಶಿಷ್ಟ್ಯವನ್ನೇ ಶೈಲಿ ಎಂದೂ, ಅದರ ಬಗ್ಗೆ ನಡೆದ ಮೀಮಾಂಸೆಯನ್ನು ಶೈಲಿಶಾಸ್ತ್ರವೆಂದೂ ಹೇಳಲಾಗುವುದು. ಕಾವ್ಯವನ್ನು ಈವರೆಗೆ ರಸ, ರೂಪ, ಅರ್ಥ ನಿಷ್ಠವಾಗಿಯೂ ವ್ಯಕ್ತಿ ಸಮೂಹ ನಿಷ್ಠವಾಗಿ ಅಧ್ಯಯನ ಮಾಡಲಾಗಿದೆ. ಸಾಂಸ್ಕೃತಿಕ ಸಂದರ್ಭದ ಅಸ್ತಿತ್ವದ ಹಿನ್ನೆಲೆಯಿಂದಲೇ ಪರಂಪರೆಯಿಂದ ದತ್ತವಾದ ಅನುಭವದ ಹಿನ್ನೆಲೆಯಲ್ಲಿಯೇ ಶಬ್ದ ಅರ್ಥಗಳಿಂದಾಗಿ ಕಾವ್ಯರೂಪ ಪಡೆದಿರುತ್ತದೆ. ಹಾಗಾಗಿ ಭಾಷಿಕ ಅಧ್ಯಯನವೆಂದರೆ ಶಬ್ದಗಳ ವ್ಯಾಕರಣವಾಗಿರದೆ ಅದರಿಂದ ಹೊರಡುವ ಅರ್ಥವೂ, ಮಾನವ ಸಂಸ್ಕೃತಿಯ ಪ್ರತಿಬಿಂಬವೂ ಆಗಿರುತ್ತದೆ.[೬]

ಸಂಸ್ಕೃತ ಸಾಹಿತ್ಯ ಮೀಮಾಂಸೆ ಕಾವ್ಯದ ಭಾಷೆಯನ್ನು ಕುರಿತಂತೆ ಚರ್ಚೆ ನಡೆಸಿದೆ. ಅಲಂಕಾರ ಕಾವ್ಯದ ಬಿಡಿ ನೆಲೆಗೆ ಸಂಬಂಧಿಸಿದ್ದರೆ, ರೀತಿ ಇಡೀ ನೆಲೆಗೆ ಸಂಬಂಧಿಸಿದ್ದಾಗಿದೆ. ಕೆ.ವಿ. ನಾರಾಯಣರ ಪ್ರಕಾರ ಭಾಷೆಯ ಎಲ್ಲ ಘಟಕಗಳೂ ವ್ಯಂಜಕಗಳಾಗಬಲ್ಲವು ಮತ್ತು ಅದರಿಂದಲೇ ಕಾವ್ಯ ಎನ್ನುವಲ್ಲಿ ವ್ಯಂಜಕಗಳ ಮೂಲಕ ಕಾವ್ಯ ಭಾಷೆಯನ್ನೇ ವಿವರಿಸಲಾಗುತ್ತದೆ.

ಭಾಷೆ ಎಂಬಲ್ಲಿ ಅರ್ಥವತ್ತಾದ ಶಬ್ದ ಘಟಕವನ್ನು ಗ್ರಹಿಸಲಾಗುತ್ತದೆ. ಶಬ್ದ ಸಂಕೇತವಾದರೆ ಅದೇ ರೀತಿಯಲ್ಲಿ ಅರ್ಥ ಸಂವಹನಗೊಳ್ಳುತ್ತದೆ. ಹೀಗೆ ವಕ್ತೃವಿನಿಂದ ಶ್ರೋತೃವಿನ ಕಡೆಗೆ ನಡೆಯುವ ಕ್ರಿಯೆಯನ್ನು ಶಬ್ದ ವ್ಯಾಪಾರ

ಎನ್ನುತ್ತಾರೆ. ಶಬ್ದವು ಅರ್ಥಕೊಡುವ ಕ್ರಿಯೆಯನ್ನು ಶಬ್ದವೃತ್ತಿ ಎನ್ನುತ್ತಾರೆ. ಭರ್ತೃಹರಿಯ ಪ್ರಕಾರ ವಕ್ತೃವಿನ ಇಂಗಿತವೇ ಶ್ರೋತೃವಿನ ಜ್ಞಾನವಾಗಬೇಕೆಂಬ ಒತ್ತಾಯ ದೈನಂದಿನ ವ್ಯವಹಾರದಲ್ಲಿ ಮುಖ್ಯವಾದರೆ ಸಾಹಿತ್ಯ ಕೃತಿಯಲ್ಲಿ ವಕ್ತೃವಿಗೆ ಶ್ರೋತೃವಿನ ಪ್ರತಿಕ್ರಿಯೆಯ ಒತ್ತಡವಿರುವುದಿಲ್ಲ. ಆದ್ದರಿಂದ ಯಾವ ಅರ್ಥ ತಿಳಿಯಲು ಯಾವ ಪದ ಬಳಸುತ್ತಾರೆ ಎನ್ನುವುದಕ್ಕಿಂತ ಯಾವ ನುಡಿಯಿಂದ ಏನು ಅರ್ಥ ಲಭಿಸುತ್ತದೆ ಎನ್ನುವುದು ಮುಖ್ಯ. ಹಾಗಾಗಿ ಶಬ್ದದ ಅರ್ಥ ಮುಖ್ಯಾರ್ಥ ಅಥವಾ ಸಂಕೇತಿತಾರ್ಥಕ್ಕಿಂತ ಭಿನ್ನವಾದುದು ಅನ್ಯ ಶಬ್ದಗಳ, ಅರ್ಥಗಳ ಸಂದರ್ಭದಲ್ಲಿಯೆ ಯಾವುದೇ ಶಬ್ದವನ್ನು ಹೇಳಿದಾಗ ತನ್ನ ಅರ್ಥ ಪೂರ್ಣಗೊಳಿಸಿಕೊಳ್ಳಲು ಅದು ಇನ್ನೊಂದು ಶಬ್ದವನ್ನು ಅಪೇಕ್ಷಿಸುತ್ತದೆ. ಪದಗಳು ಹೊಂದಿಕೊಳ್ಳಲು ಒಂದಾದ ಮೇಲೊಂದು ಒಂದೇ ಕಾಲ ಘಟಕದಲ್ಲಿರಬೇಕು. ಇದರಿಂದ ಒಟ್ಟಾಗಿ ಶಬ್ದಾರ್ಥ ಗ್ರಹಿಸಲು ಸಾಧ್ಯ. ಹೀಗೆ ವಾಕ್ಯದ ಸಂದರ್ಭದಲ್ಲಿಯೇ ಶಬ್ದಕ್ಕೆ ಅರ್ಥ ಮೂಡುತ್ತದೆ ಎನ್ನುವುದು ಮೀಮಾಂಸಕರ ಮತ.

ಪ್ರಾಚೀನ ಅಲಂಕಾರಿಕರಲ್ಲಿ ರೀತಿ ಅಥವಾ ಮಾರ್ಗ ಎನ್ನುವುದು ಕಾವ್ಯ ಒಂದರ ಒಟ್ಟು ಚಲನೆಯನ್ನು ಗುರುತಿಸುವ ಮಾತಾಗಿ ಬಳಕೆಯಾಗಿದೆ. ಕವಿ ಆಯ್ಕೆಮಾಡಿಕೊಳ್ಳುವ ಭಾಷೆ, ಉಪಭಾಷೆಯ ಆಧಾರದ ಮೇಲೆಯೇ ಕಾವ್ಯ ಭಾಷೆಯ ಇಡೀ ನೆಲೆಯ ಮೇಲೆ ಪ್ರಭಾವ ಬೀರುತ್ತದೆ. ಹೀಗೆ ಕವಿ ಸಿದ್ಧ ರೂಪಗಳಲ್ಲಿ ಒಡಕು ತಂದು ಭಿನ್ನ ರೂಪವನ್ನು ಬಳಸುವ ಮೂಲಕ ಕಾವ್ಯಕ್ಕೆ ಹೊಸ ಅಸ್ತಿತ್ವವೊಂದನ್ನು ತರುತ್ತಾನೆ. ಉದಾಹರಣೆಗೆ ಮಹಾಪ್ರಾಣಗಳಿಲ್ಲದ ಭಾಷೆಯಲ್ಲಿ ಬರೆಯುವ ಕವಿ ಮಹಾಪ್ರಾಣಗಳಿಂದ ಬರಬಹುದಾದ ಕರ್ಕಶತೆಯನ್ನು ಸಂಯುಕ್ತ ಸ್ಪರ್ಶಾಕ್ಷರಗಳಿಂದ ಉಂಟು ಮಾಡಬಹುದು.

ನಿತ್ಯದ ಭಾಷೆಯು ಸಹಜ ಸ್ಥಿತಿಯಲ್ಲಿದ್ದು ಕವಿತೆಯ ಭಾಷೆಯು ಪಲ್ಲಟಗಳಿಂದ ಕೂಡಿರುತ್ತದೆ. ಹಾಗಾಗಿ ಅದನ್ನು ಮಾರ್ಗಾಂತರವೆಂದು ಹೇಳಲಾಗುವುದು. ವಕ್ರತೆಗಳನ್ನೇ ಮಾರ್ಗಾಂತರಗಳೆಂದು ಕರೆಯಲಾಗುವುದು. ವಕ್ರತೆ ಸಹೃದಯ ಆಹ್ಲಾದಕಾರಿಯಾದರೂ ಅದು ಕಾವ್ಯ ಕ್ರಿಯೆಯಲ್ಲಿಯೇ ಕಾಣಿಸಿಕೊಳ್ಳುತ್ತದೆ. ಅಕ್ಷರ, ಪದ, ವಾಕ್ಯ ಪ್ರಕರಣಗಳಲ್ಲಿ ಸಮತೆ, ಮಾಧುರ್ಯಗಳು ಕಾವ್ಯಾಸ್ವಾದದ ರೀತಿಯೇ ಆಗಿವೆ. ಜನಗಳು ಕಾವ್ಯ ಕೇಳಲಿ ಎಂದು ಆದಿಕವಿ ಆದಿಕಾವ್ಯ ಬರೆದದ್ದರಲ್ಲಿ ಈ ಗುಣಗಳಿವೆಯೆಂದು ಅಭಿಪ್ರಾಯಪಡುತ್ತಾರೆ.

ನಂತರದಲ್ಲಿ ಕಾವ್ಯದಲ್ಲಿ ಬಳಕೆಯಾಗುವ ವರ್ಣ ಅಕ್ಷರಗಳ ಚರ್ಚೆಯಿದೆ. ಸಂಸ್ಕೃತದಿಂದಾಗಿ ಕನ್ನಡಕ್ಕೆ ಅಕ್ಷರ ವೃತ್ತಗಳು ಬಂದಿವೆ. ಆದರೆ ಕನ್ನಡದಲ್ಲಿ ಪೂರ್ಣಪ್ರಮಾಣದ ವೃತ್ತಗಳಲ್ಲೇ ರಚಿಸಿದ ಮಹಾಕಾವ್ಯವಿಲ್ಲ. ಹಳಗನ್ನಡದಲ್ಲಿ ಸಂಸ್ಕೃತ ಮಹಾಕಾವ್ಯಕ್ಕೆ ಸಂವಾದಿಯಾದದ್ದು ಚಂಪೂ ಕಾವ್ಯ, ಚಂಪೂಕಾವ್ಯದಲ್ಲಿ ಸತತವಾಗಿ ಒಂದೇ ವೃತ್ತ ಅಥವಾ ಛಂದಸ್ಸನ್ನು ಬಳಸುವ ಒತ್ತಾಯವಿಲ್ಲ. ಸಮಯೋಚಿತವಾಗಿ ವಿವಿಧ ಛಂದಸ್ಸಿನ ಆಯ್ಕೆ ಮತ್ತು ಬಳಕೆ ಕಂಡುಬರುವುದು. ಆ ಕಾಲಕ್ಕೆ ಸಂಸ್ಕೃತ ಭಾಷೆಯಲ್ಲಿಯೇ ರೂಪಿತವಾಗಿದ್ದ ಪೆಡಸುತನ ಅನಿವಾರ್ಯವೆಂಬಂತೆ ಕನ್ನಡ ಚಂಪೂವಿನಲ್ಲೂ ಅನುರಣಿತವಾಗಿರುವಂತೆ ತೋರುತ್ತದೆ. ಆದ್ದರಿಂದ ಅಕ್ಷರ ವೃತ್ತದ ಧಾಟಿ, ಘೋಷಗಳನ್ನು ಪಾಲಿಸುವುದಕ್ಕಾಗಿ ಹೆಚ್ಚು ಹೆಚ್ಚಾಗಿ ಸಂಸ್ಕೃತದ ದೀರ್ಘ ಸಮಾಸಗಳನ್ನು

ಹೆಣೆಯುವಂತಾಯಿತು. ಕನ್ನಡ ನುಡಿಗಳು ತಮ್ಮ ಸ್ವರದೊಡನೆ ಎದ್ದು ನಿಂತು ಕಾಣದಂತಾಯಿತು. ಎಂಬ ಕನ್ನಡ ಕೈಪಿಡಿಕಾರರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾರೆ.

ಪಂಪ ನಾಗವರ್ಮರಲ್ಲಿ ಸಂಸ್ಕೃತ ಭೂಯಿಷ್ಠ ಕಾವ್ಯ ರಚನೆಯಿದ್ದಾಗಲೂ ಮಂಗಳ ಪದ್ಯಗಳಲ್ಲಿ ಕನ್ನಡ ನುಡಿಗಳು ಬಳಕೆಗೊಂಡಿವೆ. ಸಂಸ್ಕೃತವನ್ನು ವಿರೋಧಿಸುವ ಆಂಡಯ್ಯ ಸಂಸ್ಕೃತ ವೃತ್ತದಲ್ಲಿಯೇ ಅಚ್ಚಗನ್ನಡ ಬರೆದದ್ದನ್ನು ಉಲ್ಲೇಖಿಸುತ್ತಾ ಸಂಸ್ಕೃತ ವೃತ್ತದಲ್ಲಿ ಕನ್ನಡ ನುಡಿಗಳು, ಪ್ರಾಕೃತ ದತ್ತವಾದ ಕಂದ, ದೇಶಿಯ ರಗಳೆ, ಷಟ್ಪದಿಗಳಲ್ಲಿ ಪದಾಡಂಬರದ ಸಾಧ್ಯತೆಯನ್ನು ಕಂಡಾಗ ಕನ್ನಡ ಕಾವ್ಯದ ಛಂದಸ್ಸು ಸಂಸ್ಕೃತಕ್ಕೆ ವಿರುದ್ಧ ಮಾರ್ಗದಲ್ಲಿರುವುದು ಕಾಣುತ್ತದೆ. ಸಮಸ್ತ ಪದದಲ್ಲಿ ನಿಬಿಡವಾದ ವರ್ಣ, ಆ ವರ್ಣ ಸಮುದಾಯಕ್ಕೆ ತಕ್ಕನಾದ ಛಂದಸ್ಸು ಎಂಬ ಬುದ್ಧಿ ತಂತ್ರವಾದ ಕೃತ್ರಿಮ ಭಾಷೆ ಸಂಸ್ಕೃತ ವಿದ್ವತ್ ಕಾವ್ಯ ಭಾಷೆಯಲ್ಲಿ ಕಾಣುತ್ತದೆ. ಇದರ ಮುಂದುವರಿಕೆಯಾದ ಕನ್ನಡ ಕಾವ್ಯದಲ್ಲಿ ಭಾವ, ಬುದ್ಧಿಗಳ, ದೇಸಿ ಮಾರ್ಗಗಳ ದ್ವಂದ್ವದಿಂದ ಹುಟ್ಟಿದ ಚಂಪೂ ಕಾವ್ಯದಲ್ಲಿ ವರ್ಣ ವೃತ್ತದಲ್ಲೂ ದೇಸೀ ನುಡಿಯ ಪ್ರಯೋಗ ಆರಂಭವಾಗಿ ವಚನ, ರಗಳೆ, ಷಟ್ಪದಿಗಳಲ್ಲಿ ಕ್ರಮವಾಗಿ ಸಂಸ್ಕೃತ ಸ್ವೀಕರಣೆಯಾಗುತ್ತಿದ್ದರೂ ಮೂಲ ಕನ್ನಡದ ಲಯಕ್ಕೇ ಕಾವ್ಯಭಾಷೆಯನ್ನು ಕೊಂಡೊಯ್ಯುವ ಪ್ರಯತ್ನ ಕಾಣುತ್ತದೆ. ಹೀಗೆ ಅಕ್ಷರ ವೃತ್ತಗಳ ಬಳಕೆ ಅದರಲ್ಲಾದ ಮಾರ್ಪಾಟು. ಅಲ್ಲಿ ಕನ್ನಡ ನುಡಿಯ ಬಳಕೆ ಇವು ಸಂಸ್ಕೃತ ವಿದ್ವತ್ ಕಾವ್ಯ ಪರಂಪರೆಯಿಂದ ಕನ್ನಡ ಕಾವ್ಯ ಸ್ವಾತಂತ್ರ್ಯಕ್ಕೆ ಹಾರುವ ಮಟ್ಟಿಗೆ ಗುರುತಿಸಬಹುದೆಂದು ಅಭಿಪ್ರಾಯ ಪಡುತ್ತಾರೆ.

ಕನ್ನಡಕ್ಕಿಂತ ಮೊದಲೆ ಅಭಿಜಾತತೆಗೆ ತಿರುಗಿದ ಪ್ರಾಕೃತ ಛಂದಸ್ಸು ಕನ್ನಡದ ಮೇಲೆ ಪ್ರಭಾವ ಬೀರಿದೆ. ಚಂಪೂ ಕಾವ್ಯವೆಂದರೆ ಮುಕ್ಕಾಲು ಪಾಲು ಕಂದ, ಕಾಲು ಪಾಲು ವೃತ್ತಗಳೆಂದು ಕನ್ನಡ ಕೈಪಿಡಿಕಾರರು ಅಭಿಪ್ರಾಯಪಟ್ಟಿದ್ದಾರೆ. ಹಳಗನ್ನಡ ಹೊಸಗನ್ನಡಕ್ಕೆ ತಿರುಗಿ ಹಳಗನ್ನಡ ಪ್ರತ್ಯಯಗಳೂ, ಶಬ್ದ ರೂಪಗಳೂ ಹೊಸಗನ್ನಡದ ರೂಪಾಂತರಗಳನ್ನು ಪಡೆದ ಮೇಲೆ ಹಳಗನ್ನಡದ ಮಿಶ್ರಣವಿಲ್ಲದೆ ವೃತ್ತ ಕಂದಗಳನ್ನು ರಚಿಸುವುದು ಕಷ್ಟವಾಗುತ್ತ ಬಂದಿತಲ್ಲದೆ ಸಂಸ್ಕೃತ ಛಂದಸ್ಸು ಕನ್ನಡಕ್ಕೆ ಸಹಜವಾದ ಛಂದಸ್ಸಲ್ಲವೆಂಬುದೂ ಸ್ಪಷ್ಟವಾಗುತ್ತಾ ಬಂದಿತು. ಸುಮಾರು ೧೧ ನೇ ಶತಮಾನದವರೆಗೆ ಕನ್ನಡ ಪದ್ಯಗಳು ಸಾಹಿತ್ಯದಲ್ಲಿ ಅಲ್ಲೊಂದು ಇಲ್ಲೊಂದು ಕಾಣಿಸಿಕೊಳ್ಳುತ್ತಿದ್ದವು. ಆದರೆ ೧೨ ನೇ ಶತಮಾನದ ವಚನಕಾರರು ಕನ್ನಡದ ಛಂದಸ್ಸನ್ನೇ ಮುಂದಕ್ಕೆ ತಂದು ಪ್ರಾಶಸ್ತ್ಯದ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದರೆಂಬ ಅಂಶವನ್ನು ಕನ್ನಡ ಕೈಪಿಡಿಕಾರರು ಉಲ್ಲೇಖಿಸುತ್ತಾ ಮುಂದೆ ರಗಳೆ, ಷಟ್ಪದಿ, ಸಾಂಗತ್ಯ ಕವಿಗಳು ಪೂರ್ಣ ಪದ್ಯಕಾವ್ಯ ರಚನೆಯಿಂದ ಚಂಪೂವನ್ನು ಮರೆಸಿದರು.

ಕನ್ನಡ ಕೈಪಿಡಿಕಾರರ ಪ್ರಕಾರ ಸಂಸ್ಕೃತದಿಂದ ಪ್ರಾಕೃತ ಅಲ್ಲಿಂದ ದೇಸೀ ಛಂದಸ್ಸಿಗೆ ನಡೆದ ಕನ್ನಡ ಕಾವ್ಯದಲ್ಲಿ ಷಟ್ಪದಿ ೧೨ ನೇ ಶತಮಾನದಿಂದೀಚೆಗೆ ಬಂದಿದ್ದರೂ ಆರು ಬಗೆಯದ್ದಾಗಿದೆ. ಅಕ್ಷರ ವೃತ್ತದ ಮಾರ್ಪಾಡು, ಪ್ರಾಕೃತದ ಮಾತ್ರಾಗಣಗಳ ರೀತಿಯಿಂದ ದ್ರಾವಿಡ ಅಂಶಗಣಗಳ ಕಡೆಗೆ ಕಾವ್ಯ ತಿರುಗಿದ್ದರಲ್ಲಿ ಛಂದಸ್ಸಿನ ದೇಸಿಯೆಡೆಯ ನಡೆಕಂಡರೂ ಎಲ್ಲ ಹಂತದಲ್ಲಿಯೂ ಸಂಸ್ಕೃತ ಭೂಯಿಷ್ಠತೆ (ಜಗನ್ನಾಥ ವಿಜಯ), ಕನ್ನಡ ಪರತೆ (ಆಂಡಯ್ಯನ ಕಬ್ಬಿಗರ ಕಾವ) ಮತ್ತು ಉಚಿತ ಮಿಶ್ರಣಗಳಿಗೂ ಉದಾಹರಣೆ ದೊರೆಯುತ್ತದೆ. ವೃತ್ತಗಳಲ್ಲಿ ಸಂಸ್ಕೃತ ಧಾಟಿಗೆ

ಕನ್ನಡ ರೂಪ (ಪಂಪನ ಕಾವ್ಯಗಳು), ತೊಡಿಸಿದರೆ, ರಗಳೆ, ಷಟ್ಪದಿಗಳಲ್ಲಿ ಕನ್ನಡದ ಧಾಟಿಗೆ ಸಂಸ್ಕೃತವನ್ನು ಒಗ್ಗಿಸಿಕೊಳ್ಳುವುದು (ಲಕ್ಷ್ಮೀಶನ ಜೈಮಿನಿ ಭಾರತ, ಕುಮಾರವ್ಯಾಸನ ಗದುಗಿನ ಭಾರತ, ಜನ್ನನ ಯಶೋಧರ ಚರಿತೆಯಲ್ಲಿ) ಕಾಣಬಹುದು. ಹೀಗೆ ಸಂಸ್ಕೃತ ಬಳಕೆಯ ನಿರಾಕರಣೆಯ, ಮಿಶ್ರಣದ ವಿವಿಧ ಹಂತಗಳನ್ನು ಕಾಣಬಹುದು. ಈ ದೃಷ್ಟಿಯಿಂದ ಕನ್ನಡದಲ್ಲಿ ಸಂಸ್ಕೃತ ಸ್ವೀಕರಣೆ ಎರಡು ಬಗೆಯಲ್ಲಾಗಿದೆ.

೧. ಶಬ್ದ ಸ್ವೀಕರಣೆ ೨. ಪದ ಸ್ವೀಕರಣೆ

ಉಚ್ಚಾರಣೆಯಲ್ಲಿ ಕನ್ನಡದ ಶಬ್ದರೂಪಕ್ಕೆ ಅಸಹಜವೆನ್ನುವ ಮಹಾಪ್ರಾಣ, ಸಂಯುಕ್ತಾಕ್ಷರಾದಿಗಳಿಂದ ಕೂಡಿದ ಸಂಸ್ಕೃತ ಶಬ್ದರೂಪಗಳನ್ನು ಸ್ವೀಕರಿಸುವುದು. ಉದಾಹರಣೆ ಪ್ರೋಷಣೆ, ಮೋಕ್ಷ.

ಅಲ್ಲದೆ ಕೆಲವು ಕನ್ನಡದ ತದ್ಭವಗಳು ಪ್ರಾಕೃತದ ಮೂಲಕ ಬಂದಿರಬಹುದು ಅಥವಾ ಸಂಸ್ಕೃತದಿಂದ ನೇರವಾಗಿ ಕನ್ನಡವೇ ಉಚ್ಚಾರಣಾ ವ್ಯತ್ಯಾಸಗಳಿಂದ ತದ್ಭವ ಮಾಡಿಕೊಂಡಿರಬಹುದು.

ಉದಾಹರಣೆ, ಆಯುಷ್ಯ - ಆಯಿಸಂ, ಶುನಕ - ಸೊಣಗಂ.

ಕೇವಲ ಶಬ್ದಗಳನ್ನು ಮಾತ್ರವಲ್ಲದೆ ಶಬ್ದರೂಪಗಳನ್ನು ಕನ್ನಡವು ಸಂಸ್ಕೃತದಿಂದ ಸ್ವೀಕರಿಸಿದೆ. ಕೆಲವು ಸಲ ಕನ್ನಡ ಪ್ರತ್ಯಯಗಳನ್ನು ಸೇರಿಸುವ ಮೊದಲಲ್ಲಿ ಶಬ್ದದ ಕೊನೆಯನ್ನು ಬದಲಿಸಿಕೊಂಡು ಒಗ್ಗಿಸಿಕೊಳ್ಳುತ್ತದೆ. ಉದಾಹರಣೆಗೆ 'ಅ' ಕಾರಾಂತ ಸ್ತ್ರೀಲಿಂಗವನ್ನು 'ಎ' ಕಾರಾಂತ ಮಾಡಿಕೊಳ್ಳುವುದು ಸೀತಾ-ಸೀತೆ.

ಸಂಸ್ಕೃತ ಶಬ್ದಗಳನ್ನು ಕನ್ನಡ ಪ್ರಕೃತಿಗಳನ್ನಾಗಿ ಮಾಡಿಕೊಳ್ಳುವಲ್ಲಿ ಆಯ್ಕೆ ಪರಿವರ್ತನೆಗಳನ್ನು ಮುಖ್ಯವಾಗಿ ನೋಡಬಹುದು.

೧. ಸಂಸ್ಕೃತ ಕ್ರಿಯಾ ಪದಗಳನ್ನು ಧಾತುವಿಗೆ ಇಸು ಸೇರಿಸಿ ಕನ್ನಡ ಕ್ರಿಯಾಪದ ರೂಪ ಪಡೆಯುವುದಿದೆ. ಆದರೆ ಎಲ್ಲಾ ಧಾತುಗಳನ್ನು ಅಥವಾ ಒಂದೇ ಧಾತುವಿನ ಉಪಸರ್ಗ ಸಹಿತ ಎಲ್ಲ ರೂಪಗಳನ್ನು ಪಡೆಯದು.

ಉದಾಹರಣೆ, ಈಕ್ಷಿಸು, ವೀಕ್ಷಿಸು, ಇದೆಯೇ ಹೊರತು ಪ್ರೇಕ್ಷಿಸು ಎಂದಿಲ್ಲ.

೨. ಸಂಸ್ಕೃತದಲ್ಲಿಯೇ ಧಾತುವಿಗೆ ಅಖ್ಯಾತ ರೂಪಕ್ಕೂ ಕೃದಂತರೂಪಕ್ಕೂ ಭಿನ್ನರೂಪಗಳಿದ್ದರೆ ಕೃದಂತ ರೂಪವನ್ನು ಸ್ವೀಕರಿಸಿ ಕನ್ನಡ ಕ್ರಿಯಾಪದ ಮಾಡಿಕೊಳ್ಳುವುದಿದೆ.

ಉದಾಹರಣೆ, ಧ್ಯಾಯತೆ, ಧ್ಯಾನಂ, ಧ್ಯಾನಿಸು, ದೃಶ್‌ದರ್ಶಿಸು.

ಪದ - ಅರ್ಥಗಳ ಸಂಯೋಜನೆಯಿಂದ ವಾಕ್ಯ ರೂಪಗೊಳ್ಳುತ್ತದೆ. ಕಾವ್ಯದಲ್ಲಿ ಭಾಷೆಯ ವಿಶಿಷ್ಟ ಅಭಿವ್ಯಕ್ತಿಗೆ ತಕ್ಕಂತೆ ವಾಕ್ಯ ರೂಪಗೊಳ್ಳುತ್ತದೆ. ಪದಗಳ ಆಯ್ಕೆಯಿಂದ ಮಾತ್ರ ವಾಕ್ಯ ಪೂರ್ಣಗೊಳ್ಳುತ್ತದೆ. ವಯಾಕರಣಿಗಳ ಪ್ರಕಾರ ಅವ್ಯಯ, ಕಾರಕ, ವಿಶೇಷಣ ಯುಕ್ತವಾದ ಅಖ್ಯಾತ (ಕ್ರಿಯಾಪದ) ವೇ ವಾಕ್ಯ. ಒಂದು ವಾಕ್ಯಕ್ಕೆ ಒಂದೇ ಕ್ರಿಯಾಪದ ಮುಖ್ಯವಾಗಿರುತ್ತದೆ.

ಕನ್ನಡ ಸಂಸ್ಕೃತ ಭಾಷೆಗಳ ವಾಕ್ಯ ರಚನೆ ಭಿನ್ನವಾಗಿರುತ್ತದೆ. ಅದು ವಾಕ್ಯದ ಹಂತದಲ್ಲಿಯೇ ಸ್ಪಷ್ಟಗೊಳ್ಳುವುದು. ಆದರೆ ಕನ್ನಡ ವ್ಯಾಕರಣಕಾರರು ಸಂಸ್ಕೃತ ವ್ಯಾಕರಣಕಾರರ ಮಾದರಿಯನ್ನೇ ಅನುಸರಿಸಿದ್ದಾರೆ. ಕಾರಕಗಳು ಮತ್ತು

ಅದಕ್ಕೆ ಅಪವಾದ ರೂಪದ ವಿಭಕ್ತಿ ಪಲ್ಲಟವು ಸಂಸ್ಕೃತ ಭಾಷೆಯ ಬಳಕೆಗೆ ವಿಶಿಷ್ಟವಾದುದು. ಅರ್ಥವನ್ನು ಆಶ್ರಯಿಸಿದ ವಾಕ್ಯ ವಿಶ್ಲೇಷಣೆ ಕನ್ನಡದ ಸಂಪ್ರದಾಯದಲ್ಲಿಲ್ಲ. ಆದರೆ ಡಿ.ಎನ್. ಶಂಕರಭಟ್ಟರು ಕನ್ನಡ ವಾಕ್ಯಗಳು ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆ ಎಂಬ ಗ್ರಂಥದಲ್ಲಿ ವಾಕ್ಯರಚನೆ ಮತ್ತು ಅರ್ಥರಚನೆಗಳ ನಡುವೆ ಕಾರಕದ ಕಲ್ಪನೆ ಅನಾವಶ್ಯಕ ಎಂದೂ ಸಂಸ್ಕೃತ ವ್ಯಾಕರಣದ ಪ್ರಮೇಯಗಳಿಗೆ ಕನ್ನಡದಲ್ಲಿ ಯಾರೂ ಬಳಸದ ರಚನೆಗಳನ್ನು ಉದಾಹರಣೆ ಕೊಡುವುದು ಅತಿವ್ಯಾಪ್ತಿ ದೋಷ. ಕನ್ನಡದ ವಿಶಿಷ್ಟ ನಿಯಮಗಳನ್ನು ಸಂಸ್ಕೃತದ ಮಾದರಿ ಹೇಳದಿರುವುದೂ ಅವ್ಯಾಪ್ತಿ ದೊಷ ಕನ್ನಡ ವಾಕ್ಯಗಳನ್ನು ಅರ್ಥ ಆಧಾರಿತ ನೆಲೆಯಲ್ಲಿ ಕಾಣಲು ಒತ್ತಾಯಿಸುತ್ತವೆ ಎಂದಿದ್ದಾರೆ. ಇದರೊಟ್ಟಿಗೆ ಜಗತ್ತಿನಲ್ಲಿರುವ ಬೇರೆ ಬೇರೆ ಭಾಷೆಗಳು ವಾಕ್ಯ ರಚನೆಯಲ್ಲಿ ಒಂದರಿಂದೊಂದು ತೀರಾ ಭಿನ್ನವಾಗಿವೆಯಾದರೂ ಅರ್ಥ ರಚನೆಯಲ್ಲಿ ಮಾತ್ರ ಅವು ಒಂದನ್ನೊಂದು ಬಹಳ ಮಟ್ಟಿಗೆ ಹೋಲುತ್ತಿರುವ ಹಾಗೆ ಕಾಣಿಸುತ್ತವೆ. ಈ ಕಾರಣಕ್ಕಾಗಿಯೇ ಒಂದು ಭಾಷೆಯ ಮೂಲಕ ತಿಳಿಸಲಾಗಿರುವ ಸಂಗತಿಯನ್ನು ನಮಗೆ ಇನ್ನೊಂದು ಭಾಷೆಯ ಮೂಲಕ ತರ್ಜುಮೆ ಮಾಡಿ ತಿಳಿಸಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಕನ್ನಡ ಸಂಸ್ಕೃತ ಸಂಬಂಧದ ಹೊರ ರಚನೆಯನ್ನು ಅಧ್ಯಯನ ಮಾಡಲಾಗಿದೆಯೇ ಹೊರತು ಅವುಗಳ ಆಂತರಿಕ ರಚನೆಯನ್ನಲ್ಲ.

ಕನ್ನಡ ವಯಾಕರಣಿಗಳು ಸಂಸ್ಕೃತ ಮಾದರಿಯನ್ನೇ ಅನುಸರಿಸಿರುವುದರಿಂದ ವಾಕ್ಯ ರಚನೆಯಲ್ಲೂ ಸಂಸ್ಕೃತದ ಮಾದರಿ ಕಂಡು ಬರುತ್ತದೆ. ಕನ್ನಡ ಕಾವ್ಯದಲ್ಲಿ ಉದ್ಧೃತ ವಾಕ್ಯಗಳಲ್ಲದೆ ಕವಿಯೇ ಸೃಜಿಸಿದ ಸಂಸ್ಕೃತ ಅಂತ್ಯ ಪ್ರತ್ಯಯ ಸಮೇತವಾದವು ಕಾಣಸಿಗುತ್ತವೆ. ಇವು ಪಾತ್ರ ನಿಷ್ಟಕ್ಕಿಂತಲೂ ಸಂದರ್ಭ ನಿಷ್ಟವೇ ಹೆಚ್ಚಾಗಿರುತ್ತದೆ. ಸ್ತೋತ್ರಕ್ಕೆ ವಿಶೇಷವಾಗಿ ಸಂಸ್ಕೃತ ಬಳಕೆಯಾಗುತ್ತವೆ. ನರರಲ್ಲಿ ಶ್ರೇಷ್ಠವಾದ ವ್ಯಕ್ತಿಗೆ, ದೇವತೆಗಳಲ್ಲಿ ಮಹಾನ್ ಸಂಸ್ಕೃತಿಯ ದೈವಗಳಿಗೆ ಸಂಸ್ಕೃತ ಸ್ತುತಿ ಇರುತ್ತದೆ. ಕವಿಕೃತವಾದ ಸ್ತುತಿಗೆ ಪಂಪನ ಉದಾಹರಣೆ ನೀಡಬಹುದು. ಅದು ಕುವೆಂಪು ಕಾಲದವರೆಗೂ ಜಾರಿಯಲ್ಲಿದ್ದು ಸ್ತುತಿಗೆ ಸಂಸ್ಕೃತ ಬಳಕೆ ಅಗತ್ಯ ಅನಿವಾರ್ಯವೆಂಬಂತ ಮನೋಭಾವ ಬೆಳೆದು ಬಂದಿತ್ತು. ವಚನಕಾರ ಅಂಬಿಗರ ಚೌಡಯ್ಯ ಜಾತಿ ವ್ಯವಸ್ಥೆಯನ್ನು ವಿರೋಧಿಸುವ ವಚನದಲ್ಲಿ ಸಂಸ್ಕೃತ ಬಳಕೆ ಕಾಣಬಹುದು. ಕನ್ನಡ ದೇಸಿಗೆ ಪ್ರಸಿದ್ಧನಾದ ಕುಮಾರವ್ಯಾಸ ಕೂಡ ಭಾಗವತ ಧರ್ಮದಲ್ಲಿ ಭಗವಂತನನ್ನು ಕಾಣುವನು ಉಪನಿಷತ್ ವಾಕ್ಯಗಳನ್ನು ಸೂತನಾದರೂ ವಿದುರನ ಬಾಯಲ್ಲಿ ಹೇಳಿಸುವನು.

ಪಂಪನಿಂದ ಅಡಿಗರ ಕಾವ್ಯದವರೆಗೂ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತ ಬಳಕೆಯಾಗಿರುವುದನ್ನು ಕಾಣಬಹುದು. ಪಂಪಾದಿಗಳಲ್ಲಿ ದೇಸಿ ನುಡಿಗಟ್ಟುಗಳು ಬಂದಂತೆ ಸಂಸ್ಕೃತ ನುಡಿಗಟ್ಟುಗಳೂ ಬಂದಿವೆ. ದೇಸಿಯ ನುಡಿಗಟ್ಟುಗಳ ಬಳಕೆಗೆ ಸಂಭ್ರಮಿಸುವುದು ಸರಿಯಲ್ಲ. ಯಾವುದು ಔಚಿತ್ಯದ ನೆಲೆಯಲ್ಲಿ ಸಮರ್ಥನೀಯವೋ ಅದು ಮುಖ್ಯ. ಹಾಗೆಯೇ ಸಂಸ್ಕೃತ ವಾಕ್ಯ ಎಷ್ಟಿದೆ, ಎಷ್ಟಿಲ್ಲ ಎಂಬ ಸಂಭ್ರಮಕ್ಕಿಂತ ಹೇಗೆ ಕನ್ನಡ ಕಾವ್ಯ ಸಂಸ್ಕೃತ ವಾಕ್ಯಗಳೊಡನೆ ಸಂವಾದಕ್ಕಿಳಿದಿವೆ ಎನ್ನುವುದೇ ಮುಖ್ಯ. ಅಂತಹ ಸಂವಾದಗಳ ಮುಖ್ಯ ಲಕ್ಷಣಗಳನ್ನು ಶ್ರೀನಿವಾಸಮೂರ್ತಿಯವರು ಹೀಗೆ ಗುರುತಿಸಿದ್ದಾರೆ :

೧. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಪ್ರಾಸವು ಸಹಜವಾದುದು. ಕನ್ನಡ ಕಾವ್ಯಗಳಲ್ಲಿ ದೇಸಿಯ ಅಕ್ಷರಗಳಾದ ಱ,ೞ,ಳ ಗಳು ವರ್ಣಸಮತೆಗೆ ಸಲ್ಲದವು. ಹಾಗಾದುದರಿಂದ ಪ್ರಾಸದಲ್ಲಿಯೂ ಅವು ಸಲ್ಲವು. ಸಂಸ್ಕೃತದ ಸಂಯುಕ್ತಾಕ್ಷರಕ್ಕೆ ಬದಲಾಗಿ ಇತರಲ್ಲಿ ದ್ವಿತ್ವಾಕ್ಷರವನ್ನು ಪ್ರಾಸದಲ್ಲಿ ಬಳಸಲಾಗುತ್ತದೆ.

೨. ಕನ್ನಡದಲ್ಲಿ ಪೂರ್ಣ ಪ್ರಮಾಣದ ವೃತ್ತಗಳಲ್ಲಿ ರಚಿಸಿದ ಮಹಾಕಾವ್ಯಗಳಿಲ್ಲ ಹಳಗನ್ನಡದಲ್ಲಿ ಸಂಸ್ಕೃತ ಮಹಾಕಾವ್ಯಕ್ಕೆ ಸಂವಾದಿಯಾದ ಚಂಪೂ ಕಾವ್ಯಗಳಲ್ಲಿ ಒಂದೇ ವೃತ್ತ ಅಥವಾ ಛಂದಸ್ಸನ್ನು ಬಳಸುವ ನಿಯಮವಿಲ್ಲ. ಆದರೆ ಸಂಸ್ಕೃತದಲ್ಲಿರುವ ಪೆಡಸುತನ ಕನ್ನಡದ ಚಂಪೂ ಕಾವ್ಯಗಳಲ್ಲೂ ಕಂಡುಬರುತ್ತದೆ. ಹಾಗಿದ್ದರೂ ಸಂಸ್ಕೃತ ವೃತ್ತಗಳಲ್ಲಿ ಅಚ್ಚಗನ್ನಡದ ರಚನೆಯನ್ನು ಕನ್ನಡದ ಕವಿಗಳು ಹಿಂದಿನಿಂದಲೂ ಮಾಡುತ್ತಲೇ ಬಂದಿದ್ದಾರೆ. (ಇದಕ್ಕೆ ಹೆಚ್ಚಿನ ಆಧಾರವನ್ನು ಈ ನಿಬಂಧದ ಅನುಬಂಧ ೨ರಲ್ಲಿ ನೀಡಲಾಗಿದೆ.)

೩. ವೃತ್ತಗಳಲ್ಲಿ ಸಂಸ್ಕೃತದ ಧಾಟಿಗೆ ರೂಪ ತೊಡಿಸಿದರೆ ರಗಳೆ ಷಟ್ಪದಿಗಳಲ್ಲಿ ಕನ್ನಡದ ಧಾಟಿಗೆ ಸಂಸ್ಕೃತ ರೂಪ ತೊಡಿಸಲಾಗುತ್ತದೆ.

೪. ವೀರರಸದಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿರುತ್ತದೆ. ಶೃಂಗಾರ, ಕರುಣಾದಿ ರಸಗಳಲ್ಲಿ ವಿರಳವಾಗಿ ಸಂಸ್ಕೃತ ರಚನೆಗಳು ಕಂಡುಬರುತ್ತವೆ.

೫. ಗುರುವಲ್ಲದ ವರ್ಣಸ್ಥಾನದಲ್ಲಿ ಗುರು ಪ್ರಯೋಗ, ಲಘುವಲ್ಲದ ಸ್ಥಾನದಲ್ಲಿ ಲಘು ಪ್ರಯೋಗ ಎಂಬ ಗುರು ಲಘು ದೋಷ ಅಕ್ಷರವೃತ್ತಗಳಲ್ಲಿ ಕನ್ನಡ ರಚನೆಗಳು ಬರುವುದಕ್ಕಿಂತಲೂ ಮಿಗಿಲಾಗಿ ಕನ್ನಡ ಛಂದಸ್ಸಿನಲ್ಲಿ ಸಂಸ್ಕೃತ ಪದಗಳು ಬರುವಾಗ ಹೆಚ್ಚಾಗಿ ಕಂಡುಬರುತ್ತವೆ. ಉದಾ: ವೀರನಾರಯಣ, ಇದು ತತ್ಸಮ ತದ್ಭವಗಳ ಹುಟ್ಟಿಗೆ ಒಂದು ಕಾರಣವೂ ಹೌದು.

ಕನ್ನಡ ಕವಿಗಳು ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಪರಸ್ಪರ ಬೆರೆಸುವ ಮೂಲಕ ಹೆಚ್ಚಿನ ವೈವಿಧ್ಯವನ್ನು ಸಾಧಿಸಿದ್ದಾರೆ.

ಕನ್ನಡದ ಕವಿಗಳು ಸಂಸ್ಕೃತ ಪದಗಳನ್ನು ಗ್ರಾಮ್ಯತೆಯನ್ನು ಮೀರಬೇಕಾದ ಸಂದರ್ಭದಲ್ಲಿ ಮಾತ್ರ ಬಳಸಿದ್ದಾರೆ.

ಸಾಮಾನ್ಯವಾಗಿ ಸ್ವಭಾವೋಕ್ತಿಗಳಲ್ಲಿ ದೇಸೀ ಪದಗಳು, ವಕ್ರೋಕ್ತಿಯಲ್ಲಿ ಸಂಸ್ಕೃತ ರಚನೆಗಳು ಕಂಡುಬರುತ್ತವೆ.

ಉಪಮಾನ ಉಪಮೇಯಗಳೆರಡರಲ್ಲೂ ಕನ್ನಡ-ಸಂಸ್ಕೃತ, ಸಮಸಂಸ್ಕೃತ, ತತ್ಸಮಗಳನ್ನು ಬಳಸುವ ಮೂಲಕ ಭಾವಕ್ಕೆ ಪುಷ್ಟಿಕೊಡಲಾಗುತ್ತದೆ.

ಸಂಸ್ಕೃತದ ಪ್ರಭಾವದಿಂದ ಕನ್ನಡದ ಚಂಪೂ ಕವಿಗಳು ಸಮಾನಮಯ ಶೈಲಿಯನ್ನು ರೂಪಿಸಿಕೊಂಡಿರುತ್ತಾರೆ.

ಕನ್ನಡ ಕಾವ್ಯಗಳಲ್ಲಿ ಉದ್ಧೃತ ಸಂಸ್ಕೃತ ವಾಕ್ಯಗಳಲ್ಲದೆ ಕನ್ನಡ ಕವಿಯೇ ರಚಿಸಿದ ಸಂಸ್ಕೃತ ವಾಕ್ಯಗಳು ಕಂಡುಬರುತ್ತವೆ.

ಕನ್ನಡ ಕಾವ್ಯಗಳಲ್ಲಿ ತತ್ವ ಸಂದೇಶವನ್ನು ಹೇಳುವಾಗ ಸಂಸ್ಕೃತ ಪದಗಳನ್ನು ಬಳಸಲಾಗುತ್ತದೆ.

ಭಾಗ-೨

ಅಚ್ಚಗನ್ನಡ ಕಾವ್ಯಗಳ ವೈಶಿಷ್ಟ್ಯಗಳು

ಈ ಹಿನ್ನೆಲೆಯಲ್ಲಿ ಅಚ್ಚಗನ್ನಡ ಕಾವ್ಯಗಳ ಪ್ರಧಾನ ಗುಣಲಕ್ಷಣಗಳನ್ನು ಹೀಗೆ ವಿವರಿಸಬಹುದು.

೦೧. ಅಚ್ಚಗನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಪಾಂಡಿತ್ಯ ಮತ್ತು ಪ್ರೌಢಿಮೆ ಕಂಡುಬರುವುದಿಲ್ಲ.

೦೨. ಕಬ್ಬಿಗರ ಕಾವದಲ್ಲಿ ಸಂಸ್ಕೃತ ವೃತ್ತಗಳಿದ್ದಾಗಲೂ ಬಳಕೆಯಾಗಿರುವ ಕನ್ನಡ ಭಾಷೆಯು ಕನ್ನಡದ ಜಾಯಮಾನಕ್ಕನುಗುಣವಾಗಿದೆ. ಈ ವೃತ್ತಗಳನ್ನು ಅರ್ಥಾನುಸಾರಿಯಾಗಿ ವಿಂಗಡಿಸಿದಾಗ ಕನ್ನಡದ ಸಹಜತೆ ಅದರಲ್ಲಿ ಎದ್ದು ಕಾಣುತ್ತದೆ. (ಹೆಚ್ಚಿನ ವಿವರಗಳಿಗಾಗಿ ಅಧ್ಯಾಯ ೨ನ್ನು ನೋಡಿ)

೦೩. ಆಧುನಿಕ ಅಚ್ಚಗನ್ನಡ ಕಾವ್ಯಗಳು ದೇಸೀ ಛಂದಸ್ಸಿಗೆ ಸಂಬಂಧಿಸಿದವುಗಳಾಗಿವೆ. (ಹೆಚ್ಚಿನ ವಿವರಗಳಿಗಾಗಿ ಅಧ್ಯಾಯ ೨ನ್ನು ಗಮನಿಸಿ)

೦೪. ಗುರು-ಲಘುದೋಷ ಅಚ್ಚಗನ್ನಡ ಕಾವ್ಯದಲ್ಲಿ ಕಂಡುಬರುವುದಿಲ್ಲ.

೦೫. ಅಚ್ಚಗನ್ನಡ ಕಾವ್ಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡ ರಚನೆಗಳೇ ಇವೆ.

೦೬. ತತ್ಸಮ ಮತ್ತು ತದ್ಭವ, ಸಮಸಂಸ್ಕೃತ ಪದಗಳು ಅಚ್ಚಗನ್ನಡ ಕಾವ್ಯದಲ್ಲಿ ಸಹಜವಾಗಿವೆ.

೦೭. ಸ್ವಭಾವೋಕ್ತಿ ಮತ್ತು ವಕ್ರೋಕ್ತಿಗಳಲ್ಲೂ ಪೂರ್ಣ ಪ್ರಮಾಣದಲ್ಲಿ ಅಚ್ಚಗನ್ನಡ ನುಡಿಗಳನ್ನು ಬಳಸಲಾಗಿದೆ.

ಪುದಿದ ತನಿವಣ್ಣಬಿರಿಕಿಂ
ದುದಿರ್ದತ್ತಂ ರಾಸಿಯಾದ ಬಿಟ್ಟುಗಳಿಂ ಪೆಂ
ಪೊದವಿದ ಪಲವುಂ ದಾಳಿಂ
ಬದ ಮರಗಳ್ ರನ್ನವಸರದಂ ತೆಸೆದಿರ್ಕುಂ

(ಕ.ಕಾವ, ಪದ್ಯ.೮೩, ಪು.೧೦೪)

೦೮. ಉಪಮಾನ ಉಪಮೇಯಗಳಲ್ಲೂ ಅಚ್ಚಗನ್ನಡ ರಚನೆಗಳಿರುತ್ತವೆ

ತೊಳಗುವ ಪೊಗಳನೆಂದುಂ
ತಳೆದಿರ್ಪ ಕೊಳಂಗಳೆಂಬ ಸಂಕೆಯನೆಸಸುಂ
ಬಳೆಯಿ ಸುತಿರ್ಪುದು ಬೀದಿಗ
ಳೊಳಗೆಲ್ಲಂ ನೆಗಟ್ದಿ ಕಂಚುಗಾಜಿರ ಪಸರಂ

(ಕ.ಕಾವ, ಪದ್ಯ.೩೩, ಪು.೮೭)

೯.ಸಮಾಸಮಯ ಶೈಲಿಗೆ ಇಲ್ಲಿ ಅವಕಾಶವಿಲ್ಲ.

ಅಲರ್ಗಳನಾಂತ ಪಾದರಿಗಳೊಳ್ ತರದಿಂದೆಜಗಿರ್ದ ತುಂಬಿಗಳ್

ಪಲವು ಬಸಂತನೊಲ್ದೊಲಿಸಿ ಕಾಡುವ ರೂಡಿಯ ಬರ್ದುವೆಂದಿರಂ

ನಿತಿ ಸೆಜೆಗೆಯ್ವೆನೆಂದು ಪಲವಾಗಿರೆ ಮಾಡಿದ ತನ್ನ ಬಳ್ಳಿ ಸಂ

ಕಲೆಗಳಿವೆಂಬಿನಂ ಬಗೆಯನಿರ್ಕುಳಿಗೊಂಡುವದೊಂದು ತಾಣದೊಳ್

(ಕ.ಕಾವ, ಪದ್ಯ.೪೭, ಪು.೯೩)

೧೦.ಉದ್ಧೃತ ಸಂಸ್ಕೃತ ವಾಕ್ಯಗಳ ಬದಲಾಗಿ ಅಚ್ಚಗನ್ನಡ ವಾಕ್ಯಗಳು ಪ್ರಯೋಗೊಂಡಿವೆ.

ಕೊಲ್ಲದುದೆ ದಿಟದಿನಜನೆಂ

ದೆಲ್ಲಾ ಪರಿಯಿಂದೆ ಪೇಟ್ದ ಪಿರಿಯರ ನುಡಿಯಂ

ಬಲ್ಲಿತೆನೆ ನಂಬಿ ಬೇಂಟೆಯ

ನೊಲ್ಲದೆ ಬಿಟ್ಟಿರ್ದ ಬಿಯದರೊಪ್ಪಿದರದಜೊಳ್

(ಕ.ಕಾವ, ಪದ್ಯ.೧೭೪, ಪು.೧೩೦)

೧೧.ತತ್ವ ಸಂದೇಶಗಳಲ್ಲೂ ಕನ್ನಡ ವಾಕ್ಯಗಳೇ ಪ್ರಯೋಗಗೊಂಡಿವೆ.

ತೊಟ್ಟಿಕ್ಕೆ ಕಂಬನಿಯ

ಜೇನೆದೆಯ ಹೂವಿಂದ

ಮುಟ್ಟಿಸವಿಯಿಯುವುದೇನು

ಕೀಳ್ ಕಡಂದುರುತೆ

ಒಟ್ಟಿ ಕೊಲೆಕಳವು ಮರೆ

ಮೋಸದರೆಗಳನೊಡೆವ

ಕಟ್ಟೆಸ ಕಮಳಿಯರಿವು

ದೇ ನೋಲ್ಮೆಯೊರತೆ

(ಕಾ.ಚೆ, ಪದ್ಯ.೩೬೭, ಪು.೧೬೫)

೧೨.ಅಚ್ಚಗನ್ನಡ ಕವಿಗಳು ಅಚ್ಚಗನ್ನಡದ ಮೂಲಕವೇ ನಾದಮಯತೆಯೂ ಸಾರಿದ್ದಾರೆ. ಉದಾ.ಕ.ಕಾವ,

'ಬಳಿಯ' ನನೆಯ ಕಣೆಗೆ ನಾಡೆ ಪಗೆವರೊಡಲ ಸುಗಿಯೆ ಕೂಡೆ

ನೆಲನನೊಂದೆ ಕೊಡೆಯಿನಳ್ದ ಮಿಸುಪ ಜಸಮೆ ನಿಮಿರೆ ಕೇಳ್ದು

ಕುಳಿರ್ವ ಪೊಗೊಳಂಗಳಲ್ಲಿ ತಳಿರ ಕಾವಣಂಗಳಲ್ಲಿ

ಪಳಿಕುವೆಸದ ಬೆಟ್ಟದಲ್ಲಿ ಪರಿವ ತೊಜೆಯ ತಡಿಗಳಲ್ಲಿ

ತುಂಬಿವಿಂಡಿನಂತೆ ಪಾಡಿ ಒಕ್ಕವಕ್ಕಿಯಂತೆ ಕೂಡಿ

ದೆಸೆಯನಿಚ್ಚೆಯಿಂದ ನೋಡಿ ಸೊಗಯಿಪಂಚೆಯಂತಿರಾಪಿ

(ಕ.ಕಾವ, ಪದ್ಯ.೨೬೮, ಪು.೧೫೮)

೧೩.ಗ್ರಾಮ್ಯತೆಯನ್ನು ಅಚ್ಚಗನ್ನಡ ಕವಿಗಳು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುವುದಿಲ್ಲ.

ಕರುವ ಕಟ್ಟೆನೆ ಮರೆತು

ತರುವ ಬಿಡುವಲ ಬಳಿಕ

ಸುರಿಯುವಂ ಮಾರ್ಪಿನಿಂ

ಕಾಲ್ಗಳಿಂ ಕೆರವಂ

ಎರೆಯ ಕಡೆಗಣಿಸಿರುವ

ಆಳ್ಮನೆಯ ಗೆಯ್ಮೆಯೆನೆ

ಮರವೆ ನಗೆಗೆಡೆಮಾಡಿ

ಮಾರೊಡ್ಡಿ ಮುನಿವಂ

(ಕಾ.ಚೆ, ಪದ್ಯ.೭೬, ಪು.೫೧)

ಭಾಗ-೩

ಅಚ್ಚಗನ್ನಡ ಕಾವ್ಯಭಾಷೆ

ಈವರೆಗೂ ಕನ್ನಡ ಕಾವ್ಯ ಪರಂಪರೆಯಲ್ಲಿ ಸಂಸ್ಕೃತ ಭಾಷೆ ವಹಿಸಿದ ಪಾತ್ರ ಹಾಗೂ ಪ್ರಾಚೀನ ಕಾಲದಿಂದ ಕನ್ನಡ ಕಾವ್ಯದಲ್ಲಿ ಸಂಸ್ಕೃತ ಭಾಷೆ ಬಳಕೆಯಾದ ಬಗೆಯನ್ನು ಚರ್ಚಿಸಲಾಯಿತು. ಈ ಭಾಗದಲ್ಲಿ ಸಂಸ್ಕೃತದ ಅತಿಯಾದ ಬಳಕೆಯನ್ನು ನಿರಾಕರಿಸಿ ಅಚ್ಚಗನ್ನಡ ಪರಿಕಲ್ಪನೆಗೆ ಕಾರಣವಾದ ಅಚ್ಚಗನ್ನಡ ಕವಿಗಳು ತಮ್ಮ ಅಚ್ಚಗನ್ನಡ ಕಾವ್ಯ ರಚನೆಗಾಗಿ ರೂಪಿಸಿದ ಭಾಷಿಕ ಬಗೆಯನ್ನು ಇಲ್ಲಿ ಪರಿಶೀಲಿಸಲಾಗಿದೆ.

ಆಂಡಯ್ಯನ ಕಬ್ಬಿಗರ ಕಾವ, ಮುಳಿಯರ ಸೊಬಗಿನ ಬಳ್ಳಿ, ಕೊಳಂಬೆ ಪುಟ್ಟಣ್ಣಗೌಡರ ಕಾಲೂರ ಚೆಲುವೆ ಕಾವ್ಯಗಳ ಭಾಷಿಕ ರಚನೆಯ ವೈಶಿಷ್ಟ್ಯವನ್ನು ಇಲ್ಲಿ ತಿಳಿಯಬಹುದಾಗಿದೆ. ಮೂರೂ ಅಚ್ಚಗನ್ನಡ ಕಾವ್ಯಗಳಾದರೂ ಅವುಗಳ ರಚನೆಯ ಕಾಲಘಟ್ಟ ಬೇರೆ ಬೇರೆಯಾಗಿದೆ. ಹಾಗಾಗಿ ಆಂಡಯ್ಯನ ಕಾವ್ಯದಲ್ಲಿ ಹಳಗನ್ನಡ ಭಾಷೆಯ ಪ್ರಭಾವ, ಮುಳಿಯ, ಕೊಳಂಬೆಯವರ ಕಾವ್ಯದಲ್ಲಿ ಹೊಸಗನ್ನಡ ಪ್ರಭಾವವನ್ನು ಕಾಣಬಹುದು. ಅಲ್ಲದೆ

ಅನ್ಯಭಾಷೆಯ ಪ್ರಭಾವವನ್ನು ಕಾಣಬಹುದು. ಆಯಾ ಕಾಲದಲ್ಲಿ ರಚನೆಯಾಗುತ್ತಿದ್ದ ಇತರ ಸಾಹಿತ್ಯ ಕೃತಿಗಳ ಭಾಷೆಗಿಂತ ಅಚ್ಚಗನ್ನಡ ಕಾವ್ಯಭಾಷೆ ಭಿನ್ನವಾಗಿದೆ.

೧೩ ನೇ ಶತಮಾನದಲ್ಲಿ ಆರಂಭವಾದ ಆಂಡಯ್ಯನ ಅಚ್ಚಗನ್ನಡ ಕಾವ್ಯ ನಂತರ ಪರಂಪರೆಯಾಗಿ ಬೆಳೆಯಲಿಲ್ಲ. ಆಂಡಯ್ಯನ ಕಬ್ಬಿಗರ ಕಾವದ ನಂತರ ಆಧುನಿಕ ಯುಗದಲ್ಲಿ ಮುಳಿಯ ತಿಮ್ಮಪ್ಪಯ್ಯನವರು, ಕೊಳಂಬೆ ಪುಟ್ಟಣ್ಣಗೌಡರು ಪ್ರಯೋಗವೆಂಬಂತೆ ತಮ್ಮ ಅಚ್ಚಗನ್ನಡ ಕಾವ್ಯಗಳನ್ನು ರಚಿಸಿದರು. ಆಂಡಯ್ಯನಿಗೆ ಅಚ್ಚಗನ್ನಡದಲ್ಲಿ ಕಾವ್ಯ ರಚಿಸುವ ಉದ್ದೇಶ ಸ್ಪಷ್ಟವಾಗಿದೆ. ಅಲ್ಲದೆ ಜೈನಧರ್ಮದ ತತ್ವಗಳನ್ನು, ಶ್ರೇಷ್ಠತೆಯನ್ನು ಸರಳ ಮಾತುಗಳಲ್ಲಿ ಹೇಳುವುದು ಆ ಮೂಲಕ ಧರ್ಮವನ್ನು ಉಳಿಸಿ ಬೆಳೆಸುವುದು ಆಂಡಯ್ಯನ ಕಾಲದ ಅಗತ್ಯವಾಗಿತ್ತು. ಹಾಗಾಗಿ ತನ್ನ ಕಾವ್ಯವನ್ನು ಸರಳ ನುಡಿಗಳಿಂದ ಕೂಡಿದ ಅಚ್ಚಗನ್ನಡ ಶೈಲಿಯಲ್ಲಿಯೇ ಕಾವ್ಯ ರಚಿಸಿದ. ಆ ಪ್ರಯತ್ನಕ್ಕೆ ಸರ್ವಮಾನ್ಯತೆಯೇನೂ ದೊರೆಯಲಿಲ್ಲ.

ಕ್ರಿ.ಶ. ೧೨೦೦ ರಿಂದ ೧೮೫೦ ರ ನಡುವಿನ ಕಾಲವು ಭಾಷೆಯ ಬೆಳವಣಿಗೆಯಲ್ಲಿ ನಡುಗನ್ನಡ ಮತ್ತು ಹೊಸಗನ್ನಡದ ಸಂಧಿಕಾಲ. ರಾಜಕೀಯ ಮತ್ತು ಚಾರಿತ್ರಿಕ ಹಿನ್ನಲೆಯಿಂದ ಈ ಕಾಲಘಟ್ಟವನ್ನು ಗಮನಿಸಿದಾಗ ಮಹಮ್ಮದೀಯರ, ಮರಾಠರ, ಇಂಗ್ಲೀಷರ ಪ್ರಭಾವ ಕರ್ನಾಟಕದ ಮೇಲೆ ಉಂಟಾಯಿತು. ಈ ಕಾರಣದಿಂದಲೇ ಕನ್ನಡ ಭಾಷೆ ಗಮನಾರ್ಹ ಬದಲಾವಣೆಗೆ ಒಳಗಾಗುವಂತಾಯಿತು. ಅಚ್ಚಗನ್ನಡ ಕಾವ್ಯಭಾಷೆಯು ಆ ಕಾಲದಲ್ಲಿ ರಚನೆಯಾಗುತ್ತಿದ್ದ (ವಚನ ಸಾಹಿತ್ಯ) ಇತರ ಸಾಹಿತ್ಯಿಕ ಭಾಷೆಗಿಂತ ಭಿನ್ನವಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಅಚ್ಚಗನ್ನಡ ಕಾವ್ಯಗಳ ಭಾಷಿಕ ರಚನೆಯನ್ನು ಕುರಿತಂತೆ ವಿವರವಾಗಿ ಚರ್ಚಿಸಲಾಗಿದೆ.

ಅಚ್ಚಗನ್ನಡದಲ್ಲಿ ಕನ್ನಡದ ಸ್ವರಾಕ್ಷರಗಳು ಅಂದರೆ ಅ, ಆ, ಇ, ಈ, ಉ, ಊ, ಎ, ಏ, ಐ, ಒ, ಓ, ಔ, ಸ್ವರಗಳು ಬಳಕೆಯಾಗಿವೆ. ಅದರಲ್ಲಿ ಅ, ಉ, ಓ, ಸ್ವರಗಳಿಂದ ಆರಂಭವಾಗುವ ಪದಗಳು ಹೆಚ್ಚಾಗಿ ಬಳಕೆಯಾಗಿವೆ.

<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
ಅಂಬು	ಅರೆಮಸ	ಅಲಂಪು
ಆನೆರಕ್ಕಸ	ಆರ್ಪು	ಆಗರ
ಇಂಬು	ಇನಿದು	ಇರ್ಪು
ಈಡಿ	ಈರ್	ಈಳಿಗ
ಉರ್ಕು	ಉಸಿಕ	ಉಡೆ
ಒಕ್ಕಲಿಕ್ಕು	ಒಳ್ಳಿದರು	ಒಳ್ಳಿತು
ಓಜೆ	ಓಸರಿಸು	ಓಲಯಿಸಿ
ಎಡ್ಡ	ಏಳ್ಗೆ	ಎಳವೆ

ಅಚ್ಚಗನ್ನಡ ಕಾವ್ಯಗಳಲ್ಲಿ ವರ್ಣಸಮೀಕರಣವನ್ನು ಹಾಗೆಯೇ ವರ್ಣಸಮೀಕರಣವಿಲ್ಲದ ಪದಗಳೂ ಏಕಕಾಲದಲ್ಲಿಯೇ ಬಳಕೆಗೊಂಡಿವೆ. ಕೆಳಗಿನವು ವರ್ಣಸಮೀಕರಣಕ್ಕೆ ಅಪವಾದಗಳು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಕರ್ವು	ಪೆರ್ಮೆ	ಇರ್ಕೆ
ಕೂರ್ಪು	ಪೋರ್ವು	ಇರ್ಪಂ
ಕೂರ್ತು	ಕರ್ಬು	ಪೊರ್ದಿ
ಕೂರ್ಮೆ	ಬರ್ದು	ಬೀರ್ಗು
ತೋರ್ಪು		

ವರ್ಣಸಮೀಕರಣವಿರುವ ಪದಗಳು:

೧. ಎಳ್ದು - ಎದ್ದು

೨. ಬಿರ್ದಿನ - ಬಿದ್ದಿನ

೩. ಪರ್ದು - ಪದ್ದು > ಹದ್ದು

‘ಱ’ ಕಾರವು ‘ರ’ ಕಾರದೊಡನೆ, ‘ೞ’ ಕಾರವು ‘ಳ’ ಕಾರದೊಡನೆ ವಿಲೀನಗೊಳ್ಳುವ ಮತ್ತು ವಿಲೀನಗೊಳ್ಳದಿರುವುದನ್ನು ಅಚ್ಚಗನ್ನಡ ಕಾವ್ಯಗಳಲ್ಲಿ ಕಾಣಬಹುದು. ಕಬ್ಬಿಗರ ಕಾವದಲ್ಲಿ ‘ಱ’ ಕಾರವು ಪ್ರಯೋಗದಲ್ಲಿದೆ. ಆದರೆ ಹೊಸಗನ್ನಡ ಕಾವ್ಯದಲ್ಲಿ ಅದು ‘ರ’ ಕಾರವಾಗಿದೆ. ಹಾಗೆಯೇ ‘ೞ’ ಕಾರವು ಕಬ್ಬಿಗರ ಕಾವ್ಯದಲ್ಲಿ ಪ್ರಯೋಗಗೊಂಡಿದೆ. ಆಧುನಿಕ ಅಚ್ಚಗನ್ನಡ ಕಾವ್ಯಗಳಲ್ಲಿ ಇದು ‘ಳ’ ಕಾರವಾಗಿದೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಮೊಱೆ	ಸಿರಿಯೆರೆಯ	ಒರೆ
ಪೊದೞ್	ಪಾರು	ಎರೆ
ಪೊರೆದೋಱು	ಬೀರು	ಅರ
ಎಱೆಯ	ಮೊರೆ	ಮರ
ಪಾಱು	ಮರೆ	ಸರೆ
ಎೞೆ		
ಬೀಱೆ		
ಪೆಱೆ		

ೞ > ಳ ಕಾರವಾದ ಪದಗಳು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಮೊೞಗು	ಪೊಳಲು	ನೆಳಲು
ಬಾಂಬೊಱಳ್	ಪೊಗಳು	ಪೊಳಲು

ಪೊಟಿಲ್	ತೆಗಳು	ಮಳೆ
ಪುತ್ತುಟಿ	ಮಳೆ	ಒಳರು
ಪೀಲಿದಟಿ	ಪಳಿವು	ಒಳ್ಗು
ಪಮಿ		ಹೊಳಲು
ಗೋಟಿಯಿಲ		

ಹಳಗನ್ನಡ ರೂಪಗಳು ಅಚ್ಚಗನ್ನಡ ಕಾವ್ಯಗಳಲ್ಲಿ ಅನುಸ್ವರಯುಕ್ತವಾಗಿವೆ. ಹಾಗೆಯೇ ಅನುಸ್ವಾರ ಲೋಪವಾಗಿಯೂ ಇವೆ. ಕಬ್ಬಿಗರ ಕಾವ, ಸೊಬಗಿನ ಬಳ್ಳಿಯಲ್ಲಿ ಅನುಸ್ವರಯುಕ್ತವಾದ ರಚನೆಗಳಿದ್ದರೆ, ಕಾಲೂರ ಚೆಲುವೆಯಲ್ಲಿ ಅದು ಯಾದೃಚ್ಛಿಕವಾಗಿದೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಮೂಂಕು	ಮುಸುಂಕು	ಬೇಟೆ > ಬೇಂಟೆ
ಪಾಂಗು	ಮೀಂಟು	ತೋಟ
ಪೊಲಂಬು	ದಾಂಟು	ನೊಂಕು
ಪಾಱುಂಬಳೆ	ತೂಂತು	ತೋಂಟ > ತೋಟ
ಕಮ್ಮಂಗೋಲ	ತಾಂಟು	ದಾಂಟುಮರ
	ಕೋಂಟೆ	
	ಸೋಂಕು	

ಕಬ್ಬಿಗರ ಕಾವದಲ್ಲಿ 'ಪ' ಕಾರವು ನಿಯತವಾಗಿದೆ. ಆದರೆ ಆಧುನಿಕ ಅಚ್ಚಗನ್ನಡ ಕಾವ್ಯಗಳಲ್ಲಿ ಅದು ಅನಿಯತವಾಗಿದೆ. ಹಾಗಿರುವಲ್ಲಿ 'ಪ' ಕಾರದ ಬದಲಾಗಿ 'ಹ' ಕಾರವು ಪ್ರಯೋಗವಾಗುತ್ತದೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಪಕ್ಕರೆ	ಪಿಡಿ	ಪೊಂಗಾಡಿ
ಪೊಂದರು	ಪಾರು	ಪಾಲು
ಪಡಿ	ಹಿರಿಯಾಕೆ	ಹೊಸಮನೆ
ಪುಡಿ	ಹೆಮ್ಮರ	ಹೂ
ಪಂದರ	ಪಳಿವು	ಪೊಂದು
ಪೋಲು	ಹುಬ್ಬು	ಹೊಲ
ಪಚ್ಚಲೆ	ಹೊಲ	ಹೊಸಬಳಿಯ
ಪುತ್ತು	ಹೊಗಳು	ಹೊಸಬಯಕೆ
ಪೆರ್ಬಾವು	ಪೋಕು	ಹಸುರೆಲೆ
ಪೊರಗೆ	ಹಿಂದು	ಪಾಲ್ಗಡಲ

ಹಳಗನ್ನಡದ ವ್ಯಂಜನಾಂತ ಪದಗಳನೇಕವು ಕಬ್ಬಿಗರ ಕಾವದಲ್ಲಿ ನಿಯತವಾಗಿ ವ್ಯಂಜನಾಂತಗಳಾಗಿರುತ್ತವೆ. ಆಧುನಿಕ ಅಚ್ಚಗನ್ನಡ ಕಾವ್ಯಗಳಲ್ಲಿ ಅವು ಅನಿಯತವಾಗಿ ವ್ಯಂಜನಾಂತಗಳಾಗುತ್ತವೆ. ಆದರೆ ಸೊಬಗಿನ ಬಳ್ಳಿಯಲ್ಲಿ ವ್ಯಂಜನಾಂತ ಪದಗಳೇ ಅಧಿಕವಾಗಿವೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಅರಗೇಲ್	ಮರುಳ್	ಪಿಂಬಗಲ್
ಕಟ್ಬಾಳ್	ಆರಯ್	ಸೊಲ್ಲು
ಅಳಲ್	ಉಸಿರ್	ಕಾಲೂರ್
ನಾಳ್	ಮುಗಳು	ಮುಂಬಗಲ್
ಬೆಳ್ದಳಿರ್	ನವಿರ್	ತೊಂಗಲ್
ಆಳ್ಗಳ್	ಇಟ್ಟಡೆಯೊಳ್	ಕಣ್ಣು
ಪಿರಿಯರೊಳ್	ಬಿಟ್ಟಳ್	ಸೊಡರ್
	ಕೇಸುರಿಗಳು	ಪುಗಲ್
		ಪೊನ್ನು

ಸಂಧಿಕಾರ್ಯ:

ಸಾಮಾನ್ಯವಾಗಿ ಮುಕ್ತರೂಪ ಮತ್ತು ಮುಕ್ತರೂಪ ಸಂಧಿಯಾಗುವಾಗ ಪೂರ್ವಪದದ ಮತ್ತು ಉತ್ತರ ಪದದ ಆದಿಪದವು ವ್ಯಂಜನವಾಗಿದ್ದರೆ ಆದೇಶ ಸಂಧಿಯಾಗುತ್ತದೆ. ಪೂರ್ವಪದದ ಅಂತ್ಯವರ್ಣ ಸ್ವರವಾಗಿದ್ದು ಉತ್ತರ ಪದದ ಆದಿವರ್ಣ ಸ್ವರವಾಗಿದ್ದಾಗ ಲೋಪ ಇಲ್ಲವೆ ಆಗಮ ಸಂಧಿಗಳಾಗುತ್ತವೆ. ಹಾಗೆಯೇ ಬದ್ಧರೂಪ ಮತ್ತು ಬದ್ಧರೂಪ ಆಧರಿಸಿ ಸಂಧಿಯಾದಾಗಲೂ ಆದೇಶ ಸಂಧಿಯಾಗುತ್ತದೆ. ಉಳಿದಂತೆ ಲೋಪ ಅಥವಾ ಆಗಮ ಸಂಧಿಗಳಾಗುತ್ತವೆ. ಭಾಷೆಯ ಈ ಮುಕ್ತ ಮತ್ತು ಬದ್ಧ ರೂಪಗಳನ್ನು ಆಧರಿಸಿ ಸಂಧಿಕಾರ್ಯಗಳು ಬೇರೆ ಬೇರೆಯಾಗಿರುತ್ತವೆ. ಅಚ್ಚಗನ್ನಡ ಕಾವ್ಯಗಳಲ್ಲಿರುವ ಕೆಲವು ಸಂಧಿಕಾರ್ಯಗಳನ್ನು ಮಾದರಿಗಾಗಿ ಇಲ್ಲಿ ನೀಡಲಾಗಿದೆ.

ಮುಕ್ತರೂಪ + ಮುಕ್ತರೂಪ :- ಇವು ಬೇರೆ ಭಾಷಾ ಘಟಕದ ಸ್ವತಂತ್ರರೂಪವಾಗಿ ಬಳಕೆಯಾಗುತ್ತವೆ.

ಪಾಲ್ + ಕಡಲು = ಪಾಲ್ಗಡಲು

ಕುಡಿವ + ಪಾಲ್ಗಳು = ಕುಡಿವಾಲ್ಗಳು

ಸುಡು + ಕಾಡು = ಸುಡುಗಾಡು

ಸಿರಿ + ಅರಸ = ಸಿರಿಯರಸ

ಹಿಂ + ಪಂಗಲ್ = ಹಿಂಪಗಲ್

ಮುಂ + ಪಗಲ್ = ಮುಂಪಗಲ್

ಮುಕ್ತರೂಪ + ಬದ್ಧರೂಪ :-

ನೀಟು + ಆಗು = ನೀಟಾಗು

ಪೊಳ್ತು + ಅರೆ = ಪೊಳ್ತರೆ

ನಡೆ + ಉತ್ತ = ನಡೆಯುತ್ತ

ಸವತಿಯರ್ + ಒಳ್ = ಸವತಿಯರೊಳ್

ಬದ್ಧರೂಪ + ಮುಕ್ತರೂಪ :-

ಕಾಲ್ಗಳ್ + ಇಲ್ಲದ = ಕಾಲ್ಗಳಿಲ್ಲದ

ಕನ್ನಡದ + ಒಳ್ಪಿನ = ಕನ್ನಡದೊಳ್ಪಿನ

ಹಸುರಾವಿನ + ಒಲ್ಮೆಯ = ಹಸುರಾವಿನೊಲ್ಮೆಯ

ಬದ್ಧರೂಪ + ಬದ್ಧರೂಪ :- ಭಾಷೆಯಲ್ಲಿ ಇವು ಸ್ವತಂತ್ರವಾಗಿ ಬಳಕೆಯಾಗದೆ ಬೇರೆ ಆಕೃತಿಮಗಳ ಜೊತೆಗೂಡಿ ಬಳಕೆಯಾಗುತ್ತವೆ.

ಕೊನರ್ + ಕೆ = ಕೊನರ್ಗೆ

ಸಂಧಿಕ್ರಿಯೆಯಿಂದ ಆಗುವ ಧ್ವನಿ ವ್ಯತ್ಯಾಸಗಳೇ ಸಂಧಿಕಾರ್ಯಗಳು. ಸಂಧಿಕಾರ್ಯಗಳು ಪದಮಧ್ಯ ಮತ್ತು ಪದಾಂತ್ಯದಲ್ಲಿ ನಡೆಯುತ್ತವೆ. ಪ್ರಕೃತಿಗೆ ಪ್ರತ್ಯಯವನ್ನು ಹೆಚ್ಚುವಾಗ ಆಗುವ ಸಂಧಿಯನ್ನು ಪದಮಧ್ಯಸಂಧಿ ಎನ್ನುತ್ತಾರೆ. ಪೂರ್ವಪದ ಮತ್ತು ಪರಪದದೊಡನೆ ಕೂಡಿ ಆಗುವ ಸಂಧಿಯೇ ಪದಾಂತ್ಯಸಂಧಿ ಈ ಮೇಲಿನ ಸಂಧಿಕಾರ್ಯಗಳನ್ನು ಅನುಲಕ್ಷಿಸಿಯೇ ಸಂಧಿಗಳನ್ನು ಅಂತಸ್ಸಂಧಿ ಮತ್ತು ಬಹಿಸ್ಸಂಧಿಗಳೆಂದು ವಿಂಗಡಿಸಲಾಗಿದೆ. ಅಂತಸ್ಸಂದಿಯಲ್ಲಿ ಲೋಪಸಂಧಿ ಮತ್ತು ಆದೇಶ ಸಂಧಿಗಳು ಕಂಡುಬರುತ್ತವೆ.

೧. **ಲೋಪಸಂಧಿ:** ಸ್ವರದ ಮುಂದೆ ಸ್ವರವು ಬಂದಾಗ ಪೂರ್ವಪದದ ಕೊನೆಯ ಸ್ವರವು ಲೋಪವಾಗುವುದು. ಇದರಿಂದ ಅರ್ಥಕ್ಕೆ ತೊಂದರೆಯಾಗುವುದಿಲ್ಲ. ಇದರಲ್ಲಿ 'ಯ' ಕಾರಾಗಮ 'ವ' ಕಾರಾಗಮ ಎಂದು ಎರಡು ವಿಧ.

ಕಬ್ಬಿಗರಕಾವ	**ಸೊಬಗಿನ ಬಳ್ಳಿ**	**ಕಾಲೂರ ಚೆಲುವೆ**
ಪೂ + ಇನ = ಪೂವಿನ	ಕೂಳು + ಏರಿ = ಕೋಳೇರಿ	ಪೊಳ್ತು + ಏಳ್ಗೆ = ಪೊಳ್ತೇಳ್ಗೆ
ಸಿರಿ + ಎಡೆಯ = ಸಿರಿಯೆಡೆಯ	ಊರು + ಅಲ್ಲಿ = ಊರಲ್ಲಿ	ಬಿದ್ದು + ಅಳಿವ = ಬಿದ್ದಳಿವ
ಗುರು + ಇಕೆ = ಗುರುವಿಕೆ	ಇರು + ಅಲಿ = ಇರಲಿ	ಬಾಳ + ಎಲೆ = ಬಾಳೆಲೆ
ಬಗೆ + ಅಲ್ಲಿ = ಬಗೆಯಲ್ಲಿ	ಮಂಜು + ಎತ್ತ = ಮಂಜೆತ್ತ	ಮಾತು + ಏಕೆ = ಮಾತೇಕೆ
ನಾಡು + ಒಳ್ = ನಾಡೊಳ್	ತಾ + ಎಂದು = ತಾಯೆಂದು	ಕಟ್ಟಿ + ಇರ್ಪ = ಕಟ್ಟಿರ್ಪ
ಸೊಗ + ಇಸು = ಸೊಗಯಿಸು		ಮೈಯಿ + ಇಟ್ಟು = ಮೈವಿಟ್ಟು

ಆದೇಶ ಸಂಧಿ: ಪರಪದದ ಆದಿಯಲ್ಲಿರುವ ಅಘೋಷ ವರ್ಣಗಳು ಸಂಧಿ ಕ್ರಿಯೆಯಾದಾಗ ಘೋಷ ವರ್ಣಗಳಾಗಿ ಪರಿವರ್ತನೆಯಾಗುತ್ತವೆ. ಆದೇಶ ಸಂಧಿಯಂತಹ ಪದರಚನೆಗಳು ಕಬ್ಬಿಗರ ಕಾವದಲ್ಲಿ ಹೆಚ್ಚು ಪ್ರಮಾಣದಲ್ಲಿ ಕಂಡುಬಂದರೆ ಆಧುನಿಕ ಅಚ್ಚಗನ್ನಡದಲ್ಲಿ ಅವುಗಳು ಇನ್ನೂ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತವೆ.

ಕಬ್ಬಿಗರಕಾವ

ಎಳ + ತುಂಬಿ = ಎಳದುಂಬಿ

ನುಣ್ + ಕಾಲು = ನುಣ್ಗಾಲು

ಕಪ್ಪುರೆ + ಕೊಂಡು = ಕಪ್ಪುರೆಗೊಂಡು

ದನಿ + ತೋರುವ = ದನಿದೋರುವ

ಕಾಲ್ + ಪಿಡಿದು = ಕಾಲ್ವಿಡಿದು

ತಲೆ + ತೋರ್ಪ = ತಲೆದೋರ್ಪ

ಪೂ + ತೋಟ = ಪೂದೋಟ

ಸೊಬಗಿನ ಬಳ್ಳಿ

ಎಡೆ + ಕೊಡುವ = ಎಡೆಗೊಡುವ

ಮಳೆ + ಕಾಲ = ಮಳೆಗಾಲ

ಕೆಲ + ಕಬ್ಬಿಗ = ಕೆಲಗಬ್ಬಿಗ

ಬಗೆ + ತೋರು = ಬಗೆದೋರು

ಬಗೆ + ಕೆಟ್ಟು = ಬೆಗೆಗೆಟ್ಟು

ಪೊಸ + ತಾವರೆ = ಪೊಸದಾವರೆ

ಪೊಸ + ವಗೆ = ಪೊಸಬಗೆ

ಪುಲಿ + ತೊಗಲ್ = ಪುಲಿದೊಗಲ್

ಕಾಲೂರ ಚೆಲುವೆ

ಹಸು + ಕೂಸು = ಹಸುಗೂಸು

ಸುಡು + ಕಾಡು = ಸುಡುಗಾಡು

ಮುಂ + ಪಗಲ್ = ಮುಂಬಗಲ್

ಪಿಂ + ಪಗಲ್ = ಪಿಂಬಗಲ್

ತಂಪು + ಎಲರ್ = ತಂಬೆಲರ್

ಪಿಂ + ಪೊಗರ್ = ಪಿಂಬೊಗರ್

ಓರೆ + ಕಾರ = ಓರೆಗಾರ

ಕಯ್ + ಕೊಳಿಸಿ = ಕಯ್ಗೊಳಿಸಿ

ನಾಮಪದ ರಚನೆ: ನಾಮ ಪ್ರಕೃತಿ ಮತ್ತು ಪ್ರತ್ಯಯಗಳು ಸೇರಿದಾಗ ನಾಮಪದಗಳು ರಚನೆಯಾಗುತ್ತವೆ. ಒಂದು ಅಥವಾ ಅದಕ್ಕಿಂತ ಹೆಚ್ಚು ಧ್ವನಿಗಳ ಜೋಡಣೆ ಆಕೃತಿಯಾಗಿ, ಆಕೃತಿ ಆಕೃತಿಮಾ ಆಗಿ ಆಕೃತಿಮಾಗಳು ಶಬ್ದಗಳಾಗುತ್ತವೆ. ಅವುಗಳೇ ನಾಮಾಕೃತಿಮಾಗಳು ಪ್ರಾಣಿ, ವಸ್ತುಗಳ ಹೆಸರನ್ನು ಹೇಳುವುದೇ ನಾಮರೂಪಗಳು. ಇವುಗಳಿಗೆ ಬಹುವಚನ ಪ್ರತ್ಯಯ ಮತ್ತು ವಿಭಕ್ತಿ ಪ್ರತ್ಯಯ ಸೇರಿಸಬಹುದು.

'ಅ' ಕಾರಾಂತ ನಾಮಪದಗಳಿಗೆ 'ಅರ್' ಕಾರ ಸೇರುತ್ತದೆ.

ನೆತ್ತಗಾರ + ಅರ್ = ನೆತ್ತಗಾರರ್

ಗುರುವ + ಅರ್ = ಗುರುವರ್

ಅಕ್ಕರಿಗ + ಅರ್ = ಅಕ್ಕರಿಗರ್

ಕಬ್ಬಿಗ + ಅರ್ = ಕಬ್ಬಿಗರ್

ಮೇಳಗಾರ + ಅರ್ = ಮೇಳಗಾರರ್

ಬಿರ್ದಿನ + ಅರ್ = ಬಿರ್ದಿನರ್

ಸವತಿ + ಅರ್ = ಸವತಿಯರ್

ನಾಡವ + ಅರ್ = ನಾಡವರ್

ಮನ್ನಯ + ಅರ್ = ಮನ್ನಯರ್

ತಿಳಿದ + ಅರ್ = ತಿಳಿದವರ್

ಪೊತ್ತವ + ಅರ್ = ಪೊತ್ತವರ್

'ಇ' ಕಾರ ಮತ್ತು 'ಎ' ಕಾರಾಂತ ಸ್ತ್ರೀಲಿಂಗ ನಾಮ ಪದಗಳಿಗೆ ಕ್ರಮವಾಗಿ ಇರ್ ಮತ್ತು ಅರ್ ಪ್ರತ್ಯಯಗಳು ಪರವಾಗುತ್ತವೆ.

ಪೆಂಡಿ + ಇರ್ = ಪೆಂಡಿರ್

ತಾಯಿ + ಇರ್ = ತಾಯ್ದಿರ್

ಜಾಣೆ + ಇರ್ = ಜಾಣೆಯರ್

ಚೆಲ್ಲಗಾರ್ತಿ + ಅರ್ = ಚೆಲ್ಲಗಾರ್ತಿಯರ್

ಚೆನ್ನೆ + ಅರ್ = ಚೆನ್ನೆಯರ್

ಇಚ್ಛೆಗಾರ್ತಿ + ಅರ್ = ಇಚ್ಛೆಗಾರ್ತಿಯರ್

ಮಾಲೆಗಾರ್ತಿ + ಅರ್ = ಮಾಲೆಗಾರ್ತಿಯರ್

ಬಿಂಕಗಾರ್ತಿ + ಅರ್ = ಬಿಂಕಗಾರ್ತಿಯರ್

ನಪುಂಸಕಲಿಂಗದ ನಾಮ ಪ್ರಕೃತಿಗಳಿಗೆ 'ಗಳ್' ಸೇರುತ್ತವೆ. ಅಪರೂಪವಾಗಿ ಸ್ತ್ರೀಲಿಂಗವಾಚಕ ನಾಮಪದಗಳಿಗೂ 'ಕಳ್' ಪ್ರತ್ಯಯ ಪರವಾಗುತ್ತವೆ.

ಅಂಬು + ಗಳ್ = ಅಂಬುಗಳ್

ರಥ + ಗಳ್ = ರಥಗಳ್

ತರು + ಗಳ್ = ತರುಗಳ್

ಗೆಮ್ಮೆ + ಗಳ್ = ಗೆಯ್ಮೆಗಳ್

ಸೆರಪು + ಗಳ್ = ಸೆರಪುಗಳ್

ನಾಯ್ + ಗಳ್ = ನಾಯ್ಗಳ್

ಪೆಣ್ + ಕಳ್ = ಪೆಣ್ಗಳ್

ಕದಿರ್ + ಕಳ್ = ಕವಿರ್‌ಗಳ್

ತೋಂಟ + ಕಳ್ = ತೋಂಟಗಳ್

ಕಾಲ್ + ಕಳ್ = ಕಾಲ್ಗಳ್

ಗೆಜ್ಜೆ + ಕಳ್ = ಗೆಜ್ಜೆಗಳ್

ಬಂಧು ಸೂಚಕಗಳು: ಬಂಧುಸೂಚಕ ನಾಮ ಪ್ರಕೃತಿಗಳಿಗೆ ಅರ್, ಇರ್ ಪ್ರತ್ಯಯ ಪರವಾಗಿರುತ್ತವೆ.

ಉದಾ : ಅಣ್ಣಂದಿರ್

ಸಹೋದರರ್

ಮಡದಿಯರ್

ನಾಮರೂಪಗಳು: ಅಚ್ಚಗನ್ನಡ ಕಾವ್ಯಗಳಲ್ಲಿ ಕಂಡುಬರುವ ನಾಮಾಕೃತಿಮಾಗಳನ್ನು ಕೆಳಗಿನಂತೆ ಸೂಚಿಸಬಹುದಾಗಿದೆ.

೦೧. **ವಸ್ತುವಾಚಕ :** ವಿವಿಧ ಬಗೆಯ ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕಗಳಾಗಿದ್ದು. ಇದರಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥಕನಾಮ ಎಂದು ಮೂರು ಬಗೆಗಳನ್ನು ಗುರುತಿಸಬಹುದಾಗಿದೆ.

ಅ. **ರೂಢನಾಮಗಳು:** ರೂಢಿಯಿಂದ ಬಂದ ಹೆಸರುಗಳ ಸೂಚಿಸುವುದೇ ರೂಢನಾಮಗಳು.

<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
ಅಂಚೆ	ದೊರಗೆ	ತೊಟ್ಟಿಲು
ಕೋಗಿಲೆ	ಗಿಳಿ	ಕೂಸು
ಆವು	ಬಾಳು	ಬೆಟ್ಟ
ಕನ್ನಡಿ	ಪೊಳಲು	ಹೂ
ಅರಿಲ್	ಪೂ	ಕಲ್ಲು
ಕರ್ವು	ಮರ	ತೆರೆ
ಸಬರಿ	ಪಾಲ್	ಬಿಸಿಲು

ಆ. **ಅಂಕಿತ ನಾಮಗಳು:** ಪರಸ್ಪರರಲ್ಲಿರುವ ಭಿನ್ನತೆಯನ್ನು ತೋರಿಸಲು ಇಟ್ಟ ಹೆಸರುಗಳೇ ಅಂಕಿತನಾಮಗಳು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಕಾವ	ಸಿರಿ	ಬೋಳ
ಅರುಹಂತ	ಸಂಬರಾಸುರ	ಬೆಳ್ಳಿ
ಸರಸತಿ	ನಾರದ	ಹೊನ್ನಿ
ಮಾದೇವ	ರುಕ್ಮಿಣಿ	ದೊಡ್ಡ
ರತಿ	ರತಿ	ಮಸೆ
ಅಸುಗೆ		ಕಾಳ
ಶಿವ		ಕೊರಗು
		ಹೊನ್ನ

ಇ. **ಅನ್ವರ್ಥಕ ನಾಮಗಳು:** ವ್ಯಕ್ತಿಯ ವಿಶಿಷ್ಟ ಗುಣಗಳಿಗೆ ಅನುಗುಣವಾಗಿ ಇಟ್ಟ ಹೆಸರುಗಳೇ ಅನ್ವರ್ಥಕ ನಾಮಗಳು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಗಾವಿಲ	ಸಿರಿಯರೆಯ	ಬೆಟ್ಟಳಿಯ
ಗಾಂಪ	ಎಗ್ಗ	ನುಡಿವೆಣ್
ಸೂಳೆ	ರಕ್ಕಸ	ಮಬ್ಬಿಗ
ಮಿಂಡೆ	ಸೂಳೆ	ಕಡಲಳಿಯ
	ಮುಕ್ಕಣ್ಣ	
	ಉರಿಗಣ್ಣ	

೨. **ಗುಣವಾಚಕಗಳು:** ವಸ್ತು, ಪ್ರಾಣಿ, ವ್ಯಕ್ತಿಗಳ ಗುಣ ಸ್ವಭಾವವನ್ನು ವಿವರಿಸುವ ಶಬ್ದಗಳೇ ಗುಣವಾಚಕಗಳು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ತೋರ	ಪೆರ್ವೊದರ್	ಪೆರ್ಗೆಚ್ಚಲು
ಪೆರ್ಗಡಲ್	ಪುಟ್ಟಗಾತು	ಪರ್ಬಲ್ಲು
ಕುಂಟೆ		ಪೇರೇರು

೩. **ಸಂಖ್ಯಾವಾಚಕ:** ಸಂಖ್ಯೆಯನ್ನು ಸೂಚಿಸುವ ಪದಗಳನ್ನೇ ಸಂಖ್ಯಾವಾಚಕಗಳೆಂದು ಕರೆಯುವರು.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಈರೈದು	ಮೂರುಂ	ಎಣ್ಬರು
ಐಸರಲ	ನೂರು	ಈರೈದು

ಎಣ್‌ದೆಸೆಯೊಳ್	ಇಬ್ಬೆಳಕು
ಚೌವಂದ	ಬಗೆಯೈದು
	ನಾಲ್ಬಗೆಗೆ

೩. **ಪರಿಮಾಣವಾಚಕ:** ವಸ್ತುಗಳ, ಪ್ರಾಣಿಗಳ ಅಳತೆ, ಗಾತ್ರಗಳನ್ನು ಸೂಚಿಸುವ ಪದಗಳೇ ಪರಿಮಾಣವಾಚಕಗಳು.

ಕಬ್ಬಿಗರಕಾವ	**ಸೊಬಗಿನ ಬಳ್ಳಿ**	**ಕಾಲೂರ ಚೆಲುವೆ**
ನೂರ್ಮಡಿ	ನಾಲ್ವಡಿ	ನಾಲ್ಗೊಂಟು

ಸರ್ವನಾಮಗಳು: ನಾಮಪದಗಳಿಗೆ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಇದರಲ್ಲಿ ನಾಲ್ಕು ಪ್ರಕಾರಗಳಿವೆ.

೦೧ ಪುರುಷವಾಚಕ ಸರ್ವನಾಮಗಳು	**ಏಕವಚನ**	**ಬಹುವಚನ**
ಅ.ಉತ್ತಮ ಪುರುಷ	- ನಾಂ, ಆನು, ನಾನು	- ಆಂ, ನಾವ್
ಆ.ಮಧ್ಯಮ ಪುರುಷ	- ನೀನುಂ, ನೀನು	- ನೀವುಂ, ನೀವು
ಇ.ಪ್ರಥಮ ಪುರುಷ	- ಆತಂ, ಆತ	- ಅವರ್ (ಗಳ್)
	- ಅವಳ	- ಅವರ್ ಅವರು

೦೨ ಆತ್ಮಾರ್ಥಕ ಸರ್ವನಾಮಗಳು

ಏಕವಚನ : ತಾನ್, ತಾನು

ಬಹುವಚನ : ತಾವ್, ತಾವು

೦೩ ಪ್ರಶ್ನಾರ್ಥಕ ಸರ್ವನಾಮಗಳು

ಪುಲ್ಲಿಂಗ : ಆವ, ಯಾವನು

ಸ್ತ್ರೀಲಿಂಗ : ಆವಳ್, ಆವಳು

೦೪ ದರ್ಶಕ ಸರ್ವನಾಮಗಳು

ಸಮೀಪದರ್ಶಕ : ಇದು, ಇವು, ಇವ

ದೂರದರ್ಶಕ : ಅದಂ, ಅವು,
ಅದು

ಕೃದಂತಗಳು: ಕೃದಂತಗಳು ಅಪೂರ್ಣ ಕ್ರಿಯೆಯನ್ನು ತಿಳಿಸುತ್ತವೆ. ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿದರೆ ಕೃದಂತ ಪದಗಳಾಗುತ್ತವೆ..

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ನೋಡಿದ	ಪಡೆದ	ಬೆಳೆದ
ಪೇಱಿದ	ಸುತ್ತಿದ	ಅಮುಕು
ಬೆಳೆದ		ತುಂಬಿದ

ತದ್ಧಿತಾಂತಗಳು: ಅಂತ, ಇಗ, ಕೆ, ಗೆ, ತನ, ತದ್ಧಿತ ಪದಗಳಾಗಿವೆ. ನಾಮ ಪ್ರಕೃತಿಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತ ಪದಗಳು ಸೃಷ್ಟಿಯಾಗುತ್ತವೆ.

ಕಬ್ಬಿಗರಗಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಅಕ್ಕರಿಗ	ಅನ್ನಿಗ	ಗುರಿಗಾರ
ಮಾಲೆಗಾಱ	ಜೋಡಿಗ	ಓರೆಕಾರ
ಗಾಡಿಕಾರ್ತಿ	ಕಬ್ಬಿಗ	ಬೇಟೆಗಾರ
ಪುಲ್ಲಡಿಗಿತ್ತಿ		
ಚೆಲ್ಲಗಾರ್ತಿ		
ಬಿಂಕಗಾರ್ತಿ		

ವಿಭಕ್ತಿ ವ್ಯವಸ್ಥೆ: ವಿಭಕ್ತಿ ಪ್ರತ್ಯಯಗಳಿಗೆ ಸ್ವತಂತ್ರ ಅಸ್ತಿತ್ವವಿರುವುದಿಲ್ಲ. ನಾಮಪದದೊಂದಿಗೆ ಸೇರಿದ ಈ ಪ್ರತ್ಯಗಳಿಗೆ 'ನಾಮ ವಿಭಕ್ತಿ ಪ್ರತ್ಯಯ' ಎಂದು ಕರೆಯುವರು. ಇದರಿಂದ ನಾಮಪದ ಕ್ರಿಯಾಪದಗಳಿಗೆ ಇರುವ ಸಂಬಂಧವನ್ನು ತಿಳಿಯಬಹುದಾಗಿದೆ.

ಪ್ರಥಮ	-	ಉಂ, ಉ
ದ್ವಿತೀಯ	-	ಅನ್ ಅಂ
ತೃತೀಯ	-	ಇಂ
ಚತುರ್ಥಿ	-	ಅಂಗೆ
ಪಂಚಮಿ	-	ಇಂ
ಷಷ್ಠೀ	-	ಅ
ಸಪ್ತಮೀ	-	ಒಳ್

ಅಚ್ಚಗನ್ನಡ ಕಾವ್ಯಗಳಲ್ಲಿ ಕಂಡುಬರುವ ವಿಭಕ್ತಿ ವ್ಯವಸ್ಥೆಯ ಮಾದರಿ ಹೀಗಿದೆ.

ಪ್ರಥಮ :	ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
	ಲಕ್ಕಣಮುಂ	ಇದಿರುಂ	ದೊಡ್ಡನುಂ
	ಪುರುಳುಂ	ಸುಯ್ಯುಂ	ಹೂ ಹೊನ್ನು
	ಮೆಯ್ಯಿರಿಯುಂ	ಪಾರಿಪೋಕುಂ	ಎಲ್ಲರುಂ

	ಕಾಮನುಂ	ನೀನಿಂತು	ಮಕ್ಕಳುಂ
	ಅಚ್ಚರಸಿಯುಂ		
ದ್ವಿತೀಯ:	<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
	ಕಬ್ಬಮಂ	ಸಂಬರನಂ	ಪನಿಗಳಂ
	ಕಾವನಂ	ಮದ್ದಂ	ಹೂ ಕೆರೆಗಳಂ
	ಪೂವಿನಂ	ಕಿಸುರಂ	ಬೆಳ್ಮಿನೆಗಳಂ
	ಬದಟರಂ	ಕಬ್ಬವೆಣ್ಣಂ	ಪೆಸರಂ
	ಮಾದೇವಂ	ಮಗನಂ	ಮೂನೆಲಂ
	ಆವನ್	ಕೂಸಂ	ನೆಳಲಂ
	ಆಂಡಯ್ಯಂ	ಇನಿಯಂ	
ತೃತೀಯ:	<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
	ಕೆಜೆಗಳಿಂ	ಅರಸಿಯಿಂ	ಮುದ್ದಿನಿಂ
	ಕೊಳಗಳಿಂ	ಅಣುಗರಿಂ	ಒಳಗಣಿಂ
	ತುಂಬಿಗಳಿಂ	ಮಾಳ್ಕೆಯಿಂ	ಗೆಯ್ಮೆಯಿಂ
	ಕಾಮನಿಂ		ಕರುಗಳಿಂ
			ಬೆಳೆಗಳಿಂ
ಚತುರ್ಥಿ:	<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
	ಬಸಂತಂಗೆ	ರಕ್ಕಸಂಗೆ	ದೊಡ್ಡಂಗೆ
	ಕಾವಂಗೆ	ಮನೆಗೆಲಸಂಗೆ	
ಪಂಚಮಿ:	<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
	ನಲವಿಂ	ಮಾತಿನಿಂ	ಅಳಿವಿನಿಂ
	ಒಲವಿಂ	ನೊತ್ತರದಿಂ	ಪುರುಳಿಂ
	ಏಳ್ಗೆಯಿಂ	ಒಲ್ಮೆಯಿಂ	ಬಿಸಿಲಿಂ
	ಎಳಗಾಯಿಂ		ನೆಲೆಯಿಂ
ಷಷ್ಠೀ:	<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
	ತಾವರೆಯ	ನುಡಿಯ	ಬೆಳ್ಳಿಯ ?
	ಮಲ್ಲಿಗೆಯ	ಮೋಡಿಯ	ಒಡೆಯ
	ಸೇವಂತಿಯ	ಪಂದಿಯ	ಬಾಳೆಲೆಯ

	ತುಂಬಿಯ	ಆಕೆಯ	ಕನ್ನಡಿಯ
	ಬಳ್ಳಿಯ	ಕಪ್ಪಾದ	ಹಸುರೆಲೆಯ
ಸಪ್ತಮಿ:	ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
	ನಾಡೊಳ್	ಸಿರಿಯಾಳ್	ಮರದೊಳ್
	ಬೀದಿಯೊಳ್	ಜಾಯಿಲಗಳ್	ಪೊಂಗಾಡಿಯೊಳ್
	ಚಪ್ಪರದೊಳ್	ನಾಯ್ಗಳ್	ಬಾಗಿಲೊಳ್
	ನಂಟರೊಳ್	ಪೊದೆಯೊಳ್	ಪೊಂಗಾಡಿಯೊಳ್
	ತುಱುಗಾರ್ತಿಯರೊಳ್	ಸವತಿಯರೊಳ್	ಕೋಣೆಯೊಳ್
	ನೆಲವಾಡದೊಳ್	ಕಸರ್ಗಳ್	

ವಿಭಕ್ತಿ ರಚನೆಯಲ್ಲಿ ಅಚ್ಚಗನ್ನಡ ಕಾವ್ಯದಲ್ಲಿ ಸಾಮ್ಯತೆ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಕ್ರಿಯಾಪದ ರಚನೆ: ಕ್ರಿಯಾಪದದ ಮೂಲರೂಪವೇ ಧಾತು. ಧಾತುಗಳು ಮತ್ತು ಪ್ರತ್ಯಯ ಸೇರಿದಾಗ ಕ್ರಿಯಾಪದ ರಚನೆಯಾಗುತ್ತದೆ. ಧಾತುಗಳಲ್ಲಿ ಎರಡು ಬಗೆ.

೧. ಮೂಲಧಾತು - ಇವುಗಳಿಗೆ ಪ್ರತ್ಯಯಗಳು ಸೇರುವುದಿಲ್ಲ.

೨. ಸಾಧಿತ ಧಾತು - ಇವುಗಳಿಗೆ ಪ್ರತ್ಯಯಗಳನ್ನು ಸೇರಿಸಿ ಬಳಸಲಾಗುತ್ತದೆ.

ಉದಾ:- ಓರೆಗಾರ, ಬೇಟೆಗಾರ, ಇತ್ಯಾದಿ.

ಅಚ್ಚಗನ್ನಡ ಕಾವ್ಯಗಳಲ್ಲಿ ಕಂಡುಬರುವ ಧಾತುಗಳನ್ನು ಈ ರೀತಿ ವರ್ಗೀಕರಿಸಬಹುದು:

೧. ಈಕಾರಾಂತ ಧಾತುಗಳು

ಸೀ,

೨. 'ಯ್' ಕಾರಾಂತ ಧಾತುಗಳು

ಗೆಯ್

ಸುಯ್

೩. 'ಇ' ಕಾರಾಂತ ಧಾತುಗಳು

ಸವಿ

ಬಡಿ

ಅಗಿ

೪ 'ಉ' ಕಾರಾಂತ ಧಾತುಗಳು

ಗೆಂಟು	ನುಗ್ಗು	ಕೋದು
ಗುಣ್ಣು	ಕೇಡು	

ಗೊಂಟು

ಗೆತ್ತು

೫ 'ಎ' ಕಾರಾಂತ ಧಾತುಗಳು

ದಿಂಟೆ	ಪೊರೆ	ಕುಂಟೆ
ನಲ್ಲೆ	ಪಕ್ಕೆ	
ನಲೆ	ಪೆರ್ಮೆ	

೬ 'ಉ' ಕಾರಾಂತ ದ್ವಿತ್ವ ಧಾತುಗಳು

ಬಿರ್ದು	ಬಿತ್ತು	ಮುತ್ತ
ಮೆಲ್ಲು	ರಯ್ಯ	ಸಿಗ್ಗು

ಇವುಗಳನ್ನು ಒಂದಕ್ಷರದ, ಎರಡಕ್ಷರದ ಹಾಗೂ ಮೂರಕ್ಷರದ ಧಾತುಗಳು ಎಂದೂ ಕರೆಯಬಹುದಾಗಿದೆ.

ಕ್ರಿಯಾಪದ: ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿದಾಗ ಕ್ರಿಯಾಪದಗಳು ಉಂಟಾಗುತ್ತವೆ. ಇವು ವಾಕ್ಯದಲ್ಲಿಯ ಕ್ರಿಯೆಯ ಅರ್ಥವನ್ನು ಪೂರ್ಣಗೊಳಿಸುತ್ತವೆ. ಕಾಲಾರ್ಥಕ, ನಿಷೇದಾರ್ಥಕ, ವಿದ್ಯರ್ಥಕ ಎಂಬ ಮೂರು ಬಗೆಯ ಕ್ರಿಯಾಪದಗಳು ಕಂಡುಬರುತ್ತವೆ.

ಕಾಲಾರ್ಥಕ ಕ್ರಿಯಾ ಪದಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.

೧. **ವರ್ತಮಾನ ಕಾಲ:** ಸದ್ಯದ ಕಾಲದಲ್ಲಿ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುವುದು ವರ್ತಮಾನ ಕಾಲ. ಇಲ್ಲಿ ಬಳಕೆಯಾಗಿರುವ ಪ್ರತ್ಯಯಗಳು ಉತ್, ತ್, ಎವು, ಇದ್.

<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
ಪಾಡುತಿರ್ಪ	ಪೊಗಳುತ್ತ	ನುಡಿಯುತಿರ್ಕುಂ
ಸೋಲಿಪುದು	ತೆಗಳುತ್ತ	ಚೆಲ್ವಿರ್ಪ
ತೆಳೆದಿರ್ಪ	ಬೊಬ್ಬಿರಿಯುತ್ತ	ನುಂಗಿರ್ಪ
ತಣಿಪುತ್ತಿರೆ	ಜಗಳವೆಸಗುತ್ತ	ಬೆಳೆದಿರ್ಪ
ನೆರೆಯುತ್ತ	ಅಡಿಯಿಡುತ	
	ಜುಗುಳುತ್ತ	
	ಇರ್ದನು	

೨. **ಭೂತಕಾಲ:**ಈಗಾಗಲೇ ನಡೆದು ಹೋಗಿರುವ ಕ್ರಿಯೆಯ ಕಾಲವನ್ನು ಸೂಚಿಸುತ್ತದೆ. ಇಲ್ಲಿ ಬಳಕೆಯಾಗುವ ಪ್ರತ್ಯಯಗಳು ಇದ್,ದ್

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ನೆಗೆದ	ಬಲಿದ	ಸುಗಿದ
ಪುದಿದ	ಇರ್ಕು	ನೇದ
ಬಂದ	ಸಮೆದ	ಕಪ್ಪಾದ
ನೋಡಿದ	ಪುದಿದ	ಮುಳುಗಿಸಿದ
ಬಂದಿರ್ಪ	ಮಸೆದ	ನಡೆದ
ನಿಂದ	ಕೋದ	ಬೆಳೆದ
ಪೊಕ್ಕಂ	ಪಡೆದ	ಮಸೆದ
		ಮುರಿದ
		ನುಡಿದ

೩. ಭವಿಷ್ಯತ್‌ಕಾಲ: ಮುಂದೆ ನಡೆಯಬಹುದಾದ ಕ್ರಿಯೆಯನ್ನು ಸೂಚಿಸುತ್ತದೆ. ಇಲ್ಲಿ ಬಳಕೆಯಾಗಿರುವ ಪ್ರತ್ಯಯಗಳು ಉವ್, ವ್.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಮಿಳಿರ್ಪ	ಪಾರಿಪೋಕು	ಹೊಂಚು
ಆಡುವ	ತಿರಿವ	ಬೆರೆವ
ನಡೆದೋರುವ	ನುಡಿವಂ	ಬಳೆವ
ತೀಡುವ	ನಡೆವಂ	ಬಸಿವ
	ಪಿಡಿವ	ಬೇವ

ಪುರುಷವಾಚಕ ಪ್ರತ್ಯಯಗಳು:

ಏಕವಚನ	ಬಹುವಚನ
ಎನ್, ಎಂ, ಐ	ಆನ್, ಇರೆ, ಅರೆ
ಪುಲ್ಲಿಂಗ - ಅಂ, ಆನ್, ಅನು	ಆರ್, ಇರ್, ಅರು
ಸ್ತ್ರೀಲಿಂಗ - ಅಳ್, ಅರ್	ಅಳ್
ನಪಂಸಕಲಿಂಗ - ಇತ್, ತ್ತ್	ಅವ್, ವ್, ಒಳ್, ಗಳ್
ದ್, ಅದ್	
ಅಯ್	

ಎನ್	ಎಂ	ಅಂ	
ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ	
ಬರೆವೆನ್	ಪೊರೆವಂ	ಆಳ್ವಂ	
ಪೇಳ್ವೆನ್	ಕಂಡೆಂ	ತಾಳ್ದಂ	
ಸಲಿಸುವೆನ್	ತಂಪುಗೆಯ್ವೆಂ	ಬಿಟ್ಟಂ	
ಒರವೆಂ	ನಿಂದಂ	ನೋಡಿದಂ	
		ಬೀರ್ದಂ	

ಆನ್ /ಅನ್	ಅನು	ಅಳ್
ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಕೊಟ್ಟಾನ್	ಸಾರ್ವನು	ಒಪ್ಪುವಳ್
ಆರಯ್ವಾನ್	ನಡೆದನು	ಇರ್ಪಳ್
ಕಣ್ಣಿಡುವನ್	ಬದುಕುವನು	ನೋಡುವಳ್
	ನುಡಿದನು	ನಾಚುವಳ್
		ತೂಗುತಿಹಳ್
		ಅದಿರ್ವಳ್
		ನಡೆಯುವಳ್
		ಕಾಯುವಳ್
		ಬಳೆದಳ್

ಅಯ್	ಆ	ಬಹುವಚನ	ಅರೆ
ಪೋಲ್ತಯ್	ನುಡಿಯಾ	ಇರೆ	ಅರಿಯರೆ
ಕೇಳ್ವೈ		ಅಱಿಯಿರ್	
ಕರಿಪ್ಪೈ		ನೋಡಿರೆ	
ಆರಯ್			

ಅರ್	ಅರು
ಇರ್ದರ್	ನೋಡುವರು
ಇಕ್ಕಿದರ್	
ನಡೆತಂದರ್	
ನುಡಿವರ್	

ಪೊರೆಯರ್

ಆಳ್ದರ್

ಎತ್ತಿದರ್

ಕಜೆದರ್

ಪೊಟ್ಟರ್

ಇರ್ದರ್

ಹೊರಟಿಹರ್

ಪಿರಿದರ್

<u>ಇರ್</u>	<u>ಒಳ್</u>	<u>ಗಳ್</u>
ವೆಂಡಿರ್	ನಾಡೊಳ್	ಗೆಯ್ಮೆಗಳ್
ಅಣ್ಣಂದಿರ್		ಕಿಚ್ಚುಗಳ್
ತಾಯ್ಬಿರ್		ಸೆರಪುಗಳ್

ವಿಧ್ಯರ್ಥಕ: ಇರ್, ಇರು, ಇಸು, ಇಗೆ, ವಿಧ್ಯರ್ಥಕ ಪ್ರತ್ಯಯಗಳಾಗಿದ್ದು. ಆಜ್ಞೆ, ಅಪ್ಪಣೆ, ಬಿನ್ನಹ, ಆಶೀರ್ವಾದ ದಂತಹ ಕ್ರಿಯಾಪದಗಳೇ ವಿಧ್ಯರ್ಥ ಕ್ರಿಯಾಪದಗಳಾಗಿವೆ.

<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
ಮಾತಾಡದಿರ್	ಹಾರದಿರು	ನುಡಿ
ಮಿಡುಕದಿರ್	ಕಟ್ಟದಿರು	ಆಳ್ಗೆ
ಮೇಲ್ಬೀಳದಿರ್	ಒದವಿಸು	ನೀಳ್ಗೆ
ಸೊರ್ಕದಿರ್		ಏಳ್ಗೆ
ಮೆಯ್ಸೋಂಕದಿರ್		
ಮುಗಿದಿರ್		
ನೂಂಕದಿರ್		

ನಿಷೇದಾರ್ಥಕಗಳು: ಎ, ಅನು, ಅರು, ಅ, ಇವು ನಿಷೇದಾರ್ಥಕ ಪ್ರತ್ಯಯಗಳಾಗಿವೆ. ಕ್ರಿಯೆಯು ನಡೆಯದೆ ಇರುವುದನ್ನು ಸೂಚಿಸುವ ಪದಗಳೇ ನಿಷೇದಾರ್ಥಕ ಪದಗಳು

<u>ಕಬ್ಬಿಗರಕಾವ</u>	<u>ಸೊಬಗಿನ ಬಳ್ಳಿ</u>	<u>ಕಾಲೂರ ಚೆಲುವೆ</u>
ಎಱಗ	ಬಿಡಿಸದೆ	ಬಿಡದೆ
ಓದ	ನೋಯದೆ	ಇರದೆ
ಮೆಚ್ಚ	ಅರಿಯದೆ	

ಸವನಿಸದು	ಬಾರದ
ತೊಲಗದೆ	
ಬಾಗದ	
ಅಳ್ಕದ	
ಬಾಳದ	
ಓಡದ	

ಅಚ್ಚಗನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಕ್ರಿಯಾಧಾತುಗಳು

ಅಮರ್ಚು	ಎಳಹು	ಒಕ್ಕಲಿಕ್ಕು
ಅಳುರ್ಕೆ	ಉಳ್ಕು	ಕೆಳರ್
ಅಗುರ್ವಿಸು	ಉಣ್ಣಿಸು	ಕೋಪಗೊಳ್ಳು
ಅಂಗೈಸು	ಉಸಿಕು	ಕವ್ವರೆಗೊಳ್ಳು
ಅಡಸು	ಉಕ್ಕುಡಿಸು	ಕವರ್
ಆಳ್	ಉರ್ಕ್ಕು	ಕಡಂಗು
ಅಳುರ್	ಉಚ್ಚಳಿಸು	ಕಿಡಿಸು
ಅಳಿ	ಉಜ್ಜಳಿಸು	ಕನಲು
ಆರೈ	ಉಗ್ಗಡು	ಕೊನೆದು
ಅನು	ಎಳಸು	ಕೋದು
ಅಳ್ಕು	ಎಣಿಸು	ಕುಂಬಿಡು
ಅಲುಗು	ಎಸು	ಕಂಪೊರೆ
ಅರಗು	ಎಡಗು	ಕೊನರು
ಆರ್	ಏಡಿಸು	ಕೈವಾರಿಸು
ಆಟಿಪು	ಬಗೆ	ಕಿಂಗೊಳಿಸು
ಅಂಗವಿಸು	ಒಳರ್	ಕುನಿಸು
ಓದು	ಒಕ್ಕಡಿಸು	ಕೀರು
ಈಳ್	ಒಸೆ	ಕೊನೆ
ಈಡಾಡು	ಓವು	ಫಲಪಡೆ
ಈಡಿರಿ	ಒರೆ	ಕೆಕ್ಕರಿಸು
ಉಣು	ಒಸರಿಸು	ಕೆಳರ್

ಉಲಿ	ಒಸೆ
ಉಗಿ	ಓತುಕೊಳ್ಳ

ಅಚ್ಚಗನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಕ್ರಿಯಾಪದಗಳು

ಕಾವಲು/ಕಾವಲ್	ತೊಯ್ಯು	ಬಹು
ಕಲಿ	ತಿರಿ	ಬೀಗು
ಕಾಳು	ತೀವು	ಬೇಳ್
ಕುಡು	ನೆರೆ	ಅರಿ
ಗೆತ್ತು	ನೀಳ್	ಬಳೆ
ಗಳಪು	ನಿರಿಬಿಗಿ	ಬೇ
ಜುಳುಹು	ನೆರೆ	ಪರ್ವು
ಜಮಿಟು	ನುಗುಳ್	ಪೆರ್ಚು
ಹರಟು	ನೇವರು	ಪೂರ್ವು
ಜಿಗು - ಜಾರು	ನೂಂಕು	ಮಲೆ
ಜೋರು	ಪುದ್ದು	ಮೋದು
ತುಟಿಲ್	ಪೊಂದು	ನೊರೆ
ತೆತ್ತು	ಪದೆ	ಮಣಿ
ತೊನೆ	ಪುದಿ	ಮಿಡುಕು
ತಿಣುಕು	ಪೊಂಗು	ಮುಳಿ
ತಳರ್	ಪುಗು	ಮಸಗು
ತಂದವಿರ್	ಪೊಗು	ನೀ
ತೊಡು	ಹರಸು	ಮುಸುಂಕು
ತೊಡೆ	ಪರಿಪಡು	ಮುಗ್ಗರು
ತಿಮಿರ್	ಪಣ್ಣು	ಸವಣಿಸು
ತಲೆವೆಡು	ಪರ್ದು	ಸೂಡು
ತೆಣರ್	ಪಾಳು	ಸೂಳೈಸು
ತೇಂಕು	ಪೂಸು	ಸೋಗು
ಹೊಳಲು	ಪೊದ್ದು	ಸುಯ್ಯು
ತೋಡು		ಸುಗಿ

ಸೆಲೆ

ಸಿಗ್ಗು

ಸಯ್ತು

ಸುಯಿ

ಸಮೆ

ಸೀ

ಸವಣು

ಸೊಂಕು

ಸೊಂಡು

ಹೊಂಚು

ಅಳಿ

ಈ ಮೇಲಿನ ಸಾಮಾನ್ಯ ಭಾಷಿಕ ಲಕ್ಷಣಗಳಿಗೆ ಹೊರತಾಗಿ ಅಚ್ಚಗನ್ನಡ ಕಾವ್ಯ ಭಾಷೆಯಲ್ಲಿ ಕಂಡುಬರುವ ವಿಶೇಷ ಲಕ್ಷಣಗಳು.

೧. 'ಳ' ಕಾರವು 'ಣ' ಕಾರವಾಗುತ್ತದೆ.

ಗೆಳಸು - ಗೆಣಸು

೨. ಪದ ಮಧ್ಯ ಮತ್ತು ಪದಾಂತ್ಯದಲ್ಲಿ 'ಶ' ಕಾರ 'ಸ' ಕಾರವಾಗಿ ಬಳಕೆಯಾಗಿದೆ. ಆದರೆ ಕಾಲೂರ ಚೆಲುವೆಯಲ್ಲಿ ಇಂತಹ ಪದಗಳು ಕಂಡುಬರುವುದಿಲ್ಲ.

ಕಬ್ಬಿಗರಕಾವ	ಸೊಬಗಿನ ಬಳ್ಳಿ
ಅಸುಗೆ	ಸಿಸು
ಜಸ	ಸಂಕೆ
ಪಾಸ	ಸಂಬರ
ಸಿವ	ಸಂಕೆ
ಸೇಸೆ	ಸೊನ್ನೆ
ಸಬರಿ	
ಸಂಕ	
ಸಂಕಲೆ	

೩. ಹಳಗನ್ನಡದ 'ಪ' ಕಾರಾಂತ ಕೆಲವು ಪದಗಳು ಹೊಸಗನ್ನಡದಲ್ಲಿ 'ಹ' ಕಾರವಾಗುತ್ತವೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಪಂದರ	ಪೊಸೆದು	ಪೂ
ಪಕ್ಕಜೆ	ಪರಿಜ	ಪುಲಿ
ಪಚ್ಚೆ	ಪುರುಳು	ಪೊಳ್ತರೆ
ಪಗಲಾಣ್ಮ	ಪುಚ್ಚಳಿ	ಪೊರ್ದು
ಪಜ್ಜಳಿಸು	ಪೊರೆ	ಪುಗಿಲ್
ಪಡಿ	ಪೆರೆ	ಪಾಲ್ದೊರೆ
ಪಡ್ಡಳಿ	ಪುತ್ತು	ಪಿರಿತಿನಿಸು
ಪಡೆವಳ್ಳ	ಪೊಲಬು	ಪಕ್ಕೆ
ಪಣೆದರ	ಪುಚ್ಚಳಿ	ಪುದಿದ
ಪರಿವಿಡಿ	ಪಟ್ಟುಡೆ	ಪೊಸಪೊಗರ್
ಪತ್ತುಗೆ	ಪಣೆಗಣ್ಣ	ಪೇರೊಡಲ
ಪವಣ್	ಪಂಬಲಿಸು	ಪೊಂಗು
		ಪುದುವಾಳ್ಕೆ

ಹೊಸಗನ್ನಡದಲ್ಲಿ 'ಇ' ಕಾರಾದಿಯಾದ ಕೆಲವು ಪದಗಳು 'ಎ' ಕಾರಾಂತಗೊಂಡು ಅಚ್ಚಗನ್ನಡ ಕಾವ್ಯದಲ್ಲಿ ಬಳಕೆಯಾಗಿವೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ
ಎಳೆ	ಎದಿರು

ತತ್ಸಮಗಳ ಬಳಕೆ ಅಚ್ಚಗನ್ನಡ ಕಾವ್ಯಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ
ಕಾವ	ನಿವಿಸ
ಮಾಲೆ	ಅನ್ನೆಯ
ರನ್ನ	ಸಿರಿ
ಮಲ್ಲಿಗೆ	ರಕ್ಕಸ
ಕೋಗಿಲೆ	ರನ್ನ
ಜಸ	

'ಬ' ಕಾರ 'ವ' ಕಾರವಾಗಿ ಬದಲಾಗಿದೆ.

ಬಲ್ಲಹ	-	ವಲ್ಲಭ
ಬಾಸುಗಿ	-	ವಾಸುಕಿ
ಬಿತ್ತರ	-	ವಿಸ್ತಾರ
ಬೆಸನ	-	ವ್ಯಸನ

'ಮ' ಕಾರ 'ವ' ಕಾರವಾಗಿದೆ.

ಬೆಮರು	-	ಬೆವರು

ಹಾಗೆಯೇ ಕಬ್ಬಿಗರಕಾವ ಮತ್ತು ಸೊಬಗಿನ ಬಳ್ಳಿಯಲ್ಲಿ ತದ್ಭವಗಳು ಬಳಕೆಯಾಗಿವೆ. ಕಾಲೂರ ಚೆಲುವೆ ಮಾತ್ರ ಇದಕ್ಕೆ ಅಪವಾದವಾಗಿದೆ.

<u>ಕಬ್ಬಿಗರಕಾವ</u>

ತಿರಿಸುಳಿ	ಅರುಹ	ಅರವೆಣ್ಣ
ಬಿಜ್ಜೆ	ಕಬ್ಬ	ಗೊಟ್ಟಿ
ಚಾಗ	ಅಚ್ಚರಸಿ	ಅಚ್ಚಿ
ಅಂಚೆ	ಅಸುಗೆ	ಎಳೆ
ಕಬ್ಬ	ಕಜ್ಜ	ಕತ್ತುರಿ
ಕರ್ಮ	ಗೊಟ್ಟ	ಗೋಸ
ಗೋಸಣೆ	ಚಾಗ	ಜಸ
	ಬೀಯ	ಬನ್ನ

<u>ಸೊಬಗಿನ ಬಳ್ಳಿ</u>

ಸಂಬರ	ಬೊಮ್ಮ	ಉಜ್ಜುಗ
ಉಗ್ಗಡ	ಜೋಗಿ	ಜವ್ವನ
ಹೊತ್ತಗೆ	ಪತ	ಸಂಧ್ಯಾ
ಪಾಸ	ಮೋರೆ	ಸರ
ಸಜ್ಜೆ	ಸಗ್ಗ	ಸನ್ನ
ಸೊದೆ	ಸಿಸು	ಹದಿಬದೆ

ಕಾಲೂರ ಚಲುವೆಯಲ್ಲಿ ತದ್ಭವಗಳಿಗೆ ಬದಲಾಗಿ ಕನ್ನಡದೇ ಆದ ಹೊಸ ಪದಗಳನ್ನು ರಚಿಸಲಾಗಿದೆ.

ಮಬ್ಬಿಗ	ಜುಣುಗುವಳ್	ಮುಂಬಗಲ್
ಬೋಳಂ	ಪಿಂಬಗಲ್	ಪೊಳ್ತರೆ
ಹಿಂಬಾಳ್	ಬಯ್ಗಿನ	ಕಡಲಳಿಯ
ಅಳ್ತಿಯಳಲುಗಳನುಂ	ಬೆಟ್ಟಳಿಯ	ತಳ್ಕಿಸು
ಮೇಲ್ನೆಲ	ಅಳಿತಾರ್	ಬಯಕೆದರು
ನುಡಿವೆಣ್ಣೆ	ಕಡಲಣುಗಿ	ಮಲರ್ಗಣ್ಣ
ಜುಣುಗಿ	ನಿಲ್ಮನೆ	ಹೊರಳೆ
ಕೊಳ್ಕೊಡೆ	ಪಸ	ಕೀಳ್ನೆಲ
ಬರ್ದಿಲ	ಕೈಗಟ್ಟಿ	ಬಿದ್ದಣ
ಅಲ್ಲಣದ	ಇನ್ನುಣಿಸು	ಇನ್ನುಲಿ
ತೊಣೆವ		

ಹೊಸಶಬ್ದಗಳು: ಅಚ್ಚಗನ್ನಡ ಕಾವ್ಯಗಳಲ್ಲಿ ಅನೇಕ ಹೊಸ ಪದಗಳು ಪ್ರಯೋಗವಾಗಿವೆ. ಅವು ಈ ಕಾವ್ಯಗಳ ಮುಖ್ಯ ಲಕ್ಷಣಗಳೂ ಆಗಿವೆ.

ಕಬ್ಬಿಗರಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಅರೆವೆಣ್ಣ	ಕಯ್ಪೆ	ಕುವಿದ
ಇಂಗದಿರ್	ಕಂಡಬಟ್ಟೆ	ಆಳ್ವಲೆ
ಸಿರಿಕಂಡ	ಕುಡಿಯರ್	ಬಾಳೆಲೆಯ
ಮೆಯ್ಗಣ್ಣ	ಇಚ್ಚೆಗ	ಆಳ್ದಳಲ್
ಮೇಲೂರ್	ಮಂಜಿಟಿ	ಬೇಳಂಬ
ಬೆಂಗದಿರ್	ಸಗ್ಗಿಗರ್	ಬಾಯ್ವಗೆಯ
ಬಿದುಗಲ್	ಸಿರಿಯರಸ	ತೊಡವಪ್ಪ
ಬಿಜ್ಜೋದರಿ	ಸಂಬರ	ಸಸಿನ
ಬಾಸುಗಿ		ಕುಂಬಿಡು
ಬಾಂದೊಜೆ		ಇಂಬೊಗರ್
ಬಂಡು		ಕಿಸುವಣ್ಣು
ಪೊಣರ್ವಕ್ಕಿ		ಕಳವೆ
ಪೊಡೆಯಲರ		ಗೋಳ್ಮೆಯ

ಪುಲ್ಲವಡಿಗಿತಿ
ನೆತ್ತಗಾರ
ನೆಜೆದಿಂಗಳ್
ಪಗಲಾಣ್ಮ
ದುಟ್ಟಗೊರವ
ದಿಮ್ಮಿದರ್
ಅರಲಿಚರ

ಕೀಳ್ಮೇಳು
ಸೂಸಕ
ಮೋದಿ
ಮಣ್ಣಯ್ಯ
ಬಾಳ್ಮರ
ಗೊಣಸು
ಬೇಳ್ಮಾಡಿ
ಮರೆಮ್ಮೆ
ಕಡಲಳಿಯ
ಬೆಟ್ಟಳಿಯ
ನುಡಿವೆಣ್ಣು
ಕಡಲಣುಗಿ
ಬಿಡುಗಣ್ಣವರ್
ಪೊನ್ನೊಡೆಯ

❐

ಅಧ್ಯಾಯ-೯

ಅಚ್ಚಗನ್ನಡ ಮತ್ತು ಆಧುನಿಕ ಚಿಂತನೆಗಳು

ಭಾಗ -೧

ಡಾ.ಡಿ.ಎಸ್. ಶಂಕರಭಟ್ಟರು ಕನ್ನಡ ಭಾಷೆಯ ಬಗೆಗೆ ಸ್ವತಂತ್ರವಾದ ಚಿಂತನೆಯನ್ನು ಮಾಡುತ್ತ ಬಂದವರು ಅವರ ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಕನ್ನಡಕ್ಕೆ ಬೇಕು ಕನ್ನಡದೇ ವ್ಯಾಕರಣ, ಕನ್ನಡ ವಾಕ್ಯ ರಚನೆ, ಕನ್ನಡ ಪದ ರಚನೆಗಳೆಲ್ಲ ಕನ್ನಡ ಭಾಷೆಯ ಬಗೆಗೆ ಆಳವಾದ ಅಧ್ಯಯನಗಳಾಗಿವೆ. ಅವರ ಇತ್ತೀಚಿನ ಹೊಸ ಪುಸ್ತಕವೇ ಕನ್ನಡ ಬರಹವನ್ನು ಸರಿಪಡಿಸೋಣ ಎಂಬುದಾಗಿದೆ.[೧] ಈ ಪುಸ್ತಕದಲ್ಲಿ ಡಾ.ಡಿ.ಎನ್.ಶಂಕರಭಟ್ಟರು ಕನ್ನಡ ಬರವಣಿಗೆಯ ಸಮಸ್ಯೆಯ ಬಗೆಗೆ ವಿವರವಾಗಿ ಚರ್ಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಚರ್ಚೆಗಳು ಹೀಗಿವೆ.

ಅಚ್ಚಗನ್ನಡ ಮತ್ತು ಆಧುನಿಕ ಚಿಂತನೆಗಳು.

ಹಿಂದಿನ ಅಧ್ಯಾಯದಲ್ಲಿ ಅಚ್ಚಗನ್ನಡ ಪರಿಕಲ್ಪನೆಯನ್ನು ವಿವರಿಸುತ್ತಾ ಪ್ರಾಚೀನ ಮತ್ತು ಆಧುನಿಕ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅದನ್ನು ಸಾರಾಂಶ ರೂಪದಲ್ಲಿ ಹೇಳುವುದಾದರೆ ಆಂಡಯ್ಯ ಮೊದಲಾದ ಕವಿಗಳು ಅಚ್ಚಗನ್ನಡವೆಂದರೆ ಸಂಸ್ಕೃತವನ್ನು ಬೆರೆಸದಿರುವುದು ಎಂದಾಗಿ ಅರ್ಥೈಸಿದ್ದಾರೆ. ಮುಳಿಯ ತಿಮ್ಮಪ್ಪಯ್ಯ ಮೊದಲಾದ ಆಧುನಿಕ ಚಿಂತಕರು ಅದು ತತ್ಸಮ, ತದ್ಭವ, ಸಮಸಂಸ್ಕೃತ ಮೊದಲಾದವುಗಳ ಬಳಕೆಯಿಂದ ಕನ್ನಡಕ್ಕೆ ಒಂದು ವಿಶಿಷ್ಟ ಪ್ರಾಕೃತ ರೂಪವನ್ನು ಕೊಡುವ ಪ್ರಯತ್ನವೆಂದು ವಿವರಿಸಿದ್ದಾರೆ. ಈ ಅಧ್ಯಾಯದಲ್ಲಿ ಇಂತಹ ಚಿಂತನೆಯ ಎಳೆಗಳನ್ನು ವಿಸ್ತರಿಸುತ್ತಾ ಕನ್ನಡದ ಬಗೆಗೆ ಹೊಸದಾಗಿ ಚಿಂತಿಸುತ್ತಿರುವ ವಿದ್ವಾಂಸರು ಮುಖ್ಯವಾಗಿ ಡಾ.ಡಿ. ಎನ್. ಶಂಕರಭಟ್ಟರು ಹೇಗೆ ಮುಂದುವರೆಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ವಿವರಿಸುವ ಪ್ರಯತ್ನ ಮಾಡಲಾಗುತ್ತದೆ. ಆ ಮೂಲಕ ಅಚ್ಚಗನ್ನಡ ಪರಿಕಲ್ಪನೆಯು ಕೆಲವರು ಭಾವಿಸಿದ ಹಾಗೆ ಕನ್ನಡದ ಅಲಕ್ಷಿತ ಚಿಂತನ ಕ್ರಮ ಎಂಬುದರ ಬದಲು ಅತ್ಯಂತ ಆಧುನಿಕವಾದ ಚಿಂತನಾಕ್ರಮ ಎಂಬುದನ್ನು ಸಾಧಿಸುವ ಪ್ರಯತ್ನ

ಮಾಡಲಾಗುವುದು. ಆದುದರಿಂದ ಈ ಅಧ್ಯಾಯದ ಮೊದಲಿಗೆ ಡಿ. ಎನ್. ಶಂಕರಭಟ್ಟರ ಚಿಂತನೆಯನ್ನು ವಿವರವಾಗಿ ಮಂಡಿಸಲಾಗುವುದು.

ಕನ್ನಡ ಬರಹ ಪ್ರಾರಂಭದಿಂದಲೂ ಸಂಸ್ಕೃತ ಪ್ರಭಾವದಲ್ಲಿಯೇ ಬೆಳೆದುಬಂದಿರುವುದರಿಂದಾಗಿ ಕನ್ನಡ ಬರಹದಲ್ಲಿ ಹೆಚ್ಚು- ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವುದು ಮತ್ತು ಅಂತಹ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವುದು ಕಂಡುಬರುತ್ತದೆ. ನಾವು ಲಿಪಿಯ ಕಾರಣದಿಂದಾಗಿ ಕನ್ನಡಕ್ಕೆ ಬಂದ ಸಂಸ್ಕೃತ ಪದಗಳನ್ನು ಯಾವುದೇ ಬದಲಾವಣೆ ಮಾಡದೆ ಹಾಗೆಯೇ ಬರೆಯುತ್ತೇವೆ. ಇದರಲ್ಲಿಯೂ ಮತ್ತೆ ಬೇಧ ಮಾಡಲಾಗುತ್ತದೆ. ಇಂಗ್ಲೀಷ್, ಪರ್ಶಿಯನ್, ತಮಿಳು ಮೊದಲಾದ ಭಾಷೆಗಳಿಂದ ಎರವಲಾಗಿ ಬಂದ ಪದಗಳನ್ನು ನಮ್ಮ ಉಚ್ಚಾರಣೆಗನುಸಾರವಾಗಿ ಬದಲಾಯಿಸಿಕೊಂಡು ಬರೆಯುತ್ತೇವೆ. ಎಂಬುವುದನ್ನು ಹೀಗೆ ಹೇಳುತ್ತಾರೆ.[೨]

ಉದಾ: ಇಂಗ್ಲೀಷಿನ theatre ಎಂಬುದನ್ನು ಕನ್ನಡದಲ್ಲಿ ಥಿಯೇಟರ್ ಎಂದಾಗಿ ಬರೆಯುತ್ತೇವೆ. ಆದರೆ ಇಂಗ್ಲೀಷಿನಲ್ಲಿ ಪದದ ಮೊದಲಿಗೆ ಮಹಾಪ್ರಾಣಾಕ್ಷರವು ಬರುವುದಿಲ್ಲ. ಅದು ಊಷ್ಮ ವ್ಯಂಜನವಾಗಿ ಬಳಕೆಯಾಗುತ್ತದೆ. ಇಂಗ್ಲೀಷಿನ 't' ಕಾರದ ಉಚ್ಚಾರಣೆಯಲ್ಲಿ ಕನ್ನಡ 'ಟ' ಕಾರದ ಹಾಗೆಯೇ ನಾಲಗೆ ಒಳಕ್ಕೆ ಮಡಚಿಕೊಳ್ಳುವುದಿಲ್ಲ. ಹಾಗಾಗಿ ಕನ್ನಡಿಗರು ಥಿಯೇಟರ್ ಎಂದಾಗಿ ಉಚ್ಚರಿಸುವ ಕಾರಣ ಹಾಗೆ ಬರೆಯುತ್ತಾರೆ. ಆದರೆ ಸಂಸ್ಕೃತದ ಪದಗಳನ್ನು ಕನ್ನಡದ ಉಚ್ಚಾರಣೆಗೆ ಬದಲಾಯಿಸದೆ ಸಂಸ್ಕೃತ ಬರಹದಲ್ಲಿರುವ ಹಾಗೆಯೇ ಬರೆಯುತ್ತೇವೆ.

ಉದಾ:-

ಸಂಸ್ಕೃತ ಬರಹ	ಕನ್ನಡ ಉಚ್ಚಾರಣೆ / ಓದು
ವಿಶೇಷ	ವಿಶೇಶ
ಶ್ರುತಿ	ಶ್ರುತಿ
ಭ್ರಮೆ	ಬ್ರಮೆ

ಶಂಕರಭಟ್ಟರ ಪ್ರಕಾರ ಕನ್ನಡವು ಸಂಸ್ಕೃತಜನ್ಯ ಭಾಷೆ ಎಂಬ ಭಾವನೆಯಿಂದಾಗಿಯೇ ಹಿಂದೆ ಕನ್ನಡ ಭಾಷೆ ಸಂಸ್ಕೃತದ ಒಂದು ವಿಕೃತ ರೂಪ ಎಂಬ ನಂಬಿಕೆ ಕನ್ನಡ ಬರಹದ ಗ್ರಂಥಕಾರರಲ್ಲಿತ್ತು. ಹಾಗಾಗಿ ಸಂಸ್ಕೃತ ಪದಗಳನ್ನು ಕನ್ನಡ ಬರಹದಲ್ಲಿ ಬಳಸುವಾಗ ಅದನ್ನು ವಿಕೃತಗೊಳಿಸದೆ ಶುದ್ಧ ರೂಪದಲ್ಲಿ ಬಳಸಬೇಕೆಂಬ ಆಶಯ ಅವರದಾಗಿತ್ತು. ಆದರೆ ವಿಶಿಷ್ಟವಾದ ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಮಾತ್ರ ಇದುವರೆಗೆ ಕನ್ನಡ ಬರಹ ಸಂಸ್ಕೃತವನ್ನು ಅವಲಂಬಿಸಿತ್ತು. ಸಂಸ್ಕೃತ ಭಾಷೆ ಇಂಡೋ - ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದ್ದರೆ, ಕನ್ನಡ ಅದಕ್ಕಿಂತ ಭಿನ್ನವಾದ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ್ದು ಎಂಬ ನಿರ್ಣಯಕ್ಕೆ ೧೯ನೇ ಶತಮಾನದಲ್ಲಿ ನಡೆದಿರುವ ಹಲವಾರು ಸಂಶೋಧನಾ ಲೇಖನಗಳಿಂದ ಗ್ರಂಥಗಳಿಂದ ಸಾಬಿತವಾಗಿದೆ ಎಂಬುದನ್ನು ಉಲ್ಲೇಖಿಸುತ್ತಾರೆ.[೩]

೧. ಸಂಸ್ಕೃತದಿಂದ ಸ್ವೀಕರಿಸಿರುವ ಮಹಾಪ್ರಾಣಾಕ್ಷರಗಳು, ಖಛಠಥಫ ಮತ್ತು ಘಝಢಧಭ ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳು ಸುಖ, ವ್ಯಥೆ , ಪರಿಚ್ಛೇದ ಇತ್ಯಾದಿ. ಆದರೆ ಈ ಅಕ್ಷರಗಳನ್ನು ಕನ್ನಡದಲ್ಲಿ ಉಚ್ಛರಿಸುವಾಗ ಬಹುತೇಕರು ಅಲ್ಪ ಪ್ರಾಣಾಕ್ಷರಗಳಾಗಿಯೇ ಉಚ್ಚಾರಿಸುತ್ತಾರೆ. ಖಛಠ ಧಫಗಳನ್ನೂ ಕಚಟತಪ ಎಂದೂ ಘಝಢಧಭಗಳನ್ನು ಗಜಡದಬಗಳೆಂದಾಗಿಯೂ ಉಚ್ಚರಿಸಲಾಗುತ್ತದೆ. ಹಾಗಾಗಿಯೇ ಉಚ್ಚಾರ ಬರವಣಿಗೆಯಲ್ಲಿ ಗ್ರಂಥಾಲಯ. ಗ್ರಂತಾಲಯವೆಂದೂ ವಿಧಾನಸಭೆ ವಿದಾನ ಸಬೆ ಎಂದೂ ಆಗುತ್ತದೆ.

೨. ಕನ್ನಡ ಬರಹದಲ್ಲಿ ಬಳಕೆಯಾಗುವ ಋ, ಷ ಕಾರಗಳು ಐ. ಔ ವಿಸರ್ಗ ಮೊದಲಾದವುಗಳಿಗೆ ಉಚ್ಚಾರಣೆಯಲ್ಲಿ ಸ್ಥಾನವಿಲ್ಲ.

ಉದಾಹರಣೆಗೆ

ಋ ರು

ಶೃತಿ ಶ್ರುತಿ

ಋಷಿ ರುಷಿ ಎಂದೂ

ಷ ಕಾರ ಶ ಕಾರವಾಗಿ - ವಿಷ - ವಿಶವಾಗಿ ಬಳಕೆಯಾಗುವುದು.

ಐ, ಔ ಗಳು ಆಯ್ - ಅವ್‌ಗಳಾಗುತ್ತವೆ. ಮತ್ತು ವಿಸರ್ಗ 'ಹ' ಕಾರವಾಗುತ್ತದೆ.

ಬಹುಶಃ - ಬಹುಶಹ ಇಲ್ಲವೆ ಮುಂದಿನ ವ್ಯಂಜನದೊಂದಿಗೆ ಸೇರಿ ಒತ್ತಕ್ಷರವಾಗುತ್ತದೆ.

ಉದಾಹರಣೆ : ದುಃಖ - ದುಕ್ಕ.

ಈ ರೀತಿ ಉಚ್ಚಾರಣೆಯಲ್ಲಿಲ್ಲದೆ ಹಲವು ವ್ಯತ್ಯಾಸಗಳನ್ನು ಬರಹದಲ್ಲಿ ತೋರಿಸುವ ಕಾರಣ ಅದನ್ನು ಕಲಿಯುವ ಕೆಲಸ ಮಕ್ಕಳಿಗೂ, ವಯಸ್ಕರಿಗೂ ಕಷ್ಟ. ಮಾತಿನಲ್ಲಿಲ್ಲದ ವ್ಯತ್ಯಾಸಗಳನ್ನು ಬರಹದಲ್ಲಿ ಕಾಣಿಸುವುದು ತೀರಾ ಅನಾವಶ್ಯಕ. ಮಾತಿನ ಮೂಲಕ ನಾವು ಯಾವುದನ್ನು ತಿಳಿಯಬೇಕೆಂದಿರುವೆವೋ ಅದನ್ನೇ ಬರಹವೂ ತಿಳಿಸಬೇಕಾಗಿದೆ. ಹಾಗಾಗಿ ಮಾತಿನಲ್ಲಿಕಾಣಿಸದಿರುವ ವ್ಯತ್ಯಾಸಗಳನ್ನು ಬರಹದಲ್ಲಿ ಕಾಣಿಸುವ ಅವಶ್ಯಕತೆಯೇ ಇಲ್ಲ. ಲೇಖಕರು 'ಋ' ಕಾರದ ಬದಲಾಗಿ 'ರು' ಕಾರವನ್ನು ಬಳಸುವ ಮೂಲಕ ಕನ್ನಡಕ್ಕೆ ಅವಶ್ಯವಿಲ್ಲದ ಒಂದು ಹೆಚ್ಚಿನ ಅಕ್ಷರವನ್ನು ಕಡಿಮೆ ಮಾಡುವ ಪ್ರಸ್ತಾಪದ ಚರ್ಚೆಯನ್ನು ಉಲ್ಲೇಖಿಸುತ್ತಾರೆ.[೪]

ಕಳೆದ ಸಾವಿರ ವರ್ಷಗಳಲ್ಲಿ ಕನ್ನಡದವೇ ಆದ ಪದಗಳು ಉಚ್ಚಾರಣೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡಿವೆ. ಅದಕ್ಕನುಗುಣವಾಗಿ ಬರವಣಿಗೆಯೂ ಬದಲಾಗಿದೆ ಎಂಬುವುದನ್ನು ಈ ಕೆಳಗಿನ ನಿದರ್ಶನಗಳಿಂದ ಅವರು ಹೀಗೆ ಸ್ಪಷ್ಟಪಡಿಸುತ್ತಾರೆ.

೧. ಱ ಕಾರ - ೞ ಕಾರಗಳು ಇಂದು ಬಳಕೆಯಲ್ಲಿ ಇಲ್ಲವಾಗಿವೆ.

೨. ಪದದ ಆದಿಯಲ್ಲಿ ಬರುತ್ತಿದ್ದ 'ಪ' ಕಾರ 'ಹ' ಕಾರವಾಗಿದೆ.

ಪಾಲ್ > ಹಾಲು, ಪಲ್ > ಹಲ್ಲು.

೩. ಉದ್ದ ಸ್ವರದ ಅನಂತರ ಬರುತ್ತಿದ್ದ ಸೊನ್ನೆ (ಅನುನಾಸಿಕ) ಬಿದ್ದು ಹೋಗಿದೆ.

ದಾಂಟು > ದಾಟು, ನಾಂಟು > ನಾಟು

೪. ಪದದ ಕೊನೆಯ ವ್ಯಂಜನ ಬಿದ್ದು ಹೋಗಿದೆ. ಅಥವಾ ಅದರ ಮುಂದೆ ಒಂದು ಸ್ವರಸೇರಿ ಅದು ಒತ್ತಕ್ಷರವಾಗಿದೆ.

ಬೆನ್ > ಬೆನ್ನು, ಪೆನ್ > ಪೆನ್ನು, ಹೊನ್ > ಹೊನ್ನು.

ಕನ್ನಡದವೇ ಆದ ಪದಗಳ ಬರವಣಿಗೆಯಲ್ಲಿ ಕಾಣಿಸುವ ಇಂತಹ ಬದಲಾವಣೆಗಳೆಲ್ಲ ಕನ್ನಡದ ಬರಹಕ್ಕೂ, ಮಾತಿಗೂ ನಡುವಿರುವ ಅಂತರವನ್ನು ಕಡಿಮೆ ಮಾಡುವುದಕ್ಕಾಗಿ ಬೇರೆಬೇರೆ ಸಂದರ್ಭಗಳಲ್ಲಿ ನಡೆದು ಬಂದಿದೆ. ಈ ಬದಲಾವಣೆಗಳು ಅದರ ಶ್ರೇಷ್ಠತೆಯನ್ನು ಸೂಚಿಸುತ್ತವೆ. ಹಾಗೆಯೇ ಸಂಸ್ಕೃತ ಪದಗಳನ್ನು ಕೂಡ ಕನ್ನಡದ ಪದಸ್ವರೂಪಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುವುದರಿಂದ ಬರಹಕ್ಕೂ ಉಚ್ಚಾರಣೆಗೂ ಅಂತರವಿರದೆ ಸುಲಭ ಸಂವಹನ ಸಾಧ್ಯವಾಗುತ್ತದೆ. ಸುಲಭವಾಗಿ ಅರ್ಥವಾಗುವ ಕನ್ನಡದವೇ ಆದ ಪದಗಳು ಈಗಾಗಲೇ ಬಳಕೆಯಲ್ಲಿದ್ದರೂ ಅವನ್ನು ಬಳಸದೆ ಅವಕ್ಕಿಂತ ಕ್ಲಿಷ್ಟವಾದ ಸಂಸ್ಕೃತ ಪದಗಳನ್ನು ಬಳಸುವ ಪ್ರವೃತ್ತಿ ನಮ್ಮ ಹೆಚ್ಚಿನ ಬರಹಗಾರರಲ್ಲಿ ಕಂಡುಬರುತ್ತದೆಂದು ಅಭಿಪ್ರಾಯಪಡುತ್ತಾ " ಹಿಂದಿನ ಕಾಲದಲ್ಲಿ ಮಹನೀಯರಾದವರು ದೇಶಿ ಭಾಷೆಯ ಮೂಲಕ ಜನರನ್ನು ಬದುಕಿಸಬೇಕೆಂದು ಯೋಚನೆ ಮಾಡಿ ಕನ್ನಡವನ್ನು ಪುಷ್ಟಿಗೊಳಿಸುವುದಕ್ಕೆ ಕನ್ನಡದ ಜ್ಞಾನ ಭಂಡಾರವನ್ನು ಹೆಚ್ಚಿಸುವುದಕ್ಕೆ ಸಂಸ್ಕೃತದ ಮೊರೆಹೊಕ್ಕರು. ಅದರ ಮೂಲಕ ಕನ್ನಡ ನಾನಾ ಮುಖವಾಗಿ ಪುಷ್ಟಿ ಹೊಂದಿತು. ಅವರಿಗೆ ಸಂಸ್ಕೃತದ ಮೇಲಿದ್ದ ಮಮತೆಯಲ್ಲಿ ಕನ್ನಡದ ಶಕ್ತಿಗೆ ಮೀರಿ ಅದು ಹೊರಲಾರದಷ್ಟು ಹೊರೆ ಅಲ್ಲಿಂದ ಬಂದಿದ್ದರೂ ಬಂದಿರಬಹುದು ಬಂದಿದೆ. ಆ ಹೆಚ್ಚಿನ ಹೊರೆಯನ್ನು ಇಳಿಸಿ ಕನ್ನಡವನ್ನು ತಿಳಿ ಮಾಡಬೇಕೆಂಬುದು ನನ್ನ ಮತ " ಎಂಬ ಬಿ.ಎಂ.ಶ್ರೀಕಂಠಯ್ಯರ ಮಾತನ್ನು ಭಟ್ಟರು ಉಲ್ಲೇಖಿಸುತ್ತಾರೆ.[3]

ಇಂಗ್ಲೀಷ್ ಅಥವಾ ಇನ್ನಾವುದೇ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಿಕೊಳ್ಳುವಾಗ ಕನ್ನಡದ ಪದ ಸ್ವರೂಪಕ್ಕೆ ತಕ್ಕಂತೆ ಅನುವಾದ ಮಾಡಿಕೊಳ್ಳುತ್ತೇವೆ. ಆದರೆ ವಿಜ್ಞಾನ ಬರಹ ಮತ್ತು ಇತರ ಶಾಸ್ತ್ರೀಯ ಬರಹಗಳ ಸಂದರ್ಭದಲ್ಲಿ ಪರ್ಯಾಯವಾಗಿ ಸಂಸ್ಕೃತ ಪದಗಳನ್ನೇ ಬಳಸುವುದು ಅಧಿಕವಾಗಿ ಕಂಡುಬರುತ್ತವೆ. ಶೇಕಡಾ ೮೦% ಕ್ಕಿಂತ ಅಧಿಕ ಪದಗಳು ಮತ್ತು ಪ್ರತ್ಯಯಗಳು ಬಳಕೆಯಾಗಿವೆ. ಆದರೆ ಈ ಪ್ರಮಾಣ ತಮಿಳು ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಕಡಿಮೆಯಿದೆ. ತಮಿಳಿನಲ್ಲಿ ಶೇಕಡಾ ೧.೨ ರಷ್ಟಿದ್ದು ಪರ್ಯಾಯ ಪದ ರಚನೆಗೆ ಮೂಲ ತಮಿಳಿನಿಂದಲೂ ಪದಗಳನ್ನು ಸ್ವೀಕರಿಸಿ ಬಳಸುವುದು ತಪ್ಪೇನೂ ಅಲ್ಲ. ನಿರಂತರವಾದ ಈ ಸಂಸ್ಕೃತ ಪದಗಳ ಸ್ವೀಕರಣೆಯಿಂದ ಕನ್ನಡ ಭಾಷೆ ಅಳಿದು ಹೋಗುವ, ಹಾಗೆಯೇ ಕಲಿಕೆಯಿಂದ ದೂರವಾಗುವ ಸಂಭವವಿದೆಯೆಂಬ ಆತಂಕವನ್ನು ವ್ಯಕ್ತಪಡಿಸುತ್ತಾರೆ.

ಕನ್ನಡ ಭಾಷೆ ಮತ್ತು ಸಂಸ್ಕೃತ ಭಾಷೆಗಳ ನಡುವೆ ಪದಗಳಲ್ಲಿ ಮತ್ತು ವ್ಯಾಕರಣ ನಿಯಮಗಳಲ್ಲಿ ಹಲವು ಮೂಲಭೂತ ವ್ಯತ್ಯಾಸಗಳಿರುವುದನ್ನು ಸಾಧಿಸಿ ತೋರಿಸುವ ಮೂಲಕ ಡಾ. ಭಟ್ಟರು ಎರಡನೆಯ ಅಧ್ಯಾಯದಲ್ಲಿ ಕನ್ನಡ ಸಂಸ್ಕೃತ ಜನ್ಯವಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸುತ್ತಾರೆ. ತಮಿಳು, ಮಲಯಾಳಂ, ತುಳು, ಕೊಡಗು, ಕುಯಿ, ಗೊಂಡಿ, ಕುರುಬ್, ಕನ್ನಡ ಮೊದಲಾದ ಇಪ್ಪತ್ತೈದು ಮೂವತ್ತು ಭಾಷೆಗಳನ್ನು ದ್ರಾವಿಡ

ಕುಟುಂಬದಲ್ಲಿಯೂ, ಭಾರತದಲ್ಲಿಯೇ ಬಳಕೆಯಲ್ಲಿರುವ ಸಂಸ್ಕೃತ, ಹಿಂದಿ, ಮರಾಠಿ, ಕೊಂಕಣಿ, ಗುಜರಾತ್, ಸಿಂಧಿ, ಬಂಗಾಳಿ, ಕಾಶ್ಮೀರಿ ಮೊದಲಾದ ಸುಮಾರು ನಲವತ್ತು- ಐವತ್ತು ಭಾಷೆಗಳನ್ನು ಇಂಡೋ ಯೂರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದವು ಎಂಬುದನ್ನು ಸಾಮ್ಯ ವೈಶಮ್ಯ ಅಂಶಗಳಿಂದ ವಿದ್ವಾಂಸರು ಸಾಧಿಸಿ ತೋರಿಸಿರುವುದನ್ನು ಉಲ್ಲೇಖಿಸುತ್ತಾರೆ.[೬]

ಭಾಷೆಗಳಲ್ಲಿ ಅವುಗಳನ್ನಾಡುವ ಜನರ ಭೌಗೋಳಿಕ ಕಾರಣಗಳಿಂದಾಗಿ ಸಂಪರ್ಕ ಕಡಿಮೆಯಾದಾಗ ಬೇರೆ ಬೇರೆ ಒಳನುಡಿಗಳಾಗಿ ಒಡೆದುಕೊಳ್ಳುತ್ತವೆ. ಅನಂತರ ಇವೇ ಒಳನುಡಿಗಳು ಸ್ವತಂತ್ರ ಭಾಷೆಗಳಾಗಿ ಬೆಳೆಯುತ್ತವೆ ಎಂಬ ಅಭಿಪ್ರಾಯದ ಆಧಾರದ ಮೇಲೆ ಭಾಷಾ ಕುಟುಂಬಗಳ ಕಲ್ಪನೆಯನ್ನು ಮಾಡಲಾಗಿದೆ. ಈ ಕಲ್ಪನೆಯನ್ನು ಸಾಕಾರಗೊಳಿಸುವುದಕ್ಕಾಗಿ ಇವತ್ತು ಬಳಕೆಯಲ್ಲಿರುವ ಸಾವಿರಾರು ಭಾಷೆಗಳನ್ನು ಬೇರೆ ಬೇರೆ ಭಾಷಾ ಕುಟುಂಬಗಳಾಗಿ ವರ್ಗೀಕರಿಸುವ ಪ್ರಯತ್ನ ನಡೆಯುತ್ತಿದೆ. ಎಂದರೆ ಸಾವಿರಾರು ಭಾಷೆಗಳು ಹದಿನೈದಿಪ್ಪತ್ತು ಮೂಲಭಾಷೆಗಳಿಂದ ಅವುಗಳಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಗಳಾಗುವುದರ ಮೂಲಕ ಹೇಗೆ ಬಂದಿವೆ ಎಂಬುದನ್ನು ತೋರಿಸಿ ಕೊಡುವ ಪ್ರಯತ್ನ ಇಂದಿಗೂ ನಡೆಯುತ್ತಿದೆ. ಎಂಬುದಾಗಿ ಡಾ. ಭಟ್ಟರು ವಿವರಿಸುತ್ತಾರೆ.[೭]

ಕನ್ನಡದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ:

ಕನ್ನಡ ಭಾಷೆಯನ್ನು ಬರವಣಿಗೆಯಲ್ಲಿ ಹೆಚ್ಚು ಸಮರ್ಥವಾಗಿಸಲು ತೊಡಕಾಗಿರುವ ಸ್ಪೆಲ್ಲಿಂಗ್ ಸಮಸ್ಯೆಯನ್ನು ಮುಂದಿನ ಅಧ್ಯಾಯಗಳಲ್ಲಿ ಅವರು ಚರ್ಚಿಸಿದ್ದಾರೆ. ಡಾ.ಭಟ್ಟರು ಸಂಸ್ಕೃತ ಪದಗಳ ಉಚ್ಚಾರಣೆ ಮತ್ತು ಬರವಣಿಗೆಯ ನಡುವೆ ಕಾಣಿಸುವ ವ್ಯತ್ಯಾಸದಿಂದಾಗಿ ಕನ್ನಡ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ಮೂಡಿಬಂದಿದ್ದು, ಸಂಸ್ಕೃತ ಪದಗಳನ್ನು ಕನ್ನಡಿಗರ ಉಚ್ಚಾರಣೆಯಲ್ಲಿರುವ ಹಾಗೆಯೇ ಬರೆಯುವ ಮೂಲಕ ಸ್ಪೆಲ್ಲಿಂಗ್ ಸಮಸ್ಯೆಯನ್ನು ತೊಡೆದುಹಾಕಿ ಕನ್ನಡ ಬರಹವನ್ನು ಎಲ್ಲರ ಸ್ವತ್ತಾಗಿಸಲು ಸಾಧ್ಯವೆಂದು ಅಭಿಪ್ರಾಯಪಡುತ್ತಾರೆ.

ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವುದಕ್ಕಾಗಿ ಕನ್ನಡ ಬರಹವನ್ನು ಕಲಿಯುವವರು ಅನಾವಶ್ಯಕವಾಗಿ ಬೇಕಾದುದಕ್ಕಿಂತ ಹೆಚ್ಚಿನ ಅಕ್ಷರಗಳನ್ನು ಕಲಿಯಬೇಕಾಗಿದೆ. ಅದನ್ನು ಬದಲಾಯಿಸದೆ ಹಾಗೆಯೇ ಬರೆಯಬೇಕೆಂದು ಕಟ್ಟಳೆ ಮಾಡಿಕೊಂಡಿರುವ ಕೆಲ ಬರಹಗಾರರು ಸಂಸ್ಕೃತವನ್ನು ಅರಿತವರು ಮತ್ತು ಅದೇ ರೀತಿ ಉಚ್ಚರಿಸುವುದನ್ನು ಬಲ್ಲರು. ಆದರೆ ಜನಸಾಮಾನ್ಯರಿಗೆ ಇದು ಅನಾವಶ್ಯಕ ಹೊರೆಯಾಗಿದೆ.

ಉದಾಹರಣೆ. (೧) ಸಂಸ್ಕೃತ ಪದಗಳಲ್ಲಿ ಬರುವ ಅಲ್ಪಪ್ರಾಣ ಮಹಾಪ್ರಾಣ ವ್ಯತ್ಯಾಸ ಶೇಕಡಾ ೩೯ ಮಂದಿ ಕನ್ನಡಿಗರ ಉಚ್ಚಾರಣೆಯಲ್ಲಿ ಕಾಣಿಸುವುದಿಲ್ಲ.

ಬರಹ		ಉಚ್ಚಾರಣೆ
ಮುಖ್ಯಮಂತ್ರಿ	-	ಮುಕ್ಯಮಂತ್ರಿ
ಪ್ರಧಾನ	-	ಪ್ರದಾನ

(೨). ಶ, ಷ, ಋ, ರು ಗಳ ಸಂದರ್ಭದಲ್ಲೂ ಈ ವ್ಯತ್ಯಾಸ ಗುರುತಿಸಬಹುದು.

ವಿಶೇಷ - ವಿಶೇಶ

ಋಷಿ - ರುಷಿ

(೩). ಸಂಸ್ಕೃತ ಪದಗಳಲ್ಲಿ ಕಾಣಿಸುವ ವಿಸರ್ಗ ಪದಗಳ ಕೊನೆಯಲ್ಲಿ 'ಹ' ಕಾರವಾಗಿ ಮತ್ತು ಅದರ ಹಿಂದಿರುವ ಸ್ವರಕ್ಕೆ ಸಮಾನವಾಗಿರುವ ಸ್ವರದೊಂದಿಗೆ ಉಚ್ಚಾರಣೆಯಲ್ಲಿರುತ್ತದೆ.

ಬಹುಶಃ - ಬಹುಶಹ

(೪). ಪದಗಳ ನಡುವೆ ಅದರ ಅನಂತರ ಬರುವ ವ್ಯಂಜನದ ಹಾಗೆಯೇ ಇರುವ ಇನ್ನೊಂದು ವ್ಯಂಜನವಾಗಿ ಉಚ್ಚಾರಣೆಯಾಗುತ್ತದೆ.

ದುಃಖ - ದುಕ್ಕ

ಅಂತಃಪುರ - ಅಂತಪ್ಪುರ

ಹೀಗೆ ಉಚ್ಚಾರಣೆಗೂ ಬರಹಕ್ಕೂ ನಡುವೆ ವ್ಯತ್ಯಾಸಗಳು ಕಾಣಿಸುವ ಸಂದರ್ಭಗಳಲ್ಲೆಲ್ಲ 'ಸ್ಪೆಲ್ಲಿಂಗ್' ಸಮಸ್ಯೆಯಿದೆಯೆಂದು ಡಾ. ಭಟ್ಟರು ಹೇಳುತ್ತಾರೆ. ಉಚ್ಚಾರಣೆ ಹೇಗಿದೆಯೋ ಹಾಗೆಯೇ ಬರಹವನ್ನು ಬದಲಾಯಿಸಿಕೊಳ್ಳುವ ಮೂಲಕ ಸ್ಪೆಲ್ಲಿಂಗ್ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಅವರು ಸ್ಪಷ್ಟಪಡಿಸುತ್ತಾರೆ. ಮುಂದುವರೆದು ಅವರು ಕನ್ನಡ ಲಿಪಿಯ ಬಗೆಗೆ ಚರ್ಚಿಸಿದ್ದಾರೆ.[೮]

ಸಂಸ್ಕೃತ, ಪಾಲಿ, ಪ್ರಾಕೃತ ಮೊದಲಾದ ಇಂಡೋ ಆರ್ಯನ್ ಭಾಷೆಗಳನ್ನು ಬರಹಕ್ಕಿಳಿಸುವುದಕ್ಕಾಗಿ ತಯಾರಾದ ಲಿಪಿಯಿಂದ ಕನ್ನಡ ಲಿಪಿ ಬೆಳೆದುಬಂದಿದೆ. ಇದನ್ನು ಭಾಷೆಗೆ ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಕನ್ನಡ ಬರಹಗಾರು ತಮ್ಮ ಭಾಷೆಗೆ ಅವಶ್ಯವಿರುವ ಕೆಲವು ಅಕ್ಷರಗಳನ್ನು ಎ, ಒ, ೞ, ಮತ್ತು ೞ ಗಳನ್ನು ಹೊಸದಾಗಿ ರಚಿಸಿ ಸೇರಿಸಿಕೊಂಡರು. ಆದರೆ ಇವುಗಳೊಂದಿಗೆ ಕನ್ನಡಕ್ಕೆ ಅವಶ್ಯಕತೆಯಿಲ್ಲದಿದ್ದರೂ ಮಹಾಪ್ರಾಣಾಕ್ಷರಗಳು, ಅನುಸ್ವಾರ, ವಿಸರ್ಗಗಳನ್ನು ಉಳಿಸಿಕೊಂಡರು. ಈ ಐತಿಹಾಸಿಕ ಘಟನೆಯಿಂದಾಗಿ ಈ ಹೆಚ್ಚುವರಿ ಪದಗಳ ಸ್ವೀಕರಣೆಯಿಂದಾಗಿ ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಕನ್ನಡ ಬರಹದಲ್ಲೂ ಸಂಸ್ಕೃತದಲ್ಲಿರುವ ಹಾಗೆಯೇ ಬರೆಯಲು ಸಾಧ್ಯವಾಯಿತು. ಆದರೆ ಇಂಗ್ಲೀಷ್, ಹಿಂದಿ, ಮರಾಠಿ, ತಮಿಳು, ಉರ್ದು ಇಂತಹ ಭಾಷೆಗಳಿಂದ ಸ್ವೀಕರಿಸಿದ ಪದಗಳನ್ನು ಕನ್ನಡ ಭಾಷೆಯ ಉಚ್ಚಾರಣೆಗೆ ತಕ್ಕಂತೆ ಬದಲಾಯಿಸಿಕೊಂಡು ಉಚ್ಚರಿಸುತ್ತೇವೆ ಮತ್ತು ಹಾಗೆಯೇ ಬರೆಯುತ್ತೇವೆ. ಇಂಗ್ಲೀಷಿನಲ್ಲಿಲ್ಲದ ಟ-ಡ ಕಾರಗಳನ್ನು ಮತ್ತು ಥ-ದ ಕಾರಗಳನ್ನು ಬಳಸಿ ಟ್ರೈನ್, ಟೀ, ಟಿ.ವಿ, ಥಿಯೇಟರ್, ಥಿಯರಿ, ಫಾದರ್ ಮುಂತಾದವುಗಳನ್ನು ನಮ್ಮದೇ ರೀತಿಯಲ್ಲಿ ಉಚ್ಚರಿಸುತ್ತೇವೆ. ಮತ್ತು ಹಾಗೆಯೇ ಬರೆಯುತ್ತೇವೆ. ಮುಂದುವರೆದು ಡಾ. ಭಟ್ಟರು ಮಾತಲ್ಲಿ ಮತ್ತು ಬರಹದ ಮೂಲಕ ಈ ಸಮಸ್ಯೆಗೆ ಇನ್ನೊಂದು ಆಯಾಮವನ್ನು ಹೇಳುತ್ತಾರೆ.[೯]

ನಿರಂತರ ಬದಲಾವಣೆ ಭಾಷೆಯ ಲಕ್ಷಣ, ಬರಹಕ್ಕಿಂತಲೂ ಮಾತಿನ ಮೂಲಕವೇ ಬರಹ ಹೆಚ್ಚು ಬದಲಾಗುತ್ತಾ ಹೋಗುತ್ತದೆ. ಬದಲಾಗದೆ ಉಳಿದಾಗಲೆಲ್ಲ ಭಾಷೆ ಸಮಾಜದ ಮುಖ್ಯ ಭಾಗದಿಂದ ದೂರವಾಗುತ್ತದೆ. ಸಂಸ್ಕೃತ ಭಾಷೆ ಈ ರೀತಿ ಜನಸಾಮಾನ್ಯರಿಂದ ದೂರವಾದುದನ್ನು ಗಮನಿಸಿ ಜೈನರು ಪ್ರಾಕೃತವನ್ನು; ಬೌದ್ಧರು ಪಾಲಿಯನ್ನು ತಮ್ಮ ಮತಪ್ರಚಾರಕ್ಕಾಗಿ ಬಳಸಹೊರಟರು. ಹಳಗನ್ನಡದಲ್ಲಿ ರ - ಱ, ಳ - ೞ ಗಳ ನಡುವೆ ಉಚ್ಚಾರಣೆ ಮತ್ತು ಬರಹಗಳೆರಡರಲ್ಲೂ ವ್ಯತ್ಯಾಸವಿತ್ತು. ಹಳಗನ್ನಡದ ನಂತರದ ಕಾಲದಲ್ಲಿ ಈ ವ್ಯತ್ಯಾಸ ಇಲ್ಲವಾಯಿತು. ಹಳಗನ್ನಡ ಗ್ರಂಥಗಳಲ್ಲಿ ಮಾತ್ರ ಈ ಅಕ್ಷರಗಳ ನಡುವಿರುವ ವ್ಯತ್ಯಾಸವನ್ನು ತೋರಿಸಲಾಗುತ್ತದೆ.

ಉದಾಹರಣೆ :

ಅರಿ - ತುಂಡುಮಾಡು,	ಅಱಿ - ತಿಳಿ, ಅರಿ
ಕರೆ - ಬರಹೇಳು,	ಕಱೆ - ಹಾಲುಕರೆ
ಪುಳಿ - ಹುಳಿ	ಪುೞ - ಹುಳ

ಈ ರೀತಿ ಉಚ್ಚಾರಣೆಯನ್ನನುಸರಿಸಿ ನೂರಾರು ಪದಗಳಲ್ಲಿ ಕಾಣಿಸುತ್ತಿದ್ದ ರ, ಱ, ೞ, ಳ ಗಳ ನಡುವಿನ ವ್ಯತ್ಯಾಸವನ್ನು ಹೊಸಗನ್ನಡ ಬರಹದಲ್ಲಿ ತೋರಿಸದಿರುವುದು ಬದಲಾವಣೆಗೆ ಅನುಸಾರವಾಗಿ ಕನ್ನಡ ಬರಹ ಬದಲಾಗಿರುವುದನ್ನು ತತ್ಸಮದ ನಿದರ್ಶನಗಳ ಮೂಲಕ ಸ್ಪಷ್ಟಪಡಿಸಬಹುದು.

(೧). ಸಂಸ್ಕೃತದ ಶ, ಷ ಗಳಿಗೆ ಬದಲಾಗಿ ಹಳಗನ್ನಡದಲ್ಲಿ 'ಸ' ಕಾರ ಮಾತ್ರ ಇತ್ತು. ಸಂಸ್ಕೃತ (ತತ್ಸಮ) ಪದಗಳಲ್ಲಿ ಬರುವ 'ಶ' ಕಾರ ಮತ್ತು 'ಷ' ಕಾರಗಳನ್ನು ತದ್ಭವ ಪದಗಳಲ್ಲಿ 'ಸ' ಕಾರವಾಗಿ ಬದಲಾಯಿಸಲಾಗಿದೆ.

ತತ್ಸಮ ಪದ		ತದ್ಭವ ಪದ
ಅಂಕುಶ	-	ಅಂಕುಸ
ನಿಶ್ಯಂಕ	-	ನಿಸ್ಸಂಕ
ಪಶು	-	ಪಸು

೨. ಹಳಗನ್ನಡದಲ್ಲಿ ಮಹಾಪ್ರಾಣಕ್ಷರಗಳಿರಲಿಲ್ಲ. ಹಾಗಾಗಿ ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಅಲ್ಪಪ್ರಾಣಾಕ್ಷರಗಳಾಗಿ ಬದಲಾಯಿಸಿಕೊಳ್ಳಲಾಯಿತು.

ತದ್ಭವ ಪದಗಳು

ಶೃಂಖಲೆ	-	ಸಂಕಲೆ
ಸಂಘ	-	ಸಂಗ
ಛಾನ್ದಸ	-	ಚಾನ್ದಸ
ಶುಣ್ಠಿ	-	ಸುಣ್ಟಿ

೩. ಹಳಗನ್ನಡದಲ್ಲಿ 'ಋ' ಕಾರವಿರಲಿಲ್ಲವಾದ ಕಾರಣ ಸಂಸ್ಕೃತ ಪದಗಳಲ್ಲಿದ್ದ 'ಋ' ಕಾರವನ್ನು 'ರಿ' ಎಂಬುದಾಗಿ ಬದಲಾಯಿಸಿ ಕೊಳ್ಳಲಾಗಿತ್ತು.

ತತ್ಸಮ ಪದಗಳು		ತದ್ಭವ ಪದಗಳು
ಋಷಿ	-	ರಿಸಿ
ಋತು	-	ರಿತು
ಋಣ	-	ರಿಣ
ಋಜು	-	ರಿಜು

ಹಾಗೆಯೇ 'ಋ' ಕಾರ ವ್ಯಂಜನದ ಅನಂತರ ಬಂದಿದೆಯಾದರೆ ಅದು 'ಇ' ಕಾರವಾಗಿ ಮತ್ತು ಕೆಲವು ಕಡೆಗಳಲ್ಲಿ 'ಅ' ಕಾರವಾಗಿ ಬದಲಾಯಿಸಲಾಗಿದೆ.

ತತ್ಸಮ ಪದ		ತದ್ಭವ ಪದಗಳು
ತೃಣ	-	ತಿಣ
ವೃತ್ತಿ	-	ವಿತ್ತಿ

೪ . ಹಳಗನ್ನಡದಲ್ಲಿಲ್ಲದಿದ್ದ ಹಲವು ರೀತಿಯ ಒತ್ತಕ್ಷರಗಳು ಸಂಸ್ಕೃತದಲ್ಲಿವೆ. ಪದಗಳ ಮೊದಲಿಗೂ ಇವುಗಳಲ್ಲಿ ಕೆಲವು ಬರಬಲ್ಲವು. ಇಂತಹ ಸಂದರ್ಭಗಳಲ್ಲೆಲ್ಲ ಬೇರೆ ಬೇರೆ ರೀತಿಯ ಬದಲಾವಣೆಗಳ ಮೂಲಕ ಈ ಪದಗಳು ಹಳಗನ್ನಡ ಪದಗಳ ಸ್ವರೂಪಕ್ಕೆ ಹೊಂದಿಕೊಳ್ಳುವಂತೆ ಮಾಡಲಾಗಿದೆ. ಉದಾಹರಣೆ

ಸಂಸ್ಕೃತ ಪದಗಳು	-	ತದ್ಭವ ಪಗಳು
ರಾಕ್ಷಸ	-	ರಕ್ಕಸ
ಸಂಸ್ಕೃತ	-	ಸಕ್ಕದ
ಅಗ್ನಿ	-	ಅಗ್ಗಿ
ಅಧ್ಯಕ್ಷ	-	ಅದ್ದಿಕ

ಸಂಸ್ಕೃತ ಪದಗಳನ್ನು ಬದಲಾಯಿಸಿಕೊಳ್ಳದೆ ಹಾಗೆಯೇ ಬಳಸುವುದರಿಂದ ಕನ್ನಡದ ಸೊಗಡು ನಾಶವಾಗುತ್ತದೆಯೆಂಬುದನ್ನು ಕಂಡುಕೊಂಡ ಹದಿಮೂರನೇ ಶತಮಾನದ ಕವಿ ಆಂಡಯ್ಯ ಕಬ್ಬಿಗರ ಕಾವದಲ್ಲಿ ತತ್ಸಮ ಬದಲು ಎಲ್ಲೆಡೆಯಲ್ಲೂ ತದ್ಭವ ಪದಗಳನ್ನೇ ಬಳಸುವ ಪ್ರಯತ್ನ ನಡೆಸಿದ್ದ. ನಂತರದಲ್ಲಿ ಕೊಳಂಬೆ ಪುಟ್ಟಣ್ಣಗೌಡರು ತತ್ಸಮ ಪದಗಳನ್ನು ಹೊರಗಿರಿಸುವ ಸಲುವಾಗಿ ಅಚ್ಚಗನ್ನಡದ ನುಡಿಕೋಶವನ್ನು ರಚಿಸಿದ್ದಾರೆ. ಇಂತಹ ಪ್ರಯತ್ನಗಳೆಲ್ಲ ಕನ್ನಡದ ಸೊಗಡನ್ನು ಅಂದರೆ ಕನ್ನಡದ್ದೇ ಆದ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನಗಳಾಗಿವೆ. ಆದರೆ ಇಂದು ಕನ್ನಡದಲ್ಲಿ ಕೆಲವು ತದ್ಭವಗಳನ್ನು ಮಾತ್ರ ಬಳಸುತ್ತಿದ್ದು ಬಹುತೇಕ ತತ್ಸಮ ಪದಗಳನ್ನೇ

ಬಳಸುತ್ತಿದ್ದೇವೆ. ಹೀಗೆ ಅಚ್ಚಗನ್ನಡದ ಸಂದರ್ಭದಲ್ಲಿ ಮತ್ತೆ ಮತ್ತೆ ಪ್ರಸ್ತಾಪಿತವಾಗುವ ತತ್ಸಮ ತದ್ಭವಗಳ ಚರ್ಚೆಯನ್ನು ಒಂದು ಮುಖ್ಯ ಹಂತಕ್ಕೆ ಎಂದರೆ ಅದು ಸ್ಪೆಲ್ಲಿಂಗ್ ಸಮಸ್ಯೆ ಎಂದು ಡಾ. ಭಟ್ಟರು ನಿರೂಪಿಸುತ್ತಾರೆ. ಅಚ್ಚಗನ್ನಡದ ಚರ್ಚೆಯಲ್ಲಿ ಇದು ಅತ್ಯಂತ ಮುಖ್ಯ ವಿಚಾರವಾಗಿದೆ. ಈ ರೀತಿ ಭಾಷೆಗಳಲ್ಲಿ ಕಂಡುಬರುವ ಸ್ಪೆಲ್ಲಿಂಗ್ ಸಮಸ್ಯೆಗೆ ಡಿ. ಎನ್. ಶಂಕರಭಟ್ಟರು ಎರಡು ಕಾರಣಗಳನ್ನು ಗುರುತಿಸುತ್ತಾರೆ.[೧೦]

೧. ಒಂದು ಭಾಷೆಯಲ್ಲಿರುವ ಪದಗಳ ಉಚ್ಚಾರಣೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ . ಎಲ್ಲ ಜೀವಂತವಾಗಿರುವ ಭಾಷೆಗಳೂ ಈ ರೀತಿ ಬದಲಾಗುತ್ತಲೇ ಇರುತ್ತವೆ. ಇದನ್ನು ಯಾರೂ ತಡೆಯಲಾರರು. ಯಾಕೆಂದರೆ ಭಾಷೆಯಲ್ಲಿ ಸಹಜವಾಗಿ ಅದನ್ನು ಬಳಸುವವರ ಅರಿವಿಲ್ಲದ ಹಾಗೆ ನಡೆಯುವ ಬದಲಾವಣೆಯಾಗಿದೆ.

೩. ಒಂದು ಭಾಷೆಗೆ ಹೊಸದಾಗಿ ಒಂದು ಲಿಪಿಯನ್ನು ಅಳವಡಿಸಿಕೊಳ್ಳುವಾಗ ಬರಹಗಾರರು ಬೇರೆ ಬೇರೆ ರೀತಿಯ ತಪ್ಪುಗಳನ್ನು ಮಾಡಲು ಸಾಧ್ಯವಿದೆ. ಇಂತಹ ತಪ್ಪುಗಳಿಂದಾಗಿಯೂ ಒಂದು ಭಾಷೆಯ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆಗಳು ಹುಟ್ಟಿಕೊಳ್ಳಲು ಸಾಧ್ಯವಿದೆ.

ಹೀಗೆ ಭಾಷೆಯಲ್ಲಿಉಂಟಾಗುವ; ಕಂಡು ಬರುವ ಸ್ಪೆಲ್ಲಿಂಗ್ ಸಮಸ್ಯೆಯನ್ನು ಪರಿಹರಿಸುವ ವಿಧಾನದ ಬಗ್ಗೆಯೂ ಡಾ. ಭಟ್ಟರು ಚಿಂತಿಸಿದ್ದಾರೆ.[೧೧]

೧. ಪದಗಳನ್ನು ಹೇಗೆ ಉಚ್ಚರಿಸುತ್ತೇವೆಯೋ ಹಾಗೆಯೇ ಬರೆಯತೊಡಗಿದ್ದಲ್ಲಿ ಅವೆಲ್ಲವೂ ಇಲ್ಲವಾಗುತ್ತವೆ. ಆದರೆ ಭಾಷೆಯಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ಹೆಚ್ಚಿದ ಹಾಗೆಲ್ಲ ಅದನ್ನು ಸರಿಪಡಿಸುವ ಕೆಲಸ ಕಷ್ಟವಾಗುತ್ತಾ ಹೋಗುತ್ತವೆ. ಅಲ್ಲದೆ ನಾವು ತಿಳಿದುಕೊಂಡಿರುವ ವಿಷಯವನ್ನು ಮಾತಿನ ಮೂಲಕ ತಿಳಿಸಲು ಸಾಧ್ಯವಿಲ್ಲದಿರುವ ಸಂದರ್ಭಗಳಲ್ಲಿ ಬರಹದ ಮೊರೆ ಹೋಗುತ್ತೇವೆ. ಅಂದರೆ ಮಾತು ಮಾಡಬೇಕಾಗಿರುವ ಕೆಲಸವನ್ನು ಬರಹವೂ ಮಾಡಬೇಕಾಗಿದೆ.

ಬರಹದ ಈ ಉದ್ದೇಶ ಸಾಧಿತವಾಗಬೇಕಾಗಿದ್ದಲ್ಲಿ ಮಾತು ಮತ್ತು ಬರಹಗಳ ನಡುವೆ ವ್ಯತ್ಯಾಸ ಕಡಿಮೆಯಿದ್ದಷ್ಟು ಒಳ್ಳೆಯದು. ಹಾಗಾಗಿ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ಹೆಚ್ಚಿದ ಹಾಗೆಲ್ಲ ಅದು ತನ್ನ ಮುಖ್ಯ ಉದ್ದೇಶವನ್ನು ಸಾಧಿಸುವಲ್ಲಿ ಸೋಲುತ್ತದೆ.

ಕಾರಣಗಳು

೧. ಕನ್ನಡದಲ್ಲಿ ಮ್ಲೇಚ್ಛ ಭಾಷೆ ಎಂಬುದಾಗಿ ಮತ್ತು ಸಂಸ್ಕೃತವನ್ನು ದೇವಭಾಷೆಯೆಂಬುದಾಗಿ ಪರಿಗಣಿಸುತ್ತಿದ್ದ ಮೇಲ್ವರ್ಗದ ಕನ್ನಡ ಬರಹಗಾರರಿಗೆ ಸಂಸ್ಕೃತದ ಮೇಲಿದ್ದ ಅಂಧಾಭಿಮಾನ ಮತ್ತು ಕನ್ನಡದ ಮೇಲಿದ್ದ ಕೀಳಿರಿಮೆಯೇ ಕನ್ನಡ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ಕಾಣಿಸಿಕೊಳ್ಳಲು ಮುಖ್ಯ ಕಾರಣಗಳಲ್ಲೊಂದು ಆಗಿದೆ.

೨. ಸಂಸ್ಕೃತದಿಂದ ಎರವಲಾಗಿ ಪಡೆದ ತತ್ಸಮ ಪದಗಳನ್ನು ಕನ್ನಡದ ಉಚ್ಚಾರಣೆಗನುಗುಣವಾಗಿ ಬರಹದಲ್ಲಿ ಬದಲಾಯಿಸಿಕೊಂಡಿಲ್ಲವಾದ್ದರಿಂದ ಕನ್ನಡದಲ್ಲಿ ಇಂದು ಸ್ಪೆಲ್ಲಿಂಗ್ ಸಮಸ್ಯೆ ಕಂಡುಬರುತ್ತದೆ.

೩. ಓದುವವರು ಅನಾವಶ್ಯಕವಾಗಿ ಹೆಚ್ಚಿನ ಅಕ್ಷರಗಳನ್ನು ಕಲಿಯಬೇಕಾಗಿದೆ. ಮತ್ತು ಯಾವ ಸಂದರ್ಭದಲ್ಲಿ ಯಾವ ಪದಗಳನ್ನು ಹಾಕಬೇಕು ಎಂದು ಅನಗತ್ಯವಾಗಿ ನೆನೆಪಿರಿಸಿಕೊಳ್ಳಬೇಕಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಸಂಸ್ಕೃತದಿಂದ ಸ್ವೀಕರಿಸಿ ಪದಗಳನ್ನು ಬದಲಾಯಿಸಿಕೊಂಡು ಬಳಸುತ್ತಿದ್ದೇವೆ. ಉದಾಹರಣೆಗೆ.

೧. ಎರವಲಾಗಿ ಪಡೆದಿರುವ ಸಂಸ್ಕೃತ ಪದಗಳನ್ನು ಹಲವು ಬಗೆಯಲ್ಲಿ ಬದಲಾವಣೆ ಮಾಡಿಕೊಂಡು ಬಳಸುತ್ತಿದ್ದೇವೆ. ಸಂಸ್ಕೃತದಲ್ಲಿ ಕಂಠ. ಉಪವಾಸ, ಮಾರ್ಗ, ದೇಶಿ, ದೀಪ ಮುಂತಾದವುಗಳನ್ನು ಪುಲ್ಲಿಂಗವಾಗಿಯೂ ಜಟಾ, ಜಿಹ್ವಾ. ತುಲಸೀ, ಬುದ್ದಿ ಮುಂತಾದವುಗಳನ್ನು ಸ್ತ್ರೀಲಿಂಗವಾಗಿಯೂ ಕರ್ಮ, ಕಾರ್ಯ, ಚರ್ಮ, ರಹಸ್ಯ ಮುಂತಾದವನ್ನು ನಪಂಸಕವಾಗಿ ಬಳಸುತ್ತಾರೆ. ಆದರೆ ಕನ್ನಡದಲ್ಲಿ ಈ ಎಲ್ಲ ಪದಗಳ್ನು ನಪುಂಸಕ ಲಿಂಗವಾಗಿಯೇ ಬಳಕೆ ಮಾಡುತ್ತಾರೆ.

೨ . ಸಂಸ್ಕೃತದಲ್ಲಿ ನಾಮಪದ ಮತ್ತು ಗುಣಪದಗಳ ನಡುವೆ ವ್ಯತ್ಯಾಸವಿಲ್ಲ ಆದರೆ ಕನ್ನಡದಲ್ಲಿ ವ್ಯತ್ಯಾಸ ಮಾಡಿಕೊಂಡು ಬಳಸಲಾಗುತ್ತಿದೆ.

೩. ಇತ್ತೀಚಿನ ದಿನಗಳಲ್ಲಿ ಸಂಸ್ಕೃತದ 'ಋ' ಗೆ ಬದಲಾಗಿ ಕನ್ನಡದ 'ರು' ವನ್ನೇ ಬಳಸುವಂತೆ ಪ್ರಯತ್ನಿಸಲಾಗಿದೆ.

ಹೀಗೆ ಪದಗಳನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಂಡು ಬಳಸುವುದರಿಂದ ಅಕ್ಷರ ಮಾಲೆಯಲ್ಲಿರುವ ಅನಾವಶ್ಯಕ ಅಕ್ಷರಗಳನ್ನು ತೆಗೆದು ಬರಹವನ್ನು ಸುಲಭಗೊಳಿಸಬಹುದಾಗಿದೆ. ಇಂತಹ ಬದಲಾವಣೆಗಳ ಮೂಲಕ ಕನ್ನಡಕ್ಕೊಂದು ಹೊಸ ಬರಹವನ್ನು ತಯಾರಿಸುವ ಸಾಧ್ಯತೆಯನ್ನು ಚರ್ಚಿಸಿದ್ದಾರೆ.

ಕನ್ನಡ ಬರಹ ಮತ್ತು ಉಚ್ಚಾರಣೆಯಲ್ಲಿ ಏಕರೂಪತೆಯನ್ನು ತರುವ ಸಲುವಾಗಿ ಇತರ ಭಾಷೆಯಿಂದ ಸ್ವೀಕರಿಸಿದ ಪದಗಳನ್ನು ನಮ್ಮ ಭಾಷೆಗೆ ತಕ್ಕಂತೆ ಬದಲಾಯಿಸಿಕೊಳ್ಳುವುದು ಅಗತ್ಯ ಮತ್ತು ಆ ಮೂಲಕ ಕನ್ನಡ ಬರಹವನ್ನು ಎಲ್ಲ ವರ್ಗದವರ ಸ್ವತ್ತಾಗಿಸಲು ಸಾಧ್ಯ. ಇದಕ್ಕಾಗಿ ಸಂಸ್ಕೃತ ಭಾಷೆಯಿಂದ ಬರವಣಿಗೆಗಾಗಿಯೇ ಸ್ವೀಕರಿಸಿದಂತಹ ಮಹಾಪ್ರಾಣಾಕ್ಷರಗಳನ್ನು ತೆಗೆದು ಹಾಕುವ ಮೂಲಕ ಕನ್ನಡಕ್ಕೊಂದು ಹೊಸ ಬರಹದ ಸಾಧ್ಯತೆಯ ಬಗ್ಗೆ ಚಿಂತಿಸಿದ್ದಾರೆ.

ಕನ್ನಡ ಬರಹ ಮೇಲ್ವರ್ಗದವರ ಮಾತಿಗೆ ಹೆಚ್ಚು ಹತ್ತಿರವಿದ್ದು ಕೆಳವರ್ಗದವರ ಮಾತಿನಿಂದ ಬಹಳಷ್ಟು ಭಿನ್ನವಾಗಿದೆ. ಅದರಲ್ಲಿ ಬರುವ ಕನ್ನಡದ್ದೇ ಆದ ಕ್ರಿಯಾಪದಗಳು, ವಿಭಕ್ತಿ ಪ್ರತ್ಯಯಗಳು, ವಾಕ್ಯರಚನೆ ಮೊದಲಾದವೆಲ್ಲ ಮೇಲ್ವರ್ಗದವರ ಮಾತಿನಲ್ಲಿ ಬರುವ ಅಂಶಗಳಿಗೆ ಹೆಚ್ಚು ಹತ್ತಿರವಾಗಿದೆ. ಈ ಕಾರಣದಿಂದಾಗಿ ಕನ್ನಡ ಬರಹವನ್ನು ಕಲಿಯುವ ಕೆಲಸ ಮೇಲ್ವರ್ಗದ ಮಕ್ಕಳಿಗಿಂತಲೂ ಕೆಳವರ್ಗದ ಮಕ್ಕಳಿಗೆ ಹೆಚ್ಚು ಕಷ್ಟವಾಗಿದೆ. ಹಾಗಾಗಿ ಹೊಸ ಬರಹದ ಸಾಧ್ಯತೆಯ ಕುರಿತಂತೆಯೂ ಚರ್ಚಿಸಿದ್ದಾರೆ.

೧. ಮಹಾಪ್ರಾಣಕ್ಷರಗಳನ್ನು ಹೆಚ್ಚಿನ ಕನ್ನಡಿಗರು ಅಲ್ಪಪ್ರಾಣಾಕ್ಷರಗಳಾಗಿ ಉಚ್ಚರಿಸುವ ಕಾರಣ ಆ ಪದಗಳೆನ್ನೆಲ್ಲ ಅಲ್ಪಪ್ರಾಣಾಕ್ಷರಗಳಾಗಿ ಬರೆಯುವುದು.

<u>ಹಳೆಯ ಬರಹ</u>	-	<u>ಹೊಸ ಬರಹ</u>
ಮುಖ್ಯ	-	ಮುಕ್ಯ
ಇಚ್ಛೆ	-	ಇಚ್ಚೆ

ಪಾಠ	-	ಪಾಟ
ನಿಷ್ಠೆ	-	ನಿಶ್ಟೆ
ಕಥೆ	-	ಕತೆ. ಇತ್ಯಾದಿ.

೨. 'ಋ' ನ್ನು 'ರು' ಎಂದೂ 'ಷ' ಕಾರವನ್ನು 'ಶ' ಕಾರವಾಗಿ ಐ, ಔ ಗಳನ್ನು ಅಯ್, ಅವ್‌ಗಳಾಗಿ ವಿಸರ್ಗವನ್ನು 'ಹ' ಕಾರವಾಗಿ ಅಥವಾ ಮುಂದೆ ಬರುವ ವ್ಯಂಜನದ ಒತ್ತಕ್ಷರವಾಗಿ ಬದಲಾಯಿಸುವುದು .

ಹಳೆ ಬರಹ	ಹೊಸ ಬರಹ
ಋಷಿ	ರುಶಿ
ಕೃಷ್ಣ	ಕ್ರುಶ್ಣ
ಐಹಿಕ	ಅಯ್ಹಿಕ
ಕ್ಷಣ	ಕ್ಶಣ
ಔತಣ	ಅವ್ತಣ
ಕೌರವ	ಕವ್ರವ
ಬಹುಶಃ	ಬಹುಶಹ

ಕನ್ನಡ ಬರಹದಲ್ಲಿರುವ ಙ, ಞ, ಣ, ನ, ಮ ಈ ಐದು ಅನುನಾಸಿಕಗಳನ್ನು ತೆಗೆದು ಆ ಭಾಗದಲ್ಲಿ ಅವುಗಳ ಬದಲು ಅನುಸ್ವರವನ್ನು ಬಳಸುವುದು.

ಅಜ್ಞಾನ	ಅಜ್ನಾನ
ವಾಙ್ಮಯ	ವಾಗ್ಮಯ

೪. 'ರ' ಕಾರಕ್ಕಿರುವ 'ರ , ೯' ಎಂಬ ಮೂರು ರೂಪಗಳಲ್ಲಿ '೯' ತೆಗೆದುಹಾಕಿ ಅದರ ಬದಲು 'ರ' ಎಂಬುದನ್ನೇ ಬಳಸಲು ಸಾಧ್ಯವಿದೆ ಈ ಬಳಕೆ ಬಹುತೇಕವಾಗಿ ಜಾರಿಯಲ್ಲಿದೆ.

ಹಳೆ ಬರಹ	ಹೊಸ ಬರಹ
ಸೂರ್ಯ	ಸೂರ‍್ಯ
ಪೂರ್ಣ	ಪೂರ‍್ಣ
ದುರ್ಬಲ	ದುರ‍್ಬಲ
ಅರ್ಥ	ಅರ‍್ತ

ಈ ಬದಲಾವಣೆಯ ಆಯ್ಕೆಯನ್ನು ಬರಹಗಾರರಿಗೆ ಬಿಡುವುದು ಒಳ್ಳೆಯದು. ಎಂದು ಡಾ.ಭಟ್ಟರು ಹೇಳುತ್ತಾರೆ.[೧೨]

ಉಚ್ಚಾರಣೆ ಮತ್ತು ಬರಹ:

ಕಾಲಾಂತರದಲ್ಲಿ ಹೊಸ ಬರಹವೇ ಕನ್ನಡಕ್ಕೆ ಸರಿಯಾದುದೆಂದು ಕಂಡುಕೊಳ್ಳುತ್ತಾರೆಂದು ಅಭಿಪ್ರಾಯಪಡುತ್ತಾ

ಮಾತು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಪಂಗಡದಿಂದ ಪಂಗಡಕ್ಕೆ ಭಿನ್ನವಾಗಿರುತ್ತದೆ. ಇವುಗಳಲ್ಲಿ ಯಾವುದಾದರೂ ಒಂದು ಪ್ರದೇಶದ ಮತ್ತು ಪಂಗಡದ ಮಾತನ್ನು ಬರಹಕ್ಕಿಳಿಸಲಾಗುತ್ತದೆ. ಸಾಮಾನ್ಯವಾಗಿ ಯಾವ ಪ್ರದೇಶದ, ಪಂಗಡದ ಜನರು ಭಾಷೆಯ ಮುಖ್ಯ ಬರಹಗಾರರಾಗಿ ಮುಂದೆ ಬರತ್ತಾರೋ ಅವರ ಮಾತು ಆ ಭಾಷೆಯ ಬರಹದಲ್ಲಿ ಬಳಕೆಯಾಗಿ ರೂಢಿಗೆ ಬರುತ್ತದೆ. ಹಳಗನ್ನಡ ಕಾಲದಲ್ಲಿ ಮೇಲ್ವರ್ಗದ ಜೈನರು ಮುಖ್ಯಬರಹಗಾರರಾಗಿ ಮುಂದೆ ಬಂದರು. ಈ ಬರಹಗಾರರ ಮಾತು ಕರಾವಳಿಯಲ್ಲಿ ಬಳಕೆಯಲ್ಲಿದ್ದ ಮೇಲ್ವರ್ಗದವರ ಮಾತಾಗಿದ್ದು ಅದೇ ಮಾತು ಹಳಗನ್ನಡದ ಬರಹದ ಭಾಷೆಯಾಗಿ ರೂಢಿಗೆ ಬಂದಿತು. ಹಳಗನ್ನಡಕ್ಕೂ ಇಂದು ಕರಾವಳಿಯಲ್ಲಿ ಬಳಕೆಯಲ್ಲಿರುವ ಹವ್ಯಕ, ಹಾಲಕ್ಕಿ, ಗೌಡ, ಮೊದಲಾದ ಕನ್ನಡ ಪ್ರಭೇದಗಳಿಗೂ ನಡುವೆ ಕಾಣಿಸುವ ಸಾಮ್ಯಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. ನಡುಗನ್ನಡದ ಸಮಯದಲ್ಲಿ ಉತ್ತರ ಕರ್ನಾಟಕದ ವೀರಶೈವರು ಮುಖ್ಯ ಬರಹಗಾರರಾಗಿ ಮುಂದೆ ಬಂದರು ಮತ್ತು ಅವರ ಮಾತು ನಡುಗನ್ನಡಕ್ಕೆ ಮಾದರಿಯಾಯಿತು. ಮುಂದೆ ಹೊಸಗನ್ನಡದ ಸಮಯದಲ್ಲಿ ಮೈಸೂರಿನ ಮಹರಾಜರ ಆಸ್ಥಾನದ ವಿದ್ವಾಂಸರು ಮುಖ್ಯ ಬರಹಗಾರರಾಗಿ ಮುಂದೆ ಬಂದರು ಮತ್ತು ಮೈಸೂರಿನ ಮೇಲ್ವರ್ಗದ ಜನರ ಮಾತು ಇವತ್ತಿನ ಹೊಸಗನ್ನಡಕ್ಕೆ ಆಧಾರವಾಯಿತು. ಹಾಗಾಗಿ ಯಾವ ಪ್ರದೇಶದ ಮತ್ತು ಪಂಗಡದ ಮಾತು ಬರಹದ ಭಾಷೆಯಾಗಿ ಬಳಕೆಗೆ ಬರುತ್ತದೆ ಎಂಬುದು ಈ ರೀತಿ ಆಕಸ್ಮಿಕವಾಗಿ ಜರುಗುವ ಘಟನೆಗಳ ಮೇಲೆ ಅವಲಂಬಿಸಿರುತ್ತದೆ. ಯಾವ ಬದಲಾವಣೆಯೂ ಮಾತಿನ ಇಲ್ಲವೇ ಭಾಷೆಯ ಕೀಳ್ತನವನ್ನಾಗಲೀ, ಮೇಲ್ತಾನವನ್ನಾಗಲೀ ಸೂಚಿಸುವುದಿಲ್ಲ.

ಪದಗಳ ಮೊದಲಿಗೆ ಬರುವ 'ಹ' ಕಾರ ಹಾಲನ್ನು, ಆಲು ಎನ್ನುವುದು; ಹೇಳಿ - ಏಳಿ ಆಗುವುದು ಇಂತಹ ಬದಲಾವಣೆಯ ಒಂದು ಫಲ. ಹಳಗನ್ನಡದ 'ಪ' ಕಾರ ನಂತರದಲ್ಲಿ 'ಹ' ಕಾರವಾದಂತೆ ಇದೂ ಕರ್ನಾಟಕದ ಕೆಲವು ಪ್ರದೇಶಗಳ ಮತ್ತು ಪಂಗಡಗಳ ಮಾತಿನಲ್ಲಿ ನಡೆದಿರುವ ಒಂದು ಬದಲಾವಣೆ. ಈ ಬದಲಾವಣೆ ಹೊಸಗನ್ನಡವನ್ನು ಬರಹದ ಭಾಷೆಯಾಗಿ ಬಳಕೆಗೆ ತಂದ ಮೈಸೂರಿನ ಮೇಲ್ವರ್ಗದವರ ಮಾತಿನಲ್ಲಿ ನಡೆದಿರಲಿಲ್ಲವಾದ ಕಾರಣ ಅದು ಹೊಸಗನ್ನಡ ಬರಹದ ಬದಲಾವಣೆಯಾಗಲಿಲ್ಲ. ಇದೇ ರೀತಿ ಶ, ಷ ಗಳ ನಡುವೆಯೂ ಮಾಡಬಹುದು.

ಬದಲಾಗುತ್ತಾ ಹೋಗುವುದು ಮಾತಿನ ಸ್ವಭಾವ. ಮಕ್ಕಳ ಬೆಳವಣಿಗೆಯ ಒಂದು ಅಂಗವಾಗಿ ಮಾತು ತಾನಾಗಿಯೇ ಅವರ ಸ್ವತ್ತಾಗುತ್ತದೆ. ಆದರೆ ಮಾತು ಬದಲಾಗುತ್ತಿರುವ ಸಮಯದಲ್ಲಿಯೇ ಬರಹ ಬದಲಾಗುವುದಿಲ್ಲ. ಅದು ಮಕ್ಕಳ ಬೆಳವಣಿಗೆಯ ಅಂಗವೇನೂ ಅಲ್ಲ. ಬರಹವನ್ನು ಕಲಿಸುವವರು ಅದು ಸ್ವಲ್ಪವೂ ಬದಲಾಗದ ಹಾಗೆ ಜಾಗ್ರತೆ ವಹಿಸುತ್ತಾರೆ. ಬರಹದ ಬದಲಾವಣೆಯನ್ನು ಬುದ್ಧಿಪೂರ್ವಕವಾಗಿ ಮಾಡಬೇಕಾಗುತ್ತದೆ. ಹಳಗನ್ನಡ ನಡುಗನ್ನಡವಾಗಿ ಬದಲಾಗಲು ದಾಸರು ಮತ್ತು ವಚನಕಾರರು ಮಾಡಿರುವ ಒಂದು ಪ್ರಯತ್ನ ಕಾರಣ. ನಡುಗನ್ನಡ ಹೊಸಗನ್ನಡವಾಗಿ ಬದಲಾಗಲು ಮೈಸೂರಿನ ಬರಹಗಾರರು ಮಾಡಿರುವ ಅಂತಹದೇ ಇನ್ನೊಂದು ಪ್ರಯತ್ನ ಕಾರಣವಾಗಿದೆ. ಆದರೆ ಈ ರೀತಿ ಬದಲಾಗುವ ಸಂದರ್ಭಗಳಲ್ಲೆಲ್ಲ ಬರಹ ಮಾತನ್ನನುಸರಿಸುತ್ತದೆಂಬುದು ಬಹಳ

ಮುಖ್ಯವಾದ ಸಂಗತಿಯಾಗಿದೆ. ಹೀಗೆ ಮಾತನ್ನನುಸರಿಸಿ ಬರಹ ಬದಲಾಗುವುದು ಅದರ ಜೀವಂತಿಕೆಯ ಲಕ್ಷಣ. ಹೀಗೆ ಕಾಲಾಂತರದಲ್ಲಿ ಬರಹವನ್ನು ಬದಲಾಯಿಸುವುದು ಸರಿ ತಪ್ಪಿನ ಪ್ರಶ್ನೆಯಲ್ಲ. ಕಾಲಾಂತರದಲ್ಲಿ ಈ ಬದಲಾವಣೆಯೇ ಸರ್ವರಿಗೆ ಒಪ್ಪಿತವಾಗುವುದು. ಆದುದರಿಂದ ನಾವೀಗ ಕನ್ನಡ ಬರಹವನ್ನು ಸರಿಪಡಿಸುವುದು ಅನಿವಾರ್ಯ ಎಂಬ ಕ್ರಾಂತಿಕಾರಿ ತೀರ್ಮಾನಕ್ಕೆ ಡಾ.ಭಟ್ಟರು ಬರುತ್ತಾರೆ.

ಉಚ್ಚಾರಣೆಗನುಸಾರವಾಗಿ ಬರಹವನ್ನು ಬದಲಾಯಿಸಿಕೊಂಡಿರುವ ತಮಿಳು, ಪಂಜಾಬಿ ಮೊದಲಾದ ಬರಹಗಳಲ್ಲಿ ಅನಿಶ್ಚಿತತೆ, ಗೊಂದಲ ಕಾಣಿಸುವುದಿಲ್ಲ ಉಚ್ಚಾರಣೆಗನುಸಾರವಾಗಿ ಬರಹವನ್ನು ಬದಲಾಯಿಸಿಕೊಳ್ಳುವ ಸಂದರ್ಭಗಳಲ್ಲೆಲ್ಲ ಈ ರೀತಿ ಮೊದಲ ಬಾರಿಗೆ ಅನಿಶ್ಚಿತತೆ ಕಾಣಿಸಿಕೊಳ್ಳುವುದಾದರೂ ಸಮಯ ಕಳೆದಂತೆ ಅನಿಶ್ಚತತೆ ಕಡಿಮೆಯಾಗುತ್ತಾ ಹೋಗಿ ಕೊನೆಗೆ ಒಂದು ರೀತಿಯ ಸ್ಥಿರತೆಯುಂಟಾಗುತ್ತದೆ. ಕನ್ನಡದ ಚರಿತ್ರೆಯಲ್ಲಿ 'ಪ' ಕಾರ 'ಹ' ಕಾರವಾದಾಗ ಮತ್ತು ಱ - ರ, ೞ - ಳ ಗಳ ನಡುವಿನ ವ್ಯತ್ಯಾಸ ಇಲ್ಲವಾದಾಗ ಅದಕ್ಕೆ ಅನುಸಾರವಾಗಿ ಬರಹವನ್ನು ಬದಲಾಯಿಸಲಾಗಿತ್ತು. ಆ ಸಮಯದಲ್ಲಿ ಮೊದಲಿಗೆ ಇಂತಹದೇ ಅನಿಶ್ಚಿತತೆಗಳು ಕಾಣಿಸಿಕೊಂಡಿದ್ದು ಈಗ ಅವಾವೂ ಉಳಿದಿಲ್ಲ. ಹೀಗೆ ಈ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗೆ ಪರಿಹಾರವನ್ನೂ ಅವರು ಹೇಳುತ್ತಾರೆ.

ಹೀಗೆ ಉಚ್ಚಾರಣೆಗನುಸಾರವಾಗಿ ಬರಹವನ್ನು ಸೃಷ್ಟಿಸಿಕೊಂಡಾಗ ಅರ್ಥಸಂದಿಗ್ಧತೆ ಉಂಟಾಗಬಹುದು. ಆದರೆ ನಾವು ಬರಹದಲ್ಲಿ ಬಳಸುವ ಬಹುತೇಕ ಪದಗಳಲ್ಲಿ ಹೆಚ್ಚಿನವಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳಿವೆ. ಸಂದರ್ಭಕ್ಕೆ ತಕ್ಕಂತೆ ಅವುಗಳನ್ನು ಅರ್ಥೈಸಿಕೊಳ್ಳಲಾಗುವುದು. ಅಲ್ಲದೆ ನಾವು ಬರಹದಲ್ಲಿ ಸರಿಯಾಗಿ ಬರೆದಾಗಲೂ ಉಚ್ಚಾರಣೆಯಲ್ಲಿ ಅವು ನಿಜರೂಪವನ್ನು ತಾಳಿರುತ್ತದೆ. ಹಾಗಾಗಿ ಭಾಷೆಯನ್ನು ಸರಳಗೊಳಿಸುವ ದಿಕ್ಕಿನಲ್ಲಿ ಅರ್ಥಸಂದಿಗ್ಧತೆ ದೊಡ್ಡ ಸಮಸ್ಯೆಯೇನೂ ಅಲ್ಲ. ಹೀಗೆ ಹೊಸ ಬರಹವೊಂದನ್ನು ರೂಪಿಸಿಕೊಂಡರೆ ಈಗಾಗಲೇ ಇರುವ ಬರಹದಲ್ಲಿ ಸಮಸ್ಯೆ ಉಂಟಾಗಬಹುದು. ಆದರೂ ಕಾಲಾಂತರದಲ್ಲಿ ಅದು ಸರಿಯಾಗುತ್ತದೆಯೆಂದು ಅವರು ಅಭಿಪ್ರಾಯಪಡುತ್ತಾರೆ. [೧೩]

ಕನ್ನಡ ಬರಹವನ್ನು ಸರಿಪಡಿಸುವಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಯೆಂದರೆ ಪದ ಸಮಸ್ಯೆಯೇ ಆಗಿದೆ. ಅತಿಯಾಗಿ ಸಂಸ್ಕೃತ ಬಳಕೆಯಿಂದ ಇಂದು ಕನ್ನಡ ಭಾಷೆ ಬರಹದ ಸಮಸ್ಯೆಯನ್ನು ಎದುರಿಸುತ್ತಿದೆ. ಕನ್ನಡ ಕಾವ್ಯ ಮತ್ತು ಶಾಸ್ತ್ರ ಗ್ರಂಥಗಳಿಗೆ ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ದಟ್ಟ ಪ್ರಭಾವದಿಂದಾಗಿ ಸಂಸ್ಕೃತ ಪದಗಳು ಬಹಳ ಸುಲಭವಾಗಿ ದೊರಕುವಂತಾಯಿತು. ಹೀಗೆ ಸಂಸ್ಕೃತದಿಂದ ಸ್ವೀಕರಿಸಿದ ಪದಗಳನ್ನು ಬದಲಾಯಿಸಿಕೊಳ್ಳದೆ ಅವುಗಳನ್ನು ಹಾಗೆಯೇ ಬಳಸುವುದರಿಂದ ತಮ್ಮ ಬರಹದ ಘನತೆ ಹೆಚ್ಚುತ್ತದೆಯೆಂಬ ಭಾವನೆ ಬರಹಗಾರರಲ್ಲಿದ್ದುದು ಸಮಸ್ಯೆಯ ಮತ್ತೊಂದು ಕಾರಣವಾಗಿದೆ.

ಈ ಭಾಷಾ ಸ್ವೀಕರಣೆಯ ಪ್ರವೃತ್ತಿ ಅತಿಯಾದುದುದನ್ನು ಗಮನಿಸಿ ಅದನ್ನು ವಿರೋಧಿಸಿದ ಬರಹಗಾರರು ಕೆಲವರಿದ್ದರು. ಉದಾಹರಣೆಗೆ ಹದಿಮೂರನೇ ಶತಮಾನದಲ್ಲಿದ್ದ ಆಂಡಯ್ಯನು ಕನ್ನಡ ಕಾವ್ಯಗಳಲ್ಲಿ ಈ ರೀತಿ ಸಂಸ್ಕೃತ ಪದಗಳನ್ನು ಅವುಗಳಲ್ಲಿ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೆಯೇ ತಂದು ತುಂಬುವುದು ಸರಿಯಲ್ಲ. ಕನ್ನಡ ಬರಹಗಳಲ್ಲಿ ಕನ್ನಡದವೇ ಆದ ಪದಗಳನ್ನು ಬಳಸಿದಲ್ಲಿ ಮತ್ತು ಸಂಸ್ಕೃತ ಪದಗಳನ್ನು ಬಳಸುವುದಿದ್ದರೂ

ಅವುಗಳನ್ನು ಕನ್ನಡದ ಸ್ವರೂಪಕ್ಕೆ ಹೊಂದಿಕೆಯಾಗುವ ಹಾಗೆ ಬದಲಾವಣೆಗಳನ್ನು ಮಾಡಿ ಬಳಸಿದಲ್ಲಿ ಮಾತ್ರ ಕನ್ನಡದ ಸೊಬಗು ಉಳಿಯುತ್ತದೆ ಎಂಬುದನ್ನು ತನ್ನ ಬರಹದ ಮೂಲಕ ತೋರಿಸಿಕೊಟ್ಟಿದ್ದು. ಇದಕ್ಕೂ ಹಿಂದೆ ಒಂಬತ್ತನೇ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗವನ್ನು ಕುರಿತಂತೆ ಡಾ.ಎಸ್.ಎಸ್.ಕೋತಿನ ವಿವರಿಸಿದ ಹಾಗೆ 'ಸಕ್ಕದದ ಅತಿಯಾದ ಸಂಬಂಧ ಕನ್ನಡಕ್ಕೆ ಕರ್ಕಶವಾಗದಂತೆ ಬರುವ ಸಕ್ಕದ ಪದಗಳಿಗೆ ಮಾತ್ರ ಅನುಮತಿಯನ್ನು ಕೊಡಲಾಗಿದೆ.' ಇದರಿಂದ ಪ್ರಾಚೀನ ಕಾಲದಿಂದಲೂ ಅಚ್ಚಗನ್ನಡದ ಚಿಂತಕರು ಕನ್ನಡದ ಬರವಣಿಗೆಯ ಬಗೆಗೆ ಸುಧಾರಣೆಯ ಬಗೆಗೆ; ಚಿಂತಿಸುತ್ತಿದ್ದರೆಂಬುದನ್ನು ಸ್ವತಃ ಡಾ. ಭಟ್ಟರೇ ಪರೋಕ್ಷವಾಗಿ ಒಪ್ಪಿಕೊಳ್ಳುತ್ತಾರೆ ಎಂದು ಹೇಳಬಹುದು. ಅಂದರೆ ಆಂಡಯ್ಯನೇ ಮೊದಲಾದ ಚಿಂತಕರು ಕನ್ನಡದ ಮಾತು ಮತ್ತು ಬರಹಗಳ ಸಂಬಂಧದ ಬಗೆಗೇ ಚಿಂತಿಸಿದ ಆರಂಭಿಕರೆಂದು ತಿಳಿಯಬಹುದಾಗಿದೆ.

ಮುಂದುವರೆದು ಡಾ. ಭಟ್ಟರು ಬರಹಕ್ಕೆ ಪೂರಕವಾಗಿದ್ದ ಸಾಮಾಜಿಕ ಹಿನ್ನೆಲೆಯ ಬಗೆಗೆ ವಿವರಣೆ ನೀಡುತ್ತಾರೆ. ಹಿಂದಿನ ಕಾಲದಲ್ಲಿ ಕನ್ನಡ ಬರಹವನ್ನು ಮತ್ತು ಗ್ರಂಥಗಳನ್ನು ರಚಿಸುತ್ತಿದ್ದವರಲ್ಲಿ ಹೆಚ್ಚಿನವರು ವೈದಿಕ ಬ್ರಾಹ್ಮಣರಾಗಿದ್ದು, ಇವರಿಗೆ ಸಂಸ್ಕೃತ ಉಚ್ಚಮಟ್ಟದ ಪ್ರತಿಷ್ಠೆಯ ಭಾಷೆಯಾಗಿತ್ತು. ಮತ್ತು ಕನ್ನಡ ಕೆಳಮಟ್ಟದ ಮ್ಲೇಚ್ಛ ಭಾಷೆಯಾಗಿತ್ತು. ಬ್ರಾಹ್ಮಣರು ಆರ್ಯ ಮೂಲದವರಾಗಿದ್ದು ಇದಕ್ಕೆ ಕಾರಣವಿರಬಹುದು. ಇವತ್ತಿನ ಕಾಲದಲ್ಲೂ ಪೂಜೆ ಮಾಡುವ ಸಮಯದಲ್ಲಿ ಕನ್ನಡದಲ್ಲಿ ಮಾತನಾಡಿದರೆ ಅಶುದ್ಧವಾಗುವದೆಂದು ನಂಬುವ ಕೆಲ ಬ್ರಾಹ್ಮಣರಿದ್ದಾರೆ. ಈ ಮೇಲಿನ ಭಾವನೆಗಳೇ ಸಂಸ್ಕೃತದ ಅತಿಯಾದ ಬಳಕೆಗೆ ಕಾರಣವಾಗಿರಬಹುದು. ಆದರೆ ಇಂದು ಬರಹ ಯಾವುದೇ ಒಂದು ವರ್ಗದ ಸ್ವತ್ತಾಗಿ ಉಳಿದಿಲ್ಲ ಮಾತ್ರವಲ್ಲ. ಅದರಿಂದ ಅನೇಕ ಕಾರ್ಯಗಳು ನಡೆಯಬೇಕಾಗಿದೆ. ಹಿಂದಿನ ಕಾಲದಲ್ಲೂ ತಾವು ತಿಳಿಸುವ ವಿಷಯಗಳು ಸಮಾಜದಲ್ಲಿ ಹೆಚ್ಚಿನವರಿಗೆ ಅರ್ಥವಾಗಬೇಕೆಂಬ ಕಳಕಳಿಯಿರುವವರು ಆದಷ್ಟು ಮಟ್ಟಿಗೆ ತಮ್ಮ ಬರಹಗಳಲ್ಲಿ ಮತ್ತು ಕೃತಿಗಳಲ್ಲಿ ಹೆಚ್ಚಿನವರಿಗೆ ಅರ್ಥವಾಗುವಂತಹ ಪದಗಳನ್ನೇ ಬಳಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ವಿದ್ವಾಂಸರನ್ನು ಮೆಚ್ಚಿಸುವುದಕ್ಕಾಗಿ ಬರೆದಂತಹ ಕಾವ್ಯ ಮತ್ತು ಶಾಸ್ತ್ರಗ್ರಂಥಗಳಲ್ಲಿ ಮಾತ್ರ ಹೆಚ್ಚು ಹೆಚ್ಚು ಸಂಸ್ಕೃತ ಪದಗಳು ಬಳಕೆಯಾಗಿವೆ. ಪಾರಿಭಾಷಿಕ ಪದಗಳನ್ನು ರಚಿಸುವಲ್ಲೂ ವಿದ್ವಾಂಸರು ಸಂಸ್ಕತದ ಪದ ಇಲ್ಲವೇ ಪದಕಾಂಡಗಳನ್ನೇ ಬಳಸುವ ಪ್ರವೃತ್ತಿಯನ್ನು ಬಳಸಿಕೊಂಡಿದ್ದಾರೆ. ಈ ಪದಗಳು ಕೇವಲ ಪಾಂಡಿತ್ಯ ಕೃತಿಗಳಿಗೆ ಸೀಮಿತವಾಗಿರದೆ ಬಹುತೇಕ ವರ್ಗದ ಜನರನ್ನು ತಲುಪಬೇಕಾಗಿರುವಂತಹ ಬರಹಗಳಲ್ಲೂ ಕಾಣಿಸಿಕೊಳ್ಳುತ್ತಿರುವುದರಿಂದ ಕನ್ನಡ ಬರಹ ಹೆಚ್ಚು ಕ್ಲಿಷ್ಟವಾಗುತ್ತದೆ.

ಮಾತು ಮತ್ತು ಬರಹ

ಮಾತಿಗೂ ಬರಹಕ್ಕೂ ನಡುವೆ ವ್ಯತ್ಯಾಸಗಳು ಕಡಿಮೆಯಿದ್ದಷ್ಟೂ ಸಂವಹನ ಸುಲಭ ಸಾಧ್ಯವಾಗುತ್ತದೆ. ಮಾತಿಗೂ ಬರಹಕ್ಕೂ ಅದರದೇ ಆದ ಪ್ರತ್ಯೇಕತೆಯಿದೆ. ಮಾತನಾಡುವ ವ್ಯಕ್ತಿಯ ಮೂಲಕ ಆತನ ಭಾವನೆಗಳನ್ನು ಅರಿಯಬಹುದು. ಆದರೆ ಬರಹದಲ್ಲಿ ಅದನ್ನು ಅಕ್ಷರಗಳಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಬರಹಗಾರರು ತಮ್ಮ ಬರಹಗಳಲ್ಲಿ ಕೆಲವು ವಿಶಿಷ್ಟವಾದ ವಾಕ್ಯರಚನೆಗಳನ್ನು ಬಳಸಬೇಕಾಗುತ್ತದೆ. ಈ ಕಾರಣಕ್ಕಾಗಿಯೂ ಬರಹದಲ್ಲಿ ಬರುವ ವಾಕ್ಯಗಳು ಮಾತಿನಲ್ಲಿ ಬರುವ ವಾಕ್ಯಗಳಿಗಿಂತ ಭಿನ್ನವಾಗಿರುತ್ತವೆ.

ಕನ್ನಡಿಗರ ಮಾತು ಮತ್ತು ಬರಹಗಳಲ್ಲಿ ನಡುವೆ ಕಾಣಿಸುವ ಇನ್ನೊಂದು ಮುಖ್ಯವಾದ ಮತ್ತು ಅನಿವಾರ್ಯವಲ್ಲದ ವ್ಯತ್ಯಾಸವೆಂದರೆ ಬರಹದಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವುದು ಮತ್ತು ಇದನ್ನು ಸಂಸ್ಕೃತದಲ್ಲಿರುವ ಹಾಗೆಯೇ ಎಂದರೆ ತತ್ಸಮ ರೂಪದಲ್ಲಿಯೇ ಬಳಸುವುದು ಅನಿವಾರ್ಯವಲ್ಲ ಮತ್ತು ಇದನ್ನು ಬಿಟ್ಟುಕೊಡುವ ಮೂಲಕ ಕನ್ನಡಿಗರ ಮಾತು ಮತ್ತು ಬರಹಗಳ ನಡುವಿನ ವ್ಯತ್ಯಾಸವನ್ನು ಕಡಿಮೆ ಮಾಡಲು ಸಾಧ್ಯ. ಇದಕ್ಕಾಗಿ ಕನ್ನಡ ಬರಹದಲ್ಲಿ 'ಪದಕ್ರಾಂತಿ'ನಡೆಸುವ ಅವಶ್ಯಕತೆಯ ಬಗ್ಗೆಯೂ ಚರ್ಚಿಸಿದ್ದಾರೆ.[೧೪]

ಹೀಗೆ ಪಡೆಯುವ ಎರವಲು ಪದಗಳು ಎಲ್ಲ ಭಾಷೆಗಳಲ್ಲೂ ಕಂಡುಬರುತ್ತವೆ. ಮಾತ್ರವಲ್ಲ ಭಾಷಾ ಪ್ರಭೇದವನ್ನು ಹೊಂದಿಕೊಂಡಂತೆ ಕೆಲವೊಮ್ಮೆ ಹೆಚ್ಚು ಕೆಲವೊಮ್ಮೆ ಕಡಿಮೆ ಸಂಖ್ಯೆಯಲ್ಲಿರುತ್ತವೆ. ಈ ರೀತಿಯ ಎರವಲು ಪದಗಳು ಹೆಚ್ಚಾಗಿ ಶಾಸ್ತ್ರೀಯ ಇಲ್ಲವೇ ವೈಜ್ಞಾನಿಕ ಬರಹಗಳಲ್ಲಿ ಕಂಡುಬರುತ್ತಿದ್ದು, ಇತರ ಬರಹಗಳಲ್ಲಿ ಈ ಪ್ರಮಾಣ ಕಡಿಮೆಯಿರುತ್ತವೆಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರತಿಯೊಂದು ಭಾಷೆಗೂ ಅದರದೇ ಆದ ಪ್ರತ್ಯೇಕ ಸೊಗಡಿರುತ್ತದೆ. ಆ ಭಾಷೆಯಲ್ಲಿ ಬಳಕೆಯಾಗುವ ಪದಗಳು, ಪದಕಂತೆಗಳ ಮತ್ತು ವಾಕ್ಯಗಳ ಸ್ವರೂಪದಲ್ಲಿ ಅದು ಕಾಣಿಸಿಕೊಳ್ಳುತ್ತದೆ. ಕೆಲವೊಂದು ವಿಶಿಷ್ಟ ಸಂದರ್ಭ, ಕಾರಣದಿಂದಾಗಿ ವಸ್ತು ವಿಷಯಗಳಿಗೆ ಹೊಸ ಹೆಸರೊಂದನ್ನು ಸೂಚಿಸುವ ಸಂದರ್ಭ ಉಂಟಾಗಬಹುದು. ಅಂತಹ ಸಂದರ್ಭದಲ್ಲಿ ಆಯಾ ಭಾಷೆಯಲ್ಲಿಯೇ ಸೂಚಿಸುವ ಸೂಕ್ತವಾದ ಪದ ದೊರೆಯದಿದ್ದಾಗ ಅನ್ಯಭಾಷೆಯಿಂದ ಪದ ಸ್ವೀಕರಿಸಬಹುದು. ಹೀಗೆ ಸ್ವೀಕರಿಸುವಾಗ ಆಯಾ ಭಾಷೆಯ ಪದರಚನೆ ಬರಹಕ್ಕೆ ಮತ್ತು ಉಚ್ಚಾರಣೆಗೆ ಹೊಂದಿಕೆಯಾಗುವಂತೆ ನೋಡಿಕೊಳ್ಳಬೇಕಾಗುತ್ತದೆ.

ಇಂದು ಕನ್ನಡ ಭಾಷೆಯಲ್ಲಿ ಹೆಚ್ಚು ಹೆಚ್ಚು ಪಾರಿಭಾಷಿಕ ಪದಗಳು ಕಂಡುಬರುತ್ತವೆ. ಈ ಪಾರಿಭಾಷಿಕ ಪದಗಳನ್ನು ತಯಾರಿಸುತ್ತಿರುವವರು ಬೇರೆ ಬೇರೆ ಶಾಸ್ತ್ರಗಳಾದ ವ್ಯಾಕರಣ, ಅಲಂಕಾರ, ಜ್ಯೋತಿಷ್ಯ, ತತ್ತ್ವಶಾಸ್ತ್ರ ಮತ್ತು ವಿಜ್ಞಾನದ ವಿದ್ವಾಂಸರು. ಇವರಿಗೆ ಕನ್ನಡ ಭಾಷೆ ಮತ್ತು ವ್ಯಾಕರಣದ ಬಗ್ಗೆ ಜ್ಞಾನವಿಲ್ಲ. ಕನ್ನಡದಲ್ಲಿ ವಿಜ್ಞಾನದ ಮತ್ತು ಶಾಸ್ತ್ರಗಳ ವಿಚಾರಗಳನ್ನು ಕನ್ನಡದಲ್ಲಿ ವಿವರಿಸಿ ಹೇಳಲು ಯಾವ ಬಗೆಯ ಪದಕಾಂಡ ಮತ್ತು ಪ್ರತ್ಯಯಗಳನ್ನು ಬಳಸುವ ಸಾಧ್ಯತೆಯಿದೆ. ಎಂಬುದನ್ನು ಇವರು ಆಳವಾಗಿ ಅಧ್ಯಯನ ಮಾಡಿಲ್ಲ. ಇದರಿಂದಾಗಿ ಕ್ಲಿಷ್ಟವಾದ ವಿಜ್ಞಾನ ಬರಹವನ್ನು ಓದುವ ಕನ್ನಡ ಓದುಗರು ಮತ್ತು ಬರಹಗಾರರು ಯಾವ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂಬುದನ್ನು ಇವರು ಅರಿತಿಲ್ಲ. ಕನ್ನಡದ ಸೇರಿಕೆಯ ನಿಯಮಗಳಿಗಿಂತ ತೀರಾ ಭಿನ್ನವಾಗಿರುವ ಸಂಸ್ಕೃತದ್ದೇ ಆದ ಸೇರಿಕೆಯ ನಿಯಮಗಳು ಸವರ್ಣದೀರ್ಘ ಸಂಧಿ, ಗುಣಸಂಧಿ, ವೃದ್ಧಿಸಂಧಿ, ಮೊದಲಾದವುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪಾರಿಭಾಷಿಕ ಪದಗಳನ್ನು ಬಳಸುವ ಬಹುತೇಕರಿಗೆ ಹೋಲಿಕೆ ಮುಖ್ಯವಾಗಿರುತ್ತದೆಯೇ ಹೊರತು ಅರ್ಥಮುಖ್ಯವಾಗುವುದಿಲ್ಲ. ಹಾಗಾಗಿ ಅವುಗಳನ್ನು ಸಂಸ್ಕೃತದಲ್ಲಿರುವಂತೆಯೇ ನೇರವಾಗಿ ಸ್ವೀಕರಿಸಿ ಕನ್ನಡದಲ್ಲಿ ಬಳಸುತ್ತಾರೆ. ಇದರ ಬದಲು ತಮಗೆ ಬೇಕಾದ ಪಾರಿಭಾಷಿಕ ಪದ ಹಳಗನ್ನಡ ಅಥವಾ ಮೂಲದ್ರಾವಿಡ ಭಾಷೆಯಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಕಂಡುಕೊಂಡು ಬಳಸುವುದು ಅತ್ಯಂತ ಸೂಕ್ತವಾದ ವಿಧಾನವಾಗಿದೆಯೆಂದು ಅಭಿಪ್ರಾಯಪಡುತ್ತಾರೆ.

ದಿನ ಬಳಕೆಯ ಪದಗಳನ್ನು ಪಾರಿಭಾಷಿಕ ಪದಗಳಾಗಿ ಬಳಸುವುದರಿಂದ ಗೊಂದಲವುಂಟಾಗಬಹುದೆಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ರೀತಿಯ ವಿವರಣೆ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ಕಲಿಕೆಯ ಸಂದರ್ಭದಲ್ಲಿ ವೆಬ್-ಬಲೆ, ಮೌಸ್-ಇಲಿ, ಟ್ರೀ-ಮರ, ವಿಂಡೋಸ್-ಕಿಟಕಿಗಳು ಮುಂತಾದ ಪದಗಳನ್ನು ಹೆಚ್ಚು ಹೆಚ್ಚಾಗಿ ಬಳಸುತ್ತಾರೆ. ಗೊಂದಲ ಉಂಟಾಗುವ ಸಂದರ್ಭದಲ್ಲಿ ಮಾತ್ರ ಅನ್ಯ ಭಾಷೆಯ ಪದ ಸ್ವೀಕರಿಸಬಹುದು. ಇಂಗ್ಲೀಷಿನ Solt ಕನ್ನಡದ ಉಪ್ಪು ಅಥವಾ ಸಂಸ್ಕೃತದ ಲವಣವು ವ್ಯಾಪಕಾರ್ಥ ನೀಡುವುದಿಲ್ಲ. ಹಾಗಾಗಿ ಕನ್ನಡದಲ್ಲಿ ಇಂಗ್ಲೀಷಿನ ಸಾಲ್ಟ್ ಪದವನ್ನು ಸ್ವೀಕರಿಸಿ ಬಳಸುವುದು ಹೆಚ್ಚು ಉಚಿತವಾಗಿ ಕಂಡುಬರುವುದೆಂದೂ ಅಭಿಪ್ರಾಯಪಡುತ್ತಾರೆ.[೧೫]

ಕನ್ನಡ ಮತ್ತು ಸಂಸ್ಕೃತಭಾಷೆಗಳ ನಡುವೆ ವ್ಯಾಕರಣದ ಮೂಲ ತತ್ವಗಳಲ್ಲಿಯೇ ಹಲವಾರು ವ್ಯತ್ಯಾಸಗಳಿದ್ದು ಈ ವ್ಯತ್ಯಾಸಗಳಿಂದ ಕನ್ನಡ ವಾಕ್ಯಗಳಲ್ಲಿ ಬಳಕೆಯಾಗುವ ಸಂಸ್ಕೃತ ಪದಗಳು ಅರ್ಥ ಸಂದಿಗ್ಧತೆಗೆ ಎಡೆಮಾಡಿಕೊಡುತ್ತವೆಂದು ಅಭಿಪ್ರಾಯಪಡುತ್ತಾರೆ. ಅದನ್ನು ಅಲ್ಪಪ್ರಾಣ ಮಹಾಪ್ರಾಣಕ್ಷರಗಳ ಬಳಕೆ ಮತ್ತು ಗುಣಪದ ನಾಪದಗಳ ಬಳಕೆಯ ನಡುವಿರುವ ವ್ಯತ್ಯಾಸದಿಂದಲೇ ತಿಳಿಯಬಹುದು. ಸಂಸ್ಕೃತ, ಇಂಗ್ಲೀಷ್, ಲ್ಯಾಟಿನ್, ಗ್ರೀಕ್ ಮೊದಲಾದ ಭಾಷೆಗಳು ಇಂಡೋ ಯುರೋಪಿಯನ್ ಎಂಬ ಒಂದೇ ಮೂಲಭಾಷೆಯಿಂದ ಬೆಳೆದುಬಂದಿದೆ. ಹಾಗಾಗಿ ಅವುಗಳ ಪದರಚನೆಯಲ್ಲಿ ಸಾಮ್ಯತೆ ಕಂಡುಬಂದರೆ, ಕನ್ನಡ ಭಾಷೆ ದ್ರಾವಿಡ ಭಾಷಾ ಮೂಲ ಕುಟುಂಬಕ್ಕೆ ಸೇರಿದುದಾದುದರಿಂದ ಅದರ ರಚನೆಯಲ್ಲಿ ವ್ಯತ್ಯಾಸ ಕಂಡುಬರುವುದು ಸಹಜ.

ಸಂಸ್ಕೃತದ ಜ್ಞಾನ - ಅಜ್ಞಾನ, ಇಂಗ್ಲೀಷಿನ True - untrue ಗಳ ನಡುವೆ ಸಾಮ್ಯತೆ ಕಂಡುಬಂದರೆ ಕನ್ನಡದಲ್ಲಿ ಸಂಪೂರ್ಣ ಭಿನ್ನತೆ ಕಂಡುಬರುವುದು.

ಸಂಸ್ಕೃತ	**ಕನ್ನಡ**
ಅನಂತ	ಕೊನೆಯಿಲ್ಲದ
ಅನಾವಶ್ಯಕ	ಬೇಕಿಲ್ಲದ

ಕನ್ನಡದಲ್ಲಿ ಇಲ್ಲದ, ಅಲ್ಲದ ಎಂಬ ಪ್ರತ್ಯಯಗಳನ್ನು ಸೇರಿಸಿಯೇ ಅರ್ಥ ಸೂಚಿಸಬೇಕಾಗುತ್ತದೆ.

* ಕ್ರಿಯಾರೂಪಗಳಿಗೆ ವಿರುದ್ಧಾರ್ಥಕಗಳನ್ನು ಸೂಚಿಸುವಾಗ 'ಅದ' ಪ್ರತ್ಯಯವನ್ನು ಬಳಸಲಾಗುವುದು

ಅನ್ನೋನ್ - ತಿಳಿಯದ

* ಕನ್ನಡದಲ್ಲಿ ವಸ್ತು, ಗುಣಧರ್ಮ; ವಿಧಾನಕ್ಕೆ ತಕ್ಕಂತೆ ಪದ ರಚನೆಯಲ್ಲಿ ಬದಲಾವಣೆ ಕಂಡುಬರುವುದು.

ಇಂಗ್ಲೀಷ್ - ಸಂಸ್ಕೃತದಲ್ಲಿ ಪದದ ನಂತರ ಪ್ರತ್ಯಯಗಳನ್ನು ಬಳಸುವ ಮಾದರಿಯನ್ನು ಕನ್ನಡದಲ್ಲಿ ಅನುಸರಿಸುವುದು ಸುಲಭವಾಗಿ ಕಂಡದ್ದರಿಂದ ಹೆಚ್ಚು ಹೆಚ್ಚು ಪದಗಳನ್ನು ಬಳಸುತ್ತಿರಬಹುದು. ಆದರೆ ಕನ್ನಡದಲ್ಲಿ ಈ ಮಾದರಿಯಿಲ್ಲ.

ಕನ್ನಡ ಬರಹದ ಯಾವ ಯಾವ ಸಂದರ್ಭಗಳಲ್ಲಿ ಈ ಸಂಸ್ಕೃತ ಪದಗಳು ಹೆಚ್ಚಾಗಿ ಕಂಡುಬರುತ್ತವೆ. ಎಂಬುದನ್ನು ಅಂಕಿ ಸಂಖ್ಯೆಗಳ ಉದಾಹರಣೆ ಮೂಲಕ ವಿವರಿಸಿದ್ದಾರೆ.

೧. ಕತೆ ಕಾದಂಬರಿಗಳಲ್ಲಿ ಬಳಕೆಯಾಗುವ ಸಂಸ್ಕೃತ ಪದಗಳ ಪ್ರಮಾಣ

ಶಿವರಾಮ ಕಾರಂತರ-'ಬೆಟ್ಟದ ಜೀವ' ಕಾದಂಬರಿಯಲ್ಲಿ-ಶೇ.೫

ಇನಾಂದಾರರ - 'ಸ್ವರ್ಗದ ಬಾಗಿಲು' ಶೇ. ೬

ಗೋಕಾಕರ - 'ಇಜ್ಜೋಡು' ಕಾದಂಬರಿಯಲ್ಲಿ ಶೇ.೧೦

ಮೇಲ್ವರ್ಗದವರ ಜೀವನವನ್ನು ಚಿತ್ರಸುವ ಕಾದಂಬರಿಗಳಲ್ಲಿ ಹೆಚ್ಚು ಸಂಸ್ಕೃತ ಪದಗಳ ಬಳಕೆ ಮತ್ತು ಕೆಳವರ್ಗದವರ ಜೀವನವನ್ನು ಚಿತ್ರಿಸುವ ಕಾದಂಬರಿಗಳಲ್ಲಿ ಈ ಸಂಸ್ಕೃತ ಪದಗಳ ಬಳಕೆಯ ಪ್ರಮಾಣ ಕಡಿಮೆಯಾಗಿರುವುದನ್ನು ಗುರುತಿಸುತ್ತಾರೆ.[೭]

ಇತ್ತೀಚೆಗೆ ದಿನಪತ್ರಿಕೆಗಳಲ್ಲಿ ಸಂಸ್ಕೃತ ಪದಗಳ ಸಂಖ್ಯೆಜಾಸ್ತಿಯಾಗಿದೆ. ಇಲ್ಲಿ ಕೆಲ ಪದಗಳನ್ನು ಸೂಚಿಸಿ ಕನ್ನಡದಲ್ಲಿ ಅವುಗಳಿಗೆ ಸೂಕ್ತ ಪರ್ಯಾಯ ಪದಗಳಿರುವುದನ್ನು ಉಲ್ಲೇಖಿಸುತ್ತಾರೆ.

ಸಂಸ್ಕೃತ ಪದಗಳು		ಕನ್ನಡ ಪದಗಳು
ಆಹ್ವಾನ	-	ಕರೆ
ಅಂತ್ಯ	-	ಕೊನೆ
ಅಭಾವ	-	ಕೊರತೆ
ಹತ್ಯೆ	-	ಕೊಲೆ
ಆಗ್ರಹ	-	ಒತ್ತಾಯ
ಅಧ್ಯಯನ	-	ಕಲಿಕೆ
ಅನುಪಸ್ಥಿತಿ	-	ಇಲ್ಲದಿರುವಿಕೆ
ಮೃತ	-	ಸತ್ತ, ಮಡಿದ
ಅಪಜಯ	-	ಸೋಲು
ವೃದ್ಧಿ	-	ಹೆಚ್ಚಳ, ಇತ್ಯಾದಿ.

ಮುಂದುವರೆದು ಡಾ. ಭಟ್ಟರು ಕೆಲ ಆಯ್ದ ಲೇಖನಗಳ ಭಾಗಗಳನ್ನು ಉಲ್ಲೇಖಿಸಿ ಅವುಗಳಲ್ಲಿ ಇನ್ನೂ ಅಧಿಕ ಪ್ರಮಾಣದಲ್ಲಿ ಸಂಸ್ಕೃತ ಪದಗಳು ಬಳಕೆಯಾಗಿರುವುದನ್ನು ತೋರಿಸುತ್ತಾರೆ.

ಬೇರೆ ಬೇರೆ ಭಾಷೆಗಳಿಂದ ವಿಷಯಗಳನ್ನು ಕನ್ನಡಕ್ಕೆ ಅನುವಾದ ಮಾಡುವಾಗ ಬಹುತೇಕರು ಕನ್ನಡ ಪದಗಳಿಗೆ ಬದಲಾಗಿ ಸಂಸ್ಕೃತ ಪದಗಳನ್ನೇ ಬಳಸುತ್ತಾರೆ. ಇದರಿಂದಾಗಿ ಕನ್ನಡದಲ್ಲಿ ಪದಸಮಸ್ಯೆ ಉಂಟಾಗಿದೆ. ಮಾತ್ರವಲ್ಲ ಅವು ಉಚ್ಚಾರಣೆಗೂ ತೊಂದರೆಯನ್ನುಂಟುಮಾಡುತ್ತವೆ.[೮]

ಇಂಗ್ಲೀಷ್ ಪದಗಳು	ಸಂಸ್ಕೃತ ಪದಗಳು
ಪೋಲೀಸ್	ಆರಕ್ಷಕ
ಇಂಜಿನಿಯರ್	ಅಭಿಯಂತರ
ಚೈನ್	ಶೃಂಖಲೆ
ಕೊಲಿಷನ್	ಸಂಘಟನೆ
ಟಂಗ್	ಜಿಹ್ವೆ
ಸಿಲೆಬೆಲ್	ಅಕ್ಷರಾಘಾತ
ಕೌಸಲ್	ಪ್ರೇರಣಾರ್ಥಕ

ಸಂಸ್ಕೃತ ಪ್ರತ್ಯಯಗಳನ್ನು ಸಂಸ್ಕೃತಪದಗಳಿಗೆ ಮಾತ್ರವಲ್ಲದೆ ಕನ್ನಡ ಪದಗಳಿಗೂ ಸೇರಿಸಿ ಬಳಸುತ್ತಾರೆ.

'ಅಳವಡಿಸಿದ' ಕನ್ನಡ ಪದರೂಪಕ್ಕೆ ಸಂಸ್ಕೃತದ ಇತ ಪ್ರತ್ಯಯ ಸೇರಿಸಿ ಅಳವಡಿತ ಎಂಬ ಹೊಸ ಪದವನ್ನು ರಚಿಸುತ್ತಾರೆ.

ಕನ್ನಡಿಸು ಎಂಬ ಕ್ರಿಯಾಪದಕ್ಕೆ ಸಂಸ್ಕೃತದ ಕೃ ಧಾತುವನ್ನು ಸೇರಿಸಿ ಕನ್ನಡೀಕರಿಸು ಎಂದು ಮಾಡವುದು.

ಹೀಗೆ ಕನ್ನಡ ಭಾಷೆಯ ಪದ ಪದಕಾಂಡಗಳ ಬರಹದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವ ಪ್ರವೃತ್ತಿಯಿಂದಾಗಿ ಕನ್ನಡ ಬರಹ ವ್ಯಾಕರಣದಲ್ಲೂ ಕನ್ನಡಿಗರ ಮಾತಿನಿಂದ ದೂರಸರಿದು ಕೃತಕವಾಗುತ್ತದೆಯೆಂದು ಅಭಿಪ್ರಾಯಪಡುತ್ತಾ ಇಂದು ಜನಪ್ರಿಯ ವಿಜ್ಞಾನ ಬರಹಗಳಲ್ಲಿ ಸಂಸ್ಕೃತದ ಬಳಕೆ ಹೆಚ್ಚಾಗಿ ಕಂಡುಬರುತ್ತಿರುವುದಕ್ಕೆ ಕಾರಣವಾದ ಸಂಗತಿಗಳ ಬಗೆಗೂ ಚರ್ಚಿಸಿದ್ದಾರೆ.

ವಿಜ್ಞಾನವನ್ನು ಜನಪ್ರಿಯಗೊಳಿಸುವ ಮೂಲ ಉದ್ದೇಶವೆಂದರೆ ತಿಳಿಸುವ ವಿಷಯವನ್ನು ಜನರಿಗೆ ಸುಲಭವಾಗಿ ಗೊತ್ತಾಗುವ ಹಾಗಿರಬೇಕು ಮತ್ತು ಇದರಿಂದಾಗಿ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಬೇಕು ಎಂಬುದಾಗಿದೆ. ಈ ಉದ್ದೇಶ ಸಾಧಿತವಾಗಬೇಕಾದರೆ ಬರಹದ ಶೈಲಿ ಸುಲಭವಾಗಿರಬೇಕಾಗುತ್ತದೆ. ಕನ್ನಡ ರಾಜ್ಯ ವಿಜ್ಞಾನ ಪರಿಷತ್ತು ಪ್ರಕಟಿಸಿರುವ 'ಇಂಗ್ಲೀಷ್- ಕನ್ನಡ ವಿಜ್ಞಾನ ಶಬ್ದಕೋಶ'ದಲ್ಲಿ ಮೇಲಿನ ಉದ್ದೇಶಕ್ಕೆ ವಿರುದ್ಧವಾಗಿ ಅತಿಯಾದ ಸಂಸ್ಕೃತ ಪದಗಳನ್ನು, ಪದಕಾರಿಪದಗಳನ್ನು ಮತ್ತು ಪ್ರತ್ಯಯಗಳನ್ನು ಬಳಸುವುದರಿಂದಾಗಿ ಕನ್ನಡದ ಮಟ್ಟಿಗೆ ಹಲವಾರು ಸಮಸ್ಯೆಗಳು ಬಂದೊದಗಿರುವುದನ್ನು ವಿವರಿಸುತ್ತಾರೆ.

ಹೀಗೆ ಅವರು ಬರಹವನ್ನು ಸರಿಪಡಿಸುವ ದಿಕ್ಕಿನಲ್ಲಿ ಕೈಗೊಂಡಿರುವ ಈ ಹೊಸ ಆಲೋಚನಾ ಕ್ರಮಗಳ ಅನುಸರಣೆಗೆ ಅಗತ್ಯವಾದ ಕ್ರಮಗಳ ಬಗ್ಗೆ ಹೀಗೆ ಹೇಳಿದ್ದಾರೆ.

೧. ಬರಹವನ್ನು ಸರಿಪಡಿಸಲು ಸೂಚಿಸಿರುವ ನಿಯಮಗಳನ್ನು ಸರಿಯಾಗಿ ಪಾಲಿಸುವುದು. ಇಲ್ಲದಿದ್ದರೆ ಕನ್ನಡಕ್ಕೆ ಎದುರಾಗುವ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಡುವುದು ಅತ್ಯಂತ ಅಗತ್ಯವಾದ ಕೆಲಸವಾಗಿದೆ.

೨. ಅನಗತ್ಯವಾದ ಸಂಸ್ಕೃತ ವರ್ಣಾಕ್ಷರಗಳನ್ನು ತೆಗೆದು ಹಾಕಿ ಕನ್ನಡದ ಲಿಪಿ ಸುಧಾರಣೆ ಮಾಡುವುದು.

೩. ಅಗತ್ಯವಿರುವಲ್ಲೆಲ್ಲಾ ಬರಹದಲ್ಲಿ ಕನ್ನಡದ್ದೇ ಆದ ಪದಗಳನ್ನು ಬಳಸುವಂತೆ ಸೂಚಿಸುವುದು.

ಈ ಎಲ್ಲ ಬದಲಾವಣೆಗಳಿಗೂ ಬಂಡಾಯ ಬರಹಗಾರರೇ ಮುಂದಾಗಬೇಕು. ಏಕೆಂದರೆ ಇದು ಕನ್ನಡದ ಅಳಿವು-ಉಳಿವಿನ ಪ್ರಶ್ನೆಯಾಗಿದೆಯೆಂದು ಅಭಿಪ್ರಾಯಪಡುತ್ತಾರೆ.[೧೮]

ಈ ಹಿಂದಿನ ಅಧ್ಯಾಯಗಳಲ್ಲಿ ಮತ್ತು ಪ್ರಸ್ತುತ ಅಧ್ಯಾಯದ ಆರಂಭದಲ್ಲಿ ಹೇಳಿದ ಹಾಗೆ ಅಚ್ಚಗನ್ನಡದ ಬಗೆಗೆ ಪಾರಂಪರಿಕವಾಗಿ ಚಿಂತನೆ ನಡೆಯುತ್ತಲೇ ಬಂದಿದೆ. ಕವಿರಾಜಮಾರ್ಗಕಾರರಿಂದ ನಯಸೇನನವರೆಗೆ ಅಚ್ಚಗನ್ನಡಕ್ಕೆ ಸಂಬಂಧಿಸಿದಂತೆ ಸಂಸ್ಕೃತವನ್ನು ಬೆರಸದಿರುವುದು ಎನ್ನುವ ಚಿಂತನೆ ಪ್ರಧಾನವಾಗಿ ಕಂಡುಬರುತ್ತದೆ. ೧೩ ನೇ ಶತಮಾನದ ಆಂಡಯ್ಯ ಕವಿಯ ಕಾಲಕ್ಕನುಗುಣವಾಗಿ ಈ ಚಿಂತನೆಯಲ್ಲಿ ಒಂದು ಪ್ರಮುಖ ಪಲ್ಲಟನೆಯಾಗುತ್ತದೆ. ಆಂಡಯ್ಯನು ಅಚ್ಚಗನ್ನಡವೆಂದರೆ ಮಾತನಾಡಿದ ಹಾಗೆ ಬರವಣಿಗೆಯನ್ನು ರೂಪಿಸುವುದು ಎಂದು ಅತ್ಯಂತ ಕ್ರಾಂತಿಕಾರಿಯಾದ ವಿಚಾರವನ್ನು ಮಂಡಿಸುತ್ತಾನೆ. ಆಧುನಿಕ ಕಾಲದಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಕನ್ನಡ ಭಾಷೆಗೆ ವಿಶಿಷ್ಟವಾದ ಪ್ರಾಕೃತ ರೂಪವನ್ನು ಕೊಡುವುದು ಅಚ್ಚಗನ್ನಡ ಕವಿಗಳಿಗಿದ್ದ ಆದರ್ಶವೆನ್ನುತ್ತಾರೆ. ವಿಶಿಷ್ಟ ಪ್ರಾಕೃತ ರೂಪವನ್ನು ಕೊಡುವುದರ ಉದ್ದೇಶವೇನೆಂಬುದನ್ನು ತಿಮ್ಮಪ್ಪಯ್ಯನವರು ವಿವರಿಸುವುದಿಲ್ಲ. ಈ ದೃಷ್ಟಿಯಿಂದ ಆಂಡಯ್ಯನ ಚಿಂತನೆ ಪ್ರಮುಖವಾಗುತ್ತದೆ. ಆತನು ಮಾತು ಮತ್ತು ಬರವಣಿಗೆ ಒಂದೇ ರೀತಿಯಲ್ಲಿರಬೇಕಾದರೆ ಅಚ್ಚಗನ್ನಡವನ್ನು ಬಳಸಬೇಕೆಂದು ಹೇಳುತ್ತಾನೆ. ಅಂದರೆ ಬೇರೆ ಮಾತಿನಲ್ಲಿ ಹೇಳುವುದಾದರೆ ಕನ್ನಡದ ಬರವಣಿಗೆಯು ಮಾತಾಡುವ ಹಾಗೆ ಇರಬೇಕೆಂದು ಆಂಡಯ್ಯ ಅಭಿಪ್ರಾಯಪಡುತ್ತಾನೆಂದರ್ಥ. ಇದಕ್ಕಾಗಿಯೇ ಆಂಡಯ್ಯನ ಚಿಂತನೆಯು ಕ್ರಾಂತಿಕಾರಕವಾಗಿದೆ ಎಂದು ನಮಗೆ ಅನಿಸುವುದು. ಏಕೆಂದರೆ ಆಂಡಯ್ಯನಿಗೆ ಕೇವಲ ಕಾವ್ಯ ರಚನೆಯ ಉದ್ದೇಶವಷ್ಟೇ ಮುಖ್ಯವಾಗಿದ್ದರೆ ಮಾತನಾಡಿದ ಹಾಗೆ ಕಾವ್ಯದ ಬರವಣಿಗೆಯೂ ಇರಬೇಕು ಎಂದು ಹೇಳಬೇಕಾಗಿರಲಿಲ್ಲ. ಪ್ರಾಚೀನ ಕಾಲದಲ್ಲಿ ಯಾವುದೇ ಬದಲಾವಣೆ, ಚಿಂತನೆ, ಕಾವ್ಯದ ಮೂಲಕವೇ ಹೊರಹೊಮ್ಮುತ್ತಿತ್ತು. ಇದಕ್ಕೆ ವಚನ ಸಾಹಿತ್ಯ ಚಳುವಳಿ ಒಂದು ಉತ್ತಮ ನಿದರ್ಶನ. ಶರಣರು ತಮ್ಮ ಪ್ರಮುಖ ಸಾಮಾಜಿಕ ಚಿಂತನೆಯನ್ನು ಪ್ರಚಾರಪಡಿಸುವುದಕ್ಕೆ ವಚನವೆಂಬ ಕಾವ್ಯ ಮಾಧ್ಯಮವನ್ನೇ ಆಯ್ಕೆ ಮಾಡಿರುವುದು ಈಗ ಐತಿಹಾಸಿಕ ಸತ್ಯ. ವ್ಯಾಕರಣ, ಛಂದಸ್ಸು, ಮೊದಲಾದ ಶಾಸ್ತ್ರ ವಿಷಯಗಳನ್ನು ಕಾವ್ಯ ಮಾಧ್ಯಮದಲ್ಲಿ ಹೇಳಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಪಷ್ಟವಾಗಿಯೇ ಇದೆ.

ಅಚ್ಚಗನ್ನಡ ಪ್ರತಿಪಾದಕರು ಕಾವ್ಯ ಮಾಧ್ಯಮವನ್ನು ಆಯ್ಕೆಮಾಡಿರುವುದನ್ನು ಈ ಹಿನ್ನೆಲೆಯಲ್ಲಿ ಪರಿಗಣಿಸಬೇಕು. ಕೊಳಂಬೆ ಪುಟ್ಟಣ್ಣಗೌಡರು 'ಅಚ್ಚಗನ್ನಡ ನುಡಿಕೋಶ'ವನ್ನು ಬರೆಯುವವರೆಗೆ ಈ ಪ್ರಯತ್ನದಲ್ಲಿ ಮುಂದೆ ಸಾಗಿದ್ದಾರೆ. ಅವರು ಹಸ್ತ ಸಾಮುದ್ರಿಕ ಶಾಸ್ತ್ರ ಮೊದಲಾದ ಪಂಥಗಳನ್ನು ಅಚ್ಚಗನ್ನಡದಲ್ಲಿಯೇ ಬರೆದಿದ್ದಾರೆ. ಹೀಗಿರುವಾಗ ಅಚ್ಚಗನ್ನಡ ಕಾವ್ಯಗಳನ್ನು ಸೀಮಿತವಾಗಿ ನೋಡುವುದು ಒಟ್ಟು ಕನ್ನಡ ಚಿಂತನೆಯನ್ನು ಸೀಮಿತ ಚೌಕಟ್ಟಿನಲ್ಲಿರಿಸಿದಂತಾಗುತ್ತದೆ. ಅದು ಕನ್ನಡದ ಬಗೆಗಿನ ಒಂದು ವಿಶಿಷ್ಟ ಚಿಂತನೆಯಾಗಿದ್ದು ಕವಿಗಳು

ಕಾವ್ಯಮಾಧ್ಯಮವೊಂದರ ಮೂಲಕ (ಏಕೆಂದರೆ ತಮ್ಮ ಚಿಂತನೆಯನ್ನು ಕಾವ್ಯದ ಮೂಲಕ ಹೇಳಿದರೆ ಜನಪ್ರಿಯವಾಗುತ್ತದೆ ಎನ್ನುವ ಕಾರಣಕ್ಕೆ) ಅದನ್ನು ಪ್ರಚಾರಗೊಳಿಸಲು ಪ್ರಯತ್ನಿಸಿದ್ದಾರೆ.

ಅಚ್ಚಗನ್ನಡದ ಬಗೆಗೆ ತುಂಬ ಭಿನ್ನವಾಗಿಯೂ, ಆಳವಾಗಿಯೂ ಚಿಂತಿಸಿರುವ ಮುಳಿಯ ತಿಮ್ಮಪ್ಪಯ್ಯನವರು ಅದು ಕನ್ನಡಕ್ಕೆ ಒಂದು ವಿಶಿಷ್ಟವಾದ ಪ್ರಾಕೃತ ರೂಪವನ್ನು ಕೊಡುವ ಪ್ರಯತ್ನವೆಂದು ಹೇಳಿದ್ದಾರೆ. ಇಂತಹ ಪ್ರಾಕೃತ ರೂಪಗಳಲ್ಲಿ ತತ್ಸಮ, ತದ್ಭವ ಮತ್ತು ದೇಶ್ಯ ಪದಗಳು ಇರುವುದು ಸಹಜವೆಂದೇ ಅಭಿಪ್ರಾಯಪಡುತ್ತಾರೆ. ಅಂದರೆ ತತ್ಸಮ ಮತ್ತು ತದ್ಭವಗಳು ಅಚ್ಚಗನ್ನಡಕ್ಕೆ ಹೊರತಾದವುಗಳಲ್ಲ. ಬದಲಾಗಿ ಸಹಜವಾದವುಗಳೇ ಆಗಿರುತ್ತವೆ ಎಂದಹಾಗಾಗುತ್ತದೆ. ತತ್ಸಮ, ತದ್ಭವ, ದೇಶ್ಯ ಪದಗಳ ಬಗೆಗಿನ ಚರ್ಚೆ ಏನೇ ಇರಲಿ ಅಂತಿಮವಾಗಿ ಅವು ಕನ್ನಡವನ್ನು ಮಾತಾಡಿದ ಹಾಗೆ ಬರಹಕ್ಕಿಳಿಸುವ ಹಠ. ಅಥವಾ ಬಹುಸಂಖ್ಯಾತ ಕನ್ನಡಿಗರು ಮಾತಾಡುವ ಹಾಗೆ ಬರೆಯುವುದು ಆಗಿರುತ್ತದೆ.

ಡಿ. ಎನ್. ಶಂಕರಭಟ್ಟರು 'ಕನ್ನಡ ಬರಹವನ್ನು ಸರಿಪಡಿಸೋಣ' ಎನ್ನುವ ಈಗ ಚರ್ಚಿಸಿರುವ ಪುಸ್ತಕದಲ್ಲಿ ಅಂತಿಮವಾಗಿ ಇದನ್ನೇ ಹೇಳಿರುವುದು. ಅಂದರೆ ಎಂದಿನಿಂದಲೂ ಕನ್ನಡ ಮಾತು ಮತ್ತು ಬರಹದ ನಡುವೆ ಸಂಬಂಧ ತಪ್ಪಿಹೋಗಿದೆ. ಈಗಲಾದರೂ ಅದನ್ನು ಸರಿಪಡಿಸುವ ಅಂದರೆ ಕನ್ನಡಿಗರು ಹೇಗೆ ಮಾತನಾಡುತ್ತಾರೋ ಹಾಗೆ ಬರವಣಿಗೆಯನ್ನು ಸರಿಪಡಿಸುವ ಅವಶ್ಯಕತೆಯಿದೆ. ಎಂದೇ ಹೇಳುತ್ತಾರೆ. ಅಚ್ಚಗನ್ನಡದ ಕವಿಗಳು ಮತ್ತೆ ಮತ್ತೆ ಸಂಸ್ಕೃತದ ಪ್ರಭಾವವು ಕನ್ನಡ ಭಾಷೆಯ ಮೇಲೆ ಆಗಿರುವುದರ ವಿರುದ್ಧ ಧ್ವನಿ ಎತ್ತುತ್ತಲೇ ಬಂದಿದ್ದಾರೆ. ಕನ್ನಡಕ್ಕೆ ಅದರದೇ ಆದ ಪದಸಂಪತ್ತು ರೂಪಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲೆಲ್ಲ ಅವರು ಅಂತಿಮವಾಗಿ ಆಯ್ಕೆಮಾಡಿಕೊಂಡದ್ದು ತತ್ಸಮ, ತದ್ಭವಗಳನ್ನು ಅಥವಾ ಕೊಳಂಬೆಯವರಂತೆ ಅಚ್ಚಗನ್ನಡ ಪದಗಳನ್ನೇ ಕೆಲವೊಮ್ಮೆ ಇವು ಬಳಕೆ ತಪ್ಪಿದ ಪದಗಳನ್ನು ಮತ್ತೆ ಮರುಬಳಕೆ ಮಾಡುವ ಅಥವಾ ಹೊಸ ಪದಗಳನ್ನು ಸೃಷ್ಟಿಸುವ ಪ್ರಯತ್ನಗಳಾಗಿಯೂ ಕಂಡುಬರುತ್ತವೆ. ಅಂದರೆ ಅಂತಿಮವಾಗಿ ಅಚ್ಚಗನ್ನಡದ ಕವಿಗಳು ಮಾತಾಡಿದ ಹಾಗೆಯೇ ಕಾವ್ಯ (ಬರವಣಿಗೆ) ಇರಬೇಕೆಂದು ಪ್ರತಿಪಾದಿಸುತ್ತಾರೆ ಎಂದ ಹಾಗಾಯಿತು. ಅಂದರೆ ಅಂತಿಮವಾಗಿ ಇವರು ಮಾತು ಮತ್ತು ಬರವಣಿಗೆ ನಡುವೆ ನೇರ ಸಂಬಂಧ ಇರಬೇಕೆಂಬ ತತ್ವವನ್ನೇ ಪ್ರತಿಪಾದಿಸುತ್ತಾರೆ. ಇದನ್ನೆ ಮುಂದುವರೆಸಿ ಹೇಳುವುದಾದರೆ ಅಚ್ಚಗನ್ನಡದ ಕವಿಗಳು ಅಂತಿಮವಾಗಿ ಕನ್ನಡ ಬರಹವನ್ನು ಸರಿಪಡಿಸುವ ಪ್ರಯತ್ನವನ್ನೇ ಆರಂಭದಿಂದಲೂ ಮಾಡಿರುವುದು. ಇದಕ್ಕೆ ಕಾವ್ಯವು ಅವರಿಗೆ ಕೇವಲ ಪ್ರಯೋಗ ಶಾಲೆಯಷ್ಟೇ ಆಗಿದೆ.

ಈ ಪ್ರಬಂಧದ ಆರಂಭದಲ್ಲಿ ಅಚ್ಚಗನ್ನಡ ಪರಿಕಲ್ಪನೆಯು ಕನ್ನಡ ಬರಹವನ್ನು ಸರಿಪಡಿಸುವ ಪ್ರಯತ್ನವೆಂದು ಪೂರ್ವ ಕಲ್ಪನೆಯನ್ನು ಮಾಡಲಾಗಿತ್ತು. (ಆಂಡಯ್ಯನಿಂದ ಇಂದಿನ ಆಧುನಿಕ ಚಿಂತಕರಾದ ಡಿ.ಎನ್. ಶಂಕರಭಟ್ಟರು ಚಿಂತನೆ ಆಲೋಚನಾ ವಿಧಾನಗಳಲ್ಲಿ ಮತ್ತು ಅವರ ಬರಹದಲ್ಲಿ ಆ ಪ್ರಯತ್ನವು ಸಾಕಾರಗೊಂಡಿರುವುದನ್ನು ಕಾಣಬಹುದಾಗಿದೆ.)

ಅಚ್ಚಗನ್ನಡದ ಮೂರು ಪ್ರಮುಖ ಕಾವ್ಯಗಳಲ್ಲಿ ಮತ್ತು ಕವಿಗಳ ಚಿಂತನೆಯನ್ನು ಗಮನಿಸಿದರೆ ಮುಖ್ಯವಾಗಿ ಕಂಡುಬರುವ ಅಭಿಪ್ರಾಯಗಳು ಎರಡು.

೧. ಕನ್ನಡದ್ದೇ ಆದ ಪದಗಳನ್ನು ಬಳಕೆ ಮಾಡುವುದು. ಮತ್ತು ಮಾತನಾಡಿದ ಹಾಗೆ ಬರವಣಿಗೆಯನ್ನು ಮಾಡುವುದು. ಇದು ಆಂಡಯ್ಯನಿಂದ ಆರಂಭಿಸಿ ಕೊಳಂಬೆ ಪುಟ್ಟಣ್ಣಗೌಡರವರೆಗಿನ ಒಮ್ಮತವಾದ ಅಭಿಪ್ರಾಯ. ಡಿ. ಎನ್. ಶಂಕರಭಟ್ಟರು ತಮ್ಮ ಎಲ್ಲಾ ಕೃತಿಗಳಲ್ಲಿ ಹೇಳುತ್ತಾ ಬಂದಿರುವುದು ಇದನ್ನೇ ಅಂದರೆ ಕನ್ನಡ ಕವಿಗಳು ಪರೋಕ್ಷವಾಗಿ ಕಾವ್ಯದಲ್ಲಿ ಹೇಳಿರುವುದನ್ನು ಡಾ. ಭಟ್ಟರು ವ್ಯಾಕರಣದ ಮೂಲಕ ತರ್ಕಬದ್ಧವಾದ ಅಧ್ಯಯನದ ಮೂಲಕ ಪ್ರತಿಪಾದಿಸಿದ್ದಾರೆ. ಅಚ್ಚಗನ್ನಡದ ಕವಿಗಳು ತಮ್ಮದೇ ಆದ ವಿಶಿಷ್ಟ ಅಭಿವ್ಯಕ್ತಿಯ (ಕಾವ್ಯ) ಮೂಲಕ ಇದನ್ನು ಎಂದಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಡಾ. ಭಟ್ಟರು ಸೈದ್ಧಾಂತಿಕವಾಗಿ ಹೇಳಿರುವುದನ್ನು ಅಚ್ಚಗನ್ನಡ ಕವಿಗಳು ಪ್ರಯೋಗದಲ್ಲಿ ಹಿಂದಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಅದನ್ನು ಒಂದು ತರ್ಕಬದ್ಧವಾದ ಅಧ್ಯಯನವಾಗಿ ನಿರೂಪಿಸಲಾಗಿಲ್ಲವಷ್ಟೇ. ಡಾ. ಭಟ್ಟರು ಆ ಎಲ್ಲಾ ಪ್ರಯತ್ನಗಳಿಗೆ ತರ್ಕಬದ್ಧವಾದ ನಿಲುವನ್ನು ಈಗ ಮಾಡಿದ್ದಾರೆ.

ಅಚ್ಚಗನ್ನಡ ಕವಿಗಳ ಒಟ್ಟಾರೆ ಪ್ರಯತ್ನ ಡಾ. ಡಿ. ಎನ್. ಶಂಕರಭಟ್ಟರು ಹೇಳಿದ ಹಾಗೆ ಕನ್ನಡ ಬರಹವನ್ನು ಸರಿಪಡಿಸುವ ಬಗೆಯಾಗಿದೆ. ಎಂದು ಇದರಿಂದ ಸ್ಪಷ್ಟವಾದಂತಾಯಿತು. ಅಂದರೆ ಪ್ರಬಂಧದ ಆರಂಭದಲ್ಲಿದ್ದ ಪೂರ್ವಕಲ್ಪನೆ ಈಗ ಖಚಿತವಾದ ಅಧ್ಯಯನದ ಮೂಲಕ ಸಿದ್ಧಾಂತವಾಗಿ ರೂಪಗೊಂಡಂತಾಯಿತು.

ಇದೀಗ ಡಿ.ಎನ್.ಶಂಕರಭಟ್ಟರು ಭಾಷೆ, ಮಾತು ಮತ್ತು ಬರಹಗಳಿಗೆ ಸಂಬಂಧಿಸಿದಂತೆ ಪ್ರತಿಪಾದಿಸಿರುವ ಅಂಶಗಳನ್ನು ಅಚ್ಚಗನ್ನಡ ಪರಿಕಲ್ಪನೆಯ ಹಿನ್ನಲೆಯಲ್ಲಿ ಚರ್ಚಿಸುವ ಅಗತ್ಯವಿದೆ. ಈ ಮುಂದಿನ ವಿವರಣೆಗಳು ಅದಕ್ಕೆ ಸಂಬಂಧಿಸಿದೆ.

ಕನ್ನಡ ಭಾಷೆಗೆ ಅದರದೇ ಆದ ಸೊಗಡಿದೆ. ಅದನ್ನು ಕನ್ನಡದ ಗುಣಲಕ್ಷಣವೆಂದು ಬರವಣಿಗೆಯಲ್ಲಿ ಉಳಿಸಿಕೊಳ್ಳಬೇಕಾಗಿದೆ. ಇಲ್ಲವಾದರೆ ಅವು ಸಾಮಾನ್ಯ ಕನ್ನಡಿಗರಿಂದ ದೂರವಾಗುತ್ತವೆ. ಅಂತಹ ಮೊದಲ ಲಕ್ಷಣಗಳು ಹೀಗಿವೆ.

೧. ಸಂಸ್ಕೃತದ ಮಹಾಪ್ರಾಣಗಳು ಕನ್ನಡದಲ್ಲಿ ಅಲ್ಪಪ್ರಾಣಗಳಾಗಿ ಉಚ್ಚರಿಸುವುದರಿಂದ ಬರವಣಿಗೆಯಲ್ಲೂ ಅದನ್ನು ಅಳವಡಿಸಿಕೊಳ್ಳಬೇಕು. ಅಚ್ಚಗನ್ನಡ ಕವಿಗಳು ಬರವಣಿಗೆಯಲ್ಲಿ ಮಹಾಪ್ರಾಣಾಕ್ಷರಗಳನ್ನು ಬಳಸಿದಿರುವ ಯಾವತ್ತೂ ನಿಯಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಕಾಲೂರ ಚೆಲುವೆಯಲ್ಲಿ ಯಾವುದೇ ಮಹಾಪ್ರಾಣಗಳು ಬಳಕೆಯಾಗಿಲ್ಲ.

ಕಬ್ಬಿಗರ ಕಾವ	ಸೊಬಗಿನ ಬಳ್ಳಿ
ಬೊಜಂಗ	ಜಳ
ಗೂಡಾರ	ಮೊಗ
ನಿಬ್ಬರ	ಪತ
ಬಾಸಣ	ದರೆ

ಪಳಕು	ಮಂತಣ
ಚಲ	ದನಿ
ಕುಂಬತಳ	ದರೆ
ಬಿತ್ತಿ	ಚಲ

೨. ಸಂಸ್ಕೃತದ 'ಋ' ಕಾರ 'ಷ' ಕಾರಗಳು ಕನ್ನಡದ ಬಳಕೆಯಲ್ಲಿಲ್ಲ. ಹಾಗಾದುದರಿಂದ ಇವುಗಳ ಉಚ್ಚಾರಣೆಯಲ್ಲಿ ಕನ್ನಡದ 'ರು' ಕಾರ ಮತ್ತು 'ಸ'ಕಾರಗಳು ಕಂಡುಬರುವಂತೆ ಬರವಣಿಗೆಯಲ್ಲಿ ಇದು ಕಂಡುಬರುವಂತಾಗಬೇಕು. ಅಚ್ಚಗನ್ನಡ ಕವಿಗಳು ಬರವಣಿಗೆಯಲ್ಲಿ ಇದನ್ನು ಒಂದು ನಿಯಮವೆಂಬಂತೆ ಪಾಲಿಸಿದ್ದಾರೆ. ಮಾತ್ರವಲ್ಲ ಋ ಕಾರದ ಬಳಕೆಯನ್ನು ಕೈ ಬಿಟ್ಟಿದ್ದಾರೆ.

ಉದಾ. ಋಷಿ ರಿಸಿ ಆಗುವುದು.

ಶ,ಷ ಗಳು ಸ ಕಾರವಾಗುವುದು.

ಕಬ್ಬಿಗರ ಕಾವ	ಸೊಬಗಿನ ಬಳ್ಳಿ
ಗೋಸ	ಸಂಬರ
ಶೀಸಕ	ಪಾಸ
ಮಾನಸಿ	ದಸ
ಸೇಸೆ	ಸಿಸು
ದೋಸ	ಸೊನ್ನೆ
ಸಂತಸ	ಕೇಸ
ಅಸುಗೆ	ಸಂಕೆ

೩. ಈಗ ಕನ್ನಡ ಬರವಣಿಗೆಯಲ್ಲಿ ಙ,ಞ,ಣ,ನ,ಮ ಗಳೆಂಬ ಐದು ಅನುನಾಸಿಕಗಳಿವೆ. ಇವುಗಳಲ್ಲಿ ಙ ಕಾರ ಮತ್ತು ಞ ಕಾರಗಳ ಬಳಕೆ ಬಹಳ ಅಪರೂಪ. ಇದರ ಬದಲು ಗ ಕಾರವನ್ನು ನ ಕಾರವನ್ನು ಬರವಣಿಗೆಯಲ್ಲಿ ಬಳಸಬಹುದಾಗಿದೆ.

ಅಚ್ಚಗನ್ನಡ ಕವಿಗಳು ಹಿಂದಿನಿಂದಲೇ ತಮ್ಮ ಕಾವ್ಯಗಳಲ್ಲಿ ಈ ಅಂಶವನ್ನು ಒಂದು ನಿಯಮವೆಂಬಂತೆ ಪಾಲಿಸಿಕೊಂಡು ಬಂದಿದ್ದಾರೆ.

ಕಬ್ಬಿಗರ ಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ವಿಜ್ಞಾನ - ಬಿನ್ನಣ	ಸಂಜ್ಞೆ - ಸನ್ನೆ	ಬಿನ್ನಾಣ
ವಿಜ್ಞಾಪನ - ಬಿನ್ನಹ		ಅನ್ನೆಯ

೪. ಕನ್ನಡಿಗರ ಉಚ್ಚಾರಣೆಯಲ್ಲಿ ಪದಗಳ ಮೊದಲಿಗೆ ಒತ್ತಕ್ಷರಗಳು ಬರವುದಿಲ್ಲ. ಇದನ್ನು ಕನ್ನಡದ ಬರವಣಿಗೆಯಲ್ಲೂ ಅಳವಡಿಸಿಕೊಳ್ಳಬೇಕು. ಕಾಲೂರ ಚೆಲುವೆಯಲ್ಲಿ ಒತ್ತಕ್ಷರ ಶಬ್ದಗಳ ಬದಲಾಗಿ ಪರ್ಯಾಯ ಪದಗಳನ್ನು ಮತ್ತು ದೇಸೀ ಪದಗಳನ್ನು ಬಳಸಿದ್ದಾರೆ.

ಅಚ್ಚಗನ್ನಡ ಕವಿಗಳ ಪ್ರಧಾನ ಲಕ್ಷಣವು ಇದಾಗಿದೆ. ಇದನ್ನು ಅವರು ಕಡ್ಡಾಯವಾಗಿ ಪಾಲಿಸಿಕೊಂಡು ಬಂದಿದ್ದಾರೆ.

ಕಬ್ಬಿಗರ ಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಭಕುತಿ	ಉಕ್ಕು	ಕಟ್ಟಾಳ
ತಿರಿಸುಳಿ	ರಕುತ	ಎರಡು ಬೆಳಕು
ಕಡುಗ	ಸಿರಿ	ಆಳಲಿ
ಸಬುದ	ಉಜ್ಜುಗ	ಏಳಲಿ
ಅರುಹ	ಸಿರಿಕಂಡ	
ಕುಂಬತಳ	ಸಿರಿ	

ಕನ್ನಡಿಗರ ಉಚ್ಚಾರಣೆಯಲ್ಲಿ ವಿಸರ್ಗಗಳ ಪ್ರಯೋಗವಿಲ್ಲ. ಹಾಗಾಗಿ ಬರವಣಿಗೆಯಲ್ಲಿ ಇದನ್ನು ಪಾಲಿಸಬೇಕಾಗಿದೆ.

ಅಚ್ಚಗನ್ನಡ ಕವಿಗಳು ಬಹು ಹಿಂದೆಯೇ ಈ ನಿಯಮವನ್ನು ಪಾಲಿಸಿರುವುದನ್ನು ಕಾಣಬಹುದು.

ಉದಾ. ಅಂತಪ್ಪುರ

೭. ಯೋಗ್ಯ ಪದಗಳ ಕೊರತೆ ಕಂಡುಬಂದಾಗ ಎರವಲು ಪಡೆದ ಪದಗಳನ್ನು ಕನ್ನಡ ಭಾಷೆಯ ಜಾಯಮಾನಕ್ಕನುಗುಣವಾಗಿ ಬದಲಾಯಿಸಿ ಬರವಣಿಗೆಯಲ್ಲಿ ಜಾರಿಗೊಳಿಸಬಹುದು.

ಅಚ್ಚಗನ್ನಡ ಕವಿಗಳು ಅತ್ಯಂತ ಸ್ಪಷ್ಟವಾಗಿ ಈ ನಿಯಮವನ್ನು ಪಾಲಿಸಿಕೊಂಡುಬಂದಿದ್ದಾರೆ. ತದ್ಭವ, ಅಪಭ್ರಂಶ, ಸಮಸಂಸ್ಕೃತವೆಂಬ ವಿವಿಧ ರೂಪಗಳಲ್ಲಿ ಈ ಪದಗಳು ಕನ್ನಡ ಜಾಯಮಾನಕ್ಕನುಗುಣವಾಗಿ ಬಳಕೆಗೊಂಡಿದೆ. ಕಾಲೂರ ಚೆಲುವೆಯಲ್ಲಿ ದೇಸೀ ನುಡಿಗಳೇ ಅಧಿಕವಾಗಿವೆ.

ಕಬ್ಬಿಗರ ಕಾವ	ಸೊಬಗಿನ ಬಳ್ಳಿ	ಕಾಲೂರ ಚೆಲುವೆ
ಮಲ್ಲಿಗೆ	ಸಂಕೆ	ಇನಿವೊಳ್ತು
ಸತ್ತಿಗೆ	ತಾರಗೆ	ಇರ್ಕೆ
ಮಂತಣೆ	ಗೋಸಣೆ	ಎರಡ್ಯೆದು
ಮುಚ್ಚೆ	ಕೊಂಚೆ	ರಕ್ಕಸ

೮. ಒಂದು ವೇಳೆ ಈ ಮೇಲಿನ ನಿಯಮ ಸಾಧ್ಯವಾಗದ ಹೋದಾಗ ಹೊಸ ಪದಗಳನ್ನು ಸೃಷ್ಟಿಸಿ ಬರವಣಿಗೆಯನ್ನು ಅಭಿವೃದ್ಧಿಪಡಿಸಬಹುದು.

ಅಚ್ಚಗನ್ನಡ ಕವಿಗಳ ಕಾವ್ಯಗಳ ಬಹುಮುಖ್ಯ ಲಕ್ಷಣಗಳಲ್ಲಿ ಇದೂ ಒಂದಾಗಿದೆ. ಇಂತಹ ಅನೇಕ ಪದಗಳು ಈ ಕಾವ್ಯಗಳಲ್ಲಿ ಎದ್ದು ಕಾಣುತ್ತವೆ.

ಕಬ್ಬಿಗರ ಕಾವ	**ಸೊಬಗಿನ ಬಳ್ಳಿ**	**ಕಾಲೂರ ಚೆಲುವೆ**
ಕಡಲೊಳ್ ಪಟ್ಟಂ	ಸಿರಿವೆಣ್ಣರಸ	ನುಡಿವೆಣ್ಣು
ಮೈಯ್ಗಣ್ಣ	ಇಚ್ಚೆಗಾರ್ತಿ	ಬೆಟ್ಟಳಿಯ
ಪಲವಂ ನಾಲಗೆಯುಳ್ಳವ	ನನೆಯೆಂಬ	ತಂಬೆಲರ್
ಕೆಂಗಣ್ಣಕ್ಕಿ	ಕರ್ವುವಿಲ್ಲ	ಮೇಲ್ನೆಲ
ನಂಜುಗೊರಲ	ಉರಿಗಣ್ಣ	ಕಡಲಳಿಯ
ಲೆಕ್ಕಿಗ	ಬಾಂಬೊಟಿಲ್	ಮುಂಬಗಲ್
ನೆತ್ತಿಗಣ್ಣ	ಪಲಗಣ್ಣ	ಬಯಕೆದುರು
ಅರಲಿಚರ	ಅಲರ್ವಕ್ಕಿ	ಮಬ್ಬಿಗ
ಅಚ್ಚಾಳ್ಗಳು	ಅನ್ನಿಗರ್	ಕೋಲ್ಕಾರರು

೯. ಕನ್ನಡಿಗರು ಎರಡಕ್ಕಿಂತ ಜಾಸ್ತಿ ಪದಗಳನ್ನು ಕೂಡಿಸಿ ಉಚ್ಚರಿಸುವುದಿಲ್ಲ. ಬರವಣಿಗೆಯಲ್ಲಿ ಇದನ್ನು ಜಾರಿಗೆ ತರಬೇಕು.

ಅಚ್ಚಗನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಇದನ್ನು ಒಂದು ಕಡ್ಡಾಯ ನಿಯಮವಾಗಿ ಪಾಲಿಸಿಕೊಂಡು ಬಂದಿದ್ದಾರೆ.

೧.

ಗುರುವರ ಗೊಟ್ಟಿಗಾಱರ ನೆಗಟ್ತೆಯ ಮಿಂಡರ ಮೇಳಗಾಱರ
ಕ್ಕರಿಗರ ಸಂದ ಕಬ್ಬಿಗರ ಜೋಡೆಯ ಬಂಡರ ಸಾರ್ದ ನೆತ್ತಗಾ
ಱರ ಚದುರಂಗಕಾಱರ ರೊರೆಗಾಱರ ಬಾಜಿಪ ಬೀಣೆಗಾಱರಾ
ಗರಮೆನೆ ಪೆಂಪು ಸೊಂಪನೊಳಕೊಂಡೆಸೆದಿರ್ಪುವು ಸೂಳೆಗೇಱಿಗಳ್ (ಕ.ಕಾವ, ಪದ್ಯ ೩೬)

೨.

ಬಗೆಯೊಪ್ಪುವಂತೆ ಬಣ್ಣನೆಯುಡುಗರೆಗಳು
ಸಿಗದಾಗೆ ಕಂಡಬಟ್ಟೆಯ ಮೆಚ್ಚುಗೊಡಲು
ಮಿಗುವಕಿಡುವಗೆಯೆ ನಿನ್ನಂ ಕರೆದರಾರು
ತಗದು ನುಸುಳುತ್ತೆಡೆವಡೆಯೆ ಸಾರು ಸಾರು (ಸೊ.ಬಳ್ಳಿ.ಮು.೧, ಪದ್ಯ ೩)

೩.

ಸವುಸವದ ವುಸುರೊಮ್ಮೆ
ಬೇವಸದ ಬಗೆಯೊಮ್ಮೆ
ಸವಿಹಸಿವೆ ಕಂಬನಿಯು
ತುಂಬುನಗೆಯೊಮ್ಮೆ
ಸುವ್ವಿ ಬಾಳ್ಕೆರೆ ತುಂಬ
ಲುಂದಳ್ಳಿಸುವುದೊಮ್ಮೆ
ಕುವಿದ ಬಗೆಯುಳಲುರಿಗೆ
ಮಳೆ ಸುರಿವುದೊಮ್ಮೆ (ಕಾ.ಚೆಲುವೆ, ಪದ್ಯ ೨೬)

❒

ಅಧ್ಯಾಯ -೧೦

ಸಮಾರೋಪ

ಇದೀಗ ಇಲ್ಲಿಯವರೆಗೆ ಬೇರೆ ಬೇರೆ ಅಧ್ಯಾಯಗಳಲ್ಲಿ ದೀರ್ಘವಾಗಿ ಅಚ್ಚಗನ್ನಡ ಪರಿಕಲ್ಪನೆ ಮತ್ತು ಅಚ್ಚಗನ್ನಡ ಕಾವ್ಯಗಳ ಬಗ್ಗೆ ಚರ್ಚಿಸುತ್ತಾ ಬರಲಾಗಿದೆ. ಅಚ್ಚಗನ್ನಡ ಕಾವ್ಯಗಳ ಕುರಿತಾಗಿ ಮಾತ್ರವಲ್ಲದೆ ಕನ್ನಡ ಭಾಷೆ ಮತ್ತು ಕನ್ನಡ ಕಾವ್ಯಗಳ ಕುರಿತಾಗಿಯೂ ಸಾಂದರ್ಭಿಕವಾಗಿ ಅನೇಕ ವಿಷಯಗಳನ್ನು ಚರ್ಚಿಸಲಾಗಿದೆ. ಈ ಎಲ್ಲ ಚರ್ಚೆಗಳನ್ನು ಪ್ರಸ್ತುತ ನಿಬಂಧದ ವಿಷಯಕ್ಕೆ ಪೂರಕವಾಗಿ ಮಾತ್ರ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇದೀಗ ಈ ನಿಬಂಧದ ಪ್ರಮುಖ ಪ್ರತಿಪಾದನೆಗಳನ್ನು ಹೀಗೆ ಸಂಗ್ರಹಿಸಬಹುದು.

೧. ಅಚ್ಚಗನ್ನಡ ಪರಿಕಲ್ಪನೆಯು ಮುಳಿಯ ತಿಮ್ಮಪ್ಪಯ್ಯ ಅವರು ಸರಿಯಾಗಿ ಗುರುತಿಸುವ ಹಾಗೆ ಸಂಸ್ಕೃತವನ್ನು ಮಡಿವಂತಿಕೆಯ ದೃಷ್ಟಿಯಿಂದ ಗುರುತಿಸುವ, ನೋಡುವ ಕ್ರಮವಲ್ಲ. ಕನ್ನಡ ಜಾಯಮಾನಕ್ಕನುಗುಣವಾಗಿ ಸಂಸ್ಕೃತವನ್ನು ಪಳಗಿಸಿಕೊಳ್ಳುವ ಮಾದರಿಯಾಗಿದೆ. ಹಾಗಾದುದರಿಂದ ಇಲ್ಲಿ ತದ್ಭವ ತತ್ಸಮಗಳ ಬಳಕೆಗೂ ಅವಕಾಶವಿದೆ.

೨. ಕನ್ನಡದಲ್ಲಿರುವ ಅಚ್ಚಗನ್ನಡ ಪರಿಕಲ್ಪನೆಯ ಹಾಗೆಯೇ ದಕ್ಷಿಣ ಭಾರತದ ಪ್ರಮುಖ ಭಾಷೆಗಳಲ್ಲೂ ಸಮಾನಾಂತರವಾದ, ತತ್ಸಂಬಂಧಿಯಾದ ಪರಿಕಲ್ಪನೆಗಳು ಇವೆ. ತೆಲುಗಿನಲ್ಲಿ ಅಚ್ಚತೆಲುಗಿನ ಪರಿಕಲ್ಪನೆಯು ಮುಳಿಯರ ವಿವರಣೆಯ ಹಾಗೆಯೇ ಇದೆ.

೩. ಆಂಡಯ್ಯನ ಮೇಲೆ ತಮಿಳು ಕಾವ್ಯ ಪರಂಪರೆಯ ಪ್ರಭಾವವೂ, ತೆಲುಗಿನ ಪೊನ್ನಗಂಟಿ ತೆನುಗನಾರ್ಯನ ಮೇಲೆ ಆಂಡಯ್ಯನ ಪ್ರಭಾವ ಆಗಿರುವ ಸಾಧ್ಯತೆಯಿದೆ. ಹಾಗಾದ್ದರಿಂದ ಅಚ್ಚಗನ್ನಡ ಪರಿಕಲ್ಪನೆ ಎನ್ನುವುದು ಒಂದು ಕಾಲದ ದಕ್ಷಿಣ ಭಾರತದ ಕವಿಗಳ ಒಂದು ಪ್ರಭಾವಿ ಅಸ್ಮಿತೆಯಾಗಿದೆ.

೪. ಕನ್ನಡ ಸಾಹಿತ್ಯದಲ್ಲಿರುವ ಅಚ್ಚಗನ್ನಡ ಕಾವ್ಯ ಪರಂಪರೆಗೆ ದೀರ್ಘವಾದ ಇತಿಹಾಸವಿದೆ. ಕನ್ನಡದ ಪ್ರಾಚೀನ ಮಾರ್ಗಕವಿಗಳು ಒಂದಿಲ್ಲೊಂದು ರೀತಿಯಲ್ಲಿ ಅಚ್ಚಗನ್ನಡ ಮಾರ್ಗ ಪ್ರತಿಪಾದಕರೇ ಆಗಿದ್ದಾರೆ.

೫. ಆಂಡಯ್ಯನು ಕನ್ನಡದ ಪ್ರಮುಖ ಕವಿ ಮಾತ್ರವಲ್ಲದೆ ಆತನ ಕಾವ್ಯವು ಐತಿಹಾಸಿಕ ಮಹತ್ವವುಳ್ಳದ್ದು. ಈ ಪರಂಪರೆಯ ಉತ್ತರಾಧಿಕಾರಿಗಳಾದ ಮುಳಿಯ ಮತ್ತು ಕೊಳಂಬೆಯವರು ಕನ್ನಡದ ಬಹುಮುಖ್ಯವಾದ ಸಮಸ್ಯೆಯ ಕುರಿತು ಸಮರ್ಪಕವಾಗಿ ವಿವೇಚಿಸಿದ್ದಾರೆ. ಅಚ್ಚಗನ್ನಡ ಕವಿಗಳ ಈ ದೂರಗಾಮಿ ಚಿಂತನೆಗೆ ಆಧುನಿಕ ಕನ್ನಡದ ಸಂದರ್ಭದಲ್ಲೂ ಮನ್ನಣೆ ನೀಡಬೇಕಾಗುತ್ತದೆ.

೬. ಒಟ್ಟಿನಲ್ಲಿ ಅಚ್ಚಗನ್ನಡ ಕವಿಗಳು ಅಚ್ಚಗನ್ನಡ ಕಾವ್ಯವನ್ನು ಬರೆಯುವುದಕ್ಕೆ ಶಪಥ ಮಾಡಿರುವುದು ಕೇವಲ ಕನ್ನಡ ಕಾವ್ಯಕ್ಕೆ ಹೊಸತನವನ್ನು ನೀಡುವ ದೃಷ್ಟಿಕೋನಕ್ಕೆ ಮಾತ್ರ ಸೀಮಿತವಾದುದಲ್ಲ. ಅದು ಕನ್ನಡದ ಬರವಣಿಗೆಯನ್ನು ಸರಿಪಡಿಸುವ ಕ್ರಮವೂ ಹೌದು. ಏಕೆಂದರೆ ಕನ್ನಡದಲ್ಲಿ ಈವರೆಗೆ ಮಾತು ಮತ್ತು ಬರವಣಿಗೆಯ ನಡುವೆ ತುಂಬಾ ಅಂತರವಿದೆ. ಕನ್ನಡದ ಪ್ರಮುಖ ಭಾಷಾಶಾಸ್ತ್ರಜ್ಞರಾದ ಡಿ.ಎನ್. ಶಂಕರಭಟ್ಟರ ಪ್ರತಿಪಾದನೆ ಇದುವೇ ಆಗಿದೆ. ಇದು ಹೌದಾದರೆ ಭಾಷಾಶಾಸ್ತ್ರಜ್ಞರು ಇಂದು ಚರ್ಚಿಸುವ ಈ ಕ್ರಾಂತಿಕಾರಕ ವಿಷಯವನ್ನು ಅಚ್ಚಗನ್ನಡ ಕವಿಗಳು ಬಹು ಹಿಂದೆಯೇ ನಡೆಸಿದ್ದಾರೆ ಮಾತ್ರವಲ್ಲದೆ ಪ್ರಾಯೋಗಿಕವಾಗಿಯೂ ಯಶಸ್ವಿಯಾಗಿದ್ದಾರೆ.

೭. ಆದುದರಿಂದ ಅಚ್ಚಗನ್ನಡ ಪರಿಕಲ್ಪನೆಯು ಕನ್ನಡ ಬರವಣಿಗೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಅಚ್ಚಗನ್ನಡ ಕವಿಗಳ ಕೊಡುಗೆಯೇ ಆಗಿದೆ.

❐

ಅನುಬಂಧ - ೧

ಟಿಪ್ಪಣಿಗಳು

ಅಧ್ಯಾಯ -೧

೦೧. ನರಸಿಂಹಾಚಾರ್. ಡಿ.ಎನ್ (ಸಂ), ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಸಂಧಿ ಪ್ರಕರಣ, ಪದ್ಯ-೮೨, ಪುಟ-೬೩.

೦೨. ಪುಟ್ಟಪ್ಪ. ಕೆ.ವಿ (ಸಂ), ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪ್ರ.ಆ.ಪದ್ಯ-೮, ಪುಟ-೨.

೦೩. ಕೋತಿನ. ಎಸ್.ಎಸ್. ಆಂಡಯ್ಯ, ಪುಟ-೩೦೯.

೦೪. ಅದೇ, ಪುಟ- ೩೫೯.

೦೫. ಮುಳಿಯ ತಿಮ್ಮಪ್ಪಯ್ಯ, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪುಟ-೧೪೬.

ಅಧ್ಯಾಯ -೨

೦೧. ಇದು ಆಂಡಯ್ಯನ ಕುರಿತು ೧೯೬೮ರಲ್ಲಿ ಪ್ರಕಟವಾದ ಪೂರ್ಣಪ್ರಮಾಣದ ಅಧ್ಯಯನ ಗ್ರಂಥ. ಅಚ್ಚಗನ್ನಡದ ಬಗೆಗೆ ಪ್ರಾಸಂಗಿಕವಾಗಿಯೂ ಇಲ್ಲಿ ಚರ್ಚಿಸಲಾಗಿದೆ

೦೨. ಕೋತಿನ ಎಸ್.ಎಸ್, ಆಂಡಯ್ಯ ಪು. ೧೩೨.

೦೩. ಅದೇ, ಪು.೩೦೯.

೦೪. ಅದೇ, ಪು.೩೧೮ - ೩೩೫

೦೫. ರಾಮೇಗೌಡ, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳ, ಪು.೮೩ - ೧೯೩

೦೬. ಅದೇ, ಪು.೧೭೨

೦೭. ಅದೇ, ಪು.೧೭೪

೦೮. ಅದೇ, ಪು.೧೭೫

೦೯. ಅದೇ, ಪು.೧೭೫ - ೧೭೬

೧೦. ಅದೇ, ಪು.೧೭೭ - ೧೭೯

೧೧. ಅದೇ, ಪು.೧೮೧ - ೧೮೨

೧೨. ಅದೇ, ಪು.೧೮೮

೧೩. ಸುಬ್ರಹ್ಮಣ್ಯಭಟ್, ಮುಳಿಯ ತಿಮ್ಮಪ್ಪಯ್ಯ ಒಂದು ಅಧ್ಯಯನ - ೧೨೧

೧೪. ಅದೇ, ಪು.೧೨೦

೧೫. ಅದೇ, ಪು.೧೧೫

೧೬. ಅದೇ, ಪು.೧೧೬ - ೧೧೭

೧೭. ಶ್ರೀನಿವಾಸಮೂರ್ತಿ, ಕಾ.ವ್ಯಂ., ಕನ್ನಡ ಪರ ಚಿಂತನೆ ಮತ್ತು ಪರಂಪರೆ, ಪು.೬೨ - ೭೧

೧೮. ಅದೇ, ಪು.೭೨ - ೭೪

೧೯. ಅದೇ, ಪು.೭೬ - ೭೭

೨೦. ಮಾದವ ಪೆರಾಜೆ, ಪಂಡಿತ ಪರಂಪರೆಯ ಕೊಳಂಬೆ ಪುಟ್ಟಣ್ಣಗೌಡ, ಪು.೨೫

೨೧. ಮುಳಿಯ ತಿಮ್ಮಪ್ಪಯ, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು.೬೭ - ೭೦

೨೨. ಅದೇ, ಪು.೯೪ - ೯೫

೨೩. ಮುಳಿಯ ತಿಮ್ಮಪ್ಪಯ್ಯ, ಕನ್ನಡ ನಾಡೂ ದೇಶಿ ಸಾಹಿತ್ಯವೂ, ಪು.೨೫ - ೩೩

೨೪. ಅದೇ, ಪು.೪೧ - ೪೫

೨೫. ನಾರಾಯಣ.ಕೆ.ವಿ, ಮುಳಿಯ ತಿಮ್ಮಪ್ಪಯ್ಯನವರ ಛಂದಸ್ಸು, ಶೈಲಿ (ಲೇ) ೧೯೮೯ (ಮುಳಿಯ: ಶತಮಾನ ಸ್ಮರಣೆ (ಸಂ) ಜಿ.ಎಸ್.ಶಿವರುದ್ರಪ್ಪ) ಪು.೫೭

೨೬. ಅದೇ, ಪು.೫೮ - ೬೬

೨೭. ಗಿರಡ್ಡಿ ಗೋವಿಂದರಾಜು, ಕನ್ನಡ ನವೋದಯ ಕಾವ್ಯ: ಮಂಗಳೂರು ಕೇಂದ್ರ, ಪು.೯೪ - ೧೦೨

ಅಧ್ಯಾಯ -೩

೦೧. ಕೋತಿನ ಎಸ್.ಎಸ್, ಆಂಡಯ್ಯ, ಪು.೩೦೮ - ೩೦೯

೦೨. ಕುಶಾಲಪ್ಪ ಕೆ, ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ, ಪು.೩೫೫

೦೩. ಪಾದೇಕಲ್ಲು ವಿಷ್ಣುಭಟ್ಟ (ಸಂ), ಕೇಶಿರಾಜದರ್ಪಣ, ಪು.೬೧೯-೬೨೦

೦೪. ಕುಶಾಲಪ್ಪ ಕೆ, ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ, ಪು.೨೩೮-೨೪೦

೦೫. ಪಾದೇಕಲ್ಲು ವಿಷ್ಣುಭಟ್ಟ (ಸಂ), ಕೇಶಿರಾಜದರ್ಪಣ, ಪು.೧೨೬

೦೬. ಅದೇ, ಪು.೧೭೯

೦೭. ಅದೇ, ಸೂತ್ರ-೮೨, ಪದ್ಯ.೯೦, ಪು.೧೨೧

೦೮. ಪುಟ್ಟಪ್ಪ ಕೆ.ವಿ.(ಸಂ), ಕನ್ನಡ ಕೈಪಿಡಿ ಸಂ.೧, ಪು.೨೮-೨೯

೦೯. ಕೋತಿನ ಎಸ್.ಎಸ್, ಆಂಡಯ್ಯ, ಕಾವ್ಯಾವಲೋಕನ ಸೂತ್ರ.೬೩, ಪು.೩೪೫

೧೦. ಅದೇ, ಪು.೩೪೫-೩೪೭

೧೧. ಪಾದೇಕಲ್ಲು ವಿಷ್ಣುಭಟ್ಟ (ಸಂ), ಕೇಶಿರಾಜದರ್ಪಣ, ಪು.೧೮೫

೧೨. ಅದೇ, ಪು.೧೮೫

೧೩. ಅದೇ, ಪು.೫೭೪, ಸೂತ್ರ.೨೬೬

೧೪. ಅದೇ, ಪು.೫೭೪

೧೫. ಹೆಚ್ಚಿನ ವಿವರಣೆಗೆ ಅದೇ, ಪು.೫೭೪-೬೨೦

೧೬. ಪುಟ್ಟಪ್ಪ ಕೆ.ವಿ.(ಸಂ), ಕನ್ನಡ ಕೈಪಿಡಿ ಸಂ.೧, ಪು.೩೩

೧೭. ವೆಂಕಟರಾಮಪ್ಪ ಕೆ.(ಸಂ) ನಯಸೇನನ ಧರ್ಮಾಮೃತ, ಪ್ರ.ಆ.ಪದ್ಯ.೪೧, ಪು.೫೯

೧೮. ಅದೇ, ಪುಟ.೫೯

೧೯. ಶ್ಲೇಷೆ ಒಂದೇ ಶಬ್ದಾನಿಪೂರ್ವಿಯಲ್ಲಿ ನಾನಾರ್ಥಗಳನ್ನಿಟ್ಟು ಆ ಅರ್ಥಗಳ ಮೂಲಕ ಬೇರೆ ಬೇರೆ ವಸ್ತುಗಳನ್ನು ವರ್ಣಿಸುವುದು ಶ್ಲೇಷಾಲಂಕಾರ.

೨೦. ಕಾವ್ಯಲಿಂಗ ಸಹೃದಯರು ಒಪ್ಪುವ ಕಾರಣವನ್ನು ಕೊಟ್ಟು ಸಂದಿಗ್ಧವೋ ಅಸಂಭಾವ್ಯವೋ ಆದ ವಿಷಯವನ್ನು ಸಮರ್ಥಿಸಿದರೆ ಕಾವ್ಯಲಿಂಗಲಂಕಾರವಾಗುವುದು

೨೧. ಜವರೇಗೌಡ. ದೇ (ಸಂ) ಆಂಡಯ್ಯನ ಕಬ್ಬಿಗರ ಕಾವಂ, ಪದ್ಯ.೧೫, ಪುಟ.೮೨

೨೨. ಜನರೇಗೌಡ ದೇ (ಸಂ) ಆಂಡಯ್ಯನ ಕಬ್ಬಿಗರ ಕಾವ, ಪದ್ಯ.೧೬, ಪುಟ.೮೨

೨೩. ಮುಳಿಯ ತಿಮ್ಮಪ್ಪಯ್ಯ, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪುಟ ೧೪೭

೨೪. ಕೊಳಂಬೆ ಪುಟ್ಟಣ್ಣಗೌಡ, ಕಾಲೂರ ಚೆಲುವೆ, ಪುಟ.೪

೨೫. ಅದೇ, ಪುಟ. ೪೫

೨೬. ಕೋತಿನ ಎಸ್.ಎಸ್, ಆಂಡಯ್ಯ, ಪುಟ.

೨೭. ಕುಲಕರ್ಣಿ.ರಾ, ಆಂಡಯ್ಯನ ಅಚ್ಚಗನ್ನಡ (ಲೇ) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ-೫೨, ಸಂಚಿಕೆ.೧-೨, ಪುಟ.೩೩, ೧೯೬೭

೨೮. ಅದೇ, ಪುಟ ೩೭ ೩೯

೨೯. ಅದೇ, ಪುಟ.೩೯

೩೦. ಕೀರ್ತಿನಾಥ ಕುರ್ತುಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಪುಟ. ೮೪ - ೮೫

ಅಧ್ಯಾಯ -೪

೦೧. ಗುಂಡಪ್ಪ ಎಲ್. (ಅನು) ತಮಿಳು ಸಾಹಿತ್ಯ ಚರಿತ್ರೆ, ಪು.೧೨-೧೩

೦೨. ಅದೇ ಪುಟ. ೫-೧೨

೦೩. ಅದೇ ಪುಟ. ೫-೧೬

೦೪. ಕೈಯ್ಯಾರ ಕಿಞ್ಞಣ್ಣರೈ, (ಸಂ) ಮಲಯಾಳ ಸಾಹಿತ್ಯ ಚರಿತ್ರೆ, ಪು.೧-೧೪

೦೫. ಅದೇ ಪುಟ. ೪-೬

೦೬. ಅದೇ ಪುಟ.೧೩-೫೨

೦೭. ಅನಂತರಂಗಾಚಾರ್.ಎನ್, ಸಾಹಿತ್ಯ ಭಾರತೀ, ಪು.೪೫೬-೪೫೭

೦೮. ಅದೇ ಪುಟ.೪೬೬-೪೭೧

೦೯. ಉದ್ಧೃತ, ಕಪಿಲನಾಯಿ ಲಿಂಗಮೂರ್ತಿ, ಪ್ರವೇಶಿಕ, ಯಯಾತಿ ಚರಿತ್ರೆ, ಪುಟ.೮

೧೦. ಅದೇ ಪುಟ.೯-೧೦

೧೧. ಅದೇ ಪುಟ.೭

೧೨. ಪೊನ್ನಗಂಟಿ ತೆಲಗನಾರ್ಯ, ಯಯಾತಿ ಚರಿತ್ರೆ, ಪು.೩೭-೫೦

ಅಧ್ಯಾಯ -೫

೦೧. ಮುಳಿಯ ತಿಮ್ಮಪ್ಪಯ್ಯ, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು.೧೩೫-೧೪೯

೦೨. (ಪಂ.ಭಾರತ, ಪ್ರ.ಆಶ್ವಾಸ, ಪದ್ಯ-೬)

೦೩. (ಪಂ.ಭಾರತ, ಪ್ರ.ಆಶ್ವಾಸ, ಪದ್ಯ-೮)

೦೪. (ಪಂ.ಭಾ,ಪ್ರ.ಆಶ್ವಾಸ, ಪದ್ಯ-೨೪)

೦೫. (ಪಂ.ಭಾರತ, ದ್ವಿ.ಆ.ಪ, ಪದ್ಯ-೫)

೦೬. (ಪಂ.ಭಾರತ, ದ್ವಿ.ಆ.ಪ, ಪದ್ಯ-೩೦)

೦೭. (ಪಂ.ಭಾರತ, ದ್ವಿ.ಆ.ಪ, ಪದ್ಯ-೩೧)

೦೮. (ಯ.ಚರಿತೆ, ದ್ವಿ.ಆ.ಪ, ಪದ್ಯ-೫)

೦೯. (ಪಂ.ಭಾರತ, ತ್ನ ಅಶ್ವಾಸ, ಪದ್ಯ-೯)

೧೦. (ಪಂ.ಭಾರತ, ತ್ನ ಅಶ್ವಾಸ, ಪದ್ಯ-೧೨)

೧೧. (ನವಮಾಶ್ವಾಸ ಪಂ.ಭಾರತ, ಪದ್ಯ-೫೮)

೧೨. (ಗ.ಯುದ್ಧ,ದ್ವಿ.ಆ.ಪ -೨೩)

೧೩. (ಗ.ಯುದ್ಧ,ದ್ವಿ.ಆ.ಪ -೨೪)

೧೪. (ಗ.ಯುದ್ಧ, ಪದ್ಯ.೯, ತ್ನ ಆಶ್ವಾಸ)

೧೫. (ಗ.ಯುದ್ಧ, ತ್ನ.ಆ.ಪ - ೧೧)

೧೬. (ಗ.ಯುದ್ಧ, ಚ. ಆ, ಪ - ೧೪)

೧೭. (ಗ.ಯುದ್ಧ, ಚ. ಆ, ಪ - ೫೬)

೧೮. (ಗ, ಯುದ್ಧ, ಪಂ. ಆ, ಪ ೬)

೧೯. (ಪಂ.ಭಾರತ. ತೃ. ಆ. ಪ. ೨೯)

೨೦. (ಪಂ.ಭಾರತ. ಪ್ರ.ಆ.ಪ. ೩೭)

೨೧. (ಶಾಂ.ಪು.ಚ.ಆ. ಪದ್ಯ. ೩೫)

೨೨. (ಶಾಂ.ಪು.ಚ.ಆ. ಪದ್ಯ.೪೨)

೨೩. (ಶಾಂ.ಪು.ಪಂ.ಆ.ಪ. ೫೪)

೨೪. (ಅಜಿತ.ತೀ.ಪು.ನವ. ಆ. ಪದ್ಯ ೧೬)

೨೫. (ಪಂ ಭಾರತ. ಪ್ರ.ಆ, ಪ - ೪೦)

೨೬. (ಪಂ.ಭಾರತ. ಪಂ.ಆ, ಪದ್ಯ - ೫೯)

೨೭. (ಪಂ.ಭಾರತ, ಪಂ.ಆ ಪದ್ಯ - ೬೧)

೨೮. (ಪಂ.ಭಾರತ.ಸ.ಆ., ಪದ್ಯ - ೮೪)

೨೯. (ಶಾಂ. ಪು. ತೃ. ಆ.ಪ. ೧೮)

೩೦. (ಶಾಂ. ಪು. ಅ. ಆ. ಪ. ೨೨)

೩೧. (ಶಾಂ. ಪು. ಅ. ಆ. ಪ. ೨೭)

೩೨. (ಗ. ಯುದ್ಧ. ಅ. ಆ. ಪ. ೬೧)

೩೩. (ಅಜಿತ. ತೀ. ಪು. ದ್ವಿ. ಆ. ಪ. ೩೮)

೩೪. (ಅನಂತ ಪು. ಪಂ. ಆ. ಪ. ೩೨)

೩೫. (ಪಂ.ಭಾರತ. ಆ. ಪ. ೩೩)

೩೬. (ಪಂ.ಭಾರತ. ದ್ವಿ. ಆ. ಪ. ೧೯)

೩೭. (ಪಂ.ಭಾರತ. ಚ. ಆ. ಪ. ೬೧)

೩೮. (ಪಂ.ಭಾರತ. ಚ. ಆ. ಪದ್ಯ-೮೨)

೩೯. (ಶಾಂ.ಪು.ಅ.ಆ.ಪ.೮೮)

೪೦. (ಶಾಂ.ಪು.ಅ.ಆ.ಪ.೯೮)

೪೧. (ಶಾಂ.ಪು.ಅ.ಆ.ಪ. ೧೦೩)

೪೨. (ಅಜಿತ ತೀ. ಪು. ಪಂ. ಆ. ಪ. ೧೭)

೪೩ (ಅನಂತ. ಪು.ಸ.ಆ.ಪ. ೭೦)

೪೪. (ಅನಂತ. ಪು.ಸ.ಆ.ಪ. ೭೧)

೪೫. (ಅನಂಥ ಪುರಾಣ. ಅ.ಆ.ಪದ್ಯ.೨)

೪೬. (ಪಂ.ಭಾರತ. ದ್ವಿ.ತಿ. ಪದ್ಯ.೧೨)

೪೭. (ಪಂ. ಭಾರತ. ಚ. ಆ. ಪದ್ಯ ೨೮)

೪೮. (ಶಾಂ.ಪು.ಪಂ.ಆ.ಪ. ೭೯)

೪೯. (ಶಾಂ. ಪು. ಸ. ಆ. ಪದ್ಯ.೧೦)

೫೦. (ಅಜಿತ. ತೀ. ಪು. ಚ. ಆ. ಪ. ೨೭)

೫೧. (ಅಜಿತ. ತೀ. ಪು. ಷಷ್ಠಾಶ್ವಾಸ. ಆ. ಪ. ೨೧)

೫೨. (ಅನಂತ.ಪು.ಪ್ರ.ಆ.ಪ. ೯೨)

೫೩. (ಅನಂತ.ಪು.ಚ.ಆ.ಪ. ೪೮)

೫೪. (ಪಂ.ಭಾರತ,ದ್ವಿ.ಆ. ಪದ್ಯ.೨೬)

೫೫. (ಪಂ.ಭಾರತ, ತೃ.ಆ.ಪದ್ಯ.೨೬)

೫೬. (ಪಂ.ಭಾರತ, ಚ.ಆ.ಪ. ಪದ್ಯ.೫೭)

೫೭. (ಗ.ಯುದ್ಧ,ಪಂ.ಆ.ಪದ್ಯ.೧೧)

೫೮. (ಗ.ಯುದ್ಧ,ಪಂ.ಆ.ಪದ್ಯ.೧೪)

೫೯. (ಗ.ಯುದ್ಧ,ಪಂ.ಆ.ಪದ್ಯ.೧೫)

೬೦. (ಶಾಂ.ಪು.ಪ್ರ.ಆ.ಪದ್ಯ.೧೧)

೬೧. (ಶಾಂ.ಪು.ದ್ವಾ.ಆ.ಪದ್ಯ.೭೦)

೬೨. (ಶಾಂ.ಪು.ದ್ವಾ.ಆ.ಪದ್ಯ.೭೫)

೬೩. (ಶಾಂ.ಪು.ದ್ವಾ.ಆ.ಪದ್ಯ- ೭೬)

೬೪. (ಅಜಿತ, ತೀ.ಪು, ಪ್ರ.ಆ, ಪು.೯೪)

೬೫. (ಅನಂತ ಪು, ಪ್ರ ಆ, ಪು.೫೪)

೬೬. (ಅನಂತ ಪು, ಪ್ರ.ಆ, ಪ - ೫೭)

೬೭. (ಅಜಿತ ಲೇ. ಪು, ದ್ವಾ ಆ, ಪದ್ಯ - ೩೩)

೬೮. (ಅಜಿತ ಲೇ. ಪು, ದ್ವಾ ಆ, ಪದ್ಯ - ೪೬)

೬೯. (ಅನಂತ. ಪು, ಪ್ರ.ಆ.ಪ-೪೫)

೭೦. (ಪಂ ಭಾರತ ದ್ವಿ. ಆ ಪ - ೬೩)

೭೧. (ಪಂ ಭಾರತ, ದ್ವಿ, ಆ, ಪ ೮೩)

೭೨. (ಪಂ ಭಾರತ ದ್ವಿ ಆ ಪ - ೯೪)

೭೩. (ಗ. ಯುದ್ಧ, ತೃ. ಆ. ಪ - ೫೬)

೭೪. (ಗ ಯುದ್ಧ ಸ. ಆ. ಪ - ೩೫)

೭೫. (ಗ ಯುದ್ಧ ಸ. ಆ. ಪ - ೩೭)

೭೬. (ಗ ಯುದ್ಧ ಸ. ಆ. ಪ - ೩೮)

೭೭. (ಪಂ.ಭಾರತ, ಪಂ ಆ, ಪ - ೩೬)

೭೮. (ಪಂ.ಭಾರತ, ಪಂ ಆ, ಪ - ೩೭)

೭೯. (ಪಂ.ಭಾರತ, ಪಂ ಆ, ಪ - ೩೯)

೮೦. (ಅನಂತ ಪು, ಏಕಾ.ಆ. ಆ, ಪ - ೩೮)

೮೧. (ಅನಂತ ಪು. ಏಕಾ.ಆ.ಆ.ಪ - ೩೯)

೮೨. (ಪಂ.ಭಾರತ ಪಂ. ಆ, ಪ - ೭೭)

೮೩. (ಪಂ.ಭಾರತ, ಪಂ ಆ ಪ - ೮೩)

೮೪. (ಶಾಂ.ಪು ದ್ವಿ ಆ ಪ - ೭೯)

೮೫. (ಶಾಂ.ಪು.ಚ.ಆ.ಪದ್ಯ- ೧೦೫)

೮೬. (ಗ.ಯುದ್ಧ, ದ್ವಿ.ಆ.ಪದ್ಯ-೧೩)

೮೭. (ಗ.ಯುದ್ಧ,ಚ.ಆ.ಪದ್ಯ-೧೩)

೮೮. (ಅಜಿತ.ಪು.ದ್ವಿ.ಆ.ಪದ್ಯ-೯೯)

೮೯. (ಅಜಿತ.ಪು.ಷ.ಆ.ಪದ್ಯ-೧೧೪)

೯೦. (ಯ.ಚ.ಒಂ.ಅ.ಪದ್ಯ-೧೫)

೯೧. (ಯ.ಚ.ಒಂ.ಅ.ಪದ್ಯ-೨೩)

೯೨. (ಪಂ.ಭಾರತ.ದ್ವಿ.ಆ.ಪದ್ಯ-೬೬)

೯೩. (ಅನಂತ.ಪು.ಏ.ಆ.ಪದ್ಯ-೬೨)

೯೪. (ಅನಂತ.ಪು.ಚತುರ್ದಶಾಶ್ವಾಸಂ.ಆ.ಪದ್ಯ-೮)

೯೫. (ಪಂ.ಭಾರತ.ದ್ವಿಆ.ಪದ್ಯ-೪೦)

೯೬. (ಗ.ಯುದ್ಧ.ಪ್ರ.ಆ.ಪದ್ಯ-೩೦)

೯೭. (ಅಜಿತ.ಪು.ಪ್ರ.ಆ.ಪದ್ಯ-೫೧)

೯೮. (ಪಂ.ಭಾರತ.ತೃ.ಆ.ಪದ್ಯ-೨)

೯೯. (ಶಾಂ.ಪುರಾಣ.ತೃ.ಆ.ಪದ್ಯ-೯)

೧೦೦. (ಅಜಿತ.ಪು.ಸ.ಆ.ಪದ್ಯ-೧೮)

೧೦೧. (ಪಂ.ಭಾರತ.ಚ.ಆ.ಪದ್ಯ-೩)

೧೦೨. (ಅನಂತ.ಪು.ನ.ಆ.ಪದ್ಯ-೩೩)

೧೦೩. (ಶಾಂ.ಪು.ಸ.ಆ.ಪದ್ಯ-೧೧)

೧೦೪. (ಅಜಿತ.ಪು.ದ್ವಿ.ಆ.ಪದ್ಯ-೫೨)

೧೦೫. (ಅಜಿತ.ಪು.ದ್ವಿ.ಆ.ಪದ್ಯ-೬೪)

೧೦೬. (ಅನಂತ. ಪು. ಏಕ.ಆ. ಪದ್ಯ - ೧೦)

ಅಧ್ಯಾಯ -೬

೦೧. ಜವರೇಗೌಡ ದೇ, ಸಂ. ಕಬ್ಬಿಗರ ಕಾವ ಪದ್ಯ. ೨೬೯, ೨೭೦

೨೬೯ ಪುರಳುಂ ಲಕ್ಕಣಮುಂ ಮೆ
ಯ್ಸಿರಿಯುಂ ಮೆಯ್ವೆತ್ತು ಸೋಲಿಪುದ ಱಿಂ ದೊಲ್ದ
ಕ್ಕರಿಗರಿದನೋದಿ ಪೊಸತಾ
ಗಿರೆ ಸೊಬಗಿನ ಸುಗ್ಗಿಯೆಂಬ ಪೆಸರಂ ಕೊಟ್ಟರ್

೨೭೦ ಮತ್ತಂ ಸಕ್ಕದಮಱಿವರಂ
ಬಿತ್ತರದಿಂ ಮದನವಿಜಯ ಮೆಂದೊಲವೆರ್ದೆಯಂ
ಪತ್ತಿರೆ ಪೆಸರಿಟ್ಟರಿದ
ಕ್ಕತ್ತಳವೆನಿಪುದೆನೆ ಮಿಸುಪ ಪೆಸರೆಸೆವಿನೆಗಂ

೦೨. ಮುಳಿಯ ತಿಮ್ಮಪ್ಪಯ್ಯ, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು.೭೦-೭೧

೦೩. ಕೋತಿನ ಎಸ್.ಎಸ್. ಆಂಡಯ್ಯ, ಪು.೧೦೮

೦೪. ಜವರೇಗೌಡ ದೇ., ಸಂ ಕಬ್ಬಗರ ಕಾವ, ಪು.೪

೦೫. ನರಸಿಂಹಾಚಾರ್ ಡಿ.ಎನ್., ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಸೂತ್ರ.೩೧೪

೦೬. ಜವರೇಗೌಡ ದೇ. ಸಂ ಕಬ್ಬಿಗರ ಕಾವ, ಪದ್ಯ ೧೫

೦೭. ಕೋತಿನ ಎಸ್.ಎಸ್., ಆಂಡಯ್ಯ, ಪುಟ.೧೧೬

೦೮. ಅದೇ, ಪು. ೨೩.೭೪
ಲೊತ್ತಮೆಯೋಲಗಕೆ ಸಮಯ ಮೆಂದೆತ್ತಿದಳೊಂ
ದೆತ್ತಿದ ಕೆಟ್ಟಗೆಯಿಂದೆನೆ
ಮುತ್ತಿನ ಕೊಡೆವಿಡಿದಳರಸಿಗಮಱಿಯದೊರ್ವಳ್ (ಚ.ಆ.ಪ.೮೨)

ತಿಂಗಳ ತಣ್ಣದಿರ್ವೊದ ಜೊಳ
ಪಾಂಗಚ್ಛವಿ ಸೆಣಸೆ ತಂದು ತಲೆವಾಗಿಪವೊಲ್
ತುಂಗಘನನಿಬಿಡುಕುಚೆಗಮ
ರಾಂಗನೆ ಚಾಮರಮನಿಕ್ಕಿದಳ್ ಮತ್ತೊರ್ವಳ್ (ಚ.ಆ.ಪ.೮೩)

ಅಲ್ಲರ್ಗಣೆಯಿಲ್ಲದೆ ಲೋಕಮ
ನೆಲಲಿಸಿದಪಂ ನಿನ್ನ ಬಸಿಱೊಳುದಯಿಪ ಮದನಂ
ಲಲನೆ ಮುಡಿ ಮಡಗದೆಂಬವೊ
ಲಲರ್ವಾಸಿಗಮಿತ್ತಳಮರಿ ಸಿರಿಮುಡಿಗೊರ್ವಳ್ (ಚ.ಆ.ಪ.೮೯)

ಹಾರಿವಡೆದೆಸೆದುದಮರರ
ನೇರಾಣಿಯ ಪೊಂಗಡಂಗಳೆರಡುಂ ತೆರದಿಂ
ವಾರಧಿಯನೆಯ್ದೆ ಮೊಗೆಯಲ್
ಮೇರುಮಹೀಧರಮೆ ತೋಳ್ಗಳಂ ನೀಡಿದವೊಲ್ (ಪಂ.ಆ.ಪ.೫೬)

ಕಂದರಂಗಳಿಡುವಿನೆಡೆಗಳೊಳ್ ಕವಲ್ತು ನಿಲ್ತು ಭೋ
ರೆಂದು ಪಾಯ್ವ ಪಾಲ ಪೊನಲೆ ನೊರೆಯ ಪಿಂಡಲೊಗೆದುವಾ
ಮಂದರಂ ತ್ರಿಲೋಕನಾಥನಭಿಷವೋತ್ಸವಕ್ಕೆ ಪೂ
ರ್ಣೇಂದುಮಂಡಲಂಗಳಿಂದಮಿಂಡೆಯಾಡಿತೆಂಬಿನಂ (ಪಂ.ಆ.ಪ.೭೦)

ತೆಳ್ದಳ್ಳನಾದ ಪಾಲ್ಗಡ
ಲಳ್ದೆರೆಯೊಳ್ ಮಸುಳ ಮಸುಳನೆಸೆದುವು ಮಣಿಗಳ್
ಬೆಳ್ದಿಂಗಳ ಪೊರೆವೊರೆಯೊಳ್
ದಳ್ದಳಿಸದೆ ಮಿನುಕುತಿರ್ಪ ತಾರಾಳಿಯವೊಲ್ (ಪಂ.ಆ.ಪ.೭೩)

ತೊಡವಿಂಗೆ ತೊಡುವು ರತ್ನದ
ಬಿಡುವಿಂಗೆಸೆವೊಪ್ಪಸಲಗೆ ಕಾಂತಿಗೆ ಕೈಗ
ನ್ನಡಿ ತೀರ್ಥಂಕರ ಕುಮಾರನ
ಬೆಡಂಗು ಬೆಳ್ಮಾಡಿದ ಪುದಲಂಕರಿಸುವರಂ (ಪಂ.ಆ.ಪ.೮೧)

ಪಿಡಿದ ಜವನಿಕೆಯ ಮಱೆಯೊಳ್
ಕುಡುಮಿಂಚಿನ ಬಳ್ಳಿ ಮುಗಿಲ ತೆಳ್ವಿರೆಯೊಳ್ ಕ
ಣ್ಗೆಡಱುವೊಲಡರೆ ತೋರ್ದುವು
ತೊಡವಿನ ಬಿಡುವುಂ ಬಿಡೌಜನಂಗಚ್ಛವಿಯುಂ (ಪಂ.ಆ.ಪ.೯೪)

ಅನಂತನಾಥ ಪುರಾಣಂ

ಪ್ರಕೃತಿ ವರ್ಣನೆ.

ಅಲರ್ಗಂ ಬಂದವು ನಿನ್ನ ಕೋರಕದಿನೆನ್ನಂ ಚೆನ್ನಬಿಲ್ ನಿನ್ನ ಗೊಂ
ಚಲ ಪೂವಿಂ ತಳೆದತ್ತು ತೋಮರಮನೆನ್ನೊಂದಾಜ್ಞೆ ನಿನ್ನಿಂದ ಸ
ತ್ಫಲಮಾಯ್ತೆಂದು ಮನೋಜರಾಜನ ಪಾಸಾಯಂಗೊಟ್ಟ ಕೆಂಬಟ್ಟೆಯಂ
ಚಲದಂತಾದುವು ನೀಳ್ದ ಕೆಂದಳಿರ್ಗಳಿಂದಂ ಬಂದ ಮಾಕಂದದೊಳ್(ಷಷ್ಠಾ.ಆ.ಪ.೮೬)

ಗಟುಯಿಸುವ ತಮಂ ಮೂಡಲ್
ಪೊಜೆಗಟ್ಟುವ ಸಂಜೆಗೆಂಪು ಪಡುವಲ್ ಕೈಕೊಂ
ಡೆಟಲೆ ಧರೆಗರ್ಧನಾರಿಯ
ತಱಿವಿಡಿದಂತಾಯ್ತು ಗಗನ ಮಂಡಲಮಿನಿಸುಂ (ಸ.ಆ.ಪ.೭೨)

ಪಂಪಭಾರತ

ಸ್ತ್ರೀ ವರ್ಣನೆ

ಒಡನೆ ನೆರೆದರಸುಮಕ್ಕಳ
ನಿಡುಗಣ್ಗಳ ಬಳಗಮೆಱಗೆ ತನ್ನಯ ಮೆಯ್ಯೊಳ್
ನಡೆ ಬಳಸಿ ಪಲರುಮಂಬಂ
ತುಡೆ ನಡುವಿರ್ದೊಂದು ಪುಲ್ಲೆಯಿರ್ಪಂತಿರ್ದಳ್ (ತೃ.ಆ.ಪ.೫೧)

ಮುಡಿಯ ಕುಚಯುಗದ ಜಘನದ
ಕಡುವಿಣ್ಪಿಂ ಮಣಲೊಳಟ್ಟುಬರೆ ಮಲ್ಲಡಿಗಳ್
ನಡೆಯದ ಬೇವಸಮಂ ತಾಂ
ನಡೆಯಿಸುವಂತ ವರ್ಗಳೊಯ್ಯನೊಯ್ಯನೆ ನಡೆದರ್ (ಸ.ಆ.ಪ.೮೫)

ಪೊನ್ನನ ಶಾಂತಿಪುರಾಣ

ಸ್ತ್ರೀವರ್ಣನೆ

ಕೊಡಕೆಯುದಬಿಂದು ಕೊಪ್ಪಿನ
ಬೆಡಂಗನವಗೆಯ್ಸೆ ಕುಟಿಲ ಕೇಶಾವಳಿಯೋ

ಗಡಿಸದೆ ಪನಿಗಳ್ ನಿಲೆ ತಲೆ
ದುಡುಗೆಯ ಮುತ್ತಿನವೊಲೆಸೆಯೆ ಸತಿ ಸೊಗಯಿಸಿದಳ್ (ಅ.ಆ.ಪ.೪೨)

ಅಜಿತ ತೀರ್ಥಕರ ಪುರಾಣಂ

ಕಡುಚೆಲ್ವೆಯರೆರ್ದಾಡಿದ
ರೊಡನಾಡುವರ ಕೇರಿಯಾದುದುವೆಂಬೀ
ನುಡಿ ದಿಟಕೆ ನಾಟ್ಯದೋಜೆಗೆ
ಬಿಡೌಜನಾಡಿದೊಡೆ ದಿವಿಜೆಯರ್ ಮಾಣ್ಬಪರೇ (ಪಂ.ಆ.ಪ.೩೩)

ತಡದಡವಾರದೆ ಗತಿಯೊಳ್
ತೊಡರದೆ ರಂಜಿಸಿದವರಮರ ಲಂಜಿಕೆಯರ್ ಜಾ
ಣ್ಗೆಡದಾಡಿ ಮೊದಲ ತಾಣದೊ
ಳೆಡೆಯೊತ್ತಿನೊಳೆಸೆವ ಕಡೆಯ ತಾಳದ ಯತಿಯೊಳ್(ಪಂ.ಆ.ಪ.೪೧)

ಕಡುಚೆಲ್ವು ಗಡಂ ಜವ್ವನೆ
ಗಡಮಾಡಲ್ ಪಾಡಲವಳೆ ಬಲ್ಲಳ್ ಗಡಮಾ
ರ್ಪಡೆವರೊ ಕಣ್ಣುಂ ಗತಿಯುಂ
ಬಡೆದವಳಂ ಸ್ತ್ರೀಯರೊಳಗವಳ್ ಸ್ತ್ರೀರತ್ನಂ (ಪಂ.ಆ.ಪ.೪೫)

ಇದು ಚೋದ್ಯಮೆನಗೆ ಪೇಟ್ವ ಪೆ
ನದೆಂತು ಪೇಟೆಂಬ ಸಕಲ ವಿದ್ಯೆಗಳುಮನೋ
ದದೆ ಕಲ್ತಂ ಜಗಮಂ ನೋ
ಡದೆ ಕಾಣ್ಬಂಬಗೆಯದಱವನೆಲ್ಲಮನಜಿತಂ (ಪಂ.ಆ.ಪ.೬೭)

ಸುರಪತಿಯಱಿವೆಸನರ್ಹ
ತ್ಪರಮೇಶ್ವರಪಾದಸೇವೆ ಪಾಲಾ ಅಮರ್ದಾ
ಪಿರಿದು ಗಡಿದೆನಿಸಿ ತಂದರ್
ಸುರವಟುಕರ್ ಪುಲ್ಲವಟುಕರಂತಿರೆ ಪೂವಂ (ಪಂ.ಆ.ಪ.೭೭)

ಜನ್ನನ ಅನಂತನಾಥ ಪುರಾಣ

ಅಳವಡೆ ಕೊಂಡ ನುಣ್ಪಸದನಂ ಪೊಸಜಾಣ್ನುಡಿ ಜಾಣರು ಮರು
ಳ್ಗೊಳಿಸೆ ಪೊದಟ್ಟ ಮುದ್ದುನುಡಿ ಭಾವಕರೊಳ್ ಮದನಾನುರಾಗಮಂ
ಬಳಯಿಸೆ ರೂಪು ನೋಟಕರ ಕಣ್ಗಮೃತಾಂಜನಪುಂಜಮಂ ಪುದುಂ
ಗೊಳಿಸೆ ನೃಪೇಂದ್ರನೋಲಗದೊಳಿರ್ದುದು ವಾರವಿಲಾಸಿನೀಜನಂ (ದ್ವಿ.ಆ.ಪ.೨೧)

ಲಲನೆಯ ಸೋರ್ಮುಡಿಯೊಳ್ ಸುರ
ಲಲನೆ ಕನತ್ಕನಕಕೇತನವದಳಮಂ
ಸಲಿಸುವ ನೆವದಿಂದ ಕ
ಟ್ಟಿ ಲೆಗಿತ್ತಳ್ ಚಂದ್ರಕಲೆಯ ಕವಳಮನೊರ್ವಳ್ (ಚ.ಆ.ಪ.೧೦೦)

ಬಂಬಲ್ಗುರುಳಿಂ ತುಂಬಿಯ
ಬಂಬಲಿವೆಂದಜಿಪಲಿದುವೆ ಕುಜುಪೆಂದು ಜಿನೇಂ
ದ್ರಾಂಬಿಕೆಯ ಕುರುಳೊಳಮರನಿ
ತಂಬನಿ ನಿಜಿಸಿದಳು ಚಿನ್ನ ಪೊಗಳನೊರ್ವಳ್ (ಚ.ಆ.ಪ.೧೦೧)

ತಳತಳಿಪ ಕರ್ಣಪತ್ರಮ
ನಳವಡಿಸಿದಳೊರ್ವಳ ಮರಕಾಂತೆಯ ಕಡೆಗ
ಣ್ಗಳ ಕಾಂತೆಲತೆಗೆ ಸಂದಿಸಿ
ದೆಳವೆಡೆಗಳಿನಾಳವಾಳಮಂ ತಿರ್ದುವವೊಲ್ (ಚ.ಆ.ಪ.೧೦೨)

ಪೊಡವಿಯನುರಾಗಮಿದೆ ಕಾ
ಲ್ಪಿಡಿದಪ್ಪುದು ವೀತರಾಗನಂ ಪಡೆದೊಡಲಿಂ
ಬಿಡದಿರೆಲೆ ದೇವಿಯಂಬವೊ
ಲಡಿಯೊಡಿದಳೊರ್ವಳಮರಿ ಲಾಕ್ಷರಸದಿಂ (ಚ.ಆ.ಪ.೧೦೫)

ಸುಲಪಲ್ಲ ಮಿಂಚು ಕಡೆಗ
ಣ್ಮಲರ ಕಡಲ್ವರಿವ ಕಾಂತಿ ಮಗುಲದ ಮುಕ್ತಾ
ಫಲದ ಮಲಯರುಹದೊಪ್ಪಮ
ನಲರ್ದಣಗೆಳಿನೊಪ್ಪಸಲಗೆಟುಡೆ ನಡೆತಂದಳ್ (ಚ.ಆ.ಪ.೧೦೮)

ಉತ್ತಮದೇವಿ ನೀನೆ ಮೊಲೆವೊತ್ತರೊಳೆಂದು ಜಗತ್ರಯಕ್ಕೆ ಬೊ
ಟ್ಟೆತ್ತಿದ ಮೊಕ್ಕೆಯಿಂದೆ ಗುಡಿಗಟ್ಟಿ ವಿನೇಕರಾವಲಂಬನಂ
ಪೆತ್ತಪೆಯೆಂಬವೊಲ್ ಬಲದ ಕೊಂಬಿನೊಳೊಯ್ಯನೆ ಪೇಟೆ ಕೈಯನು
ನ್ನತಗಜೇಂದ್ರಮಿರ್ದೊಡೆ ಗಜೇಂದ್ರಮದಾಲಸಯಾನೆ ನೋಡಿದಳ್ (ಚ.ಆ.ಪ.೧೧೦)

ಇಣೆಗಿಡಿದಿಣೆಯಂ ಕೊಳ್ಕಣೆ
ನಣೆದು ನೆಲಂ ಬಿರಿಯೆ ಕಲೆದು ಮಲೆದೊಲೆದಿದಿರೊಳ್
ಮಣಿಕದ ನಸೆಗಸವಸದಿಂ
ದಣಿಯರ ಮಾಡುವ ಗವೇಂದ್ರನಂ ಸತಿ ಕಂಡಳ್ (ಚ.ಆ.ಪ.೧೧೧)

ಇನಿಯನ ಕಡುಗಾಡಿ ಮನೋ
ಜನ ಬೆನ್ನಟ್ಟಿದೊಡೆ ಬಿಸುಟ ಪಟಯಿಗೆಯೆನೆ ಕೋ
ಳ್ವನಲೊಳಗೆ ಪೊಳಿವ ಮಿಾಂಬೊಣ
ರನಲಂಪಿಂ ಮೀನಲೋಲಲೋಚನೆ ಕಂಡಳ್ (ಚ.ಆ.ಪ.೧೧೭)

ಒಗೆದಳುರ್ದ ಮಿಳಿರ್ದ ಬಲದೊಳ್
ಪೊಗೆಯದೆ ಕಿಡಿಸ ಸೂಸದ ಸುಗೆಯೆಳದಳಿರ್ಗಳನಾ
ಯ್ದುಗೆವೊಯ್ದಂತಿರೆ ನಾಲಗೆ
ಸೊಗಯಿಸುವುರಿಮಾಲೆಯಂ ತಳೋದರಿ ಕಂಡಳ್ (ಚ.ಆ.ಪ.೧೨೫)

ಪಿಂಗದು ವಳಿಗಳ ದೇಸಿ ಕ
ಱಂಗದು ಮೇಣ್ಬಾಸೆ ಮೊಲೆಯ ಮೊಗಮಳಗರ್ಪಂ

ತಾಂಗದು ತೆಳ್ಪೆಸಿಜೆನಿಸಂ
ಪೊಂಗದು ನಿಪ್ಪೊಸತು ಸತಿಯ ಗರ್ಭವಿಲಾಸಂ (ಚ.ಆ.ಪ.೧೩೧)

ಮಱೆತೆರೊ ಮೇಣಂಬಿಕೆಯರು
ಮಱಿದೆನ್ನಯ ಬಿನ್ನಪಕ್ಕೆ ಮನ್ನಿಸಿದಯೆಯಿಂ
ತೆಱಪಂ ಕೊಟ್ಟರೊ ಮೇಣೆಂ
ದಱಿಯೆಂ ತಾಮಱಿಯೆ ಚೆಲ್ವೆ ಕನ್ಯಾರತ್ನ (ಷ.ಆ.ಪ.೩೦)

ಕಡುಚೆಲ್ವಿನ ಮಂಟಪಂ
ನಡೆನೋಡಲ್ ಬಂದು ಬಾಗಿಲೊಳ್ ಪುತ್ತಳಿಯಂ
ಪಡಿಯಱತಿರೆಂದರೆಬರ್
ನುಡಿಸೆ ನುಡಿಯದೊಡೆ ನಾಣ್ಚಿ ನೆಲನಂ ನೋಳ್ಪರ್ (ಷ.ಆ.ಪ.೪೨)

ಅಳವಡೆ ತೊಟ್ಟ ಪೊದುಡಿಗೆ ಕಟ್ಟಿದ ಬಲ್ಮುಗುಳ್ವಿಂಡೆಯಂ ಪದಂ
ಗೊಳಿಸುವ ನಾಯಿಕಾಪ್ರತತಿ ಬಂದುದು ವಾರವಿಲಾಸಿನೀಜನಂ
ಮಳಯಮೆರುನ್ಮದೋಚ್ಚಳಿತಮಂಗಳಕೇಸರವಾಸಚೂರ್ಣಮಂ
ಜುಳಲತೆಗೊಂದಳಂ ಮಣಿಯೆ ಪಾಡುವ ಚೌಪದಿಯಡ್ಡಿ ತಾಣದೊಳ್ (ಷ.ಆ.ಪ.೭೦)

ಪೊಂದುಡಿಗೆ ಬೆಡಂಗೆಡರ್ದೆಳೆ
ವಿಂದಿರೆರಜವಡರ್ದು ಕನಕಕಮಳದಿನಿಬುವೊಂ
ದಿಂದಿರೆಯೆನೆ ಮಱೆದಳ್ ಪಿರಿ
ಯಂದಣದಿಂದಿಬುವ ರಾಯರಾಣಿಯದೊರ್ವಳ್ (ಸ.ಆ.ಪ.೫)

ಅಗೆವೊಯ್ದ ಚಂದ್ರಮಂಡಲ
ದಗೆಗಳವೊಲ್ ಕಾರ ಮುಗಿಲ ಕಿಟ್ಸಿರಿಗಳವೊಲ್
ಸೊಗಯಿಸಿದವು ಬೆಳ್ಗೊಡೆಗೊಂ
ಬುಗೊಂಬಿನೊಳ್ ಕಂಬಕಂಬದೊಳ್ ಪರ್ವಿಡಿಗಳ್ (ಸ.ಆ.ಪ.೬)

ಎಳಲತೆಗಳ್ಗೆ ಸೋಗೆಗೆ ಸರೋಜಕುಲಕ್ಕೆ ಪಿಕಕ್ಕೆ ತಮ್ಮ ತೋ
ಳ್ಗಳ ಕುಡಿ ನೀಳ್ದ ಸೋರ್ಮುಡಿ ಮಾಗಂ ಗುಡಿ ಮೆಲ್ನುಡಿ ಮಚ್ಚರಂಗಳಂ
ಬಳಯಿಸೆ ಮುತ್ತುವಂತೆ ಬನಮಂ ನಡೆದರ್ಕಳನಾದೆಯರ್ ಸಮು
ಜ್ವಳಮುಖಬಿಂಬೆಯರ್ ಕುಟುಲಕುಂತಳೆಯರ್ ವಿಚತಳಲ್ಲತಾಂಗಿಯರ್ (ಸ.ಆ.ಪ.೭)

ಬಂಬುಲ್ಗುರುಳೊಡನಾಡಿಗೆ
ತುಂಬಿಗೆ ತಾನೆಂದು ಮುಳಿದು ಸಂಪಗೆಯೆಸಳಂ
ತುಂಬಿಗುರುಳ್ಗೊಪ್ಪಿಸಿದಪ
ಳೆಂಬಿನಮಸಳ್ಗಳನೆ ತಱಿದು ಸೂಡಿದಳೊರ್ವಳ್ (ಸ.ಆ.ಪ ೧೪)

ದಾಳಿಂಬದ ಕಿಱುನನೆಗಳ
ದಾಳಿಂಬಿಗೆ ಮೆಱೆಯೆ ಮುಗುಳ ಮುತ್ತಿನಲೊರ್ವಳ್
ಬಾಳಕಿ ಪಂಚಶರಂಗೊ
ಯ್ದೀಳಿಸಿದಳ್ ಪಂಚಶರನ ಶರಪರಿಣತೆಯಂ (ಸ.ಆ.ಪ ೨೧)

ಪರಿದೊಳಪೊಯ್ದು ಜೀರ್ಕೊಟಿವೆಯಂ ತೆಗೆದೆತ್ತಿದ ಕೆಯ್ಯೊಳೊರ್ವರೊ
ರ್ವರನಿರದೊತ್ತ ಪಂಜರಿಸೆ ಮೇಲೆ ಮುಸುಂಕುವ ಕುಂಕುಮಾಂಬುಸಂ
(ಕರ) ದೊಳದೊಂದು ಕೆಮ್ಮುಗಿಲ ರಾವಣದೊಳ್ ಕುಡಿಮಿಂಚುಗಳ್ ತಡಂ
ಬರಿವವೊಲೇಂ ಬೆಡಂಗಡರ್ದರೋ ರುಚಿಮದ್ವಿಚಳಲ್ಲತಾಂಗಿಯರ್ (ಸ.ಆ.ಪ. ೨೮)

ಮಿಸುಪಂ ತೋಳ ಮೊದಲ್ ತುಱುಂಕೆ ಮೊಲೆಮುಯ್ಪಂ ಮೀಱೆ ಗಾತ್ರಾಪಂರಂ
ಪಸರಂಬೆತ್ತಿರೆ ಕೊಂಕಿ ಬಳ್ಕೆ ನಡು ಕೊಂಬಂ ತೀವಿಕೊಂಡೆತ್ತಿ ಪೊ
ಣೆಸಿ ತನ್ನಂ ಬಡೆ ಪೊಯ್ದು ಪೋಪಳನೊಡ್ಡೊಡ್ಡೆನುತ್ತೊರ್ವಳೊ
ಡ್ಡಿಸಿ ಪೊಯ್ಕಲ್ ನಿಮಿರ್ದೊಂದು ಭಾವದೊಳೆ ಭಾವೋದ್ಭೂತನಾದಂ ಸ್ಮರಂ (ಸ.ಆ.ಪ ೨೯)

ಪಂಪಭಾರತ

ಪಿಡಿದಡಿಸಿ ತಿನಲ್ ಬಂದಿ
ರ್ದೆಡೆಯೊಳ್ ನಿನಗಾಗಿ ಮದನನೆನ್ನದೆ ತಿನೆ ಕೇಳ್ |
ಪಡೆನೋಡಲ್ ಬಂದವರಂ
ಗುಡಿವೊಜಿಸಿದರೆಂಬುದಾಯ್ತು ನಿನ್ನನ್ನೆಡೆಯೊಳ್ (ತೃ ಆ ಪ ೧೫)

ಕೊರಿದವಪ್ಪ ಕಣ್ಮಲರ್ಗಳಳ್ಳೆರ್ದೆಯೊಳ್ ತಡಮಾಡೆ ತಾಮೆ ಕಣ್
ಪೇರಿಸೆ ಪುರ್ವು ನಾಲಗೆವೊಲಾಗೆ ಮನಂಬುಗಿಸತ್ಕಿ ಬಲ್ಗೊಡಾ
ಜಾರೆಯೆ ಜಾರೆ ಪಾಜಿನೆ ಕರಂ ಪಿರಿದುಂ ಗಟಿಪುತ್ತುಮಿರ್ಪಳಂ
ಸಾರಿಕೆಯೆಂಬರಲ್ಲದಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್ (ಚ.ಆ. ಲ೩)

ಬೆಳರ್ತ ಬೆಳರ್ವಾಯ್ ಕರಂ ಪೊಳೆವ ಪಾಂಗೆ ಕಣ್ಣಿಂದಳು
ರ್ತುಳುಂಕೆ ನಿಡುವುರ್ವುಗಳ್ ಪೊಡರೆ ಬಾಯ ಕಂಪಿಂಗೆ (ಸಾ)
ರ್ವಳಿಪುಕರಮಂದು ಸೀಗುಡಿವೊಲಾಗೆ ನಾಣ್ಗೆಟ್ಟು ಮೊ
ಕ್ಕಳಂ (ಜ) ತಗೆ ಮೆಟ್ಟುವಳ್ ಪಿಡಿದು ಮೆಟ್ಟುವಲ್ ನೋಟ್ಪರಂ (ಚ.ಆ.ಲ೯)

ನುಡಿಗಳೊಳಾಸೆಯುಂಟೆನಲೊಡಂ ತಳೆದಂತಿರೆ ನಿಲ್ಬುತುಮಾ |
ವೆಡೆಯೊಳಮಾಸೆಗಾಣೆನೆನೆ ತೊಟ್ಟನೆ ಪೋಪುವು ನಲ್ಲರಿರ್ವರೀ |
ರೊಡಲೊಳಗಿರ್ಪ ಜೀವಮದುಕಾರಣದಿಂದಮೆ ಪೋಪ ಬರ್ಪೊಡಂ
ಬಡನೊಳಕೊಂಡ ದೊದವರ ಕಯ್ಯಾಳೆ ಕೆಯ್ಯಾಡೆಯಿರ್ಪುದಾಗದೇ (ಚ.ಆ.ಸಂ. ೧೦೪)

ಪೊನ್ನ ಕವಿಯ ಶಾಂತಿ ಪುರಾಣ

ಬಗೆ ಮತ್ತೊಂದೆನೆಯುಂ ಗೆ
ಯ್ಯೊಗಮಿತ್ತೊಂದೆನೆಯುಮಂಗುಳೀ ನಖಚಯಕಾಂ
ತಿಗಳನವಗೆಯ್ಸಿ ಸತಿ ಪಾ
ನಗೆಯ ದೆಸೆದೆಗೆಗೆ ಪೊರಳ್ಚಿದಂ ಮತ್ತೊರ್ವಂ (ಪಂ. ಆ.ಪ. ೧೦೫)

ಪೊಗಟ್ಪಾಕೆ ಮಾಣೆ ನಾಣೆನಿ
ಸಗತಿ ನಯಂ ಬೀಡೆ ದಿಟ್ಟ ನೆಯ್ದಿಲ ಪೊಸವಾ
ಸಿಗದೊಳೆಣೆಯೆನೆ ಕುಮಾರನ
ಪೆಗಲೊಳ್ ನೆಲೆನೆ (ಡೆ)ಯೆ ಮಾಲೆ ಮಾಡಿದ ತೆಟದಿಂ (ಪಂ.ಆ.ಪ.೧೫೮)

ಕಣ್ಬಟತನದಿಂ ಪೇಟಲ್
ನಾಣ್ಚರೆ ತನ್ನೊಳಗನಬಲೆ ಪೊಟ ಪೊಣ್ಮೆದುದಾ
ಕಣ್ಚೆಲ್ಲದ ಬಳಸುವ ಕಡೆ
ಗಣ್ಬಪಳತೆಯೊಡನಲಂಪು ಪೊಱಪೊಣ್ಮುವಿನಿಂ (ಷ.ಆಪ.೧೬೦)

ಪಗಲೆರ್ದೆಗೊಂಡ ತನ್ನ ಸಮಕಟ್ಟನಿರುಳ್ ಮಱೆದಂತೆಗೆಯ್ದಮೆ
ಲ್ಲಗೆ ಮಱೆದೊಂದಿದಂತುಸಿರದಾನಿರೆ ಕೂಟದ ಚಿತ್ತವೃತ್ತಿಯಂ
ಬಗೆಯನೆನುತ್ತಟಲ್ದಳ ಕುಚಾಂತರದೊಳ್ ಕೊಳಗೊಂಡು ಮೋಹವ
ಲ್ಲಿಗೆ ಬಿದಿ ತಿರ್ದಿ ಸುತ್ತಿಸಿದ ನೀರ್ಗಣೆಯಾದುದು ಬಾಷ್ಪಮೋಪಳಾ (ಅ.ಆ.ಪ.೯೨)

ಜನ್ನ ಕವಿಯ ಅನಂತನಾಥ ಪುರಾಣ

ತುಳುಕುವ ನಲ್ಲಳ ನೀರ್ವೊಯ್
ತೆಳಕಿದವೊಲ್ ಮಱುಕೆ ಮುನ್ನೆ ಕಣ್ಬೇಟದವಳ್
ತುಳಿಕಿದೆಡೆಗೆಯ್ದಿ ಚುಂಬಿಸಿ
ಚುಳುಕಾಡೆ ಮರಳ್ಚಿ ಮಾಡಿದಂ ಸ್ಮರನೋರ್ವಂ (ಸ.ಆ.ಪ.೩೮)

ನೋಡೆನೆ ಕಣ್ಗಳೆಂಗಯಿಸಲಾರ್ಪಡೆ ಗಂಡರ ಗಾಡಿಗೊಲ್ದು ಮಾ
ತಾಡೆನೆ ಬೆಂದ ಬಾಯ್ಪೊಱಗೆ ಮಚ್ಚೆ ಮುಸುಂಕದೊಡಿಚ್ಚೆಕಾಱದೊಳ್
ಕೂಡೆನೆ ತೋಳ್ಗೆ ಕೊಕ್ಕರಿಕೆ ಹುಟ್ಟಿದೊಡಿಂತೆನಗೆನ್ನ ಲೇಸನ
ಟ್ಟಾಡಿಪುವರ್ಥಿಯೇ ಹರಸಿ ಹುಟ್ಟಿದೆನೇ ನಿನಗೆಂದು ವಲ್ಲಭಾ (ಅ.ಆ.ಪ.೨೭)

ಇನಿಯರ್ ಬಿಚ್ಚದೆಮಚ್ಚಿ ಬಾಳ್ಗೆ ಸೊಬಗಿಂ ಸೊಕ್ಕೇಟಿದಿರ್ ಬೀಟ್ಗೆ ಕಾ
ಮನ ಕೊರಂಬಿನ ಕೋಳ್ಗೆ ಸುಗ್ಗಿ ಪೊಸವೆಳ್ದಿಂಗಳ್ ಬನಂ ಬಂದಮಾ
ವಿನಿತುಂ ತಣ್ಣೆದುವಕ್ಕೆ ತಂಬೆಲರ್ಗಳಿಂ ತಣ್ಣಾಲೊಳೆಂದೊರ್ವಳ
ಚ್ಚನೆಯಾಟಂ ಸತಿ ಬೇಟ ದೇವತೆಗೆ ಪಾನೋನ್ಮತ್ತಿ ನಿಂದಾಡಿದಳ್ (ಅ.ಅ.ಪ.೩೦)

ಮುಸುಕಂ ಗಾಡಿಯುಮೊಂದೆ ನಿನ್ನ ಪರಿಯಂದಂ ನಿಂದು ನೀಂ ಬಂದೆಯಂ
ದುಸಿರ್ದಾನಟ್ಟಲೊಡಂ ಪೊರಳ್ದು ತಳಿರ್ದಾಸಿಂದೆಟ್ಟು ಕೈಮೀಟೆ ಜೋ.
ಲ್ದು ಸಡಿಲ್ದುಳ್ಳುಡೆಯಂ ಬಳಿಲ್ಮುಡಿಯುಮಸ್ತವ್ಯಸ್ತಮಾಗೆಯ್ದೆವಂ
ದಸಿಯಾಳ್ ಕಾಣದೆ ನಿನ್ನನೆನ್ನ ಕೊರಲಂ ಜೋಲ್ದತ್ತಳುದ್ವೇಗದಿಂ (ಅ.ಆ.ಪ.೪೯)

ನೋಡುವ ಕಣ್ಗೆ ಮೆಯ್ಸವಿಯ ಮಾಡುವ ಕೂರುಗುಮೊಯ್ಗೆಮೆಯ್ಗಳಂ
ನೀಡುವ ಬಾಯ ಬಾಕುಳಕೆ ಪಲ್ಲಟಮಾಡುವ ಬಯ್ದು ಬಯ್ಗುಳಂ
ಬೇಡುವ ಹೊಯ್ದು ಹೊಯ್ಗೆ ಪುಳಕಾವಳಿಮೂಡುವ ಗಂಡು ಹೆಣ್ ತಡಂ
ಮಾಡುಗು ಮಾಡೆ ಕೂಡೆ ಕಳೆಗೂಡುವಲಂಪಿನೊಳೊಲ್ದು ಕೂಡಿದರ್ (ಅ.ಅ.ಪ.೫೦)

ಒಡನೊಳಪೊಕ್ಕು ಮೆಯ್ಗೆ ಪುಳಕಂಗಳ ಕೀಲಮರ್ದಪ್ಪುಕಾಳಸಂ
ಬಡೆದಿರೆ ಕಾಸಿ ಬೆಚ್ಚು ತೊಳೆದಂತೆ ಬೆಮರ್ ತಿಳಿದೇಟೆ ಪೀರ್ದು ಬಾ
ಯ್ಬಡಗಿದೊಡಂಕಿನಿಂತೊಳಗೆ ಪೊಂದಿದೊಡಂ ಕಿರೆ ಪೊಲ್ತರೋಪರಿಂ
ಪಡರ್ದ ರಥಾಂಗದೊಳ್ ಸಮನೆ ಸಂಪುಟದಿಂ ಸಮೆದಿರ್ದ ನಾರಿಯಂ (ಅ.ಅ.ಪ.೫೧)

ಪಂಪಭಾರತ

ಶೌರ್ಯ ವರ್ಣನೆ

ಉಳ್ಕೊದುಗಳೊಳಗೆನಿತಱ
ವುಳ್ಳರ್ಗಂ ತಿಳಿಪಲರಿಯದೆನಿಪೆಡೆಗಳುಮಂ
ತೆಳ್ಳಗಿರೆ ತಿಳಿಪುಗುಂ ಬೆಸ
ಗೊಳ್ಳೆ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ (ದ್ವಿ.ಆ.ಪ.೩೫)

ಅವರಿವರನ್ನರಿನ್ನರೆನವೇಡರಿಕೇಸರಿಗಾಂಪನಿಲ್ಲ ಮಿ
ಱುವ ತಲೆದೋರ್ಪ ಗಂಡರಣಮಿಲ್ಲೆಡೆಯೊಳ್ ಗೆಡೆವಚ್ಚುಗೊಂಡು ಪಾಂ
ಡವರನ ಕಾರಣಂ ಕೆಣಕಿದೀ ಪೊಸ ಪೊಟ್ಟಿಜ್ಗೊಳಾದ ಕಿರ್ಚು ಕಾ
ರಪರ್ಗಿದು ನಾಡೆಯುಂ ತಿಣುಕನಾಗಿಸದೇಂಗಳ ಸಯ್ತು ಪೋಕುಮೇ (ದ್ವಿ.ಆ.ಪ.೮೭)

ನುಡಿವುದೆನೆ ಮಱೆದು ಪೆಱತಂ
ನುಡಿಯೆ ಕೆಲರ್ ನೋಡದಂತೆ ನೋಡೆ ಕೆಲರ್ ಪಾ
ವಡರ್ದವೊಲಿರೆ ಕೆಲರೊಯ್ಯನೆ
ತುಡುಗೆಯೆನೋಸರಿಸೆ ಕೆಲರುದಗ್ರಾವೆನಿಪರ್ (ತೃ.ಆ.ಪ.೫೦)

ಕೊಂಡಪುದುರಿ ಬನಮನದಂ
ಕಂಡೆಂತಿರಲಕ್ಕುಮೆಂದು ತಾಗಿದ ನೆಗಟ್ಟೊ
ಳ್ಗಂಡರ ಗಂಡೋಡುವಿನಿಂ
ಕೊಂಡವು ಗಾಂಡೀವ ಮುಕ್ತ ಬಾಣ ಗಣಂಗಳ್ (ಪಂ.ಆ.ಪ.೮೮)

ಎರಡು ರಥಮೊಳವು ನೋಟ
ಕ್ಕೆರಡಜೊಳವನೊಂದು ರಥಮೆ ತೋಟಿಗೆ ಪಲವಾ
ಗಿರೆ ಪರಿದು ಕಣ್ಣೊಳಿನ್ನುಂ
ತಿರಿದಪುದುರಿಪುದು ನಮ್ಮ ಬನಮೆನಿತನಿತುಂ (ಪಂ.ಆ.ಪ.೯೫)

ಪಗೆಸಾಱುವುದಂ ಕೊಲ್ಲೆಂ
ಪಗೆ ಸಾಱುದ ನಿನ್ನನಾರ ಮೆಱೆಯಂ ಪೊಕ್ಕುಂ
ಪಗೆಯಂ ನೆಱಪೆನೆ ನೆಱಪುವ
ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೋಣೆಯಂ (ಪಂ.ಆ.ಪ.೧೦೦)

ಮುಡಿಯಂ ಪಿಡಿದೆಳೆದವನಂ
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ

ಮುಡಿಯಿಸುವಿನೆಗಂ ಮುಡಿಯಂ
ಮುಡಿಯೆಂ ಗಡ ಕೇಳಿಮೀಗಳಾನ್ (ನುಡಿ) ನುಡಿದೆಂ (ಸ.ಆ.ಪ. ೧೦)

ಪೊಳೆದುಳ್ಳುವ ಕುಡು ದಾಡೆಯ
ಪೊಳಪು ನೊಸಲ್ಗಡರ್ದು ಪೊಡರ್ವ ಪುರ್ವಸೆವಿನಮು
ವ್ವಳಿಸುವ ಮುಳಿಸಿನ ದಳ್ಳುರಿ
ಗಳನುಗುಳ್ವಪೊಲುಗುಳ್ದನಸುರನುರಿವ ಪಟಿಗಳಂ (ಷ.ಆ.ಪ.೫೯)

ನಜಿದುದನುಜಿದೀ ಕಿಜಿಯವ
ನಜಿಯದೆ ಕೆಡೆ ನುಡಿದನಪ್ಪೊಡಂ ನೊಜುವರಂ
ನೆಜೆ ನಲಿಸುವುದೆಂದುದನಾಂ |
ಮಜಿವೆನೆ ಬಯ್ ಬಯ್ಕೆ ಸಲಿಸುವೆಂ ನೂಜುವರಂ (ಷ.ಆ.ಪ. ೬೧)

ಕಡು ಮುಳಿದು ನಿನ್ನ ತೊಡೆಗಳ
ನುಡಿವೆಡೆಯೊಳ್ ಭೀಮಸೇನನಾನಾ ಪದದೊಳ್
ಪಿಡಿಯಲ್ಕೆಂದಿರ್ದೆನಿದಂ
ಪಿಡಿಯಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ (ನ.ಆ.ಪ. ೫೯)

ಪಗೆಯಂದಮುಮಾ ರಾಮರ
ಪಗೆಯೊಳ್ ಸಮಮವರ ಪಿಡಿವ ಬಿಲ್ ಬಿಲ್ಲೆಮ್ಮಂ
ಬುಗುಳುಮವರಿತ್ತ ನಲ್ಲಂ
ಬುಗಳನೆ ಬಟಿಗಾಯದಂತು ಚಲಮನೆ ಕಾವೆಂ (ದ್ವಾ.ಆ.ಪ ೬೯)

ರಸೆಯಿಂದಮೊಗೆದು ಪಡೆಗಳ
ಪೊಸ ಮಾಣಿಕದಳವಿಸಿಲ್ಗಳೊಳ್ ಪೊಸದಳಿರೊಳ್
ಮುಸುಕಿದ ತೆಱದಿಂದೆಸೆದಿರೆ
ಪೊಸತೆನೆ ನೆಡೆ ನೋಡಲುಗರಗ ರಾಜಂ ಬಂದಂ (ದ್ವಾ.ಆ.ಪ. ೧೪೧)

ಪಸರಿಸಿ ಪಂದಲೆತಿಯಂ ಮೆ
ಟ್ಟೆಸಿ ವೈರಿಯ ಪಲ್ಲ ಪಣೆಗೆಯಂ ಬಾರ್ಚಿ ಪೊದ
ಜ್ವೊಸಗೆಯಿನವನ ಕರುಳೊಳೆ
ಪೊಸವಾಸಿಗ ಮಾಗೆ ಕೃಷ್ಣಯಂ ಮುಡಿಯಿಸಿದಂ (ದ್ವಾ.ಆಪ. ೧೫೫)

ಒಸರ್ವ ಬಿಸು ನೆತ್ತರಂ ರ
ಕ್ಕಸನಂದದೆ ಕುಡುದು ಕುಡಿದು ಕಂಡಂಗಳನ
ರ್ವಿಸೆ ಮೆಲ್ದು ಕರ್ಬಿನ
ರಸಕ್ಕಮಿನಿಸಿಂಪುಗಾಣೆನೆಂದನಿಲಸುತಂ (ದ್ವಾ.ಆ.ಪ. ೧೫೭)

ಸವಿ ಸವಿದು ಬಿಕ್ಕ ಬಿಕ್ಕನೆ
ಸವಿ ನೋಡೆನ್ನಾಣೆಯೆಂದು ರಕ್ಕಸಿಗಮದಂ
ಸವಿದೋಜೆ ನೆತ್ತರೆಲ್ಲಂ
ತವೆ ಮುಳಿಸಿಂದವನ ಕರುಳ ಪಿಣೆಲಂ ನೊಣೆದಂ (ದ್ವಾ.ಆ.ಪ ೧೫೮)

ಬೆಳಗುವ ಸೊಡರ್ಗಳ ಬೆಳಗ
ಗ್ಗಳಿಸುವವೋಲ್ ಪೋಪ ಪೊಟ್ಟಜೋಳ್ ತೇಜಂ ಪ
ಜ್ಜಳಿಸೆ ತಟತಟಿಸಿ ತೊಳ ತೊಳ
ತೊಳಗಿದನಸ್ತಮಯ ಸಮಯದೊಳ್ ದಿನಪಸುತಂ (ದ್ವಿ.ಆ.ಪ.೨೧೦)

ನೆನೆಯವಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಬೆತ್ತದಿಂ
ನೆನೆವೊಡೆಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡು ನನ್ನಿ ಕರ್ಣನಳಿವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾಲೆನೊಳ್ ಪುದಿದು ಕರ್ಣ ರಸಾಯನಮಲ್ತೆ ಭಾರತಂ (ದ್ವಾ.ಆ.ಪ.೨೧೭)

ಬದ್ದವಣದ ಪಱೆಗಳ್ ಕಿವಿ
ಸದ್ದುಂಗಿಡೆ ಮೊಟಗೆ ದೇವ ದುಂದುಭಿ ರವಮೊಂ
ದುದ್ಘಾನಿ ನೆಗಟೆ ಮುಗುಳಲ
ರೊದ್ದೆ ಕರಂ ಸಿದ್ಧಮಾದುದಂಬರ ತಲದೊಳ್ (ದ್ವಾ.ಆ.ಪ.೨೧೮)

ಸಿಡಿಲೊಳೆ ತಳ್ತು ಪೋರ್ವ ಸಿಡಿಲಂತಿರೆ ಬಾಳೊಳೆ ಬಾಳ್ ಪಳಂಚಿ ಮಾ
ರ್ಕಿಡಿ ೯ವಿಡೆ ನೋಡಲಂಜಿ ದೆಸೆ ದೇವತೆಗಳ್ ಪಱಿಪಿಂಗೆ ತೋಳ್ ತೀನ್
ರೆಡೆ ನಲಿದೊಂದೆರಟ್ಟುದುರೆಯಟ್ಟೆಯುಮೊಂದೆರಡಾನೆಯಟ್ಟೆಯುಂ
ತೊಡರ್ದೊಡನಾಡೆ ತಳ್ತಿಱಿಯದಿರ್ದೊಡೆ ಜೋಳಮನೆಂತು ನೀಗುವೆಂ (ದ.ಆ.ಪ.೪೨)

ಬಡಿಗೊಳೆ ಬಿದು ಬಿಬ್ಬರ ಬಿರಿ
ದೊಡನುಗೆ ಪೊಸ ಮುತ್ತು ಕೋಡನೊಱಿ ಮದೇಭಂ
ಕೆಡೆದುವು ಕೊಲ್ಲದಿರೆಂದಿರ
ದಡಿಗೆಱಗುವ ತೆಱನನಿಸನನುಕರಿಸುವಿನಂ (ದ.ಆ.ಪ.೧೦೩)

ಇಱಿವಂತು ನಿನಗೆ ಮನದೊಳ್
ತಱಿಸಲವುಂಟಪ್ಪೊಡೆಲವೊ ದೇವೇಶನನೇಂ
ಸೆಱೆವಿಡಿದೆ ತೊಲಗು ದೇವನ
ಮಱೆಯಂ ಬಳಿಕಱೆಯಲಕ್ಕುಮೆನಗಂ ನಿನಗಂ (ದ.ಆ.ಪ.೧೨೧)

ಜನ್ನ ಕವಿಯ ಅನಂತನಾಥ ಪುರಾಣಂ

ನೀತಿ ಪದ್ಯಗಳು

ಎನ್ನದೊಡಲೆನ್ನದೊಡಮೆಯಿ
ದೆನ್ನದು ಸಂಪತ್ತಿಯೆಂದು ಮೆಱುಗದೆ ಪೆಱತೆಂ
ದೆನ್ನ ದೊಡಲೆನ್ನದೊಡಮೆಯಿ
ದೆನ್ನದು ಸಂಪತ್ತಿಯೆಂದೊಡಾತನೆ ಚದುರಂ (ತೃ.ಆ.ಪ ೭೦)

ತೃಣಮುಂ ತೆನೆವೋದ ಬಟಿ
ಕ್ಕೊಣಗುವುದದಱಿಂದೆ ನರರ ಬಾೞ್ ಲಘುಕಾಲಂ
ಹಣಿದದ ಪೊಯಿಲ್ಗೆ ಮೊದಲ್ನಡು
ಕಣೆಯೆನ್ನದಿದೆಳೆವ ಜವ್ವನಂ ಮುಪ್ಪೆನ್ನಾ (ತೃ.ಆ.ಪ ೭೧)

ಅಱಿಪಿನ ಮೋಹದಿಂ ತೋಡದರ್ದು ಬಟ್ಟಪೆನೆಂದೊಡೆ ರಾಜ್ಯಲಕ್ಷ್ಮಿ ಮು
ನ್ನಟೆಯದದೇಕೆನಲ್ ನೆಲಸದಾಯು ಕರಂ ಚಲವೀಚಿಯಂತೆಯೇ
ಕುಟಿದಪೆನೆಂಬ ಜೋಡೆಯನೆ ಮುನ್ನುಟಿದಿರ್ಪ ವಿವೇಕಿಯಂತೆ ತಾ
ನುಟಿದೊಡೆಟಲ್ ಬಿಟಲ್ಪದು ಸುಖಂ ತವದೊಪ್ಪುವುದಾತ್ಮಗೌರವಂ (ತೃ.ಆ.ಪ. ೮೦)

ಉಡಿದೊಡುಡಿಸಿಕೊಂಡಂ ಕೊಂ
ಡಾಡಿದೊಡಂ ಮತ್ತಮಱಿವ ತನು ಉಟಿದಪುದೇ
ಕೋಡಗದ ಕೆಯ್ಯಮಾಲೆಗೆ
ಬಾಡಿರ್ಪುದೆಂದು ಬಟಿದೆ ನೀರ್ದಳಿವಂದಂ (ನ.ಆ.ಪ. ೨೨)

ಕೊಯ್ಯ ಪೊರಳ್ಚಿ ಕುತ್ತೆಮೊಜೆದಿಕ್ಕಿ ಪಡಂಗಡಿದೊಟ್ಟಿನೆತ್ತಿಯಂ
ಪೊಯ್ಯೆ ಬಟಲ್ದು ವೈತರಣಿಯಂ ಪುಗೆ ಕಾಯ್ದುಱಿಲೋಹವಾರಿ ಚುಂ
ಚುಯ್ಯೆನೆ ಸುಟ್ಟು ಹುಣ್ಣರಳೆ ಮೈಯನಿತಂ ಬಗಿಯಾಗಿ ಬಾಯ್ಗಳಿಂ
ಹುಯ್ಯಲನಿಕ್ಕುವಂ ಕೊಳಱಿ ಕೊಳ್ಗುದಿಗೊಂಡು ಮಗ್ಗುವರ್ (ನ.ಆ.ಪ. ೩೨)

ಕಡಿದೊಡೆ ಕೋದೊಡೆ ಸೀಳ್ದೊಡೆ
ಬಿಡಿಸಿದೊಡೆ ಬಿಸುಟ್ಟೊಡುರುಪಿ ಸುಟ್ಟೊಡೆ ಹಳೆಯಂ
ತೊಡಲಿರ್ಪುದು ವಿಕ್ರಿಯೆಯಿಂ
ಸುಡು ಸುಡು ನಾಯಕರ ನಮೆವ ಸಮೆಯದ ಸಾವಂ (ನ.ಆ.ಪ ೩೯)

ಏಱಿ ಬರೆಗೊಂಡ ಜೂದಂ
ಗಾಱನವೊಲ್ ಲಗ್ಗೆ ಮಾಡಲೊಲ್ಲದೆ ಪಡೆಯಂ

ಸಾಱಿಸಿ ಮುಂತಂ ಪಿಂಗುವ
ನೀಱಿಯವೊಲ್ ತೆಗೆಯವೇಱ್ವೆನಾ ವಸುಕ್ಷೀಣಂ (ದ್ವಾ.ಆ.ಪ ೨೭)

ಪೊನ್ನ ಕವಿಯ ಶಾಂತಿ ಪುರಾಣ

ಒಸೆದಟ್ಟಿದನಟ್ಟದ ವಿಭು
ಗೆ ಸಂತಸಂ ಮಾಡಿ ಬರೆದ ಮಾಱೋಲೆಯನೆ
ಯ್ದಿಸಿದೊಡೆ ನಡೆಯುತ್ತುಂ ಬಾ
ಚಿಸಿ ತಡೆಯದೆ ಬರ್ಕುಮಿರ್ಕುಮೇ ಖಚರೇಂದ್ರ (ಪಂ.ಆ.ಪ. ೩೫)

ಬನದಿಂದಂ ಬನದಾನೆಗಳ್ ಪಿಡಿಗಳಂ ಮುಂದಿಟ್ಟು ಪೋಪಂತೆ ಕಾ
ಮಿನಿಯರ್ಕಳ್ವೆರಸಾರ್ಯಕಾತ್ಮತನುಗಳ್ ತತ್ಕಾಲದೊಳ್ ಮಾಯಾ ಮಾ
ಗೆ ನೆಟಲ್ವಚ್ಚೆಯ ರೂಪಿನಂತೆ ತಳಿರ್ದರ್ ಸೌಧರ್ಮ ಕಲ್ಪಕ್ಕೆ ಭಾ
ವನೆ ಜೈನೋಕ್ತಿಯೊಳಾಗೆ ದುರ್ಗತಿಗಮಾ ಜೀವಕ್ಕಮೇಂ ಸಮ್ಮದಂ (ಸ.ಆ.ಪ. ೧೨)

ಆಱುದಿಂಗಳ್ವರೆಗಂ ಪೆಱ
ಪೆಱವನನುಷ್ಠಿಸದೆ ಬೆನಪದಾಂಭೋರುಹದೊಳ್
ನಿಱಿಸಿ ಮತಿಯಂ ಸುರರ್ ಕ
ಯ್ನಿಱಿ ನಿಱಿದೊಡನೊಡನೆ ಪೊಗಟೆ ತಱೆಸಂದಮರರ್ (ಸ.ಆ.ಪ ೩೯)

ಹುರಿಗಡಲೆಯಂತಾನುಂ ಕಾಯ್ದೂಱಿದೋಡಿನ ಜೋಳದೊ
ಳ್ಪರಳಲರುವಂತಾನುಂ ಕಾರ್ಗೆಯ್ಯ ಮೇರೆಯೊಳಿಟ್ಟ ಕೆ
ಕ್ಕರಿಕೆ ಬಿರಿವಂತಾನುಂ ಮೆಯ್ ಬಿರ್ಕು ಬಿರ್ಕೆನೆ ನಿಬ್ಬರಂ
ಬಿರಿದೊಳಱುಗುಂ ಜೋಲ್ಗುಂ ವೈಚಿತ್ರ್ಯಜೀವರ ರೂಪದಿಂ (ಸ.ಆ.ಪ. ೮೨)

ಪೊಗಟ್ದರ್ ತಮ್ಮಱಿವನಿತನೆ
ಪೊರಟ್ಪಿಪಮೆಗಳುಂಬಮಾದ ಜಿನನಂ ಕೆಟ್ಪೊ
ವಿಗೆ ಬೆಳಗುವನಿತನಲ್ಲದೆ
ದಿಗವನಿಗಗನಾಂತರಾಳಮಂ ಬೆಳಗುಗುಮೇ (ದ.ಆ.ಪ. ೧೯)

ರನ್ನನ ಅಜಿತ ತೀರ್ಥಂಕರ ಪುರಾಣಂ

ತನಗಲ್ಲದೊಡಲ್ಗೊಡಮಗೆ
ಮನಮಿಟ್ಟುಪವರ್ಗಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೆಱೌತ್ಮವಂಚಕರ್ ಪೆಱರೊಳರೇ (ದ್ವಿ.ಆ.ಪ. ೫೫)

ಮುನಿದುಯ್ವ ಜವಂಗಂ ಮಾ
ಯನಲಮ್ಮುವರಿಲ್ಲ ಬಗೆಯೆ ನಿನನಿನ್ನಾರ್ಮಂ
ಜಿನಧರ್ಮಮೊಂದೆ ಜೀವನೆ
ನೆನೆ ಗಡ ಲೋಕತ್ರಯಕ್ಕೆ ದಿನನಂ ಜೀನನಂ (ದ್ವಿ.ಆ.ಪ. ೫೭)

ಎನಿತಂ ಕುಕ್ಕುಟಿಗುದಿದಪೆ
ಯನಿತಂ ಕಕ್ಕಳಗಟಲ್ದಪಯ್ ಜೀವನೆ ನೀ
ನೆನಿತಂ ಮಲ್ಮಲ ಮಱಗುವೆ
ಯೆನಿತಂ ಸಂಸಾರದೊಳಗೆ ತಿಱ್ಱನೆ ತಿರಿವಯ್ (ದ್ವಿ.ಆ.ಪ. ೬೧)

ಜೀವನಟ್ಟಿಕೊಲ್ವ ಕೊಲೆಗಾ
ಜವಂ ಜವಸ್ಥಿತಿಗೆ ಮೆಯ್ಯ ನೀರ್ ತಗೆವನ್ನಂ
ಜವ ಜವ ಜನನಂಜಸಿದವು
ಜವನಾಳೂಳ ತೆಱದಿನೆನ್ನ ಕೆನ್ನೆಯ ನೆರೆಗಳ್ (ದ್ವಿ.ಆ.ಪ. ೬೯)

ಬಡಿವ ಪಿಡಿದುಡಿವ ಕಟ್ಟುವ
ಕಡಿವ ಕರಂ ಜಡಿವ ಬಯ್ದುನುಡಿವ ತೊಡರ್ಪಂ
ತೊಡರಿಸುವ ನರಕಗತಿಯೊಳ್
ತೋಡರ್ವುದೆ ತೊಡರದೆ ಜಿನೇಂದ್ರಮತದೊಳ್ ಹಿತದೊಳ್ (ದ್ವಿ.ಆ.ಪ. ೭೦)

ಏಱುವ ಪೇಱುವ ಮೂಗಿನೊ
ಳೂಱುವ ಮಣಿಗಟ್ಟಿ ತೋಱುವೊಯ್ಯಂಗಡಿಯೊಳ್
ಮಾಱುವ ತಿರ್ಯಗ್ಗತಿವುಗ
ಲಾಱದೆ ನರಗತಿಗೆ ಬಯಸುವೆಗ್ಗರುಮೊಳರೇ (ದ್ವಿ.ಆ.ಪ. ೭೧)

ಮೇಲೆನಿಸುವ ಜಿನಧರ್ಮಂ
ಪೋಲದು ಪೆಱಪೆಱರ ಪೇೞ್ವ ಧರ್ಮದ ತೆಱನಂ
ಪಾತಿಂಬ ತೆಱದೆ ಪಶುವಿನ
ಪಾಲಂ ಪೋಲುವುದೆ ನಾಯ ಕಳ್ಳಿಯ ಪಾಲ್ಗಳ್ (ದ್ವಿ.ಆ.ಪ. ೭೭)

ಬಳೆ ಕಣ್ಬೆರ್ದುವು ಕಣ್ಬಾ
ಯ್ಬುಳೆಯೊ (ಯಿತ್ತ) ಳಿಪುವೆತ್ತಮಟ್ಟಿವೋಪಿನೆಗಂ
ಬಳಸಿ ಬಲವಂದು ನೋಡುವೆ
ಯಳವೆಂಡಿರನವರೊಳಜ್ಜು ನಿನಗೆಂ ಕಜ್ಜಂ (ದ್ವಿ.ಅ.ಪ. ೯೫)

ಕಡುಗೊರ್ಪಿಲ್ಲದ ಕರವಾಳ್
ಕಡುಪಿಲ್ಲದ ಕುದುರೆ ಗಾಡಿಯಿಲ್ಲದೆ ಬೆಲೆವೆಣ್
ನಡೆಯಿಲ್ಲದ ಕರ್ತೆ ಮನ
ಕ್ಕೆಡಂಬಡಂ ಮಾೞ್ಕುಮರ್ತಿಯಂ ಮಾಡುಗುಮೇ (ಷ.ಆ.ಪ. ೯೬)

ದೊಣೆಯಿಲ್ಲದ ಬಿಲ್ಲಾಳ್ ಬಿ
ನ್ನಣಮಿಲ್ಲದೆ ಕಿಱಿಪು ಮಂತ್ರಿಯಿಲ್ಲದರಸು ಮ
ನ್ನಣೆಯಿಲ್ಲದ ನೃಪೋಲಗ
ಮಣೆಯಿಲ್ಲದ ಜಕ್ಕಾವಕ್ಕಿ ಸೊಗಯಿಸಿದಪುದೇ (ಷ.ಆ.ಪ. ೯೭)

ಮಲ್ಲಿಲ್ಲದ ಬಳಮುಂ ಮೂ
ಗಿಲ್ಲದ ಮೊಗಮಾನೆಯಿಲ್ಲದರಮನೆ ಸಂಪ

ತ್ತಿಲ್ಲದ ಮಾನಸವಾಳ್ ದಯೆ
ಯಿಲ್ಲದ ಧರ್ಮಂ ಮನಂಗೊಳಲ್ ನೆಱೆದಪುದೇ (ಷ.ಆ.ಪ. ೯೮)

ಕಳೆ ಸಿರಿಗನ್ನಡಿಯಂ ಮಂ
ಗಳವಸದನಮೇವುದಕ್ಕೆ ಕಾಲಲತೆಗೆಯಂ
ಕಳೆ ತೊಡೆದು ಕಣ್ಗೆ ಕಜ್ಜಲ
ವಿಳಾಸವಿನ್ನೇವು ದೆಮಗವೇಗೆಯ್ವಪುವೋ (ಷ.ಆ.ಪ. ೧೦೬)

ಪಿರಿದುಂ ಪುಣ್ಯದೆ ಪತಿಯಂ
ಪರಮೇಶ್ವರ ಪಡೆದು ನಿನ್ನನಾವನುಭವಿಸು
ತ್ತಿರಲೆಯ್ದೆ ಪಡೆದೆಱಿಲ್ಲಂ
ತರಾಯವಾಯ್ತೆಮಗದೊಂದು ವಿಧಿವಶದಿಂದಂ (ಷ.ಆ.ಪ ೧೧೩)

ಕಡುಚಪಲನಿವಂ ತನಗೇ
ಗಿಡುಗುಮೋ ಪರದುಃಖಶೀತಲಂ ಮೆಚ್ಚಿದವೊಲ್
ನುಡಿದಪನೆನ್ನದಿರೆನ್ನೀ
ನುಡಿ ನಿನಗೆ ಹಿತಾರ್ಥಮೆಂದೆ ಬಗೆ ಗಡ ನೃಪತೀ (ದ.ಆ.ಪ. ೬)

ಬೆಸನಂ ಬೆಸಸೆನೆ ಸಗರಂ
ಬೆಸನೇಂ ಮಕ್ಕಳಿರ ನಿಮಗಮೆಂದಿಂತೀಗಳ್
ಬೆಸಕೆಯ್ಯದರುಮನೆನಗಂ
ಬೆಸಕೆಯ್ಸಲ್ ಚಕ್ರರತ್ನಮಿರ್ದಪುದತ್ತೀ (ದ.ಆ.ಪ ೮)

ಮಱೆವುದು ದುಃಖಮನಱಿವಂ
ಮಱೆವುದು ಸೈರಿಪುದು ಮುಂತೆ ನೀಂ ಪೋಗಾನುಂ
ಪೆಱಗನೆ ಬಂದಪೆನೆಂಬೀ
ತೆಱನಲ್ಲದೆ ಜವನ ಬಾಱಿಯೊಳ್ ಬರ್ದುಕುವರಾರ್ (ದ.ಆ.ಪ. ೨೧)

ಬಡವಂ ಬಾೞ್ಗೆಂಗುಮೊ ಸಿರಿ
ಯೊಡೆಯಂ ಮಾಣ್ಗೆಂಗುಮೋ ತಪಸ್ವಿಗಳಿವರಂ
ಕಡೆಗಣಿಸುವೆನೆಂಗುಮೊ ಪೆ
ಣ್ಬುಡೆಯಂಗುಮಾ ತುಱಿದು ಪರಿಗುಮಂತಕರಾಜಂ (ದ.ಆ.ಪ. ೨೩)

ಆಯು ನೆಱೆವಿನೆಗಮಿರ್ಪನೆ
ಜಾಯೆಂಬನೆ ಮಾಣ್ಬನಿಂದಿನೊಂದಿವಸಮನ
ಧ್ಯಾಯಂ ಮಾಡುವನೆಂಬನೆ
ಬಾಯಱಿದಱೆಯಱು ಜನಂಗಳಂ ಜವನೊಯ್ಗುಂ (ದ.ಆ.ಪ. ೨೪)

ಕಟ್ಟಿದ ಕುಱಿಗಳ್ ಬೋನೆದೊ
ಳಟ್ಟೇಱಿಸಿ ಬಯ್ತ್ತ ಬಾಡುಗಳ್ ಬಡ್ಡಿಸಿ ತಂ
ದಿಟ್ಟಾಚಾದ್ಯಂಗಳ್ ಮುಂ
ದಿಟ್ಟ ನೆವೇದ್ಯಂಗಳಂ ತಕಂಗೆ ಜನಂಗಳ್ (ದ.ಆ.ಪ. ೨೭)

ಮೊಱೆಯಿಡೆಯಿಡೆ ಕೂಗಿಡೆಯಿತೆ
ದಱಿದಱಿಯೆಂದೆಱೆದು ಪುಯ್ಯಲಿಡೆಯಿಡೆ ಕೊಲ್ಗುಂ
ಕುಱಿಯಂ ಕೊಲ್ವಂತಿರೆ ತಿಱೆ
ಕೊಱೆಗೊಂಡು ಜಗಜ್ಜನಂಗಳಂ ಯಮರಾಜಂ (ದ.ಆ.ಪ. ೨೮)

ನಿನಗಂ ಬಲ್ಲಿದರೊಳರೇ
ನಿನಗಂ ಮಾರ್ಮಲೆವರೊಳರೆ ನಿನಗಂ ತಲೆದೋ
ರ್ಪನಿತಮರರೊಳರೆ ನಿಜನಂ
ದನರಂ ನೀನಿರೆ ನೃಪೇಂದ್ರ ಕೊಲ್ವರುಮೊಳರೇ (ದ.ಆ.ಪ. ೩೮)

ಕುಡುವುದು ಕಿಚ್ಚಂ ದೇವರ್
ತಡೆಯದೆ ಕತ್ತಿಗೆಯನೆ ಮಗೆ ಬೆಸಸುವುದಿನ್ನೇಂ
ಪಡೆಮಾತೊ ತನಯರಿಲ್ಲದೆ
ತಡೆದಿರ್ಪುದು ತಕ್ಕುದಲ್ತು ಭುವನಾಧಿಪತೀ (ದ.ಆ.ಪ. ೪೦)

ಎನಗುಂಟವರ್ಗಿಲ್ಲಿವರ್ಗುಂ
ಟೆನಗಿಲ್ಲೆನಬೇಡ ತನ್ನ ಗೆಯ್ದುದು ಪೆಱರ್ಗಂ
ತನಗಂ ಪುದುವಲ್ಲದಱಿಂ
ದನುಭವಿಪುದು ತಾನೆ ತನ್ನ ಮುಂ ನೆಱಪಿದುದಂ (ಏ.ಆ.ಪ. ೪೨)

ಪೆಱರ ವಿಭವಕ್ಕೆ ಬಯಸುವ
ಮಱುಗುವ ಗಾವಿಲಿಕೆಯೇಕೆ ಪೇಟ್ ಬಯಸುವೊಡಂ
ಮರುಗುವೊಡಂ ಬರ್ಕುಮೆ ಮುಂ
ಮಱೆದಂ ತಾನಿಂದು ಬಯಸಿ ಮಱಿಗಿದೊಡುಂಟೇ (ಏ.ಆ.ಪ. ೪೩)

ಜನ್ನನ ಅನಂತನಾಥ ಪುರಾಣಂ

ಕವಿ ಕಾವ್ಯ ಪ್ರಶಂಸೆ

ಉಡೆ ಬಾಳಕಿಯರ ಪಱಿ ಕೈ
ದುಡುಕಿಂದಂ ಪಱಿದ ಮುಂಜಿ ಬಾಕುಳೆಯರ ಬಾ
ಯ್ಕಡಿವಡೆದ ಸೆಳೆದು ಬದ್ದೆಯ
ರುಡಿಸಿದೊಡುಡಕಲ್ತ ಕೊರವನಭಿನವಮದನಂ (ಪ್ರ.ಆ.ಪ. ೫೮)

ಪಂಪಭಾರತ

ನಿಂದನೆಯ ಪದ್ಯಗಳು

ಎಮ್ಮಂ ಪಿಡಿದೆಟೆವಂದಿನ
ನಿಮ್ಮದಟುಗಳೀಗೆಳತ್ತ ವೋದವೊ ಪಿಡಿವ
ಟ್ಟೆಮ್ಮ ಬಟಲ್ದರೆ ಕಂಡಿರೆ
ನಿಮ್ಮಳವಂ ನಿಮಗಟೂಗಳೀಯಡೆರಾಯ್ತೇ (ಸ.ಆ.ಪ ೩೯)

ಪರಿಪಿನ ನೀಳದ ಕಡೆಯಂ
ಮರುಳಂ ತವೆನೋಡಲಾಱದಂಬರಂ ತಳಮಂ
ಕರಿದೆಂಬಂತಿರೆ ನಿನ್ನಂ
ನರನೆಂಬುದೆ ನಿನ್ನ ಸಾಹಸಕ್ಕದು ಪಿರಿದೇ (ಕೃ.ಆ.ಪ. ೨೦)

ಬೇಳಲೆ ಬಗೆವೊಡೆ ಹರಿಯೊಡ
ನಾಳೋಚಿಪನೆಂದು ಬಟೆಯನಟ್ಟಿದೆನೆಮ್ಮಂ
ಪಾಳಿಸುವೈ (ನೀನ್) ನಿಮ್ಮೊಡ
ನಾಳೋಚಿಸದೆಮಗೆ ನೆಗಟಲೇಂ ನೆರವುಂಟೇ (ಷ.ಆ.ಪ. ೨೨)

ಗಾಳು ಗೊರವಂ ತಗುಳ್ಚಿ ಪ
ಳಾಳಮನೇನೊಂದನಪ್ಪೊಡಂ ಗಟಿಪಿದೊಡಾ
ಬೇಳು ನುಡಿಗೇಳ್ದು ಕೆಮ್ಮನೆ
ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ (ಷ.ಆ.ಪ. ೨೪)

ಅಳವಱಿಯದೆಗ್ಗು ಬಳವಳ
ಬಿಳಿವಿನೆಗಂ ಪಚ್ಚ ಪಸಿಯ ತುಱುಕಾಱಂಗ
ಗ್ಗಳಿಕೆಯನೆ ಮಾಡಿ ನೀನುಂ
ಪಳಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್ (ಷ.ಆ.ಪ. ೪೬)
ಕುಡುವೇಟ್ಪನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗಟ್ತುವಡೆಗುಮೊ ಪೇಟ್ಪಂ
ಕುಡುವೇಟ್ಗೆಮ ಕುಡುವಣ್ಣಂ
ಕುಡುಗೆಮ ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ (ಷ.ಆ.ಪ. ೪೯)

ಮನೆ ನಿನಗೆ ನಂದಗೋಪಾ
ಲನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ ಪ

ಚ್ಚನೆ ಪಸಿಯ ಗೋವನ್ನೆ ಕರ
ಮ(ನ)ಯದೆ ನಿನ್ನಳವಿಗಳವನಱಿಯದೆ ನೆಗೞ್ದೆ (ಷ.ಆ.ಪ. ೫೨)

ಟೂನಾವೆ ಪಂದಿಯೆಂದೆನಿ
ತಾನುಂ ತೆಱನಾಗಿ ಡೊಂಬ ವಿದ್ಯೆಯನಾಡಲ್
ನೀನಱಿವೆಯುಱದಿದಿರ್ಚಿದೊ
ಡಾನಱಿವೆಂ ನಿನ್ನನಿಲ್ಲಿ ದೆಸವಲಿಗೆಯ್ಯಲ್ (ಷ.ಆ.ಪ. ೫೭)

ಅಱಿಯದಿದಿದಂ ಮಾಡಿದೆನೆ
ನ್ನಱಿಯಮಿಕೆಗೆ ಸೈರಿಸೆಂದು ನೀನ್ ಸಭೆಯೊಳ್ ಕಾ
ಲ್ಗೆಱಗೆಱಗು ಕೊಲ್ಲೆನೆಂದೆರ್ದೆ
ತೆಱೆವಿನೆಗಂ ಹರಿಯ ನೆಱನನಸುರಂ ನುಡಿದಂ (ಷ.ಆ.ಪ. ೫೮)

ಬರವಂ ಬೇಡಿದರ್ಗೀವ ದೇವನೆ ವಲಂ ನಾಣ್ಗೆಟ್ಟು ಬಂದೆನ್ನನ್ನಿಂ
ತೆರೆದಂ ಬರ್ದರೊಳಾನೆ ಬ ನೆನುತುಂ ನೇರ್ವಲ್ಲಿ ಕೆನ್ನೆತ್ತರುಂ
ಬರಿ ಕಂಡಂಗಳೆ ಬೀಟಿಲುಣ್ಮೆ ಮನದೊಂದಣ್ಮಿಟ್ಟಳಿಂ ಪೊಣ್ಮೆವೀ
ರ ಸಕ್ಕಾಗರಮಾಯ್ತು ನೋಡೆ ಕವಚಂಗೊಂಡಂದಮಾ ಕರ್ಣನಾ (ನ.ಆ.ಪ. ೬೩)

ನುಡಿ ನಿನಗಂ ದಿನೇಶ ತನಿಯಂಗಮದೆನ್ನಯ ಪಕ್ಕದಾದೊಡಂ
ಮಿಡುಕದೆ ಕೇಳ್ವಿನೆಲ್ಲಿ ಸಮನಿರ್ವರುಮಾತನತೀತನಾದ ಪಿಂ
ಬಡಿನೊಳದೆಂತು ಪೇೞ್ ಪೞಿಯ ಕೇಳ್ವೆನೊ ಕೇಳ್ವೊಡೆ ಚಿಃ ಪೆಱಂ ಪೆಱಂ
ನುಡಿದೊಡೆ ಕೇಳ್ದನೆಂದೆನಗೆ ನೋಯನೆ ಸಗ್ಗದೊಳಿರ್ದಿನಾತ್ಮಜಂ (ತ್ರ.ಆ.ಪ. ೨೮)

ನಡಪಿಯುಮೋದಿಸಿಯುಂ ಬಿ
ಲ್ವಿಡಿಯಿಸಿಯುಂ ಕೆಚ್ಚುಟಿರ್ದ ಕೂರ್ಮೆಗಳೆರ್ದೆಯಂ
ನಡೆಪಾಂಡುಸುತರಗಲ್ಕೆಗೆ
ನಿಡುಸುಯ್ದರ್ ದ್ರೋಣ ಭೀಷ್ಮ ಕೃಪ ವಿದುರರ್ಕಳ್ (ದ್ವಿ.ಆ.ಪ. ೯೭)

ಪೊಳಪಿನ ಕಿರಣದ ಗಾಳಿ
ಪೊಳಪನೆ ಸೈರಿಸದ ಕುಸುಮದಳ ಸುಕುಮಾರರ್
ತಳರ್ದು ನೆಲೆಯಿಂದಮಾಗಳೆ
ಕೊಳದಿಂ ಪೊಱಮಟ್ಟ ಹಂಸೆಗಳ್ಗೆಣೆಯಾದರ್ (ದ್ವಿ.ಆ.ಪ. ೯೭)

ಏದೊರೆಯಂ ಯಮನಂವನ
ನೇದೊರೆಯಂ ಭೀಮಸೇನನೇದೊರೆಯಂ ಕಂ
ಜೋದರನ ಮೈದುನಂ ತಾ
ಮೇದೊರೆಯರಮಳ್ಗಳವರ್ಗ ಟೊಯಿರವಾಯ್ತೇ (ಸ.ಆ.ಪ. ೧೭)

ನೋಂತರ ಪಗೆವರನೆಟ್ಟಿಜೆ
ದಂತಾಯ್ತೆಂದಿರದೆ ಪುರುಷಕಾರದ ಪೆಂಪಂ
ಚಿಂತಿಸಿ ತರಿಸಿ ಮಹೀಶನ
ನೆಂತಪ್ಪೊಡಮೆನಗೆ ಪುರುಷ ಭೀಷಮನಿಕ್ಕಿಂ (ಸ.ಆ.ಪ. ೩೪)

ಸುರಿಯಲ್ವೇಡಮದರ್ಕೆ ಭಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂ
ದಿರದಾಂ ಕೂಡುವೆವೆಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೊ
ರ್ವರೆ ದಲ್ ಕೌರವರಾಮುಮಯ್ವರೆ ವಲಂ ಮತ್ತೊರ್ವರೊಳ್ ತೊಟ್ಟ ಸಂ
ಗರ ರಂಗಕ್ಕೆ ಜಸಕ್ಕೆ ಕೊಡುವೆಡೆಯೊಳ್ ನೂಱಯ್ವರಾವಲ್ಲದೇ (ಸ.ಆ.ಪ. ೩೬)

ನಿನ್ನಂ ಕೊಂದನ ಬಸಿಱಿಂ
ನಿನ್ನಂ ತೆಗೆಯದೆಯುಮವನ ಕರುಳಂ ಪರ್ದಿಂ
ಮುನ್ನುಂಗಿಸಿ ನೋಡದೆಯುಂ
ಮುನ್ನಮೆ ಯುವರಾಜ ನಿನ್ನನಾಂ ನೋಡಿದೆನೇ (ತ್ರ.ಆ.ಪ. ೫೭)

ರನ್ನನ ಗದಾಯುದ್ಧ

ನಿಂದನೆಯ ಪದ್ಯಗಳು

ನಿನ್ನೀ ಕೆಳೆಯ ಸುಯೋಧನ
ನನ್ನೊಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದದೇಕುಸಿರದಿರ್ಪೆಯಂ ಗಾಧಿಪತೀ (ಪಂ.ಆ.ಪ.೧೯)

ನೀನುಳ್ಳೊಂಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲ ಮೊಳವೆ ಅಂಗಾಧಿಪತೀ (ಪಂ.ಆ.ಪ.೨೦)

ಪೆಂಡಿರ್ ಪಟಿಯಿಸುವಂದದೆ
ಗಂಡರ್ ಪಟಿಯಿಸಿದೊಡಾಯಮಂ ಛಲಮಂ ಕಯ್
ಕೊಂಡೆಸೆಪರಾರೊ ಕುರುಕುಲ
ಮಂಡನ ನೀನೆತ್ತಿಕೊಂಡ ಛಲಮನೆ ಮೆಱಿಯಾ (ಪಂ.ಆ.ಪ.೩೩)

ಪಂಪಭಾರತ

ಶುಭ ಹಾರೈಕೆ

ಪರಸುವ ಪುರಜನದೊದವಿದ
ಪರಕೆಗಳಂಬುಧಿನಿನಾದಮಂ ಮಿಗೆ ತಮ್ಮ
ಯ್ವರುಮೊಡನೆ ಮೆಱೆದು ಪರಮಾ
ನುರಾಗದಿಂ ಬಂದು ಪೊಕ್ಕರಂದರಮನೆಯಂ (ಪಂ.ಆ.ಪ.೨೩)

ಪಂಪಭಾರತ

ಬೇಟೆಯ ಪದ್ಯಗಳು

ಕಾಡೊಡಮೆ ವೇಳೆ ಸಲೆ ಕೇ
ಯ್ಗೂಡಿದುದೆನೆ ನೆಲದೊಳಿರ್ದ ನೆಲ್ಲಿಯ ಕಾಯಂ

ನೋಡ ನೆಲಮುಟ್ಟ ಲಟ್ಟಿಯೊ
ೞಾಡುಮೊಡೀ ದೆವಸಮಲ್ತೆ ಬೇಂಟೆಯ ದೆಲಸಂ (ಪಂ.ಆ.ಪ.೪೦)

ಬರದಂತೆ ಬೆನ್ನ ಕೆರ್ಪೆಸೆ
ದಿರೆ ಸೂಚಮನುರ್ಬೆ ಪುಲ್ಲೆಗಾಟಿಸಿ ಮಲೆತ
ಪೆರಲೆಯ ಸೋಲಮನಟ್ಟಿಯೊ
ೞರಿಕೇಸರಿ ನಿಂದು ನೋಟ್ಟುದೊಂದರಸತ್ತೀ (ಪಂ.ಆ.ಪ.೪೪)

ಪಸಿವು ದೊರೆಕೊಳ್ಗುಮುಣಿ ಸುಗಳಿನಿಕೆಯ್ಯು ಮಾವಂದದೊಳ್ ಕನಲ್ದಾದ ಮೆಯ್ಯ
ನಸಿಯನಾಗಿ ಪುದುಳಿದುವಪ್ಪುದು ಬಗೆಗೊಳಲಪ್ಪುದು ಮೃಗನ ಮೆಯ್ಯೊಳ್
ನಿಸದಮೆಸೆವುದಂ ಬಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು
ಬಸನಮಂದಱಿಯದೇಳಿಸುವರ್ ಬೇಂಟೆಯಂ ಬೇಂಟೆಯ ಬಿನದಂ ಗಳೆರಸಲ್ತೇ (ಪಂ.ಆ.ಪ.೪೭)

ಮುಂದಣ ಮಿಗಮಂ ಕಟಿಪದೆ
ಸಂದಿಸಿ ಬಟಿಗೊಳ್ವ ಮಿಗಮುಮಂ ಕಟಿಪದೆ ತಾ
ನೊಂದಳವಿದಪ್ಪದೆಚ್ಚು ಬ
ಲಿಂದಮನಿಂ ಬಲ್ಲ ಬಲ್ಮೆಯಂ ಪೊಗಟಿಸಿದಂ (ಪಂ.ಆ.ಪ.೪೮)

ಜನ್ನನ ಅನಂತನಾಥ ಪುರಾಣಂ

ಕತ್ತುರಿಮಿಗಮಂ ಪಂದಿಯ
ಮುತ್ತುಂ ಪೊಂಬುಲಿಯ ಪೂವಲನಾನೆಯ ಕೊಂಬಂ
ಕುತ್ತಟಿಸದಡಸಿ ಪಿಡಿದುಗೆ
ದೆತ್ತಿದುವಂ ಪತಿಗೆ ಕಾಣ್ಕೆಗೊಟ್ಟಂತೆಂದಂ (ಎ.ಆ.ಪ.೩೮)

ಪುಲ್ಮುಱಿದುದು ಬೆಳಸುಡಗಿ ಬ
ಯಲ್ಮಸಗಿದುದಡವಿ ಕರಿಕುವರಿದುದು ಮೇಪಿಂ
ಪುಲ್ಮಿಗಮುಂ ಬೆಳ್ಮಗಮುಂ
ಪಲ್ಮಿಗಮುಂ ತಣಿದುವೆಯ್ದೆ ಕಾಪಿನ ಪೊಲದೊಳ್ (ಎ.ಆ.ಪ.೩೯)

ಪಂಪಭಾರತ

ಸಂಭಾಷಣೆಯ ಪದ್ಯಗಳು

ಎರೆದನ ಪೆಂಪುವೇಟ್ಟೊಡನಲಂ ಪೊಣರ್ವಾತನ ಪೆಂಪುವೇಟ್ಟೊಡಾ
ಸುಪತಿ ಕೊಟ್ಟ ತಾಣದೆಡೆವೇಟ್ಟೊಡಮಾ ಯಮುನಾನದೀ ತಟಾಂ
ತರಮಾಸೆದಿ (ತ್ರ) ನಾನೆರೆಯ ಕೇಳ್ದನಿಳಾಧರ ನೀನದರ್ಕೆ ಮಾ
ತೆರಡಣಮಾಡಲಾಗದಿದು ಸೈಪಿನೊಳಲ್ಲದೆ ಕೂಡಿ ಬರ್ಕುಮೇ (ಪಂ.ಆ.ಪ.೭೩)

ಪಿಡಿದುಯ್ದುದು ಗಂಧರ್ವರೆ
ಪಡೆ ಗಡೆ ನಿಮ್ಮಣ್ಣನಂ ಸುಯೋಧನನಿದಂ
ಕಡೆಗಣಿಸಲಾಗ ನಮಗೀ
ಗಡೆ ಬೇಗಂ ಬಿಡಿಸಿ ತರ್ಪುದಾತನ ಸೆಱೆಯಂ (ಸ.ಆ.ಪ.೩೭)

ಆವಡೆವಿಗಳೊಳ್ ಪಣ್ಣಲ
ಮಾವಗಮೊಳವಲ್ಲಿಗಱಿಸಿ ಪರಿಪರಿದು ಕರಂ
ತಾವಡಿಗೊಳ್ವೇ ಭೀಮನ
ಬೆವಸಮಿದು ನಿನ್ನ ಮನಮನೊನಲಸಿತಿಲ್ಲಾ (ಸ.ಆ.ಪ.೪೬)

ಎಮ್ಮಯ್ವರ ಬೇವಸಮಂ
ನೀಂ ಮನದೊಳ್ ನೆನೆಯೆಯಪ್ಪೊಡಂ ನಿನ್ನರವಂ
ನೀಂ ಮರುಳೆ ಬಗೆಯದಂತುಂ
ಘುಮ್ಮೆಂಬಡವಿಯೊಳಡಂಗಿ ಚಿಂತಿಸುತಿರ್ಪಾ (ಸ.ಆ.ಪ.೫೦)

ತಪ್ಪುಮನೆ ನುಡಿಯೆನೆಂಬುದಿ
ದೊಪ್ಪದು ನಿನಗಹಿತರೆಯ್ದೆ ತಪ್ಪಿರ್ದರವರ್
ತಪ್ಪಿದ ಬಱಿಕ್ಕೆ ತಪ್ಪದ
ತಪ್ಪೆ ಗಳ (೮೦) ನನ್ನಿಗೊಪ್ಪಮಲ್ಲದ ತಪ್ಪೇ (ಸ.ಆ.ಪ.೫೨)

ನುಡಿಯದೆ ಪೆಱತಂ ದ್ರೌಪದಿ
ನುಡಿದಳೆ ತಕ್ಕುದನೆ ಕೇಳಿಯುಂ ಕೇಳದಿರಿಂ
ನುಡಿಯಲೆಡೆಯಿಲ್ಲ ನಿಮ್ಮಂ
ನುಡಿಯಿಸಿದಪುದೆನ್ನ ಮನದ ಮುನಿಸವನಿಪತೀ (ಸ.ಆ.ಪ.೫೩)

ಸಲೆ ಸಂದಿರ್ಪತ್ತೊಂದುಂ
ತಲೆವರೆಗಂ ನಮಗೆ ಪರಿಭವಂ ಕೃಷ್ಣೆಯ ಮುಂ
ದಲೆಯಂ ಪಿಡಿದೆಳೆವಲ್ಲಿಯೆ
ತಲೆವಿಡಿದರ್ ನಮ್ಮ ಬೀರಮಂ ಕೌರವರುಂ (ಸ.ಆ.ಪ.೫೭)

ಪನ್ನೆರಡು ವರುಷದವಧಿಯು
ಮಿನ್ನಱೆಯಲ್ ಬ (೦) ದುದಹಿತನಿಳೆಯಂ ಕುಡನಾ
ಸನ್ನಂ ಕಾಳೆಗಮಱಿಯಿರೆ
ಪನ್ನಗ ಕೇತನ (ನ ಚಲದ ಕಲಿತನ) ದಳವಂ (ಸ.ಆ.ಪ.೬೪)

ಬೂದಿ ಜೆಡೆ ಲಕ್ಕಣಂ ತಪ
ಕಾದುವೆರಟ್ಬೊಣೆ ಶರಾಸನಂ ಕವಚಮೀವೆಂ
ತಾದುವೊ ಮುತ್ತುಂ ಮೆಱಸುಂ
ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ (ಸ.ಆ.ಪ.೯೨)

ಪಡೆದಂ ಬ್ರಹ್ಮಂ ಜಗಮಂ
ಪಡೆಯಲ್ ತಾನಾರ್ತನಿಲ್ಲ ಪೆಂಪಂ ನಿಮ್ಮಂ
ಪಡೆದತ್ತಿ ಪಡೆದನೆನಿಸಿದ
ಕಡು ಪೆಂಪಿನ ಪೊಟೆಗೆ ನೀವು ಮೊದಲಿಗರಾದಿರ್ (ಷ.ಆ.ಪ.೧೨)

ಬೆಸನೆನಗಾವುದೋ ಬೆಸಸಿಂ
ಬೆಸನಂ ಪಿರಿದಕ್ಕೆ ಗೆಯ್ಯ ಸಾರ್ದಿರ್ದನದಂ
ಬೆಸಸಿಂ ನಿಮ್ಮಯ ಬರಮಂ
ಪೊಸತಾಗಿರೆ ಬಂದಿರೀಗಳೆಲ್ಲಿಂ ಬಂದಿರ್ (ಷ.ಆ.ಪ.೧೪)

ಎನ್ನಟ್ಟಿಡುಗೆಯನುಂಡೊಡೆ
ಬಿನ್ನಣಮೇನರಸ ನರೆಗಳಾಗವು ಸವಿಯೊಳ್
ನಿನ್ನಂ ಮೆಚ್ಚಿಪೆನೆಡಱಿದೊ
ಡೆನ್ನರೊಳಂ ಮಲ್ಲನೊರ್ವ ವಲ್ಲಲನೆಂಬೆಂ (ಆ.ಆ.ಪ.೫೪)

ಎನಗರಸಿಯಾಣೆ ನಿನ್ನೊಡ
ನೆನಗೇಗೆಟ್ಟಪುದಿದೆಂದು ಜೋಡಾಡಲ್ ಕೆ
ಮ್ಮನೆ ನುಡಿದೊಡೆನ್ನ ಕಣ್ಣಂ
ಮನಕ್ಕೆ ವಂದಿರ್ದ ನಿನ್ನೊಳೆನಗೆರಡುಂಟೇ (ಅ.ಆ.ಪ.೬೮)

ನೆತ್ತಮನಾಡಿ ಭಾನುಮತಿ ಸೊಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಳುತ್ತಿರೆಯೇವಮಿಲ್ಲದಿವನಾ (ಯ್ಯು)ದೊ ತಪ್ಪದೆ ಪೇಱಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲ ನೇ (ನ.ಆ.ಪ.೬೯)

ಅದಟಿನಳುರ್ಕೆಯಂ ಬಲದಳುರ್ಕೆಯುಮಂ ಗೆಡೆಗೊಂಡು ನೀಮಿದಾ
ವುದು ಪಡೆಮಾತನಿಂತು ನುಡಿದಿರ್ ಪುದುವಾಳ್ಕೆಯೊಳೆನ್ನ ಬಳ್ಕಿದ
ಳ್ಕಿದ ಬಗೆಗಂಡಿರೇ ಮಗನೆ ನೀಂ ಪಗೆಯಂ ತಱಿದೊಟ್ಟು ನೆಟ್ಟನೆ
ನ್ನದೆ ಬಗೆಗೆಟ್ಟು ದಾಯಿಗರೊಳಿಂ ಮಗುಟ್ದುಂ ಪುದುವಾಟ್ದುದೆಂಬಿರೇ (ಏ.ಆ.ಪ.೫೦)

ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ (ದ.ಆ.ಪ.೧೭)

ಕುದುರೆಯನೇಱಿದಂಬೆರಸು ಸೌಳಿನ ವೋಗಿರೆ ಪೊಯ್ದುಮೆಯ್ದೆ ಕ
ಟ್ಟದಿರೊಳೆ ನೊಂಕಿದಾನೆಗಳ ಕೋಡುಗಳಂ ಬಳೆವೋಗೆ ಪೊಯ್ದುಮಾಂ

ತದಟರನೊಂದೆವೊಯ್ದು ಮೆರಡುಂ ಬಲಮೆನ್ನನೆ ನೋಡೆ ತಕ್ಕಿನ
ನ್ನದಟುಮನೆನ್ನ ವೀರಮುದುನಾಜಿಯೊಳೆನ್ನರಸಂಗೆ ತೋಱುವೆಂ (ದ.ಆ.ಪ.೪೧)

ಎಂಬುದುಮಂಬಿಕೆ ಮಗನೆ ಮ
ನಂಬೆಳಱದೆ ನೀನುಟುಮಿತ್ತೆಯಾನುಂ ಪೆತ್ತೆಂ
ನಂಬಿದ ನಿನ್ನನುಜರ್ ನಿ
ನ್ನಂ ಬೆಸಕೆಯೆ ನೀನೆ ನೆಲನನಾಳ್ವುದು ಕಂದಾ (ನ.ಆ.ಪ.೮೨)

ಪಿಡಿಯೆಂ ಪುಲಿಗಣೆಯಂ ನರ
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳ ನಿನ್ನೆಂ
ದೊರ್ಡಮೞಿಯಂ ಪೆರ್ಜಸಮನೆ
ಪಿಡಿದೆನ್ನನೆ ರಣದೊಳಱಿವೆನಿರದಡಿಯೆತ್ತಿಂ (ನ.ಆ.ಪ.೮೭)

ನುಡಿ ನಿನಗಂ ದಿನೇಶ ತನಯಂಗೆಮದೆನ್ನಯ ಪಕ್ಕದಾದೊಡಂ
ಮಿಡುಕದೆ ಕೇಳ್ವೆನಲ್ಲಿ ಸಮನಿರ್ವರುಮಾತನತೀತನಾದ ಪಿಂ
ಬಡಿನೊಳದೆಂತು ಪೇೞ್ ಪೞೆಯ ಕೇಳ್ವೆನೊ ಕೇಳ್ದೊಡೆ ಚಿಃ ಪೆಱಂ ಪೆಱಂ
ನುಡಿದೊಡೆ ಕೇಳ್ವನೆಂದೆನಗೆ ನೋಯನೆ ಸಗ್ಗದೊಳಿರ್ದಿನಾತ್ಮಜಂ (ತ್ರ.ಆ.ಪ.೨೮)

ಪೊನ್ನನ ಶಾಂತಿಪುರಾಣ

ಸಂಭಾಷಣೆ

ಬಂದಿರದವರ್ಗಿದಿರಂ ನಡೆ
ತಂದೀತಂ ತಮ್ಮನಾತನಣ್ಣಂ ತಾಂ ನೋ
ಡೆಂದು ನಿಜಸೂತನಱಿಪೆ ಮು
ಕುಂದನ ಪರ್ವರಿಕೆ ಮುನಿಸನೊದವಿಸೆ ಮನದೊಳ್ (ಚ.ಆ.ಪ.೪೧)

ಶಾಂತಿಪುರಾಣ

ತಪ್ಪದೆ ಗುರುವಚನಮುಮಂ
ತಪ್ಪಲ್ ಬಸನಿಗೆ ಮದೀಯ ಕೋಪದ ಪದನೇಂ

ತಪ್ಪಿದುದೆ ಪರಕಳತ್ರಮ
ನಪ್ಪಿದುರಂ ಬೆರಸು ಖಳನ ತಲೆಯಂ ಕೊಳ್ವಂ (ಷ.ಆ.ಪ.೭೮)

ಒಡವುಟ್ಟಿದನರಸಿಯನೆಂ
ನೊಡವುಟ್ಟಿದರೆನ್ನ ದಬ್ಬೆಯಂ ದತ್ತಿಗೆಯಂ
ದೊಡೆ ನಾಲಗೆಯಾತನ ತಲೆ
ಸಿಡಿಲ್ದು ಪಾಟೇಟ್ಗೆಮೆನ್ನ ಪಾಱುಂಬಳೆಯೋಳ್ (ಷ.ಆ.ಪ.೮೦)

ಒಡಲವಡವಡಪ್ಪಿನಮೆ
ಲ್ವಡಗಪ್ಪಿನಮಲಸದಾಯ್ದು ಸುಡುವಿನಮಿಭದೊ
ಳ್ಕಡಗುಮವನಡುಗುಮೆ ರತಿಯ
ಗ್ಱಡೆ (ಗೆ) ಲ್ವಪ್ಪಿನಮಿಭೇಂದ್ರದಿಂ ತು(ಮಿ) ಯಿಸುವೆಂ (ಷ.ಆ.ಪ.೮೧)

ಎಡವುಗುವುದು ಮಾನೆಯನೆಡೆ
ಯೆಡೆಯಿಂದಳವಡಿಸಿ ನಿಱಿಸಿ ಮಣಿಕುಂಡಲನೇಂ
ಜಡರಿರೊ ವಸಂತಸೇನೆ ದ
ಲೊಡವುಟ್ಟಿದಳಕ್ಕುಮಿಜೆವ ನಿನಗಂ ತನಗಂ (ಷ.ಆ.ಪ.೮೪)

ಬಲ್ಲಡಗಿಲ್ಲದೊಡುಣಿಸಣ
ಮಿಲ್ಲೀ ಪ್ರಭುಗೆನುಮವನ ತೊಡೆಯಡಗನೆ ತ
ಳ್ವಿಲ್ಲದವಂಗಿಕ್ಕುವರೇಂ
ಪೊಲ್ಲದುದೋ ಮಾಂಸಸೇವನ ಪ್ರತಿಪಾಪಂ (ಸ.ಆ.ಪ.೯೬)

ಶಾಂತಿಪುರಾಣ

ಸಂಭಾಷಣೆ

ನಾಯಕ ಸಾರವೊಲಿದು ಕಡು
ಸೀಯನೆ ಕುಡಿಯಂದು ತಂದು ಕುಡಿಯಿಸುವರ್ ತ

ಪ್ರಾಯಸ ರಸಮಂ ಬಸನಿಗ
ಪಾಯಂ ಭವಭವದೊಳೆಂದುಮೇಂ ಕುಂದುಗಮೇ (ಸ.ಆ.ಪ.೯೭)

ಒಡಹುಟ್ಟಿಯುಮೊಡವಳೆದುಂ
ಕಡೆಯಯೊಳ್ ನೀನೆನ್ನ (ನಿ)ಂತು ಕಂಡುಬಂದಿ
ರ್ದೊಡೆಯುಡಿದೀ ನಮ್ಮಿರ್ವರ
ತೊಡರ್ವದಂ ನೀಂ ಪುನರ್ನವಂ ಮಾಡಿನ್ನುಂ (ಸ.ಆ.ಪ.೧೦೪)
ನೆಱೆವುದುಮಂತಕನೊಳ್ ತ
ಳ್ತಿಱಿಯಲ್ ಕಳವುಗುವವವೊಲ್ ಜಿನಾಲಯಮಂ ಪೊ
ಕ್ಕಱಿವಂಮೆಱಿಮೊಡಲಂ ತೊಱಿ
ದಱಿಪಿದನಾಸನ್ನಭವ್ಯನಿಪ್ಪುದನೀಂದ್ರಂ (ಸ.ಆ.ಪ.೧೧೨)

ರನ್ನ ಕವಿಯ ಗದಾಯುದ್ಧಂ

ಪದುಳಂ ಕುಳ್ಳಿರ್ದೆಮಗಾ
ಯದ ಮಾತಂ ತಗುಳೆ ಗಟಿಪಿ ಪೋದಂ ಸಂದಿ
ರ್ದದಟಕೊಳಿಜುದಱಿಯಂತ
ಪ್ಪದೆ ಕಮ್ಮಱಿಯೋಜನೆನಿಸಿದಂ ಬಿಲ್ಲೋಜಂ (ದ್ವಿ.ಆ.ಪ.೧೩)

ಗೆಲಲಾರ್ಪೊಡಿಱಿದು ಗೆಲ್ವುದು
ಗೆಲಲಾಱದೊಡಣ್ಮಿ ಸಾವುದಾಳ್ಗಿನಿತೆ ಗುಣಂ
ಗೆಲಲುಂ ಸಾಯಲುಮಾಱದೆ
ತೊಲಗಿದೊಡೆ ನೆಗಟ್ತೆ 'ತೊಲಗದಿರ್ಕುಮೆ' ಮೈಯ್ಯಂ (ದ್ವಿ.ಆ.ಪ.೨೧)

ಕಡುಗೂಱಿತಕ್ಕುಮುಕ್ಕಿ ನೊ
ಳೊಡಗೂಡಿದ ಪಚ್ಚೆ ಬೇಱಿ ಕೂರ್ಪಿಲ್ಲಾರುಂ
ತೊಡರ್ದಿಱಿವರರ್ಕನಂದನ
ನೊಡನಿಲ್ಲದೆ ತಾಮೆ ಬೇಱಿ ಕೂಱಿದರೊಳರೇ (ತೃ.ಆ.ಪ.೬೫)

ಎನಗಿರ್ವರುಮೆರಡುಂ ತೋ
ಳೆನಿಗಿರ್ವರುಮೆರಡು ಕಣ್ಗಳನ್ನರೆಯಯವರಾ
ಜನುಮಂಗರಾಜನುಂ ಪೋ
ರನೆ ಸಂಜಯ ಮತ್ತಮನಗೆ ಮಾನಸದಾಟೇ (ತೃ.ಆ.ಪ.೬೭)

ನಿನ್ನೀ ಕಳೆಯ ಸುಯೋಧನ |
ನನ್ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯನ್ನದೆ ದೇ
ವೆನ್ನದದೇಕುಸಿರದಿರ್ಪೆಯಂಗಾಧಿಪತೀ (ಪಂ.ಆ.ಪ. ೧೬)

ಪೆಂಡಿರ್ ಪಟಿಯಿಸುವಂದದೆ |
ಗಂಡರ್ ಪಟಿಯಿಸಿದೊಡಾಯಮಂ ಛಲಮಂ ಕಯ್
ಕೊಂಡೆಸೆಪರಾರೊ ಕುರುಕುಲ |
ಮಂಡನ ನೀನೆತ್ತಿಕೊಂಡ ಛಲಮನೆ ಮೆಱಿಯಾ (ಪಂ.ಆ.ಪ.೩೩)

ಯಶೋಧರ ಚರಿತೆ

ಬೇಡಿದ ಕಾಡೊಳ್ ಮಟಿಯಾ
ಯ್ತೀಡಾಡುವಮಿದಱ ಪೊಜೆಯನೆನಗಂ ನಿನಗಂ
ಮೂಡುವ ಮುಟುಗುವೆ ದಂದುಗ
ಮಾಡಿದ ಹೊಲನುಂಡ ಮರ್ದು ಕಂಡ ವಿಚಾರಂ (ಒಂ.ಅ.ಪ. ೨೫)

ಎಂದು ಪರಸಿದೊಡೆ ಪೊಯ್ಮದೆ
ನಿಂದು ನೃಪಂ ಮನದೊಳೆಂದನೀ ದೇಗುಲಮಂ
ಬಂದು ಪುಗಲೊಡನೆ ಜೀವಂ
ನಿಂದಱಿಯದು ಮುನ್ನ ಮಿನ್ನರಂ ಕಂಡಱಿಯಂ (ಒಂ.ಅ.ಪ. ೩೩)

ಜನ್ನನ ಅನಂತನಾಥ ಪುರಾಣಂ

ನುಡಿಯಲೊಡಮಿಂತು ಪೇಳ್ವಿಡ
ನುಡಿಯಂ ತನ್ನಿದಿರೊಳಾ ಖಳಂ ಕಡೆಗಣ್ಣಿಂ
ಕಿಡಿಸೂಸೆ ಘೃತಾಹುತಿಯಂ
ಪೊಡೆವ ಶಿಖಿಜ್ವಾಲೆಯಂತೆ ಬಾಲೆ ಕನಲ್ದಳ್ (ಏ.ಆ.ಪ. ೪೯)

ಬೆಸವೇಟ್ಪಂ ದಿಗಧೀಶರಂ ಬನದ ಬಾಳ್ಗಂಬಂಗಳೊಳ್ತಂದು ಕ
ಟ್ಟೆಸವೇಟ್ಪಂ ದೆಸೆಯಾನೆಯಂ ತನಗವಾಜೇಜೇಕೆ ಸೂರ್ಯಂಗೆ ವಾ
ಹಸಮೂಹಂ ಪುಗಿಸೆಂದು ಮಂದುರಮನೆಂಬಂ ದೈತ್ಯನಿಟ್ಟುತ್ತು ಸು
ಟ್ಟೆಸಿ ತೋರ್ಪಾತನ ಬೊಟ್ಟು ಸೋರ್ಕುವರಿಗುಂ ಪ್ರತಾಪಾಗ್ನಿಯಿಂ (ತ್ರ.ಆ.ಪ. ೭)

ಮಚ್ಚರದಾಯಮಂ ಮಱುದು ಕೈದುಗಳಂ ತೊಱೆದುಟ್ಟು ತೊಟ್ಟ ಪೆ
ಣ್ಬು ಚ್ಚ ಮೊಡಂಬಡಂ ಪಡೆಯೆ ಮೈಲೆಯ ನಚ್ಚನೆಯಂತೆ ಸೂಲಮಂ
ಬಚ್ಚಿಸಿ ಪೊತ್ತುಗೂಡಿಡುವ ಗುಬ್ಬಿಗಳಂತಿರೆ ಬಾಗಿಲಲ್ಲಿ ಪು
ಲ್ಗಚ್ಚಿ ಪುಗುತ್ತುಮಿರ್ಪರರಿಭೂಮಿ ಭುಜರ್ಮಧುಕೈಟಭೇಂದ್ರ ನಾ (ತ್ರ.ಆ.ಪ. ೪೮)

ಬಱಸಿಡಿಲಾಗಿ ಪೊಯ್ವ್ಪಲಯಕಾಲಮಹಾನಿಳನಾಗಿ ಬೇಗದಿಂ
ಮುಱುವ ದಾವಾಗ್ನಿಯಾಗುರಿವ ಕೆಂಡದ ಪೆರ್ಮೞೆಯಾಗಿ ತಂಡದಿಂ
ದೆಱಗುವ ಬೆಟ್ಟಮಾಗಿ ಬಿಡದೊತ್ತುವ ಕಟ್ಟಲೆಯಾಗಿ ಮುತ್ತಿ ಬೇ
ಸಱಿಸುಗುರ್ವು ಪರ್ವಿ ಕವಿದರ್ದನುಜಾರಿಗತರ್ಕ್ಯವಿಕ್ರಮರ್ (ಚ.ಆ.ಪ.೧೪)

ಬರೆದಟ್ಟಲ್ ರಾಯಸಕ್ಕಿಲ್ಲಿಳೆಯೊಳರಸುಗಳ್ದಿಗ್ಜಯಕ್ಕೊರ್ಮೆ ದೈತ್ಯಂ
ಭರದಿಂ ಸೊಱೈಸಲಿಸಲಿಲ್ಲೆಣ್ದೆಸೆಯ ದಿಗಧಿಪರ್ತನ್ನ ತೇಜಃ ಪ್ರತಾಪಂ
ಮುರಿದೇಟಲ್ಕಿಲ್ಲ ಮೂಱುಂ ಜಗಮತುಳಬಳಂಗಳ್ಕದೀ ಮಾತನಾಡ
ಲ್ನಿರುತಕ್ಕೆಂದೊರ್ವರಿಲ್ಲಿಲ್ಲೆಣೆ ನಿಮಗೆ ವೃಥೋನ್ಮತ್ತಬಲ್ಲರ್ (ತ್ರ.ಆ.ಪ. ೪೯)

ಕೊಡಗೂಸಾಗಿಸಿದತ್ತು ನಿನ್ನತುಳಬಾಹಾಸಾಹಸಂ ಸಿಂಗಮಂ
ಸಿಡಿಲಂ ಮಾರ್ಪೊಡೆ ಮೆಮ್ಮನಿಂದುವರೆಗುಂ ಮಾಱೊಂಪರಿಲ್ಲಿಂದು ಮಾ

ನುರ್ಡಿಯಾಯ್ತಿನ್ನವಧಾರಿಸೆಂದನೆಲೆ ಕಣ್ಕೆಂ ಪೇಱಿತೆಂ ನಿನ್ನ ಕ
ಣ್ಕುಡಿ ಕೆಂಗೇಱದ ಮುನ್ನೆ ವೈರಿನೃಪರಕ್ತಾಸೇಕದಿಂ ಲೋಕಮಂ (ತ್ರ.ಆ.ಪ. ೮೧)

ಕಟ್ಟಿದುವೆತ್ತಿಸೋರ್ವ ಮದಮಂ ಕಿಡೆ ಡೆಂಕಿಪ ಹಸ್ತಿ ಕಣ್ಣ ನೀ
ರಿಟ್ಟುವು ದಂಡೆಯಿಂ ಕೆದಱು ಕೆಂಡಮುದಗ್ರ ಹೆಯಾಳಿ ನುರ್ಗಿ ಮೇ
ಗೊಟ್ಟಿದ ಕೈದುಗಳ್ಕುಱುದು ನಿಂದುವು ತೇರ್ಥರೆ ನುಂಗಿದಂತೆ ಸಾ
ಲಿಟ್ಟವು ಮುಂದೆ ಕಟ್ಟುದೊಱೆಯಂ ನೆಱೆದುರ್ಚಿ ಪದಾತಿಹೇತಿಗಳ್ (ತ್ರ.ಆ.ಪ. ೮೭)

ಅನಂತನಾಥಪುರಾಣಂ

ವೀರತ್ವದ ವರ್ಣನೆ

ಬಿಡುವೆಡೆಗೆ ಪೊಡವಿಯೆಯ್ದುದು
ನಡೆವೆಡೆಯ್ಯುದು ದಿಶಾತಲಂ ಶಸ್ತ್ರಾಸ್ತ್ರಂ
ಬಿಡುವೆಡೆಗೆಯ್ದುದು ಬಾನನೆ
ನಡೆದುದು ಕಟಕಂ ನಿಶಾಚರಾಧೀಶ್ವರನಾ (ತ್ರ.ಆ.ಪ. ೯೧)

ಪಂಪಭಾರತ

ನಾಯಕನ ವರ್ಣನೆ

ಮನದೊಳೊಱಲ್ದು ಜೋಳ್ದಳಿಪಿ ನೋಡಲೊಡಂ ಸೆಱೆಗೆಯ್ದ ಕಣ್ಣಮಂ
ಮನಮುಮನಂಗಜನ್ಮನರಲಂಬುಗಳಂ ಮರುಳ್ಚಿ ಬಂದ ಮಾ
ವಿನ ಬನದೊಳ್ ತೆರಳ್ಚಿ ಪೊಳಿವಿಂದು ಮರೀಚಿಗಳಂದುರುಳ್ಚಿ ಪೊ
ವಿನ ಪಸೆಯೊಳ್ ಪೊರಳ್ಚಿದನಳುರ್ಕೆಯ ಬರ್ದೆಯರಂ ಗುಣಾರ್ಣವಂ (ದ್ವಿ.ಆ.ಪ.೪೦)

ಪೊಸಮುತ್ತಿನ ತುಡಿಗೆ ಪೊರ
ಜ್ಜೆಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂ
ದೆಸೆದಿರೆ ಬೆಳ್ಮುಗಿಲಿಂದಂ
ಮುಸುಕಿದ ನೀಲಾದ್ರಿ ಬರ್ಪ ತೆಱದೊಳ್ ಬಂದ (ದ್ವಿ.ಆ.ಪ. ೭೮)

ರನ್ನನ ಗದಾಯುದ್ಧಂ

ಉಱದಿರ್ಪುದುಱದೆ ನಿಮ್ಮಡಿ |
ಗೆಱಗುವುದೋಲಗಿಪುದೇಕೆ ಕೇಳ್ವಡೆಯಿರೆ ತಾ |
ಸಜೀವಂ ಪೆಱರ್ಗಿಜೀವಂ ತನ
ನಿಜೀವಂ ಮೇಣ್ ಮೆಱೆವನಿಜೀವಬೆಡಂಗಂ (ಪ್ರ.ಆ.ಪ. ೨೯)

ಪೊನ್ನನ ಶಾಂತಿಪುರಾಣ

ಉತ್ಸವ ವರ್ಣನೆ

ಪೊಗಸಲರ್ದಂಬುಜದಲರೊಳ್
ಸೊಗಯಿಪ ಕುಳಿಶಾಳಿ ಪುಟ್ಟಿತೆಂಬಂತಿರೆ ಪೋ
ಲ್ವೆಗೆ ವಂದ ಪಲ್ಗಳಿಂ ನಗೆ
ಮೊಗಮೀಯದೆ ಸುರರ ನಟ್ಟ ದಿಟ್ಟಯನುಗಿಯಲ್ (ದ.ಆ.ಪ. ೮೪)

ಪುಗುವ ಪೊಱಮಡುವ ಪಾಳೆಯ
ಮುಗಣಿತಮಾಳವರ್ಗಳಿವರ್ಗಳೆಂಬಂತೀ ದಂ
ದುಗಮೆರದಿಲ್ಲದೆ ನಮ್ಮೊಳ್
ತಗುಳ್ಗುಮಿಲ್ಲಿಂದಮತ್ತ ಕೆಯ್ಯಾಳ್ ಬೆಸನಂ (ದ.ಆ.ಪ. ೧೮೪)

ಅಜಿತ ತೀರ್ಥಂಕರ ಪುರಾಣ

ದೆಸೆಯಾನೆಗಳಾನನದೊಳ್
ಪಸರಿಸಿ ದುಗ್ಧೋದಬಿಂದು ಚಿಬ್ಬಂಬೊಯ್ದಂ
ತೆಸೆದಿರ್ದುವು ಮೆಯ್ಯಾಳ್ ಬೆ
ಳ್ಪ ಸದನದಂತಿರ್ದುವಜಿತಸವನೋತ್ಸವದೊಳ್ (ಚ.ಆ.ಪ. ೫೯)

ಪೊನ್ನನ ಶಾಂತಿಪುರಾಣ

ಅಳಿ ಮತ್ತಾಳಿಯೆ ಗಿಳಿಯರ
ಗಿಳಿಯ ನವಿಲ್ ಸೋಗಿನವಿಲೆ ಸುಱಿದೆಸೆವನಿಲಂ

ಮಳಯಾನಿಳನೆ ಕೊಳಂ ತಿಳಿ
ಗೊಳನೆ ಕುಜಂ ಕಲ್ಪಕುಜಮೆ ಸತ್ತಲುಮಗದಾ (ದ್ವಿ.ಆ.ಪ. ೯೦)

ಹಯದ ಮನಕ್ಕಮೇಱಿದನ ಬಿನ್ನಣಕಂ ದೊರೆಯಾಗಿಯುಂ ನೆಗ
ೞ್ತಿಯ ಪಣೆದಕ್ಕೆ ಮಿಕ್ಕಸೆವ ತೆಕ್ಕಿನ ಬೀರರನಟ್ಟಿ ಕೊಲ್ವಳು
ರ್ಕೆಯ ತಟಿಗೋಲಮಿಲ್ಲದಿರೆಯುಂ ವಿಭುಗಟ್ಟಿಯ ಸೆಂಡನಾಡಲಾ
ನೆಯ ಪರಿನೋಡಲೆಂದೊಲೆದು ಮಾಡಿದ ವಾಹಳಿಗಳ್ ಮನೋಹರಂ (ನ.ಆ.ಪ. ೧೪೪)

ಅಜಿತ ತೀರ್ಥಂಕರ ಪುರಾಣ

ಅಡೆವೊತ್ತಿನ ತಳರ್ವಾಸಿನ
ಪಿಡಿದಿರ್ದಂಬುಜದ ನಡುವೆ ಮದನನಿನೊಡನೆ
ರ್ದೊಡಲುರಿಪದೆ ಪುಟಪಾಕಂ
ಗುಡೆ ಸುಡುವಂತಿರ್ಪುವಲ್ಲಿ ವಿರಹಿಜನಂಗಳ್ (ದ್ವಿ.ಆ.ಪ. ೧೦)

ಮಲೆಯಲರತೆಪ್ಪುಂ ಮನಸಿಜ
ನಲೆಪ್ಪುಂ ಕೋಗಿಲೆಯ ಜಡಿಪುಮೊಡನೆಗೆಟ್ಟುನಮೇ
ನಲಜಡಿಯಾದಂತಿರ್ಪುವ
ಗಲದಾ ವನತಲೆಯ ಜೊಂಪದೊಳ್ ದಂಪತಿಗಳ್ (ದ್ವಿ.ಆ.ಪ. ೧೪)

ಮೊತ್ತಮೊದಲ್ ಚಿತ್ರಾವನಿ
ಗೊತ್ತಿರ್ದುದು ನಟ್ಟನಡು ಪೊದಟ್ಟುದು ದೆಸೆಯೊಳ್
ತುತ್ತತುದಿರುತು ವಿಮಾನಮ
ನೊತ್ತಿರ್ದುದು ನಗದ ಪೆಂಪನದನೇವೊಗೞ್ವೆಂ (ಏ.ಆ.ಪ. ೬)

ಪೊನ್ನನ ಶಾಂತಿಪುರಾಣ

ಕುಮಾರೋದಯ

ತೊಡೆ ತೋಳ್ ಮುಯ್ಯು ಕದಂಪುರಂ ಪರಡು ಕಯ್ ಮುಂಗಮ್ ಮೊಗಂ ಪೊರ್ಕು ಕಿ
ಱ್ಪೊಡೆ ಮೇಗಾಲ್ ವೆರಲುಂಗುಟಂ ಬರಿ ನೊಸಲ್ ನಿಟ್ಟೆಲ್ವು ಗೋನಾಳಿ ಬೆನ್

ಮಡಕಾಲ್ ಕಣ್ ಕಿವಿ ಮೂಗು ಬಾಯ್ ಬಸಿ (ಱ) ಗುರ್ ಪುರ್ವಳ್ಳೆ ಪಲ್‌ಕೆಕ್ಕ ಕಾ

ಲಡಿಯಂದಿಂತಿವನುರ್ಚಿ ಪೋದುವಿಸೆ ತತ್ಸೌಜನ್ಯಕಂದಾಂಕುರಂ (ಚ.ಆ.ಪ. ೧೭)

ಪಂಪಭಾರತ

ಹಾಸ್ಯ ವರ್ಣನೆ

ಪಿಡಿದಾರ್ಪ ಭರದಿನೆತ್ತ

ಲ್ಕೊಡರಿಸಿದೊಡೆ ನೆಲದಿನಣಮೆ ತಳರದೆ ಬಿಲ್ ನಿ

ಲ್ತೊಡೆ ಗುಡು ಗುಡು ಗುಡು ಗೊಳ್ಳೆಂ

ದೊಡನಾರೆ ಸುಯೋಧನಂ ಕರಂ ಸಿಗ್ಗಾದಂ (ತೃ.ಆ.ಪ. ೫೯)

ಪಂಪಭಾರತ

ತಪಸ್ಸು

ಎಂದು ತಿರೋಹಿತನಾಗಿ ಪು

ರಂದರನುಂ ಪೋದನಿತ್ತ ತಪದೊಳ್ ನರನಿಂ

ತೊಂದಿ ನಿಲೆ ತಪದ ಬಿಸುವೆಂ |

ಬೆಂದಱಿದುದು ವನದೊಳುಳ್ಳ ತಪಸಿಯರ ತಪಂ (ಅ.ಆ.ಪ. ೯)

ಪೊಱಕಣ್ಣಂ ಮುನ್ನಂ ತಾಂ

ಮಱಿಸಿದ ನೊಸಲೊಂದು ಕಣ್ಣಮಾಗಳ್ ನೊಸಲಿಂ |

ಪೊಱಮಟ್ಟಂತಿರೆ ತೊಱದ |

ನೆಱಕದೆ ಹರಿಗಂಗೆ ರುದ್ರನಗ್ಗಳಗಣ್ಣಂ (ಅ.ಆ.ಪ. ೨೩)

ಪಂಪಭಾರತ

ಸಲುಗೆ /ಸ್ನೇಹ

ಪೊಡಮಡುವರ್ ಜೀಯೆಂಬರ್

ಕುಡು ದಯೆಗೆಯ್ಯೋಂ ಪ್ರಸಾದಮೆಂಬಿವು ಪೆಱರೊಳ್

ನಡೆಗೆಮ್ಮ ನಿನ್ನಯೆಡೆಯೊಳ್

ನಡೆಯಲ್ವೇಡೆನಗೆ ಕೆಳೆಯನ್ನೆ ರಾಧೇಯ (ದ್ವಿ.ಆ.ಪ. ೮೫)

ಏನೆರ್ದೆಗೊಂಡ ಕಜ್ಜಮನೆ ಪೇೞ್ದೆಯೆ ಚಿಂತಿಸುತಿರ್ಪೆನಾನು ಮೇ
ನಾನುಮುಪಾಯಮಂ ಬಗೆವರಂತವರ್ಗಳ್ ನಿನಗೆಂದೆ ಕಂದ ಪೇೞ್
ನೀನಿರೆ ಪಟ್ಟಮುಂ ನೆಲನುಮಪ್ಪುದನೊಲ್ವೆನೆ ವೈರಿಗಳ್ಗೆ ನೀ
ನೇನುಮದರ್ಕೆ ಚಿಂತಿಸದಿರಿಲ್ಲಿರಲೀವೆನೆ ಪಾಂಡುಪುತ್ರಂ (ದ್ವಿ.ಆ.ಪ. ೯೨)

ಜನ್ನನ ಅನಂತನಾಥ ಪುರಾಣಂ

ನಿರ್ಧಾರ

ಗತಿಗೆ ನಿಮಿತ್ತಂ ಪಡೆವರ್
ಸುತರಂ ಗಡ ಪೊಱಗೆ ಸೆಱಗೆ ನಿಲ್ಲನವಶ್ಯಂ
ಪಿತುರಾಚಾರಂ ದೇವರ
ಗತಿಯಲ್ತೆನಗಿಲ್ಲ ಬೇಱೆ ಗತಿಯಂ ಮತ್ತಿಯುಂ (ತೃ.ಆ.ಪ. ೮೮)

ಪೊತ್ತೆ ಪೊಱೆ ತಿಣ್ಣಮಾದೊಡೆ
ಮತ್ತೆ ಕೆಲರ್ ಕಂಡು ಕುರುಣಿಪರ್ ಪಿತೃಭವದೊಳ್
ಪೆತ್ತ ಮಗಂ ಸಮ್ಮನಿಸಿ ಕೊ
ಳುತ್ತಿರೆ ಪೊಸತಲ್ತೆ ತಂದೆ ಮಕ್ಕಳ ಮೋಹಂ (ತೃ.ಆ.ಪ. ೮೯)

ಈ ನೆಲದ ಬಿಣ್ಪು ದೇವರ
ಪೀನಭುಜಾಸಹ್ಯಮೆಂದು ಬೆಸಸುನೊಡೆನಗಿಂ
ತಾನಾಗನಾಂತ ಪೊಱೆಯಂ
ಭೂನಾಗಾಂ ಪೊತ್ತು ದೇವ ನಿತ್ತರಿಸುವುದೇ (ತೃ.ಆ.ಪ. ೯೦)

ಮಱೆ ಕಂಬನಿಯಂ ದನಿಯಂ
ಮೊಟಿಗೆಱಗಿದ ಮಕುಟದಿಂದ ಟಿಂಚೊಗೆಯೆ ಪೊದ
ಱ್ದ ಟಲಿಂದ ಮುನ್ನಡಿಯೊಳ್
ಮಟೆಗಾಲಮನಂದು ಸೂನು ತಂದೆಗೆ ತಂದಂ (ತೃ.ಆ.ಪ. ೯೧)

ಜನ್ನನ ಅನಂತನಾಥ ಪುರಾಣ

ಇತರ ಪದ್ಯಗಳು

ಜೆದಜೆ ಮನಂ ಕಲಂಕೆ ತನು ಬಾಡೆ ಮೊಗಂ ಸುಜಿದೋಡೆ ಕಣ್ಣನೀರ್
ಬೆದೆಬೆದೆ ಬೆಂದು ತಾವೆ ತಮಗೇನೆರವಪ್ಪರೊ ಚಿತ್ತಜಂಗೆ ಬಾ
ಜ್ಕೊದಲೆನಿಪಟ್ಟಿ ಕಾರ್ತಿಯಟಿಲ್ಲು ನೃಪಾಲಮನೋಜನಿಂತು ನೋ
ಡಿದ ಕಡೆಗಣ್ಣ ಕಾಂತಿಲತಿಕಾಸುಮನಶ್ಯದಮೋಹಪಾಶದೊಳ್ (ದ್ವಿ.ಆ.ಪ. ೪)

ಪರಮಾಗದೊಳ್ ಸಾಗಾ
ರರ ನೆಲೆ ಪನ್ನೊಂದು ಪನ್ನೆರಟ್ಟುತಪದ ನಗಾ
ರರ ನೆಗೆಟ್ಟ ಗುಣಸ್ಥಾನಂ
ಪರಕಿಪೊಡೇಟಿಲ್ತೆ ದೆಶವಿರತನಿನವಜೊಳ್ (ತೃ.ಆ.ಪ. ೫೭)

ಪೊನ್ನನ ಶಾಂತಿ ಪುರಾಣ

ನಾಡು ನುಡಿಯ ವರ್ಣನೆ

ದೊರೆಯಿಲ್ಲೆನೆ ಪೊರೆಯಿಲ್ಲೆನೆ
ನೆರಮಿಲ್ಲೆನೆ ಸಮಜಿ ಸಕ್ಕದಂ ಕನ್ನಡಮೆಂ
ಬೆರಡುಂ ಕವಿತೆಯನಮಳ್ಚೆ
ತ್ತರಂತಿರೊಡ ನಡಪಿದಂ ಕುರುಳ್ಗಳ ಸವಣಂ (ಪ್ರ.ಆ.ಪ. ೧೦)

ಅನಂತನಾಥ ಪುರಾಣಂ

ಆಶೀರ್ವಚನ

ಜಗತೀನಾಥನ ಕೊಟ್ಟ ರಾಯಸಕಮಮಿಟ್ಟಾಳಾಳ್ದ ನೊಲ್ದಟ್ಟಿದುಂ
ಡಿಗೆಗಂ ನೀ ಬೆಸಕೆಯ್ದು ಮಂಡಲಿಕನಾದ್ಯೆ ಕೇಡುಗಾಲಕ್ಕೆ ತಾ
ಮಾಗಿವರ್ತೇಜೊಗೆವಂತಿವರ್ನಿನಗೆ ಪಾವಂ ಪೆತ್ತವರ್ಜೀಲಿಯಂ
ಪುಗುವಂತಪ್ಪುದರಣ್ಯಮಂ ಪಡೆದು ನಿನೀ ಮಕ್ಕಳು ಮೊಕ್ಕಳಂ (ತ್ರ.ಆ.ಪ. ೫೦)

ಆ ದೇವಿಯ ಬಡನಡುವಿನೊ
ಳಾದ ರಸಾಯನದ ಸೇವೆಯಂತಿರೆ ವಳಿಯೆಂ

ಪೊದೆತ್ತೊ ಕೆಟ್ಟನಾಟ್ಗಿರ
ಸಾದಂತಿರೆ ಮಧ್ಯದೇಶಮೆಂ ತೀವಿದುದೋ (ದ್ವಾ.ಆ.ಪ. ೭೩)

ಹೆಟ್ಟುಗಿಗೆ ಗುಜ್ಜುಗರೆದುದು
ಮೆಟ್ಟುವ ಮೆಲ್ನಡೆ ಮಾಗಂ ಬೆಳರ್ತುದು ಪಗೆ ಬಂ
ದಿಟ್ಟಳಿಸಿದ ಪಂದೆಯವೋಲ್
ತೊಟ್ಟು ಕಟಿಂಗಿದುವು ಲೋಭಿಯಂತಿರ ಮಾತಿಗಳೆ (ದ್ವಾ.ಆ.ಪ. ೭೫)

ಕುಮಾರೋದಯ ಯಶೋಧರ ಚರಿತೆ

ಎಳವೆಳ್ಪಂಗಳಂ ನನೆಗಣೆ
ಮಳಯಾನಿಳನಿಲ್ಲಿ ಮೂವರೊಳಗಾರೋ ಕುಡೂ
ಹಳಮಾದಪುದೆನ್ನದ ಕ
ಣ್ಣೊಳವೆ ಯಶೋಧರ ಕುಮಾರನಂ ಕಾಣಲೊಡಂ (ಎ.ಆ.ಪ. ೬)

ಅನಂತನಾಥ ಪುರಾಣ

ಮಗುವಿನ ವರ್ಣನೆ

ಪೊಡೆ ಮುಗುಟ್ಟೆಡೆಯೊಳ್ ಪೊಕ್ಕುಟಿ
ಕುಡಿಸುಟಿಯಂ ವಳಿಯಿನೆಸೆದು ತಳ್ಪೊಡೆ ಕಡುಚೆ
ಲ್ವಡೆದುದು ಭೋದಾಮೃತ ದೊ
ಳೊಡಲಾನನ ಶಶಿಯಿನುರ್ಬಿದಂತರ್ಭಕನಾ (ಷ.ಆ.ಪ. ೫)

ಕುಮಾರ ವರ್ಣನೆ

ತೊದಳಿಸದ ತೊಗಳ್ ಕೊಂಕಿ
ಲ್ಲದ ದಟ್ಟಡಿ ರಾಗಮಿಲ್ಲದೊಳ್ನಗೆ ಕಿಸುರಿ
ಲ್ಲದ ಮುದ್ದಾಟಂ ಮುಳಿಸಿ
ಲ್ಲದ ಕಾಟತಂ ಬಾಲಭಾವಮಚ್ಚಮ ಜಿನನಾ (ಷ.ಆ.ಪ. ೮)

ಒಳಗಱಿಯದೆ ತನು ತಾನೆಂ
ಬಳಿಕರೆ ಬಹಿರಾತ್ಮರೆಂದು ನಗುವಂತಿರ್ದಂ
ಪಳಿಕಿನ ಭಿತ್ತಿಗಳೊಳ್ ಮಾ
ರ್ಪೊಳಿಪಂ ತಾನೆಂದು ತೆಗೆದು ನಗುವ ಕುಮಾರಂ (ಷ.ಆ.ಪ.೯)

ಪರಮನ ಪೋಲ್ಸೆಗೆ ಬರ್ಪಂ
ತೆರೆ ತಮ್ಮೊಳ್ ಬಾದುಗುಟ್ಟಿ ತಿರಡಿಂಭರ್ ಬಿ
ತ್ತರಿಸಿದ ವಿಕ್ರಿಯೆ ಪೋಲ್ವಂ
ತಿರೆ ಸಹಜಾತಿಳಯದಶತದಿಂದಂ ಪೋಲ್ವರ್ (ಷ.ಆ.ಪ. ೧೧)

ಕಿಚ್ಚು ಕಿಡಿಯಾಗಿ ತಾಗುವ
ಮಚ್ಚರದನಿಮೇಷಯುಗಳದ ಕಡುಪುಂ
ಪೊಚ್ಚಟುಮರ್ಬಿಗೆ ತೊಚ್ಚನೆ
ಪಚ್ಚಿಕ್ಕುವನಡ್ಡಮಿಕ್ಕಿ ಕರಕಿಸಲಯಮಂ (ಷ.ಆ.ಪ. ೧೩)

ತಗೆಯದೆ ಕಾಯ್ದು ಚಮ್ಮಟಿಗೆಯಂ ದನಿದನಿಕ್ಕೈಕಡುಪಾಗೆ ರಾಘೆಯಂ
ಬಿಗಿಯದೆ ನಟ್ಟು ಬೀಸಿದೊಡೆ ಪಟ್ಟು ಪೊರಳ್ದಪಡಿ ನಟ್ಟೆವಾಟು ಮೈ
ದೆಗೆದೊಡೆ ತಿಟ್ಟವಿಟ್ಟವೊಲೊಡಂಬಡೆ ತೋಟಿ ಮೆಚ್ಚಿ ದಾರಕರ್
ಬಗೆ ಹಯಮಾದವೊಲ್ ಬಟಿಕೆ ಮೆಚ್ಚಿಸುವರ್ ಲುಳಿಯೊಳ್ ಕುಮಾರನಂ (ಷ.ಆ.ಪ. ೧೫)

ಆದಿಪುರಾಣಂ

ಕುಳಿರ್ವ ತಿಳಿನೀರನುಡುಗದೆ
ತಳಿ ತಳಿರಂ ಪಾಸು ಜಳದೆಯಿಂ ಬೀಸೆಂದು
ಮ್ಮಳಿಸಿ ಕಳವಳಿಸಿ ವಿರಹಾ
ಕುಳನವೊಲಾ ಖಚರನಿಂತು ತಳವೆಳಗಾದಂ (ದ್ವಿ.ಆ.ಪ. ೧೪)

ಇಡಿದಡರೆ ಕಾಯ್ತ ಚೂತಮ
ನಡಸಿ ಸಿಡಿಲ್ ಪೊಯ್ದುದೆನಿಸೆ ನೆವನೆವದಿಂದೆ

ನ್ನೊಡವುಟ್ಟಿದರುಂ ತಂದೆಯು
ಮುಡಗಿರ್ದರ್ ಖಳಕೃತಾಂತದಂತಾಂತರದೊಳ್ (ತೃ.ಆ.ಪ. ೩೪)

ಬಡಿಯೊಳ್ ನಿಜತನಯನ ತಲೆ
ಯೊಡೆವಿನೆಗಂ ಬಡಿದ ಕಾರಣಂ ಕೊಂಡುಯ್ವರ್
ಪಡೆಪುಗಿಡುವಿನೆಗಮೆಂದಾ
ಕಡುಲೋಭಂ ತನ್ನ ಕಾಲ್ಗಳಂ ಪಿಡಿದುಡಿದಂ (ಪಂ.ಆ.ಪ. ೨೦)

ಮರಗಳೆ ಮುನ್ನಿತ್ತಿನಿಸಂ
ಮರವಟ್ಟುವು ಪೆಟ್ಟುವೆರ್ಚಿ ಕುದಿದಿತ್ತೊಡಮೀ
ಧರಣಿತಳಕ್ಕ ವಿವೇಕಿಯ
ಮರವಾನಸನಿತ್ತ ಚಾಗಮೇನಿರ್ದಪುದೇ (ಷ.ಆ.ಪ. ೫೦)

ಬಿನ್ನ"ನೆ" ಕುರುಳ ನೆಟಿಲ್ಗಳ್
ತನ್ನೊಳೆ ತಳ್ಪೊಯ್ದು ನೆಗಟ್ದಿ ಕಜೆಯನೆ ಪೋಲ್ತು
ನ್ನುನ್ನಂ ಸೊಗಯಿಸುತಿರೆ ಸಿರಿ
ಗನ್ನಡಿ ಕನ್ನಡಿಪುದಾದುದಿಂದುಶ್ರೀಯಂ (ಸ.ಆ.ಪ. ೧೦)

ಪಂಪಭಾರತ

ಪದ ಕೊಕಲಂಪನಪ್ಪುಕೆಯೆ (ಕೊಂಕುನ) ಯಂ ಗಮಕಂಗಳಂ ಪೊದ
ರ್ಕೊದಳೆಟೆ ದಿಕ್ಕಿದಂತೆ ಸುತಿಯೊಳ್ ಸಮನಾಗಿರೆ ಜಾಣನಾಂತು ಮೆ
ಚ್ಚಿದ ತೆಱದಾಸೆವಟ್ಟಲ ಸದೆತ್ತಿದವೋಲ್ ದೊರೆವತ್ತು ದೊಱೆದಾ
ಱಿದ ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ (ಸ.ಆ.ಪ.೮೮)

ಪಿಡಿದಡಿಸಿ ತಿನಲ್ ಬಂದಿ
ರ್ದೆಡೆಯೊಳ್ ನಿನಗಾಗಿ ಮದನನೆನ್ನದೆ ತಿನೆ ಕೇಳ್
ಪಡೆನೋಡಲ್ ಬಂದವರಂ
ಗುಡಿವೊಱಿಸಿದರೆಂಬುದಾಯ್ತು ನಿನ್ನನ್ನೆಡೆಯೊಳ್ (ತೃ.ಆ.ಪ.೧೫)

ಮೊನೆಯಂಬುಗಳೊಳೆ ಪೊಣ್ದ ಪ
ನನಿಬರುಮಂ ಕಿಱುದು ಬೇಗದಿಂ ಹರಿಗನದ
ರ್ಕನೆಗೆಡೆಮೆಟ್ಟುಮೆ ಎಂಬವೊ
ಲನಿಬರುಮಂ ಪೊಣ್ದನ (ತನು) ನನೆಯಂಬುಗಳಿಂ (ತೃ.ಆ.ಪ.೫೨)

ಕೂರಿದವಪ್ಪ ಕಣ್ಮಲರ್ಗಳಳ್ಕಿರ್ದೆಯೊಳ್ ತಡಮಾಡೆ ತಾಮೆ ಕಣ್
ಪೇರಿಸೆ ಪುರ್ವು ನಾಲಗೆವೊಲಾಗೆ ಮನಂಬುಗಿಸಲಲ್ಕೆ ಬಲ್ಲೊಡಾ
ಜಾರೆಯೆ ಜಾರೆ ಪಾಱೆನೆ ಕರಂ ಪಿರಿದುಂ ಗಱಿಪುತ್ತುಮಿರ್ಪಳಂ
ಸಾರಿಕೆಯೆಂಬರಲ್ಲದಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್ (ಚ.ಆ.ಪ.೮೩)

ಬೆಳರ್ತ ಬೆಳರ್ವಾಯ್ ಕರಂ ಪೊಳೆವ ಪಾಂಗೆ ಕಣ್ಣಿಂದಳು
ರ್ತುಳುಂಕೆ ನಿಡುವುರ್ವುಗಳ್ ಪೊಡರೆ ಬಾಯ ಕಂಪಿಂಗೆ (ಸಾ)
ರ್ವಳಿಪ್ರಕರಮಂದು ಸೀಗುಡಿವೊಲಾಗೆ ನಾಣ್ಗೆಟ್ಟು ಮೊ
ಕ್ಕಳಂ (ಜ) ತಗೆ ಮೆಟ್ಟುವಳ್ ಪಿಡಿದು ಮೆಟ್ಟುವಳ್ ನೋಟ್ಪರಂ (ಚ.ಆ.ಪ.೮೯)

ಅನುವಿಸೆ ಬೇಟಕಾಱ (ನೊ) ಲವಿರ್ಮಡಿಯಪ್ಪುದು ಬಯ್ಕೆ ಬೇಟಕಾ
ಱನ ಬಗೆ (ನಿಲ್ಲದಿ) ಕ್ಕೆ ಗೊಳಗೊಪ್ಪದು ನಿಟ್ಟಸೆ ಬೇಟೆ ಬೇಟಕಾ
ಱನ ರುಚಿ ಬಂಬಲುಂ ತುಱುಗಲುಂ ಕೊಳುತಿರ್ಪುದು ನೊಂಕೆ ಬೇಟಕಾ
ಱನ ಮನಮೆಟ್ಟ ಪತ್ತುವುದು ಬೇಟವಿದೇಂ ವಿಪರೀತ ವೃತ್ತಿಯೋ (ಚ.ಆ.ಪ.೧೦೩)

ನುಡಿಗಳೊಳಾಸೆಯುಂಟೆನಲೊಡಂ ತಳೆದಂತಿರೆ ನಿಲ್ವುತುಮಾ
ವೆಡೆಯೊಳಮಾಸೆಗಾಣೆನೆನೆ ತೊಟ್ಟನೆ ಪೋಪುವು ನಲ್ಲರಿರ್ವರೀ
ರೊಡಲೊಳಗಿರ್ಪ ಜೀವಮದುಕಾರಣದಿಂದಮೆ ಪೋಪ ಬರ್ಪೊಡಂ
ಬಡನೊಳಕೊಂಡ ದೊದವರ ಕಯ್ಯಾಳೆ ಕೆಯ್ಯಾಡೆಯಿರ್ಪುದಾಗದೇ (ಚ.ಆ.ಸಂ. ೧೦೪)

ಮಿಱುಗುವ ತೋರ ಹಾರಮುಮನಪ್ಪಿನ ಕಾಳಸೆಗಡ್ಡಮೆಂಬ ಬೇ
ಸಱುನೊಳೆ ಕಟ್ಟಲೊಲ್ಲದನಿತಟ್ಕಱನಿಟ್ಟುಳಿಗೊಂಡ ಲಂಪಿನ

ತ್ತಜಿಗಿದ ನಲ್ಲಳಳ್ಪೆರ್ದೆಯೊಳಕ್ಕಟ ಬೆಟ್ಟುಗಳುಂ ಬನಂಗಳುಂ
ತೊಜೆಗಳುಮಿಾಗಳೊಡ್ಡಟುಯದೊಡ್ಡಿಸೆ ಸೈರಿಸುವಂತುಟಾದುದೇ (ಚ.ಆ.ಪ.೧೦೫)

ಮುನಿಸಿನೊಳಾದಮೇವಯಿಸಿ ಸೈರಿಸದಾದಜಿಲೋಳ್ ಕನಲ್ದು ಕಂ
ಗನೆ ಕನಲುತ್ತುಮುಮ್ಮಳಿಸಿ ಸೈರಿಸಲಾಜಿದೆ ಮೇಲೆ ವಾಯ್ದು ಬ
ಯ್ದನುವಿಸಿ ಕಾಡಿ ನೋಡಿ ತಿಳಿದಟ್ಟಜಿನಿಟ್ಟುಳಿಗೊಂಡಲಂಪುಗಳ್
ಕನಸಿನೊಳಂ ಪಳಂಚತಿವು (ವೆ) ನ್ನೆರ್ದೆಯೊಳ್ ತರಳಾಯತೇಕ್ಷಣೇ (ಚ.ಆ.ಪ.೧೦೬)

ಸೊಡರ್ಗುಡಿಯೊಯ್ಯನಾಗೆ ಪೊಸ ಮಲ್ಲಿಗೆ ಮೆಲ್ಲಗೆ ಕಂಪು ನಾಜೆ ತ
ಣ್ಪೆಡಿದೆಲರಗದೆ ಗಾವರದ ಮೆಲ್ಲುಲಿ ತುಂಬಿಯ ಗಾವರಂಗಳಂ
ಗೆಡೆಗೊಳೆ ಚಂದ್ರಿಕಾಪ್ರಭೆ ಮೊದಲ್ಲಡೆ ನಾಡೆ ವಿತರ್ಕದಿಂ ಬೆರ
ಲ್ಮಡಿದು ಗುಣಾರ್ಣವಂ ನೆಜೆಯೆ ನಿಟ್ಟೆಸಿದಂ ಬೆಳಗಪ್ಪ ಜಾವಮಂ (ಚ.ಆ.ಪ.೧೧೦)

ತಳತಳಿಸಿ ಪೊಳೆವ ಮಾವಿನ
ತಳಿರ್ಗಳ ಶೋಕೆಗಳ ಮಿಸುಪ ಲತೆಗಳ ನೆಲೆ ಬ
ಳ್ವಳ ಬಳೆದ ಬೇಟದುರುಳಿಯ
ಬಳಗಮಿದೆಂದೆಳೆಯಳೆಳಸಿ ತಳವೆಳಗಾದಳ್ (ಪಂ.ಆ.ಪ.೩)

ಕೊಳದ ತಡಿವಿಡಿದು ಬಳೆದೆಳ
ದಳಿರ್ಗಳ ಶೋಕೆಗಳ ಲತೆಯ ಮನೆಗಳೊಳೆ ತೆಜಂ
ಬೊಳೆವಲರ ಬಸದೆ ಸುಜುವಳಿ
ಗಳಬಳಗದ ದನಿಗೆಕಿರೆನಿಸಿ ಗೆಂಕಿಜುವೋದಳ್ (ಪಂ.ಆ.ಪಂ ೪)

ಸುರಯಿಯ ಬಿರಿ ಮುಗುಳ್ಗಳ ಪೊರೆ
ಪೊರೆಯೊಳ್ ಪೊಜೆವೊರಕನಲ್ಲದಲ್ಲುಗುವ ರಜಂ
ಬೊರೆದು ಪರಕಲಿಸಿದಳಕುಳ
ಪರಿಕರಮುಮನತನು ಶಿಖಿಯ ಕಿಡಿಗಳೆ ಗೆತ್ತಳ್ (ಪಂ.ಆ.ಪ. ೫)

ಅಸಿಯಳಿನೊಲ್ಲು ಮೊಲ್ಲನಣಮೆನ್ನದೆ ರೂಪನೆ ನೋಡಿ ಕೂಡಲಾ
ಟಿಸಿ ಪರಿದೆಯ್ದಿ ಪತ್ತಿಲರ್ಗಣ್ಣಳನೇನುಮನೆನ್ನದಂತು ಪೇ
ಕ್ಷಿಸಿ ಮನಮೆಲ್ಲಮಂ ಕವರ್ದಪಂ ತನುವಂ ಬಡಮಾಡಿ ಕಾಡಿ ದಂ
ಡಿಸಿದಪನಂಗಜನ್ಮನ ಕವರ್ತೆಯ ದಂಡದ ಪಾಂಗಿದೆಂತುಟೊ (ಪಂ.ಆ.ಪ. ೧೩)

ಪಡಿದೆಱೆವಂದದಿಂದ ಮೆರ್ದೆಯುಂ ತೆಱೆದತ್ತು ಪೊದಳ್ದ ಸಂಕೆಯಿಂ
ನಡುಕಮುಮಾಗಳುಬ್ಬದಿಗಮಾದುದು ಸಾಧ್ವಸದಿಂ ಬೆಮರ್ ಬೆಮ
ರ್ವೆಡೆಗಳಿನುಣ್ಮಿ ಪೊಣ್ಮಿದುದು ಕಣ್ ನಡೆ ನೋಡದೆ ತಪ್ಪು ನೋಡಿ ನಾ
ಣೆಡೆಯೊಳಮಾದುದು ಸತಿಗೆ ನೋಡಲೊಡಂ ಪಡೆಮಚ್ಚೆಗಂಡನಂ (ಪಂ.ಆ.ಪ ೧೫)

ಪರಸುವ ಪುರಜನದೊದವಿದ
ಪರಕೆಗಳಂಬುಧಿನಿನಾದಮಂ ಮಿಗೆ ತಮ್ಮ
ಯ್ವರುಮಾಡಮೆ ಮೆಱೆದು ಪರಮಾ
ನುರಾಗದಿಂ ಬಂದು ಪೊಕ್ಕರಂದರಮನೆಯಂ (ಪಂ.ಆ.೨೩)

ತಳಿರ್ಗಳ್ ಪಾಸಿನೊಳ್ ಪೊರಳುತಿರ್ದಟಲಲಂ ಕಿಡೆ ಸೊಂಕೆ ಸೊಂಡಕುಗಳ್
ಕೆಳಿದವು ಮೆಯ್ಯ ಸುಯ್ಯ ಪದವೆಂಕೆಗಳಂ ಬಿಗಿಯಪ್ಪಿದಪ್ಪುಗಳ್
ಕಳೆದುವು ನಾಣೆಮಂ ಕಿಱಿದು ಜಾಣುಮನಟ್ಟಿಱಿನೀವ ಚುಂಬನಂ
ಕಳೆದುವು ಗರ್ವಮಂ ಕಳೆದುವಂತವರಿರ್ವರ ಮನ್ಮಥ ದ್ರವಂ (ಪಂ.ಆ.ಪ. ೨೭)

ಕೆಱಗಣ ಕೆಂದಳಿರ್ ಪುದಿದ ಮೇಗಣ ಪಂದಳಿರೊಂದಿದೊಂದು ಕೆ
ಯ್ಗಟಿದ ಪಸುರ್ಪುಮಂ ಪೊಳವ ಕೆಂಪುಮನಾಳ್ದಿರೆ ಬೇಟದೊಳ್ ಕೆನ
ಲ್ದುಟಿದ ವಿಯೋಗಿಯುಳ್ಳರ್ದೆಯನಾಯ್ದದ (ನಾ) ಚಿಸಲೆಂದೆ ಮನ್ಮಥಂ
ಘಟಿಯಿಸಿ ಕೆಂಪುವಾಸಿದವೊಲಿರ್ದುವು ಮಾಮರಗಳ್ ಬಸಂತದೊಳ್ (ಪಂ.ಆ.ಪ. ೩೨)

ಪೆರೆಯ ಪುಸುರ್ಪು ಬೆಳ್ಪೆಡರೆ ಬಿಲ್ಮುಗುಳೊಳ್ ಪೊರೆದೋಱೆ ತಂಬೆಲರ್
ಪೊರೆಪೊರೆಯಂ ಸಡಿಲ್ಪೆ ನಡು ಪೊಂಗಿರೆ ಮಲ್ಲಿಗೆಗಳ್ ಬಸಂತದೊಳ್

ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮಲ್ಲೆರ್ದೆಗಳ್ ಬಸಂತದೊಳ್
ಬಿರಿದುವದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ (ಪಂ.ಆ.ಪ. ೩೩)

ನನೆಯಳಗಂಪನೆತ್ತಿಯುಮಣಂ ನನೆ ನಾಱದರಲ್ದನೇಕ ಕೋ
ಕನದ ಮನಂಗಳೊಳ್ ಸುೞದು ತಣ್ಣಸಮಾಗದೆ ಕೂಡೆ ಬಂದಮಾ
ವಿನ ಪೊಸ ಪೊವಿನೊಳ್ ಪೊರೆದು ಪೊಣ್ಮಿದ (ಕ) ಂಪು ಮೊಗಂಗಳಂ ಚಳಿ
ಲ್ಲೆನೆ ಕೊಳೆ ಪೊಯ್ಯೆ ತೀಡಿದುದು ತೆಂಕಣ ಗಾಳಿ ವಸಂತಮಾಸದೊಳ್ (ಪಂ. ಆ.ಪ. ೩೪)

ಮುಗುಳ್ಪದನಾದ ಸಂಪಗೆ ಮಡಲ್ತುದಿಮುತ್ತೆ ಮರಲ್ದರಲ್ದ ಮ
ಲ್ಲಿಗೆ ನನೆಗರ್ಚಿ ಕಾಕಳಿಯಾಳಾಣತಿ ಗೆಯ್ದು ಮದಾಳಿ ಪೋಪು (ಗ) ಲ್
ಪು (ಗ) ತಿನುತಿರ್ಪ ಪಕ್ಕಿ ಮನಮಂ ಕವರುತ್ತಿರೆ ಯೋಗಿಗಂ ವಿಯೋ
ಗಿಗಮರಿದಾಯ್ತು ಪೊಕ್ಕ ಪುಗಿಲಿಂತು ವಸಂತಕ ಚಕ್ರವರ್ತಿಯಾ (ಪಂ.ಆ. ೩೫)

ಅಸಿಯಳವುಂಕಿ ಕೆಂದಳದೊಳೊತ್ತುವ ನೀರ್ ಮೊಗಮಂ ಪಳಂಚೆ ಬಂ
ಚಸಲಿನಿಸಾನುಮಂ ಮುೞುಗಿದಾಗಡೆ ಭೋಂಕನೆ ಬಂದು ಬಾಳೆಮೀನ್
ಮುಸುಱ ನಿರಂತರಂ ಕರ್ದುಕೆ ಸತ್ಕವಿಯೊಳ್ ಸಮನಾಗಿ ಮಾರ್ಗಮಂ
ಪೊಸಯಿಸಿ ದೇಸಿಯಂ ಪೊಸತು ಮಾಡಿದಳೊರ್ವಳಪೂರ್ವ ರೂಪದಿಂ (ಪಂ.ಅ.ಪ. ೬೪)

ಮುಡಿ ಬಿಡೆ ಪರೆದೆಸಟ್ಟಳ ಪೊಸ
ದುಡುಗೆಯ ಮುತ್ತುಗಳ ಕುಚದ ಸಿರಿಕಂಡದ ಜಿ
ಳ್ಪೊಡನೊಡನೆಸೆದಿರೆ ಜಗುನೆಯ
ಮಡು ಗಂಗೆಯ ಮಡುವನಿನಿಸವನುಕರಿರ್ಕುಂ (ಪಂ.ಆ.ಪ. ೬೬)

ತೆಱಪುವಡೆದಂಗಜಂ ಕೆ
ಯ್ಸೆಱಗೊಳೆ ನೋಟಕರ ಮನಮನಾಗಳ್ ಕೊಳದಿಂ|
ಪೊಱಮಡೆ ಜಿಗಿಲ್ತು ಪತ್ತಿದ
ಕುಱುವಡಿಗಳ ಮಱದುವವರ ನಾಣ್ಗಳ ತೆಱಪಂ (ಪಂ.ಆ.ಪ. ೬೭)

ಮಗಮಗಿಸುತ್ತುಮಿರ್ಪ ಮೃಗನಾಭಿಯ ನೀರ್ದಳಿವಲ್ಲಿ ಕಂಪನಾ
ಳ್ದುಗುಟ್ಟಿಲರುತ್ತುಮಿರ್ಪ ಪದದೊಳ್ ಪದವಟ್ಟು ಪೊದಳ್ದು ತೋರ ಮ
ಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನನೊಯ್ಯನೊಯ್ಯನಂ
ದುಗುಟ್ಟಿವೊಲೊಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್ (ಸ.ಆ.ಪಂ ೮೭)

ಅನುಬಂಧ - ೪

ಪರಾಮರ್ಶನ ಗ್ರಂಥಗಳು

೦೧. ಅಂಗಡಿ ಎಸ್.ಎಸ್, ೨೦೦೫, ದಾಸ ಸಾಹಿತ್ಯದ ಶಬ್ದಶಿಲ್ಪ ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೦೨. " ೨೦೦೭, ವಚನ ಸಾಹಿತ್ಯ ಭಾಷೆ ಬೆಳಗಾವಿ: ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗನೂರು ಶ್ರೀ ರುದ್ರಾಕ್ಷಿಮಠ

೦೩. ಅನಂತರಂಗಾಚಾರ್.ಎನ್, ೧೯೭೦, ಸಾಹಿತ್ಯ ಭಾರತೀ ಮೈಸೂರು ; ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ

೦೪. ಗುಂಡಪ್ಪ.ಎಲ್, (ಅನು), ೧೯೮೦, ತಮಿಳು ಸಾಹಿತ್ಯ ಚರಿತ್ರೆ, ನವದೆಹಲಿ: ಸಾಹಿತ್ಯ ಅಕಾಡೆಮಿ.

೦೫. ಕಬ್ಬಿನಾಲೆ ವಸನ್ತ ಭಾರದ್ವಾಜ, ೧೯೯೮, ಯಕ್ಷಗಾನ ಛಂದಸ್ಸು - ಒಂದು ಅಧ್ಯಯನ ಉಡುಪಿ : ಜನಪದ ರಂಗ ಕಲೆಗಳ ಅಧ್ಯಯನ ಕೇಂದ್ರ.

೦೬. ಕಲಬುರ್ಗಿ.ಎಂ.ಎಂ. ೧೯೭೩, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಬೆಂಗಳೂರು : ಸ್ನೇಹಾ ಪ್ರಕಾಶನ.

೦೭. ಕಯ್ಯಾರ ಕಿಞ್ಞಣ್ಣರೈ, (ಸಂ), ೧೯೭೬, ಮಲಯಾಳಿ ಸಾಹಿತ್ಯ ಚರಿತ್ರೆ, ನವದೆಹಲಿ: ಸಾಹಿತ್ಯ ಅಕಾಡೆಮಿ.

೦೮. ಕುಲಕರ್ಣಿ.ಆರ್.ವ್ಹಿ, ೧೯೭೬, ಕಬ್ಬಿಗರ ಕಾವಂ, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ

೦೯. ಕುಶಾಲಪ್ಪ.ಕೆ, ೧೯೭೬, ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೧೦. ಕೀರ್ತಿನಾಥ ಕುರ್ತುಕೋಟಿ, ೧೯೯೫, ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೧. ಕೃಷ್ಣಕುಮಾರ್, ಸಿ.ಪಿ, ೧೯೯೯, ಪಶ್ಚಿಲೇಖ, ಮೈಸೂರು: ಚೇತನ ಬುಕ್ ಹೌಸ್, ಅಂಜನಾದ್ರಿ.

೧೨. ಕೇಶವಭಟ್ಟ (ಸಂ), ೧೯೭೭, ನಾಡೋಜ ಪಂಪ, ಮೈಸೂರು: ಗೀತಾಬುಕ್ ಹೌಸ್

೧೩. ಕೊಳಂಬೆ ಪುಟ್ಟಣ್ಣಗೌಡ (ಸಂ), ೧೯೯೩, ಅಚ್ಚಗನ್ನಡ ನುಡಿಕೋಶ, ಮೈಸೂರು: ಪುಸ್ತಕ ಪ್ರಕಾಶನ, ಸರಸ್ವತಿಪುರಂ

೧೪. ಕೋತಿನ, ಎಸ್, ಎಸ್, ೧೯೮೫, ಆಂಡಯ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

೧೫. ಚಿಕ್ಕಣ್ಣ, ಕಾ.ತ, ೧೯೯೬, ನಯಸೇನ, ಬೆಂಗಳೂರು: ಕನ್ನಡ ಸಾಹಿತ್ಯ ಅಕಾಡೆಮಿ.

೧೬. ಜವರೇಗೌಡ. ದೇ.(ಸಂ) ೧೯೬೭, ಕಬ್ಬಿಗರ ಕಾವಂ, ಮೈಸೂರು: ಶಾರದ ಮಂದಿರ, ರಾಮಯ್ಯರ್ ರಸ್ತೆ.

೧೭. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ. (ಸಂ), ೧೯೫೬, ಶ್ರದ್ಧಾಂಜಲಿ, ಮಂಗಳೂರು: ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಸಮಿತಿ.

೧೮. ನರಸಿಂಗರಾವ್ ಮನ್ವಿ, ೧೯೫೬, ನಡುಗನ್ನಡ, ಬೆಂಗಳೂರು: ಕರ್ನಾಟಕ ಸಾಹಿತ್ಯ ಮಂದಿರ.

೧೯. ನರಸಿಂಹಾಚಾರ್ ಡಿ, ಎನ್, ೨೦೦೭, ಪಂಪಭಾರತ ದೀಪಿಕೆ, ಮೈಸೂರು: ಡಿ. ವಿ. ಕೆ. ಮೂರ್ತಿ.

೨೦. ” ೧೯೭೩ (ಐ.ಮ), ಕೇಶಿರಾಜ ವಿರಚಿತ ಶಬ್ದಮಣಿದರ್ಪಣ ಮೈಸೂರು: ಶಾರದ ಮಂದಿರ, ರಾಮಯ್ಯಾರ್ ರಸ್ತೆ.

೨೧. ” ೧೯೭೧, ಪೀಠಿಕೆಗಳು ಲೇಖನಗಳು, ಮೈಸೂರು: ಡಿ, ವಿ, ಕೆ, ಮೂರ್ತಿ, ಕೃಷ್ಣಮೂರ್ತಿಪುರಂ.

೨೨. ನಾಗರಾಜಯ್ಯ ಹಂಪ (ಸಂ), (ಅ), ೧೯೮೭, ಪೊನ್ನಕವಿ ವಿರಚಿತ ಶಾಂತಿಪುರಾಣಂ, ಬೆಂಗಳೂರು: ಕನ್ನಡಸಾಹಿತ್ಯ ಪರಿಷತ್ತು.

೨೩. ನಾಯಕ ಹಾ. ಮಾ, ೧೯೭೭, ಕನ್ನಡ ಸಾಹಿತ್ಯ ಚರಿತ್ರೆ, ಸಂ ೪, ಅಧ್ಯಯನ ಸಂಸ್ಥೆ- ಮೈಸೂರು ವಿಶ್ವವಿದ್ಯಾಲಯ.

೨೪. ನಾಯಕ್ ಹಾ.ಮಾ ವೆಂಟಾಚಲಶಾಸ್ತ್ರಿ.ಟಿ.ವಿ, (ಸಂ), ಸಾಹಿತ್ಯ ಚರಿತ್ರೆ: (ಸಂ-೮) :೧೯೭೭, ಮೈಸೂರು: ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ.

೨೫. ” (ಸಂ), ೧೯೭೫, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂ- ೨, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ.

೨೬. ನಾರಾಯಣ. ಕೆ.ವಿ, ೧೯೯೭, ಬೇರುಕಾಂಡ ಚಿಗುರು, ಬೆಂಗಳೂರು: ವಿವೇಕ ಪ್ರಕಾಶನ, ವಿಚಾರವೇದಿಕೆ, ಕರ್ನಾಟಕ.

೨೭. ನಾರಾಯಣ ಪಿ.ವಿ. (ಗದ್ಯಾನುವಾದ), ನಯಸೇನನ ಧರ್ಮಾಮೃತ, ೨೦೦೪, ಬೆಂಗಳೂರು: ವಸಂತ ಪ್ರಕಾಶನ, ತುಳಸೀವನ.

೨೮. ಪಾದೇಕಲ್ಲು ವಿಷ್ಣು ಭಟ್ಟ (ಸಂ), ೧೯೯೯, ಕೇಶಿರಾಜದರ್ಪಣ, ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ.

೨೯. ಪೊನ್ನಗಂಟಿ ತೆಲಗನಾರ್ಯ, ೨೦೦೧, ಯಯಾತಿ ಚರಿತ್ರೆ. ಹೈದ್ರಬಾದ್: ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯಮು.

೩೦. ಪ್ರಸನ್ನ.ಕ.ನಂ. (ಸಂ), ೨೦೦೩, ಕನ್ನಡ ವ್ಯಾಕರಣ ಪದಕೋಶ, ಬೆಂಗಳೂರು: ಐಬಿಎಚ್ ಪ್ರಕಾಶನ.

೩೧. ಪುಟ್ಟಪ್ಪ ಕೆ.ವಿ (ಸಂ), ೧೯೯೦. ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೩೨. ಪುಟ್ಟಪ್ಪ.ಕೆ.ವಿ (ಸಂ), ೨೦೦೦, ಕನ್ನಡ ಕೈಪಿಡಿ, ಸಂ- ೧ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೩೩. ಬಸವರಾಜು. ಎಲ್. (ಸಂ) , ೧೯೯೯, ಸರಳ ಪಂಪ ಭಾರತ, ಮೈಸೂರು: ಗೀತಾಬುಕ್ ಹೌಸ್

೩೪. ” (ಅನು) , ೨೦೦೧, ಪಂಪನ ಸಮಸ್ತ ಭಾರತ ಕಥಾಮೃತ, ಬೆಂಗಳೂರು: ಕನ್ನಡ ಪುಸ್ತಕ ಪ್ರಧಿಕಾರ

೩೫. ಬಸವರಾಧ್ಯ, ಎನ್, ೨೦೦೫, ಹಳಗನ್ನಡ ಶಬ್ದಾರ್ಥಕೋಶ, ಮೈಸೂರು: ಡಿ.ವಿ.ಕೆ. ಮೂರ್ತಿ

೩೬. ಭೀಮರಾವ್ ಚಿಟಗುಪ್ಪಿ, ೧೯೭೪, ಸಂಶೋಧನಾ ಪಂಚದಶಿ, ಮೈಸೂರು: ಉಷಾ ಸಾಹಿತ್ಯ ಮಾಲೆ

೩೭. ಮಾಧವ ಪೆರಾಜೆ, ೨೦೦೪, ಪಂಡಿತ ಪರಂಪರೆಯ ಕೊಳಂಬೆ ಪುಟ್ಟಣ್ಣ ಗೌಡ, ಮಂಗಳೂರು: ಪ್ರಸಾರಾಂಗ: ಮಂಗಳೂರು ವಿಶ್ವವಿದ್ಯಾಲಯ.

೩೮. ಮುಗಳಿ, ರಂ ಶ್ರೀ, ೧೯೬೮, ಅಧ್ಯಯನ, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

೩೯. ” ೧೯೬೮ ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಉಷಾ ಸಾಹಿತ್ಯ ಮಾಲೆ

೪೦. ” ೧೯೫೭, ತವನಿದಿ , ಮೈಸೂರು: ಉಷಾ ಸಾಹಿತ್ಯ ಮಾಲೆ.

೪೧. ” (ಸಂ), ೧೯೪೯ ಆಂಡಯ್ಯ ಸೇಡಬಾಳು:ಶಾಂತಿ ಸೇವಾಸದನ

೪೨. ” ೧೯೮೭, ಕನ್ನಡ ನುಡಿ ತನ್ನ ಕಾಲ ಮೇಲೆ ತಾ ನಿಲ್ಲಬಹುದೆ, ಬೆಂಗಳೂರು: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ.

೪೩. ಮುಳಿಯ ಮಹಾಬಲಭಟ್ಟ (ಸಂ), ೧೯೮೦, ಯಕ್ಷಗಾನ ಮಕರಂದ, ಮಂಗಳೂರು: ಪೊಳಲಿಶಾಸ್ತ್ರಿ ಸ್ಮಾರಕ ಸಮಿತಿ.

೪೪. ಮುಳಿಯ ಮಹಾಬಲಭಟ್ಟ (ಸಂ), ಮುಳಿಯ ತಿಮ್ಮಪ್ಪಯ್ಯ ಸಮಗ್ರ ಸಾಹಿತ್ಯ ಸಂಪುಟ- ೧, ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ, ಮಂಗಳೂರು.

೪೫. ಮುಳಿಯ ತಿಮ್ಮಪ್ಪಯ್ಯ, ೧೯೪೦, ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಮಂಗಳೂರು: ಕರ್ನಾಟಕ ಸಂಘ, ಸೈಂಟ್ ಎಲೋಸಿಯಸ್ ಕಾಲೇಜು

೪೬. ” ೧೯೫೪, ಕನ್ನಡ ನಾಡೂ ದೇಸಿ ಸಾಹಿತ್ಯವೂ ಧಾರವಾಡ: ಕನ್ನಡ ಸಂಶೋಧನಾ ಸಂಸ್ಥೆ.

೪೭. ರಾಘವೇಂದ್ರರಾವ್.ಎಚ್.ಎಸ್, ೨೦೦೬, ನಮಸ್ಕಾರ, ಬೆಂಗಳೂರು, ಅಭಿನವ ಪ್ರಕಾಶನ.

೪೮. ರಾಮೇಗೌಡ, ೧೯೯೨, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ಮೈಸೂರು: ರಾಜೇಂದ್ರ ಪ್ರಿಂಟರ್ಸ್

೪೯. ಲಕ್ಷ್ಮೀನಾರಾಯಣ ಆಳ್ವ ಏರ್ಯ, ೧೯೭೧, ಮುಳಿಯ ತಿಮ್ಮಪ್ಪಯ್ಯ, ಉಡುಪಿ: ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು.

೫೦. ವಾಮನ ಬೇಂದ್ರೆ (ಸಂ), ೧೯೭೪, ಸಾಹಿತ್ಯದ ವಿರಾಟ್ ಸ್ವರೂಪ, ಧಾರವಾಡ: ಸಮಾಜ ಪುಸ್ತಕಾಲಯ.

೫೧. ವಿವೇಕ ರೈ ಬಿ.ಎ. , ೧೯೮೯, ಮುಳಿಯ ತಿಮ್ಮಪ್ಪಯ್ಯನವರ ಸಾಹಿತ್ಯ, ಕನ್ನಡ ವಿಭಾಗ: ಮಂಗಳೂರು ವಿಶ್ವವಿದ್ಯಾಲಯ.

೫೨. ವೆಂಕಟರಾಮಪ್ಪ, ಕೆ, ೧೯೯೯, ನಯಸೇನನ ಧರ್ಮಾಮೃತ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

೫೩. ವೆಂಕಟಾಚಲಶಾಸ್ತ್ರಿ.ಟಿ.ವಿ (ಸಂ), ೧೯೯೫, ಪಂಪಕವಿ ವಿರಚಿತ ಆದಿಪುರಾಣಂ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೫೪. ಶಂಕರಭಟ್ಟ.ಡಿ.ಎನ್, ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಮೈಸೂರು: ಭಾಷಾ ಪ್ರಕಾಶನ

೫೫. ” ೨೦೦೧ ಕನ್ನಡಕ್ಕೆಬೇಕು ಕನ್ನಡದ್ದೇ ವ್ಯಾಕರಣ, ಮೈಸೂರು: ಭಾಷಾ ಪ್ರಕಾಶನ.

೫೬. ” ೨೦೦೫, ನಿಜಕ್ಕೂ ಹಳಗನ್ನಡ ವ್ಯಾಕರಣ ಎಂತಹದು, ಮೈಸೂರು: ಭಾಷಾ ಪ್ರಕಾಶನ.

೫೭. ” ೨೦೦೪, ಕನ್ನಡ ವಾಕ್ಯಗಳ ಒಳರಚನೆ, ಮೈಸೂರು: ಭಾಷಾಪ್ರಕಾಶನ.

೫೮. ಶಿವರುದ್ರ ಜಿ. ಎಸ್. ೧೯೭೬, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, (ಸಂ.೩) ಪ್ರಾಸಾರಾಂಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೯. ” (ಸಂ), ೧೯೭೬, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ-೩), ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.

೬೦. ” ೧೯೯೪, ಸಮಗ್ರ ಗದ್ಯ- ೨, ಬೆಂಗಳೂರು: ಸ್ನೇಹ ಪ್ರಕಾಶನ,ವಿಜಯನಗರ

೬೧. ” ೧೯೮೯, ಮುಳಿಯಃಶತಮಾನ ಸ್ಮರಣೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

೬೨. ಶೇಷಗಿರಿರಾವ್ ಎಲ್.ಎಸ್. (ಸಂ) ೧೯೯೫, ಭಾರತೀಯ ಸಾಹಿತ್ಯ ಸಮೀಕ್ಷೆ (ಸಂ.೧) ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ.

೬೩. ಶ್ರೀಕಂಠಯ್ಯ.ಬಿ.ಎಂ, ೧೯೭೦, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಮೈಸೂರು: ಕಾವ್ಯಾಲಯ ಪ್ರಕಾಶಕರು.

೬೪. ” ೧೯೮೪, ಕನ್ನಡದ ಬಾವುಟ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ.

೬೫. ಶ್ರೀನಿವಾಸಮೂರ್ತಿ, ಕಾ. ವೆಂ, ೨೦೦೩, ಕನ್ನಡ ಪರ ಚಿಂತನೆ ಮತ್ತು ಪರಂಪರೆ, ಬೆಂಗಳೂರು: ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

೬೬. ಶ್ರೀನಿವಾಸಮೂರ್ತಿ, ೧೯೯೫, ಕನ್ನಡ ಕಾವ್ಯ ಭಾಷೆ ಮತ್ತು ಸಂಸ್ಕೃತ,(ಪಿಎಚ್.ಡಿ. ಅಪ್ರಕಟಿತ ಪ್ರಬಂಧ:), ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.

೬೭. ಸಣ್ಣಯ್ಯ.ಬಿ.ಎಸ್, ರಾಮೇಗೌಡ (ಸಂ) ೧೯೮೮, ರನ್ನ ಕವಿ ವಿರಚಿತ ಅಜಿತ ತೀರ್ಥಕರ ಪುರಾಣಂ, ಬೆಂಗಳೂರು: ಗೀತಾಬುಕ್ ಹೌಸ್.

೬೮. ಸಿದ್ಧರಾಮ ಹಿರೇಮಠ, ೧೯೯೮, ಆಂಡಯ್ಯ (ಮುತ್ತಿನ ಹಾರ ಮಾಲಿಕೆ) ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ.

೬೯. ಸುಂದರಂ ಆರ್.ವಿ.ಎಸ್. ೧೯೮೨, ತೆಲುಗು ಭಾಷೆ ಮತ್ತು ಸಾಹಿತ್ಯ, ಮೈಸೂರು: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ.

೭೦. ಸುಬ್ರಹ್ಮಣ್ಯ ಭಟ್ಟ.ಕೆ, ೧೯೮೮, ಮುಳಿಯ ತಿಮ್ಮಪ್ಪಯ್ಯ ಒಂದು ಅಧ್ಯಯನ, ಪಿಎಚ್.ಡಿ, ನಿಬಂಧ, (ಅಪ್ರಕಟಿತ) ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ.

೭೧. ” ೧೯೭೭, ಮುಳಿಯ ತಿಮ್ಮಪ್ಪಯ್ಯನವರು, ಮಂಗಳೂರು: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ.

೭೨. ಸುಬ್ರಾಯ ಭಟ್ ಪಿ. (ವ್ಯಾ) (ಪು) ೧೯೭೫, ಗದಾಯುದ್ಧ ದರ್ಪಣಂ, ಕಾಸರಗೋಡು: ಕೇರಳ.

೭೩. ಷೇಕ್‌ಅಲಿ.ಬಿ, (ಸಂ) ೧೯೯೭, ಕರ್ನಾಟಕ ಚರಿತ್ರೆ (ಸಂ.೪) ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಲೇಖನಗಳು

೧. ಕುಲಕರ್ಣಿ ರಾ, ಆಂಡಯ್ಯನ ಅಚ್ಚಗನ್ನಡ (ಲೇ), ೧೯೬೭, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ - ೧,೨.

೨. ಮಳಗಿ ಎಸ್.ಆರ್, ಕನ್ನಡದಲ್ಲಿ ತದ್ಭವೀಕರಣ ಮತ್ತು ಪ್ರತಿಶಬ್ದ ಸೃಷ್ಟಿ, (ಲೇ), ೧೯೬೭, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ-೧, ೨.

❒